ಅರ್ಪಣೆ

ಕನ್ನಡಿಗರ ಹಾಗೂ ಕನ್ನಡ ಪತ್ರಿಕೋದ್ಯಮದ ಏಳಿಗೆಗಾಗಿ
ಮೂರು ವರ್ಷ ಕಾಲ ತ್ರಿಕರಣಪೂರ್ವಕವಾಗಿ ದುಡಿದ
ಒಂದು ಬಳಗದ ಮುಂದಾಳುಗಳಾಗಿದ್ದ
ಶ್ರೀ ಸಿ. ವಿ. ರಾಮಚಂದ್ರರಾವ್, ಎಂ.ಎ., ಬಿ.ಎಲ್.
ಶ್ರೀ ಎಂ. ವಿ. ಕಾಮತ್. ಬಿ.ಎಸ್‌ಸಿ.
ಶ್ರೀ ಎಂ. ಎಚ್. ಆಚಾರ್ಯ
ಈ ಮೂವರು ಗೆಳೆಯರ, ಸ್ನೇಹದ
ನೆನಪಿಗೆ

ಹೇಮಂತಗಾನ

ಭಾಗ ೧

ಭಾರತಿ

೧

ಹಜಾರದಲ್ಲಿದ್ದ ದೊಡ್ಡ ನಿಲುಗನ್ನಡಿಯ ಮುಂದೆ ನಿಂತು ಹುಬ್ಬುಗಳನ್ನು ತೀಡಿಕೊಂಡು, ತೆಳುವಾಗಿ ಹಚ್ಚಿದ್ದ ಪೌಡರಿನ ಗುರುತು ಅಳಿಯುವಂತೆ ಸೀರೆಯ ಸೆರಗಿನಿಂದ ಭಾರತಿ ಮುಖವನ್ನು ಒರಸಿಕೊಳ್ಳುತ್ತಿದ್ದಾಗ, ಅರಳು ಮಲ್ಲಿಗೆಯ ದಂಡೆಯನ್ನು ಹಿಡಿದುಕೊಂಡು ಗೌರಮ್ಮ ಮಗಳ ಬಳಿಗೆ ಬಂದರು.

ತಾಯಿ ತನ್ನ ಹಿಂದೆ ನಿಂತಿರುವುದನ್ನು ಗುರುತಿಸಿದ ಭಾರತಿ, ಮುಖ ತಿರುಗಿಸದೆಯೇ ಹೇಳಿದಳು!

"ಸುನಂದ ಎಲ್ಲಿಂದಲೋ ಚಂದದ ಎರಡು ಕೇದಗೆ ತಂದಿದ್ದಾಳಮ್ಮ. ಮಲ್ಲಿಗೆ ಮುಡಿದುಕೊಂಡರೆ ಅದನ್ನು ಬಿಸಾಡಬೇಕು."

"ಆ ಹುಡುಗಿಗೆ ಹುಚ್ಚೆಂದು ನಿನಗೂ ಹುಚ್ಚೇ. ಭಾರೀ. ಅದು ಇನ್ನೊಂದು ದಿನ ಕೇಪಳ ಹೂವಿನ ಮಾಲೆ ಕಟ್ಟಿ ತಲೆತುಂಬ ಮುಡಿದುಕೊಳ್ಳ ದಿದ್ದರೆ ಸಾಕು."

ಭಾರತಿಯ ಮಾತಿನ ಪ್ರತಿಭಟನೆಯನ್ನು ಗಮನಿಸದೆ ಗೌರಮ್ಮ ತಮ್ಮ ಕೆಲಸ ಮುಂದುವರಿಸಿದರು. ಮುದ್ದಿನ ಮಗಳ ದಟ್ಟವಾದ ಕೇಶರಾಶಿಯಲ್ಲಿ ನಾಲ್ಕೇ ಕೂದಲುಗಳ ಎಳೆ ತೆಗೆದು ಮಲ್ಲಿಗೆ ಮುಡಿಸಿದಾಗ ಅವರಿಗೆ ತುಂಬ ಸಮಾಧಾನ.

ಮಲ್ಲಿಗೆ ಅಚ್ಚುಕಟ್ಟಾಗಿ ತುರುಬಿನಲ್ಲಿ ನಿಂತಿದೆಯೆಂದು ಮನವರಿಕೆ ಯಾದೊಡನೆ ಭಾರತಿ, ಬಳಿಯಲ್ಲೇ ನಿಂತು ತನ್ನ ಸೌಂದರ್ಯವನ್ನು ಅಭಿ ಮಾನದ ಕಣ್ಣುಗಳಿಂದ ನೋಡುತ್ತಿದ್ದ ತಾಯಿಯನ್ನೂ ಮರೆತು ಕುಂಕುಮದ ಬೊಟ್ಟನ್ನು ತೀಡಲು ಆರಂಭಿಸಿದಾಗ ಸುನಂದ ಒಳಗೆ ಬಂದಳು.

ಮುಖ ತೊಳೆದುಕೊಂಡುದರ ಗುರುತಿಗಾಗಿ ಸಾಬೂನಿನ ನೊರೆ ಇನ್ನೂ ನಿಂತಿತ್ತು. ಆ ನೊರೆಯಿದ್ದ ಭಾಗವನ್ನಷ್ಟೆ ಬಿಟ್ಟು ಉಳಿದೆಲ್ಲ ಭಾಗವನ್ನು ತನ್ನ ಲಂಗದ ಅಂಚಿನಿಂದಲೇ ಒರಸಿಕೊಳ್ಳುತ್ತ ಒಳಗೆ ಬಂದ ಸುನಂದ, ಅಕ್ಕನನ್ನೂ ತಾಯಿಯನ್ನೂ ಕಂಡು ಕೇಳಿದಳು :

"ಅಕ್ಕಾ! ಕೇದಗೆ ಮರೆತು ಹೋಯಿತೇನೇ?"

ಒಳಗೆ ರಾಯರು ಕರೆಯುತ್ತಿದ್ದುದರಿಂದ ಅವಸರದಲ್ಲಿಯೇ ಗೌರಮ್ಮ ಎರಡನೆಯ ಮಗಳಿಗೆ ಸಮಾಧಾನ ಹೇಳಿ ಹೋದರು.

"ನಾಳೆ ಸದಾನ ಕೈಗೆ ಕೊಟ್ಟುಬಿಡು. ಅವನ ದೇವರ ಪೂಜೆಯ ಆಟಕ್ಕೆ ಹೂ ಸಿಕ್ಕಿದ ಹಾಗಾಗುತ್ತದೆ."

"ಬಿಡಮ್ಮ. ನಿನಗೆ ಯಾವಾಗಲೂ ತಮಾಷೆಯೆ. ನಾನು ಮಲ್ಲಿಗೆ ಮುಡಿದುಕೊಳ್ಳುವುದಿಲ್ಲ."

"ನಾನೇನು ಒತ್ತಾಯ ಮಾಡಿದೆನೇ? ಬೇಕಾದರೆ ಕಡೆಯುವ ಕಲ್ಲಿನ ಹತ್ತಿರದ ಹಲಿಗೆಯ ಮೇಲಿದೆ. ಮುಡಿದುಕೊ." ಎನ್ನುತ್ತ ಉತ್ತರದ ದಾರಿ ಕಾಯದೆ ಗೌರಮ್ಮ ಒಳಗೆ ಹೋದರು.

ಭಾರತಿಯ ಅಲಂಕಾರ ಇನ್ನೂ ಮುಗಿದಿರಲಿಲ್ಲ.

"ಕೇದಗೆಯನ್ನು ಬಿಸಾಡಲೇನೇ ?"

ಭಾರತಿ ಮುಖ ತಿರುಗಿಸಿ ನೋಡಿದಾಗ ಆಕೆಗೆ ನಗು ತಡೆಯಲಾಗಲಿಲ್ಲ.

"ಮೊದಲು ಕನ್ನಡಿಯಲ್ಲಿ ನಿನ್ನ ಮುಖ ನೋಡಿಕೊ. ಎಷ್ಟು ಚೆನ್ನಾಗಿ ಗಡ್ಡ ಬೆಳೆಸಿದ್ದಿ, ನೋಡು."

ನಗುತ್ತಲೆ ಸುನಂದ ಸಾಬೂನಿನ ಕಲೆಯನ್ನು ಅಳಿಸಿಕೊಂಡರೂ ಕೇದಗೆಯನ್ನು ಮರೆಯಲಿಲ್ಲ.

"ತುಂಬ ಕೂದಲಿದ್ದವರಿಗೆ ಕೇದಗೆ ಎಷ್ಟು ಚೆನ್ನಾಗಿ ಒಪ್ಪುತ್ತೆ ಗೊತ್ತೇ? ಅರ್ಧ ಕಿವಿಯನ್ನು ಮುಚ್ಚಿ ಕೆನ್ನೆಯ ತನಕ ಜೋಲುವ ಕೂದಲಿಗೆ ಕೇದಗೆ ಮುಡಿಸಿದರೆ ಕಾಡಿನಲ್ಲಿ ತಿಂಗಳ ಬೆಳಕು ಬಿದ್ದಹಾಗೆ ಆಗುತ್ತದೆ."

ಭಾರತಿ ಜೋರಾಗಿ ನಗಲಾರಂಭಿಸಿದಳು.

"ಯಾರು ಹೇಳಿದ್ದೇ, ಕವಿ. ಅಲ್ಲ, ಕಪಿರಾಣೀ ?"

"ಪುಸ್ತಕದಲ್ಲಿಯೆ !"

ತಂಗಿಯ ಮಾತಿಗೆ ಕೂಡಲೇ ಏನು ಉತ್ತರ ಹೇಳುವುದೆಂದು ಭಾರತಿಗೆ ಹೊಳೆಯಲಿಲ್ಲ. ಪುಸ್ತಕದ ಹೆಸರು ಕೇಳಿದೊಡನೆ ಒಮ್ಮಿಂದೊಮ್ಮೆಗೆ ಆಕೆಯ ನಗು ನಿಂತಿತು.

ಕನ್ನಡಿಯಲ್ಲಿ ತನ್ನ ಮುಖ ಕಂಡಾಗ 'ಆ ಮುಖದ ಹಿಂದೆ ಎಲ್ಲಾದರೂ ಪುಸ್ತಕವಿದೆಯೇ ಎಂದು ಭಾರತಿ ನೋಡಿದಳು. ಆ ಪುಸ್ತಕದ ನೆನಪು ಮನಸ್ಸಿನ ಇದಿರು ಒಂದು ಪರಿಚಿತ ಆಕೃತಿಯನ್ನು ನಿರ್ಮಿಸುತ್ತಿತ್ತು. ಭಾರತಿಯ ಕೈ ತನಗರಿಯದೆಯೇ ಕುತ್ತಿಗೆಯಲ್ಲಿದ್ದ ಕರಿಮಣಿ ಸರಕ್ಕೆ ಜೋತು ಬಿದ್ದು ಎದೆಯ ಮೇಲಿದ್ದ ಚಿನ್ನದ ತಾಳಿಯನ್ನು ಸವರಿಕೊಂಡಿತು.

ಸುನಂದ ಪತ್ತಲ ಬದಲಿಸಿ ಬ್ಲೌಸ್ ತೊಟ್ಟುಕೊಳ್ಳುತ್ತಿದ್ದಳು. ಅಕ್ಕ ಏನನ್ನೋ ಚಿಂತಿಸುತ್ತಿರುವಂತೆ ಕಂಡುದರಿಂದ ತನ್ನಷ್ಟಕ್ಕೆ ತಾನೇ ಗಟ್ಟಿಯಾಗಿ ಹೇಳಿಕೊಂಡಳು :

"ಸುರುವಾಯಿತು ಭಾವನ ಚಿಂತೆ."

ಭಾರತಿ ಯೋಚಿಸುತ್ತಿದ್ದುದೂ ಅಷ್ಟೆ :

"ಅವರ ಕಾಗದ ಯಾಕೆ ಬರಲಿಲ್ಲ ?"

ನಿರೀಕ್ಷೆಯ ಎರಡು ದಿನಗಳ ಅವಧಿ ವ್ಯರ್ಥ ಕಳೆದಿತ್ತು. ಗುರುವಾರದ ದಿನವೇ ತವರಿಗೆ ಓಡುವ ಮನಸ್ಸಿನ ಹಂಬಲವನ್ನು ತಡೆದಿದ್ದುದು ಆ ಕಾಗದದ ನಿರೀಕ್ಷೆ. 'ನಿನ್ನ ಕಾಗದ ಬಂದ ಕೂಡಲೇ ಬೇರೆಲ್ಲ ಕೆಲಸಗಳನ್ನು ಬದಿಗೆ ಸರಿಸಬೇಕಾಗುತ್ತದೆ. ಮೊದಲು ನನ್ನ ಗಮನ ಉತ್ತರದ ಕಡೆ' ಎಂದು ಹಿಂದೊಮ್ಮೆ ಬರೆದಿದ್ದ ಗಂಡನ ಮಾತನ್ನೇ ನಂಬಿ ಆಕೆ ಕುಳಿತಿದ್ದಳೆಂದಲ್ಲ. ಈ ಮಾತು ಸುಳ್ಳು ಎಂದು, ವಿಲಂಬಿಸಿ ಬಂದ 'ಅವರ' ಹಲವಾರು ಕಾಗದಗಳ ಆಧಾರದಿಂದಲೇ ಆಕೆ ಹೇಳಬಹುದಿತ್ತು. ಆದರೂ ಅಂಚೆಯವನ ದಾರಿ ಕಾಯುವ ಚಪಲವನ್ನು ಕಡೆಗಣಿಸಲು ಆಕೆ ಸಮರ್ಥಳಾಗಲಿಲ್ಲ. ಗುರುವಾರ ಬರಬೇಕಾಗಿತ್ತು ; ಬರಲಿಲ್ಲ. ಶುಕ್ರವಾರ ಬಂದೇ ತೀರುವುದೆಂದು ನಂಬಿಯೂ ಬರಲಿಲ್ಲ. ಶನಿವಾರ ಏನಿದ್ದರೂ ಕಾಗದ ಕೈಗೆ ಸಿಗಲೇಬೇಕು ಎಂದು ತಿಳಿದೂ ಬರಿಗೈಯಲ್ಲಿ ತಾಯಿಯ ಮನೆಯ ದಾರಿ ಹಿಡಿಯಬೇಕಾಗಿತ್ತು.

ಅದೂ ಸುಳ್ಳು ಹೇಳಿ.

"ನೋಡು, ಸುನಂದ. ಇವತ್ತು ದೊಡ್ಡದೊಂದು ತಪ್ಪು ಮಾಡಿದ್ದೇನೆ. ಅದರ ಪಾಪವೆಲ್ಲ ನಿನ್ನ ತಲೆಯ ಮೇಲೆ."

ಸುನಂದೆಯ ಶೃಂಗಾರ ಮುಗಿಯುವುದರಲ್ಲಿತ್ತು. ಅಕ್ಕನನ್ನು ಬದಿಗೆ ದೂಡಿ ತಿಲಕವಿಟ್ಟುಕೊಳ್ಳಲು ಕನ್ನಡಿಯ ಮುಂದೆ ಬಂದಿದ್ದಾಕೆ,

"ಏನು ಮಾಡಿದಿಯೆ ? ನೊಣ ಕೊಂದಿಯೇನು ?" ಎಂದಳು.

"ಅಲ್ಲವೆ, ಕತ್ತೆ. ಸುನಂದೆಗೆ ಮದುವೆ ಎಂತ ಅತ್ತೆಯ ಹತ್ತಿರ ಸುಳ್ಳು ಹೇಳಿದೆ."

"ನನಗೆ!" ಅಕ್ಕ ಸುಳ್ಳಾಡಿದಳು ಎನ್ನುವುದಕ್ಕಿಂತ, ತನ್ನ ಮದುವೆ ಮಾತಿಗೆ ಒಂದು ವಿಷಯ ಎಂಬ ಸಂತೋಷದಿಂದಲೇ ಸುನಂದೆಯ ಮುಖ

ಕೆಂಪೇರಿತು. ಅಕ್ಕತಂಗಿಯರಿಬ್ಬರೂ ನಗುತ್ತಿರುವಾಗಲೇ ಗೌರಮ್ಮ ಪುನಃ ಒಳಗೆ ಬಂದರು.

"ಯಾರಿಗೆ ಮದುವೆಯೆ ?" ಎಂದು ಭಾರತಿಯನ್ನುದ್ದೇಶಿಸಿ ಕೇಳುತ್ತ.

ಉತ್ತರ ಕೊಟ್ಟುದು ಸುನಂದ :

"ನನ್ನ ಮದುವೆಯ ನೆಪ ಮಾಡಿ ಅಕ್ಕ ಅತ್ತೆಯ ಮನೆಯಿಂದ ಓಡಿ ಬಂದಿದ್ದಾಳಂತಮ್ಮ; ಸುಳ್ಳು ಹೇಳಿ."

ಭಾರತಿ ತಾಯಿಯ ಆಗಮನವನ್ನು ನಿರೀಕ್ಷಿಸಿರಲಿಲ್ಲ. ಅವರ ಅನಪೇಕ್ಷಿತ ಪ್ರವೇಶ ಆಕೆಯನ್ನು ಗಲಿಬಿಲಿಯಲ್ಲಿ ಕೆಡವಿತು.

"ಮದುವೆಯಲ್ಲವಮ್ಮ, ಸುನಂದನ್ನ ನೋಡಲಿಕ್ಕೆ ನಾಳೆ ಅವರು ಬಂದರೂ ಬರಬಹುದು. ಹಾಗೆ ಯಾರಾದರೂ ಬಂದರೆ ನಾನು ಮನೆಯಲ್ಲಿರಬೇಕಾಗುತ್ತದೆ—ಎಂದು ಹೇಳಿ ಬಂದೆ, ಅಷ್ಟೆ."

"ಯಾರೇ ಅವರು, ಬರುವವರು ?"

"ಆವೊತ್ತು ಹೇಳಿದ್ದೆಯಲ್ಲಮ್ಮ. ಯಾರೋ ಲಾ ಕಾಲೇಜಿನ ಹುಡುಗ ಬರಬಹುದು ಎಂತ."

"ಅದು ವೈಶಾಖದಲ್ಲಿಯಲ್ಲವೇನೇ. ಇನ್ನೂ ನಾಲ್ಕು ತಿಂಗಳ ಮಾತು. ನಾನೇನು ನಾಳೆಯೇ ಬರುತ್ತಾರೆಂದು ಹೇಳಿದ್ದೆನೇ ?"

ಸುನಂದ ಜೋರಾಗಿ ನಗಲಾರಂಭಿಸಿದಳು.

"ಅಕ್ಕನಿಗೆ ಅಲ್ಲಿಂದ ಹೇಗಾದರೂ ತಪ್ಪಿಸಿಕೊಂಡು ಬರಬೇಕಾಗಿತ್ತು. ಆ ಮುದುಕಿ ಇವಳು ಹೇಳಿದ್ದಕ್ಕೆಲ್ಲ...."

"ಸುನ್ನಾ........" ಭಾರತಿಗೆ ಈಗ ನಿಜವಾಗಿಯೂ ಸಿಟ್ಟು ಬಂದಿತ್ತು. ಅವಳ ಮುಖ ನೋಡಿಯೇ ಸುನಂದ ಮಾತು ನಿಲ್ಲಿಸಿದಳು.

"ಏನಮ್ಮಾ! ಇಷ್ಟು ದೊಡ್ಡ ಹುಡುಗಿಯರಿಗೆ ಸ್ವಲ್ಪವಾದರೂ ರೀತಿ ನೀತಿಗಳ ಯೋಚನೆ ಇರಬೇಡವೆ. ಒಂದು ವೇಳೆ ತಾಯಿಯ ಮನೆಗೆ ಬರಬೇಕೆಂಬ ಆಸೆಯಾದರೆ, ಸುಳ್ಳು ಹೇಳಿ ಬರಬೇಕೆ? ನಿನ್ನ ಅತ್ತೆಗೇನು ಹೆಣ್ಣು ಮಕ್ಕಳಿಲ್ಲವೆ ? ಹೋಗುತ್ತೇನೆ, ಎಂದು ಹೇಳಿದರೆ ಅವರು ಬೇಡ ಎಂದು ಕಟ್ಟಿಹಾಕುತ್ತಾರೆಯೆ ?" ಗೌರಮ್ಮನ ಮಾತಿನಿಂದ, ಮಗಳ ವರ್ತನೆಯಿಂದ ಅವರು ನೊಂದುಕೊಂಡಿದ್ದರೆಂಬುದು ಸ್ಪಷ್ಟವಾಗುತ್ತಿತ್ತು.

ಈಗ ಮಾತ್ರ ಭಾರತಿಯ ಕಣ್ಣಲ್ಲಿ ನೀರು ತುಂಬಿತು. ಒಂದು ಕ್ಷಣದ

ಹಿಂದಿದ್ದ ಉತ್ಸಾಹ, ಆನಂದದ ಆವೇಗ, ಭರವಸೆಯ ನಗು ಇವೆಲ್ಲಾ ಮಾಯ ವಾಗಿ ಆ ಬೊಗಸೆಗಣ್ಣುಗಳ ತುಂಬ ನೀರು ಉಕ್ಕಿ ಹೊರಗೆ ಬರಲು ಪ್ರಯತ್ನಿಸುವಂತಿತ್ತು.

"ನಿನಗೆ ಗೊತ್ತಿಲ್ಲಮ್ಮ. ಇರುವುದು ಎರಡೇ ಮೈಲು ದೂರ. ಆದರೆ ಹೊರಡಲು ಆಲೋಡಿನೆ ಮಾಚದರೆ ಎರಡು ಸಾವಿರ ವಿಘ್ನ. ಇವೊತ್ತು ವಾರ ಸರಿಯಿಲ್ಲ, ನಾಳೆ ಮನೆಗೆ ಅವರು ಬರುತ್ತಾರೆ, ನಾಡಿದ್ದು ಇವರು ಹೋಗು ತ್ತಾರೆ. ಆಚೆನಾಡಿದ್ದು ಶ್ರಾದ್ಧ. ಮತ್ತೊಂದು ದಿನ ಗ್ರಹಣ. ಆ ಮಕ್ಕಳ ಹೇಸಿಗೆ ಬಳಿದು, ಮುಸುರೆ ತಿಕ್ಕಿ, ಎಮ್ಮೆಗೆ ನೀರು ಕೊಟ್ಟು ಸೋತುಹೋಗಿ, ಅಮ್ಮನನ್ನಾದರೂ ನೋಡಿ ಒಂದು ಆದಿತ್ಯವಾರ ಸುಖವಾಗಿ ಮಲಗೋಣ ಎಂದು ಬಂದರೆ ಇಲ್ಲಿ ನೀನೂ ಬೈಯಲು ಸುರು."

ಕಣ್ಣೀರಿನ ಕಟ್ಟೆಯೊಡೆದಿತ್ತು. ಭಾರತಿ ಬಳಿಯಲ್ಲೇ ಸುರುಳಿಯಾಗಿ ಮಡಿಸಿಟ್ಟಿದ್ದ ಹಾಸಿಗೆಯ ಮೇಲೆ ಕುಳಿತು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ಮಗಳು ಅಳುವುದನ್ನು ನೋಡಿದಾಗ ಗೌರಮ್ಮನಿಗೆ 'ಅಯ್ಯೋ! ಸುಮ್ಮನೆ ಮಗುವನ್ನು ನೋಯಿಸಿದೆ.' ಎನ್ನಿಸಿತು. ಬೇಗ ಅವಳ ಬಳಿಗೆ ಬಂದು ಭಾರತಿಯ ಬೆನ್ನನ್ನು ಸವರುತ್ತ,

"ಛೆ! ಅದಕ್ಕೆಲ್ಲ ಅಳುತ್ತಾರೆಯೇ, ಭಾರೀ. ಇದೂ ಇಷ್ಟು ಓದಿದ ಹುಡುಗಿ. ಏನೋ ಆಯಿತು ಬಿಡು. ಒಂದು ವಾರ ಸುಖವಾಗಿ ಮಲಗಿಕೊ. ಒಂದು ವಾರವಲ್ಲದಿದ್ದರೆ ಒಂದು ತಿಂಗಳು. ಇನ್ನೂ ಅಷ್ಟಾಗಿ ಯಾರಾದರೂ ಕರೆಯಲು ಬಂದರೆ, ಸೌಖ್ಯವಿಲ್ಲ ಎಂದರಾಯಿತು."

ಭಾರತಿಯ ಅಳು ನಿಂತಿರಲಿಲ್ಲ. ಗೌರಮ್ಮ ಮಾತು ಮುಂದುವರಿಸಿದರು :

"ನಿನ್ನ ಗಂಡ ಎಂತೂ ಮನೆ ಮಾಡುವ ಆಲೋಚನೆಯಲ್ಲಿದ್ದ ಹಾಗೆ ಕಾಣುವುದಿಲ್ಲ. ಗಂಡ ದೂರದಲ್ಲಿದ್ದ ಮೇಲೆ ತಾಯಿಯ ಮನೆಯಾದರೇನು, ಅತ್ತೆಯ ಮನೆಯಾದರೇನು ?"

ಭಾರತಿಯ ಬಿಕ್ಕಳಿಗೆ ನಿಂತಿತು. ಈಗ ತಾಯಿ 'ಮನೆ'ಯ ಮಾತು ತೆಗೆದು ಆಕೆಯ ವಿಚಾರಗತಿಯನ್ನು ಬೇರೆ ಕಡೆ ತಿರುಗಿಸಿದುದರಿಂದ ಅಳು ಕೂಡ ನಿಂತಿತು. ಸುನಂದ ಈ ಅಳುವಿನ ಸಾಂಕ್ರಾಮಿಕ ಜಾಡ್ಯ ತನಗೆ ಅಂಟುವುದು ಬೇಡವೆಂದು ಬೇಗನೆ ಅಲ್ಲಿಂದ ಜಾರಿ ತಂದೆಯ ಕೋಣೆಗೆ ನಡೆ ದಿದ್ದಳು. ಭಾರತಿ ಅಳು ನಿಲ್ಲಿಸಿ ತಾಯಿಯ ಕಡೆ ಮುಖವೆತ್ತಿ ನೋಡಿದಾಗ

ಅವರ ಕಣ್ಣಂಚಿನಲ್ಲಿ ಹನಿಯಿದ್ದುದು ಕಂಡುಬಂತು. ಕಳವಳ ತುಂಬಿದ ದನಿಯಲ್ಲಿ ಅವಳು ಕೇಳಿದಳು :

"ನೀನೇಕೆ ಅಳುತ್ತೀಯಮ್ಮ? ಎಲ್ಲ ನನ್ನ ಹಣೆಯಬರಹ."

ಗೌರಮ್ಮ ಮಗಳ ಮಾತಿಗೆ ಉತ್ತರ ಹೇಳಲಿಲ್ಲ. ಅವರ ಕೈ ಮಗಳ ಬೆನ್ನನ್ನು ಸವರುವ ಕೆಲಸವನ್ನು ಹಾಗೆಯೇ ಮುಂದುವರಿಸಿತ್ತು. ಭಾರತಿಯ ಮುಖವನ್ನು ನೋಡುವ ಧೈರ್ಯ ತಂದುಕೊಳ್ಳದೆ ಅವರು ಹೇಳಿದರು :

"ಅದು ಸರಿ, ಭಾರೀ. ಏನೆಲ್ಲ ಆಸೆಯಿಂದ ಮಗುವನ್ನು ಕೊಟ್ಟೆವು. ಬಿ. ಎ. ತನಕ ಓದಿದ್ದಾನೆ, ಕೆಲಸ ಹಿಡಿದಿದ್ದಾನೆ, ಬಡವನಾದರೂ ಚಿಂತೆಯಿಲ್ಲ ಎಂದು ಹೇಳಿದರು ನಿಮ್ಮಪ್ಪ. ಹುಡುಗ ಯೋಗ್ಯನೇ ಇರಬಹುದು. ಆದರೆ ಒಂದೂವರೆ ವರುಷವಾದರೂ ಹೆಂಡತಿಯನ್ನು ಕರೆಸಿಕೊಳ್ಳುವ ಆಲೋಚನೆ ಬೇಡವೆ? ತನ್ನ ಮನೆಯವರ ಅನುಕೂಲಕ್ಕೆ, ಕಸ ಮುಸುರೆಗೆಂದೇ ಹೆಂಡತಿಯನ್ನು ಕಟ್ಟಿಕೊಂಡದ್ದು ?"

ತಾಯಿಯ ವಿಚಾರಗತಿ ತನ್ನದನ್ನೇ ಅನುಸರಿಸುತ್ತಿದೆಯೆಂದು ತಿಳಿದಾಗ ಭಾರತಿಗಾದ ಸಮಾಧಾನ ಅಷ್ಟಿಷ್ಟಲ್ಲ. ಇದೇ ಸುಖವನ್ನು ಇನ್ನೂ ತುಸು ಅನುಭವಿಸಬೇಕು ಎಂದು ಒಂದು ಕೈಯಿಂದ ತಾಯಿಯ ಕೊರಳನ್ನು ತಬ್ಬಿಕೊಂಡು, ಅವರ ತೋಳಿನ ಮೇಲೆ ತಲೆಯಿರಿಸಿ, "ಅದಕ್ಕೇ ಅಮ್ಮಾ, ಓಡಿ ಬಂದದ್ದು, ಅಮ್ಮನ ಜತೆಗಾದರೂ ಎರಡು ದಿನ ಕಳೆಯೋಣ ಎಂತ." ಎನ್ನುತ್ತಿದ್ದಾಗ, ಆಕೆಯ ಸಣ್ಣ ತಮ್ಮ, ಏಳು ವರ್ಷದ ಸದಾನಂದ, ಹಜಾರದೊಳಗೆ ಓಡಿಬಂದ, "ಅಮ್ಮಾಽ" ಎಂದು ಕೂಗಿಕೊಂಡು.

"ಏನಾಯಿತೋ ?"

"ಇಲ್ಲಿದ್ದೀಯಾ ? ಅಮ್ಮಾ, ಲಾ ಕಾಲೇಜು ಎಲ್ಲಿದೆಯೆ ?"

"ಯಾಕೋ ?"

"ಎಲ್ಲಿದೆ ಹೇಳು."

"ನನಗೇನು ಗೊತ್ತು. ಎಲ್ಲೋ ಇರಬೇಕು—ಮಂಗಳೂರಲ್ಲೋ—ಮದರಾಸಿನಲ್ಲೋ."

"ಎಷ್ಟು ಮೈಲು ?"

"ಇರಬೇಕು ಐನೂರೋ, ಸಾವಿರವೋ. ಯಾಕೊ ಇದೆಲ್ಲ ?"

"ಸುನಂದನ ಗಂಡ ಲಾ ಕಾಲೇಜಿನಲ್ಲಿದ್ದಾರೆಯೆ ?"

ಭಾರತಿ ಎದ್ದು ಆಗಲೇ ನಗಲಾರಂಭಿಸಿದ್ದಳು. ಪ್ರೀತಿಯ ಗಂಡು ಮಗುವಿನ ಕುತೂಹಲದ ಹಿಂದಿದ್ದ ಮುಗ್ಧತೆಯನ್ನು ಕಂಡು ಗೌರಮ್ಮನಿಗೂ ನಗು ಬರದಿರಲಿಲ್ಲ.

"ಅಕ್ಕನ ಗಂಡ ನಾಳೆ ಬರುತ್ತಾರೆಯೇನಮ್ಮ ?"

"ಯಾರು ಹೇಳಿದ್ದೋ ನಿನಗೆ ?"

"ಅವಳೇ" ಎನ್ನುತ್ತಿರುವಾಗಲೇ ಸುನಂದ ಒಳಗೆ ಓಡಿ ಬಂದಳು. "ಎಲ್ಲಿದ್ದಾನೆಯೇ ? ಇಲ್ಲಿ ಬಂದಿದ್ದೀಯೇನೋ ಮಂಗ ?" ಎಂದು ಬಂದವಳೇ ತಮ್ಮನ ಕಿವಿ ಹಿಡಿದೆಳೆದಳು.

"ಕಳ್ಳಿ, ಸಿಕ್ಕಿಬಿದ್ದಳು." ಎಂದು ಭಾರತಿ ಜೋರಾಗಿ ನಗತೊಡಗಿದಾಗ, ಸುನಂದ ತಮ್ಮನ ತಲೆಗೊಂದು ಚೆನ್ನಾದ ಏಟು ಕೊಟ್ಟು,

"ಈಡಿಯಟ್, ಫಟಿಂಗ, ರಾಸ್ಕಲ್" ಎಂದು ತನ್ನ ಸಿಟ್ಟನ್ನೆಲ್ಲ ಅವನ ಮೇಲೆ ತೀರಿಸಲು ಯತ್ನಿಸಿದಳು.

ಸುನಂದ ಏಟು ಕೊಟ್ಟಾಗ ಗೌರಮ್ಮ "ಅಗೋ, ಸುನಂದಾ...." ಎಂದು ಮಗಳನ್ನು ಗದರಿಸಿದರು. ಸದಾನಂದ ಓಡಿಬಂದು ತಾಯಿಯನ್ನು ತಬ್ಬಿಕೊಂಡಿದ್ದ. ಅಕ್ಕನ ಬೈಗಳು ಆರಂಭವಾದೊಡನೆ,

"ನೀನೇ ಈಡಿಯಟ್, ಫಟಿಂಗ, ರಾಸ್ಕಲ್." ಎಂದ.

"ನೀನೇ ಕೋತಿ."

"ನೀನೇ."

"ನಿನ್ನ ಬಾಯಲ್ಲಿ ಮೀನೇ."

"ನಿನ್ನ ಬಾಯಲ್ಲಿ ಮೊಸಳೆ."

"ಇಲ್ಲಿ ಬಾ ನನ್ನ ಹತ್ತಿರ, ಹಲ್ಲು ಮುರೀತೇನೆ ನೋಡು."

"ಹೋಗು ಹೋಗು, ಲಾ ಕಾಲೇಜಿಗೆ ಹೋಗು." ಎಂದಾಗ ಎಲ್ಲರೂ ನಗತೊಡಗಿದಾಗ ಸುನಂದೆಗೂ ನಗದಿರುವುದು ಸಾಧ್ಯವಾಗಲಿಲ್ಲ.

"ಏನು ಹುಡುಗಾಟ. ನೀನು ಆಡುಹೋಗು, ಸದಾ. ಭಾರೀ, ಮೈದಾನಕ್ಕೆ ಹೋಗುತ್ತೀಯೇನು ?" ಎಂದು ಗೌರಮ್ಮ ವಿಷಯ ಬದಲಿಸುವ ಉದ್ದೇಶದಿಂದ ಮಗನೊಡನೆ ಕೇಳಿದರು.

"ಹೌದಮ್ಮ, ಬರುತ್ತೀಯಾ ?"

"ನಾನೇ ? ಇಲ್ಲಪ್ಪ, ಹೋಗಿಬನ್ನಿ. ತೀರ ಕತ್ತಲು ಮಾಡಿಕೊಂಡು

ಬರಬೇಡಿ." ಎಂದು ಗೌರಮ್ಮ ಒಳಗೆ ಅಡುಗೆಯ ಮನೆಯ ಕಡೆ ನಡೆದರು. ಅಕ್ಕನ ಬಳಿ ಉಳಿದರೆ ಏಟು ಸಿಗುವುದು ಖಂಡಿತವೆಂದು ಬಗೆದ ಸದಾನಂದ ತಾಯಿಯ ಬೆನ್ನು ಬಿಡದೆ ಅವರನ್ನೇ ಹಿಂಬಾಲಿಸಿದ.

ಭಾರತಿ ಪುನಃ ಕನ್ನಡಿಯ ಮುಂದೆ ನಿಂತು ಪೌಡರಿನ ಕರಡಿಗೆಯ ಮುಚ್ಚಳ ತಗೆದು ಪಫ್‌ಗೆ ಕೈಹಾಕಿ ತಂಗಿಯೊಡನೆ ಹೇಳಿದಳು:

"ಹೊರಡು, ಸುನ್ನಾ. ಮತ್ತೆ ಹೊತ್ತಾಗಿಬಿಡುತ್ತದೆ."

"ನಾ ಬರೋಲ್ಲ."

"ಪುನಃ ಏನು ಸುರುವಾಯಿತೇ?"

"ನಿಮಗೆ ಯಾವಾಗಲೂ ತಮಾಷೆ—ಆ ಹುಡುಗನನ್ನು ಕೊಂಡಾಟ ಮಾಡಿ, ಅವನ ಮಾತು ಕಟ್ಟಿಕೊಂಡು. ನನ್ನ ಎರಡೂ ಕೇದಗೆಗಳನ್ನು ಬಜ್ಜಿ ಮಾಡಿ, ಕಿವಿಗೆ ಕಟ್ಟಿಕೊಂಡು, ಕರಡಿ ವೇಷ ಹಾಕಿ ಕುಣೀತಿತ್ತು, ಮಂಗ. ಅವನಿಗೆ ಒಂದು ಸಣ್ಣ ಏಟು ಕೊಟ್ಟರೆ ನಿಮಗೆಲ್ಲ ಸಿಟ್ಟು. ಲಾ ಕಾಲೇಜಿನ ಭಾವ ಬಂದು ಕೋಲು ಹಿಡಿದು ನಿನಗೆ ಪೂಜೆ ಮಾಡುತ್ತಾರೆ ನೋಡು ಎಂದು ಹೇಳಿದೆ. ಅದಕ್ಕೆ ಇಷ್ಟೆಲ್ಲ ತಮಾಷೆಯೆ?"

"ತಮಾಷೆ ಯಾರು ಮಾಡಿದರು, ಸುನ್ನಾ. ನಿನಗೆ ಲಾ ಕಾಲೇಜಿನ ಗಂಡ ಬಂದರೆ ನನಗೆ ಬೇಸರವಾಗುತ್ತದೆಯೆ? ಖಂಡಿತ ಬರಲಿ. ಈಗ ಅಮ್ಮ ಕೊಟ್ಟ ಮಲ್ಲಿಗೆ ಮುಡಿದುಕೋ ಬೇಗ. ನಿನ್ನ ಮದುವೆಯ ದಿನ ಬೇಕಾದಷ್ಟು ಹೂ ಬರುತ್ತೆ: ಕೇದಗೆ, ರೆಂಜೆ, ಸುರಗೆ, ಸೇವಂತಿಗೆ...."

ಅಕ್ಕನ ಉತ್ಸಾಹ ಕಂಡು ಸುನಂದೆಯ ಸಿಟ್ಟು ಇಳಿಯಿತು. ಪುನಃ ಕನ್ನಡಿಯ ಮುಂದೆ ಬಂದು ಬೇಗ ಬೇಗ ತನ್ನ ಸೀರೆಯ ನೆರಿಗೆಗಳನ್ನೆಲ್ಲ ಸರಿಪಡಿಸಿಕೊಂಡಳು. ಭಾರತಿ ಆಗಲೇ ಹೊರಟಾಗಿತ್ತು.

ಘಂಟೆ ಆರಾಗಿತ್ತು. ಅಕ್ಕತಂಗಿಯರಿಬ್ಬರೂ ಹೊರಗೆ ಬರುವಾಗ ತಂದೆ ಶ್ರೀಪತಿರಾಯರು ಮುಖಮಂಟಪದಲ್ಲಿ ಕುಳಿತು ಯಾರೋ ಕಕ್ಷಿಗಾರರೊಡನೆ ಹರಟೆ ನಡೆಸಿದ್ದರು. ಮಕ್ಕಳು ಹೊರಗೆ ಹೊರಟುದನ್ನು ಕಂಡಾಗ ಏನೋ ಕೇಳಬೇಕೆನ್ನುವವರಂತೆ ಬಾಯಿ ತೆರೆದಾಗಲೇ ಸುನಂದ,

"ಮೈದಾನಕ್ಕೆ. ರೇಡಿಯೋ ಟವರ್" ಎಂದವಳೇ ಅಕ್ಕನನ್ನು ಎಳೆದು ಕೊಂಡು ಮುಂದುವರಿದಳು. ಶ್ರೀಪತಿರಾಯರು ಪುನಃ ತಮ್ಮ ಸಂಭಾಷಣೆಯಲ್ಲಿ ತೊಡಗಿದರು.

ಮನೆಯಿಂದ ಮೈದಾನಕ್ಕೆ ಒಂದು ಫರ್ಲಾಂಗಿನ ನಡೆ. ಸಾಧಾರಣ ಎತ್ತರವಾದ ಬಂಡೆಯಲ್ಲಿ ಪ್ರಕೃತಿಯ ಮೇಲೆ ಪುರುಷನ ಸ್ವಾಮ್ಯವನ್ನು ಸ್ಥಾಪಿಸಿರುವ ಪ್ರತೀಕವಾಗಿ ದೊಡ್ಡ ರೇಡಿಯೋ ಗೋಪುರ ನಿಂತಿದೆ. ಬಂಡೆಯ ಇನ್ನೊಂದು ಮಗ್ಗುಲಲ್ಲಿ ಶಿಶುವಿಹಾರ. ಅಲ್ಲಿಯೇ ಕೆಳಗೆ ದೊಡ್ಡ ಆಟದ ಬಯಲಿಗೆ ತಾಗಿ ಮುನಿಸಿಪಾಲಿಟಿಯ ಉದ್ಯಾನ ವನ. ಮುಂದೆ, ಬಂಡೆಯಲ್ಲಿ ನಿಂತು ನೋಡಿದರೆ ಕಣ್ಣಿಗೆ ಕಾಣಿಸುವಷ್ಟು ದೂರ ಕುರುಚಲು ಗಿಡಗಳ ಕಾಡು. ಅದರಾಚೆಗೆ ಭವ್ಯವಾದ ಅರಬೀ ಸಮುದ್ರದ ಅಂಚು.

'ಅಜ್ಜರ ಕಾಡು' ಉಡುಪಿಯ ನಾಗರಿಕರ ವಿಹಾರಕೇಂದ್ರ. ನಿವೃತ್ತ ಅಧಿಕಾರಿಗಳ ವಾಯುಸೇವನೆಯ ತಾಣವಾದರೆ, ಪ್ರಣಯಿಗಳ ಸ್ವರ್ಗ. ಮಕ್ಕಳ ಕ್ರೀಡಾರಂಗವಾದರೆ, ಯುವಕರ ಮಂತ್ರಾಲೋಚನೆಯ ಮುಖ್ಯ ಕೇಂದ್ರ. ಅಧಿಕಾರಿಗಳ, ಲೋಕನಿಯಮಗಳ ಪಾಲನ ಹಾಗೂ ಪರಿಶೀಲನಾ ಕೇಂದ್ರವಾದರೆ, ಬೇವಾರ್ಸಿಗಳ ಬಂಡೆ.

ದಾರಿಯುದ್ದಕ್ಕೂ ಹರಟುತ್ತ, ಧೂಳು ತಿನ್ನುತ್ತ ಅಕ್ಕತಂಗಿಯರು ಸಾಗಿದ್ದರು. ಸುನಂದ ಮಾತು ಆರಂಭಿಸಿದ ಮೇಲೆ ಅವಳ ವಯಸ್ಸು ಜಗತ್ತನ್ನು ನೋಡುವ ದೃಷ್ಟಿಯಲ್ಲಿ ಕಂಡುಬರಬಹುದಾದ ಎಲ್ಲ ವಿಚಾರಗಳ ಕುರಿತು ಮಾತು ಬೆಳೆಯುತ್ತಿತ್ತು. ಇಷ್ಟೇ ಅಲ್ಲದೆ, ಎರಡು ತಿಂಗಳ ಕಾಲ ಅಕ್ಕನ ಸಹವಾಸವಿದ್ದಿಲ್ಲ. ಹೀಗಾಗಿ ಮಾತು ಭಾವನಿಂದ ಆರಂಭವಾಗಿ ಲಾ ಕಾಲೇಜಿನ ಯಾರೋ ಒಬ್ಬರ ಕುರಿತು ಅಕ್ಕ ಕೊಡುತ್ತಿದ್ದ ಅಸ್ಪಷ್ಟ ಸೂಚನೆಗಳನ್ನು ವಿಮರ್ಶಿಸುವವರೆಗೂ ಮುಂದುವರಿದಿತ್ತು.

ಆದರೆ ಭಾರತಿ ತಂಗಿಯೊಡನೆ ಮಾತನಾಡುತ್ತಿದ್ದುದು 'ಮಾತನಾಡಲೇ ಬೇಕಲ್ಲ' ಎಂದಷ್ಟೆ. ಎಂದರೆ ಸುನಂದೆಯೊಡನೆ ಹರಟುವುದು ಅವಳಿಗೆ ಸೇರುತ್ತಿದ್ದಿಲ್ಲವೆಂದಲ್ಲ. ಆದರೆ ಅಜ್ಜರ ಕಾಡಿನ ಮೈದಾನದ ಹಾದಿಹಿಡಿದು ಸಾಗುವಾಗಲೆಲ್ಲ ಒಂದು ಹಿತವಾದ ನೆನಪು ಅವಳನ್ನು ಕಾಡುತ್ತಿತ್ತು.

ಹದಿನೆಂಟು ತಿಂಗಳ ಹಿಂದಿನ ಒಂದು ಸಂಜೆ.

ಮದುವೆಯಾಗಿ ನಾಲ್ಕಾರು ದಿನಗಳೂ ಕಳೆದಿರಲಿಲ್ಲ. ಮೊದಲ ಸಲ ಮಾವನ ಮನೆಗೆ ಬರುವಾಗ ಸ್ವಾಭಾವಿಕವಾಗಿ ಇರುವ ಸಂಕೋಚ ಅವರಲ್ಲಿ ಇದ್ದಿತಾದರೂ, ಏಕಾಂತದಲ್ಲಿ ಕಂಡು ಮಾತನಾಡಿಸಿದ್ದರು: "ಮೈದಾನಕ್ಕೆ ಹೋಗೋಣವೆ. ಯಾರ ಬಳಿಯೂ ಹೇಳಬೇಡ. ಈಗಿಂದೀಗಲೆ ಹೊರಡು.

ಮುಂಬಯಿಗೆ ಬರುವ ಹುಡುಗಿಯಲ್ಲವೆ? ಅಷ್ಟು ಧೈರ್ಯ ನಿನ್ನಲ್ಲಿಲ್ಲವೆ?"

ಅದಕ್ಕಿಂತ ಹೆಚ್ಚು ಧೈರ್ಯ ಭಾರತಿಯಲ್ಲಿತ್ತು. ನಗುತ್ತಲೇ ಅವರನ್ನು ಅನುಸರಿಸಿದ್ದಳು. ಕತ್ತಲಾಗಿತ್ತು. ಅವರ ಕೈ ಹಿಡಿದು, ಆ ಬೆರಳುಗಳೊಂದಿಗೆ ಆಡುತ್ತ ಒಂದು ಫರ್ಲಾಂಗು ದೂರವನ್ನು ಒಂದೇ ನಿಮಿಷದಲ್ಲಿ ಮುಗಿಸಿದ್ದಳು. ಆ ವೈಶಾಖದ ಶುಕ್ಲಪಕ್ಷದ ರಾತ್ರಿಯ ಮೇಲೆ ಬಂಡೆಯಲ್ಲಿ ಜತೆಯಾಗಿ ಕಳೆದ ಅರ್ಧ ಘಂಟೆ—ಮುಂದಿನ ಹದಿನೆಂಟು ತಿಂಗಳಲ್ಲಿ ಸುಖದ ಹಸಿವಾದಾಗ ಮೆಲುಕುಹಾಕಲು ಸಿಗುತ್ತಿದ್ದ ಒಂದೇ ಒಂದು ನೆನಪಾಗಿತ್ತು.

"ಭಾರತಿ! ಎಷ್ಟು ಮುದ್ದಾದ ಹೆಸರು. ಭಾರತೀಯತ್ವದ ಸೌಂದರ್ಯವನ್ನೆಲ್ಲ ಸಂಗ್ರಹಿಸಿ ಬ್ರಹ್ಮ ಕಡೆದ ಶಿಲ್ಪ—ನನ್ನ ಮುದ್ದು ಭಾರತಿ. ಮುಂಬಯಿಗೆ ಬರುತ್ತೀಯೇನು?"

"ಹೂಂ."

"ನನ್ನ ಜತೆ ಆ ಮಹಾ ಶಹರದಲ್ಲಿ ಸಂಸಾರ ಹೂಡುವಿಯೇನು?"

"ಹೂಂ."

"ಮುಂಬಯಿ ದೊಡ್ಡ ಶಹರೆಂದು ನಿನಗೆ ಬರಲು ಬಹಳ ಆಸೆ ಅಲ್ಲವೆ?"

"ಹೂಂ."

"ಆ ಶಹರದ ಎಲ್ಲ ವೈಭವ ನಿನಗೆ ಬೇಕಲ್ಲ."

"ಹೂಂ."

"ಸುಖ ಮತ್ತು ದುಃಖ?"

"ಹೂಂ."

ಅಂದು ಮನೆಗೆ ಮರಳಿದಾಗ ಮನೆಯವರೆಲ್ಲ ಭಾರತಿಯನ್ನು ಎಲ್ಲ ಕಡೆಗಳಲ್ಲಿ ಹುಡುಕಾಡಿ ಮುಗಿದಿತ್ತು. ತನ್ನ ಗಂಡನ ಧೈರ್ಯದ ಕುರಿತು ಮೆಚ್ಚಿಕೆಯಷ್ಟೇ ಅಲ್ಲದೆ ತನ್ನ ಧೈರ್ಯದ ಪ್ರಜ್ಞೆ ಸ್ಪಷ್ಟವಾಗಿ ಭಾರತಿಗೆ ಉಂಟಾದುದು ಅಂದೇ.

ಅಕ್ಕನ ಮಾತು ಮುಗಿದು ತಾನು ಕೇಳಿದ್ದಕ್ಕೆಲ್ಲ ಬರೇ 'ಹೂಂಕಾರ' ದೊರಕಲು ಆರಂಭಿಸಿದಾಗಲೇ ಸುನಂದೆಗೆ ಗೊತ್ತು: ಆಕೆ ಭಾವನ ಕುರಿತು ಚಿಂತಿಸುತ್ತಿದ್ದಾಳೆ, ಎಂದು. ಈ ರೀತಿಯ ವರ್ತನೆ ಸ್ವಾಭಾವಿಕವೆನ್ನುವಷ್ಟು ಪರಿಚಿತವಾಗಿದ್ದುದರಿಂದ ಅವಳು ಮಾತನಾಡಿ ಕೆಣಕುತ್ತಿದ್ದಿಲ್ಲ. ಇಂದು ಕೂಡ ಹಾಗೆಯೇ ಮೌನವಾಗಿ ಮುಂದುವರಿದಳು.

ಮೈದಾನ ತಲುಪಿ ಬಂಡೆಯ ಮೇಲೆ ಜಾಗ ಆರಿಸಿ ಕುಳಿತ ಮೇಲೆ ಸುನಂದ ಅಕ್ಕನ ತೋಳನ್ನು ತಿವಿಯುತ್ತ ಹೇಳಿದಳು :

"ಅಲ್ಲಿ ನೋಡೆ, ಅಕ್ಕ" ಎಂದು.

ಭಾರತಿಯ ಯೋಚನೆ ನಿಂತಿರಲಿಲ್ಲ. ಆದರೆ ತಂಗಿಯ ಕರೆ ಎಚ್ಚರಿಸಿದಾಗ ಅವಳು ಬೊಟ್ಟು ತೋರಿಸಿದತ್ತ ನೋಡಿದಳು.

"ಏನೇ?"

"ಅಲ್ಲಿ ನೋಡೆ. ಗಂಡನಿಗಿಂತ ಒಂದು ಫರ್ಲಾಂಗು ಹಿಂದೆ ಇದ್ದಾಳೆ. ಅವಳು ಹತ್ತಿರ ಬರುತ್ತಾಳೆಂದು ಅವನಿಗೆ ಕಾದು ಕಾದು ಸಾಕಾಯಿತು. ಎರಡು ಸಲ ನಿಂತು ನೋಡಿದ. ಈಗ ಇದು ಮೂರನೆಯ ಸಲ."

"ಇಲ್ಲಿಗೆ ಯಾಕೆ ಬಂದರೋ. ಮಠಕ್ಕೆ ಹೋಗಬೇಕಾಗಿತ್ತು. ದಾರಿ ತಪ್ಪಿದ್ದಿರಬಹುದು" ಎಂದು ಭಾರತಿ ನಗುತ್ತಲೇ ಉತ್ತರ ಕೊಟ್ಟಳು.

"ಭಾವನಿಂದ ಕಾಗದ ಬಂದಿದೆಯೇನೇ? ಯಾವಾಗ ಬರುತ್ತಾರಂತೆ?"

ಭಾರತಿಗೆ ಎರಡನೆಯ ಸಲ ಕಾಗದದ ನೆನಪಾಯಿತು :

'ಅವರ ಕಾಗದ ಯಾಕೆ ಬರಲಿಲ್ಲ?'

"ಬರಬೇಕಾಗಿತ್ತು, ಸುನ್ನಾ. ಬರಲಿಲ್ಲ."

"ಬಂದೀತು ಬಿಡು, ಸೀರೆಯ ಪಾರ್ಸೆಲಿನ ಜತೆಗೆ."

"ಇನ್ನು ಅದೊಂದು ಬಾಕಿ." ಭಾರತಿ ತುಸು ಅಸಮಾಧಾನದ ದನಿಯಲ್ಲಿ ಹೇಳಿದಳು.

"ಈಗ ಯುದ್ಧ ಮುಗಿದಿದೆ. ಮುಂಬಯಿ ತುಂಬ ಫ್ಯಾಶನ್‌ಮಯ ಆಗಿರಬೇಕು. ಹೊಸ ಹೊಸ ಜಾರ್ಜೆಟ್, ಕಾಶ್ಮೀರದ ಸಿಲ್ಕು, ಒರ್ಗಂಡಿ...."

"ಮತ್ತೇನೂ ಬೇಡವೆ?"

"ವ್ಯಾನಿಟಿ ಬ್ಯಾಗ್, ಲೇಡೀಸ್ ರಿಸ್ಟ್‌ವಾಚ್, ಪ್ಲಾಸ್ಟಿಕ್ ಚಪ್ಪಲಿ."

ಈಗ ಮಾತ್ರ ಭಾರತಿಗೆ ನಗು ತಡೆಯಲಾಗಲಿಲ್ಲ.

"ನಿನ್ನ ಮದುವೆಯಾದ ಕೂಡಲೆ ದಂಪತಿಗಳನ್ನು ಕರೆಸಿ ಮುಂಬಯಿಯಲ್ಲಿ ಇವುಗಳ ಉಡುಗೊರೆ ಕೊಡಿಸುತ್ತೇನೆ ನೋಡು, ನಮ್ಮ ಮನೆಯಲ್ಲಿ."

ತುಂಬ ಅಭಿಮಾನದಿಂದ 'ನಮ್ಮ ಮನೆ' ಎಂದು ಮಾತು ಹೊರಬಿದ್ದಿತ್ತು.

"ಭಾವ ಇಷ್ಟು ತಡ ಮಾಡುವುದನ್ನು ನೋಡುವಾಗ ಅವರು ಹೊಸ

ದೊಂದು ಮನೆ ಕಟ್ಟಿಸುತ್ತಿದ್ದಾರೆ ಎಂದು ಕಾಣುತ್ತದೆ." ಸುನಂದ ಅಕ್ಕನನ್ನು ನೋಯಿಸಲು ಈ ಮಾತು ಆಡಿರಲಿಲ್ಲವಾದರೂ, ದಾರಿಯುದ್ದಕ್ಕೂ ತಾನು ಆಲೋಚಿಸಿಕೊಂಡು ಬರುತ್ತಿದ್ದ ಸವಿನೆನಪಿನ ಹಿನ್ನೆಲೆಯಲ್ಲಿ ಈ ಮಾತಿನ ಹಿಂದಿದ್ದ ಅಣಕದಿಂದ ಭಾರತಿ ನೊಂದುಕೊಂಡು ಹೇಳಿದಳು :

"ಹೊಸ ಮನೆಯನ್ನೇ ಕಟ್ಟಿಸಬಾರದೆಂದಿದೆಯೇನು? ನಡಿ ಹೋಗೋಣ. ಸುಮಿತ್ರೆಯ ಮನೆಗೆ ಹೋಗಿ ಅಲ್ಲೊಂದು ಐದು ನಿಮಿಷವಿದ್ದು ಮತ್ತೆ ಮನೆಗೆ. ಕತ್ತಲು ಹೆಚ್ಚಾದರೆ ಅಮ್ಮ ಹೆದರಿಕೊಳ್ಳುತ್ತಾಳೆ.

ಮನೆ ತಲುಪುವವರೆಗೂ ಭಾರತಿಗೆ ತಂಗಿಯ ಮಾತಿನ ಹಿಂದಿದ್ದ ಅಣಕದ ನೋವನ್ನು ಮರೆಯಲಾಗಲಿಲ್ಲ. ಕಕ್ಷಿಗಾರರೆಲ್ಲ ಚದರಿದ ಮೇಲೆ ಮಗಳ ಹಾದಿ ಕಾಯುತ್ತ ಕುಳಿತಿದ್ದ ಶ್ರೀಪತಿರಾಯರು ಭಾರತಿ ಬಂದೊಡನೆಯೇ ಬಳಿಗೆ ಓಡಿಬಂದರು.

"ಏನು ಭಾರೀ, ಹೇಗಿದ್ದಿ? ಸಂಜೆ ಬಂದಿ. ಮಾತನಾಡಲಿಕ್ಕೆ ಸಾಧ್ಯವಾಗಲಿಲ್ಲ. ಈ ಕಕ್ಷಿಗಾರರ ವಹಿವಾಟಿನಲ್ಲಿ, ಅವರ ಸಾಲ-ಶೂಲೆ, ಕೇಸು, ಕೈಫಿಯತ್ತು ನಮ್ಮ ಪ್ರಾಣ ತೆಗೆಯುತ್ತವೆ. ಮತ್ತೇನೆಲ್ಲ ವಿಶೇಷ? ಅನಂತನ ಕಾಗದವಿದೆಯೆ? ನಿನ್ನ ಮಾವನ ಹೊಟ್ಟೆನೋವು ಹೇಗಿದೆ?"

ಹತ್ತಾರು ಪ್ರಶ್ನೆಗಳು ಒಂದರ ಹಿಂದೊಂದು ಬಂದರೂ, ತಂದೆಯೊಡನೆ ಮಾತನಾಡುವುದೆಂದರೆ ಭಾರತಿಯ ಮನಸ್ಸಿಗೆ ಅದು ಅತ್ಯಂತ ಸುಖದಾಯಕ ಅನುಭವ. ಶ್ರೀಪತಿರಾಯರಿಗೂ ಮೊದಲ ಮಗಳು ವಾತ್ಸಲ್ಯದ ಪ್ರತಿಮೂರ್ತಿ. ಸ್ವಭಾವತಃ ಹೆಂಗರುಳಿನ ಮನುಷ್ಯ. ಪ್ರೀತಿಯ ಮಗಳಿಗೆ ತುಸುವೂ ನೋವಾಗದಂತೆ ಆದರದ ನೀರೆರೆದು ಆಕೆಯ ಸ್ನೇಹವನ್ನು ಬೆಳೆಸಿಕೊಂಡು ಬಂದಿದ್ದರು.

ತಂದೆಯೊಡನೆ ಮಾತನಾಡಲು ಆರಂಭಿಸಿದೊಡನೆ ಭಾರತಿಗೆ ಸಂಜೆಯ ಅನುಭವಗಳೆಲ್ಲ ಮರೆತುಹೋದವು. ಆದರೆ ತಂದೆ ತನ್ನ ಗಂಡನ ವಿಚಾರ ಮಾತನಾಡಿದಾಗಲೆಲ್ಲ ಪ್ರತಿಯೊಂದು ಪ್ರಶ್ನೆಗೂ ಉತ್ತರ ಹೇಳುವುದು ಅತ್ಯಂತ ಪ್ರಯಾಸದ ಕೆಲಸವಾಗುತ್ತಿತ್ತು. ಯಾಕೆ ಹೀಗಾಗುತ್ತಿದೆಯೆಂದು ಆಕೆ ತಿಳಿದಿರಲಿಲ್ಲ. ಆದರ ಯಾವುದೋ ಒಂದು ತೀವ್ರ ಅತೃಪ್ತಿಯನ್ನು ತಂದೆಯಿಂದ ಮುಚ್ಚಿಡಲು ಪ್ರಯತ್ನಿಸುತ್ತಿದ್ದೇನೆ ಎಂಬ ಅರಿವು ಮಾತ್ರ ಆಗುತ್ತಿತ್ತು. ಆ ಕಾರಣ, ಬೇಕೆಂದೇ ವಿಷಯ ಬದಲಿಸುತ್ತಿದ್ದಳು.

ಎಲ್ಲರೂ ಜೊತೆಗೆ ಊಟವನ್ನು ಮಾಡಿಯಾದ ಮೇಲೆ—ಯಾವಾಗಲೂ

ಸುನಂದೆಯ ಬಳಿ ಕುಳಿತುಕೊಳ್ಳುತ್ತಿದ್ದ ಸದಾ ಇಂದು ತಂದೆ ಮತ್ತು ಹಿರಿಯಕ್ಕ ಭಾರತಿಯರ ನಡುವೆ ಮಣೆ ಹಾಕಿಕೊಂಡು ಕುಳಿತಿದ್ದ—ಭಾರತಿ ಮಲಗಲು ಹೋಗುವ ಮುನ್ನ ಶ್ರೀಪತಿರಾಯರು ಕೇಳಿದರು :

"ಇನ್ನು ನಾಲ್ಕು ದಿನ ಇದ್ದೀಯಲ್ಲ, ಭಾರೀ. ಏನಾದರೊಂದು ಕಾರಣ ಹೇಳಿ ನಾಳೆಯೇ ಓಡಿಹೋಗಬೇಡ."

ಸುಳ್ಳು ಹೇಳಿ ಬಂದಿದ್ದೇನೆ ಎಂದು ತಂದೆಯ ಮುಂದೆ ಒಪ್ಪಿಕೊಳ್ಳುವ ಧೈರ್ಯ ಭಾರತಿಗೆ ಆಗಲಿಲ್ಲ. ಬರೇ "ಹೌದು, ಇದ್ದೇನೆ" ಎಂದಳಷ್ಟೆ.

ಮಲಗುವ ಕೋಣೆಗೆ ಬಂದು ಸುನಂದೆಯ ಹಾಸಿಗೆಯ ಬಳಿ ತಾನೂ ಒಂದು ಹಾಸಿಗೆ ಬಿಡಿಸಿಕೊಂಡು, ದೀಪವಾರಿಸಿ ಮಲಗಿದ ಮೇಲೆ ಭಾರತಿಗೆ ಒಮ್ಮಿಂದೊಮ್ಮೆಗೆ ಒಂದು ಯೋಚನೆ ಬಂದಿತು :

'ನಾನು ಇನ್ನೊಂದು ದಿನ ತಡೆದು ಬಂದಿದ್ದರೆ ಏನಾಗುತ್ತಿತ್ತು? ನಾಳೆ ಅವರ ಕಾಗದ ಖಂಡಿತ ಬಂದೇ ತೀರುತ್ತದೆ. ಅದನ್ನು ಹಿಡಿದುಕೊಂಡೇ ಬರಬಹುದಿತ್ತು. ಅದರಲ್ಲಿ ತುಂಬಿರುವ ಬೇರೆ ಎಲ್ಲ ವೇದಾಂತವನ್ನು ಬಿಟ್ಟು ಬಿಟ್ಟರೂ ಕೊನೆಯ ಒಂದು ಪಂಕ್ತಿ ನನಗೆ ಎಲ್ಲಿಲ್ಲದ ಧೈರ್ಯ ಕೊಡುತ್ತಿತ್ತು ; 'ನೀನು ಇಲ್ಲಿಗೆ ಬರುವತನಕ ನೆನಪಿಗೆ—ಒಂದು ಸಾವಿರ ಮುತ್ತು.' ಕಾಗದ ವನ್ನು ಬಿಟ್ಟು ನಾನು ಯಾಕೆ ಬಂದೆ ?'

ಇದೇ ಯೋಚನೆಯಲ್ಲಿ ಭಾರತಿ ನಿದ್ದೆಹೋದಳು.

೨

ಬೆಳಗ್ಗೆ ಐದೂಮುಕ್ಕಾಲು ಘಂಟೆಗೆ ಶ್ರೀಪತಿರಾಯರ ಮಂಚದ ಬಳಿಯ ಕೈಮೇಜಿನ ಮೇಲಿದ್ದ ಅಲರಾಂ ಗಡಿಯಾರ ಸದ್ದುಮಾಡಲಾರಂಭಿಸಿತು. ಅಭ್ಯಾಸಬಲದಿಂದ ಈ ಸದ್ದು ಆರಂಭವಾಗುವುದಕ್ಕೆ ಒಂದು ನಿಮಿಷ ಮುಂಚೆಯೇ ಅವರಿಗೆ ಎಚ್ಚರಾಗಿದ್ದರೂ, ಸದ್ದು ಕೇಳುವ ತನಕ ಅವರು ಏಳುವ ಮನಸ್ಸು ಮಾಡಲಿಲ್ಲ. ಆಮೇಲೆ ಮಾತ್ರ ಅವರಿಗೆ ಒಂದು ಕ್ಷಣವೂ ಹಾಸಿಗೆಯಲ್ಲಿರಲಾಗುತ್ತಿರಲಿಲ್ಲ. ಎದ್ದೊಡನೆ ಒಂದು ಕ್ಷಣ, ಇಂದು ಭಾನು ವಾರ, ಕೋರ್ಟಿನ ಗಡಿಬಿಡಿ ಅವಸರಗಳಿಲ್ಲ, ಎಂಬುದೊಂದು ಸಮಾಧಾನ ಅವರ ಮನಸ್ಸಿನಲ್ಲಿ ಸುಳಿದು ಮಾಯವಾಯಿತು. ಹಾಗೆಯೇ ಹಿರಿ ಮಗಳು ಮನೆಯಲ್ಲಿದ್ದಾಳೆಂದು ನೆನಪಾಗಿ ನಿತ್ಯಕ್ಕಿಂತ ಹೆಚ್ಚಿನ ಉಲ್ಲಾಸ ಮನಸ್ಸಿನಲ್ಲಿ

ತುಂಬಿತು. ತುಸು ದೂರದಲ್ಲಿದ್ದ ಹಿತ್ತಾಳೆಯ ತೊಟ್ಟಿಲಲ್ಲಿ ಎರಡು ವರ್ಷದ ಪುಟ್ಟ ಯಶೋದೆ ಮಲಗಿ ನಿದ್ರಿಸುತ್ತಿದ್ದಳು. ಎದ್ದುಬಂದ ಶ್ರೀಪತಿರಾಯರು ತೊಟ್ಟಿಲಲ್ಲಿದ್ದ ಮಗುವನ್ನೇ ಎರಡು ನಿಮಿಷ ದಿಟ್ಟಿಸಿ ನೋಡಿದರು. ಆ ಎಳೆಯ ಮಗುವಿನ ನಿದ್ದೆಯಲ್ಲಿ ಕಾಣುತ್ತಿದ್ದ ಮುಗ್ಧ ಸೌಂದರ್ಯವನ್ನು ನೋಡಿದಷ್ಟೂ ಸಾಕೆನಿಸುತ್ತಿರಲಿಲ್ಲ. ಶ್ರೀಪತಿರಾಯರ ಹೃದಯದಲ್ಲಿ ಆನಂದದ ತೆರೆಗಳು ಉಕ್ಕಿಯುಕ್ಕಿ ಬರುತ್ತಿದ್ದವು. ಮಲಗಿದ್ದಲ್ಲೇ ಆ ಮಗುವನ್ನು ಮುದ್ದಿಟ್ಟು ಅಲ್ಲಿಂದ ಹೋಗಬೇಕು ಎಂದು ಬಗ್ಗಿದಾಗಲೇ ಅವರಿಗೆ ಹೆಂಡತಿಯ ನೆನಪು ಬಂದುದು. ತಾವು ಈ ರೀತಿ ಮಗುವನ್ನು ದಿಟ್ಟಿಸಿ ನೋಡುತ್ತಿರುವುದನ್ನು ಆಕೆ ಎಲ್ಲಾದರೂ ನೋಡುತ್ತಿರಬಹುದೆಂಬ ಯೋಚನೆಯಿಂದ ಗಲಿಬಿಲಿಗೊಂಡ ಅವರು ಮಗುವನ್ನು ಮುದ್ದಿಡುವ ವಿಚಾರವನ್ನು ಮರೆತುಬಿಟ್ಟು ಹಿಂದಿರುಗಿ ನೋಡಿದರು.

ಆದರೆ ಗೌರಮ್ಮ ಎದ್ದು ಆಗಲೇ ಒಂದು ತಾಸಾದರೂ ಆಗಿದ್ದಿರಬೇಕು. ಮಂಚದ ಪಕ್ಕದಲ್ಲೇ ನೆಲದ ಮೇಲೆ ಹಾಸಿದ್ದ ಅವರ ಹಾಸಿಗೆ ಸುರುಳಿಯಾಗಿ ಗೋಡೆಯ ಬದಿಯ ತನ್ನ ಸ್ಥಾನವನ್ನು ಸೇರಿತ್ತು. ಶ್ರೀಪತಿರಾಯರಿಗೆ ತಮ್ಮ ಸಂದೇಹಕ್ಕಾಗಿ ತಮಗೇ ನಗು ಬಂತು. ಎಲ್ಲ ಯೋಚನೆಗಳನ್ನು ಮರೆತು "ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ" ಎಂದು ಗಟ್ಟಿಯಾಗಿ ಹೇಳುತ್ತ ಪ್ರಾತರ್ವಿಧಿಗಳಿಗಾಗಿ ಬಚ್ಚಲುಮನೆಯ ಕಡೆ ನಡೆದರು.

ಮತ್ತೆ ಅರ್ಧ ಘಂಟೆಯಲ್ಲಿ ಅವರು ಅಡುಗೆಯ ಮನೆಯಲ್ಲಿ ಹಾಜರು. ದೊಡ್ಡ ಬೆಳ್ಳಿಯ ಲೋಟದಲ್ಲಿ ಬಿಸಿ ಕಾಫಿ ಒಲೆಯ ಚಿಟ್ಟಿಯ ಮೇಲೆ ಇವರ ಹಾದಿ ನೋಡುತ್ತಿತ್ತು. ಗಂಡನು ಎದ್ದಾಗಿದೆಯೆಂದು ತಿಳಿದಿದ್ದರೂ, ಅಂದು ತುಸು ತಡವಾಗಿ ಎದ್ದಿದ್ದ ಗೌರಮ್ಮ, ಅವರು ಒಳಗೆ ಬರುವುದರಲ್ಲಿ ತುಳಸಿಯ ಪೂಜೆಯೊಂದನ್ನು ಮುಗಿಸಿಬರುತ್ತೇನೆ ಎಂದು, ಅರಿಸಿನ ಕುಂಕುಮಗಳ ತಟ್ಟೆಗಳಿದ್ದ ಬೆಳ್ಳಿಯ ಹರಿವಾಣದಲ್ಲಿ ಎರಡು ತುಪ್ಪದ ಬತ್ತಿಗಳಿಂದ ಬೆಳಗುತ್ತಿದ್ದ ನೀಲಾಂಜನಗಳನ್ನಿಟ್ಟುಕೊಂಡು, ಬಾಗಿಲು ದಾಟಬೇಕೆನ್ನುವಷ್ಟರಲ್ಲಿ ಶ್ರೀಪತಿ ರಾಯರು, "ಹರೇ ಕೃಷ್ಣ, ತೀರ್ಥ ತಯಾರಾಗಿದೆಯೇನೇ ?" ಎಂದುಕೊಂಡು ಒಳಗೆ ಬಂದರು.

"ಕಾಫಿ ಚಿಟ್ಟಿಯ ಮೇಲಿದೆ, ಈಗ ಬಂದೆ" ಎಂದು ಗೌರಮ್ಮ ತಮ್ಮ ಪೂಜಾವಿಧಿಗಾಗಿ ಹೋದಾಗ ಶ್ರೀಪತಿರಾಯರಿಗೆ ತುಸು ಅಸಮಾಧಾನ ವಾಯಿತು.

"ಈ ದೇವರಿಗೆ ಮೊದಲು ಪೂಜೆ ಮಾಡಿಕೊಳ್ಳೇ. ಮತ್ತೆ ಬೇರೆಲ್ಲ ದೇವರು." ಎಂದು ಅವರು ನಗುತ್ತಲೇ ಹೇಳಿದಾಗ ಗೌರಮ್ಮ ಹಿಂದಿರುಗಿ ಗಂಡನ ಮುಖ ನೋಡಿ ನಕ್ಕರೂ, ತಮ್ಮ ಪೂಜೆಯ ಕೆಲಸವನ್ನು ನಿಲ್ಲಿಸಲಿಲ್ಲ.

ಒಲೆಯ ಬದಿಗೆ ಬಂದ ರಾಯರು ಕಾಫಿಯ ಲೋಟವನ್ನೆತ್ತಿಕೊಂಡು, ಒಂದು ಮಣೆಯೆಳೆದುಕೊಂಡು ಅಲ್ಲಿಯೇ ಕುಳಿತರು. ತಾವು ಕಾಫಿ ಕುಡಿಯು ವಾಗ ಹೆಂಡತಿ ಯಾವಾಗಲೂ ಬಳಿಯಲ್ಲೇ ಇರಬೇಕೆಂಬುದು, ಗೌರಮ್ಮನೂ ತಿಳಿದಿದ್ದ ಅವರ ಆಸೆ. ಇಪ್ಪತ್ತು ವರ್ಷಗಳ ಸುಂದರ ದಾಂಪತ್ಯಜೀವನ ನಡೆಸಿಯೂ ರಾಯರ ಈ ಆಸೆಯ ಕಾವು ಆರಿರಲಿಲ್ಲ. ಬೆಳಗ್ಗೆ ಬೇಗ ಸ್ನಾನ ತೀರಿಸಿ ಬಂದು, ಹೆಳಲಿಕ್ಕಿಕೊಂಡು, ಹಣೆಗೆ ಅಲಂಕಾರಪ್ರಾಯವಾದ ದೊಡ್ಡ ಕುಂಕುಮದ ಬೊಟ್ಟು ಇಟ್ಟುಕೊಂಡು ನೈರ್ಮಲ್ಯದ ಪ್ರತೀಕವಾಗಿ, ದಿನ ಆರಂಭವಾಗುವಾಗ ನಿತ್ಯವೂ ಕಾಣುತ್ತಿದ್ದ ಹೆಂಡತಿಯ ಮುಖವನ್ನು ನೋಡುತ್ತ ಬೆಳಗಿನ ಕಾಫಿ ಮುಗಿಸುವ ಚಟ ಶ್ರೀಪತಿರಾಯರಿಗೆ ಅಂಟಿಕೊಂಡಿದ್ದುದು ಸ್ವಾಭಾವಿಕವೆ.

ಅದೂ ಇಂದು ಹಿರಿಯ ಮಗಳು ಮನೆಯಲ್ಲಿದ್ದಾಳೆ. ಭಾರತಿಯ ವಿಚಾರ ಮಾತನಾಡುವುದೆಂದರೆ ರಾಯರಿಗಾದರೂ ಸರಿಯೆ, ಗೌರಮ್ಮನಿಗಾದರೂ ಸರಿಯೆ, ಹೊತ್ತು ಸಂದಾಯವಾಗುತ್ತಿದ್ದುದು ತಿಳಿಯುತ್ತಲೇ ಇರಲಿಲ್ಲ.

ಕಾಫಿ ಮುಗಿದರೂ ಹೆಂಡತಿ ಮರಳದಿದ್ದುದರಿಂದ ಶ್ರೀಪತಿರಾಯರಿಗೆ ನಿರಾಶೆಯೇ ಆಯಿತು. ಆದರದು ಕ್ಷಣಿಕ. ತೃಪ್ತಿಯ ಸ್ವಾವಲಂಬಿ ಜೀವನ, ಅವರ ಬಾಳಿನಲ್ಲಿ ತಂದಿದ್ದ ಶಿಸ್ತು, ಅವರು ಯಾವುದೊಂದು ಕ್ಷುಲ್ಲಕ ಅತೃಪ್ತಿಯ ಕುರಿತೂ ಹೆಚ್ಚು ಚಿಂತಿಸಲು ಅವಕಾಶ ಕೊಡುತ್ತಿದ್ದಿಲ್ಲ. ಎಂತಲೇ ಹೆಂಡತಿಯ ದಾರಿ ಕಾಯದೆ, ಅಭ್ಯಾಸಬಲದಿಂದ, ತಮ್ಮ ಕೋಣೆಗೆ ಹೋಗಿ ಶರಟು ಸಿಕ್ಕಿಸಿಕೊಂಡು, ಕೈಯಲ್ಲೊಂದು ಬೆತ್ತ ಹಿಡಿಕೊಂಡು ಮುಂಜಾವಿನ 'ವಾಕಿಂಗ್' ತೀರಿಸಲು ಹೊರಟರು.

ಹೊರಗೆ ಅಂಗಳದಲ್ಲಿ ತುಳಸಿಗೆ ಪ್ರದಕ್ಷಿಣೆ ಬರುತ್ತಿದ್ದ ಗೌರಮ್ಮನಿಗೆ ಗಂಡ ಹೊರಗೆ ಹೊರಟುದನ್ನು ಕಂಡಾಗ ತುಸು ಬೇಸರವಾಯಿತು. ಇಂದು ಭಾರತಿ ಮನೆಯಲ್ಲಿರುವುದರಿಂದಲಾದರೂ ಗಂಡ ಮನೆಯಲ್ಲೇ ಉಳಿಯಬಹುದೆಂದು ಅವರು ಭಾವಿಸಿದ್ದರು. ಆದರೆ ಶ್ರೀಪತಿರಾಯರ ಮುಂಜಾವಿನ

ವಾಯುಸೇವನೆಯ ನಿಯಮಕ್ಕೆ ಅಪವಾದಗಳು ದೊರಕುತ್ತಿದ್ದುದು ತೀರ ಅಪರೂಪವಾಗಿ. ಹೀಗಾಗಿ ಗಂಡನ ನಿಶ್ಚಯದ ಕುರಿತು ಆಕ್ಷೇಪಿಸುವ ವಿಚಾರ ಗೌರಮ್ಮನ ಮನಸ್ಸಿನಲ್ಲಿ ಸುಳಿಯುತ್ತಲೇ ಇರಲಿಲ್ಲ.

"ಬೇಗ ಬರುತ್ತೀರಲ್ಲ. ಭಾರಿ ಏಳುವುದರೊಳಗಾಗಿ ಉಪ್ಪಿಟ್ಟು ಮಾಡುತ್ತೇನೆ. ಮತ್ತೆ ನಿಮ್ಮ ಕಕ್ಷಿಗಾರರು ಬರಲಿಕ್ಕೆ ಸುರು ಮಾಡಿದರೆ ಆ ಕಾಫಿಗೂ ಉಪ್ಪಿಟ್ಟಿಗೂ ದೇವರೇ ಗತಿ."

ಶ್ರೀಪತಿರಾಯರು "ಹೂಂ" ಎಂದರಷ್ಟೆ.

ಕರಾವಳಿಯ ರಾಜಮಾರ್ಗಕ್ಕೆ ತಾಗಿಕೊಂಡೇ ಶ್ರೀಪತಿರಾಯರ ಮನೆ. ಹೆಚ್ಚಾಗಿ ಅವರ 'ವಾಕಿಂಗ್' ಮುಗಿಯುತ್ತಿದ್ದುದು ಇದೇ ರಸ್ತೆಯಲ್ಲಿ. ಆದರೆ ಭಾನುವಾರ ಅಥವಾ ಇನ್ನಿತರ ರಜಾ ದಿನಗಳಲ್ಲಿ ಅವರು ಈ ದಾರಿ ಬಿಟ್ಟು ಅಜ್ಜರ ಕಾಡಿನ ಮೈದಾನವನ್ನು ಹಾದುಕೊಂಡು ಮಲ್ಪೆಯ ದಾರಿ ಹಿಡಿದು ಹೋಗಿ ಬರುತ್ತಿದ್ದರು. ರಜಾ ದಿನಗಳಲ್ಲಿ ತುಸು ತಡವಾಗಿ ಮನೆಗೆ ಮರಳಿದರೂ ಚಿಂತೆಯಿಲ್ಲವೆಂಬುದು ಇದಕ್ಕೆ ಮೊದಲನೆಯ ಕಾರಣ. ಹಾಗೆಯೇ ಈಗಲೀಗ ಈ ದಾರಿ ಹಿಡಿದು ಹಿರಿಯ ಮಗಳ ಮನೆಯ ತನಕ ಹೋಗಿ ಅಲ್ಲಿ ಒಂದರ್ಧಘಂಟೆ ಉಳಿದು ಬರಬಹುದು ಎಂಬುದು ಇನ್ನೊಂದು ಕಾರಣ.

ಜನವರಿಯ ಮುಂಜಾವಿನ ಶೀತಲಗಾಳಿ ತುಂಬ ಆಹ್ಲಾದಕರವಾಗಿತ್ತು. ಆಗೊಂದು ಈಗೊಂದು ಹೋಗುವ ಬಸ್ಸುಗಳನ್ನು ಬಿಟ್ಟರೆ ದಾರಿಯಲ್ಲಿ ವಾಹನ ಚಲಾವಣೆಯೇ ಇರಲಿಲ್ಲ. ಬೆತ್ತವನ್ನು ಊರಿಕೊಂಡು ರಾಜಬೀದಿಯಿಂದ ಮುಂದುವರಿಯುತ್ತಿದ್ದ ರಾಯರ ಮನಸ್ಸು ತುಂಬ ಪ್ರಫುಲ್ಲಿತವಾಗಿತ್ತು. ಈ ಸಮಯದಲ್ಲಿ ಅವರು ಯೋಚಿಸುತ್ತಿದ್ದ ವಿಷಯಗಳಿಗೆ ತುದಿ ಮೊದಲಿರಲಿಲ್ಲ. ತಮ್ಮ ಎಲ್ಲ ಕಕ್ಷಿಗಾರರ ಹುಳುಕುಗಳು, ಅವರ ವ್ಯಾಜ್ಯಗಳ ಗುಣಾವಗುಣಗಳು, ವಿರುದ್ಧಪಕ್ಷದ ವಕೀಲರ ಸ್ವಭಾವವಿಶೇಷಗಳು, ಇವುಗಳಿಂದಾಗಿ ತಮ್ಮ ಕಕ್ಷಿಗಾರರ ಪರವಾಗಿ ತಾವು ಸಾಧಿಸಬಹುದಾಗಿದ್ದ ಪ್ರಯೋಜನಗಳು, ಹೊಸದಾಗಿ ಬರುತ್ತಿದ್ದ ಮುನ್ಸೀಫರ ವಿಚಾರಗತಿಯಲ್ಲಿ ಕಂಡುಬರುತ್ತಿದ್ದ ವಿಸ್ಮಯವಿಶೇಷಗಳು, ಅವರ ಸುತ್ತಮುತ್ತಣ ಜನರ, ಸಂದರ್ಭಾನುವರ್ತಿಯಾದ ಹೆಗ್ಗಳಿಕೆ, ಕೀಳರಿಮೆ ಇವುಗಳೆಲ್ಲ ಕುರಿತಾದ ಮಂತ್ರಾಲೋಚನೆ ಆಗಲೇ ನಡೆಯಬೇಕಿತ್ತು. ಮನೆಯಲ್ಲಿ ಈ ವಿಚಾರಗಳಿಗೆ ಶ್ರೀಪತಿರಾಯರಿಗೆ ಅವಕಾಶ ದೊರಕುತ್ತಿದ್ದಿಲ್ಲ. ಕಕ್ಷಿಗಾರರು ಬಂದಾಗ ಅವರು ತಾಳ್ಮೆಯ ಪ್ರತಿಮೂರ್ತಿ. ಅವರೊಂದಿಗೆ ವಾದವಿವಾದ ಪ್ರಯೋಜನವೇ ಇಲ್ಲವೆಂದು

ಚೆನ್ನಾಗಿ ಅನುಭವದಿಂದ ಅರಿತಿದ್ದರಾಯರು, ಅವರು ಹೇಳುತ್ತಿದ್ದುದನ್ನೆಲ್ಲ ಕಿವಿಯರಳಿಸಿ ಕೇಳಿಕೊಂಡು, ಮುಂದಿನ ದಿನದ 'ವಾಕಿಂಗ್' ವೇಳೆಗೆ ಅದರಲ್ಲಿ ವ್ಯಾಜ್ಯಕ್ಕೆ ಸಂಬಂಧಿಸಿದ ವಿಚಾರವಷ್ಟನ್ನೆ ತೆಗೆದುಕೊಂಡು, ಜಯಾಪಜಯಗಳ ದೃಷ್ಟಿಯಿಂದ ಮಥಿಸಲು ಆರಂಭಿಸುತ್ತಿದ್ದರು.

ಇಂದು ಮಾತ್ರ ಯಾವ ಕಕ್ಷಿಗಾರರ ನೆನಪೂ ರಾಯರಿಗೆ ಬರಲಿಲ್ಲ. ಅವರ ಮನಸ್ಸೆಲ್ಲ ಭಾರತಿಯ ಕುರಿತು ಚಿಂತಿಸುತ್ತಿತ್ತು. ಆಕೆಯ ಅನಂತನ ಕುರಿತು ಚಿಂತಿಸುತ್ತಿತ್ತು. ತಾವು ಮಗಳಲ್ಲಿ ಇರಿಸಿಕೊಂಡಿದ್ದಷ್ಟೇ, ಅದಕ್ಕೆ ಒಂದು ತೂಕ ಕೂಡ ಕಡಿಮೆಯಿರದ ಪ್ರೀತಿ ಅನಂತನಲ್ಲಿ ತಮಗಿದೆಯೆಂಬುದು ಅವರಿಗೆ ಖಚಿತವಾಗಿತ್ತು. ಆ ಕಾರಣ ಅನಂತ-ಭಾರತಿಯರ ಕುರಿತು ಯೋಚಿಸುವುದೆಂದರೆ ಅದು ಯಾವಾಗಲೂ ಅವರಿಗೆ ಸಂತೋಷದ ವಿಚಾರವೆ. ಭಾರತಿಯ ಭಾವೀ ಜೀವನದ ಕಲ್ಪನೆ ಅವರಿಗೆ ಯಾವಾಗಲೂ ಪ್ರಿಯವಾದುದೆ.

ಆದರೆ ಇಂದು ಮನಸ್ಸು ಅಳಿಯನ ವಿಚಾರ ಚಿಂತಿಸುವಾಗ ಒಂದು ರೀತಿಯ ವೇದನೆಗೆ ಸಿಲುಕಿತ್ತು. ಹಿಂದಿನ ರಾತ್ರಿಯೇ ಮಗಳೊಡನೆ ಏಕಾಂತದಲ್ಲಿ ಎಷ್ಟೋ ಮಾತುಗಳನ್ನಾಡಬೇಕೆಂದು ಅವರು ಯೋಚಿಸಿದ್ದರು. ಆದರೆ ಅವಳ ಆಯಾಸವನ್ನು ಗುರುತಿಸಿದ್ದ ಅವರು ಔಪಚಾರಿಕವಾದ ನಾಲ್ಕು ಮಾತುಗಳನ್ನಾಡಿದರಷ್ಟೇ ಹೊರತು ಬೇರೇನನ್ನೂ ಹೇಳಿರಲಿಲ್ಲ.

ಇಂದು ಸಮಯಸಾಧಿಸಿ ಮಗಳೊಡನೆ ಆ ವಿಚಾರ ಚರ್ಚಿಸಬೇಕಿತ್ತು.

ಆದರೆ ಭಾರತಿಗೆ ಇದರಿಂದ ನೋವಾಗಬಹುದೆ ?

ಈ ಪ್ರಶ್ನೆಗೆ ರಾಯರ ಹೃದಯ ಉತ್ತರ ಹೇಳುತ್ತಿರಲಿಲ್ಲ. ಹೇಳುವುದು ಸಾಧ್ಯವೂ ಇರಲಿಲ್ಲ. ಅನಂತ ತಿಳಿದ ಹುಡುಗನಲ್ಲವೆ? ತನ್ನ ಆದರ್ಶದ ಜಗತ್ತಿನಲ್ಲಿ ತಾನು ಆರಿಸಿದ್ದ ಒಂದೇ ಒಂದು ರತ್ನವಲ್ಲವೆ? ಅಂಥವ ತಿಳಿದು ಒಪ್ಪಿದ ವಿಚಾರದ ಕುರಿತು ತಾನು ಶಂಕಿಸಬಹುದೇ ಎಂದೆಲ್ಲ ರಾಯರ ವಿಚಾರ ಲಹರಿ ಹರಿದಿತ್ತು.

ಅವರಿಗೆ ಅಸಮಾಧಾನ ಕೊಡುತ್ತಿದ್ದುದು ಒಂದೇ ಸಂಗತಿ : ಭಾರತಿಗೆ ಈ ವಿಚಾರ ಎಷ್ಟು ತಿಳಿದಿದೆ?

ಬಹುಶಃ ಏನೂ ಇಲ್ಲ. ಇಲ್ಲವಾದಲ್ಲಿ ಮಾವನ ಮನೆಯಿಂದ ಮರಳಿದವಳೇ ಚಾಚೂ ತಪ್ಪದೆ ತನ್ನ ಮನಸ್ಸಿನ ಕಳವಳವನ್ನೆಲ್ಲ ತಂದೆಯೊಡನೆ ಮೊದಲು ಬಣ್ಣಿಸುತ್ತಿದ್ದಳು. ಆಕೆಯ ಉಲ್ಲಾಸವನ್ನು ಕಾಣುವಾಗ ಆಕೆಗೆ,

ಏನೊಂದೂ ತಿಳಿದಿರಲಿಲ್ಲವೆಂದು ಸಂದೇಹವಿಲ್ಲದೆ ಹೇಳಬಹುದಿತ್ತು.

ರಾಯರನ್ನು ಈಗ ಕಾಡುತ್ತಿದ್ದುದು ಇದೇ ವಿಚಾರ.

ಭಾರತಿ ಈ ವಿಚಾರ ಅಜ್ಞಾನಿಯೇ ಆಗಿದ್ದರೆ, ಅನಂತನೇ ತಿಳಿಸುವುದು ಅಗತ್ಯವಿಲ್ಲವೆಂದು ಮನಗಂಡಿರುವನಾದರೆ ಈಗ ತಾವು ತಿಳಿಸುವುದು ಸರಿಯೆ?

ಯಾವುದೊಂದು ನಿರ್ಣಯಕ್ಕೆ ತಲಪಲು ರಾಯರು ತಡವರಿಸುತ್ತಿದ್ದರು.

ಅದಕ್ಕೆ ಕಾರಣವಿಷ್ಟೆ:

ಹಿಂದಿನ ದಿನ ಕೋರ್ಟಿನ ಆವರಣದಲ್ಲಿ ಅವರಿಗೆ ಅಪರೂಪವಾಗಿ ಭಾರತಿಯ ಮಾವನ ಭೆಟ್ಟಿಯಾಗಿತ್ತು.

"ಏನು ಉಡುಪರೆ, ಹೇಗಿದ್ದೀರಿ? ಏನು ವಿಶೇಷ? ಭಾರಿ ಹೇಗಿದ್ದಾಳೆ? ಮನೆಯ ಕಡೆ ಬಂದೇ ಇಲ್ಲ" ಎಂದಾಗ,

"ದಸ್ತಾವೇಜು ಪುಟ್ಟಣ್ಣಯ್ಯನನ್ನು ಕಾಣಬೇಕಾಗಿತ್ತು. ಹಾಗೆಯೇ ನಿಮ್ಮನ್ನೂ ನೋಡಿಹೋಗೋಣ ಎಂದು ಬಂದೆ." ಎಂದು ಸೀತಾರಾಮ ಉಡುಪರು ಉತ್ತರ ಕೊಟ್ಟಿದ್ದರು.

"ನಿಮಗೆ ಯಾಕೆ ಈಗ ದಸ್ತಾವೇಜಿನ ನೆಂಟಸ್ತಿಕೆ?" ಎಂದು ಪುನಃ ಕೇಳಿದಾಗ,

"ಒಂದು ಕ್ರಯ ಚೀಟು ಆಗಬೇಕಾಗಿದೆ—ಎರಡೂವರೆ ಸಾವಿರಕ್ಕೆ. ಅನಂತ ನಿಮಗೆ ಬರೆದಿರಬೇಕಲ್ಲ. 'ಪವರ್ ಆಫ್ ಎಟ್' ಕಳಿಸಿದ್ದಾನೆ. ಆದಿಯುಡುಪಿಯ ಹತ್ತಿರದ ಇಪ್ಪತ್ತೈದು ಮುಡಿ ಭತ್ತ ಬರುವ ಗದ್ದೆಗಳು. ಯೋಗ್ಯ ಕುಳವಾರೊಂದು ಸಿಕ್ಕಿದೆ. ಈಗ ಬಿಟ್ಟರೆ ಮತ್ತೆ ಅಷ್ಟಕ್ಕೂ ಕೇಳುವವರು ಇದ್ದಾರೋ ಎಂದು ಸಂದೇಹ. ಕಾಂಗ್ರೆಸ್ ರಾಜ್ಯವೆಂದು ಭೂಮಿಯ ಬೆಲೆ ಇಳಿಯಲಿಕ್ಕೆ ಆರಂಭವಾಗಿದೆ."

"ಅದು ಸರಿ, ಉಡುಪರೆ. ಆದರೆ ಅದನ್ನು ಮಾರುವ ಅಗತ್ಯವೇನಿದೆ ಈಗ? ಹದಿನೆರಡು ಮುಡಿ ಅಕ್ಕಿ ಬೇಡವಾಗುತ್ತದೆಯೆ? ಕಲ್ಮಾಡಿಯ ಹದಿನೈದು ಮುಡಿಯಕ್ಕಿಯ ಆಸ್ತಿ ಹೋಗಿ ಎರಡು ವರ್ಷ ಆಗುತ್ತದಷ್ಟೆ? ಇನ್ನು ಇನನ್ನೂ ಕೃಷ್ಣಾರ್ಪಣ ಮಾಡಿದರೆ, ಮತ್ತೆ ಆ ಮಕ್ಕಳ ಬಾಯಿಗೆ ಏನಾದರೂ ಬೇಕಲ್ಲ?"

ಉಡುಪರೊಡನೆ ಈ ರೀತಿ ಶ್ರೀಪತಿರಾಯರು ಎಂದೂ ಮಾತನಾಡಿದವರಲ್ಲ. ಅವರೊಂದಿಗೆ ಬೀಗರೆಂಬ ಘನಸ್ತಿಕೆಯ ದೃಷ್ಟಿಯಿಂದ ಶ್ರೀಪತಿರಾಯರು

ಹೀಗೆ ಮಾತನಾಡಲು ಹಿಂಜರಿಯುತ್ತಿದ್ದರೆಂದಲ್ಲ. ಅನಂತನ ತಂದೆ ಎಂಬ ಆದರದ ಹಿನ್ನೆಲೆಯಲ್ಲಿ ಉಡುಪರ ಕುರಿತು ಶ್ರೀಪತಿರಾಯರಿಗೆ ಕನಿಕರವೇ. ಆದರೂ ಇಂದು, ಪಿತ್ರಾರ್ಜಿತ ಆಸ್ತಿಯೆಂದು ಉಳಿದಿದ್ದ ಮೂರು ನಾಲ್ಕು ಎಕರೆ ಜಾಗದಲ್ಲಿ ಭಾರತಿಯ ಗಂಡನಿಗೊದಗಬಹುದಾದ ಇನ್ನೂ ಹದಿನೆರಡು ಮುಡಿ ಅಕ್ಕಿಯ ಜಾಗ ಬೇರೆಯವರ ಪಾಲಾಗಲಿದೆ ಎಂಬ ವಿಚಾರ ಕೊಟ್ಟ ನೋವಿನಿಂದಾಗಿ ಅವರೇ ಹಾಗೆ ಮಾತನಾಡಿದ್ದರು.

"ನೀವು ಹೇಳುವುದು ಸರಿ. ಆ ಭೂಮಿಯೂ ಹಾಗೆಯೇ. ಚಿನ್ನದಂಥ ಭೂಮಿ. ಕೊಡಲಿಕ್ಕೆ ನನಗೂ ಮನಸ್ಸಿಲ್ಲ. ಆದರೆ ನಾಲ್ಕಾರು ನೋಟು ಗಳಿಗೆ ವಾಯಿದೆಯಾಗುತ್ತ ಬಂದಿದೆ. ಪಾರ್ವತಿಯ ಮದುವೆಯ ಸಾಲ ಹಾಗೆಯೇ ಇದೆ. ಸಿಂಡಿಕೇಟಿನಲ್ಲಿರುವ ಒಂದು ಸರವನ್ನು ಕೂಡ ಬಿಡಿಸಿಕೊಳ್ಳ ಲಿಕ್ಕೆ ಸಾಧ್ಯವಾಗಲಿಲ್ಲ. ಇನ್ನೊಂದು ತಿಂಗಳ ಅವಕಾಶ. ಪದ್ಮನಾಭನ ಕಾಯಿಲೆ ಯನ್ನು ಗುಣಮಾಡುವ ಡಾಕ್ಟರು ಈ ಊರಲ್ಲಿಯೇ ಇಲ್ಲವೆಂದು ಕಾಣುತ್ತದೆ."

ಶ್ರೀಪತಿರಾಯರು ಕ್ಷಣಕಾಲ ಮಾತನಾಡಿರಲಿಲ್ಲ. ಆಮೇಲೆ ಕೇಳಿದ್ದರು :

"ಅನಂತ ಕಾಗದ ಬರೆದಿದ್ದಾನೆಯೆ ? ಅವನಿಗೆ ಇವೆಲ್ಲ ವಿಚಾರ ತಿಳಿದಿ ವೆಯೆ ?"

"ಅವನು ಈಗೀಗ ಕಾಗದ ಬರೆಯುವುದೇ ಅಪರೂಪವಾಗಿದೆ. ಅಷ್ಟು ಕಲಿತವನಿಗೆ ತಿಳಿಯದೆ ಇರುತ್ತದೆಯೆ ? ಭೂಮಿಯ ವಿಚಾರ ಬರೆದಿದ್ದೆ. ಭೂಮಿಯ ಒಡೆತನ ದುಡಿಯುವ ರೈತನಿಗೆ ಸೇರಬೇಕು, ಈ ವಿಚಾರ ನೀವು ನನ್ನನ್ನು ಕೇಳುವ ಅಗತ್ಯವೇ ಇಲ್ಲ, ಅಂತ ಏನೇನೋ ವೇದಾಂತ ಬರೆದಿದ್ದಾನೆ. ಕೇಳಿದ ಕೂಡಲೆ 'ಪವರಫೆಟ್' ಕಳಿಸಿಕೊಟ್ಟ. ಆ ಕಾರಣ ಒಪ್ಪಿಗೆಯಿರದೆ ಹೋದೀತೇ ?"

ಮತ್ತೆ ಶ್ರೀಪತಿರಾಯರಿಗೆ ಮಾತನಾಡಲು ವಿಷಯವೇ ಉಳಿದಿರಲಿಲ್ಲ.

"ಸರಿ. ಪುಟ್ಟಣ್ಣಯ್ಯ ಇದ್ದಾರಲ್ಲ. ಏನಾದರೂ ಹೆಚ್ಚು ಕಡಿಮೆಯಿದೆ ಎಂದಾದರೆ ಹೇಳಿ. ಭಾರತಿಯನ್ನೊಮ್ಮೆ ಕಳಿಸಿಕೊಡಿ. ಅವಳೂ ನೋಡದೆ ಸುಮಾರು ಸಮಯವಾಯಿತು ಎನ್ನುತ್ತಿದ್ದಾಳೆ. ಮನೆ ಬಿಡಲು ಪುರಸತ್ತು ಸಿಗುವುದಿಲ್ಲ." ಎಂದಿದ್ದರು.

ಆ ಹದಿನೆರಡು ಮುಡಿಯಕ್ಕಿಯ ಆಸ್ತಿ ಭಾರತಿಯ ಭವಿಷ್ಯತ್ತಿಗೆ ಸೇರಿ ದುದು. ಆ ದೊಡ್ಡ ಸಂಸಾರದಲ್ಲಿ ಅವಳ ಗಂಡನ ಪಾಲಿಗೆ ಬರಬಹುದಾಗಿ

ದ್ದುದು ಎಷ್ಟೆಂದು ನಿರ್ಧರಿಸುವುದು ಹುಚ್ಚು ಮಾತಾಗಿದ್ದರೂ ಇದ್ದುದನ್ನೆಲ್ಲ ಕಳೆದುಕೊಳ್ಳುವುದರಲ್ಲಿ ಯಾವ ಪುರುಷಾರ್ಥವಿದೆಯೆಂದು ಶ್ರೀಪತಿರಾಯರು ಯೋಚಿಸುತ್ತಿದ್ದರು.

ಆದರೆ ಇದಕ್ಕೆ ಅನಂತನ ವಿರೋಧವಿಲ್ಲವೆಂದಾದರೆ ತಾವು ವಿರೋಧಿಸುವುದು ಸರಿಯೆ ? ಎಂದು ಅವರು ತಮ್ಮನ್ನು ತಾವೇ ಕೇಳಿಕೊಳ್ಳಬೇಕಾಗಿತ್ತು.

ಎಂದಿನಂತೆ ರಜಾ ದಿನದ ಹಾದಿ ಹಿಡಿದೇ ರಾಯರು ಸಾಗಿದ್ದರು. ತಲೆಯಲ್ಲಿ ಸುಳಿಯುತ್ತಿದ್ದ ವಿಚಾರಗಳು ಒಮ್ಮಿಂದೊಮ್ಮೆಗೆ ನಿಂತಾಗ ತಾವು ಎಷ್ಟು ದೂರ ಬಂದಿದ್ದೇವೆಂದು ನೋಡಿದರು. ಉಡುಪಿಯಿಂದ ಮಲ್ಪೆಗೆ ಹೋಗುವ ರಾಜಮಾರ್ಗವನ್ನು ಸಮೀಪಿಸಿದ್ದರು. ಭಾರತಿಯ ಮನೆಗೆ ಇನ್ನೂ ಅರ್ಧ ಮೈಲು ದೂರವಿತ್ತು. ಒಂದು ಕ್ಷಣ ಅಲ್ಲಿಯ ತನಕ ಹೋಗಿ ಬರೋಣವೇ ಎಂದು ರಾಯರಿಗೆ ಯೋಚನೆಯಾಯಿತು. ಆದರೆ ಅಲ್ಲಿ ಭಾರತಿಯಿಲ್ಲ ಎಂಬ ತಿಳಿವು ಮೂಡಿದೊಡನೆ, ಮುಂದುವರಿಯಲು ಮನಸ್ಸಾಗಲಿಲ್ಲ. ಭಾರತಿಯ ತಂದೆಯೆಂದಲ್ಲದಿದ್ದರೂ, ಉಡುಪರ ಮನೆಗೆ ಹೋದಷ್ಟು ಸಲ ಶ್ರೀಪತಿರಾಯರಿಗೆ ರಾಜಾತಿಥ್ಯವೇ ದೊರಕುತ್ತಿತ್ತು. ಆದರೆ ಆ ಮನೆಯ ಬಡತನದ ಹಿನ್ನೆಲೆಯಲ್ಲಿ, ಈ ಸ್ವಾಗತದಲ್ಲಿ, ರಾಯರಿಗೆ ಸಂತೋಷಕ್ಕಿಂತ ಹೆಚ್ಚಿಗೆ ನೋವೇ ಉಂಟಾಗುತ್ತಿತ್ತು.

ಅನಂತ ಮನೆಯಲ್ಲಿದ್ದರೆ ಮಾತ್ರ ಅವರಿಗೆ ಇವೆಲ್ಲ ಮರೆತುಹೋಗುತ್ತಿತ್ತು.

ಆತನೊಡನೆ ಮಾತನಾಡತೊಡಗಿದರೆ ಒಂದು ಹೊಸ ಜಗತ್ತನ್ನು ಪ್ರವೇಶಿಸಿದಂತೆ, ರಾಯರಿಗೆ ಮನೆ ಮಕ್ಕಳ ಯೋಚನೆ ಉಳಿಯುತ್ತಿದ್ದಿಲ್ಲ; ಕೋರ್ಟು ಕಚೇರಿಗಳ ನೆನಪು ಬರುತ್ತಿದ್ದಿಲ್ಲ. ಅನಂತನ ಆದರ್ಶದ ಉನ್ಮತ್ತ ಕನಸಿನಲ್ಲಿ ಶ್ರೀಪತಿರಾಯರು ಆತನ ವಿದ್ಯಾರ್ಥಿಯಂತೆ ಮುಗ್ಧರಾಗಿ ಅವನನ್ನು ಅನುಸರಿಸುತ್ತಿದ್ದರು.

ಆದರೆ ಈಗ ಅಲ್ಲಿ ಅನಂತನಿಲ್ಲ.

ಅನಂತನ ಮನೆಯ ಬಡತನ ಮಾತ್ರ ಅಲ್ಲಿದೆ, ಕಂಡವರ ಎದೆ ಕರಗಿಸುವ ಆ ಭಯಂಕರ ಬಡತನ !

ರಾಯರು ಮುಂದೆ ಹೆಜ್ಜೆ ಹಾಕಲು ಅಸಮರ್ಥರಾದರು.

ಆ ಮನೆಯೋ ಆ ಮಕ್ಕಳೋ ! ಅರೆಬೆತ್ತಲೆ ಓಡಾಡುತ್ತಿರುವ ಅವುಗಳ ಹೆಸರುಗಳನ್ನು ರಾಯರು ನೆನಪಿಡಲು ಪ್ರಯತ್ನಿಸಿ ವಿಫಲರಾಗುತ್ತಿದ್ದರು.

ಉಡುಪರು 'ನಮ್ಮ ಪದ್ಮನಾಭ, ನಮ್ಮ ನರಹರಿ, ನಮ್ಮ ಗೋವಿಂದ, ನಮ್ಮ ಪಾರ್ವತಿ' ಎಂದಾಗಲೆಲ್ಲ ರಾಯರಿಗೆ ಪರಿಚಯ ಮಾಡಿಕೊಡಲು ಬೊಟ್ಟು ಮಾಡಿ ತೋರಿಸಬೇಕಾಗಿತ್ತು.

ರಾಯರು ಅಲ್ಲಿಂದಲೇ ಹಿಂದಿರುಗಿ ಮನೆಯ ದಾರಿ ಹಿಡಿದರು.

ಮನೆ ತಲಪುವಾಗ ಗಂಟೆ ಎಂಟಾಗಿತ್ತು. ಗೌರಮ್ಮ ಗಂಡನ ದಾರಿ ನೋಡಿ ಕಾದು ಕಾದು ಕುದಿದ್ದಿದ್ದರು. ಕಕ್ಷಿಗಾರರಿಗೆ ಆದಿತ್ಯವಾರವೆಂದೇನಿರಲಿಲ್ಲ. ಅವರು ಬರತೊಡಗಿದರೆಂದರೆ ರಾಯರಿಗೆ ಕಾಫಿ, ತಿಂಡಿ ಯಾವದೂ ಬೇಡವಾಗುತ್ತಿತ್ತು. ಮಗಳು ಬಂದ ದಿನ ತಂದೆ ಮಕ್ಕಳಿಗೆಲ್ಲ ಒಟ್ಟಿಗೆ ಕಾಫಿ ತಿಂಡಿಯ ಉಪಚಾರ ಮಾಡಬೇಕು ಎಂದು ಬಗೆದಿದ್ದ ಗೌರಮ್ಮನಿಗೆ ರಾಯರು ತಡಮಾಡಿದುದರಿಂದ ಆದ ಬೇಸರ ಅಷ್ಟಿಷ್ಟಲ್ಲ. ಸುನಂದ ಅವಸರದ ಕಾಫಿ ತೀರಿಸಿ "ಬ್ಯಾಡ್‌ಮಿಂಟನ್....ಅಮ್ಮಾ" ಎಂದು ರ್‍ಯಾಕೆಟ್ ಹಿಡಿದುಕೊಂಡು ಓಡಿದ್ದಳು. ತಾಯಿ ತಡಮಾಡಿದುದನ್ನು ಕಂಡು ತಾನೇ ಬಾಣಲೆಗೆ ಕೈಹಾಕಿ 'ಬಿಸಿ' ಎಂದು ಕೈಸುಟ್ಟುಕೊಂಡಿದ್ದ ಸದಾ ಇನ್ನೂ ಅಳುತ್ತಿದ್ದ. ಭಾರತಿ ಮಾತ್ರ ಯಶೋದೆಯನ್ನು ಆಡಿಸುತ್ತ ತಂದೆಯ ದಾರಿ ಕಾಯುತ್ತಿದ್ದಳು.

"ಎಷ್ಟು ಹೊತ್ತುಮಾಡಿಬಿಟ್ಟೆಯಪ್ಪ. ಅಮ್ಮ ಬೈತಿದ್ದಾಳೆ ನೋಡು."

"ಅದೆಲ್ಲ ಕಣ್ಣುಕಟ್ಟು ಭಾರೀ, ಅನಂತನ್ನ ಹೇಗೆ ಬೈಯಬೇಕೆಂತ ನಿನಗೆ ಕಲಿಸಿಕೊಡುತ್ತಿರುವದು, ಅಷ್ಟೆ."

ಬಾಗಿಲಿಗೆ ಬಂದಿದ್ದ ಗೌರಮ್ಮನಿಗೂ ರಾಯರ ಮಾತು ಕೇಳಿ ನಗು ತಡೆಯಲಾಗಲಿಲ್ಲ. ರಾಯರಂತೂ ನಗುತ್ತಿರುವ ಮಗಳ ಮುಖವನ್ನು ಕಂಡು, ಜೊತೆಗೇ ಅವಳ ಕಂಕುಳಲ್ಲಿದ್ದು ತನ್ನನ್ನು ಎತ್ತಿಕೊಳ್ಳೆಂದು ಕರೆಯುತ್ತಿದ್ದ ಪುಟ್ಟ ಯಶೋದೆಯನ್ನೂ ಕಂಡು ತಾವು ಯೋಚಿಸುತ್ತಿದ್ದ ಎಲ್ಲ ವಿಚಾರಗಳನ್ನೂ ಮರೆತಿದ್ದರು. ಯಶೋದೆ, ಭಾರತಿ, ಗೌರಮ್ಮ ಇವರ ನಗುಮುಖಗಳಲ್ಲಿ, ತಮ್ಮ ಓರಣವಾದ, ಶಿಸ್ತಿನಿಂದ ಕೂಡಿದ, ತೃಪ್ತಿಯ ಸಂಸಾರದ ಸೌಂದರ್ಯವೆಲ್ಲ ಪ್ರತಿಬಿಂಬಿಸಿದ್ದಂತೆ ಅವರಿಗೆ ಕಂಡಿತು.

ತಂದೆ ಮತ್ತು ಮಗಳ ಕಾಫಿ ಉಪಾಹಾರಗಳು ಮೌನವಾಗಿಯೇ ಆರಂಭವಾದವು.

ಮೊದಲು ಮಾತೆತ್ತಿದವಳು ಭಾರತಿಯೆ :

"ಅಮ್ಮನ ಉಪ್ಪಿಟ್ಟು ತಿನ್ನದೆ ವರ್ಷವಾಯಿತು ಎಂದು ಕಾಣುತ್ತದೆ."

"ಯಾಕೆ, ಕಳೆದ ಸಲ ಮಾಡಿರಲಿಲ್ಲವೇನೇ?"

"ಅದು ಇಷ್ಟು ರುಚಿಯಿರಲಿಲ್ಲ, ಅಮ್ಮ. ಹಾಗಾಗಿ ಉಪ್ಪಿಟ್ಟಾಗಿರಲಿಲ್ಲ."

"ನೀನು 'ಲಾಜಿಕ್' ಎಲ್ಲಿ ಕಲಿತಿಯೆ? ಕಾಗದದಲ್ಲಿ ಅನಂತ ಅದನ್ನೂ ಕಲಿಸುತ್ತಿದ್ದಾನೇನು?" ಈಗ ಮಾತನಾಡಿದುದು ಶ್ರೀಪತಿರಾಯರು.

"ಕಲಿಸಿದ್ದರೆ ಕಲಿಯಬಹುದಾಗಿತ್ತು. ಆದರೆ ಅವರಿಗೆ 'ಲಾಜಿಕ್'ಗೆ ಪುರಸತ್ತೆಲ್ಲಿದೆ?"

ಗೌರಮ್ಮನಿಗೆ ಈ ಪ್ರಶ್ನೆ—ಉತ್ತರ ಎರಡೂ ಅರ್ಥವಾಗಿರಲಿಲ್ಲ. ವಿಷಯ ಬದಲಿಸಲೆಂದು,

"ಈಗ ಹೇಗಾಗುತ್ತಿದೆಯೆ, ನಿಮ್ಮತ್ತೆಮನೆ ಕಾಫಿ? ಕಳೆದ ಸಲ ಏನೋ ಗೊಣಗುಟ್ಟುತ್ತಿದ್ದಿಯಲ್ಲ?" ಎಂದರು.

"ಹೂ. ಆಗತ್ತೆ. ಒಮ್ಮೊಮ್ಮೆ ಕಾಫಿ, ಒಮ್ಮೊಮ್ಮೆ ಕಲಗಚ್ಚು. ಅತ್ತೆ ಪಾಪ, ನನಗೋಸ್ಕರ ತುಂಬ ಪ್ರಯತ್ನ ಮಾಡುತ್ತಾರೆ. ಆದರೆ ಕಾಫಿಯ ಅಭ್ಯಾಸವೇ ಇಲ್ಲದವರಿಗೆ ಪುಡಿಯ ಹದ ಹೇಗೆ ಬರಬೇಕು. ಮಾವನಿಗೆ ಎಂಥದು ಕುಡಿದರೂ ಕಾಫಿಯೇ."

ರಾಯರ ಮನಸ್ಸಿನಲ್ಲಿ ಪುನಃ ವಿಚಾರತುಮುಲ ಆರಂಭವಾಗಿತ್ತು—'ಭಾರತಿಗೆ ಹೇಳಬೇಕೇ ಬೇಡವೆ?'

"ಅನಂತನ ಕಾಗದವಿದೆಯೆ, ಭಾರೀ?"

"ಬರಬೇಕಿತ್ತಪ್ಪ, ಬಂದಿಲ್ಲ. ಇವೊತ್ತು ನಾಳೆ ಬರಬಹುದು."

"ಮನೆಯ ವಿಚಾರ ಏನಾದರೂ ಬರೆದಿದ್ದನೇ ಹಿಂದಿನ ಕಾಗದದಲ್ಲಿ?"

"ಒಂದು ಚಕಾರ ಕೂಡ ಇರಲಿಲ್ಲ. ತಿಂಗಳ ಹಿಂದೆ ಒಂದು ಕಾಗದ ಬಂದದ್ದರಲ್ಲಿ ಇತ್ತು: 'ಮಳೆಗಾಲ ಸುರುವಾಗುವುದರೊಳಗೆ ಮನೆ ಸಿಗಬಹುದು' ಎಂತ. ಅದು ಇನ್ನೂ ಐದು ತಿಂಗಳ ಮಾತು."

"ಅಲ್ಲವೇ? ಇಲ್ಲಿಯ ಮನೆಯ ವಿಚಾರ ಏನಾದರೂ ಬರೆದಿದ್ದನೇ—ಆಸ್ತಿ, ವಿಚಾರ?"

ಈಗ ಮಾತ್ರ ಭಾರತಿಗೆ ಆಶ್ಚರ್ಯವಾಯಿತು. ತಂದೆಯ ಕಡೆ ಮುಖವೆತ್ತಿ ನೋಡಿದಳು. ಗೌರಮ್ಮನ ದೃಷ್ಟಿಯೂ ಗಂಡನ ಕಡೆ ಹರಿದಿತ್ತು.

"ನಿನ್ನ ಮಾವ ಏನೋ ಆಸ್ತಿ ಮಾರುತ್ತಾರೆಂದು ಕೇಳಿದೆ. ಆ ವಿಚಾರ ನಿನ್ನ ಗಂಡ ಏನಾದರೂ ಬರೆದಿದ್ದಾನೆಯೆ?"

ಭಾರತಿ ಯೋಚನಾಗ್ರಸ್ತಳಾದಳು.

"ಆಸ್ತಿ ಮಾರೋದೇ? ಈಗ ಗಂಜಿಗೆ ಒಂದಿಷ್ಟು ಅಕ್ಕಿಯಾದರೂ ಬರುತ್ತೆ ಮುಂದೇನು ಮಾಡುತ್ತಾರಂತೆ?"

"ನಾನೂ ಅದನ್ನೇ ಕೇಳೋದು, ಭಾರೀ. ಅನಂತ ಇದಕ್ಕೆ ಹೇಗೆ ಒಪ್ಪಿದನೆಂಬುದು ಗೊತ್ತಿಲ್ಲ. ನಿನ್ನ ಮಾವ ಕ್ರಯಚೀಟಿಗೆಂದು ನಿನ್ನೆ ಕೋರ್ಟಿನ ಹತ್ತಿರ ಬಂದಿದ್ದರು."

"ಹಾಗಾದರೆ ಮಾರಿಯಾಯಿತೆ?"

"ಬಹುಶಃ ಆದಹಾಗೇ ಅನ್ನು. ರಿಜಿಸ್ಟ್ರಿ ಆಫೀಸಿಗೆ ಹೋಗೋದೊಂದು ಬಾಕಿಯೆಂದು ಕಾಣುತ್ತೆ. ಪವರ್ ಆಫ್ ಎಟೊರ್ನಿ ಕಳಿಸಿಕೊಟ್ಟಿದ್ದಾನಂತೆ, ಅನಂತ."

"ಹಾಗಾದರೆ ಅವರಿಗೆ ಈ ಕಡೆ ಬರುವ ಆಲೋಚನೆ ಇಲ್ಲವೆ?"

ಭಾರತಿಯ ಮುಖ ಕೆಂಪೇರಿತ್ತು. ಗೌರಮ್ಮ ಗಾಬರಿಗೊಂಡು ಮಗಳ ಕಡೆ ನೋಡಿದರು. ತನ್ನ ಮನಸ್ಸಿಗೆ ಒಗ್ಗದ ಯಾವುದೋ ಒಂದು ಪರಿಸ್ಥಿತಿಯಲ್ಲಿ ತಾನು ಬಂದಿಯಾಗಿದ್ದೇನೆ ಎನ್ನುವಂತಿತ್ತು ಭಾರತಿಯ ಮನಃಸ್ಥಿತಿ. ಆಸ್ತಿ ಮಾರಿಹೋಗುವ ಆರ್ಥಿಕ ಸಮಸ್ಯೆಯು ಹಿಂದಿನ ವೇದನೆಯಷ್ಟೇ ಸಾಕಿತ್ತು. ಈಗ ಗಂಡ ಊರಿಗೆ ಆದಷ್ಟು ಬೇಗ ಬರುವನೆಂದು ಕಾದುಕೊಂಡಿದ್ದವಳಿಗೆ, ತಂದೆ ಕೊಟ್ಟ ಈ ಸುದ್ದಿ!

"ಹಣ! ಹಣ! ಹಣ! ಆ ಮನೆಯಲ್ಲಿ ಬೆಳಗಿನಿಂದ ರಾತ್ರಿಯ ತನಕವೂ ಹಣದ ಕುರಿತೊಂದು ಚಿಂತೆಯಿಲ್ಲದೆ ಬೇರೆ ಯಾವ ವಿಚಾರವೂ ಇಲ್ಲ."

ಜ್ವಾಲಾಮುಖಿಯಂತೆ ಅತೃಪ್ತಿ ಸಿಡಿದೆದ್ದಿತು. ಭಾರತಿಯ ಕುತ್ತಿಗೆಯ ನರಗಳು ಉಬ್ಬಿಕೊಂಡು ಅವಳಿಗೆ ಮಾತನಾಡುವುದು ಕಷ್ಟವಾಯಿತು. ಕಣ್ಣು ತುಂಬಿಕೊಂಡವು.

ಶ್ರೀಪತಿರಾಯರು ಮಗಳ ಕಡೆ ನೋಡಿ ಕಂಗಾಲಾದರು. ಅವರು ಭಾರತಿಯನ್ನು ಈ ರೀತಿ ಕಂಡೇ ಇರಲಿಲ್ಲ. ಗಂಡನನ್ನು ಅಗಲಿ ಈ ವಯಸ್ಸಿನಲ್ಲಿ ಇರಬೇಕಾದ ಸಂದರ್ಭದಲ್ಲಿ ಇಂಥ ಅತೃಪ್ತಿ ಸಹಜವೆನ್ನುವಷ್ಟು ಮನಶ್ಶಾಸ್ತ್ರದ ಜ್ಞಾನ ಅವರಿಗಿರಲಿಲ್ಲವೆಂದಲ್ಲ. ತಮ್ಮ ಮಗಳು ಅಳುವುದನ್ನು ಸಹಿಸಲು ಎಂದಿಗೂ ಅವರು ಸಿದ್ಧರಿರಲಿಲ್ಲ.

“ಅಯ್ಯೋ, ಭಾರೀ. ಅಳಲಿಕ್ಕೇನಾಯಿತು? ದುಡಿಯುವ ವಿದ್ಯಾವಂತ, ಧರ್ಮರಾಯನಂಥ ಗಂಡನ ಕೈ ಹಿಡಿದಿರುವಾಗ ಒಂದು ಸಣ್ಣ ತುಂಡು ಆಸ್ತಿ ಹೋಗುವುದೆಂದು ಇಷ್ಟೆಲ್ಲ ಯೋಚನೆ ಮಾಡುವುದೆ? ಇದೇನು ಮಹತ್ವದ ವಿಷಯ, ಎಂದು ಅನಂತ ಬರೆಯದೆ ಇದ್ದಿರಬಹುದು, ಬಿಡು.”

“ಅವರಿಗೆ ಕಾಗದ ಬರೆಯಲಿಕ್ಕೆ ಸಮಯವಿಲ್ಲ. ಇನ್ನು ಅಂಥ ಅವಸರದಲ್ಲಿ ಕಾಗದ ಬರೆಯುವಾಗ ‘ಪಾಲಿಟಿಕ್ಸ್’ ಮುಗಿಸಿದ ಮೇಲೆ ಕಾಗದದಲ್ಲಿ ಜಾಗ ಇರಬೇಕಲ್ಲ!”

ಭಾರತಿ ಗಂಡನ ಕಾಗದಗಳಿಂದಾದ ಅಸಮಾಧಾನದಿಂದ ಈ ರೀತಿ ಮಾತನಾಡಿದಳೋ ಅಥವಾ ಬರೇ ಚೇಷ್ಟೆಗಾಗಿ ಹೀಗೆ ಹೇಳಿದಳೋ ರಾಯರಿಗೆ ತಿಳಿಯಲಿಲ್ಲ. ಅವರು ಅನಂತನ ಪರವಾಗಿಯೇ ತಮ್ಮ ಪ್ರಾಮಾಣಿಕ ಅಭಿಪ್ರಾಯ ಕೊಟ್ಟರು.

“ಅನಂತನಂಥವರು ‘ಪಾಲಿಟಿಕ್ಸ್’ ಬಗ್ಗೆ ವಿಚಾರ ಮಾಡುವುದರಿಂದ ದೇಶದ ಉದ್ಧಾರವಾಗುತ್ತೆ, ಭಾರೀ.”

“ದೇಶದ ಉದ್ಧಾರವಾಗಬಹುದು. ಆದರೆ ಮನೆ ಹಾಳಾದರೆ....”

ಭಾರತಿಯ ಬಾಯಿಂದ ಈ ಮಾತು ತಪ್ಪಿ ಹೊರಬಿದ್ದಿತು. ತಂದೆಯೊಡನೆ ಮಾತನಾಡುವಾಗ ತಾನು ಯಾವ ರೀತಿಯ ಸಲಿಗೆಯನ್ನೂ ಉಪಯೋಗಿಸಬಹುದೆಂದು ಆಕೆ ತಿಳಿದಿದ್ದರೂ, ಆಕೆ ಕಲಿತ ವಿದ್ಯೆ, ಆ ಮನೆಯ ಸುಸಂಸ್ಕೃತ ವಾತಾವರಣದಲ್ಲಿ ಆಕೆಗೆ ದೊರೆತಿದ್ದ ಸಂಸ್ಕಾರ, ಇವೆರಡೂ, ಆ ರೀತಿ ಮಾತನಾಡದಂತೆ ತಡೆಯಾಗಿದ್ದವು. ಆದರೆ ಇಂದು ಏಕೋ ಆಕೆಯ ಮನಸ್ಸೇ ಕಳವಳದ ಸಾಗರವಾಗಿ ಕುದಿಯುತ್ತಿದ್ದಾಗ ಆ ರೀತಿ ಮಾತು ಬಂತು.

ರಾಯರು ಪುಟ್ಟ ಯಶೋದೆಯ ಬಾಯಿಗೆ ಒಂದು ಸಣ್ಣ ಉಂಡೆ ಉಪ್ಪಿಟ್ಟನ್ನು ತಿನ್ನಿಸಲೆಂದು ಕೈಯೆತ್ತಿದ್ದವರು ಆ ಕೆಲಸವನ್ನು ಮರೆತು ಮಗಳ ಕಡೆ ನೋಡಿದರು.

“ಅನಂತನ ಹೆಂಡತಿಯ ಬಾಯಿಂದ ಈ ಮಾತು ಬರಬಾರದು, ಭಾರೀ.”

ಅವರು ಈ ರೀತಿ ಹೇಳುವಾಗ ಆ ಮಾತಿನಲ್ಲಿ ನಿಷ್ಠುರದ ಛಾಯೆಯೂ ಇರಲಿಲ್ಲ. ಅದು ಎಂದಿನಂತೆ ಆತ್ಮೀಯ ಸಲಹೆಯಾಗಿಯೇ ಇದ್ದಿತು. ಆದರೆ ಆ ಮಾತಿನ ಹಿಂದಿದ್ದ ದೃಢತೆ ಮಾತ್ರ ಭಾರತಿಗೆ ಒಂದು ಆಹ್ವಾನವಾಗಿ ಕಂಡುಬಂತು.

"ನಿನಗೆ ಗೊತ್ತಿಲ್ಲನಪ್ಪ. ನಮ್ಮ ಮಾನವ ಮನೆಯ ನರಕವನ್ನು ನಾಲ್ಕು ತಿಂಗಳು ಅನುಭವಿಸಿದರೆ ನೀನು ಹೀಗೆ ಹೇಳುವುದಿಲ್ಲ. ಸ್ವಲ್ಪ ಬೇಸರ ಹೋಗಲೆಂದು ತಾಯಿಯ ಮನೆಗೆ ಬಂದರೆ, ಇಲ್ಲಿಯೂ ಉಪದೇಶದ ಮೇಲೆ ಉಪದೇಶ."

ಭಾರತಿಯ ಸಂಯಮದ ಕಟ್ಟೆಯೊಡೆದು ಕಣ್ಣೀರು ಹರಿಯಿತು. ಉಪ್ಪಿಟ್ಟು ತಿನ್ನದೆ ಬಿಟ್ಟಿದ್ದಳು. ಅಕ್ಕನ ಅಳು ಕಂಡು ಯಶೋದೆಯೂ ಅಳಲಾರಂಭಿಸಿದಳು. ಈ ಗಲಭೆಯಿಂದ ಕಳವಳಗೊಂಡ ಗೌರಮ್ಮ,

"ಮಗು ಒಂದೆರಡು ದಿನ ಹಾಯಾಗಿ ಇರಲು ಬಂದರೆ ಈ ತರ್ಕ ಯಾಕೆ? ಅಷ್ಟು ದೊಡ್ಡ ಸಂಸಾರನೆಂದಮೇಲೆ ಅಲ್ಲಿ ಕಸ-ಕೆಲಸ ಇದ್ದೇ ಇರುತ್ತೆ. ಆಯಾಸವಾದ ಮಗುವಿಗೆ ಈ ಮಾತು ಯಾಕೆ? ನಿಮಗೂ ತಿಳಿಯುವುದಿಲ್ಲವೆ?"

ಗಂಡನನ್ನು ಪ್ರತಿಭಟಿಸುವ ಧೈರ್ಯ ಗೌರಮ್ಮನಿಗಿರಲಿಲ್ಲ ಆದರೆ ಮಗಳ ಮೋಹ ಅವಳ ಪರವಾಗಿ ವಾದಿಸುತ್ತಿತ್ತು. ಆದರೆ ರಾಯರಿಗೆ ಮಾತ್ರ ತಾವೇನು ಕೆಟ್ಟ ಮಾತು ಹೇಳಿದೆವೆಂದು ಹೊಳೆಯಲೇ ಇಲ್ಲ. ಅಷ್ಟರಲ್ಲಿ ಮನೆಯ ಪುರೋಹಿತರೂ ರಾಯರ ಕಕ್ಷಿಗಾರರೂ ಆದ ವಾಸುದೇವಭಟ್ಟರು, ವಕೀಲರು ಇದ್ದಾರೋ? ಗೌರಮ್ಮ, ನನಗೊಂದು ಲೋಟ ಕಾಫಿ" ಎಂದು ಕೇಳಿಕೊಂಡೇ ಒಳಗೆ ಪಡಸಾಲೆಗೆ ಬಂದರು. ಭಾರತಿ ಬೇಗ ಕಣ್ಣೊರಸಿಕೊಂಡಳು. ರಾಯರು ತಗ್ಗಿಸಿದ ದನಿಯಲ್ಲಿ, "ಏನೆಲ್ಲ ಆಲೋಚನೆ ಮಾಡಬೇಡ, ಭಾರೀ. ಈ ಸಲ ಮೇ ತಿಂಗಳಿಗೆ ಅನಂತ ಖಂಡಿತ ಬರುತ್ತಾನೆ." ಎಂದವರು, "ಬನ್ನಿ, ಬನ್ನಿ, ಭಟ್ಟರು. ಉಪ್ಪಿಟ್ಟು ಖರ್ಚಾಗುತ್ತ ಬಂದಿದೆ." ಎಂದು ವಾಸುದೇವಭಟ್ಟರನ್ನು ಕರೆದರು. ಗೌರಮ್ಮ ಆಗಲೇ ಒಂದು ಬಾಳೆಯ ಎಲೆಯ ತುಂಡು ಹುಡುಕಿ ಸಟ್ಟುಗ ತೆಗೆದು ಬಾಣಲೆಗೆ ಕೈಹಾಕಿಯಾಗಿತ್ತು.

ಭಾರತಿಗೆ ತಾತ್ಕಾಲಿಕ ಉಪಶಮನ ತೋರಿದರೂ ತವರಿನ ವಿಶ್ರಾಂತಿ ಸುಖದ ಕಲ್ಪನೆ ಕುಸಿದಿತ್ತು. ಸುನಂದ ಬಂದಮೇಲೂ ಅವಳು ಪೂರ್ಣ ಚೇತರಿಸಿಕೊಳ್ಳಲಿಲ್ಲ "ಎರಡು ಗೇಮ್ಸ್, ಅಕ್ಕ. ಸುಮಿತ್ರೆ ಮತ್ತು ಪಾರ್ಟ್ನರ್ ಆ ಮುದ್ದಮ್ಮನಿಗೆ" ಎಂದು ಹೇಳಿದಾಗಲೂ ನಗಲಿಲ್ಲ. ತಂಗಿಯ ಒತ್ತಾಯದಿಂದಾಗಿ ಸುಮಿತ್ರೆಯ ಮನೆಯತನಕ ಹೋಗಿ ಒಂದು ತಾಸು ಇದ್ದುಬಂದಳು.

ಮಗಳ ಜೊತೆಗೆ ಊಟ ಮಾಡಲು ಮಧ್ಯಾಹ್ನ ರಾಯರಿಗೆ ಅವಕಾಶವೇ ದೊರಕಲಿಲ್ಲ. ಅವರು ಹೊರಗೆ ಹೋದವರು ಬರುವಾಗಲೇ ಘಂಟೆ ಎರಡಾಗಿತ್ತು.

ಭಾರತಿ ಒಂದು ಸಣ್ಣ ನಿದ್ದೆ ತೀರಿಸಿ, ತಾಯಿ ಮಾಡಿಕೊಟ್ಟ ಕಾಫಿ ಕುಡಿದು ಹೊರಬಾಗಿಲಿಗೆ ಬಂದಾಗ, ಎಂಟು ವರ್ಷದ ಮೈದುನ ನರಹರಿ ಒಳಗೆ ಬರುತ್ತಿದ್ದ.

"ಏನು ಬಂದಿಯೋ ?" ಎಂದು ಭಾರತಿ ತುಸು ಅಧೀರೆಯಾಗಿ ಕೇಳಿದಳು.

"ಇವೊತ್ತು ರಾತ್ರೆ ದುರ್ಗಾ ನಮಸ್ಕಾರವಂತೆ ಮನೆಯಲ್ಲಿ. ನೀವು ಎಲ್ಲರನ್ನೂ ಕರೆದುಕೊಂಡು ಬರಬೇಕಂತೆ" ಎಂದ.

"ಇವೊತ್ತು ?"

"ಹೌದು, ಹುಣ್ಣಿಮೆ. ಇವೊತ್ತೇ ಒಳ್ಳೆಯದೆಂದು ಭಟ್ಟರು ಹೇಳಿದರು. ಅದಕ್ಕೆ ಇವೊತ್ತೇ ನಿಶ್ಚಯ ಮಾಡಿದ್ದಾರೆ."

ಭಾರತಿಗೆ ಸಿಟ್ಟು ಬರಬೇಕಿತ್ತು, ಆದರೆ ಬರಲಿಲ್ಲ.

"ಏನಾದರೂ ಕಾಗದ ಬಂತೇನೋ, ನರಹರಿ ?" ಎಂದು ಇನ್ನೊಂದು ಪ್ರಶ್ನೆ ಕೇಳಿದಳು.

"ಪೋಸ್ಟ್‌ಮ್ಯಾನ್ ನಾನು ಬರುವಾಗ ಮನೆಗೆ ಹೋದ, ಅತ್ತಿಗೆ" ಎಂದಿಷ್ಟೇ ಹೇಳಿದ ನರಹರಿ.

ಭಾರತಿಯ ನಿರ್ಧಾರ ರೂಪುಗೊಂಡಾಗಿತ್ತು. ಮೈದುನನನ್ನು ಕರೆದು ಕೊಂಡು ಅಡುಗೆಯ ಮನೆಗೆ ಹೋದಳು. "ಅಮ್ಮಾ, ನರಹರಿ ಬಂದಿದ್ದಾನೆ, ನೋಡಮ್ಮ. ಇವೊತ್ತು ದುರ್ಗಾ ನಮಸ್ಕಾರವಂತೆ. ಎಲ್ಲರೂ ಹೋಗ ಬೇಕಂತೆ. ಮೊದಲು ಅವನಿಗೊಂದು ಲೋಟ ಕಾಫಿ ಕೊಡು" ಎಂದಳು.

ಆ ಸುದ್ದಿಯಿಂದ ಗೌರಮ್ಮನಿಗಾದ ಬೇಸರ ಅಷ್ಟಿಷ್ಟಲ್ಲ. ಆದರೆ ಹುಡು ಗನ ಇದಿರಿನಲ್ಲಿ ಅದನ್ನು ತೋರಗೊಡುವುದು ಉಚಿತವಲ್ಲವೆಂದು ಬಗೆದ ಅವರು ಆ ವಿಚಾರ ಮಾತನಾಡಲಿಲ್ಲ. "ನಮಗೆಲ್ಲ ಎಲ್ಲಿ ಬರಲಿಕ್ಕಾಗುತ್ತದೆ, ನರಹರಿ? ಭಾರಿ ಹೇಗಾದರೂ ಬರಬೇಕಲ್ಲ. ನಾನು ಬಂದರೆ ಇನ್ನು ಎಷ್ಟು ರಾತ್ರಿಯೋ ಏನೋ. ಸುನಂದ ಬಂದರೆ ಕರೆದುಕೊಂಡು ಹೋಗು, ಭಾರೀ" ಎಂದು ಮಗಳ ಇದಿರಿನಲ್ಲಿಯೇ ಹೇಳಿದರು.

ಪಕ್ಕದಲ್ಲಿಯೇ ಇದ್ದ ಸುನಂದ, "ನಾ ಬರೋಲ್ಲಪ್ಪ" ಎಂದು ತೆಗೆದ ಬಾಯಿಗೆ ಹೇಳಿದಳು.

"ಎಲ್ಲರೂ ಬರಬೇಕಂತೆ" ಎಂದು ಹೇಳಿಕೊಟ್ಟಿದ್ದ ರಾಗವನ್ನು ನರಹರಿ ಪುನಃ ಎಳೆದ.

ಆದರೆ ಅವನನ್ನನುಸರಿಸಿ ಹೋಗುದು ಭಾರತಿ ಮಾತ್ರ.

"ದುರ್ಗಾ ನಮಸ್ಕಾರವಂತೆ, ಅಪ್ಪ. ಹೋಗಿಬರುತ್ತೇನೆ." ಎಂದಾಗ ರಾಯರು ಮಗಳ ಮುಖದ ಮೇಲೆ ಬೆಳಗಿನ ನೋವು ಎಷ್ಟಿದೆಯೆಂದು ತಿಳಿಯಲು ಪ್ರಯತ್ನಿಸಿದರು ಆದರೆ ಸಫಲರಾಗಲಿಲ್ಲ.

ಭಾರತಿಯ ಮುಖದ ಮೇಲೆ ಕಂಡುಬರುತ್ತಿದ್ದುದು ಗಂಡನ ಕಾಗದದ ಕುರಿತಾದ ಕಾತುರ.

೩

ನರಹರಿಯ ಜೊತೆಗೆ ಭಾರತಿ ಮನೆಗೆ ಮರಳಿದಾಗ ಹೊತ್ತು ಕಂತುವುದ ರಲ್ಲಿತ್ತು. ಸೊಸೆ ಬರುವುದನ್ನು ದೂರದಲ್ಲೇ ಕಂಡಿದ್ದ ನಾಗಮ್ಮ ಅವಳಿಗಾಗಿ ಕಾಯುತ್ತಿದ್ದರು. ಸೊಸೆ ಏನೊಂದೂ ಮಾತನಾಡದೆ ಒಳಗೆ ಬಂದಾಗ,

"ಬಂದಿಯಾ, ನೀನು ಬರಬಹುದೆಂದು ನಾನೆಣಿಸಿರಲಿಲ್ಲ." ಎಂದರು.

ಭಾರತಿಗೆ ಮೊದಲು ಆಶ್ಚರ್ಯವಾಯಿತು. ಆದರೆ ಕೂಡಲೇ ಉತ್ತರ ಹೇಳಲಿಲ್ಲ. ಮುಖವೆತ್ತಿ ಅತ್ತೆಯ ಕಡೆ ನೋಡಿದಳು. ಆ ಮುಖದಲ್ಲಿ ಒಂದು ನಗುವಿನ ಛಾಯೆಯನ್ನಾದರೂ ಗುರುತಿಸಲು ಸಾಧ್ಯವಿದ್ದಿದ್ದರೆ ನಾಗಮ್ಮನಿಗೆ ಸಮಾಧಾನವಾಗುತ್ತಿತ್ತು. ಆದರೆ ಭಾರತಿಯ ಮುಖದಲ್ಲಿ ಬರೇ ಜಿಗುಪ್ಸೆ ಯಷ್ಟನ್ನೇ ಗುರುತಿಸಬಹುದಿತ್ತು. ಅತ್ತೆಯ ಪ್ರಶ್ನೆಗೆ ಉತ್ತರ ಹೇಳದೆ ಆಕೆ ಮುಖ ತಿರುಗಿಸಿದಳು. ಅಂಗಳದ ಒಂದು ಮೂಲೆಯಲ್ಲಿ, ಇನ್ನೂ ಒಂದೂವರೆ ವರ್ಷ ತುಂಬದ ಕಿರಿಯ ನಾದಿನಿ ಮಣ್ಣಲ್ಲಿ ಹೊರಳುತ್ತ, ಕಸ ಕಡ್ಡಿಗಳನ್ನು ಬಾಯಿಗೆ ತುರುಕಿಕೊಳ್ಳುತ್ತಿದ್ದಳು. ಭಾರತಿ ನೇರ ಮಗುವಿನ ಬಳಿಗೆ ಹೋಗಿ ಅದನ್ನೆತ್ತಿಕೊಂಡು ಅದರ ಮೈಯನ್ನು ತನ್ನ ಸೀರೆಯ ಅಂಚಿನಿಂದಲೇ ಒರ ಸುತ್ತ, "ಛೂ, ಡರ್ಟಿ, ಮಣ್ಣು ಬಾಯಿಗೆ ಹಾಕಿಕೊಳ್ಳುತ್ತೆ." ಎಂದು ಬೆರಳಿ ನಿಂದ ಅದರ ಬಾಯೊಳಗಿನ ಕಸವನ್ನೆಲ್ಲ ಹೊರತೆಗೆಯಲು ಪ್ರಯತ್ನಿಸಿದಳು.

ಸೊಸೆ ತನ್ನ ಮಾತಿಗೆ ಉತ್ತರ ಕೊಡದಿದ್ದುದರಿಂದಲೇ ನಾಗಮ್ಮನ ಧೈರ್ಯ ಅರ್ಧ ಕುಸಿದಿತ್ತು. ಅದೂ ಅವಳು ಮಗುವನ್ನೆತ್ತಿಕೊಂಡು ತನ್ನ ನೈರ್ಮಲ್ಯ ಪ್ರಿಯತೆಯ ಹಿರಿಮೆಯನ್ನು ಪ್ರದರ್ಶಿಸಿದಾಗಲಂತೂ ಸೊಸೆಯೊಡನೆ ಮಾತ ನಾಡುವುದೇ ಕಷ್ಟವಾಯಿತು. ಅತ್ತೆಯ ಸ್ಥಿತಿಯನ್ನು ಕಂಡು........ಕನಿಕರ ಗೊಂಡು ಎಂಬಂತೆ ಭಾರತಿ ಈಗ ತಾನೇ ಮಾತನಾಡಿದಳು :

"ಪದ್ದ ಹೇಗಿದ್ದಾನೆ?"

ನಾಗಮ್ಮನಿಗೆ ಹೋದ ಜೀವ ಬಂದಂತಾಯಿತು.

"ಇದ್ದಾನೆ, ಹಾಗೆಯೆ. ಒಂದು ದಿನಕ್ಕೇನು ಹೆಚ್ಚು ಕಡಿಮೆ?"

"ಮಾವ ಇನ್ನೂ ಬರಲಿಲ್ಲವೆ?"

"ಇಲ್ಲ. ಬೇಗ ಬರುತ್ತೇನೆಂದು ಹೇಳಿ ಹೋಗಿದ್ದಾರೆ. ಕತ್ತಲಾಯಿತು. ಇನ್ನೂ ಕಾಣೆ. ಆ ಪುರೋಹಿತರು ಇನ್ನು ಎಷ್ಟು ಘಂಟೆಗೆ ಬರುತ್ತಾರೋ? ಮಲಗುವಾಗ ಮಧ್ಯರಾತ್ರಿಯಾಗಬಹುದೆಂದು ಕಾಣುತ್ತದೆ."

"ಯಾರೆಲ್ಲ ಬರುತ್ತಾರೆ?"

"ಬೇರೆ ಯಾರು? ನಾವೇ ಇದ್ದೇವಲ್ಲ. ವಾದಿರಾಜಭಟ್ಟರ ಹೆಂಡತಿ ಮುತ್ತೈದೆ, ಬರಲಿಕ್ಕೆ ಹೇಳಿದ್ದೇನೆ. ಉಪಾದ್ರು ಮತ್ತು ಅವರ ಹೆಂಡತಿ ಬರಬಹುದು. ಪಾರ್ವತಿಗೆ ಹೇಳಿಕಳುಹಿಸಿದ್ದೇನೆ, ಬರುತ್ತಾಳೋ ಇಲ್ಲವೋ ದೇವರಿಗೇ ಗೊತ್ತು. ಮತ್ತೆ ನಮ್ಮ ಮನೆಯವರೇ. ನಿಮ್ಮಲ್ಲಿಂದ ಯಾರೂ ಬರುವುದಿಲ್ಲವೆ?" ಕೊನೆಯ ಮಾತು ಆಡುವಾಗ ಏನು ಉತ್ತರ ಬರುವುದೋ ಎಂಬ ಹೆದರಿಕೆ ನಾಗಮ್ಮನಿಗಿತ್ತು. ಅದಕ್ಕೆ ಸರಿಯಾಗಿಯೇ ಭಾರತಿ, ತೆರೆದ ಬಾಯಿಗೆ,

"ಇಲ್ಲ. ಅಪ್ಪನಿಗೆ ನಿದ್ದೆ ಬಿಡಲಿಕ್ಕೆ ನಾಳೆ ಕೋರ್ಟಿದೆ. ಅಮ್ಮ ನಿದ್ದೆ ಬಿಟ್ಟರೆ ಬೆಳಿಗ್ಗೆ ಏಳುವುದೇ ಇಲ್ಲ." ಎಂದಳು.

"ಮಕ್ಕಳಾದರೂ ಬರಬಹುದಾಗಿತ್ತು."

"ನಾಳೆ ಶಾಲೆ ತಪ್ಪಿಸಲಿಕ್ಕಾಗುತ್ತದೆಯೆ? ಹಾಗೆ, ಇಲ್ಲಿ ಮಕ್ಕಳಿಗೆ ಕಡಿಮೆಯೆ?"

ಬಾವಿಕಟ್ಟೆಗೆ ಹೋಗಿ ಕಾಲು ತೊಳೆದುಕೊಂಡು ಬಂದು, ಮಗುವಿನ ಮುಖವನ್ನು ತನ್ನ ಕರವಸ್ತ್ರದಿಂದ ಒರಸಿ ಅತ್ತೆಯ ಕೈಗೆ ಕೊಡುತ್ತ ಭಾರತಿ ಈ ಮಾತು ಹೇಳಿದಳು.

ಆದರೆ ಚಾಟಿಯೇಟಿನಂತೆ ಬಂದ ಈ ಮಾತಿನಿಂದ ಆ ಹೆತ್ತ ಕರುಳಿಗಾದ ವೇದನೆ ಅಷ್ಟಿಷ್ಟಲ್ಲ. ಭಾರತಿ ಈ ರೀತಿ ಹೀಯಾಳಿಸಿದ್ದು ಇದೇ ಮೊದಲನೆಯ ಸಲವಾಗಿರಲಿಲ್ಲ. ಆದರೆ ನಾಗಮ್ಮ ತುಟಿಯೆತ್ತಲಿಲ್ಲ. ಸೊಸೆಯನ್ನು ತಿದ್ದುವ ಮಾತಂತಿರಲಿ, ಅವಳ ಅಭಿಪ್ರಾಯಗಳು ತಮಗೆ ನೋವು ಕೊಡುತ್ತಿವೆಯೆಂದು ತೋರಿಸುವ ಎದೆಗಾರಿಕೆಯೂ ಅವರಲ್ಲಿರಲಿಲ್ಲ.

ದೊಡ್ಡವರ ಮನೆಯ ಹುಡುಗಿ ಮನೆಗೆ ಸೊಸೆಯಾಗಿ ಬರುವಳೆಂದು ತಿಳಿದಾಗ ಅವರು ಸಂತಸದಿಂದ ಉಬ್ಬಿದ್ದರು. ತಮ್ಮ ಬಾಲ್ಯವನ್ನಿಡೀ ಬಡತನದಲ್ಲೆ ಕಳೆದು, ಸಂಸಾರಜೀವನ ನಡೆಸಲು ಆರಂಭಿಸಿದ ಮೇಲೆ ಒಂಬತ್ತು ಮಕ್ಕಳನ್ನು ಹೆತ್ತು, ಬಡತನದ ಆವರಣದಲ್ಲೇ ತಮ್ಮ ಕೊನೆಯ ದಿನಗಳು ಯಾವಾಗ ಬರಬಹುದು ಎಂದು ಕಾಯುತ್ತಿದ್ದ ಅವರಿಗೆ, ತಮ್ಮ ಅಂತಸ್ತಿನ ಕುರಿತಾದ ಕೀಳರಿಮೆ ಮೈಗೆ ಅಂಟಿಕೊಂಡಿತ್ತು.

ಆ ಕಾರಣ ತಮ್ಮ ಪ್ರೀತಿಯ ಹಿರಿಮಗನ ಕೈಹಿಡಿದು ಬಂದ ವಕೀಲರ ಮಗಳ ವಿರುದ್ಧ ಒಂದು ಮಾತು ಹೇಳಲು ಒಂದು ಸಾವಿರ ಸಲ ಯೋಚಿಸುತ್ತಿದ್ದ ನಾಗಮ್ಮನಿಗೆ ಈಗಲೂ ಭಾರತಿಯ ನಂಜಿನ ಮಾತಿಗೆ ಪ್ರತ್ಯುತ್ತರ ಹೇಳುವುದು ಸಾಧ್ಯವಾಗಲಿಲ್ಲ.

"ಕಾಫಿ ಮಾಡಲೇ?" ಎಂದು, ತಪ್ಪು ತನ್ನದೇ ಎಂದೆನ್ನುವಷ್ಟು ಮೃದುವಾದ ದನಿಯಲ್ಲಿ ಸೊಸೆಯನ್ನುದ್ದೇಶಿಸಿ ಕೇಳಿದರು.

"ಬೇಡ. ಕುಡಿದು ಬಂದಿದ್ದೇನೆ. ಏನಾದರೂ ಕೆಲಸವಿದೆಯೆ?" ಎಂದ ಭಾರತಿ ತನ್ನಿಂದ ಯಾವ ಪ್ರಮಾದವೂ ಆಗಿಲ್ಲವೆನ್ನುವಷ್ಟು ಸಹಜ ರೀತಿಯಲ್ಲಿಯೇ ಮಾತನಾಡಿದಳು.

"ಆ ದೇವರ ಪಾತ್ರೆ, ಕಾಲುದೀಪ ಸ್ವಲ್ಪ ತೊಳೆದಿಡು. ನಾನು ಅಡುಗೆ ಮನೆಯ ಕಡೆ ಹೋಗುತ್ತೇನೆ. ಸ್ವಲ್ಪ ದೀಪ ಹಚ್ಚು ಮೊದಲು." ಎಂದು ಹೇಳಿದ ನಾಗಮ್ಮ, ಮತ್ತೆ ಸೊಸೆಯ ಉತ್ತರ ಕಾಯದೆ ಒಳಗೆ ಹೋದರು.

"ಮೊದಲು ಸೀರೆ ಬದಲಿಸಿಕೊಳ್ಳುತ್ತೇನೆ, ಅತ್ತೆ." ಎಂದವಳೇ ಭಾರತಿ ತನ್ನ ಕೋಣೆಗೆ ನಡೆದಳು.

ಅದು ನಿಜಕ್ಕೂ ಅನಂತನ ಕೋಣೆ. ಅಷ್ಟು ಚಿಕ್ಕ ಮನೆಯಲ್ಲಿ ಅಷ್ಟು ದೊಡ್ಡ ಸಂಸಾರ ಇರಬೇಕಾದಂಥ ಸಂದರ್ಭದಲ್ಲಿ ಅವರಿವರ ಕೋಣೆಗಳೆಂದು ಪ್ರತ್ಯೇಕಿಸಿ ಹೇಳುವುದು ಹುಚ್ಚು ಮಾತಾಗಿತ್ತು. ಆದರೆ ಅನಂತನ ಕೋಣೆಯೆಂದು ಹೆಬ್ಬಾಗಿಲ ಬದಿಯ ಕೋಣೆ ಇಲ್ಲಿ ಕೂಡಾ ತನ್ನ ಗೌರವವನ್ನು ಕಾದುಕೊಂಡು ಬಂದಿತ್ತು. ಮೊದಲು ಅನಂತನ ಓದಿನ ಕೋಣೆಯಾಗಿದ್ದುದು, ಕ್ರಮೇಣ ಆತನ ಕಾಲೇಜು ವಿದ್ಯಾಭ್ಯಾಸದ ಅವಧಿಯಲ್ಲಿ ರಜೆಗೆ ಮನೆಗೆ ಮರಳಿದಾಗ ವಿಶ್ರಾಂತಿಯ ಕೋಣೆಯಾಗಿದ್ದು, ಆತ ಮುಂಬಯಿಗೆ ಹೋದ ಮೇಲೆ ಸ್ವಲ್ಪ ಕಾಲ ಮಾತ್ರ ಇತರ ಮಕ್ಕಳಿಗೆ ಆಡುವ ಮನೆಯಾಗಿತ್ತು.

ಆದರೆ ಭಾರತಿ ಮನೆಗೆ ಬಂದ ಮೇಲೆ, ಅನಂತನಷ್ಟೇ ಅಧಿಕಾರ ವಹಿಸಿ ಬಂದ ಹಿರಿಯ ಸೊಸೆಗೆ, ಏಕಾಂತಚಿಂತನೆಗೆ ಅನುಕೂಲ ವಾತಾವರಣವನ್ನೊದಗಿಸುವ ಕೋಣೆಯಾಯಿತು. ನಾಗಮ್ಮ ಆ ಕೋಣೆಯೊಳಗೆ ಪ್ರವೇಶಿಸುತ್ತಲೇ ಇರಲಿಲ್ಲ. ಉಡುಪರು ಬಂದರೂ ತಮಗೆ ಬೇಕಾದ ಪುಸ್ತಕವನ್ನೋ ಕಾಗದವನ್ನೋ ಆರಿಸಿಕೊಂಡು ಒಂದೆರಡು ನಿಮಿಷದೊಳಗೆ ಅಲ್ಲಿಂದ ತೆರಳುತ್ತಿದ್ದರು. ಅತ್ತಿಗೆಯ ವ್ಯವಸ್ಥಿತ ಜೀವನಕ್ರಮ, ನಿರ್ಮಲತೆಯ ಕಡೆಗೆ ಆಕೆಗಿರುವ ಒಲವನ್ನು ಅರಿತುಕೊಂಡು ಹೆದರುತ್ತಿದ್ದ ಸಣ್ಣ ಮಕ್ಕಳು ಆ ಕೋಣೆಯೊಳಗೆ ಹೆಚ್ಚಾಗಿ ಸುಳಿಯುತ್ತಲೇ ಇರಲಿಲ್ಲ.

ಕೋಣೆಯೊಳಗೆ ಪ್ರವೇಶಿಸಿದ ಭಾರತಿಯ ಮನಸ್ಸಿನಲ್ಲಿ ಪುನಃ ಉತ್ಸಾಹದ ತೆರೆಯೆದ್ದಿತು, ಗಂಡನ ಕಾಗದವನ್ನು ಕಾಣುತ್ತೇನೆ ಎಂಬಾಸೆಯಿಂದ. ಒಳಗೆ ಬಂದವಳೇ ಪತ್ತಲ ಬದಲಿಸಲೆಂದು, ಬೇರೆ ಸೀರೆಯೊಂದನ್ನು ಕಪಾಟನಿಂದ ಹೊರತೆಗೆದವಳು ಸೀರೆ ಕೈಯಲ್ಲಿದ್ದಂತೆಯೇ ಕಿಟಕಿಯ ಬಳಿಯಿದ್ದ ಮೇಜಿನ ಬಳಿ ಬಂದು, ಕಾಗದ ಎಲ್ಲಿದೆಯೆಂದು ಹುಡುಕಾಡಿದಳು. ಕಾಗದ ಮೇಜಿನ ಮೇಲಿರಲಿಲ್ಲ. ಕಡ್ಡಿ ಹಚ್ಚಿ ಆ ಅಸ್ಪಷ್ಟ ಬೆಳಕಿನಲ್ಲಿ ಹುಡುಕಾಡಿದರೂ ಕಾಗದ ಸಿಕ್ಕಲಿಲ್ಲ. ಒಂದು ಕ್ಷಣ, ಕಾಗದ ಬಂದಿರಲಿಕ್ಕಿಲ್ಲ, ಬಂದಿದ್ದರೂ ಅದು ಮಾವನಿಗಿದ್ದಿರಬಹುದು ಎಂಬ ನಿರಾಶೆಯಿಂದ ಭಾರತಿಗೆ ಅತೀವ ವೇದನೆಯಾಯಿತು. ಬೇಸರ ಬೆರೆತ ದನಿಯಲ್ಲಿಯೇ ಆಕೆ ಕೂಗಿದಳು :

"ನರಹರೀss ?"

"ಏನತ್ತಿಗೆ ?" ಎಂದು ಕೂಗುತ್ತ ನರಹರಿ ಓಡಿ ಬಂದ.

"ಕಾಗದ ಎಲ್ಲಿದೆಯೋ ?"

"ಪೋಸ್ಟ್‌ಮ್ಯಾನ್ ಬಂದಿದ್ದ, ಅತ್ತಿಗೆ. ಪದ್ದಣ್ಣನ ಹತ್ತಿರ ಇರಬಹುದು ಇದ್ದರೆ."

ಮತ್ತೆ ಭಾರತಿ ಅಲ್ಲಿ ನಿಲ್ಲಲಿಲ್ಲ. ಸೀದಾ ಒಳಗೆ ನಡೆದಳು. ಪಡಸಾಲೆಯ ಪಕ್ಕದ ಕಿರುಕೋಣೆಯೊಂದರಲ್ಲಿ ಹದಿನೈದು ವರ್ಷದ ಪದ್ಮನಾಭ ಮಲಗಿದ್ದ. ಅತ್ತಿಗೆ ಒಳಗೆ ಬರುತ್ತಿದ್ದಂತೆಯೇ ಆತ ಕ್ಷೀಣ ಸ್ವರದಿಂದ ಕರೆದ :

"ಬಂದಿಯಾ, ಅತ್ತಿಗೆ ?"

"ಯಾಕೋ ?"

"ಆ ಬೆಡ್-ಪ್ಯಾನ್ ಸ್ವಲ್ಪ ಕೊಡು, ಅತ್ತಿಗೆ. ನರಹರಿಯನ್ನು ಕರೆದೆ ಬರಲೇ ಇಲ್ಲ. ಅವ್ಮ ಎಲ್ಲಿದ್ದಾಳೋ ಗೊತ್ತಿಲ್ಲ."

ಪದ್ಮನಾಭನನ್ನು ನೋಡಿದ ಭಾರತಿಗೆ ಕಾಗದದ ವಿಚಾರ ಒಂದು ಕ್ಷಣ ಮರೆತೇ ಹೋಯಿತು. ಚರ್ಮವೆಲ್ಲ ಎಲುಬಿಗೆ ಅಂಟಿಕೊಂಡು ಭಯಾನಕ ವಾಗಿ ತೋರುತ್ತಿದ್ದ ಆ ಅಸ್ಥಿಪಂಜರವನ್ನು ನೋಡಿದಾಗಲೆಲ್ಲ ಆಕೆಗೆ ಒಂದೆಡೆ ಓಕರಿಕೆ ಬರುತ್ತಿತ್ತು; ಆದರೆ ಇನ್ನೊಂದೆಡೆ ಹೃದಯದ ಯಾವುದೋ ಒಂದು ತಂತಿ ಮಿಡಿದಂತಾಗಿ ಎದೆಯಲ್ಲಿ ವಿಲಕ್ಷಣ ಸಂಕಟವುಂಟಾಗುತ್ತಿತ್ತು. ಒಂದು ವರ್ಷದಿಂದ ಆತ ಅದೇ ರೀತಿ ಮಲಗಿದ್ದ. ಡಾಕ್ಟರರು, ಫಕೀರರು, ವೈದ್ಯರು ಎಂದು ಕಂಡವರ ಔಷಧಿಯನ್ನೆಲ್ಲ ಮಗನ ಬಾಯಿಗೆ ಸುರುವಿ ಉಡುಪರು ಕಂಗಾಲಾಗಿದ್ದರು. "ರಕ್ತಕ್ಷಯ, ಉಡುಪರೆ. ಉಡುಪಿಯಲ್ಲಿ ಸುಧಾರಿಸುವ ಹಾಗಿಲ್ಲ. ಬೇರೆ ರಕ್ತ ಬೇಕು. ಮದರಾಸಿಗೆ ಸಾಗಿಸಿ. ಕನಿಷ್ಟ ಪಕ್ಷ ಒಂದು ಸಾವಿರವಾದರೂ ಖರ್ಚು ಮಾಡಬೇಕು." ಎಂದು ಯಾರಾದರೂ ಸಲಹೆ ಹೇಳಿದರೆ, ಖರ್ಚಿನ ಸ್ವರೂಪವನ್ನು ಗುರುತಿಸಿಯೇ ಸಲಹೆ ಕೊಟ್ಟವರಿಗೆ ತಲೆ ಸರಿಯಿಲ್ಲ ಎಂದು ವಾದಿಸುತ್ತಿದ್ದ ಉಡುಪರು, ಇನ್ನೂ ಊರಿನ ವೈದ್ಯರ ಬಗ್ಗೆ ವಿಶ್ವಾಸವನ್ನು ಸಂಪೂರ್ಣ ಕಳೆದುಕೊಂಡಿರಲಿಲ್ಲ.

ಪದ್ಮನಾಭನಿಗೆ ಬೆಡ್-ಪ್ಯಾನ್ ತಂದುಕೊಟ್ಟು ಬಾಗಿಲು ಸರಿಸಿಕೊಂಡು ಹೊರಗೆ ಬಂದ ಭಾರತಿ, ಪಡಸಾಲೆಯ ಕಿಟಕಿಯ ಬಳಿ ನಿಂತು ತುಸು ಹೊತ್ತು ಹೊರಗೆ ನೋಡುತ್ತಿದ್ದಳು. ಕಿಟಕಿಯ ಬಳಿಯೇ ತೋಟದಲ್ಲಿ ಆಗ ನೆಟ್ಟಿದ್ದ ಗುಲಾಬಿ ಸಸಿಯಲ್ಲಿ ದೊಡ್ಡದೊಂದು ಗುಲಾಬಿ ಅರಳಿನ್ದುದನ್ನು ಆಕೆ ಆ ನಸು ಗತ್ತಲಲ್ಲೂ ಕಾಣಬಹುದಿತ್ತು. ಗುಲಾಬಿಯ ನೆನಪಾದೊಡನೆ, ಹಿಂದಿನ ದಿನ ತಾನು ಗಂಡನ ಭಾವಚಿತ್ರಕ್ಕೆ ಸಿಕ್ಕಿಸಿದ್ದ ಗುಲಾಬಿ ಬಾಡಿರಬೇಕು ಎಂಬ ವಿಚಾರ ಆಕೆಯ ತಲೆಯಲ್ಲಿ ಸುಳಿಯಿತು. ತೋಟಕ್ಕೆ ಹೋಗಿ ಆ ಅರಳು ಗುಲಾಬಿಯನ್ನು ಕೊಯ್ದುಕೊಂಡು ಬರೋಣ ಎನ್ನುವಷ್ಟರಲ್ಲಿ ಪದ್ಮನಾಭ, "ಅತ್ತಿಗೆ" ಎಂದು ಕರೆದ.

ಒಳಗೆ ಬಂದ ಭಾರತಿ ಮೊದಲು ಕೋಣೆಯ ದೀಪವನ್ನು ಹಚ್ಚಿದಳು. ಆಮೇಲೆ ಬೆಡ್-ಪ್ಯಾನ್ ಬದಿಗೆ ಸರಿಸಿ "ಮಫ್ಲರ್ ತೆಗೆದುಕೊಳ್ಳಬಾರದೆಂದು ಎಷ್ಟು ಸಲ ಹೇಳಿದ್ದೇನೆ ನೋಡು, ಪದ್ದ" ಎಂದು ಅವನ ಕುತ್ತಿಗೆಯ ತನಕ ಹೊದ್ದಿಕೆಯನ್ನು ಸರಿಪಡಿಸಿದಾಗ ಪುನಃ ಕಾಗದದ ನೆನಪಾಯಿತು.

"ಇವೊತ್ತು ಕಾಗದ ಬಂದಿತ್ತೇನೋ?" ಎಂದು ಮೈದುನನೊಡನೆ ಕೇಳಿದಳು.

ಪದ್ಮನಾಭನ ಆ ವಿಕಾರ ಮುಖದಲ್ಲೂ ನಗು ಮಿಂಚಿತು. ತುಂಬ ಕುತೂಹಲದಿಂದ ಪ್ರಶ್ನಿಸಿದ್ದ ಅತ್ತಿಗೆಯ ಮುಖವನ್ನೇ ನೋಡುತ್ತ, ನಗುತ್ತ, ತನ್ನ ತಲೆದಿಂಬಿನ ಅಡಿಯಲ್ಲಿ ಅಡಗಿಸಿಟ್ಟಿದ್ದ ಕಾಗದವನ್ನು ಹೊರಗೆ ತೆಗೆದ. ಭಾರತಿ ತುಂಬ ಸಂತೋಷದಿಂದ ಅದನ್ನು ಅವನ ಕೈಯಿಂದ ಕಸಿದುಕೊಂಡಳು. ಆದರೆ ಅಲ್ಲಿಯೇ ಒಡೆದು ಓದುವಷ್ಟು ಲವಲವಿಕೆಯನ್ನು ತೋರಿಸಲಿಲ್ಲ.

"ಹಾಲುಗೀಲು ಏನಾದರೂ ಬೇಕೇನೋ? ಔಷಧಿ ಕುಡಿದಾಯಿತೆ?" ಎಂದು ಭಾರತಿ ಕೇಳಿದಳು.

"ಬೇಡ, ಅತ್ತಿಗೆ. ಮದ್ದು ಈಗತಾನೆ ಕುಡಿದಾಗಿದೆ. ಆದರೆ ನೀನಿಲ್ಲದೆ ಇವೊತ್ತು ಕಾಫಿಯೇ ಇಲ್ಲ ನನಗೆ."

ಭಾರತಿಯ ಕರುಳು ಕಿವುಚಿದಂತಾಯಿತು.

"ಈಗ ಮಾಡಿಕೊಡಬೇಕೇನು? ಕಾಫಿ ಒಳ್ಳೆಯದಲ್ಲ, ಪದ್ದ...."

ಕವರಿನ ಮೇಲಿನ ಕೈಬರಹವನ್ನೇ ನೋಡುತ್ತಿದ್ದ ಅತ್ತಿಗೆಯ ಕಡೆ ಪದ್ಮನಾಭನ ನೆಟ್ಟ ನೋಟ ಹರಿದಿತ್ತು.

"ಒಳ್ಳೆಯದು ಕೆಟ್ಟದು ನೋಡಿಕೊಂಡು ನನಗೇನಾಬೇಕಾಗಿದೆ ಅತ್ತಿಗೆ. ಇದ್ದಷ್ಟು ದಿನ ಒಂದು ಲೋಟ ಕಾಫಿ ಕುಡಿಯುವ ಆಸೆಯೂ ಇರಬಾರದೆ? ನಿತ್ಯ ಓವಲ್ಟಿನ್ ಅಪ್ಪಯ್ಯನಾದರೂ ಎಲ್ಲಿಂದ ತರುತ್ತಾರೆ?"

ಗಲಿಬಿಲಿಗೊಂಡ ಭಾರತಿಯ ಮನಸ್ಸಿಗೆ ಪದ್ಮನಾಭನ ಪೇಚಾಂತ ಶೂಲದಂತೆ ತಿವಿಯಿತು. ಮಧ್ಯಾಹ್ನ ತಾನು ತಂದೆಯೊಡನೆ ಹೇಳಿದ್ದ ಮಾತು ನೆನಪಿಗೆ ಬಂತು:

'ಹಣ, ಹಣ, ಹಣ! ಆ ಮನೆಯಲ್ಲಿ ಬೆಳಗಿನಿಂದ ರಾತ್ರಿಯ ತನಕ ಇದನ್ನು ಬಿಟ್ಟರೆ ಬೇರೆ ವಿಚಾರವೇ ಇಲ್ಲ.'

"ಹಾಗೆಲ್ಲ ಮಾತನಾಡಬಾರದು, ಪದ್ದಾ. ನೀನು ಹುಷಾರಾದ ಮೇಲೆ ಬೇಕಾದಷ್ಟು ಕಾಫಿ ಕುಡಿ. ಆಮೇಲೆ, ನಿನ್ನ ಮೆಟ್ರಿಕ್ ಮುಗಿದ ಮೇಲೆ ಮುಂಬಯಿಗೆ ಬಾ, ಅಲ್ಲೇ ನಿನ್ನ ಕಾಲೇಜು ವ್ಯಾಸಂಗ. ಆಗ ನಿನಗೆ ದಿನಕ್ಕೆರಡು ಸಲ ಕಾಫಿ, ನಾಲ್ಕು ಸಲ ಓವಲ್ಟಿನ್ ನಾನೇ ಮಾಡಿಕೊಡುತ್ತೇನೆ."

ಕಾಗದ ಕೊಡುವಾಗ ಸಿಕ್ಕಿದಂತೆಯೇ ಈಗಲೂ ಅತ್ತಿಗೆ ಹೆಣೆದ ಭವಿಷ್ಯ

ತಿನ ಸುಂದರ ಕಲ್ಪನೆ ಕೊಟ್ಟ ಸಂತೋಷದಿಂದ ಪದ್ಮನಾಭ ನಗತೊಡಗಿದ.

"ನೀನು ಸಹ ಅಣ್ಣನ ಹಾಗೆ ಮಾತನಾಡುತಿ, ಅತ್ತಿಗೆ. ಎಲ್ಲ ಕನಸಿನ ಮಂಡಿಗೆ."

"ನೀನು ಬರೇ ಪುಕ್ಕ, ಪದ್ದ. ಎಂಥೆಂಥ ಕಾಯಿಲೆಗಳೆಲ್ಲ ಗುಣವಾಗಿದ್ದಾವೆ. ಇದಕ್ಕೊಂದು ಹೆದರುವುದೇ ?

ಮತ್ತೆ ಭಾರತಿಗೆ ಅಲ್ಲಿ ನಿಲ್ಲಲು ಮನಸ್ಸಾಗಲಿಲ್ಲ. ಅತ್ತೆ ಹೇಳಿದ್ದ ಕೆಲಸ ಹಾಗೆಯೇ ಇತ್ತು. ಎಲ್ಲಿಯೂ ದೀಪ ಹಚ್ಚಿರಲಿಲ್ಲವಾಗಿ ಮನೆಯನ್ನು ಅಂಧಕಾರ ಮುಸುಕಿತ್ತು.

ಗಂಡನ ಕಾಗದವನ್ನು ಬ್ಲೌಸಿನೊಳಗೆ ಅವಸರದಿಂದ ತುರುಕಿಕೊಂಡು ಭಾರತಿ ಮೊದಲು ದೇವರ ಮನೆಯ ದೀಪ ಹಚ್ಚಿಟ್ಟು ತೊಳೆಯಲಿದ್ದ ಪಾತ್ರೆಗಳನ್ನೆಲ್ಲ ತೊಳೆದಿಟ್ಟು ಬಂದು, ಅವಸರವಸರವಾಗಿ, ಚಾವಡಿಯ ದೊಡ್ಡ ಲಾಂದ್ರವನ್ನು ಹಚ್ಚಲು ಪ್ರಯತ್ನಿಸಿದಳು. ಎಣ್ಣೆಯಿಲ್ಲದೆ ಉಪದ್ರ ಕೊಡಲಾರಂಭಿಸಿದ್ದ ಆ ಲಾಂದ್ರ ಭಾರತಿಯ ತಾಳ್ಮೆಯನ್ನು ಪರೀಕ್ಷಿಸತೊಡಗಿತು. ಬಾಲ್ಯದಿಂದಲೂ ವಿದ್ಯುದ್ದೀಪದ ಪ್ರಭೆಯಲ್ಲಿ ಓಡಾಡಿದ್ದ ಭಾರತಿಗೆ ಈ ಹಳ್ಳಿಗಾಡುತನ ಕೊಡುತ್ತಿದ್ದ ವೇದನೆ ಅಷ್ಟಿಷ್ಟಲ್ಲ. ಅದೂ ಗಂಡನ ಕಾಗದ ಓದುವ ಲವಲವಿಕೆಯನ್ನು ತಡೆಗಟ್ಟುತ್ತಿರುವ ಈ ಬಡತನ ಇಂದು ಅಸಹ್ಯದ್ದಾಗಿ ಕಂಡುಬಂತು. ಈ ಗಡಿಬಿಡಿಯಲ್ಲಿ ಒರಸಲೆಂದು ತೆಗೆದಿದ್ದ ಲಾಂದ್ರದ ಗಾಜು ಕೆಳಗೆ ಉರುಳಿ ಪುಡಿಪುಡಿಯಾಯಿತು.

ಸದ್ದು ಕೇಳಿ ಹೊರಗೆ ಬಂದ ನಾಗಮ್ಮ "ಒಡೆದುಹೋಯಿತೇನೇ ?" ಎಂದಿಷ್ಟೇ ಕೇಳಿದರು.

ಪುರಾತನ ಕಾಲದ ಈ ಹರಕಲು ಗಾಜು ಒಡೆಯದೆ ಇರುತ್ತದೆಯೆ ?"

ಗಾಜನ್ನು ಕೂಡಿಸುವ ಕೆಲಸದಲ್ಲಿ ತೊಡಗಿದ್ದ ಭಾರತಿ ಸಿಟ್ಟಿನಿಂದಲೇ ಉತ್ತರ ಕೊಟ್ಟಳು.

"ಇನ್ನು ಅವರು ಬಂದರೆ ಗೊಣಗುಟ್ಟುತ್ತಾರೆ. ಅದೂ ಇವೊತ್ತೇ ಆಗಬೇಕೇ ? ಆ ದೊಡ್ಡ ಕಾಲುದೀಪವನ್ನಾದರೂ ಹಚ್ಚಿಡು, ಭಾರತೀ" ಎಂದು ಸಮಾಧಾನದಿಂದಲೇ ನಾಗಮ್ಮ ಹೇಳಿದರು.

ಅವರು ಹೀಗೆ ಹೇಳುತ್ತಿರುವಾಗಲೇ ಉಡುಪರು ಮತ್ತು ಪುರೋಹಿತರು ಅಂಗಳಕ್ಕೆ ಬಂದಿದ್ದರು. ನಾಗಮ್ಮ ಹೇಳಿದಂತೆಯೇ ಚಾವಡಿಯ ಅವಾಂತರ

ವನ್ನು ಕಂಡ ಉಡುಪರು ಗೊಣಗುಟ್ಟದಿರಲಿಲ್ಲ: "ಒಂದು ರೂಪಾಯಿ ದಂಡ. ಎರಡಾಣೆಯಿರುವಾಗ ತೆಗೆದುಕೊಂಡ.ಗಾಜು ಇಪ್ಪತ್ತರತನಕ ಬಂತು." ಎಂದರು, ಪುರೋಹಿತರನ್ನುದ್ದೇಶಿಸಿ.

ಭಾರತಿಗೆ ಸಿಟ್ಟೇರುತ್ತಿತ್ತು. ಆದರೆ ಮಾತನಾಡಲು ಮನಸ್ಸಾಗಲಿಲ್ಲ. ಅದೂ ಅಪರಿಚಿತ ಪುರೋಹಿತರ ಮುಂದೆ ಅಸಭ್ಯವರ್ತನೆ ಬೇಡವೆಂದು ಸುಮ್ಮ ನಾದಳು. ತುಂಡುಗಾಜನ್ನೆಲ್ಲ ಕೂಡಿಸಿಯಾದಮೇಲೆ ಕಾಲುದೀಪ ಹಚ್ಚಿ ತಂದಿಟ್ಟು, ತಾನು ತನ್ನ ಕೋಣೆಯೊಳಗೆ ಹೋಗಿ ಅಲ್ಲಿನ ಸಣ್ಣ ಬೆಡ್-ಲ್ಯಾಂಪ್ ಬೆಳಗಿಸಿ, ಕದವಿಕ್ಕಿಕೊಂಡಾಗ ಆಕೆಯ ಮನಸ್ಸು ತುಸು ಹಗುರಾಯಿತು.

ಕಾಗದವನ್ನು ಹೊರಗೆ ತೆಗೆದು ಮೇಜಿನ ಮೇಲಿಟ್ಟರೂ ಭಾರತಿಗೆ ಒಡೆದು ಓದುವ ಮನಸ್ಸಾಗಲಿಲ್ಲ. ನೆಟ್ಟ ನೋಟದಿಂದ ಆಕೆ ಮೇಜಿನ ಮೇಲಿದ್ದ ತಮ್ಮಿಬ್ಬರ ಭಾವಚಿತ್ರವನ್ನು ನೋಡುತ್ತಿದ್ದಳು. ಚಿತ್ರಕಾರನ ಕೋರಿಕೆಯಂತೆ 'ಅವರು' ಹೆಗಲ ಮೇಲೆ ಇರಿಸಿದ್ದ ಕೈಯನ್ನು ಕಾಣುವಾಗ ಯಾವುದೋ ಒಂದು ವಿಚಿತ್ರ ಉತ್ಸಾಹ ಆಕೆಯಲ್ಲಿ ತುಂಬುತ್ತಿತ್ತು. ಪಕ್ಕದಲ್ಲಿಯೇ ಇನ್ನೊಂದು ಚಿತ್ರವಿತ್ತು. ತನ್ನ ತಂದೆ ಮತ್ತು ಅವರು. ವೆಲ್ಲೋರು ಜೇಲಿನಲ್ಲಿ ಆರು ತಿಂಗಳ ಸಶ್ರಮ ಶಿಕ್ಷೆ ಮುಗಿಸಿ ಬಂದಾಗ ಸ್ವಾಗತಿಸಲು ಹೋಗಿದ್ದ ತಂದೆ ಜೊತೆ ಯಾಗಿ ತೆಗೆಸಿದ್ದ ಚಿತ್ರ. ಮುಖ ತುಂಬ ಗಡ್ಡವಿದ್ದು, ಶುದ್ಧ ಖಾದಿ ಧರಿಸಿದ್ದ ಅವರನ್ನು ಆ ಚಿತ್ರದಲ್ಲಿ ಗುರುತಿಸುವುದೇ ಕಷ್ಟವಾಗಿತ್ತು. ಭಾರತಿ ಮೆಲ್ಲಗೆ ನಗಲಾರಂಭಿಸಿದಳು. ಆಕೆಯ ಆಯಾಸವೆಲ್ಲ ಮರೆಯಾಯಿತು. ಆ ಚಿತ್ರದ ಮೇಲೆ ಹಿಂದಿನ ದಿನ ಇರಿಸಿದ್ದ ಗುಲಾಬಿ ಒಣಗಿತ್ತು. ಭಾರತಿ ಅದನ್ನು ತೆಗೆದು ಹೊರಗೆ ಬಿಸಾಡಿದಾಗ ಮೇಜಿನ ಮೇಲಿದ್ದ ಇನ್ನೊಂದು ದೊಡ್ಡ ಅರಳು ಗುಲಾಬಿಯ ಕಡೆ ಕಣ್ಣು ಹೊರಳಿತು.

ಯಾರು ತಂದಿಟ್ಟಿರಬಹುದೆಂದು ಭಾರತಿಗೆ ಮೊದಲು ಹೊಳೆಯಲಿಲ್ಲ. ತುಸು ಯೋಚಿಸಿದ ಮೇಲೆ ಈ ಕೆಲಸ ಗೋವಿಂದನದೋ ನರಹರಿಯದೋ ಆಗಿರಬೇಕೆಂದು ಭಾವಿಸಿದಳು. ಆದರೆ ಸಣ್ಣ ಮಕ್ಕಳನ್ನೆಲ್ಲ ಆಡಿಸಲೆಂದು ಕರೆದು ಕೊಂಡು ಹೊರಗೆ ಹೋಗಿದ್ದ ಗೋವಿಂದ ಇನ್ನೂ ಮರಳಿರಲಿಲ್ಲ. ಗುಲಾಬಿ ತಂದಿಟ್ಟುದು ನರಹರಿಯೆ. ತಂದಿಡಲು ಹೇಳಿದ್ದು ಮಾತ್ರ ನಾಗಮ್ಮ.

ಗುಲಾಬಿ ಚಿತ್ರದ ಮೇಲೆ ಸರಿಯಾಗಿ ನಿಂತಮೇಲೆ ಭಾರತಿ ಕಾಗದವನ್ನು ಒಡೆದು ಓದಿದಳು:

ಮುಂಬಯಿ
೨೦-೧-೪೭

"ನನ್ನ ಚಿನ್ನ,

ಕಾಗದ ಬರೆಯಲು ನಾಲ್ಕೈದು ದಿನ ತಡವಾಯಿತೆಂದು ನೀನು ತುಂಬಾ ಕೋಪಿಸಿಕೊಂಡಿರಬಹುದು. ಕೋಪದಿಂದ ನಿನ್ನ ಮುಖ ಕೆಂಪಾಗಿರುವುದನ್ನು ನೋಡುವ ಅವಕಾಶ ನನಗಿಲ್ಲವಾದರೂ, ಆ ಚಿತ್ರವನ್ನು ನನ್ನ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಬಲ್ಲೆ. ನಿನಗೆ ಸಿಟ್ಟು ಬರಿಸಬೇಕೆಂದೇ ಈ ರೀತಿ ವಿಲಂಬಿಸಿರುವೆನೆಂದು ನೀನು ತಿಳಿಯಲು ನಾನು ಆಕ್ಷೇಪಿಸುವುದಿಲ್ಲ. ಕೆಂಪು ಗುಲಾಬಿ ನನಗೆ ಯಾವಾಗಲೂ ಪ್ರಿಯವೆ.

ಆದರೂ ವಿಪರೀತ ಕೆಲಸದ ನೆಪವನ್ನು ಈ ಸಲವೂ ನಿನ್ನ ಮುಂದಿಡುತ್ತಿದ್ದೇನೆ. ಹೊಟ್ಟೆಯ ಪಾಡಿಗಾಗಿ ಆಫೀಸಿನ ಕೆಲಸವಾದರೆ, ಆಫೀಸು ಬಿಟ್ಟು ಹೊರಗೆ ಬಂದಮೇಲೆ ನನ್ನ ಪ್ರೀತಿಯ ಕೆಲಸ ಇದ್ದೇ ಇದೆ. ನಮ್ಮ ಕನಸಿನ ಹೊಸ ಸಮಾಜ ಸೃಷ್ಟಿಯಾಗುವತನಕ ಈ ಕೆಲಸಕ್ಕೆ...."

ಭಾರತಿ ಮುಂದಿನ ಹತ್ತು ಪಂಕ್ತಿಗಳನ್ನು ಹಾಗೆಯೇ ಬಿಟ್ಟು ಆಮೇಲೆ ಓದಿದಳು.

"ಈ ಎಲ್ಲ ಕೆಲಸ ಮುಗಿಸಿ ಮಲಗುವಾಗ ಅತೀವ ಆಯಾಸ. ರಾತ್ರಿ ಹನ್ನೊಂದೋ ಹದಿನೆರಡೋ ಆಗಿರುತ್ತದೆ. ನನಗೆ ಕಾಗದ ಬರೆಯುವ ಮನಸ್ಸಿದ್ದರೂ ಕೈ ಕೇಳುವುದಿಲ್ಲ. ಆದರೂ ಮಲಗಿದಲ್ಲಿ ಒಂದೆರಡು ಘಂಟೆ ನಿನ್ನದೇ ಆಲೋಚನೆ.

ಈ ನಡುವೆ ಇನ್ನೊಂದು ಕೆಲಸ ನನಗೆ ಗಂಟುಬಿದ್ದಿದೆ. ಮುಂಬಯಿಯಲ್ಲಿ ಸಾಧಾರಣ ಒಂದೆರಡು ಲಕ್ಷ ಕನ್ನಡಿಗರಿದ್ದಾರೆ. ಆದರೆ ಸಂಘಟಿತರಾಗಿಲ್ಲ. ಅವರೆಲ್ಲರ ಕನ್ನಡತನವನ್ನು ಕಾದುಕೊಳ್ಳಲು ಒಂದು ಸಾಧನ ಬೇಕೆಂದು ಒಂದು ಕನ್ನಡ ಸಾಪ್ತಾಹಿಕವನ್ನು ಆರಂಭಿಸಲು ಕೆಲವು ಆದರ್ಶವಾದಿ ಯುವಕರು ನಿಶ್ಚಯಿಸಿದ್ದಾರೆ. ನಾನು ಅದರಲ್ಲಿ...."

ಭಾರತಿ ಪುನಃ ಹದಿನೈದು ಪಂಕ್ತಿಗಳನ್ನು ಹಾಗೆಯೇ ಬಿಟ್ಟುಬಿಟ್ಟು ಮುಂದೆ ಓದತೊಡಗಿದಳು :

"ಈ ಗಡಿಬಿಡಿಯಲ್ಲಿ ಮನೆಯ ವಿಚಾರ ನಾನು ಯೋಚಿಸುತ್ತಲೇ ಇಲ್ಲವೆಂದು ತಿಳಿಯಬೇಡ. ನನಗೆ ಬರುವ ಸಂಬಳ ಕಡಿಮೆಯಾದರೂ...."

ಮುಂದೆ ನಾಲ್ಕು ಪಂಕ್ತಿ ಓದದೆಯೇ ಬಿಟ್ಟು ಭಾರತಿ ಮುಂದುವರಿಸಿದಳು :

"ಈ ಮಳೆಗಾಲದೊಳಗೆ ಒಂದು ಮನೆ ಸಿಗಬಹುದೆಂಬ ನಿರೀಕ್ಷೆಯಲ್ಲಿ ಇದ್ದೇನೆ. ಆಮೇಲೆ ನಮ್ಮ ಹೊಸ ಸಂಸಾರ. ಸುಖವೋ ದುಃಖವೋ ಒಟ್ಟಿಗೇ ಅನುಭವಿಸೋಣ. ಇಲ್ಲಿ ನಾವು ಸಂಸಾರ ಹೂಡಿದರೆ ಅಪ್ಪಯ್ಯನಿಗೆ ಕಷ್ಟವಾಗುತ್ತದೆಂದು ನನಗೆ ಗೊತ್ತು. ಆದರೆ, ಏನೋ ಆಸ್ತಿ ಮಾರಿ ಸ್ವಲ್ಪ ಸಾಲ ಸಂದಾಯ ಮಾಡುತ್ತೇನೆಂದು ಅವರು ಬರೆದಿದ್ದಾರೆ. ಇದರಿಂದಾಗಿ ಅವರಿಗೆ ಕಷ್ಟ ಕಡಿಮೆಯಾಗಬಹುದು.

ಪದ್ಮನ ಕುರಿತು ಮಾತ್ರ ನಾನು ಚಿಂತಿಸುತ್ತಿದ್ದೇನೆ. ಮದರಾಸಿಗೆ ಸಾಗಿಸಬೇಕೆಂದು ನಿನ್ನ ನಿಶ್ಚಿತ ಅಭಿಮತವೆ? ಅಲ್ಲಿ ಒಂದಕ್ಕೆ ನಾಲ್ಕು ಖರ್ಚು. ಆದರೂ ಹುಡುಗನ ಜೀವನ ಮುಂದೆ ಖರ್ಚು ನೋಡಲಾಗುತ್ತದೆಯೇ? ಉಚಿತ ವೈದ್ಯಕೀಯ ಸಹಾಯ ಸರಕಾರದಿಂದ ದೊರಕುವಂಥ ದಿನ ಬರುವ ತನಕ ನಮ್ಮ ಸಮಾಜದ...."

ಪುನಃ ನಾಲ್ಕು ಪಂಕ್ತಿ, ಜೇಡವಾದ ವೇದಾಂತ.

"ಮಾವ ಹೇಗಿದ್ದಾರೆ? ಅವರಿಗೆ ಪ್ರತ್ಯೇಕ ಕಾಗದ ಬರೆಯುತ್ತೇನೆ. ಸುನಂದೆಯ ಮದುವೆ ನಿಶ್ಚಯವಾಯಿತೆ? ಗೋವಿಂದನ ಅಭ್ಯಾಸ ಹೇಗಿದೆ? ಅಮ್ಮ ಹೇಗಿದ್ದಾಳೆ? ಅತ್ತೆ ಹೇಗಿದ್ದಾರೆ? ಮಕ್ಕಳೆಲ್ಲ ಹೇಗಿದ್ದಾರೆ?

ನೀನು....? ಬಹುಶಃ ಜೂನ್‌ನ ತನಕ ನಾನು ಕಾಗದದಲ್ಲಿ ಕಳಿಸುವ ಪ್ರೀತಿಯ ಉಡುಗೊರೆಯನ್ನೇ ಸ್ವೀಕರಿಸಿ ತೃಪ್ತಳಾಗಬೇಕು. ಹೀಗಾಗಿ ನಿನ್ನನ್ನು ಕಾಣುವತನಕ ನೆನಸಿಗೆ....ಒಂದು ಸಾವಿರ....

ಸದಾ ನಿನ್ನ,

ಅನಂತ"

ಕಾಗದ ಓದಿ ಮುಗಿಸಿದ ಭಾರತಿಯ ಮನಸ್ಸಿನಲ್ಲಿ ಮೂಡಿದ್ದುದು ಒಂದೇ ಒಂದು ರೀತಿಯ ಆನಂದದ ಉನ್ಮಾದ ;

'ಜೂನ್ ತಿಂಗಳ ನಂತರದ, ಕನಸಿನ ಮನೆ.'

ಕೇಳಿ ಮಾತ್ರ ತಿಳಿದಿರುವ ಮಹಾವೈಭವದ ಶಹರದಲ್ಲಿ, ಅತ್ಯಾಧುನಿಕ ರೀತಿಯ ಜೀವನಕ್ರಮವನ್ನು ಕಣ್ಣಾರೆ ಕಾಣುವ, ನಾಗರಿಕತೆಯ ಮಹಾ

ಮಂದಿರದಲ್ಲಿ, ದುಡಿಯುವ ಗಂಡ, ವಿಚಾರವಾದಿ ಗಂಡ, ಪ್ರೀತಿಸುವ ಗಂಡ, ಅವನ ಜೊತೆಗೆ ಸಂಸಾರ ಹೂಡುವ ದಿನ, ಅವನೊಡನೆ ಸಂಸಾರ ಹೂಡುವ ತಾಣ—ಆ ಮನೆ.

ಬಡತನದ ಈ ನರಕದಿಂದ ವಿಮೋಚನೆ. ಅಪ್ಪನ ಪ್ರೀತಿಯ ಅಳಿಯನ ಜೊತೆಗೆ, ಅಪ್ಪನ ಮುದ್ದಿನ ಮಗಳ ದಾಂಪತ್ಯ. ಸ್ವಾವಲಂಬನ, ತೃಪ್ತಿಗಳ ತಳಹದಿಯ ಮೇಲೆ, ಓರಣವಾದ ಸಂಸಾರ.

ಆ ಜಂಭದ ಕೋಳಿ ಸುಶೀಲೆ—ಮುಂಬಯಿಯಿಂದ ಬಂದಿದೇನೆಂದು ಮೆರೆಸುವ ವೈಭವವೇನು? ಅವಳಿಗೆ ಉತ್ತರ ಕೊಡಲು ತಾನು ಮುಂಬಯಿ ಸೇರಬೇಕು.

ತನ್ನ ಗೆಳತಿಯರ ಬಳಗಕ್ಕೆಯೆ ಮುಂಬಯಿಗೆ ಬರುವಂತೆ ಆಹ್ವಾನ ಕೊಡಬೇಕು.

ಪದ್ಮನಾಭನನ್ನು ಮುಂಬಯಿಯಲ್ಲೇ ಓದಿಸಬೇಕು. ಅಪ್ಪ ಬಿಡುವು ದಾದರೆ ಸದಾನನ್ನು ಕೂಡಾ.

ಪತ್ರದ ಮೇಲೆಯೇ ತಲೆಯಿರಿಸಿ, ಯೋಚಿಸುತ್ತ ಯೋಚಿಸುತ್ತ ಭಾರತಿ ನಿದ್ದೆಹೋದಳು. ಅವಳಿಗೆ ನಾದಿನಿ ಪಾರ್ವತಿ ಬಂದು ಕರೆದುದೂ ಕೇಳಿಸಲಿಲ್ಲ; ಗೋವಿಂದ ಬಂದು "ಅತ್ತಿಗೇ" ಎಂದು ರಾಗವಾಗಿ ಕರೆದುದೂ ಕೇಳಿಸಲಿಲ್ಲ. ನಾಗಮ್ಮನೇ ಸ್ವತಃ ಬಂದು "ಭಾರತೀ" ಎಂದು ಕೂಗಿದಾಗಲೂ ಎಚ್ಚರ ವಾಗಲಿಲ್ಲ.

ನರಹರಿ ಬಂದು ಜೋರಾಗಿ ಬಾಗಿಲು ಬಡಿಯತೊಡಗಿದಾಗ ಆ ಗದ್ದಲ ದಿಂದಾಗಿ ಎಚ್ಚರಾದಳು.

ಬಾಗಿಲು ತೆಗೆದಾಗ ನರಹರಿಯ ಹಿಂದೆ ನಾಗಮ್ಮ ಪಾರ್ವತಿಯರು ನಿಂತಿದ್ದರು.

"ಏನು ಅತ್ತಿಗೆ, ಕಾಗದ ಓದುವುದಕ್ಕೆ ಬಾಗಿಲು ಹಾಕಿಕೊಳ್ಳಬೇಕೆ?" ಎಂದು ಪಾರ್ವತಿ ನಗೆಮಾತು ಆಡಿದಳು. ಆದರೆ ಭಾರತಿ ನಗಲಿಲ್ಲ.

"ಪೂಜೆಗೆ ಹೊತ್ತಾಯಿತಮ್ಮ. ಒಳ್ಳೆಯ ನಿದ್ದೆ ಬಂದಿತೆಂದು ತೋರು ತ್ತದೆ. ಒಂದಿಷ್ಟು ಊಟಮಾಡಿ ಮಲಗು" ಎಂದು ನಾಗಮ್ಮ ಮೃದುವಾಗಿಯೇ ಹೇಳಿದರು.

ಭಾರತಿ ಕನಸಿನ ಮುಂಬಯಿಯಿಂದ ಮರಳುತ್ತಿದ್ದಳಷ್ಟೇ. ಏಕೋ

ಇವರೆಲ್ಲರನ್ನು ನೋಡಿದಾಗ ಒಮ್ಮೆಲೆ ಆಕೆಗೆ ಅತೀವ ಜಿಗುಪ್ಸೆಯುಂಟಾಯಿತು—ಅರ್ಥ ತನ್ನ ಕನಸನ್ನು ಕೆಡಿಸಿದರಲ್ಲಾ ಎಂಬ ಸಿಟ್ಟಿನಿಂದ.

"ತುಂಬ ತಲೆನೋವು, ಅತ್ತೆ. ನನಗೇನೂ ಬೇಡ. ನಾನು ಮಲಗಿಕೊಳ್ಳುತ್ತೇನೆ" ಎಂದಳು.

"ಛೆ! ಎಲ್ಲಾದರೂ ಇದೆಯೆ. ಒಂದು ತುತ್ತು ಹಾಲನ್ನವಾದರೂ ಉಂಡು ಮಲಗು. ಪೂಜೆಯಾಯಿತು. ಎಲ್ಲ ನಿನ್ನ ದಾರಿ ಕಾಯುತ್ತಿದ್ದಾರೆ, ಬಾ" ಎಂದರು

ಭಾರತಿ ಮನಸ್ಸಿಲ್ಲದ ಮನಸ್ಸಿನಿಂದ ಅವರನ್ನನುಸರಿಸಿದರೂ ಯಾರೊಡನೆಯೂ ಮಾತನಾಡಲಿಲ್ಲ. ಪೂಜೆಯ ವಿಧಿ ಮುಗಿಯಿತೆಂದಾದೊಡನೆ, "ಒಂದು ಲೋಟ ಹಾಲು ಕೊಡಿ, ಅತ್ತೆ. ನಾನು ಊಟ ಮಾಡುವುದಿಲ್ಲ." ಎಂದು ಬಲವಂತದಿಂದ ಬರೇ ಹಾಲನ್ನಷ್ಟೇ ಕುಡಿದು ಬಂದು ಹಾಸಿಗೆ ಬಿಡಿಸಿ ಮಲಗಿಕೊಂಡಳು.

ಮಲಗಿದ ಮೇಲೆ, ಆ ಮನೆಯಲ್ಲಿ ಮೆತ್ತನ್ನ ಹಾಸಿಗೆಯಿದ್ದುದು—ಅದೂ ಅಪ್ಪ ಕೊಡಿಸಿದುದು,—ತನಗೆ ಮಾತ್ರ ಎಂಬ ಯೋಚನೆ ಬಂದಾಗ ಭಾರತಿಗೆ ಮುಳ್ಳು ಚುಚ್ಚಿದಷ್ಟು ವೇದನೆಯಾಯಿತು.

ಕದವಿಕ್ಕಿಕೊಂಡ ಮೇಲೆ ಹೊರಗೆ ಮಾತು ಕೇಳಿಸುವುದು ನಿಂತಿತು. ಭಾರತಿಗೆ ಮಲಗಿದ್ದಲ್ಲಿಗೆ ಗಂಡನ ಭಾವಚಿತ್ರ—ಸೆರೆಮನೆಯ ಆತಿಥ್ಯ ಮುಗಿಸಿ ಬಂದಾಗ ತೆಗಿಸಿದುದು—ಕಾಣುತ್ತಿತ್ತು. ಪುನಃ ಅದನ್ನು ನೋಡಿ ಆಕೆಗೆ ನಗು ಬಂತು.

ಮಡಿಸಿ ಉಡಿಯೊಳಗೆ ತುರುಕಿಕೊಂಡಿದ್ದ ಪತ್ರ ಹಾಗೆಯೇ ಇತ್ತು. ಭಾರತಿ ಮತ್ತೆ ಮುಂಬಯಿಯ ಕನಸು ಕಾಣಲು ಯತ್ನಿಸಿದಳು.

ಆದರೆ ಹಾಗೆ ಯೋಚಿಸಿದಷ್ಟು ಸಲ, ಪದ್ದನ ವಿಕಾರ ಮುಖ—ಆ ಮುಖದ ನಗು—ಕಣ್ಣೆದುರಿಗೆ ಬರುತ್ತಿತ್ತು.

ಎಷ್ಟೋ ರಾತ್ರಿ ಕಳೆದಮೇಲೆ ಆಕೆ ನಿದ್ದೆಹೋದಳು.

೪

'ದುರ್ಗಾ ನಮಸ್ಕಾರ'ಕ್ಕೆಂದು ಬಂದಿದ್ದ ಪಾರ್ವತಿ ಮತ್ತೆರಡು ವಾರ ಮನೆಯಲ್ಲಿ ಉಳಿಯುತ್ತಾಳೆ ಎಂದು ತಿಳಿದಾಗ ಭಾರತಿಗಾದ ಸಂತೋಷ ಅಷ್ಟಿಷ್ಟಲ್ಲ.

ಈ ಸಂತೋಷಕ್ಕೆ ಕಾರಣವಿಷ್ಟೆ: ಸಮವಯಸ್ಕ ಗೆಳತಿಯ ಸಾಮೀಪ್ಯ ಸುಖದಲ್ಲಿ ಎರಡು ವಾರಗಳಾದರೂ ತನ್ನ ಏಕಾಂತತೆಯನ್ನು ಹೋಗಲಾಡಿಸಿ ಕೊಳ್ಳಬಹುದು, ಎಂದು. ಇದಕ್ಕೆ ಸರಿಯಾಗಿ ಪಾರ್ವತಿಯಲ್ಲಿ ಒಂದು ಗುಣ ವಿಶೇಷವಿತ್ತು. ಆಕೆ ಚಿರಂತನ ಆಶಾವಾದಿ. ಎಂಥ ದುಃಖದ ಸನ್ನಿವೇಶದಲ್ಲೂ ನಗು ತರಿಸುವಷ್ಟು ಹೃದಯವೈಶಾಲ್ಯವೂ ಮಾತಿನ ಸಂಸ್ಕಾರವೂ ಆಕೆ ಯಲ್ಲಿದ್ದುವು.

ಇದನ್ನೇ ಶ್ರೀಪತಿರಾಯರು ಭಾರತಿಯೊಡನೆ ಹಿಂದೊಮ್ಮೆ ಹೇಳಿದ್ದರು: 'ಉಡುಪರ ಸಂಸಾರಕ್ಕಿರುವುದು ಎರಡು ಕಣ್ಣು: ಒಂದು ಅನಂತ, ಇನ್ನೊಂದು ಪಾರ್ವತಿ. ಒಂದು ಬೇರೆಯವರಿಗಾಗಿ ಅಳುವ ಕಣ್ಣು; ಇನ್ನೊಂದು ಬೇರೆ ಯವರಿಗಾಗಿ ನಗುವ ಕಣ್ಣು' ಎಂದು.

ಒಂದೂವರೆ ವರ್ಷದ ಒಡನಾಟದಲ್ಲಿ ಈ ಮಾತಿನ ಸತ್ಯತೆಯು ಮನ ವರಿಕೆ ಭಾರತಿಗಾಗಿದ್ದಿತು.

ಆಕೆ ಎದ್ದು ಬಂದಾಗ, ಒಳಗಿನಿಂದ ನಾಗಮ್ಮನ ಉದಯರಾಗ ಕೇಳು ತ್ತಿತ್ತು. ಚಾವಡಿಯ ಹೊಸ್ತಿಲ ಬಳಿ ಪುಟ್ಟ ಸತ್ಯವತಿಯನ್ನು ಬಳಿಯಲ್ಲಿ ಮಲ ಗಿಸಿಕೊಂಡು ಪಾರ್ವತಿ ರಂಗವಲ್ಲಿ ಬಿಡಿಸುತ್ತಿದ್ದಳು. ಪಕ್ಕದಲ್ಲಿಯೇ ಗೋವಿಂದ ತನ್ನ ಇತಿಹಾಸಜ್ಞಾನವನ್ನು ಕಂಠಪಾಠ ಮಾಡಿಕೊಳ್ಳುತ್ತಿದ್ದ:

"೧೫೨೬ರಲ್ಲಿ ಪಾಣಿಪತದ ಯುದ್ಧದಲ್ಲಿ ಬಾಬರನು ಇಬ್ರಾಹಿಂ ಲೋಡಿ ಯನ್ನು ಸೋಲಿಸಿದನು. ೧೫೨೬ರಲ್ಲಿ ಪಾಣಿಪತದ ಯುದ್ಧದಲ್ಲಿ ಬಾಬರನು ಇಬ್ರಾಹೀಂ ಲೋಡಿಯನ್ನು ಸೋಲಿಸಿದನು. ೧೫೨೬ರಲ್ಲಿ...."

"ಏ! ಸ್ವಲ್ಪ ಮೆಲ್ಲ ಓದೋ. ಒಳಗೆ ಪದ್ದ ಮಲಗಿದ್ದಾನೆ."

ಗೋವಿಂದ ಇನ್ನಷ್ಟು ಗಟ್ಟಿಯಾಗಿ ಓದತೊಡಗಿದ:

"೧೫೨೬ರಲ್ಲಿ ಪಾಣಿಪತದ ಯುದ್ಧದಲ್ಲಿ ಹುಮಾಯೂನ್ ಲೋಡಿ ಯನ್ನು ಬಾಬರನು ಸೋಲಿಸಿದನು."

"ಯಾರು, ಯಾರನ್ನೋ?"

ಈಗ ಗೋವಿಂದ ಗಲಿಬಿಲಿಗೊಂಡ. ಆದರೂ ಉರು ಹಾಕುವುದನ್ನು ಬಿಡಲಿಲ್ಲ—ಗಟ್ಟಿಯಾಗಿ :

“೧೫೨೬ರಲ್ಲಿ ಪಾಣಿಪತದ ಯುದ್ಧದಲ್ಲಿ ಇಬ್ರಾಹೀಂ ಲೋಡಿಯು ಬಾಬರನನ್ನು ಸೋಲಿಸಿದನು.”

“ಮಂಗಬುದ್ಧಿ ಎನ್ನಬೇಕು ಇದಕ್ಕೇ. ಉರುಹಾಕುವಾಗ ಏನು ಹೇಳುತ್ತೇನೆಂಬುದರ ಜ್ಞಾನವಾದರೂ ಬೇಡವೆ ?” ಪಾರ್ವತಿ ರಂಗವಲ್ಲಿ ಮುಂದುವರಿಸುತ್ತಲೇ ಹೇಳಿದಳು.

“ನಿನಗೇನು ಗೊತ್ತಿದೆಯೆ ? ಏಳನೇ ಕ್ಲಾಸ್ ಫೈಲ್ ?....೧೫೨೬ರಲ್ಲಿ.... ಇಬ್ರಾಹೀಂ ಲೋಡಿಯು ಪಾಣಿಪತದ ಯುದ್ಧದಲ್ಲಿ....”

“ಹೂಂ. ಬಾಬರನನ್ನು ಸೋಲಿಸಿದನು. ಅಲ್ಲವೆ ? ಪುಸ್ತಕ ತೆಗೆದು ನೋಡು. ಸೋತದ್ದು ಯಾರು, ಸೋಲಿಸಿದ್ದು ಯಾರು ? ಎಂತ. ಕೋಣದ ಹಾಗೆ ಬರೇ ಒದರಿಕೊಂಡರೆ ಇತಿಹಾಸ ಬರುತ್ತೆಯೆ ?”

ಗೋವಿಂದ ಈಗ ತೀರ ಗಲಿಬಿಲಿಗೊಂಡು ಪುಸ್ತಕ ಬಿಡಿಸಿದ. “ಹೋ ! ಬಾಬರನು ಇಬ್ರಾಹೀಂ ಲೋಡಿಯನ್ನು ಸೋಲಿಸಿದನು. ಬಾಬರನು ಇಬ್ರಾಹೀಂ ಲೋಡಿಯನ್ನು ಸೋಲಿಸಿದನು....ಬಾಬರನು....”

“ಹುಮಾಯೂನ್ ಲೋಡಿಯನ್ನು, ಅಲ್ಲವೇನೋ ?” ಪಾರ್ವತಿ ಪುನಃ ಕೆಣಕಿದಳು.

“ನಿನ್ನ ರಗಳೆಯೇ ಬೇಡ. ನಾನು ತೋಟಕ್ಕೆ ಹೋಗಿ ಓದುತ್ತೇನೆ.” ಗೋವಿಂದ ಪುಸ್ತಕವನ್ನೆತ್ತಿಕೊಂಡೆದ್ದ. ಆಗ ತಲೆಗೊಂದು ಏಟು ಬಿತ್ತು.

“ತೋಟಕ್ಕೆ ಹೋಗಿ ಓದುತ್ತಾನಂತೆ. ಅಲ್ಲಿ ಹೋಗಿ ಆ ಕರಂಡೆ ಕಾಯಿ ತಿಂದುಕೊಂಡು ದಂಡೆ ಹತ್ತಿ ಆದುದ್ದುವೊಂದೆ ಗೊತ್ತು. ಇಲ್ಲಿಯೇ ಓದು. ಅಲ್ಲಿ ತಪ್ಪಾದರೂ ಕೇಳುವವರಿಲ್ಲ. ಶುದ್ಧ ಕತ್ತೆಜಾತಿಯದ್ದು. ಕುಂಬಾರ. ಕಲಿಯುವುದರಲ್ಲಿ ಅಣ್ಣನ ಯೋಗ್ಯತೆ ತಮ್ಮನಿಗೆ ಹೇಗೆ ಬರಬೇಕು?”

ಆಗತಾನೆ ಮುಖ ತೊಳೆದುಕೊಂಡು ಚಾವಡಿಗೆ ಬಂದಿದ್ದ ಉಡುಪರು ಮಗನ ಆತುರಕ್ಕೆ ತಡೆ ಹಾಕಿದರು. ಗೋವಿಂದ ತಲೆ ತಗ್ಗಿಸಿ ಅಳುತ್ತಲೇ ಉರುಹಾಕಲು ಆರಂಭಿಸಿದ : “೧೫೨೬ರಲ್ಲಿ....೧೫೨೬ರಲ್ಲಿ....೧೫೨೬ರಲ್ಲಿ....”

“ಸುಮ್ಮಗೆ ಯಾಕೆ ಹೊಡೆಯುತ್ತೀ, ಅಪ್ಪಯ್ಯ. ಗೋವಿಂದನಿಗೆ ಬೈದೇನು ಪ್ರಯೋಜನ. ಯಾರು ಯಾರನ್ನು ಸೋಲಿಸಿದರೆಂದು ಅವನು

ಕಲಿತು ಆಗುವ ಉದ್ಧಾರವಾದರೂ ಏನು? ಈಗಿನ ವಿದ್ಯೆಯೇ ಹಾಗೆ. ಇಬ್ರಾಹೀಂ ಲೋಡಿ ಸೋತರೇನು, ಹುಮಾಯೂನ್ ಲೋಡಿ ಸೋತರೇನು? ಪರೀಕ್ಷೆಯಲ್ಲಿ ಪಾಸಾಗುವಷ್ಟು ಮಾರ್ಕು ಸಿಕ್ಕಿದರೆ ಸಾಕು."

ಸತ್ಯವತಿಯು ಸ್ಥಿತಿಕೊಂಡ ಉಡುಪರು ಪಾರ್ವತಿಯ ಕಡೆ ನೋಡಿ ನಕ್ಕರು.

"ನೀನೂ ಅನಂತನ ಹಾಗೆಯೆ, ಕಲಿತೇನು ಪ್ರಯೋಜನ ಎಂದು ವಾದಕ್ಕೆ ಸುರು. ಈಗಿನ ಕಾಲದಲ್ಲಿ ಡಿಗ್ರಿಯಿಂದ ಏನೆಲ್ಲ ಕೆಲಸವಾಗುತ್ತದೆಂದು ನಿಮಗೆ ಇಬ್ಬರಿಗೂ ಗೊತ್ತಿಲ್ಲ. ತಲೆತುಂಬ ಬೇಡವಾದ ವಿಚಾರಗಳು: ದೇಶೋದ್ಧಾರ, ಸಮಾಜೋದ್ಧಾರ. ಮನೆಯಲ್ಲಿ ಎರಡು ಹೊತ್ತು ಗಂಜಿಗೆ ತತ್ವಾರ. ಅನಂತ ಬಿ. ಎ. ಮುಗಿಸಿ ಒಂದು ಲಾ ಪರೀಕ್ಷೆ ಪಾಸುಮಾಡಿ ಬಿಟ್ಟಿದ್ದರೆ, ಅವನ ಮಾವನ ಹಾಗೆಯೇ ಬೋರ್ಡು ಹಾಕಿ ಊರಿನಲ್ಲಿ ನಿಲ್ಲಲು ಸಾಧ್ಯವಾಗುತ್ತಿರಲಿಲ್ಲವೆ? ಮುಂಬಯಿಗೆ ಹೋಗಿ ನನ್ನಂತೆ ಗುಮಾಸ್ತಿಕೆ ಮಾಡ ಬೇಕಿತ್ತೆ? ಅದಕ್ಕೆ ಮೆಟ್ರಿಕ್ ಸಾಕಾಗುತ್ತಿರಲಿಲ್ಲವೆ? ನಾಲ್ಕುವರ್ಷ ಕಾಲೇಜಿಗೆ ಮಣ್ಣುಹೊತ್ತು ಏನು ಪ್ರಯೋಜನವಾಯಿತು?"

ಭಾರತಿ ಎದ್ದುಬಂದಿದ್ದವಳು ಒಂದು ಕಂಬಕ್ಕೊರಗಿ ನಿಂತು ಈ ಸಂಭಾಷಣೆಯನ್ನು ಕೇಳುತ್ತಿದ್ದಳು. ತನ್ನ ಗಂಡನ ಕಡೆ ಮಾತು ಹರಿದಿದ್ದುದರಿಂದ ಆಕೆಯ ಕುತೂಹಲ ಹೆಚ್ಚಿತ್ತು. ಆದರೆ ಮಾವನ ಮಾತು ಕೇಳುತ್ತ ಹೋದಂತೆಲ್ಲ ಆಕೆಗೆ ವಿಲಕ್ಷಣ ಸಂಕಟವಾಗುತ್ತಿತ್ತು. ತನ್ನ ಹೃದಯದಲ್ಲಿ ಹುದುಗಿದ್ದ ಅಭಿಪ್ರಾಯಗಳನ್ನೇ ಮಾವ ಹೊರಗೆಡಹುತ್ತಿರುವರೇ ಎಂದೆನಿಸುತ್ತಿದ್ದಿತಾದರೂ, ಹೀಗೆ ಮಾತನಾಡುತ್ತಿರುವುದು ಮಾವ ಎಂಬ ತಿಳಿವು ಮೂಡಿ ವಿಚಿತ್ರ ವೇದನೆಯಾಗುತ್ತಿತ್ತು.

"ಪ್ರಯೋಜನವಿರಲಿ, ಇಲ್ಲದಿರಲಿ. ಎಂ. ಎ. ಓದಿದವರಿಗೂ ಅಣ್ಣನಷ್ಟು ತಿಳುವಳಿಕೆಯಿರಬಹುದೆಂದು ನನಗೆ ತೋರುವುದಿಲ್ಲ. ಬರೇ ಡಿಗ್ರಿ ಸಂಪಾದಿಸಿದವರಿಗೆ ವಿದ್ಯೆ ಬರುತ್ತದೆಯೆ?" ಹೀಗೆ ಹೇಳಿದ ಪಾರ್ವತಿ ಹಿಂದಿರುಗಿ ಭಾರತಿಯನ್ನು ನೋಡಿದವಳು ಮಾತು ಮುಂದರಿಸಿದಳು:

"ಅಲ್ಲವೆ, ಅತ್ತಿಗೆ?"

"ಡಿಗ್ರಿಯಿಲ್ಲದೆ ವಿದ್ಯೆಯಿಂದೇನು ಪ್ರಯೋಜನ? ದುಡ್ಡು ಬರುತ್ತದೆಯೆ? ಸಾಲ ಹುಟ್ಟುತ್ತದೆಯೆ? ಸುಮ್ಮನೆ ಲೋಕಾನುಭವವಿಲ್ಲದ ಮಾತು

ಗಳು." ಮಾತನಾಡುತ್ತಿದ್ದಾಗ ಉಡುಪರ ದೃಷ್ಟಿಯೂ ಭಾರತಿಯ ಕಡೆ ಹರಿದಿತ್ತು. ಮಾವ ತನ್ನನ್ನು ನೋಡುತ್ತಿರುವರೆಂದು ತಿಳಿದೊಡನೆ, ಭಾರತಿ ವಿಷಯ ಬದಲಿಸುವ ಇಚ್ಛೆಯಿಂದ,

"ಅಲ್ಲ, ಬೆಳಗಾತ ಇದೇನು ಸುರುಮಾಡಿದಿ, ಪಾರೂ" ಎಂದಳು.

"ಏನಾದರೂ ವಿಷಯ ಬೇಕಲ್ಲ, ಅತ್ತಿಗೆ. ಅಣ್ಣ ಜೈಲಿನ ಕತೆಯೊಂದು ಹೇಳುತ್ತಿದ್ದ: ಒಂದು ದಿನ ಎಲ್ಲ ಕೈದಿಗಳೂ ಮೌನವ್ರತ ಮಾಡಬೇಕು ಎಂದು ನಿಶ್ಚಯಿಸಿದರಂತೆ—ವಿನಾ ಕಾರಣ. ಅಣ್ಣ ಒಬ್ಬ ಒಪ್ಪಲಿಲ್ಲ. ಕಾರಣ ಹೇಳಲು ಅವರು ಕೇಳಲಿಲ್ಲ. ಸರಿ ಅಣ್ಣ, ಬೆಳಗ್ಗೆ ತನ್ನ ತಾನೆ ಗಟ್ಟಿಯಾಗಿ ಮಾತನಾಡಿಕೊಳ್ಳಲಿಕ್ಕೆ ಸುರುಮಾಡಿದನಂತೆ—ಅವನು ಕನಸು ಮನಸಿನಲ್ಲೂ ಯೋಚಿಸದಿದ್ದ ವಿಚಾರ—ಮಾವನ ಮನೆಯಲ್ಲಿ ಹಾಗಲಕಾಯಿ ಪಲ್ಯ ಹಾಕಿದರೆ ತಿನ್ನೋದೇ, ಬಿಡೋದೇ ಅಂತ. ಸರಿ, ಎಂಟು ಘಂಟೆಯೊಳಗೆ ನಕ್ಕು ನಕ್ಕು ಅಲ್ಲಿ ಮಾತನಾಡದೆ ಇದ್ದವರು ಒಬ್ಬರೂ ಇಲ್ಲ."

ಭಾರತಿ ನಗಲಾರಂಭಿಸಿದಳು. ಗೋವಿಂದನೂ ಓದು ನಿಲ್ಲಿಸಿ ನಗುತ್ತಿದ್ದ. ಉಡುಪರ ಮುಖದಲ್ಲಿಯೂ ನಗು ಮೂಡಿತ್ತು, ಅಷ್ಟೆ.

"ನಿನಗೊಬ್ಬ ಅಣ್ಣ. ಅವನು ಹೇಳುವ ಕತೆಗಳಿಗೆ ಲೆಕ್ಕವಿತಿಯಿಲ್ಲ." ಎಂದು ಉಡುಪರು ಮಗುವನ್ನೆತ್ತಿಕೊಂಡು ಅಡುಗೆಯ ಮನೆಗೆ ನಡೆದರು. ಭಾರತಿ ಅತ್ತಿಗೆಯ ಬಳಿ ಬಂದಳು.

"ಬೆಳಗಾತ ಎದ್ದವಳೇ ನಗಿಸಲಿಕ್ಕೆ ಸುರು. ನಿನ್ನೆ ರಾತ್ರಿ ಮಾತನಾಡ ಲಿಕ್ಕೆ ಸಮಯ ಸಿಗಲಿಲ್ಲ. ಇನ್ನೊಂದು ನಾಲ್ಕು ದಿನ ಇದ್ದೀಯಲ್ಲ."

"ನಾಲ್ಕೇ! ಹದಿನೈದು ದಿನ ಇದ್ದೇನೆ. ಎರಡು ವಾರ ಖಂಡಿತ ಬರುವು ದಿಲ್ಲವೆಂದು ಹೇಳಿಬಂದಿದ್ದೇನೆ. ತುಟಿಯೆತ್ತಲಿಲ್ಲ ಅವರು. ಹಾಗೆ ಮಾತ ನಾಡದಿರಲಿಕ್ಕೆ ಕಾರಣವೂ ಇದೆಯೆನ್ನು."

"ಎಂಥದೇ ?"

ಪಾರ್ವತಿ ಮೊಗನೆತ್ತಿ ಅತ್ತಿಗೆಯ ಕಡೆ ನೋಡಿದಳು. ಮತ್ತೆ ನಗುತ್ತ ಕೆಲಸ ಮುಂದುವರಿಸಿದಳು.

"ಹೇಳೋಲ್ಲ ಈಗ. ಒಂದು ದಿನ ಅದು ಎಂಥದೆಂದು ನಿನಗೂ ಗೊತ್ತಾ ಗುತ್ತದೆ. ಈಗ ಬೇಗ ಮುಖ ತೊಳೆದುಕೊಂಡು ಬಾ. ನೀನಿರುವುದರಿಂದ ನನಗೂ ಇವೊತ್ತು ಗಂಜಿಯಿಲ್ಲ, ಕಾಫಿ."

ತುಂಬ ಪ್ರಫುಲ್ಲಿತ ಮನಸ್ಸಿನಿಂದ ಭಾರತಿ ಬಚ್ಚಲು ಮನೆಯ ಕಡೆ ನಡೆದಳು. ಹಿಂದಿನ ದಿನದ ಕಾಗದ, ಅತ್ತಿಗೆಯೊಡನೆ ಸರಸ, ಇವೆಲ್ಲವುಗಳಿಂದ ಆಕೆಯ ಮನಸ್ಸು ತುಂಬ ಹಗುರಾಗಿತ್ತು. ಆದರೂ ಈ ಸಂತೋಷದ ಎಡೆಯಲ್ಲಿ ಮನಸ್ಸಿನಲ್ಲೊಂದು ಕೆಟ್ಟ ವಿಚಾರ ಅನಿರೀಕ್ಷಿತ ಪ್ರವೇಶ ಮಾಡಿತ್ತು. ಪಾರ್ವತಿಗೆ ತವರಿಗೆ ಬರುವಾಗ ಇಷ್ಟು ಸ್ವಾತಂತ್ರ್ಯವಿದೆ. ಆಕೆಗೆ ಗಂಡನ ಮನೆಯ ವಿಚಾರ ಎಷ್ಟು ಆದರವಿದೆ! ತನಗೇಕೆ ಈ ಸ್ವಾತಂತ್ರ್ಯ ಆದರಗಳೆರಡೂ ಇಲ್ಲ ಎಂಬುದು ಆಕೆಗೆ ಸಮಸ್ಯೆಯಾಗಿತ್ತು. ಒಬ್ಬ ಹಳ್ಳಿಯ ಬಡ ಉಪಾಧ್ಯಾಯನನ್ನು ಮದುವೆಯಾಗಿದ್ದ ಪಾರ್ವತಿ ತನಗಿಂತ ಹೆಚ್ಚು ಸುಖಿಯೇ? ಎಂದು ಭಾರತಿ ಯೋಚಿಸಿದಳು.

ಆದರೆ ತನ್ನ ಸ್ವಾತಂತ್ರ್ಯವನ್ನು ಯಾರು ಅಪಹರಿಸಿದ್ದಾರೆಂದು ಭಾರತಿಗೆ ತಿಳಿಯಲಿಲ್ಲ.

ಆಕೆಗೆ ತವರಿಗೆ ಹೋಗಿ ಹತ್ತು ದಿನ ನಿಂತರೂ ಪ್ರತಿಭಟಿಸಿ, ಸೊಸೆಯ ಮೇಲಣ ಅಧಿಕಾರವನ್ನು ಸಾಧಿಸಹೊರಡುವವರು ಇಲ್ಲಿ ಯಾರೂ ಇರಲಿಲ್ಲ. ಆದರೆ ತವರಿನ ಸುಖವನ್ನು ಒಂದೆರಡು ದಿನ ಅನುಭವಿಸುವಾಗಲೇ ಗಂಡನ ಕಾಗದದ ಸಾಲುಗಳು ಬಲವಂತದಿಂದ ಆಕೆಯ ಕಣ್ಣೆದುರು ಬರುತ್ತಿದ್ದುವು; 'ಅಮ್ಮ ಜೀವನದಲ್ಲಿ ತುಂಬ ಸೋತು ಸುಣ್ಣವಾದಾಕೆ. ಪದ್ಮನಿಗೆ ಸೌಖ್ಯವಿಲ್ಲ. ನನ್ನ ಪ್ರತಿನಿಧಿಯಾಗಿ ನೀನು ನಮ್ಮ ಮನೆಯಲ್ಲಿರುವಿಯೆಂದು ತಿಳಿದಿದ್ದೇನೆ."

ಒಮ್ಮೊಮ್ಮೆ ತನ್ನ ದೌರ್ಬಲ್ಯಕ್ಕಾಗಿ ಆಕೆ ತಾನೇ ಕೋಪಿಸಿಕೊಳ್ಳುತ್ತಿದ್ದುದೂ ಇತ್ತು. ಆದರೆ ಅನಂತನ ಇಚ್ಛೆಗೆ ವಿರುದ್ಧವಾಗಿ ತಾನು ವರ್ತಿಸುತ್ತಿದ್ದೇನೆ ಎಂಬ ಯೋಚನೆ ತನ್ನ ಮನಸ್ಸನ್ನು ಕೊರೆಯತೊಡಗಿದರೆ, ಅದಕ್ಕೇನು ಸಮಾಧಾನ ಹೇಳುವುದೆಂದು ತಿಳಿಯದೆ, ಆಕೆ ಹೆಚ್ಚಾಗಿ ಅವನ ಮಾತನ್ನು ತನ್ನ ಇಚ್ಛೆಯ ವಿರುದ್ಧವಾದರೂ ಪಾಲಿಸುತ್ತಿದ್ದಳು.

ಮುಖ ತೊಳೆದು ಪಾತ್ರೆಗಳನ್ನೆಲ್ಲ ಬೆಳಗಿಟ್ಟು, ಹಟ್ಟಿಯ ಕಸ ಕೆಲಸಗಳನ್ನು ತೀರಿಸಿ ಭಾರತಿ ಪದ್ಮನಾಭನ ಬಳಿಗೆ ಬಂದಾಗ, ಆತ ಎದ್ದಿದ್ದನಷ್ಟೆ. ಅವನಿಗೆ ಮುಖ ತೊಳೆಯಲು ಸಲಕರಣೆಗಳನ್ನೆಲ್ಲ ಸಿದ್ಧಪಡಿಸಿಕೊಟ್ಟ ಭಾರತಿ, ತನ್ನ ಕೋಣೆಯಿಂದ ಥರ್ಮಾಮೀಟರ್ ತಂದು ಜ್ವರವಿದೆಯೇ ಎಂದು ನೋಡಿದಳು. ಹೀಗೆ ನೋಡುವುದನ್ನು ಉಡುಪರು ನಿಷೇಧಿಸುತ್ತಿದ್ದರೂ, ಅದು ಭಾರತಿಗೆ ನಿತ್ಯರೂಢಿಯಾಗಿತ್ತು.

ತುಸು ಜ್ವರವಿದ್ದುದರಿಂದ ಭಾರತಿ ಗಾಬರಿಗೊಂಡಳು. ಒಂದು ತಿಂಗಳಿಂದೀಚೆಗೆ ಜ್ವರವೇರಿದ್ದುದು ಅಂದೆ.

"ಹೇಗಿದೆ? ಜ್ವರವಿದೆಯೋ?" ಎಂದು ಉಡುಪರು ಕೇಳಿಕೊಂಡು ಬಂದಾಗ ಭಾರತಿ ಮಾಡನಾಡಲಿಲ್ಲ. ಪದ್ಮನಾಭನ ಕಣ್ಣು ತನ್ನ ಮೇಲೇ ಇವೆ ಎಂದು ತಿಳಿದಾಕೆ ಮಾವನಿಗೆ ಉತ್ತರ ಕೊಡಲಿಲ್ಲ. ಔಷಧಿ ಸರಿಪಡಿಸಿಕೊಟ್ಟವಳು, ಥರ್ಮಾಮೀಟರ್ ತೊಳೆಯಲೆಂದು ಹೊರಗೆ ಬಂದಳು.

ಸೊಸೆ ತಮಗೆ ಉತ್ತರ ಕೊಡದಿದ್ದುದರಿಂದ ಉಡುಪರಿಗೆ ಸಿಟ್ಟು ಬಂತು. ನಾಗಮ್ಮ ತಾಳ್ಮೆಯ ಪ್ರತಿಮೂರ್ತಿಯಾದರೆ, ಉಡುಪರು ಸಿಟ್ಟೇರಿದಾಗ ಉಗ್ರನರಸಿಂಹ. ಆದರೂ ಅವರ ಸಂಸಾರದ ಆರ್ಥಿಕ ಹಂದರದಲ್ಲಿ ಹಬ್ಬಿದ್ದ ಕೀಳರಿಮೆ ತುಸು ಪ್ರಭಾವಶಾಲಿಯಾಗಿದ್ದುದರಿಂದಲೋ ಏನೋ, ಭಾರತಿಯ ಕುರಿತಾದ ಸಿಟ್ಟು ಬರೇ ನಂಜುಮಾತಿನಲ್ಲಿ ಕೊನೆಗೊಳ್ಳುತ್ತಿತ್ತು.

"ಜ್ವರ ನೋಡಬಾರದೆಂದು ಎಷ್ಟು ಸಲ ಹೇಳಿದರೂ ಕೇಳುವುದಿಲ್ಲ. ನೋಡಿದ ಮೇಲೆ ಹೇಗಿದೆಯೆಂದು ಹೇಳಿದರೆ ಬಾಯಿ ಏನು ಹಾಳಾಗಿ ಹೋಗುವುದೇ?"

ಭಾರತಿ ಸಿಟ್ಟಾದರೂ ಮಾತನಾಡಲಿಲ್ಲ. ಆಗತಾನೆ ಒಳಗೆ ಬಂದ ಪಾರ್ವತಿಯೇ ತಂದೆಯ ಮಾತಿಗೆ ಉತ್ತರ ಹೇಳಿದಳು:

"ಹತ್ತು ಮಕ್ಕಳ ತಂದೆಯಾದರೂ ಬುದ್ಧಿ ಮಗುವಿನ ಹಾಗೆ. ರೋಗಿ ಹತ್ತಿರ ಇರುವಾಗ, ಕಾಯಿಲೆಯ ಮಟ್ಟವನ್ನು ಯಾರಾದರೂ ವಿಚಾರಿಸುತ್ತಾರೆಯೆ, ಅಪ್ಪಯ್ಯ?"

ಪಾರ್ವತಿ ನಗತೊಡಗಿದಾಗ ಉಡುಪರು ಸುಮ್ಮನಾದರು. ತಮ್ಮ ಸಣ್ಣತನದ ನೆನಪಾದಾಗ ಅವರಿಗೆ ವೇದನೆ ಇನ್ನಷ್ಟು ಹೆಚ್ಚಿತು. ಇದಕ್ಕೆ ಸರಿಯಾಗಿಯೇ ಉಡುಪರ ದೂರದ ಆಪ್ತರಾದ ಗೋಪಣ್ಣ ಶ್ಯಾನುಭಾಗರು "ಉಡುಪರು ಇದ್ದಾರೆಯೆ? ತುಳಸಿ ಇದೆಯೆ?" ಎಂದು ತುಳಸಿ ಕೊಯ್ಯುವ ನೆಪದಿಂದ ಮನೆಯೊಳಗೆ ಬಂದರು.

ಅವರು ಬಂದುದರ ನಿಜವಾದ ಕಾರಣ ಉಡುಪರಿಗೆ ತಿಳಿದಿತ್ತು. ಸಾಲ ಕೊಟ್ಟಿದ್ದ ಐನೂರು ರೂಪಾಯಿಗಳ ನೋಟಿನ ವಾಯಿದೆಯಾಗುತ್ತಿದೆ. ಹೊಸ ನೋಟು ಬರಿಸುವ ಆಲೋಚನೆ ಇದೆಯೆ, ಅಥವಾ ಹಣ ವಾಪಸು ಬರುವಂತಿದೆಯೇ?—ಎಂದು ಉಡುಪರನ್ನು ಕೇಳಬೇಕಿತ್ತು.

ಆಸ್ತಿ ಮಾರುವ ನಿಶ್ಚಯ ಮಾಡಿದಂದಿನಿಂದ ಉಡುಪರು ಸಾಲಿಗರ ವಿಚಾರ ತುಸು ನಿಶ್ಚಿಂತೆಯಿಂದಿದ್ದರು. ಅದೂ ಅನಂತನ ಸಮ್ಮತಿದೆಯೆಂದು ತಿಳಿದ ಮೇಲೆ, ಒಂದು ಸಲ ಸ್ವಲ್ಪಮಟ್ಟಿಗಾದರೂ ಋಣವಿಮುಕ್ತರಾಗಿ, ನಾಲ್ಕು ದಿನ ಸುಖವಾಗಿ ಮಲಗಿಯೇವು ಎಂದು ಅವರು ಯೋಚಿಸಿದ್ದರು. ಎರಡೂವರೆ ಸಾವಿರ ರೂಪಾಯಿಗಳು ಕೈಗೆ ಬಂದರೆ ಪಾರ್ವತಿಯ ಮದುವೆಗೆಂದು, ತಾಯಿಯ ಅಂತಿಮಕ್ರಿಯೆಗೆಂದು, ಅನಂತನ ಮದುವೆಗೆಂದು, ದೊಡ್ಡ ಮಗಳು ಸೀತೆಯ ಹೆರಿಗೆಯ ಕಾಲದಲ್ಲಿ ಅಗತ್ಯವಾಗಿದ್ದಿತೆಂದು, ಮತ್ತೆ ಮನೆ ಖರ್ಚಿಗೆಂದು ಮಾಡಿದ್ದ ಸುಮಾರು ಮೂರು ಸಾವಿರ ರೂಪಾಯಿಗಳ ಸಾಲದಲ್ಲಿ ಎರಡು ಸಾವಿರವನ್ನಾದರೂ ತೀರಿಸಿ, ಮತ್ತುಳಿದ ಐನೂರು ರೂಪಾಯಿಗಳಲ್ಲಿ, ಪದ್ಮನಾಭನನ್ನು ಮಂಗಳೂರಿನ ತನಕವಾದರೂ ಕರೆದುಕೊಂಡು ಹೋಗಿ ಪರೀಕ್ಷಿಸಬೇಕಾದಂಥ ಸಂದರ್ಭ ಬಂದರೆ ಸ್ವಲ್ಪ ಹಣವಿದೆ ಎಂದು ನಿಶ್ಚಿಂತೆಯಿಂದ ಮುಂದುವರಿಯಬಹುದು, ಎಂದು ಅವರು ಭಾವಿಸಿದ್ದರು.

ತಮ್ಮ ಮ್ಯುನಿಸಿಪಲ್ ಗುಮಾಸ್ತೆಗಿರಿಯಿಂದ ತಮಗೆ ದೊರಕುತ್ತಿದ್ದ ಅರವತ್ತು ಎಪ್ಪತ್ತು ರೂಪಾಯಿಗಳಿಗೆ, ಅನಂತ ಕಳಿಸುತ್ತಿದ್ದ ಸಾಧಾರಣ ಅಷ್ಟೇ ಹಣವನ್ನು ಕೂಡಿಸಿಯೂ ಋಣವಿಮುಕ್ತ ಸಂಸಾರಜೀವನವನ್ನು ಸಾಗಿಸುವುದು ಅವರಿಗೆ ಸಾಧ್ಯವಿರಲಿಲ್ಲ—ಉಡುಪರ ಸಂಸಾರ ಹಾಗಿತ್ತು.

ಮತ್ತೆರಡು ದಿನಗಳಲ್ಲಿ ಆಸ್ತಿಯ ಕ್ರಯಚೀಟು ಆಗುವುದಿತ್ತು. ಹೀಗಿದ್ದುದರಿಂದ, ಶ್ಯಾನುಭಾಗರ ಆಗಮನದಿಂದ ಮೊದಲು ನೊಂದುಕೊಂಡರೂ ಉಡುಪರಿಗೆ ಅವರನ್ನು ಸಮಾಧಾನಪಡಿಸಿ ಕಳಿಸುವುದು ಕಷ್ಟವಾಗಲಿಲ್ಲ. ತುಳಸಿಯ ನೆಪದಿಂದ ಬಂದವರು ಬಂದ ಉದ್ದೇಶವನ್ನೇ ಮರೆತು, "ಅಯ್ಯೋ! ಚಿನ್ನದಂಥ ಆಸ್ತಿಯನ್ನು ಮಾರಬೇಕಾಯಿತೆ? ನನ್ನ ಕೈಯಲ್ಲಾದರೂ ಹಣವಿದ್ದಿದ್ದರೆ ನಾನೇ ಕೊಂಡುಕೊಂಡು ಮತ್ತೆ ನಿನ್ನ ಕೈಲಾದಾಗ ನಿನಗೆ ಬಿಡಿಸಿಕೊಡುತ್ತಿದ್ದೆ. ಈ ಮಕ್ಕಳ ಬಾಯಿಗೇನು ಮಾಡುತ್ತೀ?" ಎಂದು ಮೊಸಳೆಕಣ್ಣೀರು ಸುರಿಸಿದರು. ಮಗಳು ಮತ್ತು ಸೊಸೆಗೆಂದು ಮಾಡಿದ್ದ ಕಾಫಿಯಲ್ಲಿ ಉಳಿದುದಕ್ಕೆ ಒಂದಿಷ್ಟು ಹಾಲು ನೀರು ಸೇರಿಸಿ ಕಾಫಿಯೆಂದು ನಾಗಮ್ಮ ಕೊಟ್ಟುದನ್ನು ಕುಡಿದು ತೃಪ್ತಿಯಿಂದ "ಅನಂತನ ಕಾಗದವಿಲ್ಲವೆ? ಅವನಿಗೂ ಬುದ್ಧಿ ಇಲ್ಲವೆ?" ಎಂದು ಉಪಚಾರದ ಮಾತು ಹೇಳಿ, ಬಂದ ದಾರಿ ಹಿಡಿದರು....

ಉಡುಪರಿಗೆ ಈ ಕಣ್ಣುಕಟ್ಟು ವಿದ್ಯೆಯ ಸಂಪೂರ್ಣ ಜ್ಞಾನವಿತ್ತು.

ಆದರೆ ಅವರ ವ್ಯವಹಾರವೃಷ್ಟಿಯೂ ಅಷ್ಟೇ ತೀಕ್ಷ್ಣ ವಿದ್ದಿತಾದ ಕಾರಣ ಅವರು ಶ್ಯಾಮಭಾಗರ ಎಲ್ಲ ಮಾತುಗಳಿಗೂ ಸೈಗುಟ್ಟಿದರು.

ಅವಸರವಸರವಾಗಿ ಸ್ನಾನ, ಪೂಜೆ ತೀರಿಸಿಕೊಂಡು, ಶಾಲೆಗೆ ಹೋಗಲು ಸಾಧ್ಯವಿರದೆ ಕಚ್ಚಾಡಿಕೊಳ್ಳುತ್ತಿದ್ದ ಮಕ್ಕಳಿಗೆಲ್ಲ ನಾಲ್ಕೇಟು ಬಿಗಿದು, ಹೆಂಡತಿ ಕೊಟ್ಟ ಉಪಾಹಾರ ತೀರಿಸಿ, ಉಡುಪರು ಆಫೀಸಿಗೆ ಹೊರಟರು. ಕಚೇರಿ ಒಂದೂವರೆ ಮೈಲು ದೂರವಲ್ಲಿದ್ದರೂ ವೇಳೆಯ ನಿರ್ಬಂಧವಿರದ್ದರಿಂದ ಮಧ್ಯಾಹ್ನ ಊಟಕ್ಕೆ ಉಡುಪರು ಮನೆಗೇ ಬರುತ್ತಿದ್ದರು.

ಮಾವ ಹೊರಟುಹೋದ ಮೇಲೆ, ಸ್ನಾನ ತೀರಿಸಿ, ಭಾರತಿ, ಸತ್ಯವತಿ ನಿದ್ರಿಸಿರುವಳೆಂದು ತಿಳಿದಮೇಲೆ, ಅತ್ತಿಗೆಯೊಡನೆ "ತೋಟಕ್ಕೊಂದು ಸುತ್ತು ಹಾಕಿ ಬರೋಣ ಬಾರೇ" ಎಂದು ಕರೆದುಕೊಂಡು ಹೋದಳು. ಪಾರ್ವತಿಯೂ ಕಾಯುತ್ತಿದ್ದುದು ಅದೇ ಸಂಧಿಗಾಗಿ.

"ಏನೇ, ಅಣ್ಣ ಏನು ಬರೆದಿದ್ದಾನೆ ? ಮನೆ ಗಿನೆ ಮಾಡುವ ಆಲೋಚನೆ ಇದೆಯೆ ಅಥವಾ ಕಟ್ಟಿಕೊಂಡ ಹುಡುಗಿಯ ಯೋಚನೆಯಿರದೆ ಇನ್ನೂ ಬೈರಾಗಿಯೆ ?"

ಭಾರತಿ ನಗುತ್ತಲೇ ಉತ್ತರ ಕೊಟ್ಟಳು :

"ಅಂತೂ ಮೇ ತಿಂಗಳ ತನಕ ಸನ್ಯಾಸವೇ ನೋಡು, ಪಾರೂ."

"ನಮ್ಮಣ್ಣನ ಸ್ವಭಾವವೇ ಹಾಗೆ, ಅತ್ತಿಗೆ. ಕೈಲೊಂದು ಕೆಲಸ ಹಿಡಿದರೆ ಬೇರೆ ಯಾವುದರ ಕಡೆಗೂ ಯೋಚನೆಯೇ ಇಲ್ಲ. ಮುಖ್ಯ ಅವನಿಗೆ 'ಮನೆ' ಬೇಕು ಎಂಬಾಸೆ ಹುಟ್ಟಬೇಕು. ಆಗ ಖಂಡಿತ ಕರೆಸುತ್ತಾನೆ. ಇಲ್ಲವಾದರೆ ಅವನ ಸಮಾಜಸೇವೆಯಲ್ಲಿ ಮನೆಯವರಿಗೆ ಉಪವಾಸವೇ ಗತಿ. ನೀನು ನಿನ್ನ ಕಾಗದಗಳಲ್ಲಿ ಹೇಳುತ್ತಲೇ ಇರು : ನಿಮ್ಮನ್ನು ಬಿಟ್ಟು ಇಲ್ಲಿರಲಿಕ್ಕೆ ಸಾಧ್ಯವೇ ಇಲ್ಲ, ಎಂದು. ಹಾಗಾದರೆ ಎಲ್ಲ ಸರಿಯಾಗುತ್ತದೆ." ಎಂದು ಅತ್ತಿಗೆಯನ್ನು ಚಿವುಟುತ್ತ ಹೇಳಿದಳು.

"ನಾನು ಮೆಟ್ರಿಕ್ ಮುಗಿಸಿದ್ದೇನೆ. ಆದರೆ ನನಗೆ ನಿನ್ನಷ್ಟು ತೀವಳಿಕೆ ಇಲ್ಲ ನೋಡು, ಪಾರೂ." ಭಾರತಿಯ ಅಣಕದ ಮಾತು ಅಷ್ಟು ಪ್ರಭಾವಶಾಲಿ ಯಾಗಿರದಿದ್ದರೂ, ಅದನ್ನು ಸಮರ್ಥಿಸಲು ಆಕೆ ಪಾರ್ವತಿಯನ್ನು ಚಿಗುಟಿದಾಗ ಆಕೆ,

"ಏ ಮಾರಿ! ರಕ್ತ ಬಂತು ನೋಡು. ಗಂಡನ ಮೇಲಿನ ಸಿಟ್ಟನ್ನೆಲ್ಲ ನನ್ನ ಮೇಲೆ ತೀರಿಸುತ್ತೀಯೇನು?" ಎಂದು ನಗುತ್ತಲೇ ಕೇಳಿದಳು.

ಭಾರತಿಗೂ ನಗು ಬಂತು.

"ಸಿಟ್ಟು ಮಾಡಿಕೊಂಡು ತವರಿಗೆ ಓಡಿಬಂದವ್ರು ನೀನು. ಎರಡು ವಾರ 'ಮೊಕ್ಕಾ' ಎಂದು ನಿಶ್ಚಯ ಮಾಡಿದ್ದು ನೀನು. ಆಮೇಲೆ ನಾಯಿಯ ಹಾಗೆ, ಅಲ್ಲ, ಬೆಕ್ಕಿನ ಹಾಗೆ 'ಮಿಯಾಂ, ಮಿಯಾಂ' ಹೇಳಿಕೊಂಡು ಕರೆಯಲು ಬರುತ್ತಾರೆಂದು ಯೋಚಿಸಿರುವ್ರದು ನೀನು. ದೂರು ಮಾತ್ರ ನನ್ನ ಮೇಲೆ."

ಪಾರ್ವತಿಯ ನಗು ಅರಳುಮಲ್ಲಿಗೆಯಂತೆ ಇತ್ತು.

"ನೋಡತ್ತಿಗೆ. ನಾನು ಈ ಸಲ ಹದಿನೈದು ದಿನವಲ್ಲ ಒಂದು ತಿಂಗಳು ಕುಳಿತರೂ ನಮ್ಮವರು ಬೇಡವೆನ್ನುವ್ರದಿಲ್ಲ ಎಂದು ಬೇಗ್ಗೆ ಹೇಳಿದ. ಯಾಕೆ ಗೊತ್ತೇ?"

"ಯಾಕೆ?"

"ನೀನು ಯಾರ ಹತ್ತಿರವೂ ಹೇಳುವ್ರದಿಲ್ಲವಾದರೆ ಹೇಳುತ್ತೇನೆ. ಅಪ್ಪಯ್ಯನ ಹತ್ತಿರ, ಅಮ್ಮನ ಹತ್ತಿರ—ಯಾರ ಹತ್ತಿರವೂ ಹೇಳಬಾರದು, ನಾನು ಹೋಗುವ ದಿವಸದ ತನಕ ಹೋಗುವಾಗ ನಾನೇ ಹೇಳುತ್ತೇನೆ."

"ಆಗಬಹುದು."

"ಸುಮ್ಮಗೆ ಆಗಬಹುದೆಂದು ಹೇಳಿ ಪ್ರಯೋಜನವಿಲ್ಲ. ಭಾಷೆ ಕೊಡು."

"ಹೂಂ, ಕೊಡುತ್ತೇನೆ."

"ಕೈ ತಾ."

ಭಾರತಿ ಕೈ ಮುಂದೆ ಮಾಡಿದಳು. ಪಾರ್ವತಿ ಕೈಮೇಲೆ ಕೈಹಾಕಿ ಭಾಷೆಯನ್ನು ಪಡೆದುಕೊಂಡರೂ ಮಾತನಾಡಲು ಹಿಂಜರಿದಳು.

"ಹೇಳೇ...."

"ನನಗೆ ಮೂರು ತಿಂಗಳು."

ಪಾರ್ವತಿಯ ಮುಖ ಲಜ್ಜೆಯಿಂದ ಕೆಂಪಾಗಿತ್ತು. ಆದರೂ ಆ ಮುಖದಲ್ಲಿ ದಿಟ್ಟತನದ ಸೌಂದರ್ಯವಿತ್ತು. ಸರಸ ದಾಂಪತ್ಯದ ಸೌಂದರ್ಯ ಅವಳ ಮುಖದಲ್ಲಿ ಪ್ರತಿಬಿಂಬಿತವಾಗಿತ್ತು.

ಒಂದು ಕ್ಷಣ ನಗುತ್ತಿದ್ದ ಭಾರತಿ ಮಾತನಾಡಲಿಲ್ಲ. ತನ್ನ ಹೃದಯ

ಸಾಗರದಲ್ಲಿ ಪುಂಖಾನುಪುಂಖವಾಗಿ ಏಳುತ್ತಿದ್ದ ಒಂದು ವಿಚಿತ್ರ ಉನ್ಮಾದದ ತೆರೆಗಳು ಆಕೆ ತುಸು ಹೊತ್ತು ಮೌನವಹಿಸುವಂತೆ ಮಾಡಿದವು. ಮಾಂಗಲ್ಯದ ಸೌಭಾಗ್ಯ ಸರ್ವಸ್ವವೆಲ್ಲ ಪಾರ್ವತಿಯಲ್ಲಿ ಕೇಂದ್ರೀಕೃತವಾಗಿ ನಿಂತಿದ್ದಂತೆ ಕಂಡಿತು. ಅತ್ತಿಗೆಯ ಮುಖದ ರಕ್ತವರ್ಣವನ್ನು ನೋಡಿದ ಆಕೆಗೆ ಗಂಡನ ಕಾಗದದ ಒಂದು ಸಾಲು ನೆನೆಪಿಗೆ ಬಂತು: 'ಕೆಂಪು ಗುಲಾಬಿ ನನಗೆ ಯಾವಾಗಲೂ ಪ್ರಿಯವೆ.'

ಚೇತರಿಸಿಕೊಂಡು ಭಾರತಿ ಹೇಳಿದಳು :

"ಹಾದೇನೇ? ಏ! ಕಳ್ಳಿ? ಇಷ್ಟೆಲ್ಲ ತಂಟೆಮಾಡಿ ಈಗ ಬಾಯಿ ಮುಚ್ಚಿಕೊಳ್ಳು ಎನ್ನುತ್ತಿಯಾ ?"

ಪಾರ್ವತಿಗೂ ನಗದಿರಲಾಗಲಿಲ್ಲ. ಆದರೆ ಕೈ ತೋರಿಸಿದಳು.

"ಭಾಷೆ ಕೊಟ್ಟಿದ್ದಿ. ಜೋಕೆ."

"ಹೇಳಿದರೇನು ತಪ್ಪೇ ?"

"ನಿನಗೆ ಗೊತ್ತಿಲ್ಲ, ಅತ್ತಿಗೆ. ಅಮ್ಮನಿಗೆ ಸಂತೋಷವಾಗುತ್ತದೆ. ಆದರೆ ಅಪ್ಪಯ್ಯ ನೊಂದುಕೊಳ್ಳುತ್ತಾರೆ."

ಭಾರತಿ ಮಾತನಾಡಲಿಲ್ಲ.

ಅತ್ತಿಗೆಯ ಒಡನಾಟದ ಹದಿನೈದು ದಿನಗಳನ್ನು ಭಾರತಿ ಸ್ವಲ್ಪ ಉಲ್ಲಾಸ ದಿಂದಲೇ ಕಳೆದಳು. ಆದರೆ ಈ ಮಧ್ಯೆ ಮನಸ್ಸಿಗೆ ಬೇಸರವಾಗುವಂಥ ವಿಚಾರ ಗಳೇನು ಬರಲಿಲ್ಲವೆಂದಲ್ಲ. ಪದ್ಮನಾಭ ದಿನೇ ದಿನೇ ಇಳಿಯುತ್ತಲೇ ಇದ್ದ. ಆಗಾಗ್ಗೆ ಜ್ವರ ಬರುತ್ತಿತ್ತು. ಬಹ್ವಂಶ ಸಾಲ ಸಂದಾಯ ಮಾಡಿದ ಮೇಲೆ ಒಂದು ವಾರ ಉಡುಪರು ತುಂಬ ಹುರುಪಿನಲ್ಲಿದ್ದರು. ಮನೆಯಲ್ಲಿ ಮಗಳಿದ್ದಾ ಳೆಂಬ ನೆಪದಿಂದ ಎರಡು ದಿನಕ್ಕೊಮ್ಮೆ ಹಾಲು ಪಾಯಸವಾಯಿತು. ಕಂಡ, ಕಾಣದ ದೇವರ ಪೂಜೆಗಳೆಲ್ಲ ಮುಗಿದವು. ಆದರೂ ಇನ್ನೂ ಒಂದು ಸಾವಿರ ಸಾಲ ಹಾಗೆಯೇ ಇದೆಯೆಂಬ ನೋವು ಅವರನ್ನು ಬಿಟ್ಟಿರಲಿಲ್ಲ. ಸಾಲದುದಕ್ಕೆ ಬ್ಯಾಂಕಿನ ಚಿನ್ನವನ್ನು ಬಿಡಿಸುವ ಕುರಿತು ಅವರು ಯೋಚನೆ ಮಾಡುತ್ತಿದ್ದರು. ಅದು ಇನ್ನೂ ಸಾಧ್ಯವಾಗಿರಲಿಲ್ಲ. ಪದ್ಮನಾಭನ ವಿಚಾರ ಏನು ಮಾಡುವು ದೆಂಬುದು ದೊಡ್ಡ ಸಮಸ್ಯೆಯೇ ಆಗಿತ್ತು. ಕೈಯಲ್ಲಿ ತುಸು ಹಣ ಓಡಾಡು ತ್ತಿದ್ದುದರಿಂದ ಔಷಧಿ ಬದಲಿಸಿದ್ದರು. ಆದರೆ ಇದರಿಂದ ಪರಿಣಾಮ ಏನೆಂಬುದು ತಿಳಿಯುವಂತಿರಲಿಲ್ಲ.

ಪಾರ್ವತಿ ಹೊರಡುವ ದಿನ ಬಂದಾಗ, ತಾಯಿಯೊಡನೆ, ತಾನು ತಾಯಿ ಯಾಗಲಿರುವ ಸಮಾಚಾರವನ್ನು ಹೇಳಿದಳು. ನಾಗಮ್ಮನಿಗಾದ ಸಂತೋಷ ಲ್ಲಿ ವೇದನೆಯೂ ಬೆರೆತಿತ್ತು. ಆದರವರು ಅದನ್ನು ತೋರಿಸಲಿಲ್ಲ. "ಇನ್ನೂ ಂದೆರಡು ವಾರ ಇದ್ದು ಹೋಗಬಾರದೇನಮ್ಮ?" ಎಂದಳು. "ಇಲ್ಲಮ್ಮ. ವರಿಗೆ ಬೇಸರವಾಗುತ್ತದೆ. ಯಾರೂ ಕರೆಯಲಿಕ್ಕೆ ಬರುವುದು ಬೇಡ. ಾನೇ ಮಾಣಿಯನ್ನೋ ನರಹರಿಯನ್ನೋ ಕರೆದುಕೊಂಡು ಬರುತ್ತೇನೆಂತ ೇಳಿಬಂದಿದ್ದೇನೆ." ಎಂದು ಪಾರ್ವತಿ ಹೇಳಿದಳು. ತಾಯಿ ವಿರೋಧಿಸಲಿಲ್ಲ.

ಆದರೆ ರಜೆಯೆಂದು ಆ ದಿನ ಮನೆಯಲ್ಲೇ ಇದ್ದ ಉಡುಪರಿಗೆ ಈ ಸುದ್ದಿ ೇಳುವ ಮುಂಚೆಯೇ ಬೇರೊಂದು ಬೇಸರದ ಸುದ್ದಿ ಬಂದಿತ್ತು. ಅದು ಮಗನ ಾಗದ. ಹದಿನೈದನೆಯ ತಾರೀಕಿನವರೆಗೂ ಅವರು ಮಗನ ಹಣಕ್ಕಾಗಿ ಾರಿ ಕಾಯ್ದಿದ್ದರು. ಈ ಸಲ ಆಸ್ತಿಯ ವಿಕ್ರಯವಲ್ಲದಿದ್ದರೆ ಅವರ ಪಾಡು ೇಳುವಂತಿರಲಿಲ್ಲ. ಆದರೂ ಮಗನ ಹಣ ಬಂದಾಗ ಅದಕ್ಕೆ ಯಾವ ದಾರಿ ೋರಿಸಬೇಕೆಂದು ಅವರು ನಿಶ್ಚಯಿಸಿಯಾಗಿತ್ತು. ಆದರೆ ಹಣದ ಬದಲು ಂದುದೊಂದು ಕಾಗದ: 'ಒಂದು ಪತ್ರಿಕೆ ಹೊರಡಿಸುವ ಗಡಿಬಿಡಿಯಲ್ಲಿದ್ದೇನೆ. ಲ್ಪ ಹಣ ಹೆಚ್ಚು ಖರ್ಚಾಗಿ ಹೋಯಿತು. ಈ ತಿಂಗಳು ನಿಮ್ಮ ಕೈಯಲ್ಲಿ ಣವಿರಬಹುದೆಂದು ನಂಬಿದ್ದೇನೆ. ಇನ್ನು ಹಾಗೆ ನನ್ನ ಹಣ ಬೇಕೇಬೇಕೆಂದಾ ರೆ ಬರೆಯಿರಿ. ಏನಾದರೂ ಕಳುಹಿಸಿಕೊಡಲು ಪ್ರಯತ್ನ ಮಾಡುತ್ತೇನೆ.' ಂದು ಬರೆದಿದ್ದ.

ಅದೇ ಕಾಗದ ತಂದಿದ್ದ ಅಂಚೆಯ ಜವಾನ ಹದಿನೈದು ರೂಪಾಯಿಗಳ ಮನಿಯಾರ್ಡರಿನ ಹಣವನ್ನು ಭಾರತಿಗೆ ಕೊಟ್ಟು ಸಹಿಹಾಕಿಸಿಕೊಂಡು ಮರಳಿದ್ದ.

ಉಡುಪರ ಸ್ವಾಭಿಮಾನಕ್ಕೆ ಕಿಚ್ಚು ಹಚ್ಚಿದಂತಾಗಿತ್ತು. ಆದರೆ ಆಗೊಮ್ಮೆ ಈಗೊಮ್ಮೆ ಅಪರೂಪವಾಗಿ ಸೊಸೆಗೆ ಬರುತ್ತಿದ್ದ ಹತ್ತು ಹದಿನೈದು ರೂಪಾಯಿ ಳು ಅವಳಿಗೆ ಅಗತ್ಯವಿಲ್ಲ ಎಂದು ಹೇಳಲು ನಾಚಿಕೆಯಾಗುತ್ತಿತ್ತು. ಹೀಗಾಗಿ ವರು ಸುಮ್ಮನಿರಬೇಕಾಯಿತು.

ನಾಗಮ್ಮ ಬಂದು, "ಪಾರು ಹೋಗುತ್ತಾಳಂತೆ. ಏನಾದರೂ ಹೇಳಲಿಕ್ಕಿ ಯೇ. ಅವಳು ಬಸುರಿಯೆಂದು ಕಾಣುತ್ತದೆ," ಎಂದು ಹೇಳಿದಾಗ ಉಡುಪರು ಕಣ್ಣರಳಿಸಿ,

"ಆಂ!" ಎಂದರು."

"ಮೂರು ತಿಂಗಳೆಂದು ತೋರುತ್ತದೆ."

"ಹಾಗಾದರೆ ಇನ್ನೊಂದು ಸೀಮಂತದ ಸಂಭ್ರಮ, ಬಾಣಂತಿಯ ಉ
ಚಾರ ಎಲ್ಲ ಆಗಬೇಕಲ್ಲ?"

ಎಂದೂ ಸಿಟ್ಟಿಗೇಳದ ನಾಗಮ್ಮನಿಗೆ ಆ ಮಾತುಗಳನ್ನು ಸಹಿ
ಕೊಳ್ಳುವುದು ಕಷ್ಟವಾಯಿತು.

"ಆ ಮಾತು ಹೇಳಲಿಕ್ಕೆ ಇದು ಸಮಯವೇ?" ಎಂದಿಷ್ಟೇ ಹೇಳಿದರ

ಇದಕ್ಕೆ ಉತ್ತರ ಹೇಳುವುದು ಉಡುಪರಿಗೂ ಸಾಧ್ಯವಾಗಲಿಲ್ಲ. ಪ
ದಲ್ಲಿ ಹಾದುಹೋಗುತ್ತಿದ್ದ ಭಾರತಿಗೆ ಮಾವನ ಮಾತು ಕೇಳಿ ಆದ ಜಿಗು
ಇಷ್ಟೇ ಎಂದು ಹೇಳುವಂತಿರಲಿಲ್ಲ.

ಆದರೆ ಉಡುಪರ ವಿಚಾರ ಬಹಳ ಹಿಂದೆ ಓಡುತ್ತಿತ್ತು. ಪದ್ಮನಾಭನ
ಪುನಃ ಜ್ವರ ಬರತೊಡಗಿದೆ. ಮಗನ ಹಣ ಬರುವುದಿಲ್ಲ.

ಮಗನ ಹಣ ಬರು[illegible]ಲ್ಲ. ಹೆಂಡತಿಯ ಕಡೆಗೆ ದಿನೇ ದಿನೇ ಆತ
ಒಲವು ಹೆಚ್ಚುತ್ತಿದೆ. ಇಂದಲ್ಲ ನಾಳೆ ಮುಂಬಯಿಯಲ್ಲಿ ಆತ ಬಿಡಾರ ಹೂ
ಆಕೆಯನ್ನು ಕರೆಯಿಸಿಕೊಂಡರೆ, ಮತ್ತೆ ಅವನಿಂದ ಸಹಾಯ ನಿಂತಂತೆಯೆ

ಬೇರೆ ಸಹಾಯವಿಲ್ಲ. ಗೋವಿಂದನ ಮೆಟ್ರಿಕ್‌ಗೆ, ಅವನು ಸರಿಯಾ
ಪಾಸಾಗುತ್ತ ಹೋದರೂ, ಇನ್ನೂ ನಾಲ್ಕು ವರ್ಷ.

ಮೆಟ್ರಿಕ್ ಮುಗಿಸಿ ದುಡಿಯಲು ಹೊರಡಬಹುದಾಗಿದ್ದ ಪದ್ಮನಾ
ಹಾಸಿಗೆಯಲ್ಲಿ.

ಅಷ್ಟರ ತನಕ?

ಈ ಮಧ್ಯೆ ಪಾರ್ವತಿ ಗರ್ಭಿಣಿ.

ಪಾರ್ವತಿ ಗರ್ಭಿಣಿ!

ನೆನಪು ಮಾಡಿದಷ್ಟು ಸಲ, ಉಡುಪರಿಗೆ ಮೊದಲನೆಯ ಹಿರಿಗೆಯ
ಅಕಾಲ ಮರಣಕ್ಕೊಳಗಾದ ಹಿರಿಯ ಮಗಳು ಸೀತೆಯ ನೆನಪಾಗುತ್ತಿತ್ತು
ಅವಳ ಮದುವೆಗಾಗಿ ಪಟ್ಟ ಕಷ್ಟ, ಆಮೇಲೆ ಮರಣದ ತನಕ ಅನುಭವಿ
ಕಷ್ಟ ಹಾಗೂ ನಷ್ಟ!

ಪಾರ್ವತಿಯ ಹೆರಿಗೆ—ಚೊಚ್ಚಲು—ಖರ್ಚಿನ ದಾರಿಯೆಂದೇ ಉಡ
ರಿಗೆ ತೀಳಿದಿತ್ತು. ಆದರೆ ಹಣವಿಲ್ಲದಿಂದ ತರಲಿ ಎಂಬುದು ಬಿಡಿಸಲಾ
ಸಮಸ್ಯೆಯಾಗಿತ್ತು.

ಪುನಃ ಸಾಲ ಮಾಡುವುದೆ?

ಹಾಗಾದರೆ ಈ ಸಲದ ಆಸ್ತಿಯ ವಿಕ್ರಯ ಒಂದು ನಿಷ್ಪ್ರಯೋಜಕ ಆಟವಾಯಿತೆ?

ಪಾರ್ವತಿ ಬಂದು ನಮಸ್ಕರಿಸಿ ಹೊರಟಾಗಲೂ ಉಡುಪರು ಮಾತ ನಾಡಲಿಲ್ಲ. ಆದರೂ ಆಕೆ ನಗುತ್ತಲೇ, "ಅಷ್ಟೆಲ್ಲ ಆಲೋಚನೆ ಮಾಡಬಾರದು, ಅಪ್ಪಯ್ಯ. ಕಡೆಗೆ ಯೋಚಿಸಿ ಯೋಚಿಸಿ ಹುಚ್ಚು ಹಿಡಿದು ಅಣ್ಣನ ಹಾಗೆ ನೀವೂ ಸನ್ಯಾಸಿಯಾದರೆ?" ಎಂದು ನಗುತ್ತಲೇ ಭಾರತಿಯ ಕಡೆಗೆ ನೋಡುತ್ತ ಹೇಳಿದಳು. ಆದರೆ ಭಾರತಿಯ ಮುಖದಲ್ಲೂ ಆ ನಗೆ ಪ್ರತಿ ನಗೆಯನ್ನು ತರಿಸುವಷ್ಟು ಪರಿಣಾಮಕಾರಿಯಾಗಿರಲಿಲ್ಲ.

೫

ಇದಾಗಿ ಒಂದು ತಿಂಗಳಲ್ಲಿ ಭಾರತಿ ತನ್ನ ಮಾವನ ಕುರಿತು ಇರಿಸಿದ್ದ ಪೂಜ್ಯಭಾವ ನಶಿಸಿಹೋಗಲು ಕಾರಣವಾಗುವಂಥ ಒಂದು ಘಟನೆ ಜರುಗಿತು.

'ದುರ್ಗಾ ನಮಸ್ಕಾರ'ದ ರಾತ್ರಿ ಬಂದವಳು ಭಾರತಿ ಮತ್ತೆ ಒಂದೂವರೆ ತಿಂಗಳ ತನಕ ತವರಿನ ಕಡೆ ಮುಖ ಹಾಕಿದ್ದಿಲ್ಲ. ಹದಿನೈದು ದಿನ ಪಾರ್ವತಿಯ ಒಡನಾಟವನ್ನು ಬಿಟ್ಟುಹೋಗಲು ಮನಸ್ಸಾಗಲಿಲ್ಲ. ಆ ಸಲ 'ಮುಟ್ಟಾಗು ವಾಗ ಮನೆಗೆ ಹೋಗಬೇಕು.' ಎಂದು ನಿಶ್ಚಯಿಸಿಕೊಂಡಿದ್ದಾಕೆ ಇದೇ ಕಾರಣ ದಿಂದ ಉಳಿದಳು. ಮುಂದಿನ ಸಲ ಖಂಡಿತ ಹೋಗಿ ಒಂದು ಹತ್ತು ದಿನ ಇದ್ದು ಬರುತ್ತೇನೆಂದು ಯೋಚಿಸುತ್ತಿದ್ದಾಗ, ಪದ್ಮನಾಭ ದಿನೇದಿನೇ ಕುಂದುತ್ತ ನಡೆದಿದ್ದುದನ್ನು ಗಮನಿಸಿ ಆಕೆ ಅಧೀರೆಯಾದಳು.

ತನಗೆ ಹಣ ಕಳುಹಿಸದೆ ಹೆಂಡತಿಗೆ ಕಳುಹಿಸಿ ಅನಂತ ತನಗೆ ಅಪಮಾನ ಮಾಡಿದ ಎಂದು ತಿಳಿದಿದ್ದ ಉಡುಪರು ಅಂದಿನಿಂದ ಭಾರತಿಯನ್ನು ನೋಡುವ ದೃಷ್ಟಿಕೋನವನ್ನೇ ಬದಲಿಸಿದ್ದರು. ದೊಡ್ಡವರ ಮನೆಯ ನೆಂಟಸ್ತಿಕೆ ಬಂದಾಗ ಅವರು 'ಬೇಡ' ಎನ್ನಲಿಲ್ಲ. ಆದರೆ ದೊಡ್ಡಸ್ತಿಕೆಯ ದರ್ಪದ ಹುಡುಗಿ ತನ್ನ ಮಗನನ್ನು ತಮ್ಮ ಸಂಸಾರದಿಂದ ಕಸಿದುಕೊಳ್ಳುತ್ತಿದ್ದಾಳೆ ಎಂದು ಅವರ ಮನಸ್ಸನ್ನು ಮುತ್ತಿದ ಸಂದೇಹವೊಂದು ಮಾತ್ರ, ಒಂದು ವಿಷಮ ಆರ್ಥಿಕ ಸೂತ್ರದಲ್ಲಿ ಸಿಕ್ಕುಬಿದ್ದು ನರಳುತ್ತಿದ್ದ ಅವರ ಮನಸ್ಸಿನಿಂದ ಕದಲಲೇ ಇಲ್ಲ.

ಹೀಗಾಗಿ,

"ಯಾರಿಗಾದರೂ ಸ್ಪೆಶ್ಯಲಿಸ್ಟರಿಗೆ ತೋರಿಸಿ. ಮಂಗಳೂರಿನಿಂದ ಯಾ
ನ್ನಾದರೂ ಕರೆಸಿ. ಪದ್ದನನ್ನು ನೋಡುವಾಗ ಹೆದರಿಕೆಯಾಗುತ್ತದೆ, ಮಾವಾ."
ಎಂದು ಒಂದು ದಿನ ಭಾರತಿ ಹೇಳಿದಾಗ,

"ನಿನಗೇಕೆ ಅಧಿಕಪ್ರಸಂಗ? ನನ್ನ ಮಗನನ್ನು ನೋಡಿಕೊಳ್ಳಲ
ನನಗೆ ಯಾರ ಬುದ್ಧಿವಾದವೂ ಅಗತ್ಯವಿಲ್ಲ." ಎಂದು ನಿಷ್ಠುರವಾಗಿಯೆ
ಅವರು ಹೇಳಿದರು.

ಅವರಿಗೆ ಈ ಮಾತು ತಪ್ಪೆಂದು ತಿಳಿದಿತ್ತು. ಭಾರತಿಯ ನಿರ್ವ್ಯಾಜ
ಅಂತಃಕರಣದಿಂದ, ಪದ್ಮನಾಭನ ಕುರಿತಾದ ಕಳಕಳಿಯ ಮಾತುಗಳು ಅವು
ಎಂಬುದೂ ಅವರಿಗೆ ತಿಳಿದಿತ್ತು. ಆದರೆ ಅದನ್ನು ಒಪ್ಪಿಕೊಳ್ಳಲು ಅಭಿಮಾನ
ಬಿಡುತ್ತಿರಲಿಲ್ಲ. ಸಾಲದುದಕ್ಕೆ ಅವರಿಗೆ ಆಗಷ್ಟೆ ದೊರಕಿದ್ದ ಒಬ್ಬ ಹೊಸ
ಪಂಡಿತ, "ಇದು ರಕ್ತದೋಷದಿಂದ ಬಂದ ಕಾಯಿಲೆ ಹೌದು. ಆದರೆ ನಾನು
ಒಂದೇ ತಿಂಗಳಲ್ಲಿ ಗುಣಪಡಿಸಿಕೊಡುತ್ತೇನೆ. ನನ್ನ ಕಷಾಯ ಅಷ್ಟು ಪ್ರಭಾವ
ಕಾರಿ." ಎಂದಿದ್ದ.

ಉಡುಪರ ಆರ್ಥಿಕವ್ಯವಸ್ಥೆಗೆ ಹೊಂದಿಕೊಂಡು ಬಂದ ಈತನ ಮಾತನ್ನು
ಆಧಾರವೆಂದು ಬಗೆದು ನಂಬಿದ ಅವರು ಸೊಸೆಗೆ ಆ ರೀತಿ ಉತ್ತರ ಕೊಟ್ಟಿದ್ದರು.

ಭಾರತಿಗೆ ಮಾವನ ಮಾತಿನಿಂದಾದ ನೋವು ಸ್ವಲ್ಪವಲ್ಲ. ಆಕೆ
ಮಾವನ ಮೇಲಿನ ಪ್ರೀತಿಯಿಂದ ಪದ್ಮನಾಭನ ಆರೈಕೆ ಮಾಡುತ್ತಿರಲಿಲ್ಲ.
ಗಂಡನ ಆದೇಶ, ಆ ಕೃಶವಾದ ವಿಕಾರ ರೂಪಿನ ಮಗು ಹೃದಯದಲ್ಲಿ
ಹುಟ್ಟಿಸುವ ಕನಿಕರದ ಬುಗ್ಗೆ, ಇವೆರಡೂ ಸೇರಿ ಆಕೆ ಪದ್ದನನ್ನು ಅಷ್ಟು
ನೆಚ್ಚಿಕೊಳ್ಳುವಂತೆ ಮಾಡಿದ್ದವು. ಅಂಥ ಪರಿಸ್ಥಿತಿಯಲ್ಲಿ ತುಂಬ ಕಳಕಳಿ
ಯಿಂದ ಕೊಟ್ಟ ಸಲಹೆಗೆ ಈ ಉತ್ತರ!

"ನಿಮ್ಮ ಮಗನನ್ನು ನೋಡಿಕೊಳ್ಳಲು ಚೆನ್ನಾಗಿ ತಿಳಿದಿದ್ದರೆ, ಪದ್ದ
ಒಂದು ವರ್ಷ ಹಾಸಿಗೆಯಲ್ಲಿ ನರಳಬೇಕಾದ ಪ್ರಸಂಗ ಬರುತ್ತಿತ್ತೆಂದು ನನಗೆ
ಅನಿಸುವುದಿಲ್ಲ." ಎಂದು ಧೈರ್ಯದಿಂದಲೇ ಉತ್ತರ ಕೊಟ್ಟಳು.

"ಹಾಗಾದರೆ ನಾನೇ ನನ್ನ ಮಗುವನ್ನು ಕೊಲ್ಲುತ್ತಿದ್ದೇನೆಂದು ನಿನ್ನ
ಅಭಿಪ್ರಾಯವೇ? ಎಂಥ ಧಿಮಾಕಿನ ಮಾತೇ? ದೊಡ್ಡವರ ಮಗಳೆಂದು
ಪಿತ್ಥ ತಲೆಗಡರಿಹೋಗಿದೆಯೇನು?" ಉಡುಪರು ಕೆಂಡದಂತಾಗಿ ಉತ್ತರ
ಕೊಟ್ಟರು.

ಭಾರತಿಯ ಸಂಯಮನ ಕಟ್ಟೆಯೊಡೆದು ಕಣ್ಣೀರು ಬರುವುದರಲ್ಲಿತ್ತು. ಪುನಃ ಹಿಂದಿನದೇ ಪರಿಸ್ಥಿತಿ. ಧೈರ್ಯ ಹೇಳಲು ಅವರ ಕಾಗದವೂ ಇಲ್ಲ. ಈ ಸಲ ಬಂದ ಕಾಗದದಲ್ಲಿಯೂ ಆರಂಭದಿಂದ ಕೊನೆಯ ತನಕ ಯಾವುದೋ ಒಂದು ಪತ್ರಿಕೆಗಾಗಿ ತಾನು ಪಡುತ್ತಿದ್ದ ಪಾಡಿನ ಕುರಿತಾದ ಪುರಾಣ. ಒಂದು ಪಂಕ್ತಿಯನ್ನೂ ಓದುವ ಮನಸ್ಸಾಗದೆ ಹಾಗೆಯೇ ಹರಿದು ಬಿಸಾಡಿದ್ದಳು. ಈಗ ಈ ಮನವೊಗ್ಗದ ತಾಣದಲ್ಲಿ ಮಾವನಿಂದ ಇಂಥ ನಿಷ್ಠೂರದ ಮಾತು.

"ಪಿತ್ಥದ ಉಪದ್ರ ನನಗೆ ತುಂಬ ದಿನಗಳಿಂದ ಇದೆ, ಮಾವಾ. ನಿಮ್ಮ ಮಗನನ್ನು ನೋಡಿಕೊಳ್ಳಲು ನಾನು ಬುದ್ಧಿಹೇಳುವುದು ತಪ್ಪೆಂದು ನನಗೂ ಗೊತ್ತಿದೆ. ಆದರೆ ಪದ್ದನ ಮುಖ ನೋಡಲು ಕಷ್ಟವಾಗುವುದರಿಂದ ಹಾಗೆ ಹೇಳಿದೆ."

"ಹೌದು, ಈ ಸಂಸಾರದಲ್ಲಿ ನಿನಗೆ ಕಾಣುವುದೆಲ್ಲ ಹೇಸಿಗೆಯೆ. ಏನೆಂದರೂ ದೊಡ್ಡಸ್ತಿಕೆಯ ರಕ್ತವಲ್ಲವೆ ? ಪದ್ದನ ಮುಖ ನೋಡಲು ಹೇಸಿಗೆ ಯಾಗುವುದಾದರ ನಿಮ್ಮ ಮನೆಗೇ ಹೊರಟುಹೋಗಬಾರದೆ ?"

ಸೊಸೆ ಇದಿರು ಮಾತನಾಡುತ್ತಿದ್ದುದರಿಂದಲೇ ಕೆರಳಿ, ವಿವೇಕಾವಿವೇಕ ಜ್ಞಾನವಿಲ್ಲದೆ ಉಡುಪರು ಮಾತನಾಡುತ್ತಿದ್ದರು.

"ನಾನು ಆ ಮಗುವಿನ ಮುಖ ನೋಡಿ ಬೇಸರ ಬರುವುದೆಂದು ಹೇಳಲಿಲ್ಲ. ದುಃಖವಾಗುತ್ತದೆಂದು ಹೇಳಿದೆ, ಅಷ್ಟೆ." ಭಾರತಿಯ ಕಣ್ಣಲ್ಲಿ ನೀರು ತುಂಬಿತ್ತು.

ಉಡುಪರು ಆಮೇಲೆ ಮಾತನಾಡಲಿಲ್ಲ. ಕಂಗಾಲಾದ ನಾಗಮ್ಮ ಮಾತ್ರ ಏನು ಮಾಡುವುದೆಂದು ತೋಚದೆ ನಿಂತಿದ್ದರು.

ಹೇಗೂ ಹೊರಗಾಗಲು ದಿನ ಸಮೀಪಿಸಿದೆಯೆಂದು ತಿಳಿದಿದ್ದ ಭಾರತಿ, ಆಗಲೇ ಕೆಲವು ದಿನಗಳ ಮಟ್ಟಿಗೆ ತಾಯಿಯ ಸ್ನೇಹದ ಆಸರೆ ಪಡೆಯುವುದೆಂದು ನಿಶ್ಚಯಿಸಿದ್ದಳು. ಪದ್ದನನ್ನು ಬಿಟ್ಟುಹೋಗಲು ಮನಸ್ಸು ಕೇಳುತ್ತಿರಲಿಲ್ಲ. ಆದರೆ ಅಲ್ಲಿ ನಿಲ್ಲಲು ಸಾಧ್ಯವಾಗುತ್ತಲೇ ಇರಲಿಲ್ಲ. ಹೊರಗಿನಿಂದ ಗಲಭೆ ಕೇಳಿ ಅದೂ ತನ್ನ ಕುರಿತಾದುದು ಎಂದು ತಿಳಿದ ಪದ್ಮನಾಭ ಒಳಗಿನಿಂದ ಕೂಗುತ್ತಿದ್ದ "ಅತ್ತಿಗೆS, ಅತ್ತಿಗೆS" ಎಂದು. ಮೊದಲು ಈ ಕರೆ ಭಾರತಿಗೆ ಕೇಳಿಸಲಿಲ್ಲ. ಆದರೆ ಅವನ ಕೋಣೆಯಲ್ಲಿದ್ದ ತನ್ನವೆರಡು ಸೀರೆಗಳನ್ನೂ, 'ಮುಂದಿನ ಸಲ ಬಂದಾಗ ತೋರಿಸುತ್ತೇನೆ.' ಎಂದು ಗೆಳತಿ ಸುಮಿತ್ರೆಗೆ ಮಾತು ಕೊಟ್ಟಿದ್ದಂತೆ

ತೆಗೆದುಕೊಂಡು ಹೋಗಬೇಕೆಂದು ಮಾಡಿದ್ದ ತನ್ನ ಒಂದು ಜತೆ ಚಿನ್ನದ ಬಳೆಗಳನ್ನೂ ತರಲೆಂದು ಒಳಗೆ ಬಂದಾಗ, ಅಳುತ್ತಿದ್ದ ಪದ್ಮನಾಭನನ್ನು ಕಂಡಳು.

ಭಾರತಿಗೆ ಅಳು ತಡೆಯಲಾಗಲಿಲ್ಲ.

"ನೀನು ಹೋಗುತ್ತೀಯಾ, ಅತ್ತಿಗೆ?" ಎಂದು ಅತ್ಯಂತ ಕ್ಷೀಣ ಸ್ವರದಲ್ಲಿಯೇ ಪದ್ಮನಾಭ ಕೇಳಿದ.

"ಹೋಗದೇನು ಮಾಡುವುದು, ಪದ್ಮಾ. ನಿನ್ನನ್ನು ಬಿಟ್ಟುಹೋಗಲು ಮನಸ್ಸು ಕೇಳುವುದಿಲ್ಲ. ಆದರೆ ನಿಮ್ಮಪ್ಪ ನಾನು ನಿನ್ನ ಶತ್ರುವೆಂದೇ ತೀರ್ಮಾನ ಹಾಗಿದೆ. ನಾಲ್ಕು ದಿನ ಮನೆಗೆ ಹೋಗಿ ಬರುತ್ತೇನೆ. ಅವರಿಗೆ ತಮ್ಮ ತಪ್ಪಿನ ಮನವರಿಕೆಯಾದರೆ ಬಂದು ಒಂದು ಮಾತು ಹೇಳಲಿ. ನಾನೇನೂ ಅಂಥ ಅಪರಾಧ ಮಾಡಿಲ್ಲ." ಎಂದು ಭಾರತಿ ಅಳುತ್ತಲೇ ಹೇಳಿದಳು.

"ನೀನು ಇಲ್ಲಿರದಿದ್ದರೆ, ನಾನು ಮುಗಿದಂತೆಯೆ, ಅತ್ತಿಗೆ. ನೀನು ಇದ್ದರೆ ಅಣ್ಣ ಇರುವಷ್ಟು ಧೈರ್ಯವಿರುತ್ತದೆ. ಇನ್ನು ನನ್ನನ್ನು ಯಾರು ನೋಡಿಕೊಳ್ಳುತ್ತಾರೆ ಅತ್ತಿಗೆ? ಅಮ್ಮನಿಗೆ ಅಷ್ಟು ಮಕ್ಕಳನ್ನು ನೋಡಿಕೊಂಡು ನನ್ನ ಆರೈಕೆ ಮಾಡಲಿಕ್ಕಾಗುತ್ತದೆಯೆ?" ಎಂದು ಬಿಕ್ಕಿಬಿಕ್ಕಿ ಅಳಲಾರಂಭಿಸಿದ.

ಹೊರಗೆ ಉಡುಪರು ಕಲ್ಲಿನಂತೆ ಕುಳಿತಿದ್ದರು—ಒಳಗಿನ ಅಳು ಕೇಳುತ್ತಿದ್ದರೂ ಕೇಳಿಸದಂತೆ.

"ಇಲ್ಲ, ಪದ್ಮಾ. ಬರೇ ನಾಲ್ಕು ದಿನ ಹೋಗಿಬಿಟ್ಟು ಬರುತ್ತೇನೆ. ಅತ್ತೆ ನಿನ್ನನ್ನು ಸರಿಯಾಗಿ ನೋಡಿಕೊಳ್ಳುತ್ತಾರೆ." ಎಂದು ಆತನ ತಲೆಯನ್ನು ಪ್ರೀತಿಯಿಂದ ಸವರಿ, ಭಾರತಿ ತನ್ನ ಬಳೆಗಳನ್ನು ತೆಗೆಯಲೆಂದು ಕಪಾಟಿನ ಬಾಗಿಲು ತೆರೆದಳು.

ಅಲ್ಲಿ ಬಳೆಗಳು ಕಾಣಿಸಲಿಲ್ಲ.

ಭಾರತಿಯ ಅಳು ನಿಂತಿತು. ಬಳೆಗೇಗಾಗಿ ಅತ್ತಿತ್ತ ಹುಡುಕಾಡಿಯೂ ಪ್ರಯೋಜನವಾಗಲಿಲ್ಲ. ಅತ್ತೆ ಎಲ್ಲಿಯಾದರೂ ತೆಗೆದಿರಿಸಿರಬಹುದೆಂದು ಹೊರಗೆ ಬಂದು ನಾಗಮ್ಮನೊಡನೆ, "ನನ್ನ ಬಳೆಯೆಲ್ಲಿವೆ, ಅತ್ತೆ? ನನ್ನ ಸ್ನೇಹಿತೆಯೊಬ್ಬಳಿಗೆ ತೋರಿಸುತ್ತೇನೆಂದು ಹೇಳಿದ್ದೇನೆ. ಸ್ವಲ್ಪ ಕೊಡಿ" ಎಂದಳು.

ನಾಗಮ್ಮನ ಮುಖ ಕಪ್ಪಾಯಿತು. "ನಿನ್ನ ಮಾವನೇ ಎಲ್ಲಿಯೋ ತೆಗೆದಿಟ್ಟಿದ್ದಾರೆಂದು ಕಾಣುತ್ತದೆ. ಅವರನ್ನೇ ಕೇಳಮ್ಮ." ಎಂದರು.

ಭಾರತಿಗೆ ಮಾವನೊಡನೆ ಪುನಃ ಮಾತನಾಡುವ ಮನಸ್ಸಿರಲಿಲ್ಲ.

ಆದರೂ ಯಾವುದೋ ಒಂದು ವಿಚಿತ್ರ ಶಂಕೆ ಅವಳ ಪ್ರಕ್ಷುಬ್ಧ ಮನಸ್ಸಿನಲ್ಲಿ ಕಳವಳ ವೆಬ್ಬಿಸಿತು.

'ನನ್ನ ಬಳೆಗಳ ಜತೆಯನ್ನು ಅಡವಿಡಲು ಕೊಟ್ಟಿದ್ದಾರೇನು?'

ಈ ಸಂದೇಹ ಬಲವಾಗಿ ಆಕೆಯನ್ನು ಕಾಡತೊಡಗಿದುದರಿಂದ, ಆಕೆ ತಡೆಯಲಾಗದ ದುಃಖದಿಂದ ಇನ್ನೂ ಕಲ್ಲಿನಂತೆ ಕುಳಿತಿದ್ದ ಮಾವನೊಡನೆ ಹೋಗಿ ಕೇಳಿದಳು :

"ನಾನು ನಾಲ್ಕು ದಿನ ಮನೆಗೆ ಹೋಗಿ ಬರುತ್ತೇನೆ. ಸ್ವಲ್ಪ ನನ್ನ ಚಿನ್ನದ ಬಳೆ ಎಲ್ಲಿದೆಯೆಂದು ಹೇಳಿ."

ಉಡುಪರು, ಭಾರತಿ ಬೇರೆ ಯಾವುದಾದರೂ ಪ್ರಶ್ನೆ ಕೇಳಿದ್ದರೆ ಆಕೆಯನ್ನು ನುಂಗುವಂತೆ ನೋಡುತ್ತಿದ್ದರು. ಆದರೆ ಈ ಪ್ರಶ್ನೆ ಕೇಳಿ ತಗ್ಗಿಸಿದ ಮುಖವನ್ನು ಮೇಲಕ್ಕೆತ್ತಲಿಲ್ಲ.

"ಎಲ್ಲಿದೆ ಮಾವಾ, ನನ್ನ ಬಳೆ?"

"ನನಗೇನು ಗೊತ್ತು?"

"ಹಾಗಾದರೆ ಯಾರಿಗೆ ಗೊತ್ತು? ನಾನು ತೆಗೆದಿಲ್ಲ, ಅತ್ತೆ ತೆಗೆದಿಲ್ಲ, ನಿಮಗೆ ಗೊತ್ತಿಲ್ಲ. ಹಾಗಾದರೆ ಕಳವಾಗಿ ಹೋಯಿತೇನು?"

"ನಿನ್ನ ಬಳೆ ನಾನು ಕದ್ದಿದ್ದೇನೆಂದು ನಿನ್ನ ಅಂದಾಜಿಯೆ?"

"ನಾನು ಹಾಗೇನೂ ಹೇಳಲಿಲ್ಲ. ಎಲ್ಲಿದೆಯೆಂದು ನಿಮಗೆ ಗೊತ್ತಿದೆಯೆ, ಎಂದು ವಿಚಾರಿಸಿದೆ. ಅಷ್ಟೆ."

"ಎಲ್ಲಿಗೂ ಹೋಗಲಿಕ್ಕಿಲ್ಲ. ಇಲ್ಲಿಲ್ಲವಾದರೆ ಬ್ಯಾಂಕಿನಲ್ಲಿದೆ. ನಾಳೆ ಬಿಡಿಸಿ ತರುತ್ತೇನೆ. ಒಂದು ದಿನ ಚಿನ್ನದ ಬಳೆಯಿಲ್ಲವಾದರೆ ಏನು ನಷ್ಟ ವಾಗಲಿಕ್ಕಿಲ್ಲ."

"ಬ್ಯಾಂಕಿನಲ್ಲಿ? ನನ್ನಪ್ಪ ಮಾಡಿಸಿದ ಚಿನ್ನ?"

"ನಿನ್ನಪ್ಪ ಮಾಡಿಸಿದ ಚಿನ್ನ ನನ್ನ ಮಗನಿಗೆ ಸೇರಿದ್ದು, ಭಾರತೀ. ಅದನ್ನು ಯಾರೂ ಕದ್ದುಕೊಂಡು ಹೋಗಿಲ್ಲ. ನಾಳೆ ಬರುತ್ತದೆ. ಸೊಸೆಯಿಂದಲೂ ಕುಚ್ಚಣಿಕೆಯ ಮಾತು ಕೇಳಬೇಕಾದ ಕಾಲ ಇದು. ದೊಡ್ಡವರ ಮನೆಯ ಹೆಣ್ಣು ತಂದದ್ದಕ್ಕೆ ಪ್ರತಿಫಲ."

ಭಾರತಿಯ ಸಂದೇಹ ನಿಜವಾಗಿತ್ತು. ಅವಳಿಗೆ ಅಳುವುದರ ಹೊರತು ಬೇರೇನು ಮಾಡುವುದೆಂದೂ ತಿಳಿಯಲಿಲ್ಲ.

ಆದರೆ ಮಾವನ ಮಾತಿಗೆ ಉತ್ತರ ಹೇಳದೆ ಹೋಗುವುದು ಆಕೆಯ ಸ್ವಾಭಿಮಾನಕ್ಕೆ ಅವಮರ್ಯಾದೆಯ ವಿಷಯವೆಂದು ಮನಸ್ಸಿಗೆ ಹೊಳೆಯು ತ್ತಿತ್ತು.

ಒಂದೂವರೆ ವರ್ಷ ಗಂಡನೊಂದಿಗೆ ಸಂಸಾರ ಮಾಡಬೇಕೆಂಬ ಆಸೆ ಯಿಂದ ಬಲಿಸಿಕೊಂಡಿದ್ದ ಕಲ್ಪನೆ ಈಗ ಈ ಅತೃಪ್ತಿಯ ಆವರಣದಲ್ಲಿ ಜ್ವಾಲಾ ಮುಖಿಯಂತೆ ಹೊರಬಿತ್ತು.

"ಮೊದಲು ಯೋಚನೆ ಮಾಡಬೇಕಿತ್ತು. ನಾನು ಮದುವೆಯಾಗಿರು ವುದು ನನ್ನ ಗಂಡನನ್ನು. ಈ ಮನೆಯಲ್ಲಿ ನಾನು ಬೇಡವೆಂದಾದರೆ, ನನಗೆ ನನ್ನನ್ನು ಪ್ರೀತಿಸುವ ತಂದೆತಾಯಿಗಳ ತವರಿದೆ. ಕಟ್ಟಿಕೊಂಡವರು ಸಂಸಾರ ಮಾಡಲು ಬಾ ಎಂದು ಕರೆಸಿಕೊಂಡಾಗ ಬರುತ್ತೇನೆ. ನಾನು ಹೋಗಿ ಬರು ತ್ತೇನೆ, ಅತ್ತೆ." ಎಂದು ಭಯಗ್ರಸ್ತರಾಗಿ ನಿಂತಿದ್ದ ನಾಗಮ್ಮನಿಗೆ ನಮಸ್ಕರಿಸಿ, ಕೈಲಿ ಹಿಡಿದಿದ್ದ ಎರಡು ಸೀರೆಗಳ ಗಂಟನೊಂದಿಗೆ ಭಾರತಿ ಮಾವನ ಮನೆ ಬಿಟ್ಟು ನಡೆದಳು.

ಅವಳು ತಾಯಿಯ ಮನೆ ತಲುಪುವವರೆಗೂ ಪದ್ಮನಾಭನ ಕೂಗು ಅವಳ ಹೃದಯದಲ್ಲಿ ಪ್ರತಿಧ್ವನಿಸುತ್ತಿತ್ತು :

'ನೀನು ಹೋದರೆ ನಾನು ಉಳಿಯುವುದಿಲ್ಲ, ಅತ್ತಿಗೆ.'

೬

ಕೋರ್ಟು ಮುಗಿಸಿ ಮನೆಗೆ ಮರಳುವಾಗ ಶ್ರೀಪತಿರಾಯರಿಗೆ ವಿಪರೀತ ಆಯಾಸವಾಗಿದ್ದಿತು.

ಈಗೊಂದು ತಿಂಗಳಿಂದ ಈ ಆಯಾಸ ನಿತ್ಯದ ಮಾತಾಗಿತ್ತು. ಭಾನು ವಾರ ಕೂಡಾ ಬಿಡುವು ದೊರಕದಷ್ಟು ವಿಪರೀತ ಕೆಲಸ. ರಾತ್ರೆ ಒಂದರ್ಧ ತಾಸು ಮಡದಿ ಮಕ್ಕಳೊಡನೆ ಮಾತನಾಡಲು ಅವಕಾಶ ಸಿಗದಷ್ಟು ಕೆಲಸ— ಮಧ್ಯರಾತ್ರಿಯ ತನಕ. ಮುಂಜಾವಿನ 'ವಾಕಿಂಗ್' ವೇಳೆಯಲ್ಲಿ ಮಾತ್ರ ತುಸು ಏಕಾಂತಚಿಂತನೆಗೆ ಅವಕಾಶ. ಆದರೆ ಮಗಳು ಭಾರತಿಯ ಮನೆಯ ತನಕ ಹೋಗಿ ಬರುವುದು ರಜಾ ದಿನಗಳಲ್ಲೂ ಸಾಧ್ಯವಾಗಿರಲಿಲ್ಲ.

ಈ ನಡುವೆ ಏಳೆಂಟು ದಿನ ಮಂಗಳೂರಿನ ತನಕ ಹೋಗಿಬರಬೇಕಾದ

ಸಂದರ್ಭವೊಂದು ಒದಗಿಬಂದಿತ್ತು—ಸುನಂದೆಯ ಮದುವೆಯ ಕುರಿತಾದ ಮಾತುಕತೆಗಳಿಗಾಗಿ.

ಈ ಆಯಾಸ, ಗಡಿಬಿಡಿಗಳ ನಡುವೆ ಅವರ ಮನಸ್ಸಿಗೆ ಸಮಾಧಾನ ಕೊಡುತ್ತಿದ್ದ ವಿಚಾರನೆಂದರೆ ಅದೊಂದೇ—ಮುಂದಿನ ಮೇಯಲ್ಲಿ ಹುಡುಗ ಒಪ್ಪಿದರೆ, ಸುನಂದೆಯ ಮದುವೆ ಆದಂತೆಯೇ.

ತುಂಬ ಕೆಲಸದಿಂದ ರಾಯರು ಎಂದೂ ಬೇಸರಿಸಿಕೊಂಡವರಲ್ಲ. ಕೆಲಸ ಹೆಚ್ಚಾದಷ್ಟು ಅವರಿಗೆ ಸಂತೋಷವೆ. ವರಮಾನದ ದೃಷ್ಟಿಯಿಂದ ಮಾತ್ರ ಅವರು ತಮ್ಮ ಕೆಲಸವನ್ನು ಈ ರೀತಿ ಪ್ರೀತಿಸುತ್ತಿದ್ದರೆಂದಲ್ಲ. ವಕೀಲಿವೃತ್ತಿಯಲ್ಲಿ ಅವರಿಗೆ ದೊರಕುತ್ತಿದ್ದ ತನ್ಮಯತೆಯಲ್ಲಿ ಅವರು ವಿಚಿತ್ರ ರೀತಿಯ ಸುಖವನ್ನನುಭವಿಸುತ್ತಿದ್ದರು. ಆದರೂ ಕೆಲಸ ಹೆಚ್ಚಿದಂತೆಲ್ಲ ಮನಸ್ಸಿನಲ್ಲಿ ಒಂದು ಆಲೋಚನೆ ಸುಳಿಯುತ್ತಿತ್ತು. ಅನಂತ ಲಾ ಮುಗಿಸಿದ್ದರೆ, ತಮಗೆ ಸಹಾಯ ಮಾಡುತ್ತಿದ್ದ. ತಮ್ಮ ಅನಂತರ ತಮ್ಮ ಸ್ಥಾನಕ್ಕೆ ಬರುತ್ತಿದ್ದ, ಎಂದು ಅವರು ಯೋಚಿಸಿದ್ದುದು ಒಂದೆರಡು ಬಾರಿಯಾಗಿರಲಿಲ್ಲ. ನಾಲ್ಕು ವರ್ಷಕಾಲ ಈ ಆಸೆಯನ್ನು ಯಾರಿಗೂ ತಿಳಿಸದೆ ಅವರು ಹೃದಯದಲ್ಲಿ ಬೆಳೆಸಿಕೊಂಡಿದ್ದರು. ತಮ್ಮ ಆದರ್ಶ ಮೂರ್ತಿ, ಮನೆಗೆ ಅಳಿಯನಾಗಿ, ಕೆಲಸದಲ್ಲಿ ಒಡನಾಡಿಯಾಗಿ ಬರುವಾಗ ತಮ್ಮ ಜೀವನದ ಮಧ್ಯಾಹ್ನದ ದಿನಗಳು ಅತ್ಯಂತ ಸಂತೋಷದಿಂದ ಸಾಗಬಹುದು ಎಂದು ಒಂದು ಕಾಲದಲ್ಲಿ ನಂಬಿದ್ದರು.

ಆದರೆ ೧೯೪೨ರ ಆಗಸ್ಟ್ ಕ್ರಾಂತಿ ಅವರ ಕನಸನ್ನು ಒಡೆಯಿತು. ಅನಂತ ಬಿ.ಎ. ಮುಗಿಸುವುದು ಸಾಧ್ಯವಾಗಲಿಲ್ಲ.

ಈ ಕನಸಿನಲ್ಲಿ ತಮ್ಮ ಸ್ವಾರ್ಥವೇ ಹೆಚ್ಚಾಗಿದ್ದಿತೆಂದು ತಿಳಿದುದು ಅವರಿಗೆ ಆಮೇಲೆಯೆ.

ಕ್ರಮಬದ್ಧ ವ್ಯಾಸಂಗಕ್ಕೆ ಈ ರೀತಿಯ ಅನಿರೀಕ್ಷಿತ ಮುಗಿತಾಯ ಬಂದಿತೆಂದು ಅನಂತನೇ ನೊಂದುಕೊಳ್ಳಲಿಲ್ಲನೆಂದಾದ ಮೇಲೆ ತಾವು ಆ ಕುರಿತು ಯೋಚಿಸುವುದು ತಪ್ಪೆಂದು ರಾಯರಿಗೆ ಮನವರಿಕೆಯಾಯಿತು.

ಅನಂತ ಅವರ ಆದರ್ಶ ಮೂರ್ತಿಯೇ ಆಗಿ ಉಳಿದನಾದರೂ, ತಮ್ಮ ವೃತ್ತಿಬಂಧುವಾಗಿ, ಸಹಾಯಕನಾಗಿ ಯಾರು ಸಿಗಬಹುದೆಂದು, ಭಾರತಿಯ ಮದುವೆಯಾದ ಮೇಲೆ ಶ್ರೀಪತಿರಾಯರು ತುಂಬ ವಿಚಾರ ಮಾಡಬೇಕಾಗಿ ಬಂದಿತ್ತು.

ಸದಾ ಇನ್ನೂ ಚಿಕ್ಕ ಹುಡುಗ.

ಹೀಗಾಗಿ ಸುನಂದೆಗೆ ವರಶೋಧನೆಗೆ ತೊಡಗಿದಾಗ, ರಾಯರು ವಕೀಲಿ ವ್ಯವಸಾಯದ ಹೊರಗೆ ಯಾರಾದರೂ ಯೋಗ್ಯ ಹುಡುಗರಿರಬಹುದೇ ಎಂದು, ಯೋಚಿಸಲೇ ಇಲ್ಲ—ಭಾರತಿಯ ಮದುವೆಯ ಸಮಯ ಅನಂತನನ್ನು ಬಿಟ್ಟು ಬೇರಾರಾದರೂ ಹುಡುಗರಿರಬಹುದೇ ಎಂದು ಯೋಚಿಸದಿದ್ದಂತೆ.

ಪುಣ್ಯವಶಾತ್ ಅವರ ವರಾನ್ವೇಷಣ ಫಲಕೊಟ್ಟಿತು. ಆ ವರ್ಷ ಲಾ ವ್ಯಾಸಂಗ ಮುಗಿಸಲಿದ್ದ, ಮಂಗಳೂರಿನ ಒಬ್ಬ ಗಣ್ಯ ವಕೀಲರ ಮಗ ರಾಧಾಕೃಷ್ಣ ಸುನಂದೆಗೆ ಯೋಗ್ಯ ವರನಾಗಿ ರಾಯರ ದೃಷ್ಟಿಪಥದಲ್ಲಿ ನಿಂತ. ಈ ಕುರಿತಾದ ಮಾತುಕತೆಗಳೂ ಯಶಸ್ವಿಯಾಗಿ ಕೊನೆಗಂಡವು.

ತುಂಬ ಕೆಲಸದ ಆಯಾಸದ ನಡುವೆ ಮನಸ್ಸಿಗೆ ಸಮಾಧಾನದ ಸಂಜೀವಿನಿಯಾಗಿ ಉಳಿದಿತ್ತು, ಈ ಆಸೆ.

ಅನಂತನ ಕಾಗದಗಳು ಅಪರೂಪವಾಗತೊಡಗಿದುದರಿಂದುಂಟಾದ ಅತೃಪ್ತಿ, ಭಾರತಿಯ ಮಾವನ ಆರ್ಥಿಕ ಪರಿಸ್ಥಿತಿಯಿಂದುಂಟಾದ ಕಳವಳ, ಹಿರಿಮಗಳನ್ನು ಬಹಳ ದಿನಗಳಿಂದ ನೋಡದೆ ಇದ್ದುದರಿಂದಾದ ಕಸವಿಸಿ, ಆಕೆ ಹಿಂದಿನ ಬಾರಿ ಮನೆಗೆ ಬಂದಾಗ ನೊಂದುಕೊಳ್ಳಬೇಕಾಗಿ ಬಂದಂಥ ಪ್ರಸಂಗವೊಂದು ಜರುಗಿದುದರಿಂದಾದ ಬೇಸರ, ಇವೆಲ್ಲವುಗಳನ್ನು ಮರೆಸಲು ಈಗ ಸುನಂದೆಯ ಮದುವೆಯೊಂದು ಮುಂದಿನ ಮೇಯ ಹಬ್ಬವಾಗಿ ರಾಯರ ಕಣ್ಣೆದುರು ನಿಂತಿತ್ತು.

ಮಾಮೂಲಿನಂತೆ ಮೂರು ನಾಲ್ಕು ಜನ ಕಕ್ಷಿಗಾರರು ರಾಯರ ಬೆನ್ನು ಹಿಡಿದು ಬಂದಿದ್ದರು. ಮೈದಾನದ ತನಕ ಸ್ವಲ್ಪ ಸುತ್ತಾಡಿ ಬರೋಣವೆಂದು ಯೋಚಿಸಿದ್ದ ರಾಯರಿಗೆ ಅದೂ ಸಾಧ್ಯವಿರಲಿಲ್ಲ. ಮನೆಗೆ ಬಂದವರೇ ಕೋಟು ರುಮಾಲು ಕಳಚಿಟ್ಟು, ಗೌರಮ್ಮ ತಯಾರಾಗಿರಿಸಿದ್ದ ಕಾಫಿ ಕುಡಿದು ಬಂದು ತಮ್ಮ ಆಫೀಸು ಕೋಣೆಯಲ್ಲಿ ಎಲೆಯಡಿಕೆಯ ತಟ್ಟೆಯನ್ನು ಇದಿರಿಗಿರಿಸಿಕೊಂಡು ಹರಟೆ ಹೊಡೆಯುತ್ತಿದ್ದಾಗಲೇ ಭಾರತಿ ಮನೆಯಂಗಳವನ್ನು ಹಾದು ಕೊಂಡು, ಮೇಲೆ ಮುಖಮಂಟಪಕ್ಕೆ ಬಂದು ಒಳಗೆ ಹೋದುದು ರಾಯರ ಗಮನಕ್ಕೆ ಬಂದಿತು.

ಮಗಳ ಮುಖ ಕಂಡೇ ರಾಯರು ಕುರ್ಚಿ ಬಿಟ್ಟೆದ್ದರು. "ಭಾರೀS" ಎಂದು ಅಲ್ಲಿಂದಲೇ ಕರೆದರು. ಆದರೆ ಭಾರತಿ ಇವರು ನಿಂತಿದ್ದಲ್ಲಿಗೆ ಬರಲಿಲ್ಲ.

ಇದರಿಂದ ರಾಯರ ಕಳವಳ ಇನ್ನಷ್ಟು ಹೆಚ್ಚಿತು.

ಭಾರತಿಯನ್ನು ಅವರು ಆ ರೀತಿ ಎಂದೂ ನೋಡಿರಲಿಲ್ಲ.

ತಲೆಯೆಲ್ಲ ಕೆದರಿತ್ತು. ಅತ್ತುದರಿಂದ ಮುಖವೆಲ್ಲ ಊದಿಕೊಂಡಿತ್ತು. ನಿತ್ಯ ಉಡುವ ಸೀರೆಯಲ್ಲಿ, ಕೈಲೊಂದು ಪುಟ್ಟ ವಸ್ತ್ರದ ಗಂಟನ್ನು ಹಿಡಿದುಕೊಂಡು ಬಂದ ಮಗಳನ್ನು ಕಂಡಾಗ ರಾಯರ ಮನಸ್ಸಿನಲ್ಲಿ ದೊಡ್ಡ ಕೋಲಾಹಲವೇ ಉಂಟಾಯಿತು.

ಮಾತು ನಿಲ್ಲಿಸಿದ ರಾಯರು, ಕಕ್ಷಿಗಾರರೊಡನೆ "ಮಗಳು ಬಂದಿದ್ದಾಳೆ, ಸ್ವಲ್ಪ ವಿಶೇಷ ಕೆಲಸವಿದೆ." ಎಂದು ಅವರನ್ನು ಕಳಿಸಿ ಒಳಗೆ ಬಂದಾಗ ತಾಯಿಯನ್ನು ತಬ್ಬಿಕೊಂಡು ಮಗಳು ಅಳುತ್ತಿದ್ದ ದೃಶ್ಯ ಕಣ್ಣಿಗೆ ಬಿತ್ತು.

"ಭಾರೀ, ಏನಾಯಿತೇ? ಏನಾಗಿದೆಯೇ? ಸೌಖ್ಯವಿಲ್ಲವೆ? ಹೇಳಿಕಳಿಸಬಾರದಿತ್ತೇನೇ?"

ಭಾರಿಯ ಅಳು ನಿಂತಿರಲಿಲ್ಲ. ಗೌರಮ್ಮನ ಕಣ್ಣಿಂದಲೂ ನೀರೊಸರುತ್ತಿತ್ತು. ಮಗಳಿಂದ ಉತ್ತರ ಬಾರದುದನ್ನು ಕಂಡು ಹೆಂಡತಿಯೊಡನೆ ವಿಚಾರಿಸಿದರು.

"ಏನಾಯಿತೆ?"

ಗೌರಮ್ಮ ಗಂಡನಿಗೆ ಉತ್ತರ ಕೊಟ್ಟರು :

"ನಿಮ್ಮ ನೆಂಟರ ದೊಡ್ಡಸ್ತಿಕೆಯನ್ನು ಹೇಳುತ್ತಿದ್ದಾಳೆ, ಭಾರಿ. ಮೊನ್ನೆ ನೀವು ಮಾಡಿಸಿದ ಚಿನ್ನದ ಬಳೆ, ಅಡವಿಗೆ ಹೋಗಿದೆಯಂತೆ. ಕೊಟ್ಟ ಹೆಣ್ಣು ಕುಲದಿಂದ ಹೊರಗೆ—ಎಂದು ಈಗ ಅತ್ತೇನು ಪ್ರಯೋಜನ?"

ಯಾರು ಅಡವಿಗೆ ಹಾಕಿದ್ದು, ಉಡುಪರೇ? ಆಸ್ತಿ ಮಾರಿದ ಹಣವೂ ಸಾಕಾಗಲಿಲ್ಲವೇನು? ಅದೇನೇ ಇದ್ದರೂ ಇಷ್ಟಕ್ಕೆ ಅಳುತ್ತ ಓಡಿಬರಬೇಕೇ— ಅದೂ ಭಾರತಿಯಂಥ ಕಲಿತ ಹುಡುಗಿ?"

ಒಂದೆಡೆ ರಾಯರಿಗೆ ಅಪಮಾನವಾಗಿತ್ತು ಉಡುಪರಿಂದ. ಇನ್ನೊಂದೆಡೆ ಅಪಮಾನವಾಗಿತ್ತು—ಭಾರತಿ ಇಂಥ ಒಂದು ಕ್ಷುಲ್ಲಕ ವಿಚಾರಕ್ಕಾಗಿ ಅಳುತ್ತ ಓಡಿ ಬಂದಿದಾಳೆ, ಎಂದು. ಆ ಕಾರಣ ಸ್ವಲ್ಪ ಸಿಟ್ಟಿನಿಂದಲೇ ಅವರ ಮಾತು ಹೊರಟಿತ್ತು.

"ಸೊಸೆಯ ಚಿನ್ನವನ್ನು ಅಡವಿಟ್ಟು, ಸಂಭಾವಿತತನ ತೋರಿಸಿ, ಸಿಕ್ಕಾಬಟ್ಟೆ ಬಯ್ಯಲು ಸುರು ಮಾಡಿದರೆ, ಮತ್ತೇನು ಮಾಡಬೇಕಿತ್ತೋ?"

ಮಗಳಿಗೆ, ಗಂಡನಿಂದ ಸಹಾನುಭೂತಿ ಸಿಗಬಹುದು ಎಂದು ನಿರೀಕ್ಷಿಸಿದ್ದ ಗೌರಮ್ಮ ಅವರ ಉತ್ತರದಿಂದ ಬೇಸರಗೊಂಡು ಈ ಮಾತು ಹೇಳಿದರು.

"ಅಲ್ಲಿ ಆದದ್ದಾದರೂ ಏನು ಹೇಳಲ್ಲ. ಇಬ್ಬರೂ ಅಳುತ್ತ ನಿಂತು ಬಿಟ್ಟರೆ ನಾನೇನು ಯೋಚನೆ ಮಾಡಬೇಕು? ಏನಾಯಿತೇ, ಭಾರೀ? ಮಾವ ಏನು ಹೇಳಿದರೇ?" ಎಂದು ರಾಯರು ಮಗಳನ್ನುದ್ದೇಶಿಸಿ ಕೇಳಿದರು.

ಆದರೆ ಭಾರತಿಯ ಅಳು ನಿಲ್ಲಲಿಲ್ಲ. ಭಾರತಿ ತಾಯಿಗೆ ಅಳುತ್ತಲೇ ತಿಳಿಸಿದ್ದ ಸುದ್ದಿಯನ್ನು ಗಂಡನೆದುರಿಗೆ, ಮಗಳ ಪಕ್ಷವನ್ನೇ ವಹಿಸಿ ಬಣ್ಣಿಸಿದ್ದು ಗೌರಮ್ಮನೇ.

ಕೇಳುತ್ತ ಹೋದಂತೆ, ಎಷ್ಟೋ ವರ್ಷಗಳು ಕಳೆದ ಮೇಲೆ ಮೊದಲ ಬಾರಿಗೆ ರಾಯರ ಹೃದಯದಲ್ಲಿ ವಿಚಾರವಿಪ್ಲವ ಆರಂಭವಾಯಿತು.

ಪದ್ಮನಾಭನ ಅಸ್ವಸ್ಥತೆಯ ವಿಚಾರ ಅವರಿಗೆ ತಿಳಿದಿತ್ತು. ಆದರೆ ಉಡುಪರು ತಮ್ಮ ಸಲಹೆಗಳಿಗೆ ಕಿವಿಗೊಡುವ ಸ್ಥಿತಿಯಲ್ಲಿಲ್ಲ ಎಂದು ತಿಳಿದೊಡನೆ ಆ ವಿಚಾರ ಮಾತನಾಡುವುದನ್ನು ಬಿಟ್ಟುಬಿಟ್ಟಿದ್ದರು. ಅನಂತನಿಗೆ ಬರೆಯುವುದರಿಂದ, ಅವನು ಇನ್ನಷ್ಟು ಕೊರಗುತ್ತ ಕುಳಿತುಕೊಳ್ಳಬಹುದಲ್ಲದೆ ಬೇರೆ ಏನನ್ನೂ ಮಾಡಲಾರ ಎಂದು ಅವನಿಗೆ ಈ ವಿಚಾರ ಅವರು ಏನೂ ಸಲಹೆ ಕೊಡಲಿಲ್ಲ. ಭಾರತಿ ಆ ಮನೆಯ ಕೆಲಸ ಬೊಗಸೆಗಳಲ್ಲಿ ಸೋತುಹೋಗುತ್ತಿರುವುದೂ ಅವರಿಗೆ ತಿಳಿದಿತ್ತು. ಆದರೆ ತಮ್ಮ ಬಾಲ್ಯದ ಕಷ್ಟದ ದಿನಗಳನ್ನು ನೆನಸಿಕೊಂಡು, ಇಂಥ ಕಷ್ಟ ಮುಂದಿನ ಸುಖಕ್ಕೆ ದಾರಿ ಮಾಡಿಕೊಡುತ್ತದೆ, ಎಂದು ಸಮಾಧಾನ ತಂದುಕೊಂಡಿದ್ದರು.

ಅನಂತನ ಕುರಿತು ಅವರಿಗಿದ್ದ ಅಚಲ ವಿಶ್ವಾಸ ಇಂದಿಗೂ ಕರಗಿರಲಿಲ್ಲ.

ಆದರೆ ಈಗ ಮಗಳು ಭಾರತಿ ಮಾವನೊಂದಿಗೆ ಜಗಳವಾಡಿ, ಗಂಡ ಕರೆಸಿಕೊಳ್ಳುವ ತನಕ ತಾನು ಬರುವುದಿಲ್ಲ ಎಂದು ಹೇಳಿ ಬಂದಿದ್ದಾಳೆ, ಎಂದು ತಿಳಿದಾದ ಅವರಿಗಾಗ ವೇದನೆ ಅಷ್ಟಿಷ್ಟಲ್ಲ.

ಜಗಳದ ಒಂದು ಬದಿಯ ಚಿತ್ರ ಮಾತ್ರ ಅವರಿಗೆ ದೊರಕಿತ್ತು. ಉಡುಪರು ಸೊಸೆಯೊಡನೆ ರೇಗುವಂತೆ ಅವರನ್ನು ಪ್ರೇರೇಪಿಸಿದ ಸಂದರ್ಭಗಳಾವುವೆಂಬುವರ ಜ್ಞಾನ ರಾಯರಿಗೆ ಇರಲಿಲ್ಲ. ಆ ಕಾರಣ ಅವರು ತಮ್ಮ ವೃತ್ತಿಸಹಜ ತರ್ಕಬುದ್ಧಿಯಿಂದ ಯಾವುದೊಂದು ನಿರ್ಣಯಕ್ಕೆ ತಲಪಲಿಲ್ಲ.

ಮನಸ್ಸಿಗೆ ಅತೀವ ವೇದನೆಯಾಗುತ್ತಿದ್ದರೂ, ಇಷ್ಟು ದಿನ ಸುಖ

ದಿಂದಲೇ ಸಾಗಿದ್ದ ಸಂಸಾರದಲ್ಲಿ ಒಮ್ಮಿಂದೊಮ್ಮೆಗೆ ಅನಿರೀಕ್ಷಿತ ಬಿರುಗಾಳಿಯೊಂದು ಸುಳಿಯಿತೆಂಬಂತೆ ಅವರಿಗೆ ಭಾಸವಾಗಿದ್ದರೂ, ತುಂಬ ವಿಶ್ವಾಸದಿಂದಲೇ ಮಗಳೊಡನೆ ಹೇಳಿದರು :

"ನೀನು ಅಳಬಾರದು, ಭಾರೀ. ಮಾವ ಏನೋ ಬೈದರೆಂದು ಅದನ್ನೆಲ್ಲ ಮನಸ್ಸಿಗೆ ಹಚ್ಚಿಕೊಳ್ಳುವುದೆ? ಒಂದು ಜತೆ ಚಿನ್ನದ ಬಳೆ ಹೋದರೇನಂತೆ? ನಿನಗೆ ಅಷ್ಟು ಪ್ರೀತಿ ಆ ಬಳೆಗಳ ಮೇಲಿದೆಯಾದರೆ ಸುನಂದೆಯ ಮದುವೆಯ ಚಿನ್ನ ಮಾಡಿಸುವಾಗ ಇನ್ನೊಂದು ಜತೆ ನಾನೇ ಮಾಡಿಸುತ್ತೇನೆ. ಅದಕ್ಕಾಗಿ ಬೇಸರಪಟ್ಟುಕೊಳ್ಳುವದೇ? ತುಂಬ ಕೆಲಸದಿಂದ ನೀನು ಸೋತುಹೋಗಿರಬಹುದು. ನಾಲ್ಕು ದಿನ ಇಲ್ಲೇ ಇರು. ಆಗ ಎಲ್ಲ ಸರಿಯಾಗುತ್ತದೆ. ಹಾಗೆ ಬೇಕಾದರೆ ನಾನು ನಾಳೆಯೇ ಉಡುಪರನ್ನು ಕಂಡುಬರುತ್ತೇನೆ. ವ್ಯವಹಾರದಲ್ಲಿ ನಯ ಹೆಚ್ಚಿದಷ್ಟು ಸಂಸ್ಕಾರ ಹೆಚ್ಚುತ್ತ ಹೋಗುತ್ತದೆ, ಅಮ್ಮಣ್ಣಿ. ಇದಕ್ಕೆಲ್ಲ ಅಳುವುದೇ?"

ಭಾರತಿ ಈಗ ಮಾತನಾಡಿದಳು :

"ನನಗೆ ಅಲ್ಲಿರುವುದು ಸಾಧ್ಯವಿಲ್ಲ, ಅಪ್ಪ. 'ಅವರು' ಕರೆಸಿಕೊಳ್ಳುವಾಗ ಬರುತ್ತೇನೆಂದು ಹೇಳಿ ಬಂದಿದ್ದೇನೆ. ನನಗೆ ಅಲ್ಲಿರಲು ಸಾಧ್ಯವೇ ಇಲ್ಲ."

ತನ್ನ ಮಗಳಿಂದಲೇ ಈ ಮಾತು ಬರುತ್ತಿದೆಯೇ, ತನ್ನ ಮುದ್ದಿನ ಮಗಳು ಈ ರೀತಿ ಮಾತನಾಡುತ್ತಿದ್ದಾಳೆಯೇ ಎಂದು ರಾಯರಿಗೆ ಸಂದೇಹವಾಯಿತು. ಆದರೆ ತಮ್ಮ ಮನಸ್ಸಿನ ಯಾವ ಭಾವವನ್ನೂ ಅವರು ತೋರಗೊಡಲಿಲ್ಲ.

"ನೀನು ಅಳಬೇಡ, ಭಾರೀ. ನೀನು ಅತ್ತು ನಿನ್ನ ಅಪ್ಪನಿಗೆ ಎಷ್ಟು ದುಃಖ ಕೊಡುತ್ತಿರುವಿಯೆಂದು ತಿಳಿದಿಲ್ಲ. ನೀನು ಅಳುವುದನ್ನು ನಿಲ್ಲಿಸು. ಎಲ್ಲ ಸರಿಯಾಗುತ್ತದೆ" ಎಂದವರೇ ಅಲ್ಲಿಂದ ಹೊರಟು ತಮ್ಮ ಆಫೀಸು ಕೋಣೆಗೆ ಬಂದರು.

ಒಳಗೆ ಬಂದು ಕುಳಿತ ರಾಯರಿಗೆ ಒಮ್ಮಿಂದೊಮ್ಮೆಗೇ ತಮ್ಮ ಸಂಸಾರದಲ್ಲಿ ಇದಾವ ವಿಷಗಾಳಿ ಸುಳಿಯಿತೆಂದು ಯೋಚನೆ ಆರಂಭವಾಯಿತು.

ಭಾರತಿಯ ವರ್ತನೆಯ ಸಾಮಾಜಿಕ ಪ್ರತಿಕ್ರಿಯೆಗಳ ಕುರಿತು, ಅನಂತ-ಭಾರತಿಯರ ಸಂಸಾರದಲ್ಲಿ ಇದರಿಂದಾಗಬಹುದಾದ ಪ್ರತಿಕ್ರಿಯೆಗಳ ಕುರಿತು ರಾಯರು ಯೋಚಿಸತೊಡಗಿದ್ದು ಈಗಲೇ.

ಎರಡು ಪವನಿನ ಚಿನ್ನದ ಬಳೆ ಮಗಳಿಗೆ ಮಾಡಿಸುವಾಗ ಆ ಶ್ವೇತ ವರ್ಣದ ಕೈಗೆ ಅದು ಚೆನ್ನಾಗಿ ಒಪ್ಪುತ್ತದೆಯೆಂಬುದಷ್ಟೇ ರಾಯರ ಆಸೆಯಾಗಿದ್ದಿಲ್ಲ. ಅನಂತ ಸದ್ಯ ಚಿನ್ನಗಿನ್ನದ ವಿಚಾರ ಹಚ್ಚಿಕೊಳ್ಳುವಷ್ಟು ಸಮರ್ಥನಿಲ್ಲ; ಆ ಕಾರಣ ತಮ್ಮ ಮಗಳ ಸೌಂದರ್ಯಪ್ರಜ್ಞೆಗೆ ನೋವಾಗದಂತೆ ಆರ್ಥಿಕ ಸಹಾಯ ತಮ್ಮಿಂದಲೇ ಆಗಬೇಕಾಗಿದೆಯೆಂದು ಅವರಿಗೆ ತಿಳಿದಿತ್ತು. ಇಂದು ಅದೇ ಚಿನ್ನ ಬ್ಯಾಂಕಿನಲ್ಲಿದೆ.

ಮಗಳ ಚಿನ್ನ—ತಾವು ಮಾಡಿಸಿದುದರಿಂದ, ಉಡುಪರಿಗೆ ಅದರ ಮೇಲೆ ಅಧಿಕಾರವಿಲ್ಲ ಎಂದು ಹೇಳುವಷ್ಟು ಸಂಸ್ಕಾರಹೀನ ಮನಸ್ಸು ಶ್ರೀಪತಿರಾಯರದಾಗಿರಲಿಲ್ಲ. ಆದರೂ ಉಡುಪರು ಸೊಸೆಯನ್ನು ಕೇಳದೆಯೇ ಹಾಗೆ ಮಾಡಬಾರದಾಗಿತ್ತು, ಎಂದು ಅವರಿಗೆ ತೋರಿತು. ಆದರೆ ಮರುಕ್ಷಣದಲ್ಲೇ ಅನಂತನ ತ್ಯಾಗಬುದ್ಧಿಯ ಆದರ್ಶ ಕಣ್ಣೆದುರು ಬಂದಂತಾಗಿ, ಈ ಕ್ಷುಲ್ಲಕ ವಿಚಾರಕ್ಕಾಗಿ ಇಷ್ಟು ದುಃಖವೇ ಎಂದು ಅವರು ಭಾವಿಸುವಂತಾಯಿತು.

ಎಷ್ಟೋ ವರ್ಷಗಳ ಹಿಂದಿನ ಘಟನೆಯೊಂದು ನೆನಪಿಗೆ ಬರುತ್ತಿತ್ತು:

ಅನಂತನ ಪರಿಚಯವಾಗಿ ಆಗ ಒಂದು ವರ್ಷವಾಗಿತ್ತಷ್ಟೆ. ಇನ್ನೂ ಮೆಟ್ರಿಕ್ ಮುಗಿಸದ ವಿದ್ಯಾರ್ಥಿ. ತಮ್ಮ ಶಾಲೆಯ ವಾರ್ಷಿಕ ದಿನಾಚರಣೆಯ ಅಧ್ಯಕ್ಷತೆ ವಹಿಸಬೇಕು ಎಂದು ಕೇಳಲು ಬಂದಿದ್ದ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಅನಂತನ ಹರಕಲು ಅಂಗಿಯನ್ನು ಕಂಡು ಬೇಸರಗೊಂಡು, ಅವನ ಕೈಯಲ್ಲಿ ಮೂವತ್ತು ರೂಪಾಯಿ ಕೊಟ್ಟಿದ್ದರು. 'ನೀನು ಈ ಹಣದಲ್ಲಿ ಒಳ್ಳೆಯ ಬಟ್ಟೆ ಹೊಲಿಸಿಕೊಂಡು ನಿಮ್ಮ 'ಸ್ಕೂಲ್ ಡೇ'ಯ ದಿನ ಸ್ವಾಗತ ಭಾಷಣ ಮಾಡುವುದಾದರೆ ಮಾತ್ರ ನಾನು ಅಧ್ಯಕ್ಷತೆಗೆ ಒಪ್ಪಿಕೊಳ್ಳುತ್ತೇನೆ' ಎಂದು ಹೇಳಿ. ಆತ ಮೊದಲು ಸ್ವಲ್ಪ ಆಲೋಚಿಸಿ ಅನಂತರ ಹಣ ಪಡೆದು ಹೋಗಿದ್ದ. ವಾರ್ಷಿಕ ದಿನದಂದು ಸಭೆ ಆರಂಭವಾಗುವ ಅರ್ಧ ತಾಸು ಮುಂಚೆ ನಾಲ್ಕು ಹುಡುಗರನ್ನು ಕರೆದುಕೊಂಡು ಇವರಿದ್ದಲ್ಲಿಗೆ ಬಂದು, ಅವರ ಪರಿಚಯ ಮಾಡಿಸಿಕೊಟ್ಟು, 'ಈ ಹರಿಜನ ಹುಡುಗರಿಗೆ ಬಟ್ಟೆಯ ಅಗತ್ಯ ನನಗಿಂತ ಹೆಚ್ಚು ಇತ್ತು. ಹಾಗಾಗಿ ನಾನು ಹೊಲಿಸಿಕೊಳ್ಳಲಿಲ್ಲ.' ಎಂದು ನಗುತ್ತಲೇ ಹೇಳಿದ್ದ.

ಅವನ ಮೈಮೇಲಿದ್ದುದು ಅದೇ ಹರಕಲು ಅಂಗಿ.

ಅವರಿಗೆ ಒಂದೆಡೆ ನೋವಾಗಿತ್ತು; ಆದರೆ ಇನ್ನೊಂದೆಡೆ ಹುಡುಗನ ತ್ಯಾಗಬುದ್ಧಿಯನ್ನು ಕಂಡು ಸಂತೋಷವಾಗಿತ್ತು.

ಆಮೇಲೆ ಆ ಎಳೆಯ ಹುಡುಗ ಮಾಡಿದ ಭಾಷಣ!

ಅನಂತನ ಭಾಷಣದಿಂದಲೇ ಶ್ರೀಪತಿರಾಯರಿಗೆ ಮೊದಲು ಆತನ ಪರಿಚಯ. ತಮ್ಮ ಮ್ಯುನಿಸಿಪಲ್ ಮೆಂಬರಿಕೆಯಿಂದಾಗಿ ಉಡುಪರ ಪರಿಚಯ ಅದಕ್ಕೆ ಮೊದಲೇ ಅವರಿಗೆ ಇದ್ದಿದ್ದರೂ ಉಡುಪರ ಮನೆಯ ಯೋಗ್ಯತೆಯ ಪರಿಚಯವಾದುದು ಸ್ಥಳಿಕ ಸಾಹಿತ್ಯ ಸಂಘದವರು ಒಂದು ತರ್ಕಸಭೆ ನಡೆಸಿದ್ದಾಗ—ಅದೂ ಒಂದು ರಾಜಕಾರಣಕ್ಕೆ ಸಂಬಂಧಿಸಿದ ವಿಷಯದ ಮೇಲೆ.

ಹದಿನೈದು ವರ್ಷ ತುಂಬದ ಎಳೆಯ ಹುಡುಗ ವೇದಿಕೆಯ ಮೇಲೆ ಬಂದು ನಿರರ್ಗಳವಾಗಿ ಅರ್ಧ ತಾಸು ಮಾತನಾಡಿದ್ದ. ಇಡೀ ಸಭೆಯನ್ನೇ ಅಚ್ಚರಿಗೊಳಿಸಿದ್ದ ಆ ವಾಗ್ಝರಿಯ ಪ್ರಭಾವಕ್ಕೆ ರಾಯರೂ ಒಳಗಾಗಿದ್ದರು.

ಆ ಭಾಷಣಕ್ಕಿಂತ ಹೆಚ್ಚು, ಆ ಹುಡುಗನ ಕೆಚ್ಚು ಅವರನ್ನು ಕಂಗೆಡಿಸಿಬಿಟ್ಟಿತ್ತು.

ತಮ್ಮಲ್ಲಿರುವ ಆದರ್ಶವನ್ನು, ತಮ್ಮಲ್ಲಿರದ ಕೆಚ್ಚನ್ನು ಒಂದೇ ವ್ಯಕ್ತಿಯಲ್ಲಿ, ಅದೂ ಅಷ್ಟು ಎಳೆಯ ವಯಸ್ಸಿನ ವ್ಯಕ್ತಿಯಲ್ಲಿ ಗುರುತಿಸಿದ ರಾಯರಿಗೆ ಅನಂತನ ಬಾಂಧವ್ಯ ಸ್ನೇಹದ ಸ್ವರ್ಗವಾಯಿತು. ಅವನಿಗೆ ಕೊಡುತ್ತಿದ್ದ ಯಾವ ನೆರವೂ ಅವರಿಗೆ ನೆರವೆಂದು ತೋರುತ್ತಿರಲಿಲ್ಲ; ಕರ್ತವ್ಯವೆಂದು ಕಾಣುತ್ತಿತ್ತು.

ಮಗನ ಕಾಲೇಜು ವ್ಯಾಸಂಗದ ಕುರಿತು ಯೋಚನೆಯೇ ಮಾಡದಿದ್ದ ಉಡುಪರನ್ನು ಎಚ್ಚರಿಸಿ, ಸಹಾಯದ ಭರವಸೆ ತೋರಿಸಿ, ರಾಯರು ಅನಂತನಿಗೆ ಮಂಗಳೂರಿನ ದಾರಿ ತೋರಿಸಿದ್ದರು.

ಅದಕ್ಕಾಗಿ ಅವರು ಇಂದಿನ ತನಕವೂ ಚಿಂತಿಸಿರಲಿಲ್ಲ; ಚಿಂತಿಸುವ ಪ್ರಸಂಗವೂ ಬಂದಿರಲಿಲ್ಲ. ಅನಂತನಿಗೆ ಶ್ರೀಪತಿರಾಯರು ಕೊಡುತ್ತಿದ್ದ ಸಹಾಯ ತಿಳಿದಿದ್ದುದು ಮೂರೇ ವ್ಯಕ್ತಿಗಳಿಗೆ—ಅನಂತನಿಗೆ, ಶ್ರೀಪತಿರಾಯರಿಗೆ ಮತ್ತು ಉಡುಪರಿಗೆ.

ಆಮೇಲೆ ಬಂತು—ನಲುವತ್ತೆರಡರ ಮಹಾಕ್ರಾಂತಿ.

ಕೊನೆಯ ವರ್ಷ. ಈ ವರ್ಷ ಹೇಗಾದರೂ ಅನಂತ ಮುಗಿಸಿದ್ದರೆ, ಮುಗಿಸಿದ್ದರೆ, ಎಂದು ಜೂನ್‌ನಲ್ಲಿ ಕಾಲೇಜು ಆರಂಭವಾಗುವಾಗಲೇ ರಾಯರು ಎಲ್ಲ ದೇವರಿಗೆ ಮೊರೆಯಿಟ್ಟಿದ್ದರು.

ಅನಂತನ ವಿಚಾರಗತಿಗೆ 'ಕ್ರಿಪ್ಸ್ ಸಂಧಾನ' ಮುರಿದು ಬಿದ್ದಾಗಲೇ ಕಾವೇರಿತ್ತು. ಜುಲೈ ಕಾಂಗ್ರೆಸ್ ಕಾರ್ಯ ಸಮಿತಿಯ ನಿರ್ಣಯವೇ ಆತನ ಓದಿಗೆ ತಡೆಹಾಕಿತು.

ಆಗಸ್ಟ್ ಒಂಬತ್ತಕ್ಕೆ ವ್ಯಾಸಂಗಕ್ಕೆ ಪೂರ್ಣಾಹುತಿ ಬಿತ್ತು.

ಮತ್ತೆ ಆರು ತಿಂಗಳ ವೆಲ್ಲೋರಿನ ಆತಿಥ್ಯ. ಅದನ್ನು ಮುಗಿಸಿ ಕೃಶನಾಗಿ ಬಂದ ಅನಂತನನ್ನು ಸ್ವಾಗತಿಸಲು ಮಂಗಳೂರಿಗೆ ಪ್ರಯಾಣ. ಅನಂತನ ವಿಜಯ(!)ದಲ್ಲಿ ತಮ್ಮ ಆದರ್ಶ ಜ್ಯೋತಿ ಪ್ರಜ್ವಲಿಸಿದೆಯೆಂದು ಬಗೆದ ಆನಂದ ದಲ್ಲಿ ಪ್ರತಿಷ್ಠೆ ಅಹಂಭಾವದೊಡನೆ ಕಚಕುಳಿಯಾಡಿದಂತಾಗಿ, ಅವರು ಒತ್ತಾಯಮಾಡಿ ತೆಗೆಸಿದ್ದ ಭಾವಚಿತ್ರ.

ಆಮೇಲೆ ಒಂದು ವರ್ಷ ಕಾಲ ಹಾಸಿಗೆಯಲ್ಲೇ ಮಲಗಿದ್ದ ಅನಂತ. ಮತ್ತೆ ಊರು ಬಿಟ್ಟು ಮುಂಬಯಿಗೆ ಪ್ರಯಾಣ. ಮುಂಬಯಿಯಲ್ಲಿ ಆತನ ಉದ್ಯೋಗಜೀವನ ಆರಂಭ.

ರಾಯರ ಆದರ್ಶ ಇತಿಹಾಸದ ಪುಟಗಳಲ್ಲಿ ಭಾರತ ಬದಲುತ್ತಿದ್ದಂತೆಯೇ ಸಪ್ಪೆಯಾಗಿ ಮುಂದುವರಿಯುತ್ತಿತ್ತು. ಆದರೂ ಅನಂತನ ಮೇಲಿನ ವಿಶ್ವಾಸ ಅದೇ ರೀತಿಯದು. ಅವನ ಸಮಾಜಸೇವೆಯ ಬುದ್ಧಿಯಲ್ಲಿ ಅವರ ಹಂಬಲದ ಪ್ರತಿಬಿಂಬವಿತ್ತು. ಅವನ ಕರ್ತವ್ಯದಕ್ಷತೆಯಲ್ಲಿ ಅವರ ಉದಾಸೀನ ಜೀವನದ ತಿದ್ದುವಿಕೆ ಅವರ ಕನಸಿನ ಅಪೇಕ್ಷೆಯಂತೆ ನಡೆದಿತ್ತು.

ಮುಂಬಯಿಯ ಒಬ್ಬ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತನಾಗಿ ಊರಿಗೆ ಮರಳಿದ ಅನಂತನೊಡನೆ ರಾಯರು ಮದುವೆಯ ಮಾತು ಬೆಳೆಸಿದರು.

ಅನಂತ ಭಾರತಿಯ ಕೈಹಿಡಿದ.

ಅನಂತನ ಬಿಡುವಿಲ್ಲದ, ಅವಿಶ್ರಾಂತ ಪರಿಶ್ರಮದ ಚಿರಂತನ ಸೇವಾ ದೀಕ್ಷೆ ಪಡೆದ ಜೀವನಕ್ಕೆ ತಮ್ಮ ಮಗಳು ಪೂರಕ ಜೀವನವನ್ನೊದವಿಸುತ್ತಾಳೆ, ತನ್ನ ಓದಿನ, ತಿಳಿವಿನ, ಸಂಸ್ಕಾರದ ಬೆಳಕನ್ನು ಆತನ ಸಂಸಾರಜೀವನದ ಮೇಲೆ ಚೆಲ್ಲಿ ಅನಂತನನ್ನು ಸುಖಿಯನ್ನಾಗಿ ಮಾಡುತ್ತಾಳೆ ಎಂದು ಪ್ರಾಮಾ ಣಿಕವಾಗಿ ನಂಬಿ ಭಾರತಿಯನ್ನು ಧಾರೆಯೆರೆದು ಕೊಟ್ಟಿದ್ದರು.

ಭಾರತಿಯ ಕೈಹಿಡಿದುದರಿಂದ ಅನಂತ ಸುಖಿಯೆಂಬುದು ರಾಯರಿಗೆ ತಿಳಿದಿತ್ತು.

ಇಂದು ಇನ್ನೊಂದು ಪ್ರಶ್ನೆಯುದ್ಭವಿಸಿದೆ.

ಆ ಪ್ರಶ್ನೆಯನ್ನು ಈ ತನಕ ಅವರು ಯೋಚಿಸಿರಲೇ ಇಲ್ಲ. ಆ ಪ್ರಶ್ನೆ ಉದ್ಭವಿಸುವುದೆಂದೇ ಅವರು ತಿಳಿದಿರಲಿಲ್ಲ. ಅವರು ತಮ್ಮ ಮಗಳ ಮನಸ್ಸು ತಮ್ಮ ಮನಸ್ಸಿಗಿಂತ ತೀರ ಭಿನ್ನವಾದ ಮನಸ್ಸಾಗಿರಬಹುದು ಎಂಬ ಯೋಚನೆಯನ್ನು ತಂದುಕೊಂಡಿರಲೇ ಇಲ್ಲ.

ಇಂದು ಆ ಪ್ರಶ್ನೆಗೆ ಮಹತ್ವ ಕೊಡದೆ ಕುಳಿತುದರ ಪರಿಣಾಮವಾಗಿ ಎದ್ದ ಬಿರುಗಾಳಿಯಿಂದ ಕಂಗಾಲಾದ ರಾಯರು, ಗೋಡೆಯ ಮೇಲಿದ್ದ ಅಳಿಯ ಮತ್ತು ಮಗಳ ಭಾವಚಿತ್ರವನ್ನೇ ನೋಡುತ್ತ ಯೋಚಿಸಿದರು.

ಅನಂತನ ಕೈಹಿಡಿದುದರಿಂದ ಭಾರತಿ ಸುಖಿಯೆ ?

ಅಲ್ಲವೆಂದು ಹೇಳಲು ಸಾಧ್ಯವಾಗುತ್ತಿರಲಿಲ್ಲ. ಭಾರತಿ ಇನ್ನೂ ಅನಂತನೊಡನೆ ಸಂಸಾರಜೀವನ ಆರಂಭಿಸಿರಲಿಲ್ಲ. ಆದರೆ ಅನಂತನ ಮನೆಯ ವಾತಾವರಣಕ್ಕೆ ಹೊಂದಿಕೊಂಡು ಹೋಗಲು ಭಾರತಿಗೆ ಸಾಧ್ಯವಾಗುತ್ತಿರಲಿಲ್ಲ ಎಂಬುದು ಮಾತ್ರ ರಾಯರಿಗೆ ತಿಳಿದಿತ್ತು.

ಆ ಬಡತನದ ಜೀವನ ಭಾರತಿಗೆ ನೀರಸ ಜೀವನವಾಗಿ ಕಂಡುಬರುತ್ತಿದ್ದುದರಲ್ಲಿ ಆಶ್ಚರ್ಯವಿಲ್ಲ. ಆಕೆ ಸುಖವುಂಡು ಬೆಳೆದವಳು. ಅದೂ ಗಂಡನ ಒಡನಾಟವಿಲ್ಲ. ಅಗಲಿಕೆಯ ನೋವಿಗೆ ಬಡತನ ಸೇರಿ, ಜೀವನ ನೀರಸವೆನಿಸುವುದು ಸ್ವಾಭಾವಿಕವೆ. ಆದರೆ ಈ ತಾತ್ಕಾಲಿಕ ಅವಸ್ಥೆಯನ್ನು ಶಾಶ್ವತ ದುಃಖವೆಂದು ಬಗೆದು, ಮಗಳು ಈ ರೀತಿ ಅತೃಪ್ತಿಯನ್ನು ಹೊರಗೆಡಹುವುದು ಸರಿಯೇ ಎಂಬ ಪ್ರಶ್ನೆಗೆ ರಾಯರ ಮನಸ್ಸಿನಲ್ಲಿ ಉತ್ತರ ದೊರಕಲಿಲ್ಲ. ಅದೂ ಒಬ್ಬ ಮಹಾನ್ ವ್ಯಕ್ತಿಯಾಗಬಹುದಾದಂಥ ಗಂಡನ ಕೈಹಿಡಿದಾಕೆ ; ಒಂದು ಆದರ್ಶಕ್ಕಾಗಿ ಜೀವ ಕೊಡುವುದಕ್ಕೂ ಸಿದ್ಧವಿರುವಂಥವನನ್ನು ಕೈಹಿಡಿದಾಕೆ.

ಹೀಗೆ ಯೋಚಿಸುವಾಗ ರಾಯರಿಗೆ ೪೬ರ ಆದಿಯ ದಿನಗಳು ನೆನಪಿಗೆ ಬಂದವು.

ಮುಂಬಯಿಯಲ್ಲಿ ಅನಂತನ ಸತ್ವಪರೀಕ್ಷೆಯಾಗುತ್ತಿತ್ತು.

ಅನಂತನ ಮದುವೆಯಾಗಿ ಆರೆಂಟು ತಿಂಗಳುಗಳಲ್ಲಿಯೇ ಮುಂಬಯಿಯಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನೇ ಅಲುಗಿಸಲು ಕಾರಣವಾಗಿ ನಡೆದ ಆ ನಾವಿಕರ ದಂಗೆ—

'ಜಗತ್ತಿನ ಆದ್ಯಂತ ನಶಿಸಿಹೋಗುತ್ತಿರುವ ಸಾಮ್ರಾಜ್ಯಶಾಹಿಯ

ಕೊನೆಯ ಹೋರಾಟ ಇದು, ಮಾವಯ್ಯ. ಹಾಗೆಯೇ ವಿಜಯದ ಬಾಗಿಲಿಗೆ ಧಾವಿಸುತ್ತಿರುವ ಎಚ್ಚೆತ್ತ ಭಾರತದ ಕೊನೆಯ ಏಟು ಇದು. ಬ್ರಿಟಿಷ್ ಸತ್ತೆ ಇದರಿಂದ ಚೇತರಿಸಿಕೊಳ್ಳುವುದಿಲ್ಲ. ಈ ಕೊನೆಯ ಏಟಿಗೆ ಕೊಹಿನೂರು ಮಣಿಯುತ್ತದೆ. ಈ ರಕ್ತದಲ್ಲಿ ಹೊಸ ಭಾರತ ಹುಟ್ಟುತ್ತದೆ. ಈ ಕಣ್ಣೀರಿನಲ್ಲಿ ಕೋಟಿ ಕೋಟಿ ಜನರ ಭವಿಷ್ಯತ್ತಿನ ಹೊಸ ಸಮಾಜದ ಅಡಿಗಲ್ಲು ಬಲವಾಗುತ್ತದೆ........

ಓದುತ್ತ ಹೋಗುತ್ತಿದ್ದಂತೆ ರಾಯರು ಅನಂತನ ದೃಷ್ಟಿಕೋನದಿಂದ ಹೊರತಾದ ಜಗತ್ತೇ ಇಲ್ಲವೆಂದು ತಿಳಿಯುತ್ತಿದ್ದರು. ಆದರೆ ಮರುಕ್ಷಣದಲ್ಲೇ ಭಾರತಿಯ ಮಾಂಗಲ್ಯಭಾಗ್ಯ ಅನಂತನ ಕೈಲಿದೆಯೆಂಬ ತಿಳುವಳಿಕೆಯಿಂದಾಗಿ ಒಂದು ವಿಚಿತ್ರ ಭೀತಿ ಅವರನ್ನು ಆವರಿಸುತ್ತಿತ್ತು.

'ಜೋಕೆ, ಅನಂತಾ. ನಿನ್ನ ಜೀವದ ವಿಚಾರ ಜೋಕೆ. ದಯಮಾಡಿ, ಭಾರತಿಯನ್ನು ನೆನೆದುಕೊಂಡು, ಜೋಕೆ! ದೈವಮರೆತು ಎಲ್ಲಿಯಾದರೂ ಈ ಗೊಂದಲದಲ್ಲಿ ಸಿಕ್ಕುಬೀಳಬೇಡ' ಎಂದು ಅಂಗಲಾಚಿ ಅವರು ಬರೆದಿದ್ದ ಪತ್ರಗಳೆಷ್ಟೋ!

ಅನಂತ ಈ ಕುತ್ತಿನಿಂದ ಪಾರಾಗಿಯೇ ಬಂದಿದ್ದ. '೪೬ರ ಕೊನೆಯಲ್ಲಿ ಮುಂಬಯಿ ಶಹರನ್ನು ಹೊಲೆಗೆಡಿಸಿದ್ದ ಕೋಮುವಾರು ದಂಗೆಗಳಿಂದಲೂ ಪಾರಾಗಿ, ಭಾರತಿಗಾಗಿ, ರಾಯರ ಆದರ್ಶಕ್ಕಾಗಿ ಉಳಿದಿದ್ದ. 'ಈ ರಕ್ತ ಸಿಂಚನದಿಂದ ನಮಗೆ ನಿತ್ಯ ಕಣ್ಣೀರಿನ ಸ್ನಾನ, ಮಾವಯ್ಯ, ಈ ನಿರರ್ಥಕ ಬಂಧುಹತ್ಯೆಯಿಂದ ನಾನು ಕಂಗಾಲಾಗಿದ್ದೇನೆ, ಮಾವಯ್ಯ. ನಮ್ಮನ್ನು ಮುತ್ತಿರುವ ಈ ಸ್ವರಕ್ತ ತೃಷೆಯ ಮಾರಿರೋಗದಿಂದ ಯಾರೂ ಬಿಡಿಸುವವರಿಲ್ಲವೇ ಎಂದು ಕಂಗಾಲಾಗಿದ್ದೇನೆ, ಮಾವಯ್ಯ.' ಎಂದು ಬರೆಯುತ್ತಿದ್ದ ಅನಂತನ ಎದೆಯ ಕೂಗು ರಾಯರ ಹೃದಯದಲ್ಲಿ ಮರುದನಿ ಕೊಡುತ್ತಿತ್ತು.

ಅನಂತ ಭಾರತಿಗೂ ಇದೇ ರೀತಿ ಪತ್ರಗಳನ್ನು ಬರೆಯುತ್ತಿದ್ದಿರಬಹುದು. ಇಂಥವೇ ಭಾವನೆಗಳು ಅವುಗಳಲ್ಲಿ ಇನ್ನಷ್ಟು ಹೃದಯಂಗಮವಾಗಿ ಮೂಡಿ ಬಂದಿದ್ದಿರಬಹುದು.

ಅನಂತ ಭಾರತಿಯ ಮನಸ್ಸಿನ ಮೇಲೆ ತಮಗಾದಷ್ಟೆ ಪರಿಣಾಮ ಮಾಡಿದ್ದರೆ, ಆಕೆ ಇಂದು ಒಂದು ಜತೆ ಚಿನ್ನದ ಬಳೆಗಳಿಗಾಗಿ ಇಷ್ಟು ದುಃಖಿಸುತ್ತಿದ್ದಳೇ?

ಭಾರತಿ ಗಂಡನ ಮನೆಗೆ ಹೋಗಲು ನಿರಾಕರಿಸಿದರೆ—ಮುಂದೇನು ?

ಬಿ.ಎ. ಮುಗಿಸಿದ ಹುಡುಗನಿಗೆ ಶ್ರೀಪತಿರಾಯರು ಮಗಳನ್ನು ಕೊಡುತ್ತಾರೆ ಎಂದಾಗಲೇ ಊರಲ್ಲಿ ಸಾಕಷ್ಟು ಟೀಕೆ ಬಂದಿತ್ತು. ಅವರ ವ್ಯವಸಾಯ ಬಂಧುಗಳಿಗೆ ಕೂಡ ಈ ಸುದ್ದಿ ಆಶ್ಚರ್ಯವನ್ನುಂಟುಮಾಡಿತ್ತು. ಅದಕ್ಕಿಂತ ಹೆಚ್ಚಿನ ವಿದ್ಯೆಯೂ ಆದಾಯವೂ ಇರುವ ನೂರಾರು ವರಗಳು ಭಾರತಿಯನ್ನು ವರಿಸಲು ಸಿದ್ಧರಿದ್ದಾಗ, ಜೇಲು ಕಂಡ ಪೋಲಿಯೊಬ್ಬನಿಗೆ, ಬಡ ಮ್ಯುನಿಸಿಪಲ್ ಗುಮಾಸ್ತೆಯ ಮಗನೊಬ್ಬನಿಗೆ, ಶ್ರೀಪತಿರಾಯರು ಹುಡುಗಿಯನ್ನು ಧಾರೆ ಎರೆದುಕೊಡುತ್ತಾರೆ ಎಂದಾಗ ಉಡುಪಿಯ ನಾಗರಿಕ ವರ್ಗದಲ್ಲಿ ಆದ ಆಶ್ಚರ್ಯ ವಿಪರೀತ ಪರಿಮಾಣದ್ದಿತ್ತು. ಆದರೆ ಶ್ರೀಪತಿರಾಯರು ಇದರಿಂದಾಗಿ ಧೃತಿಗೆಡಲಿಲ್ಲ.

ಈಗ ಮಾವನ ಮನೆಯಿಂದ ಮಗಳು ಓಡಿಬಂದಿದ್ದಾಳೆ ಎಂಬ ಸುದ್ದಿ ಹರಡಿದರೆ ಅವರ ಪ್ರತಿಕ್ರಿಯೆಯನ್ನು ಸಹಿಸುವುದು ಹೇಗೆ, ಎಂದು ಮಾತ್ರ ರಾಯರಿಗೆ ಹೊಳೆಯಲಿಲ್ಲ.

ಒಂದು ಕಡೆ ಮಗಳು, ಇನ್ನೊಂದು ಕಡೆ ಅನಂತ, ಮತ್ತೊಂದು ಕಡೆ ಉಡುಪಿಯ ಸಮಾಜ—ಇವುಗಳಿಂದಾಗಿ ರಾಯರು ಅವರ ಆರಾಮಜೀವನದಲ್ಲಿ ಮೊದಲ ಬಾರಿಗೆ ಗಲಿಬಿಲಿಗೊಂಡರು.

ರಾತ್ರಿ ಬಹಳ ಹೊತ್ತಿನ ತನಕ ರಾಯರು ಯೋಚಿಸುತ್ತಲೇ ಇದ್ದರು. ಮನೆಯಲ್ಲೆಲ್ಲ ಮೌನ ಆವರಿಸಿತ್ತು. ಸದಾ, ಸುನಂದ ಕೂಡಾ ಕಂಗಾಲಾಗಿದ್ದರು. ಊಟದ ಹೊತ್ತಿನಲ್ಲೂ ಯಾರೂ ಮಾತಾಡಲಿಲ್ಲ.

ಊಟವಾದಮೇಲೆ ಭಾರತಿ ಮೊದಲು ಹೋಗಿ ಮಲಗಿದಳು. ರಾಯರು ಯಾರೊಡನೆಯೂ ಮಾತನಾಡದೆ, ತಮ್ಮ ಬೆತ್ತ ಹಿಡಿದುಕೊಂಡು ಮೈದಾನದ ದಾರಿ ಹಿಡಿದು ಮುಂದುವರಿದು, ಮಗಳ ಮನೆಯ ತನಕ ಹೋದರು.

ಮನೆ ಸಮೀಪಿಸಿದಾಗ ರಾಯರ ಧೈರ್ಯ ಕುಂದತೊಡಗಿತು. ಆ ಮನೆಯನ್ನು ಕತ್ತಲು ಮುಸುಕಿತ್ತು. ಒಳಗಿನಿಂದ ಸದ್ದೇ ಇಲ್ಲ. ಮಕ್ಕಳ ಕೋಲಾಹಲವೂ ಕೇಳಿಸುತ್ತಿದ್ದಿಲ್ಲ.

ಎಲ್ಲರೂ ಮಲಗಿರಬೇಕೆಂದು ನಿಶ್ಚಯಿಸಿದ ರಾಯರು ಉಡುಪರೊಡನೆ ಮಾತನಾಡುವ ಆಲೋಚನೆಯನ್ನು ಬಿಟ್ಟು ಅಲ್ಲಿಂದಲೇ ಹಿಂದಿರುಗಿದರು.

ಅವರು ಮನೆಗೆ ಮರಳಿದಾಗ ಮಧ್ಯರಾತ್ರಿ.

೭

ರಾಯರ ಧರ್ಮಸಂಕಟ ಮುಂದಿನ ಎರಡು ದಿನಗಳಲ್ಲೂ ಬಗೆಹರಿಯಲಿಲ್ಲ. ನಿತ್ಯ ನಗುತ್ತಿದ್ದ ಅವರ ಮನೆಯನ್ನು ಮಾತ್ರ ಸ್ಮಶಾನ ಮೌನ ಆವರಿಸಿತ್ತು.

ಮೂರನೆ ದಿನ ಬೆಳಿಗ್ಗೆ ರಾಯರು ಮನಸ್ಸಿಲ್ಲದ ಮನಸ್ಸಿನಿಂದ ಕಾಲೆಳೆದು ಕೊಂಡು ಉಡುಪರ ಮನೆಯ ದಾರಿ ಹಿಡಿದರು. ಆದರೆ ಅರ್ಧ ದಾರಿ ಮುಗಿಸು ವುದರೊಳಗೇ ಅವರು ಮನೆಗೆ ಮರಳಲು ನಿಶ್ಚಯಿಸಿದರು.

ಹೆಚ್ಚು ಹೆಚ್ಚು ಯೋಚಿಸಿದಷ್ಟು, ಈ ಮನೆಜಗಳದಲ್ಲಿ ಮೊದಲ ಏಟು ಬಂದದ್ದು ಉಡುಪರಿಂದಲೇ ಎಂದು ಅವರಿಗೆ ಮನವರಿಕೆಯಾಗತೊಡಗಿತ್ತು. ಮಗನಿಗೆಸೊಸೆಯ ಮೇಲಿರುವ ಅಭಿಮಾನದಿಂದ ಅಸೂಯೆಗೊಂಡು ಉಡುಪರು ಅವಳ ಮೇಲೆ ನಂಜು ಕಾರಿರಬಹುದೆಂದು ಅವರಿಗೆ ಸ್ಪಷ್ಟವಾಗಿತ್ತು. ಆ ಕಾರಣ ಈಗ ತಾವು ಹೋಗಿ ಉಡುಪರೊಡನೆ ಈ ಮನಸ್ತಾಪ ಬಗೆಹರಿಸಲು ಮುಂದು ವರಿದರೆ, ತಮ್ಮ ಕೇಳಿಕೆಗೆ ಅವರು ಅಪಾರ್ಥ ಕಲ್ಪಿಸಿ ಏನೆಲ್ಲಾ ಹೇಳಲು ಆರಂಭಿಸಿದರೇನು ಮಾಡುವುದು ? ಎಂದು ರಾಯರ ಸ್ವಾಭಿಮಾನ ಪ್ರಶ್ನಿಸು ತ್ತಿತು.

ಈ ಚಾಂಚಲ್ಯದಿಂದಾಗಿ ಎರಡು ದಿನ ಕಳೆಯುವುದರೊಳಗೇ ಈ ವಿಷಗಾಳಿಯ ಅನಾಹುತದ ವರದಿಗಳು ರಾಯರ ಕಿವಿಗೆ ಬೀಳತೊಡಗಿದವು: "ಉಡುಪರ ಸೊಸೆ, ಮಾವನೊಡನೆ ಜಗಳಾಡಿ ಮನೆಬಿಟ್ಟು ಹೋಗಿದ್ದಾಳಂತೆ." "ಉಡುಪರ ಸೊಸೆ, ಕಾಲುದೀಪದಿಂದ ಮಾವನನ್ನು ಹೊಡೆದು ಓಡಿಹೋಗಿದ್ದಾ ಳಂತೆ." "ಉಡುಪರ ಸೊಸೆ, ತಾನು ಮುಂಬಯಿಗೂ ಬರುವುದಿಲ್ಲವೆಂದು ಗಂಡನಿಗೆ ಕಾಗದ ಬರೆದಿದ್ದಾಳಂತೆ."

"ಶ್ರೀಪತಿರಾಯರು ಮಗಳನ್ನು ಮನೆಯಿಂದ ಹೊರಗೆ ಹೋಗಲು ಬಿಡುತ್ತಿಲ್ಲವಂತೆ."

"ಉಡುಪರ ಸೊಸೆ ಭಾರತಿಗೆ ಹುಚ್ಚು ಹಿಡಿದಿದೆಯಂತೆ !"

ಕೆಲಸವಿಲ್ಲದ ನಾಲಗೆಗಳು ಸಾವಿರ ರೂಪಗಳಿಂದ ಕತೆ ಕಟ್ಟಿ ಉಡುಪರ ಮನೆಯ ಒಳಜಗಳವನ್ನು ಬಣ್ಣಿಸತೊಡಗಿದವು. ತಮ್ಮ ಅಂತಸ್ತಿನ ಕಡೆ ಗಮನಕೊಡದೆ, ಆದರ್ಶದ ಹುಚ್ಚಿರಿಸಿಕೊಂಡು ಅವರು ಮಗಳ ಮದುವೆ ಮಾಡಿಸಿದಂದೇ ವ್ಯವಸ್ಥಿತ ಸಮಾಜ ತಲೆಕೆಳಗಾಯಿತೆಂದು ಬಗೆದು ಅಸೂಯೆ ಯಿಂದಿದ್ದ ಸಾವಿರಾರು ನಾಲಗೆಗಳು ಈಗ ವಿಷ ಕಾರತೊಡಗಿದವು.

ಶ್ರೀಪತಿರಾಯರಿಗೆ ಕೋರ್ಟಿನ 'ಬಾರ್ ರೂಮ್' ಕೂಡ ತಮ್ಮನ್ನು ಅಣಕಿಸುತ್ತಿದೆಯೇ ಎಂದೆನ್ನುವಷ್ಟು ಬೇಸರವಾಯಿತು.

ಆದರೆ ಈ ಅಪಪ್ರಚಾರವನ್ನು ಪ್ರತಿಬಂಧಿಸುವುದು ಹೇಗೆ ಎಂದು ಮಾತ್ರ ಅವರಿಗೆ ಹೊಳೆಯಲಿಲ್ಲ. ಅವರಿಗೆ ಹೊಳೆದ ಒಂದೇ ಒಂದು ದಾರಿಯೆಂದರೆ, ಅನಂತನಿಗೆ ಬರೆಯಬೇಕಾಗಿದ್ದ ಕಾಗದ. ತಮ್ಮ ನಿಷ್ಪಕ್ಷಪಾತ ದೃಷ್ಟಿಯಿಂದ ಸನ್ನಿವೇಶದ ಯೋಗ್ಯತೆಯನ್ನು ವಿವರಿಸಿ 'ನೀನು ಹೇಗಾದರೂ ಒಂದು ಮನೆ ಮಾಡಿಕೊಂಡು ಭಾರತಿಯನ್ನು ಮುಂಬಯಿಗೆ ಕರೆಸಿಕೊಂಡಿದ್ದರೆ ನಾನು ಕೃತಾರ್ಥನಾಗುತ್ತಿದ್ದೆ.' ಎಂದು ಮುಗಿಸಿ ಜೊತೆಗೆ ಇದೇ ಭಾವವನ್ನು ಪ್ರಕಟಿಸುವ ಭಾರತಿಯ ಕಾಗದವನ್ನೂ ಇರಿಸಿ ಕಳುಹಿಸಿದರು.

ಆದರೆ ಉಡುಪಿಯ ಸಾಮಾಜಿಕ ವರ್ಗಗಳಲ್ಲಿ ಈ ಕಾಗದಕ್ಕೇನು ಮಹತ್ವ ಬಂತು?

ಉಡುಪರಿಗೆ ಬುದ್ಧಿ ಬರಬಹುದು; ತಮ್ಮ ತಪ್ಪಿಗಾಗಿ ನಾಚಿಕೊಂಡು ತಮ್ಮಲ್ಲಿಗೆ ಬಂದು ಸಮಾಧಾನ ಹೇಳಬಹುದು ಎಂದು ಕಾದುಕೊಂಡಿದ್ದ ರಾಯರಿಗೆ ನಿರಾಶೆಯೇ ಆಯಿತು ಏಳೆಂಟು ದಿನಗಳು ಕಳೆದರೂ ಉಡುಪರ ಸುದ್ದಿಯೇ ಇಲ್ಲ.

ಆಮೇಲೊಂದು ಸಂಜೆ, ಹೊತ್ತು ಕಂತಲು ಇನ್ನು ಸಮಯವಿದೆಯೆನ್ನುವಾಗ ನರಹರಿ ಮೆಲ್ಲಗೆ ಮನೆಯೊಳಗೆ ಬಂದ. ಅವನ ಕೈಯಲ್ಲೊಂದು ಕಟ್ಟಿತ್ತು.

ಹುಡುಗ ಒಳಗೆ ಬರುತ್ತಿರುವುದನ್ನು ತಮ್ಮ ಆಫೀಸುಕೋಣೆಯಿಂದಲೇ ಕಂಡ ರಾಯರು ಅವನು ಮೆಟ್ಟಲೇರುವುದರೊಳಗಾಗಿ ಮುಖಮಂಟಪಕ್ಕೆ ಬಂದಿದ್ದರು ಉಡುಪರು ಬರಹೇಳಿದ್ದಾರೆಂದು ಆ ಹುಡುಗ ಹೇಳಬಹುದು; ಹಾಗಿದ್ದರೆ, ತಾವು ಆಗಿಂದಾಗಲೇ ಭಾರತಿಯನ್ನು ಕರೆದುಕೊಂಡು ಹೊರಡಲು ಸಿದ್ಧ ಎಂದು ಅವರು ನಿಶ್ಚಯಿಸಿಯಾಗಿತ್ತು. ಅನಂತನ ಕಾಗದ ಬರುವ ತನಕ ಹೇಗಾದರೂ ಸುಮ್ಮನಿರೋಣವೆಂದು ಮಾಡಿದ್ದ ಅವರ ಆ ನಿರ್ಧಾರ, ನರಹರಿಯನ್ನು ಕಂಡು ಬದಲಾಯಿತು.

ರಾಯರನ್ನು ಕಂಡ ನರಹರಿ ಕಿಸೆಯಿಂದ ಕಟ್ಟೊಂದನ್ನು ಹೊರತೆಗೆದ. ಚಿನ್ನದ ಬಳೆಗಳನ್ನು ಮಡಚಿ ಇರಿಸಿದ್ದ ಕಾಗದದ ಸುರುಳಿ.

ರಾಯರಿಗಾದ ವೇದನೆ ಅಷ್ಟಿಷ್ಟಲ್ಲ.

"ಅಪ್ಪಯ್ಯ ನಿಮ್ಮ ಹತ್ತಿರ ಕೊಡಲು ಹೇಳಿದ್ದಾರೆ."

ರಾಯರು ಕೈನೀಡಿ ಆ ಬಳೆಗಳನ್ನು ತೆಗೆದುಕೊಂಡರು.

ಗುಣಕ್ಕಾಗಿ, ವಿದ್ವತ್ತಿಗಾಗಿ, ಸಂಸ್ಕಾರಕ್ಕಾಗಿ, ಈಗ ಸಂಪತ್ತಿಗಾಗಿಯೂ, ಇಡೀ ಊರೇ ಅವರನ್ನು ಗೌರವಿಸುತ್ತಿತ್ತು. ಅಂಥದರಲ್ಲಿ ಒಬ್ಬ ಬಡ ಮ್ಯುನಿಸಿಪಲ್ ಗುಮಾಸ್ತರು, ಒಂದು ಮಗುವಿನ ಮೂಲಕ ಅವರನ್ನು ಈ ರೀತಿ ಅವಮಾನ ಪಡಿಸಿದ್ದರು.

ರಾಯರ ಮುಖ ಕಪ್ಪಿಟ್ಟಿತು. ಒಂದು ಕ್ಷಣ ಭಯಂಕರ ಕ್ರೋಧ ಅವರ ಮುಖವನ್ನಾವರಿಸಿತು. ನೋವಿನಿಂದ ಅವರ ಇಡೀ ಶರೀರ ಕಂಪಿಸುವ ಹಾಗಿತ್ತು.

ಆದರೆ ಸಂಯಮದ ಕಟ್ಟೆಯೊಡೆಯಲಿಲ್ಲ.

"ಬೇರೇನಾದರೂ ಹೇಳಿದರೆ ?"

"ಇಲ್ಲ." ಎಂದಿತು ಮಗು. ಹಾಗೆಯೇ, "ಅತ್ತಿಗೆ ಎಲ್ಲಿದ್ದಾರೆ ?" ಎಂದು ಕೇಳಿತು.

ನರಹರಿಯ ಮಾತು ಕೇಳಿಯೇ ಭಾರತಿ ಬಾಗಿಲಿಗೆ ಬಂದಿದ್ದಳು. ಅವಳ ಹಿಂದೆಯೇ ಗೌರಮ್ಮ ಸುನಂದೆಯರೂ ನಿಂತಿದ್ದರು. ರಾಯರು ಒಮ್ಮೆ ಮಗಳ ಕಡೆ, ಮತ್ತೊಮ್ಮೆ ಕೈಯಲ್ಲಿ ಹಿಡಿದಿದ್ದ ಬಳೆಗಳ ಕಡೆ ನೋಡಿದರು. ಆಮೇಲೆ ಏನು ತೋರಿತೋ "ತೆಗೋ" ಎಂದು ಭಾರತಿಗೆ ಅವನ್ನು ಕೊಟ್ಟು, ಸೀದ ತಮ್ಮ ಕೋಣೆಗೆ ಹೊರಟುಹೋದರು.

ಭಾರತಿಯ ಕಣ್ಣಲ್ಲಿ ತಂದೆಯ ಅವಸ್ಥೆಯನ್ನು ಗಮನಿಸಿ ನೀರು ಬಂದಿತ್ತು.

ನರಹರಿ ಪುನಃ ಕರೆದ, ಮೆಲ್ಲಗೆ "ಅತ್ತಿಗೆ !" ಎಂದು.

"ಏನೋ !"

"ಅಮ್ಮ ಇದನ್ನು ನಿನಗೆ ಕೊಡಲಿಕ್ಕೆಂದು ಕೊಟ್ಟಿದ್ದಾಳೆ, ಅತ್ತಿಗೆ." ಎಂದು ಕೈಲಿದ್ದ ಕಾಗದದ ಕಟ್ಟನ್ನು ಅತ್ತಿಗೆಯ ಕೈಲಿರಿಸಿದ.

ಭಾರತಿ ಅದನ್ನು ಒಡೆದು ನೋಡಿದಳು.

ಮನೆಯಲ್ಲಿ, ಅನಂತನ ಕೋಣೆಯಲ್ಲಿ ನಿತ್ಯ ನಗುತ್ತಿದ್ದ ಎರಡು ಭಾವ ಚಿತ್ರಗಳು.

ಅವಳಿಗೆ ಕಣ್ಣೀರು ತಡೆಯಲಾಗಲಿಲ್ಲ. ಅತ್ತೆಯ ಸೌಜನ್ಯ, ಆ ಮುಗ್ಧ ಜೀವಿಯ ಅಜ್ಞಾನ, ಶ್ರೀಪತಿರಾಯರ ಮನೆಯಲ್ಲಿಯೂ ಅಂಥವೇ ಭಾವಚಿತ್ರ ಗಳಿರಬಹುದೆಂದು ಯೋಚಿಸಲು ತಡೆಯಾಗಿತ್ತು.

"ಪದ್ದ ಹೇಗಿದ್ದಾನೋ ?"

ಈಗ ಮಾತ್ರ ನರಹರಿ ಮಾತನಾಡಲು ತಡವರಿಸಿದ. ಸುನಂದ ಒಳಗಿನಿಂದ ಒಂದು ಲೋಟ ಕಾಫಿ ಆಗಲೇ ತಂದಾಗಿತ್ತು. ಆತ ಅದನ್ನು ತೆಗೆದುಕೊಳ್ಳಲೂ ಅನುಮಾನಿಸುತ್ತಿದ್ದ.

"ಏನೂ ತೆಗೆಸುಕೊಳ್ಳಬಾರದೆಂದು ಅಪ್ಪಯ್ಯ ಹೇಳಿದ್ದಾರೆ, ಅತ್ತಿಗೆ."

ಉಡುಪರ ಸಿಟ್ಟು, ಮಗನ ಚಲನವಲನ, ಊಟ ಉಪಹಾರಗಳನ್ನು ರಾಯರ ಮನೆಯಲ್ಲಿ ನಿರ್ಬಂಧಿಸುವವರೆಗೂ ಮುಂದುವರಿದಿತ್ತು.

"ತೆಗೋ ನರಹರಿ. ತೆಗೆದುಕೊಂಡಿದ್ದಿಯೆಂದು ಮನೆಯಲ್ಲಿ ಹೇಳಬೇಕಾಗಿಲ್ಲ."

ನರಹರಿ ಕಾಫಿ ಕುಡಿಯುತ್ತಿದ್ದಾಗ ಭಾರತಿ ಪುನಃ ಪ್ರಶ್ನಿಸಿದಳು :

"ಪದ್ದ ಹೇಗಿದ್ದಾನೋ ?"

ಅರ್ಧ ಕುಡಿದಿದ್ದವನು ನರಹರಿ ಮುಖ ತಗ್ಗಿಸಿ ಅತ್ತಿಗೆಗೆ ಉತ್ತರಕೊಟ್ಟ.

"ಪದ್ದ ಎರಡು ದಿವಸಗಳಿಂದ ಮಾತೇ ಆಡುತ್ತಿಲ್ಲ, ಅತ್ತಿಗೆ."

ಭಾರತಿಗೆ ಸಹನಾತೀತ ವೇದನೆಯಾಯಿತು. ಕಣ್ಣಿಂದ ಧಾರಾಕಾರವಾಗಿ ನೀರು ಸುರಿಯುತ್ತಿತ್ತು.

"ಅತ್ತೆ ಮತ್ತೇನಾದರೂ ಹೇಳಿದ್ದಾರೇನೋ ?" ಎಂದು ಅಳುತ್ತಲೇ ಕೇಳಿದಳು.

ನರಹರಿ ಈಗಲೂ ತಡವರಿಸಿದ. ಅತ್ತಿಗೆಯನ್ನುಳಿದು ಬೇರಾರೊಡನೆಯೂ ಆತ ಆ ಮಾತನ್ನು ಹೇಳಲು ಸಿದ್ಧನಿರಲಿಲ್ಲ; ಆತನಿಗೆ ಆ ರೀತಿಯ ಆದೇಶವಿತ್ತು ಎಂಬರ್ಥದ ಭಾವ ಆತನ ಮುಖದಲ್ಲಿ ಪ್ರಕಟವಾಗುತ್ತಿತ್ತು. ಆದರೆ ಭಾರತಿ ಒತ್ತಾಯಪಡಿಸಿದಳು.

"ಹೇಳೋ. ನಾಚಿಗೆ ಯಾಕೆ ?"

"ದೊಡ್ಡಣ್ಣ ಯಾವಾಗ ಬರುತ್ತಾನೆಂದು ಕಾಗದವಿದೆಯೇ ಎಂದು ಕೇಳಿದ್ದಾಳೆ, ಅತ್ತಿಗೆ." ಎಂದ.

ಭಾರತಿಗೆ ಮತ್ತೆ ಅಲ್ಲಿ ನಿಲ್ಲಲಾಗಲಿಲ್ಲ.

ನರಹರಿಯೂ ಹೆಚ್ಚು ಹೊತ್ತು ಅಲ್ಲಿ ನಿಲ್ಲಲಿಲ್ಲ. ಒಳಗಿನಿಂದ ಬಂದ ಸದಾ ಇವನನ್ನೇ ದಿಟ್ಟಿಸಿ ನೋಡುತ್ತಿದ್ದ. ಶುಭ್ರವಾದ ವಸ್ತ್ರಗಳಿಂದ ಅಲಂಕೃತನಾದ ಆತ, ಕೊಳೆಯಾದ ಹರಕಲು ಅಂಗಿಯನ್ನು ಹಾಕಿಕೊಂಡ ಸಮವಯಸ್ಕ

ನೆಂಟನನ್ನು ಅಸಹ್ಯದೃಷ್ಟಿಯಿಂದ ನೋಡುತ್ತಿದ್ದ. ಆದರೆ ನರಹರಿ ಇದಾವು ದನ್ನೂ ಗಮನಿಸದೆ "ಹೋಗಿ ಬರುತ್ತೇನೆ, ಅತ್ತಿಗೆ." ಎಂದು ಹೇಳಿ ಅಲ್ಲಿಂದ ಜಾರಿದ

ಮತ್ತೆ ನಾಲ್ಕು ದಿನ ಕಳೆದ ನೇಲೆ ಅನಂತನ ಕಾಗದ ಬಂತು. ಅದೂ ಶ್ರೀಪತಿರಾಯರಿಗೆ ಮಾತ್ರ ಭಾರತಿಗೆ ಪ್ರತ್ಯೇಕ ಕಾಗದವಿರಲಿಲ್ಲ. ಅದರಲ್ಲಿ ಅವನು ಬರೆದಿದ್ದುದಿಷ್ಟೆ :

'ತುಂಬ ಕೆಲಸದ ಅವಸರದಲ್ಲಿದ್ದೇನೆ ಮಾವಯ್ಯ. ಮನೆಯ ಗಲಭೆಯ ವಿಚಾರ ತಿಳಿದು ಬೇಸರವಾಯಿತು. ಮನುಷ್ಯನ ಎಲ್ಲ ಒಳ್ಳೆಯ ಗುಣಗಳನ್ನು ಕೊಲ್ಲುವಷ್ಟು 'ಬಡತನ' ತೀಕ್ಷ್ಣವಾಗಿದೆಯೆಂದು ನಿಮಗೆ ಗೊತ್ತಿದೆ. ನನ್ನ ತಂದೆಯಿಂದ ಯಾವುದೆ ಪ್ರಮಾದ ಆಗಿರುವುದಾದರೂ ಅದಕ್ಕೆ ಈ ಸಮಾಧಾನ ಅನ್ವಯಿಸಿ ಮರೆತುಬಿಡುವಿರೆಂದು ನಂಬಿದ್ದೇನೆ. ಮನೆಗಾಗಿ ತುಂಬ ಪ್ರಯತ್ನಿಸುತ್ತಿದ್ದೇನೆ. ಪದ್ದನನ್ನು ಬಿಟ್ಟಿರಬಾರದೆಂದು ಸೌ|| ಭಾರತಿಗೆ ತಿಳಿಸುವಿರಾಗಿ ನಂಬಿದ್ದೇನೆ.'

ಈ ಪತ್ರದಿಂದ ಶ್ರೀಪತಿರಾಯರು ಯಾವ ಸಮಾಧಾನವನ್ನು ಪಡೆಯ ಬೇಕಿತ್ತೋ!

ಪತ್ರ ಬಂದ ದಿನವೇ ಶ್ರೀಪತಿರಾಯರು ಭಾರತಿಯನ್ನು ಕರೆದು ಆಕೆಗೆ ಅದನ್ನು ತೋರಿಸಿದರು. ಓದಿ ನೋಡಿದ ಮೇಲೂ ಭಾರತಿ ಮಾತನಾಡಲಿಲ್ಲ.

"ಏನು, ಭಾರೀ? ಏನು ಮಾಡುತ್ತೀ?" ಎಂದು ಪ್ರೀತಿಯಿಂದಲೇ ರಾಯರು ಕೇಳಿದರು.

ಅವಳಿಗೆ ಯಾವ ಉತ್ತರವನ್ನು ಕೊಡುವುದು ಕೂಡಾ ಸಾಧ್ಯವಾಗಲಿಲ್ಲ. ಉತ್ತರಿಸದೆಯೆ ಒಳಗೆ ನಡೆದಳು.

ರಾಯರಿಗೆ ಬಿಡುಗಡೆಯ ದಾರಿ ಹೊಳೆಯಲಿಲ್ಲ.

ಮಗಳ ಮಾವನ ಮನೆಯ ಪ್ರಕರಣ ನಡೆದ ಮೇಲೆ ಸಾಧ್ಯವಿದ್ದಷ್ಟು ಜನರಿಂದ ದೂರವಿರಲು ಪ್ರಯತ್ನಿಸುತ್ತಿದ್ದ ಶ್ರೀಪತಿರಾಯರಿಗೂ ಆ ಸಂಜೆ ಕೋರ್ಟು ಮುಗಿಸಿ ಹೊರಗೆ ಬರುವ ಹೊತ್ತಿಗೆ ಸರಿಯಾಗಿ ಸಿಕ್ಕಿದ ಗೋಪಣ್ಣ ಶಾನುಭಾಗರಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ರಾಯರನ್ನು ಮಾತನಾಡಿಸುವ ಉದ್ದೇಶದಿಂದಲೇ ಮುಂದುವರಿದು ಬಂದಿದ್ದ ಅವರು ಕೇಳಿದರು :

"ಏನು, ವಕೀಲರೆ? ಎಲ್ಲಾ ಸೌಖ್ಯವೇ? ಮಗಳು ಅಳಿಯ ಎಲ್ಲ ಹೇಗಿದ್ದಾರೆ?"

ರಾಯರು ಏನೋ ಸಮಾಧಾನದ ಉತ್ತರ ಕೊಟ್ಟು ಜಾರುವವರು. ಆದರೆ ಶಾನುಭಾಗರು ಇನ್ನೊಂದು ಮಾತು ಹೇಳಿದರು :

"ನಿನ್ನೆ ಉಡುಪರ ಭೆಟ್ಟಿಯಾಗಿತ್ತು. ಮಗನ ಕಾಗದ ಬಂದಿದ್ದಿತಂತೆ."

ಈಗ ರಾಯರ ಕುತೂಹಲ ಕುದುರಿತು. ಉಡುಪರು ಯಾವುದಾದರೊಂದು ರೀತಿಯ ಮಧ್ಯಸ್ಥಿಕೆಯಿಂದ ಈ ಒಳಜಗಳ ಬಗೆಹರಿಯಲಿ ಎಂದು ಶಾನುಭಾಗರನ್ನು ಕಳುಹಿಸಿರಬಹುದೇ ಎಂದು ಅವರು ಆಲೋಚಿಸುವಂತಾಯಿತು.

ರಾಯರು ನಿಧಾನಿಸಿದುದನ್ನು ಕಂಡು ಶಾನುಭಾಗರು ಇನ್ನಷ್ಟು ಸಲಿಗೆ ವಹಿಸಿ ಹೇಳಿದರು :

"ಅವನಿಗೆ ಇಷ್ಟು ಮಕ್ಕಳಾದರೂ ಬುದ್ಧಿಯಿಲ್ಲ. ಇದಿರು ಸಿಟ್ಟು ಮೂಗಿನ ತುದಿಯಲ್ಲಿದೆ. ತಾನು ಯಾರು, ತನ್ನ ಅಂತಸ್ತೇನು ಎಂದು ತಿಳಿಯದೆ ಏನಾದರೂ ಹೇಳಿಬಿಡುತ್ತಾನೆ."

'ಅಂತಸ್ತಿ'ನ ಪ್ರಶ್ನೆಗೆ ರಾಯರು ಹೆಚ್ಚು ಮಹತ್ವ ಕೊಡಲಿಲ್ಲವಾದರೂ ಮಾತು ಉಡುಪರನ್ನುದ್ದೇಶಿಸಿದೆಯೆಂದು ತಿಳಿಯಲು ಕಷ್ಟವಾಗಲಿಲ್ಲ.

"ಏನೋ ಸೊಸೆಗೆ ನಾಲ್ಕು ಮಾತು ಹೇಳಿದನೆಂದು ಕಾಣುತ್ತದೆ. ನಿಮ್ಮಂಥವರು ಅವನ್ನೆಲ್ಲ ಮರೆತುಬಿಡಬೇಕು, ರಾಯರೆ."

ರಾಯರು ಶಾನುಭಾಗರೊಡನೆ ಮಾತು ಮುಂದುವರಿಸಬೇಕೇ ಬೇಡವೇ ಎಂದು ಯೋಚಿಸುತ್ತಿದ್ದರು.

"ಏನೋ ಮನೆಯ ಜಗಳ, ಶಾನುಭಾಗರೆ. ಇವೊತ್ತಲ್ಲ ನಾಳೆ ಸರಿಯಾಗುತ್ತದೆ."

"ಅದೇ ನಾನೂ ಹೇಳಿದ್ದು. ಆ ಕಾಯಿಲೆಯ ಹುಡುಗ ನಿಮ್ಮ ಮಗಳನ್ನು ತುಂಬ ನೆಚ್ಚಿಕೊಂಡಿತ್ತೆಂದು ಕಾಣುತ್ತದೆ. ಈಗ ಎರಡು ದಿನಗಳಿಂದ ಸ್ಮೃತಿಯಿಲ್ಲ. ಆ ತಾಯಿ ಬೊಬ್ಬೆ ಹಾಕುವುದನ್ನು ನೋಡಲು ಸಾಧ್ಯವಿಲ್ಲ. ಹೀಗಾಗಿ ನಿಮ್ಮನ್ನು ಹುಡುಕಿಕೊಂಡು ಬಂದೆ." ಎಂದರು.

ರಾಯರಿಗೆ ಮತ್ತೆ ನಿರ್ಧಾರ ಮಾಡಬೇಕಾದ ಅಗತ್ಯವಿರಲಿಲ್ಲ.

"ನೀವೂ ಜೊತೆಗೆ ಬರುತ್ತೀರೇನು, ಶಾನುಭಾಗರೆ. ಅಲ್ಲಿಯ ತನಕ ಹೋಗಿ ಬರೋಣವೆ?" ಎಂದು ಕೇಳಿದರು.

ಶಾನುಭಾಗರು ಸಿದ್ಧರಾಗಿಯೇ ಇದ್ದರು. ರಾಯರು ಮನೆಯ ತನಕ ಹೋಗದೆ, ಬಟ್ಟೆ ಬದಲಿಸದೆ, ಸೀದಾ ಉಡುಪರ ಮನೆಯ ದಾರಿ ಹಿಡಿದರು —ಶಾನುಭಾಗರ ಜೊತೆಗೆ.

ಮನೆ ತಲಪುವಾಗ ಸಂಜೆಯಾಗಿತ್ತು. ಉಡುಪರು ಚಾವಡಿಯಲ್ಲಿ ಕುಳಿತಿದ್ದರು. ಆಗತಾನೇ ಬಂದಿದ್ದ ಉಡುಪಿಯ ತಜ್ಞ ಡಾಕ್ಟರೊಬ್ಬರು 'ಇಂಜೆಕ್ಶನ್' ಚುಚ್ಚಿ ಹೊರಡುವುದರಲ್ಲಿದ್ದರು. ಡಾಕ್ಟರರಿದ್ದುದು ವಕೀಲರಿಗೆ ಅನುಕೂಲವೇ ಆಯಿತು. ಉಡುಪರು ಮಾತನಾಡಲಿಲ್ಲ. ಆದರೆ ಡಾಕ್ಟರರು ತುಂಬ ಮಾತನಾಡಿದರು. ರೋಗಿಯ ವಿಚಾರ ಹೆಚ್ಚೇನೂ ಹೇಳದಿದ್ದರೂ ಆ ಮನೆಯೊಳಗೆ ಪ್ರವೇಶಿಸುವಾಗ ಯಾರೂ ತಮ್ಮನ್ನು ಮಾತನಾಡಿಸದೆ ಅವಮಾನವಾಗುವುದೇ ಎಂಬ ಶಂಕೆಯಿಂದಿದ್ದ ಶ್ರೀಪರಾಯರಿಗೆ ಡಾಕ್ಟರರಿದ್ದುದ ರಿಂದ ತುಂಬ ಸಮಾಧಾನವಾಯಿತು.

ಅವರು ಹೊರಟುಹೋದ ಮೇಲೆ, ಪದ್ದ ಮಲಗಿದಲ್ಲಿಂದ ರಾಯರೂ ಶಾನುಭಾಗರೂ ಹೊರಗೆ ಬಂದಾಗ, ಉಡುಪರು ಮಾತಿಗಾರಂಭಿಸಿದರು :

"ನನ್ನ ಹುಡುಗನ ತಲೆಗೆ ಮದ್ದು ಹಾಕಿ ವಶಪಡಿಸಿಕೊಂಡಿರಬೇಕು. ಈಗ ಚೆಂದ ನೋಡಲಿಕ್ಕೆಂದು ಬಂದಿರುವರೆಂದು ಕಾಣುತ್ತದೆ. ಸಾಯಲು ಹೊರಟಿರುವ ಮಗುವನ್ನು ನೋಡಲು ಕೂಡ ಬಾರದೆ ಉಳಿಯುವಷ್ಟು ಧಿಮಾಕು, ನಾವು ತುಂಬ ಆಸೆಯಿಂದ ಮನೆಗೆ ಕರೆದುಕೊಂಡು ಬಂದ ಹುಡುಗಿಗೆ."

ಮಾತು ಸ್ವಗತದಂತೆ ಇತ್ತಾದರೂ ಅದರ ನಂಜು ವ್ಯಾಪಕವಾಗಿತ್ತು. ಶ್ರೀಪತಿರಾಯರಿಗೆ ಮತ್ತೆ ಮಾತನಾಡುವುದೇ ಸಾಧ್ಯವಾಗಲಿಲ್ಲ. ಗೋಪಣ್ಣ ಶಾನುಭಾಗರಿಗೆ ಈಗ ತಾನೇಕೆ ವಕೀಲರನ್ನು ಕರೆದುಕೊಂಡು ಬಂದೆ ಎಂದೆನ್ನು ವಂತಾಗಿತ್ತು.

ಒಂದು ಬದಿಯಲ್ಲಿ ನಿಂತು ಕಣ್ಣೀರು ಸುರಿಸುತ್ತಿದ್ದ ನಾಗಮ್ಮನಿಂದ ಯಾರಿಗೂ ಸಮಾಧಾನ ಸಿಗಲಿಲ್ಲ.

ಆದರೆ ಶ್ರೀಪತಿರಾಯರಿಗೆ ಈ ಅವಸ್ಥೆಯಿಂದ ಚೇತರಿಸಿಕೊಳ್ಳಲು ಹೆಚ್ಚು ಸಮಯ ಬೇಕಾಗಲಿಲ್ಲ.

"ನೀವು ಹೇಳುವುದಾದರೂ ಏನು, ಉಡುಪರೆ? ನಮ್ಮಿಂದ ಯಾವ ತಪ್ಪಾಗಿದೆಯೆಂದು ತಿಳಿಸಿ. ಭಾರತಿ ಏನು ತಪ್ಪುಮಾಡಿದ್ದಾಳೆಂದು ಹೇಳಿ.

ನೀವು ಇಷ್ಟು ತಿಳಿದವರು, ಆ ಹುಡುಗಿ ಒಂದು ವೇಳೆ ತಪ್ಪುಮಾಡಿದ್ದರೂ ಕ್ಷಮಿಸಬೇಕು. ಅಂಥದರಲ್ಲಿ...."

"ನಮಗೆ ಜನ್ಮಜನ್ಮಾಂತರಕ್ಕೂ ದೊಡ್ಡವರ ನೆಂಟಸ್ತಿಕೆ ಬೇಡ. ಈಗ ಅನುಭವಿಸುವುದೇ ಸಾಕಾಗಿದೆ. ಅನಂತನಿಗೆ ಹುಚ್ಚು ಹಿಡಿದಿದೆ—ಹೆಂಡತಿಯ ಹುಚ್ಚು. ಅದೇ ಅವನು ಆ ರೀತಿ ಸೊಕ್ಕಿನ ಕಾಗದ ಬರೆದಿದ್ದಾನೆ...."

ಇದಕ್ಕೇನು ಉತ್ತರ ಹೇಳುವುದೆಂದು ಶ್ರೀಪತಿರಾಯರಿಗೆ ಹೊಳೆಯಲಿಲ್ಲ. ಉಡುಪರು ಪುನಃ ಮಾತು ಮುಂದುವರಿಸಿದರು :

"ಅನಂತ ಒಳ್ಳೆಯ ಹುಡುಗ. ಅವನಿಗೇನೋ ಆಗಿದೆ. ಯಾರೋ ಅವನ ತಲೆಗೆ ಮದ್ದು ಹಾಕಿದ್ದಾರೆ...."

ಈಗ ಗೋಪಣ್ಣ ಶಾನುಭಾಗರಿಗೆ ಸಿಟ್ಟು ತಡೆಯಲಾಗಲಿಲ್ಲ.

"ಏನು, ಸೀತಾರಾಮ. ಬಾಯಿಗೆ ಬಂದ ಹಾಗೆ ಮಾತನಾಡಿ ಏನು ಪ್ರಯೋಜನ. ಮರ್ಯಾದಸ್ಥ ನೆಂಟರು ಮನೆಗೆ ಬಂದಿದ್ದಾರೆಂದು ಈ ರೀತಿ ಸಸಾರವೆ?"

"ನಿಮಗೆ ಯಾರು ಬರಲಿಕ್ಕೆ ಹೇಳಿದರು. ನಿಮ್ಮ ಹಣ ಕೊಟ್ಟು ನೋಟು ಬಿಡಿಸಿಕೊಳ್ಳಲಿಲ್ಲವೆ? ಆಸ್ತಿ ಮಾರಿ ನನ್ನ ಮಕ್ಕಳು ಗಂಜಿಯಿಲ್ಲದೆ ಸತ್ತರೂ ಚಿಂತಿಲ್ಲ; ಋಣದ ಹಂಗು ಬೇಡ."

ಶ್ರೀಪತಿರಾಯರು ಈಗ ಶಾನುಭಾಗರ ಸಹಾಯಕ್ಕೆ ಬಂದರು :

"ಸುಮ್ಮಗೆ ಈಗ ಮಾತನಾಡಿ ಪ್ರಯೋಜನವಿಲ್ಲ, ಶಾನುಭಾಗರೆ. ಅವರಿಗೆ ಮಗನ ಅಸ್ವಸ್ಥತೆಯಿಂದಲೇ ಬೇಸರ ತುಂಬಿಹೋಗಿದೆ. ಇನ್ನಷ್ಟು ನೋವು ಕೊಟ್ಟು ಏನು ಪ್ರಯೋಜನ. ಹೋಗೋಣ ಬನ್ನಿ." ಎಂದವರು ನಾಗಮ್ಮನನ್ನುದ್ದೇಶಿಸಿ, "ಹೋಗಿಬರುತ್ತೇವೆ." ಎಂದು ಅಲ್ಲಿಂದೆದ್ದರು.

ಉಡುಪರು ಉತ್ತರ ಹೇಳಲಿಲ್ಲ.

ರಾಯರು ಮನೆ ಸೇರಿದಾಗ ಕತ್ತಲಾಗಿತ್ತು. ತಂದೆಯ ಮುಖ ಕಂಡೇ ಭಾರತಿ ಹೆದರಿದ್ದಳು ರಾಯರು ಮನೆ ಸೇರುವ ಮುನ್ನ ಪದ್ಮನಾಭನ ಡಾಕ್ಟರರನ್ನು ಅವರ ಡಿಸ್ಪೆನ್ಸರಿಯಲ್ಲಿ ಭೆಟ್ಟಿಯಾಗಿ ಬಂದಿದ್ದರು. ಅವರು ಕೊಟ್ಟ ನಿರಾಶೆಯ ಉತ್ತರದಿಂದ ಹೆದರಿದ್ದರು. ಈಗ ಭಾರತಿಯನ್ನು ಅಲ್ಲಿ ಕಳುಹಿಸಬೇಕೇ ಬೇಡವೇ? ಎಂದು ಅವರು ಯೋಚಿಸಬೇಕಿತ್ತು. ಈಗ ಕಳುಹಿಸದಿದ್ದರೆ ನಾಳೆ ಹುಡುಗನಿಗೇನಾದರೂ ಆದರೆ ಲೋಕಾಪವಾದವನ್ನು ಸಹಿಸಬೇಕಾಗಿ

ಬರುವುದೇ ಎಂದು ಹೆದರಬೇಕಿತ್ತು. ಅಷ್ಟೇ ಅಲ್ಲದೆ, ಅನಂತ ಏನು ಹೇಳಬಹುದು, ಎಂದು ವಿಚಾರಿಸಬೇಕಿತ್ತು.

ಆದರೆ ಈ ಸಮಸ್ಯೆ ಅನಿರೀಕ್ಷಿತ, ಅನಪೇಕ್ಷಿತ ರೀತಿಯಲ್ಲಿ ಪರಿಹಾರ ಪಡೆಯಿತು.

ಅದೇ ರಾತ್ರೆ ಒಂಬತ್ತು ಘಂಟೆಯ ಹೊತ್ತಿಗೆ ನಾಗಮ್ಮ ಅಳುತ್ತಲೇ ಶ್ರೀಪತಿರಾಯರ ಮನೆಯೊಳಗೆ ಬಂದರು.

ನಾಗಮ್ಮನನ್ನು ಕಂಡು ಮನೆಯವರೆಲ್ಲ ಹೊರಗೆ ಬಂದಿದ್ದರು. ಭಾರತಿ ಮುಖ ತಗ್ಗಿಸಿ ನಿಂತಿದ್ದಳು.

"ನೀನು ಬಾರದೆ ಹೋದರೆ ನನ್ನ ಮಗು ಉಳಿಯುವುದಿಲ್ಲ, ಭಾರತೀ. ಪಾರ್ವತಿ ಈಗತಾನೇ ಬಂದಿದ್ದಾಳೆ. ಮನೆಯನ್ನು ಅವಳ ಕೈಯಲ್ಲಿ ಬಿಟ್ಟು ಬಂದಿದ್ದೇನೆ. ಏನು ತಪ್ಪಾದರೂ ಮರೆತು ಹೊರಟು ಬಾ." ಎಂದು ಅಳುತ್ತ ಅತ್ತೆ ಹೇಳಿದಾಗ ಭ ರತಿಗೆ ಏನು ಮಾಡುವುದೆಂದು ತೋರಲಿಲ್ಲ.

"ಹೋಗೋಣ, ಅತ್ತೆ." ಎಂದು ಬೇರೆ ಮಾತು ಹೇಳದೆ ಅತ್ತೆಯನ್ನು ಅನುಸರಿಸಿದಳು.

ಆದರೆ ಅತ್ತೆ ಸೊಸೆಯರಿಬ್ಬರೂ ಮನೆ ಸೇರುವುದರೊಳಗೆ ಪದ್ಮನಾಭ ತೀರಿಕೊಂಡಿದ್ದ.

ಅಳು ತುಂಬಿದ ಮನೆಗೆ, ಅಳುತ್ತಲೇ ಭಾರತಿ ಅತ್ತೆಯನ್ನನುಸರಿಸಿ ಬಂದಳು.

೮

ಭಾರತಿಯ ಜೀವನವಲ್ಲಿ ಅದೆಂದೆಂದಿಗೂ ಮರೆಯಲಾಗದ ರುದ್ರರಾತ್ರಿ.

ಪದ್ಮನಾಭನ ಶವವನ್ನೆತ್ತಿಕೊಂಡು ಹೋದಾಗ ನಾಗಮ್ಮ ಎದೆ ಬಿರಿಯುವಂತೆ ಮಾಡಿದ ಆರ್ತನಾದ ಭಾರತಿಯ ಹೃದಯದಲ್ಲಿ ಬಹಳ ಕಾಲದವರೆಗೆ ಮರುದನಿ ಕೊಡುತ್ತಿತ್ತು. ಪಾರ್ವತಿಯೊಬ್ಬಳು ಬಳಿಯಿರದಿದ್ದರೆ ಆಕೆ ಆ ರಾತ್ರಿಯನ್ನು ಮಾವನ ಮನೆಯಲ್ಲಿ ಕಳೆಯುವುದು ಸಾಧ್ಯವೇ ಇರಲಿಲ್ಲ.

ಉಡುಪರ ದುಃಖ ಹೆಂಡತಿಯ ಕುರಿತು ಸಿಟ್ಟಿಗೆ ಪರಿವರ್ತನೆ ಹೊಂದಿತ್ತು. ಪದ್ಮನಾಭನ ಶವವನ್ನೇ ನೋಡುತ್ತ ಕಣ್ಣೀರು ಸುರಿಸುತ್ತ ಕುಳಿತಿದ್ದವರಿಗೆ, ಸೊಸೆಯೊಂದಿಗೆ ಮರಳಿದ ಹೆಂಡತಿ ರಾಕ್ಷಸಿಯಂತೆ ತೋರಿದಳು.

"ಮಗುವಿನ ಕೊನೆಯ ಗಳಿಗೆಗೆ ಒಂದು ಸಕ್ಕರೆ ತೀರ್ಥ ಹಾಕಲು ನೀನು ಹತ್ತಿರ ಇರಲಿಲ್ಲ. ಮಗುವಿಗಿಂತ ನಿನಗೆ ಸೊಸೆ ಹೆಚ್ಚಾಯಿತೆ?" ಎಂದು ಕೇಳಿದಾಗ, ಆ ತಾಯಿಕರುಳಿಗಾದ ವೇದನೆ ಅಷ್ಟಿಷ್ಟಲ್ಲ.

ತಂದೆಗೆ ಇದಿರು ಮಾತನಾಡದೆ ತಾಯಿಯನ್ನೂ ಅತ್ತಿಗೆಯನ್ನೂ ಸಂತೈಸತೊಡಗಿದುದು ಪಾರ್ವತಿಯೆ.

ಭಾರತಿಯ ದುಃಖ ನಾಗಮ್ಮನ ದುಃಖದಷ್ಟು ಆಳವಾಗಿರಲಿಲ್ಲವಾದರೂ ಪದ್ಮನಾಭನ ಶವವನ್ನು ನೋಡಿದಾಗ ಸಾವಿರ ನೆನಪುಗಳು ಆಕೆಯನ್ನು ಕಾಡಿ ಕಣ್ಣೀರು ಕೊನರಿಸುತ್ತಿದ್ದವು. ಸುಖವೆಂದರೇನೆಂದು ಕಂಡರಿಯದ ಆ ಎಳೆ ಜೀವ, ತನ್ನ ಕೊನೆಯ ದಿನಗಳಲ್ಲಿ ಅತ್ತಿಗೆಯ ನಗುಮುಖದಲ್ಲಿ, ಅತ್ತಿಗೆ ಮಾಡುತ್ತಿದ್ದ ಸೇವೆಯಲ್ಲಿ ಮಾತ್ರ ತೃಪ್ತಿಯನ್ನೂ ಸಂತೋಷವನ್ನೂ ಅನುಭವಿಸಿತ್ತು.

'ನೀನು ಹೋದರೆ ನಾನು ಉಳಿಯುವುದಿಲ್ಲ, ಅತ್ತಿಗೆ' ಎಂದು ಪದ್ಮನಾಭ ಹೇಳಿದ ಮಾತು ನಿಜವಾಗಿತ್ತು.

ಮಾವನೊಡನೆ ಜಗಳವಾಡಿ ಮನೆಬಿಟ್ಟು ಹೋದುದರಿಂದ ಈ ಪ್ರಮಾದ ವಾಯಿತೇ, ಪದ್ಮನಾಭನ ಮರಣಕ್ಕೆ ತನ್ನ ಹೊಣೆಗಾರಿಕೆಯೂ ಇದೆಯೇ ಎಂದು ಭಾರತಿ ಯೋಚಿಸಿದಷ್ಟು ಬಾರಿ ಆಕೆಗೆ ಕಣ್ಣೀರು ತಡೆಯಲಾಗುತ್ತಿದ್ದಿಲ್ಲ.

ಈ ದುಃಖದಲ್ಲಿ, ಈ ನೋವಿನಲ್ಲಿ, ಆಕೆಗೆ ಇಷ್ಟು ಗುರುತರವಾದ ಹೊಣೆಗಾರಿಕೆಯನ್ನು ತನ್ನ ಮೇಲೆ ಹಾಕಿ, ತನ್ನ ಪಾಡಿಗೆ ತಾನಾಯಿತು ಎಂದು ತನ್ನ ಗಂಡ ಇದ್ದಾನಲ್ಲ ಎಂಬ ಯೋಚನೆ ಮನಸ್ಸಿನಲ್ಲಿ ಸುಳಿದಾಗ, ಪಾರ್ವತಿಯ ಸುಖ, ಆ ದಾಂಪತ್ಯದ ಸೌಂದರ್ಯ ಮನಸ್ಸಿನಲ್ಲಿ ಮಿಂಚಿದಾಗ, ಈ ತುಲನೆಯ ವಿಚಾರಮಥನದಲ್ಲಿ ಹೃದಯ ಅತೃಪ್ತಿಯ ಸಾಗರವಾಗುತ್ತಿತ್ತು.

'ಅವರೇಕೆ ಬಂದು ನನ್ನನ್ನು ಕರೆದುಕೊಂಡು ಹೋಗುವುದಿಲ್ಲ?'

ಪದ್ಮನಾಭನ ಮರಣದ ಸುದ್ದಿಯ ತಂತಿ ಅನಂತನಿಗೆ ಸಿಕ್ಕಿದಾಗ ಆತನಿಂದ ಬಂದ ಮರುತಂತಿಯಲ್ಲಿ ಊರಿಗೆ ಬರುವ ವಿಚಾರವೇ ಇದ್ದಿಲ್ಲ.

ಆ ತಂತಿ ಪ್ರಕಟಿಸಿದುದು ಅನಂತನ ಅಪಾರ ದುಃಖವನ್ನು ಮಾತ್ರ.

ಆಮೇಲೆ ಬಂತು ಕಾಗದ; ಜೊತೆಗೆ ಉಡುಪರಿಗೆ ನೂರೈವತ್ತು ರೂಪಾಯಿಗಳ ಒಂದು ಮನಿಯಾರ್ಡರ್.

ಉಡುಪರಿಗೆ ಕಾಗದ ಕಂಡು ಉಂಟಾದ ಸಿಟ್ಟಿನ ಉಪಶಮನ ಸ್ವಲ್ಪ

ನಟ್ಟಿಗೆ ಆದುದು ಅದರ ಜೊತೆಗೆ ಬಂದ ಹಣದಿಂದಲೇ. ಹಣ ಕೈಗೆ ದೊರಕಿ ಮೇಲೆ ಆತನ ಕಾಗದದ ಸಹಜ ತರ್ಕ ಸರಿಯೆಂದು ಅವರಿಗೆ ತೋರಿತು. ಈ ಬರುತ್ತ ದಾರಿಯ ಖರ್ಚಿಗೆ ವ್ಯರ್ಥ ಹಣ ಸುರುವಿ ಉಪಯೋಗವೇನು ಬಂತು ಎಂಬ ಆರ್ಥಿಕವೇದಾಂತ ಸರಿಯೆಂದು ಅವರಿಗೆ ಭಾರತಿಯನ್ನು ನೋಡಿದಾ ಎನಿಸುತ್ತಿತ್ತು.

ಉಡುಪರು ಭಾರತಿಯನ್ನು ಬರಮಾಡಿಕೊಂಡುದು ತಿರಸ್ಕಾರದಿಂದಲೆ ಸೊಸೆಯ ಪರವಾಗಿ ಕೊನೆಯ ಗಳಿಗೆಯಲ್ಲಿ ಹೆಂಡತಿಯೂ ನಿಂತುದರಿಂದ ಈ ಲೀಗ ಈ ತಿರಸ್ಕಾರ ಹಂಚಿಹೋಗಿತ್ತು. ತಮ್ಮನ್ನು ಧಿಕ್ಕರಿಸಿಹೋದ ಸೊಸೆ ತಾವು ಕರೆಯದೆಯೇ ಮನೆಗೆ ಮರಳಿದಳೆಂದು ಅವರಿಗೆ ಹೆಮ್ಮೆಯೂ ಇರಲಿಲ್ಲ ತಮ್ಮನ್ನು ಅವಮಾನಿಸಿ ಹೋದವಳು ಪುನಃ ತಮ್ಮ ಆಶ್ರಯಕ್ಕೆ ಬಂದಿದ್ದಾ ಳೆಂದು ಬೇಸರವೂ ಇರಲಿಲ್ಲ.

ಆದರೆ ಭಾರತಿಗೆ ಮಾವನ ಮನೆಯ ಸಂಬಂಧ ತಮ್ಮಿಂದ ಕಡಿದುಹೋಗು ವಂತಾದರೆ, ಅನಂತ ಈ ಜಗಳದಲ್ಲಿ ಹೆಂಡತಿಯ ಪರವಾಗಿ ವಾದಿಸಿದರೆ, ಆತ ಆಕೆಯನ್ನು ಕರೆದುಕೊಂಡು ಮುಂಬಯಿಗೆ ಹೊರಟುಹೋದರೆ, ಆತನಿಂದ ಸಿಗುತ್ತಿರುವ ಆರ್ಥಿಕ ಸಹಾಯ ನಿಂತಂತೆಯೆ ಎಂದು ಮಾತ್ರ ಅವರು ಭಾರತಿ ಮನೆ ಬಿಟ್ಟುಹೋಗಿ ಎರಡು ವಾರಗಳಾಗುವುದರೊಳಗೇ ಯೋಚಿಸ ತೊಡಗಿದ್ದರು.

ಆ ಕಾರಣ ಸೊಸೆ ಮನೆಗೆ ಮರಳಿದ ಮೇಲೆ, ತಮ್ಮ ಹಿಂದಿನ ತಪ್ಪನ್ನು ತಿದ್ದಿಕೊಳ್ಳುವ ಯೋಚನೆ ಅವರಿಗಿರದಿದ್ದರೂ ಪುನಃ ಆಕೆಯನ್ನು ಕೆಣಕುವ ಎದೆಗಾರಿಕೆ ಉಂಟಾಗಲಿಲ್ಲ.

ಇತ್ತ ಶ್ರೀಪತಿರಾಯರಿಗೆ ಮಾತ್ರ ಮಗಳ ಪರಿಸ್ಥಿತಿಯ ಕುರಿತಾದ ಕಳವಳ ದಿನದಿಂದ ದಿನಕ್ಕೆ ಹೆಚ್ಚುತ್ತಿತ್ತು.

ಪದ್ಮನಾಭನ ಮರಣದ ಸುದ್ದಿ ಅವರಿಗೆ ತಿಳಿದಾಗ ಉಡುಪರು ರೇಗಿ ಕೊಂಡು ಇನ್ನೇನು ಮಾಡುವರೋ ಎಂದು ಹೆದರಿಕೊಂಡೇ ಇದ್ದರು. ಆದರೆ ಹಾಗೇನೂ ಆಗಲಿಲ್ಲ. ಹುಡುಗನ ಅಂತಿಮಕ್ರಿಯೆಗಳ ಸಂದರ್ಭದಲ್ಲಿ ಬರೇ ಲೋಕಾಪವಾದಕ್ಕೆ ಹೆದರಿ ಒಂದೆರಡು ಬಾರಿ ಉಡುಪರ ಮನೆಗೆ ಹೋಗಿ ಬಂದಿದ್ದರು. ಅಲ್ಲಿ ಕೆಲವೇ ದಿನಗಳಲ್ಲಿ ಕೃಶಳಾಗಿ ಕಾಣುತ್ತಿದ್ದ ಭಾರತಿಯನ್ನು ನೋಡಿದಾಗ, ಆಕೆಯನ್ನು ನಾಲ್ಕು ದಿನಗಳ ಮಟ್ಟಿಗಾದರೂ ಮನೆಗೆ ಕರೆದು

ಕೊಂಡು ಹೋಗಲಾರೆನೇ ಎಂದು ಮನಸ್ಸು ದುಃಖಗೊಳ್ಳುತ್ತಿತ್ತು. ಆದರೆ ಹಾಗೆಂದು ಉಡುಪರೊಡನೆ ಈ ವಿಚಾರ ಮಾತನಾಡುವ ಧೈರ್ಯ ಮಾತ್ರ ಉಂಟಾಗಲಿಲ್ಲ. ಉಡುಪರ ಅವಮಾನದ ಮಾತುಗಳ ನೋವು ಇನ್ನೂ ಮಾಸಿರಲಿಲ್ಲ.

ಹೀಗಾಗಿ ತಮ್ಮ ಕಳವಳವನ್ನು ಮಗಳೊಡನೆಯೂ ವ್ಯಕ್ತಪಡಿಸದೆ ರಾಯರು ಮರಳಿದ್ದರು.

ಈ ಸಂಧಿಯಿಂದ ಪಾರಾಗಲು ಅವರಿಗೆ ಗೊತ್ತಿದ್ದ ದಾರಿಯೊಂದೇ: ಅದು ಅನಂತನಿಗೆ ಬರೆಯುವ ಕಾಗದ.

ಆದರೆ ಇದು ಅಲ್ಪ ಸಮಾಧಾನ, ಅನಂತ ಬಂದು ಭಾರತಿಯನ್ನು ಕರೆದು ಕೊಂಡು ಹೋಗದೆ, ಯಾವ ಕಾಗದದಿಂದಲೂ ಪ್ರಯೋಜನವಿಲ್ಲವೆಂದು ಬರು ಬರುತ್ತ ರಾಯರಿಗೆ ಮನವರಿಕೆಯಾಗತೊಡಗಿತ್ತು.

ಭಾರತಿಗೆ ಈಗ ಸಮಾಧಾನ ದೊರಕುತ್ತಿದ್ದುದು ಪಾರ್ವತಿಯಿಂದ ಮಾತ್ರ. ತಾನು ಮಾವನೊಡನೆ ಜಗಳವಾಡಿ ಬಂದಮೇಲೆ ಗಂಡನಿಗೆ ಬರೆದ ಒಂದು ಪತ್ರಕ್ಕೆ, ಪದ್ಮನಾಭ ತೀರಿಕೊಂಡಮೇಲೆ ಒಂದು ಉತ್ತರ ಬಂದಿತ್ತು. ಅದೂ ಎಂಥ ಅವಸರದ ಕಾಗದ!

'ಮನೆಯ ಒದ್ದಾಟ ಇಷ್ಟೇ ಎಂದು ಹೇಳುವಂತಿಲ್ಲ, ಭಾರೀ. ಒಂದು ಸಣ್ಣ ಕೋಣೆ ಸಿಕ್ಕಿದರೆ ಮಾರನೆಯ ದಿನವೇ ನಿನ್ನ ಬಳಿಗೆ ಹಾರಿಬರುತ್ತೇನೆ. ಇದಕ್ಕಾಗಿಯೇ ಇಷ್ಟು ವಿಲಂಬ. ಇಷ್ಟು ಕಾಲ ಹೇಗೂ ನಿಂತೆ. ಇನ್ನೊಂದು ಕೆಲವು ತಿಂಗಳ ಕಾಲ ನನ್ನನ್ನು ಕ್ಷಮಿಸುವುದು ಸಾಧ್ಯವಿಲ್ಲವೆ? ಬಹುಶಃ ಸುನಂದೆಯ ಮದುವೆಯಾಗುವುದಾದರೆ ಆ ಸಮಯಕ್ಕೆ ಸರಿಯಾಗಿ ಬರಬಹು ದೇನೋ.'

ಎಲ್ಲ 'ರೆ' ರಾಜ್ಯಕ್ಕೆ ಸಂಬಂಧಿಸಿದ ಕನಸು.

ಈ ಪತ್ರಕ್ಕೆ ಭಾರತಿ ಉತ್ತರವನ್ನೇ ಬರೆಯಲಿಲ್ಲ. ಮನಸ್ಸನ್ನು ಕಲ್ಲು ಮಾಡಿಕೊಂಡು ಕುಳಿತಿದ್ದಳು. ಗಂಡನ ವಿಚಿತ್ರ ವರ್ತನೆ ಆಕೆಗೆ ಅರ್ಥವಾಗು ತ್ತಿರಲಿಲ್ಲ. 'ಮನೆ, ಮನೆ'ಯೆಂದು ಬಾಯಿಬಿಟ್ಟುಕೊಂಡು ಇನ್ನೆಷ್ಟು ಕಾಲ ಕುಳಿತಿರಬೇಕೆಂದು ಮನಸ್ಸು ಪ್ರಶ್ನಿಸುತ್ತಿತ್ತು. ಮಾವನ ಮನೆಯ ಈ ದುಃಖದ ವಾತಾವರಣವನ್ನು ಇನ್ನೆಷ್ಟು ಕಾಲ ಸಹಿಸಿಕೊಳ್ಳಬೇಕೆಂದು ಆಕೆ ಕಾತರಳಾಗುತ್ತಿದ್ದಳು.

ಆಗ ಸಮಾಧಾನ ಮಾಡುತ್ತಿದ್ದುದು ಪಾರ್ವತಿ.

"ಒಮ್ಮೊಮ್ಮೆ ಕಾಣುತ್ತಿದೆ ಅತ್ತಿಗೆ, ಅಣ್ಣನಂಥ ಹುಚ್ಚರು ಮದುವೆ ಮಾಡಿಕೊಳ್ಳಬಾರದು ಎಂದು. ಇಲ್ಲವಾದರೆ ಅವನು ಮಾಡುತ್ತಿರುವ ಕೆಲಸಕ್ಕೆ ನೀನು ಬಳಿಯಿದ್ದರೆ, ನಾಲ್ಕು ಭುಜ ಬಂದ ಹಾಗೆ ಅವನು ಸಂತೋಷಪಡ ಬೇಕು. ಹೀಗಿದ್ದೂ 'ಮನೆ ಸಿಗುವುದಿಲ್ಲ' ಎಂದು ಹೇಳುವಾಗ...."

"ಎಂದು ಹೇಳುವಾಗ....ಮತ್ತೆ ಮುಂದೇನು?" ಭಾರತಿ ನಗುತ್ತಲೇ ಕೇಳಿದಳು.

"ಮುಂಬಯಿಯ ಜನರಲ್ಲಿ ಅರ್ಧವಾಸಿ ಗಾಳಿಯಲ್ಲೇ ಮನೆಕಟ್ಟಿಕೊಂಡಿದ್ದಾರೋ ಎಂದು ಕಾಣಬೇಕು."

ಸೂತಕದ ಮನೆಯಲ್ಲಿ ಭಾರತಿ ಪಾರ್ವತಿಯರ ಕುಲುಕುಲು ನಗೆಯು ಕಾಡುಮಲ್ಲಿಗೆಯಂತೆ ಮಿಂಚಿ ಸೊರಗಿ ಮಾಯವಾಗುತ್ತಿತ್ತು.

ತಮ್ಮ ತೀರಿಕೊಂಡ ರಾತ್ರಿ ಬಂದ ಪಾರ್ವತಿ ಮತ್ತೊಂದು ತಿಂಗಳ ಕಾಲ ತವರಿನಲ್ಲೇ ಕಳೆದಳು.

ಸಾವಿನ ದುಃಖ, ಕಾಲನೊಂದಿಗೆ ಓಟದ ಸ್ಪರ್ಧೆಯಲ್ಲಿ ಸೋತು ಹಿಂದೆ ಸರಿಯುತ್ತಿದೆ ಎಂದು ಉಡುಪರಿಗೆ ಮನವರಿಕೆಯಾಗತೊಡಗಿದಾಗ ಇನ್ನೊಂದು ಸಮಸ್ಯೆ ತಲೆಯೆತ್ತಿ ನಿಂತಿತ್ತು.

ಪಾರ್ವತಿಯ ಚೊಚ್ಚಲ ಸಂಭ್ರಮ! ಮತ್ತೆ ಬಾಣಂತಿತನ.

ಬಡವರ ಮನೆಗೇ ಮಗಳನ್ನು ಕೊಟ್ಟಿದ್ದೇನೆ; ಹೆಚ್ಚು ಖರ್ಚಿಲ್ಲದೆ ಈ ಸಂಪ್ರದಾಯದ ಉತ್ಸವವನ್ನು ಮುಗಿಸಬಹುದು ಎಂದು ಉಡುಪರು ತಿಳಿದಿದ್ದರೂ ಎಷ್ಟು ಕಡಿಮೆಯೆಂದರೂ ನೂರಿನ್ನೂರು ರೂಪಾಯಿಗಳನ್ನು ಹೊರಗಿನಿಂದ ತರದೆ ಸಾಧ್ಯವಿರಲಿಲ್ಲ. ಆಗ ಅವರಿಗೆ ಉಳಿಯುತ್ತಿದ್ದುದು ಎರಡೇದಾರಿ: ಒಂದು ಅನಂತನನ್ನು ಕೇಳುವುದು, ಇನ್ನೊಂದು ಸಾಲ ಮಾಡುವುದು.

ಅನಂತ ತನ್ನಿಂದಾಗುವ ಸಹಾಯವನ್ನು ಮಾಡುತ್ತಿದ್ದಾನೆ ಎಂಬುದು ಉಡುಪರಿಗೆ ತಿಳಿದ ವಿಚಾರವೆ. ಆದರೆ ಸಂಕೋಚಕ್ಕೆ ಮರ್ಯಾದೆ ಕೊಟ್ಟರೆ 'ಸಾಲ'ವಷ್ಟೆ ಉಳಿದ ದಾರಿ.

ಆ ಸಾಲವನ್ನು ತೀರಿಸುವ ಬಗೆ ದೇವರಿಗೇ ಗೊತ್ತು.

ಪಾರ್ವತಿ ಗರ್ಭಿಣಿಯೆಂದು ತಿಳಿದಾಗ ಅನಂತ ಸಂತೋಷ ವ್ಯಕ್ತಪಡಿಸಿ ಕಾಗದ ಬರೆದಿದ್ದ. ಆದರೆ ಉಡುಪರು 'ಸೀಮಂತ'ದ 'ಉಡುಗೊರೆ'ಗಳ

ಸುದ್ದಿ ತೆಗೆದಾಗ 'ಇವು ಅಗತ್ಯವೇ ?' ಎಂದು ಸಂದೇಹ ಸೂಚಿಸಿ ಕಾಗದ ಬರೆದಿದ್ದ. ಈ ಚರ್ಚೆ ಉಡುಪರನ್ನು ಕೆಣಕುತ್ತಿತ್ತು. ಮಗ ತನ್ನಿಂದ ಸಹಾಯ ಮಾಡುವುದು ಸಾಧ್ಯವಿಲ್ಲ ಎಂದು ಬರೆದರಾದರೂ ಅವರು ಅಷ್ಟು ಬೇಸರಪಡುತ್ತಿದ್ದಿಲ್ಲ. ಆದರೆ ಇದು ಅಗತ್ಯವೆ ? ಎಂದು ಆತ ಶಂಕಿಸಿ ತಾನು ಅಗತ್ಯವೆಂದು ಮನಗಂಡ ವಿಚಾರಗಳ ಕುರಿತು ಸಂದೇಹ ವ್ಯಕ್ತಪಡಿಸುತ್ತಿದ್ದಾಗ ಅವರಿಗೆ ನೋವಾಗುತ್ತಿತ್ತು.

ಹೀಗಾಗಿ ಸ್ವಲ್ಪ ನಿಷ್ಠುರವಾಗಿಯೇ 'ನನ್ನ ಮಗಳಿಗೆ ಏನೇನೆಲ್ಲ ಆಗ ಬೇಕೆಂದು ನನಗೆ ತಿಳಿಯದೆ ? ನಿನಗೆ ಸಾಧ್ಯವಾದರೆ ಹಣ ಕಳುಹಿಸು. ಇಲ್ಲ ವಾದರೆ ಬೇರೆ ಎಲ್ಲಿಯಾದರೂ ನೋಡುತ್ತೇನೆ' ಎಂದು ಬರೆದಿದ್ದರು.

ಅನಂತ ಮತ್ತೆ ಚರ್ಚೆ ಬೆಳಸದೆ—ಅದೂ ಪಾರ್ವತಿಯೆಂದರೆ ಆತ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ತಂಗಿ—ಪುನಃ ನೂರೈವತ್ತು ರೂಪಾಯಿ ಕಳಿಸಿದ್ದ.

ಹೇಗೆ ಎರಡು ಮೂರು ತಿಂಗಳ ಅವಧಿಯಲ್ಲಿ ಮುನ್ನೂರು ರೂಪಾಯಿ ಗಳ ತನಕ ಮನೆಗೆ ಹಣ ಕಳುಹಿಸಬೇಕಾಗಿ ಬಂದುದರಿಂದ ಅನಂತ ತನ್ನ 'ಮನೆ'ಯ ವಿಚಾರವನ್ನು ಅಷ್ಟೇ ತಿಂಗಳು ಮುಂದುವರಿಸಬೇಕಾಗಿ ಬರುವು ದೆಂದು ಭಾರತಿಗೆ ತಿಳಿಯಲಿಲ್ಲ. ಬೇರೆ ಯಾರಿಗೂ ತಿಳಿಯಲಿಲ್ಲ.

ಅನಂತ ತನ್ನ 'ಸಂಸಾರ'ದ ಆಸೆಯನ್ನು ಈ ರೀತಿ ಕರಗಿಸುತ್ತಿದ್ದ. ಆದರೆ ಈ ಗುಟ್ಟನ್ನು ಯಾರಿಗೂ ತಿಳಿಯಗೊಡದಂತೆ ಮೌನವನ್ನವಲಂಬಿಸಿದ್ದ.

ಶ್ರೀಪತಿರಾಯರಿಗಾದರೂ ಇದರ ಸುಳಿವು ಹತ್ತಿದ್ದರೆ ಅವರು ತಮ್ಮ ಬುದ್ಧಿಶಕ್ತಿಯನ್ನುಪಯೋಗಿಸಿ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸು ತ್ತಿದ್ದರು. ಅವರ .ಅನುಕೂಲ ಪರಿಸ್ಥಿತಿಯಲ್ಲಿ ಈ ಸಮಸ್ಯೆ ಸಮಸ್ಯೆಯಾಗಿ ತೋರುವಂತಿದ್ದಿಲ್ಲ. ಆದರೆ ಸಮಸ್ಯೆಯೊಂದು ಇದೆಯೆಂದು ತಿಳಿದರಲ್ಲವೆ ಈ ಮಾತು.

ಮುಂಬಯಿಯಲ್ಲಿ ಅನಂತನ ಆದರ್ಶವೇನೆಂಬುದನ್ನು ರಾಯರು ಗುರುತಿ ಸಿದ್ದರು. ಆದರೆ ಆತನ ವ್ಯವಹಾರ ಜೀವನದ ಕುರಿತು ಯಾವುದೊಂದು ಕಲ್ಪನೆಯೂ ಅವರಿಗಿರಲಿಲ್ಲ.

ಪಾರ್ವತಿಯ ಸೀಮಂತದ ವಿಧಿಗಳು ಸಂಭ್ರಮದಿಂದಲೇ ಜರುಗಿದವು. ಅನಂತ ಸಹಾಯ ಮಾಡಿ 'ಸದ್ಯ ಸಾಲಮಾಡಬೇಕಾದ ಪ್ರಸಂಗ ತಪ್ಪಿಸಿದ'

ಎಂದು ತುಸು ಉಲ್ಲಸಿತರಾಗಿದ್ದ ಉಡುಪರು, ಹೆದರಿಕೊಂಡು ಮನೆಗೆ ಬಂದಿದ್ದ ಶ್ರೀಪತಿರಾಯರೊಡನೆ ನಾಲ್ಕು ಮಾತು ಆಡಿದರು. ಮಾತು ಪರ್ಯಾಯ ವಾಗಿ ಭಾರತಿಯೆಡೆ ಹೊರಳಿತ್ತು.

"ಅನಂತ ಭಾರತಿಯನ್ನು ಯಾವಾಗ ಕರೆಸಿಕೊಳ್ಳುತ್ತಾನಂತೆ? ಏನಾದರೂ ಬರೆದಿದ್ದಾನೇನು?" ರಾಯರು ಅಧೈರ್ಯದಿಂದಲೇ ಕೇಳಿದರು. ಆದರೆ ಉಡುಪರು ಈ ಪ್ರಶ್ನೆಯಿಂದ ಸಿಟ್ಟಿಗೇಳಲಿಲ್ಲ.

"ಇವೊತ್ತಲ್ಲದಿದ್ದರೆ ನಾಳೆ ಕರೆಸಿಕೊಳ್ಳದಿರಲಾಗುತ್ತದೆಯೆ? ಅದೂ ಹೋಟೆಲಿನ ಊಟ ಎಷ್ಟು ದಿನ ರುಚಿಸೀತು? ಆದರೂ ಮನೆ ಸಿಗುವುದು ಬಹಳ ಪ್ರಯಾಸದ ಮಾತಂತೆ. ಅದೇ ಇಷ್ಟು ವಿಲಂಬವೆಂದು ಕಾಣುತ್ತದೆ" ಎಂದರು.

ರಾಯರಿಗೆ ಮತ್ತೆ ಮಾತನಾಡುವುದು ವ್ಯರ್ಥವೆಂದು ತೋರಿತು. ಅವರಿಗೆ ತಿಳಿದಿರದ ವಿಚಾರವೇನೂ ಉಡುಪರು ಹೇಳುವಂತಿರಲಿಲ್ಲ. ಅಥವಾ ಮಗನೊಡನೆ ಸೊಸೆಯನ್ನು ಆದಷ್ಟು ಬೇಗ ಕರೆಸಿಕೊಳ್ಳು ಎಂದು ಒತ್ತಾಯಿಸುವ ಇಚ್ಛೆಯಿದ್ದವರಂತೆಯೂ ತೋರಲಿಲ್ಲ.

ಆದರೆ ತಂದೆ ಮಾವನೊಡನೆ ಮಾತನಾಡಿದುದರಿಂದ ತುಂಬ ಸಮಾಧಾನ ವಾದುದು ಭಾರತಿಗೆ. ಪದ್ಮನಾಭನ ಮರಣದ ನೋವು ಇನ್ನೂ ಆಕೆಯನ್ನು ಕೊರೆಯುತ್ತಿತ್ತು. ಅದಕ್ಕೆ ಸಂಬಂಧಿಸಿದ ಘಟನೆಗಳೆಲ್ಲ ಮರೆತು ಹೋಗುವಂಥ ಸೌಹಾರ್ದಮಯ ವಾತಾವರಣವನ್ನುಂಟುಮಾಡಲು ಅನಂತ ಬರಬಾರದೇ ಎಂದು ಆಕೆ ಎಷ್ಟೋ ಭಾರಿ ಯೋಚಿಸಿದುದುಂಟು. ಆದರೆ ಆತನ ಬರುವಿಕೆ ಇನ್ನೂ ನಿಶ್ಚಯದ ಮಾತಾಗಿರಲಿಲ್ಲವಾಗಿ, ಆಕೆ ಇದ್ದುದರಲ್ಲೇ ತೃಪ್ತಿಪಟ್ಟುಕೊಳ್ಳಬೇಕಿತ್ತು. ತಂದೆಯೊಡನೆ ಮಾವ ನಗುನಗುತ್ತ ಮಾತನಾಡುವುದನ್ನು ಕಂಡ ಭಾರತಿ ಇನ್ನು ಕೆಲವು ತಿಂಗಳವುಟ್ಟಿಗಾದರೂ ತಾನು ಗಂಡನ ಅಗಲಿಕೆಯ ನೋವಿನ ನಡುವೆಯೂ ತುಸುವಾದರೂ ಸಂತೋಷದಿಂದಿರಬಹುದೇ ಎಂದು ಯೋಚಿಸಿದಳು. ಪಾರ್ವತಿಯಂತೂ ಹೆರಿಗೆಗೆಂದು ತವರಿನಲ್ಲಿಯೇ ತುಂಬ ದಿನ ನಿಲ್ಲುವಾಕೆ. ಆಕೆಯು ಒಡನಾಟವಿದೆ. ಪದ್ಮನಾಭನ ಸಾವಿನ ನೋವು ಮಾತ್ರವಿದ್ದರೂ ದಿನವೂ ಆ ವಿಕಾರ ಮುಖ ನೋಡಿ ಕಳವಳ ತುಂಬಿದ ಎದೆಯಿಂದ ಅವನ ಶುಶ್ರೂಷೆ ಮಾಡುವ ಅಗತ್ಯ ಈಗ ಇಲ್ಲ. ಇಷ್ಟರಲ್ಲಿಯೇ ಸುನಂದೆಯ ಮದುವೆ ನಿಶ್ಚಯವಾಗಲಿದೆ ಎಂದು ಭಾರತಿಗೆ ಅತ್ತೆಯ

ಮನೆ ಸೇರಿದ ಮೇಲೆ ಮೊದಲ ಬಾರಿಗೆ ಆಸೆಯ ಜೀವನ ಇಲ್ಲಿಯೂ ಸಾಧ್ಯ ಎಂದು ತೋರಿಬಂದಿತು.

ಆದರೆ ಇಲ್ಲಿ ಕೂಡ ನಾನು ಕನಸು ಮನಸಿನಲ್ಲಿಯೂ ಯೋಚಿಸದ ತೊಂದರೆಗಳು ತನ್ನನ್ನು ಕಾಣಬಹುದು ಎಂದು ಭಾರತಿಗೆ ತಿಳಿದುದು, ಪಾರ್ವತಿ ಹೆರಿಗೆಗೆಂದು ತವರಿಗೆ ಬಂದ ಮೇಲೆಯೆ.

ವಯಸ್ಸಿನಲ್ಲಿ ಪಾರ್ವತಿ ಸುನಂದೆಗಿಂತಲೂ ಆರು ತಿಂಗಳಿಗೆ ಸಣ್ಣವಳು. ಭಾರತಿಗೂ ಆಕೆಗೂ ಮೂರು ವರ್ಷಗಳ ಅಂತರ. ಅಷ್ಟು ಸಣ್ಣ ಹುಡುಗಿ ಓರಗೆಯ ಗೆಳತಿಯಂತೆಯೇ ಇದ್ದುದರಿಂದ ಭಾರತಿಗೆ, ಪಾರ್ವತಿ ತಾಯಿಯಾಗ ಲಿದ್ದಾಳೆ ಎಂಬ ಸಮಾಚಾರ ಮನೆಯ ಹಿಂದಿನ ತೋಟದಲ್ಲಿ ಮೊದಲು ತಿಳಿದಾಗ ಒಂದು ವಿಚಿತ್ರ ರೀತಿಯ ಸಂತೋಷವಾಗಿತ್ತು. ಆದರೆ ಸೀಮಂತದ ಸಂಭ್ರಮವೆಲ್ಲ ಮುಗಿದು ನಾಗಮ್ಮನ ಪ್ರೀತಿಯ ಆರೈಕೆಯ ನೆರವು ಪಡೆಯಲು ಬಂದ ಪಾರ್ವತಿಯನ್ನು ಕಾಣುವಾಗ, ದಿನ ತುಂಬಿಕೊಳ್ಳುತ್ತ ಅತ್ಯಂತ ಸುಂದರಿಯಾಗಿ ಕಾಣುತ್ತಿದ್ದ ಪಾರ್ವತಿಯನ್ನು ನೋಡುವಾಗಲೆಲ್ಲ, ಈಗ ಭಾರತಿ ಮೊದಲಿನಷ್ಟು ಸಂತೋಷದಿಂದ ಅತ್ತಿಗೆಯನ್ನು ಕೆಣಕುತ್ತಿದ್ದಿಲ್ಲ.

ತನಗಿರದ ಯಾವುದೋ ಸಂಭ್ರಮ ಪಾರ್ವತಿಗಿದೆಯೆಂಬ ತಿಳಿವಳಿಕೆ ಭಾರತಿಯ ಹೃದಯದಲ್ಲಿ ಬಲವಾಗಿ ಬೇರೂರಿದಾಗ, ಸ್ವಾಭಾವಿಕ ಅಸೂಯೆಯ ಗಾಳಿ ಬೀಸಿತು. ಅದಕ್ಕೆ ಕಾರಣವಿಷ್ಟೆ :

ಪಾರ್ವತಿ ತವರಿಗೆ ಬಂದ ಮಾರನೇ ದಿನ ತನ್ನ ಟ್ರಂಕನ್ನು ಸರಿಪಡಿಸು ತ್ತಿದ್ದಾಗ ಭಾರತಿ ಅವಳ ಕೋಣೆಗೆ ಬಂದಳು. ಪದ್ಮನಾಭ ಮಲಗುತ್ತಿದ್ದ ಕೋಣೆಯಲ್ಲಿ ಪಾರ್ವತಿ ತನ್ನ ಬೀಡುಬಿಟ್ಟಿದ್ದಳು. ಅತ್ತಿಗೆ ಬರುವುದನ್ನು ಗಮನಿಸಿದ ಪಾರ್ವತಿ ಬೇಗನೆ ಟ್ರಂಕಿನ ಬಾಗಿಲು ಮುಚ್ಚಿದಳು. ಮೊದಲು ಇದು ಭಾರತಿಯ ಗಮನಕ್ಕೆ ಬರಲಿಲ್ಲ. ಆದರೆ ಟ್ರಂಕಿನ ಬಾಗಿಲು ಮುಚ್ಚಿ ಪಾರ್ವತಿ ಅದರ ಮೇಲೆ ಕುಳಿತು ನಗತೊಡಗಿದಾಗ ಭಾರತಿಯ ಕುತೂಹಲ ಕೆರಳಿತು.

"ಏನೇ ? ಏನಿದೆಯೆ ಟ್ರಂಕಿನಲ್ಲಿ ?" ಎಂದು ಕೇಳಿದಳು.

ಪಾರ್ವತಿ ಉತ್ತರ ಕೊಡಲಿಲ್ಲ. ನಗುವುದನ್ನೂ ನಿಲ್ಲಿಸಲಿಲ್ಲ.

ಬಹುಶಃ ತನ್ನ ಗಂಡನ ಭಾವಚಿತ್ರ ಟ್ರಂಕಿನೊಳಗಿರುವುದನ್ನು ತೋರಿ ಸಲು ನಾಚುತ್ತಾಳೆ ಎಂದು ಭಾವಿಸಿದ ಭಾರತಿ,

"ಏನು, ಪಾರೂ ? ಫೋಟೋ ತೋರಿಸಲು ಇಷ್ಟು ನಾಚಿಕೆಯೇ ? ನೋಡೋಣ ತೆಗಿ. ಯಾವಾಗ ತೆಗೆಸಿದ್ದು ?" ಎಂದು ಕೇಳಿದಳು.

ಇದಕ್ಕೂ ಪಾರ್ವತಿಯು ಉತ್ತರ ನಗುವೆ.

ಆಗ ಇನ್ನಷ್ಟು ಕುತೂಹಲದಿಂದ ಭಾರತಿ ಪುನಃ ಕೇಳಿದಳು :

“ಏನಾದರೂ ಚಿನ್ನ ಮಾಡಿಸಿದ್ದಾರೇನೇ ? ಯಾಕೆ ಇಷ್ಟು ನಗು ?”

ಇದಕ್ಕೂ ಪಾರ್ವತಿಯ ಉತ್ತರ ನಗುವೆ.

ಈಗ ಮಾತ್ರ ಸೋಜಿಗಗೊಂಡು ಪಾರ್ವತಿ ಅತ್ತಿಗೆಯನ್ನು ಆಕೆ ಕುಳಿತಲ್ಲಿಂದ ಮೆಲ್ಲಗೆ ದೂಡಿ ತಾನೇ ಟ್ರಂಕಿನ ಬಾಗಿಲು ತೆಗೆದು ನೋಡಿದಳು.

ಒಳಗಿದ್ದುದು ಒಂದು ದೊಡ್ಡ ಕಾಗದದ ಗಂಟು.

ಅದನ್ನು ಪಾರ್ವತಿ ಸೆಳೆದುಕೊಂಡು ಅತ್ತಿಗೆಯ ಕೈಗೆ ಸಿಗದಂತೆ ಹಿಡಿಯಲು ಪ್ರಯತ್ನಿಸಿದಳು. ಆದರೆ ಭಾರತಿಯೊಡನೆ ಬಲಪ್ರಯೋಗ ಸಾಧ್ಯವಿರಲಿಲ್ಲ. ಭಾರತಿ ಅದನ್ನು ಕಸಿದುಕೊಂಡು ಬಿಡಿಸಿನೋಡಿದಾಗ ಕಂಡುದು ಅರ್ಧ ಮಾತ್ರ ಹೊಲಿದಿದ್ದ ಒಂದು ಉಣ್ಣೆಯ ಕಾಲುಚೀಲ—ಪುಟ್ಟ ಮಗುವಿಗಾಗಿ ; ಮತ್ತೊಂದಿಷ್ಟು ಉಣ್ಣೆಯ ನೂಲು, ಮತ್ತೆರಡು ಸೂಜಿಗಳು.

ಪಾರ್ವತಿಯ ನಗು ಇನ್ನೂ ನಿಂತಿರಲಿಲ್ಲ.

ಆ ನೆತ್ತಸೆಯ ಅರ್ಧ ಹೊಲಿದಿದ್ದ ಕೈಗೆಲಸವನ್ನು ಕೈಯಲ್ಲಿ ಹಿಡಿದು ನೋಡುತ್ತಿದ್ದಂತೆ ಭಾರತಿಯ ಕಣ್ಣಲ್ಲಿ ನೀರು ತುಂಬಲಾರಂಭಿಸಿತು. ಅವಳ ಮುಖ ನಗುವನ್ನು ಹೊರಸೂಸುತ್ತಿತ್ತು. ಹೃದಯದಲ್ಲಿ ಪಾರ್ವತಿ ಮೊದಲ ಬಾರಿಗೆ ತನ್ನೊಡನೆ ‘ನನಗೆ ಮೂರು ತಿಂಗಳು’ ಎಂದು ಹೇಳಿದಾಗ ಆದಂತೆಯೇ ಆನಂದದ ವಿಚಿತ್ರ ಉನ್ಮಾನ. ಆ ಪುಟ್ಟ ಕಾಲುಚೀಲವನ್ನು ನೋಡಿದಷ್ಟು ತೃಪ್ತಿಯೆನಿಸುತ್ತಿದ್ದಿಲ್ಲ. ಅಪೂರ್ಣವಾಗಿ ಸೂಜಿಯಲ್ಲಿ.ಉಳಿದ ದಾರವನ್ನು ಮೃದುವಾಗಿ ಎಳೆಯುತ್ತ ಭಾರತಿ ತನಗಿರದ ಯಾವುದೋ ಒಂದು ಸಂಭ್ರಮವನ್ನು ಊಹಿಸತೊಡಗಿದಳು. ಆ ಕಾಲುಚೀಲದ ಅಡಿ ಒಂದು ಪುಟ್ಟ ಕಾಲೇ ಇದೆ ಎಂದು ಆಕೆಗೆ ಭಾಸವಾಗುತ್ತಿತ್ತು. ಅದು ಯಶೋದೆಯದಲ್ಲ, ಸತ್ಯವತಿಯದಲ್ಲ, ಹಾಗಾದರೆ....

ಭಾರತಿಯ ಕಣ್ಣಲ್ಲಿ ನೀರು ತುಂಬಿದುದನ್ನು ಕಂಡು ಗಾಬರಿಗೊಂಡು ಪಾರ್ವತಿ ನಗುವನ್ನು ನಿಲ್ಲಿಸಿ ಕೇಳಿದಳು :

“ಏನಾಯಿತು, ಅತ್ತಿಗೆ ?”

ಭಾರತಿ ಪಾರ್ವತಿಯ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಬದಲು ಮರು ಸವಾಲು ಹಾಕಿದಳು :

"ಪಾರೂ, ಕೂಸು ಹುಟ್ಟುವ ಮುಂಚೆ ಕುಲಾವಿ....ಎಂತಾರಲ್ಲ."

ಈಗ ಪಾರ್ವತಿಯ ಮುಖ ಲಜ್ಜೆಯಿಂದ ಕೆಂಪಾಯಿತು.

"ಆದರೆ ಕೂಸು ಹುಟ್ಟತ್ತೆ, ಅತ್ತಿಗೆ."

"ಅದು ಹೌದೇ" ಎಂದವಳು ತುಸು ತಡೆದು, "ಆದರೆ ಗಂಡೋ ಹೆಣ್ಣೋ ಯಾರಿಗೆ ಗೊತ್ತು ?"

"ಗಂಡೇ, ಅತ್ತಿಗೆ. ಅಣ್ಣನ ಹಾಗೆ, ತುಂಬ ಬುದ್ಧಿವಂತ ಕೂಸು ಹುಟ್ಟಬೇಕು ಎಂದು ಎಲ್ಲ ದೇವರಿಗೆ ಹರಕೆ ಹೊತ್ತಿದ್ದೇನೆ."

"ಆ ಕೂಸು ದೊಡ್ಡದಾಗಿ ಇನ್ನು ಯಾವುದಾದರೂ ಹುಡುಗಿಗೆ ಉಪದ್ರ ಕೊಡಲಿಕ್ಕೆ."

ತುಂಬ ಕಳವಳ ತುಂಬಿದ ಅತ್ತಿಗೆಯ ಮಾತಿನ ಹಿಂದಿದ್ದ ವೇದನೆಯನ್ನು ಗುರುತಿಸದೆಯೇ ಪಾರ್ವತಿ ಹೇಳಿದರು :

"ಅದು ಹೌದು ನೋಡು. ಅಂಥ ಬೈರಾಗಿಗಳು ಮದುವೆ ಮಾಡಿ ಕೊಳ್ಳಬಾರದು. ಇಲ್ಲವಾದರೆ ಆ ಹುಡುಗಿಯರಿಗೆ ನಿತ್ಯ ದುಃಖ—ನಿನ್ನ ಹಾಗೆ."

"ಅತ್ತಿಗೆಯ ಮುಖವನ್ನು ಕಂಡಿದ್ದರೆ ಪಾರ್ವತಿ ಖಂಡಿತ ಆ ಮಾತು ಹೇಳುತ್ತಿದ್ದಿಲ್ಲ. ಆದರೆ ಅವಳು ಆ ಕಡೆ ದೃಷ್ಟಿ ಹರಿಸಿರಲಿಲ್ಲ. ಆಕೆಯ ನೋಟ ಭವಿಷ್ಯವನ್ನು ಗುರುತಿಸುತ್ತಿತ್ತು. ಮುಂದೆ ಬರಲಿರುವ ಮಗುವಿನ ಮುಖವನ್ನು ಮನಸ್ಸಿನೆದುರು ರೂಪಿಸಿಕೊಳ್ಳುತ್ತಿತ್ತು.

ಆದರೆ ಭಾರತಿಯ ಕೈಲಿದ್ದ ನೂಲಿನ ಗಂಟು ಟ್ರಂಕಿಗೆ ಬಿತ್ತು. ಪಾರ್ವತಿ ಕೂಡಾ ತನ್ನನ್ನು ಅಣಕಿಸುತ್ತಿರುವಂತೆ ಆಕೆಗೆ ಭಾಸವಾಯಿತು. ಪಾರ್ವತಿ ಸುಮ್ಮನೆ ಚೇಷ್ಟೆಗಾಗಿ ಹೀಗೆ ಹೇಳಿರಬಹುದೆಂದು ಆಕೆಗೆ ಹೊಳೆಯಲೇ ಇಲ್ಲ. ಇರುವ ಒಬ್ಬಳೇ ಒಬ್ಬಳು ಆತ್ಮೀಯ ಒಡನಾಡಿಯೂ ಈ ರೀತಿ ಹಂಗಿಸುವಳಲ್ಲ ಎಂದು ಭಾರತಿ ಮರುಮಾತನಾಡದೆ ಆ ಕೋಣೆ ಬಿಟ್ಟು ಹೊರಗೆ ಹೋದಳು.

ಅತ್ತಿಗೆ ಹೀಗೆ ಹೊರಟುಹೋದೊಡನೆ ಪಾರ್ವತಿ ತನ್ನ ಕನಸಿನ ಪ್ರಪಂಚದಿಂದ ಹೊರಗೆ ಬಂದಳು. ಹೋಗುತ್ತಿದ್ದ ಅತ್ತಿಗೆಯನ್ನು ಕರೆಯುತ್ತ "ಅತ್ತಿಗೆ! ಅತ್ತಿಗೆ!" ಎಂದು ಕೂಗಿಕೊಂಡು ಅವಳನ್ನನುಸರಿಸಿದಳು.

ತನ್ನ ಕೋಣೆಗೆ ಹೋಗಿ ಮೇಜಿನ ಮೇಲೆ ತಲೆಯಿರಿಸಿ ಅಳತೊಡಗಿದ ಭಾರತಿಯನ್ನು ಕಂಡಾಗ ಪಾರ್ವತಿಗೆ ಏನು ಮಾಡುವುದೆಂದು ತೋರಲಿಲ್ಲ.

"ತಪ್ಪಾಯಿತು, ಅತ್ತಿಗೆ! ಏನೋ ಹೇಳಿ ನಿನ್ನನ್ನು ನೋಯಿಸಿಬಿಟ್ಟೆ. ಆದರೆ ಬುದ್ಧಿವಂತರೂ ಓದಿದವರೂ ಇದಕ್ಕೆ ಅಳುತ್ತಾರೆಯೆ? ಇನ್ನೊಂದು ವರ್ಷದಲ್ಲಿ ನನ್ನ ಸೋದರಳಿಯನನ್ನು ನೋಡಲು ನಾನು ಮುಂಬಯಿಗೆ ಬರುವುದಿಲ್ಲವೆ?"

ಪಾರ್ವತಿಯ ಮಾತು ಕೇಳಿ ಭಾರತಿ ನಗುವಂತಾಯಿತು. ಅವಳ ಅಳು ನಿಂತಿತು. ಆದರೆ ಅತ್ತಿಗೆಯ ವ್ಯಂಗ್ಯದ ನೋವು ಮಾತ್ರ ಕೂಡಲೆ ಮರೆಯ ಲಾಗಲಿಲ್ಲ.

ಮುಂದಿನ ಸಲ ತಾಯಿಯ ಮನೆಗೆ ಹೋದಾಗ, ತಂದೆಯೊಡನೆ ಬೇಡಿ ಹಣ ಪಡೆದು, ಒಂದಿಷ್ಟು 'ಊಲ್' ತೆಗೆದುಕೊಂಡು, ಗೆಳತಿ ಸುಮಿತ್ರೆ ಯೊಡನೆ ಹೊಲಿಗೆ ಮಾಹಿತಿಯನ್ನಷ್ಟು ಸಂಗ್ರಹಿಸಿ, ಭಾರತಿ ತನ್ನ ದಾಂಪತ್ಯದ ಸಂಭ್ರಮವನ್ನು 'ಉಣ್ಣೆ'ಯಲ್ಲಿ ನೆರೆಸಲೆಂದು 'ಸ್ವೆಟರ್'ನ ನಾಲ್ಕು ಸಾಲು ಹೆಣೆದುಕೊಂಡು ಬಂದಿದ್ದಳು.

"ನೋಡು, ಪಾರೂ. ಕೂಸಿಗಲ್ಲವಾದರೂ ದೊಡ್ಡ ಕೂಸಿಗೆ, ಕಾಲು ಚೀಲವಲ್ಲವಾದರೂ 'ಸ್ವೆಟರ್' ಮಾಡಲು ಆಗುತ್ತದೆ."

ಪಾರ್ವತಿ ಏನೋ ಯೋಚಿಸುತ್ತಿರುವಂತೆ ಕಂಡಿತು. ಆಮೇಲೆ,

"ಅದು ಸರಿ, ಅತ್ತಿಗೆ. ಆದರೆ ಈ ದೊಡ್ಡ ಕೂಸು ಬರೇ 'ಸ್ವೆಟರ್' ಹಾಕಿಕೊಂಡು ಬೀದಿಗಿಳಿದರೆ, ಕಿವಿ ಹಿಡಿದು ಎಳೆದುಕೊಂಡು ಬರುವಷ್ಟು ಶಕ್ತಿ ಇದೆಯೆ, ನಿನಗೆ?" ಎಂದಳು.

ಮೊದಲು ಭಾರತಿಗೆ ಪಾರ್ವತಿಯ ಮಾತು ಅರ್ಥವಾಗಲಿಲ್ಲ ಆದರೆ ಅರ್ಥವಾಗತೊಡಗಿದಾಗ, ಮುಂಚಿನದೇ ವೇದನೆ.

ಅದರ ಹಿಂದಿನಿಂದಲೇ ಒಂದು ಆಲೋಚನೆ :

'ಇನ್ನು ಈ 'ಸ್ವೆಟರ್' ಕಷ್ಟಪಟ್ಟು ಮಾಡಿ ಕಳಿಸಿದರೆ, ಅಲ್ಲಿಂದ ಬರುವುದು ಸಂಭ್ರಮದ ಕಾಗದದ ಉಪಚಾರ. ಮುಖ ತುಂಬ ತೋಡಿ ಸಂತೋಷದ ಒಂದು ಮಾತು ಕೇಳುವುದು ಸಾಧ್ಯವಿಲ್ಲ. ಕೈಹಿಡಿದು ಕರೆದು ಕೊಂಡು ಹೋಗುವುದು ಯಾವಾಗಲೋ.'

ಪಾರ್ವತಿಯ ಕುರಿತಾದ ಆದರ ಈಗ ಅಸೂಯೆಗೆ ಪರಿವರ್ತನೆ ಹೊಂದುತ್ತಿತ್ತು.

ಪಾರ್ವತಿಯ ಮಾಂಗಲ್ಯಭಾಗ್ಯ ಭಾರತಿಯನ್ನು ಅಣಕಿಸುತ್ತಿತ್ತು.

"ಅವರು ಮೊದಲು ಕೈಹಿಡಿದು ಎಳೆದುಕೊಂಡು ಹೋಗಲಿ, ಪಾರೂ. ಆಮೇಲೆ ಕಿವಿ ಹಿಡಿದು ತೋರಿಸುತ್ತೇನೆ" ಎಂದು ಅರೆಮನಸ್ಸಿನಿಂದ ಭಾರತಿ ಉತ್ತರಿಸಿದಳು.

೯

'ಲಾ ಕಾಲೇಜಿನ ಹುಡುಗ' ರಾಧಾಕೃಷ್ಣ ಬಂದು ಸುನಂದೆಯನ್ನು ನೋಡಿ ಮದುವೆಗೆ ಒಪ್ಪಿಗೆ ಕೊಟ್ಟು ಹೋದಮೇಲೆ ಭಾರತಿಯ ಹೃದಯದಲ್ಲಿ ಪುನಃ ಆಸೆ ಚಿಗುರೊಡೆಯಿತು: ಈ ಸಲವಾದರೂ 'ಅವರು' ಖಂಡಿತ ಬರುತ್ತಾರೆ, ಎಂದು.

ಮೇ ಎರಡನೆಯ ವಾರದಲ್ಲಿ ಉಡುಪಿಯಲ್ಲೇ ಮದುವೆ ಜರುಗುವುದೆಂದು ನಿಶ್ಚಯವಾಗಿತ್ತು. ಮೊದಲ ಮಗಳ ಮದುವೆಯಲ್ಲಿ ಶ್ರೀಪತಿರಾಯರು 'ಅಂತಸ್ತಿ'ನ ಪ್ರಶ್ನೆಗೆ ಮಹತ್ವ ಕೊಟ್ಟಿರಲೇ ಇಲ್ಲ; ಈಗ ಎರಡನೆಯ ಮಗಳ ಮದುವೆಯಲ್ಲಿ ಅದನ್ನು ಬಿಟ್ಟಿರಲು ಸಾಧ್ಯವೇ ಇಲ್ಲ ಎನ್ನುವಂತಾಗಿತ್ತು.

ಮಂಗಳೂರಿನ ಸಿರಿವಂತ ಮನೆತನದ ಅಳಿಯ. ಅಳಿಯ 'ಲಾ' ಓದುತ್ತಿದ್ದಾನೆ. ಈಗಷ್ಟೆ ಓದು ಮುಗಿಸಿದ್ದಾನೆ. ಮುಂದೆ ಒಂದು ದಿನ ಹೆಸರಾಂತ ವಕೀಲನಾಗಬಹುದು ಎಂದಷ್ಟೆ ಶ್ರೀಪತಿರಾಯರಿಗೆ ರಾಧಾಕೃಷ್ಣನ ವಿಚಾರ ತಿಳಿದಿತ್ತು. ಸುನಂದೆ ಸುಖವಾದ ಕಡೆ ಸೇರುತ್ತಾಳೆ; ಮುಂದೊಂದು ದಿನ, ಆತ ಉಡುಪಿಯಲ್ಲಿ ನಿಲ್ಲುವ ಮನಸ್ಸು ಮಾಡಿದರೆ ತಮಗೆ ಸಹಾಯಕ ನಾಗಲೂ ಬಹುದು ಎಂಬುದು ಇನ್ನೊಂದು ಆಸೆಯಷ್ಟೆ. ಮೊದಲ ಮಗಳ ಮದುವೆಯ ಕಾಲದಲ್ಲಿ 'ಅನಂತ'ನ ಸ್ವಭಾವದ ಸಂಪೂರ್ಣ ಪರಿಚಯವಿತ್ತು. ಅನಂತನ ಸುಖದ ಕಡೆಗೇ ಸಂಪೂರ್ಣ ದೃಷ್ಟಿಯಿತ್ತು. ಎರಡನೆಯ ಮಗಳ ಮದುವೆಯ ಕಾಲದಲ್ಲಿ, ಸುನಂದೆಯ ಸುಖದ ಕಡೆಗೇ ರಾಯರ ಗಮನ; ಆ ದೃಷ್ಟಿಯಿಂದಲೇ ಅಳಿಯನ ಯೋಗ್ಯತೆಯ ವಿಮರ್ಶೆ.

ಈ ಬದಲಾವಣೆ ಏಕೆ ಬಂದಿತೆಂಬುದು ಮಾತ್ರ ರಾಯರಿಗೆ ಸಮಸ್ಯೆಯೆ.

ಮದುವೆಯನ್ನು ಸಂಭ್ರಮದಿಂದಲೇ ನೆರವೇರಿಸಲು ರಾಯರು ಸಿದ್ಧತೆ ನಡೆಸುತ್ತಿದ್ದರು. ಇದೂ 'ಅಂತಸ್ತಿ'ನ ದೃಷ್ಟಿಯಿಂದಾಗಿ. ಹಿಂದಿನ ಮದುವೆಯ ಕಾಲದಲ್ಲಿ ಬಂದಿದ್ದ ಅಪವಾದಗಳೆಲ್ಲ ಈ ಸಲ ತೊಳೆದುಹೋಗಬೇಕು ಎಂದು ಮನಸ್ಸಿನಾಳದಲ್ಲಿ ಹುದುಗಿದ್ದ ಆಸೆ.

ಈ ಮದುವೆಯ ಸಂಭ್ರಮದ ನಡುವೆ ಅವರ ಮನಸ್ಸಿನಲ್ಲಿಯೂ ಅನಂತ ಬರಬಹುದೆಂಬ ಆಸೆಯಿತ್ತು. ಆತ ಬಂದು, ಈ ವೈಭವ, ಸಿರಿವಂತಿಕೆಗಳನ್ನೆಲ್ಲ ನೋಡಿ ಬೇಸರಗೊಂಡರೂ ಚಿಂತಿಲ್ಲ; ಭಾರತಿಯನ್ನು ಕರೆದೊಯ್ಯುತ್ತಾನೆ ಎಂಬ ಹಿಗ್ಗು ರಾಯರ ಮನಸ್ಸಿನಲ್ಲಿತ್ತು. ಇದಕ್ಕೆ ಸರಿಯಾಗಿ ಅನಂತ 'ಬರಲು ಪ್ರಯತ್ನಮಾಡುತ್ತೇನೆ' ಎಂದು ಕಾಗದ ಬರೆದಿದ್ದ. ಉತ್ತರ ಅಸ್ಪಷ್ಟವೇ ಆದರೂ ಆ ಆಶ್ವಾಸನೆಯನ್ನು ನಂಬಿ ಭಾರತಿ ಸದ್ಯದಲ್ಲೆ ಮುಂಬಯಿ ಸೇರುತ್ತಾಳೆ ಎಂಬಾಸೆಯನ್ನು ಕಟ್ಟಿಕೊಳ್ಳುವುದು ಅನುಚಿತವೆಂದು ರಾಯರಿಗನಿಸಿದರೂ ಅನಂತನ ಬರುವಿಕೆಯನ್ನು ಅವರು ಇದಿರುನೋಡುತ್ತಿದ್ದರು.

ಆದರೆ ಅನಂತ ಬರುವುದಿಲ್ಲವೆಂದು ಖಂಡಿತವಾಗಿ ತಿಳಿದಿದ್ದವರು ಉಡುಪರು ಮಾತ್ರ.

ಭಾರತಿಯ ಕೈಹಿಡಿದು ಹೋದ ಭೂಪತಿ ಪ್ರೀತಿಯ ತಂಗಿ ಪಾರ್ವತಿಯ ಮದುವೆಗೂ ಬರಲಿಲ್ಲ; ತಮ್ಮ ಪದ್ಮನಾಭನ ಅಂತಿಮಕ್ರಿಯೆಯ ಕಾಲಕ್ಕೂ ಬರಲಿಲ್ಲ. ಈಗ ಹೆಂಡತಿಯ ತಂಗಿ ಸುನಂದೆಯ ಮದುವೆಗೆ ಬಂದಾನೇ, ಎಂದು ಉಡುಪರು ವಾದಿಸುತ್ತಿದ್ದರು. ಅವನು ಬಂದರೆ ಖಂಡಿತ ಭಾರತಿಯನ್ನು ಕರೆದೊಯ್ಯುತ್ತಾನೆ ಎಂದು ತಿಳಿದಿದ್ದುದರಿಂದಲೇ ಅವರು ಈ ರೀತಿ ವಾದಿಸುತ್ತಿದ್ದರು.

ಆದರೆ ಪಾರ್ವತಿಗೆ ಮಾತ್ರ ಅಣ್ಣ ಖಂಡಿತ ಬರುತ್ತಾನೆಂದು ನಂಬಿಕೆ ಇತ್ತು. ಭಾರತಿಗೆ ಅತ್ತಿಗೆಯಷ್ಟು ವಿಶ್ವಾಸವಿರದಿದ್ದರೂ ಆಕೆಯ ವಿಶ್ವಾಸದಲ್ಲಿ ತಾನು ಆಸರೆಯನ್ನು ಕಂಡುಕೊಳ್ಳುತ್ತಿದ್ದಳು. ಇದನ್ನು ಚೆನ್ನಾಗಿ ತಿಳಿದಿದ್ದ ಪಾರ್ವತಿ, ಮದುವೆಯ ದಿನ ಸಮೀಪಿಸುತ್ತಿದೆಯೆನ್ನುವಾಗಲೇ, ಹೊರಗೆ ಬೀದಿಯಲ್ಲಿ ಗಾಡಿಯ ಸದ್ದಾದಷ್ಟು ಬಾರಿ, "ನೋಡತ್ತಿಗೆ, ಗಾಡಿ ಬಂತು. ಅಣ್ಣ ಬಂದ" ಎನ್ನುತ್ತಿದ್ದಳು. ಮೊದಮೊದಲು ಭಾರತಿ ಸತ್ಯವೆಂದು ಬಗೆದು ಹೊರಗೆ ಬರುತ್ತಿದ್ದಳು. ಆಮೇಲೆ ಈ ಚೇಷ್ಟೆಯ ಸ್ವರೂಪವನ್ನು ಗುರುತಿಸಿ ಸುಮ್ಮನಾಗಿಬಿಡುತ್ತಿದ್ದಳು.

ಪಾರ್ವತಿ ಹೀಗೆ ಕರೆದಷ್ಟು ಬಾರಿ ಸತ್ಯವೆಂದೇ ಬಗೆದು ಹೊರಗೆ ಇಣಿಕಿ ನೋಡುತ್ತಿದ್ದುದು ನಾಗಮ್ಮ ಮಾತ್ರ.

ಮದುವೆಗೆ ದಿನ ಸಮೀಪಿಸಿದೆಯೆನ್ನುವಾಗ ಭಾರತಿ ಪಾರ್ವತಿಯ ಒಡನಾಟವನ್ನು ಬಿಟ್ಟು, ತಾಯಿಗೆ ನೆರವಾಗಲೆಂದು ಮನೆಗೆ ಬಂದಿದ್ದಳು.

ಆದರೆ ಇಲ್ಲಿಯೂ ಅಸೂಯೆ ಆವಳ ಬೆನ್ನು ಬಿಡಲಿಲ್ಲ. ಸುನಂದೆಯ ಸಡಗರವನ್ನು ನೋಡಿದಾಗಲೆಲ್ಲ ತನ್ನ ಅಸಹಾಯಕತೆಯು ನೆನಪಾಗಿ ಮನಸ್ಸು ರೋಸಿಹೋಗುತ್ತಿತ್ತು. ಸುನಂದೆಯ ಚಿನ್ನ, ಸುನಂದೆಯ ವಸ್ತ್ರ, ಸುನಂದೆಯ ಶೃಂಗಾರದ ಕಲ್ಪನೆ ಇವುಗಳನ್ನು ಗಮನಿಸಿದಾಗಲೆಲ್ಲ, ತನ್ನ ಮದುವೆಯಲ್ಲಿ ಈ ವೈಭವಗಳೆಲ್ಲ ಗೌಣಸ್ಥಾನ ಪಡೆದಿದ್ದುವು ಎಂದು ನೆನಪಾಗಿ ದುಃಖ ಉಕ್ಕಿಬರುತ್ತಿತ್ತು.

ಇದರಿಂದಾಗಿಯೇ ಶ್ರೀಪತಿರಾಯರು ಎರಡನೆಯ ಮಗಳಿಗೆ ಮಾಡಿಸಿದ ಚಿನ್ನದ ಜೊತೆಗೆ ಭಾರತಿಯ ಕೊರಳಿಗೆಂದು ಚಿನ್ನದಲ್ಲಿ ಕಟ್ಟಿದ ಚಿಪ್ಪಿನ ಸರ ಮಾಡಿಸಿ ತಂದಾಗ, ಒಳಗೊಳಗೆ ಸಂತೋಷವಾದರೂ,

"ಸನ್ಯಾಸಿಯ ಕೈಹಿಡಿದವಳಿಗೆ ಚಿನ್ನದ ಮೋಹ ಯಾಕಪ್ಪಾ ?" ಎಂದು ತಂದೆಯೊಡನೆ ಕೇಳಿದಳು.

ಶ್ರೀಪತಿರಾಯರ ಮುಖ ಕಪ್ಪಿಟ್ಟಿತು—ಯಾವುದೋ ಭೀತಿಯಿಂದ, ಅಸ್ಪಷ್ಟ ಭವಿಷ್ಯವನ್ನು ಗುರುತಿಸಿ ಹೆದರಿದ ಮಗುವಿನಂತೆ. ಆದರೆ ಮನಸ್ಸಿ ಗಾದ ನೋವನ್ನು ತೋರಗೊಡಲಿಲ್ಲ. ಮಾತನ್ನು ನಗೆಯಲ್ಲಿಯೇ ತೇಲಿಸಿ ಹೇಳಿದರು :

"ಚಿನ್ನದಂಥ ಹುಡುಗಿಯನ್ನು ಕೈಹಿಡಿದ ಸನ್ಯಾಸಿಯೂ ಸಂಸಾರಿ ಯಾಗುತ್ತಾನೆ, ಭಾರೀ, ಅನಂತ ಸನ್ಯಾಸಿಯೇ ?"

ಭಾರತಿ ಮಾತು ಬೆಳೆಸಲಿಲ್ಲ.

ಮದುವೆಗೆ ದಿನ ತೀರ ಸಮೀಪಿಸಿದಂತೆ ಶ್ರೀಪತಿರಾಯರ ಮನೆ ತುಂಬಿ ಕೊಳ್ಳತೊಡಗಿತು. ಬಂಧು ಬಳಗ, ಆಪ್ತೇಷ್ಟರು, ನೆಂಟರು ಎಂದು ಬಂದವ ರನ್ನು ಉಪಚರಿಸುವುದರಲ್ಲಿ ಗೌರಮ್ಮನಿಗೆ ಬಿಡುವೇ ಇಲ್ಲ ಎಂದಾಯಿತು. ಭಾರತಿ ಶಕ್ತಿಮೀರಿ ತಾಯಿಗೆ ನೆರವು ಕೊಡುತ್ತಿದ್ದಳು. ಸುನಂದೆ ಮದುವಣ ಗಿತ್ತಿ, ಹೂವಿನ ಮೇಲೆ ನಡೆಯುತ್ತಿರುವಂತಿದ್ದಳು. ಭಾರತಿಯ ಏಕಾಂತ ಚಿಂತನೆಗೆ ಈಗ ಅವಕಾಶವೂ ದೊರಕುತ್ತಿದ್ದಿಲ್ಲ. ಆ ಕಾರಣ ಮನಸ್ಸಿನ ಕೊರಗು ಹೆಚ್ಚು ಪ್ರಕಟವಾಗುತ್ತಿರಲಿಲ್ಲ. ಆದರೂ ಈ ಸಂಭ್ರಮದ ನಡುವೆ 'ಅವರು ಕೂಡ ಜೊತೆಗಿದ್ದಿದ್ದರೆ?' ಎಂದು ಸಾವಿರ ಬಾರಿ ಆಕೆ ಯೋಚಿಸಿ ಕೊಂಡುದುಂಟು. ಇದನ್ನೇ ಅನಂತನಿಗೆ ಬರೆದ ಕಾಗದದಲ್ಲಿ ಆಕೆ ತಿಳಿಸಿದುದೂ ಉಂಟು : 'ನೀವು ಕೂಡಾ ಈ ಸಂಭ್ರಮದಲ್ಲಿ ಜೊತೆಗಿದ್ದರೆ ನಾನೆಷ್ಟು ಸುಖಿ

ಯಾಗಿರುತ್ತಿದ್ದೆ.' ಅದಕ್ಕೆ ಬಂದ ಉತ್ತರ ಕಂಡು ಆಕೆಗೆ ಬೇಸರವಾಗಿತ್ತು. 'ಸುಖದಲ್ಲಿ ಯಾರೂ ಜೊತೆಗಿರದಿದ್ದರೂ ಅಷ್ಟೇನು ಅನಿಸುವುದಿಲ್ಲ, ಭಾರೀ. ದುಃಖದಲ್ಲಿ ನಾನು ಯಾವಾಗಲೂ ನಿನ್ನ ಜೊತೆಗೇ ಇದ್ದೇನೆ. ನಾನು ಚಿರಂತನ ಆಶಾವಾದಿಯಾದರೂ ಈ ಮಾತು ಬರೆಯುತ್ತಿದ್ದೇನೆ' ಎಂದು.

'ನನ್ನ ಈ ದುಃಖ ನಿಮಗೇನು ಗೊತ್ತು?' ಎಂದು ಭಾರತಿ ಮನಸ್ಸಿನಲ್ಲಿಯೇ ಅಂದುಕೊಂಡು ಆ ಕಾಗದವನ್ನು ಹರಿದು ಚೂರು ಮಾಡಿ ಬಿಸಾಡಿದಳು.

ಮದುವೆ ತುಂಬ ಸಂಭ್ರಮದಿಂದಲೇ ಜರುಗಿತು. ಹಿರಿಯ ಮಗಳ ಮದುವೆಯಲ್ಲಿ ಮಾಡಿದ ತಪ್ಪನ್ನು ತಿದ್ದಿಕೊಂಡರೆಂದೋ ಏನೋ ಊರಿನ ಪ್ರತಿಷ್ಠಿತ ಜನರೆಲ್ಲ ರಾಯರನ್ನು ಮನವಾರೆ ಹೊಗಳಿದರು. ಹೊಸ ದಂಪತಿಗಳ ಮುಂದೆ ಬಂದು ಬೀಳುತ್ತಿದ್ದ ಉಡುಗೊರೆಗಳನ್ನು ನೋಡುತ್ತಿದ್ದಂತೆ ರಾಯರ ಮನಸ್ಸಿನಲ್ಲಿ ಒಂದು ಯೋಚನೆ ಹೊಳೆಯಿತು: 'ಭಾರತಿಯ ಮದುವೆಯಲ್ಲಿ ಇವೆಲ್ಲ ಏಕೆ ಮಾಯವಾಗಿದ್ದುವು?' ಎಂದು.

ಸುನಂದೆಯ ಮದುವೆಯ ಸಂಭ್ರಮದಲ್ಲಿ ಒಳಗೊಳಗೆ ನೋವು ಅನುಭವಿಸುತ್ತಿದ್ದುದು ಭಾರತಿ ಮಾತ್ರವಲ್ಲ. ಉಡುಪರದು ಕೂಡಾ ಇದೇ ಅವಸ್ಥೆಯಾಗಿತ್ತು. ಮದುವೆಗೆ ಬರುವುದೇ ಇಲ್ಲ ಎಂದು ನಿಶ್ಚಯಿಸಿದ್ದವರು ಶ್ರೀಪತಿರಾಯರ ಬಲವಂತಕ್ಕೆ ಸೋತು ಬಂದಿದ್ದರು. ಬಂದಮೇಲೆ, ಇಲ್ಲಿ ಸೇರಿದವರೆಲ್ಲ ತಮ್ಮನ್ನೂ ತಮ್ಮ ಬಡತನವನ್ನೂ ಅಣಕಿಸುತ್ತಿರುವರೇ ಎಂಬ ಸಂದೇಹ ಬಂತು. ಬಂದಿದ್ದ ತಮ್ಮ ಮಕ್ಕಳಿಗೆ ಮೈಮೇಲೆ, ಅಲ್ಲಿ ನೆರದಿದ್ದ ಸಮಾಜಕ್ಕೊಪ್ಪುವ ವೇಷಭೂಷಣಗಳಾವುವೂ ಇರಲಿಲ್ಲ. ವಕೀಲರ ಮಗಳ ಮದುವೆಯಲ್ಲಿ, ಹತ್ತಿರದ ಬಂಧುವಾಗಿ ಮೆರೆದ ಗುಮಾಸ್ತರು ಬಹುಶಃ ಉಡುಪರು ಮಾತ್ರ. ತಮ್ಮ ಬಡತನವೇ ತಮ್ಮನ್ನು ಅಣಕಿಸುತ್ತಿದೆಯೆಂದು ಯೋಚಿಸಿದ ಉಡುಪರು ಶ್ರೀಪತಿರಾಯರೂ ತಮ್ಮನ್ನು ಅಣಕಿಸುತ್ತಿರುವರೇ ಎಂದು ಯೋಚಿಸಿದರು. ಭಾರೀ ಸೀರೆಯುಟ್ಟು ಅತ್ತಿಂದಿತ್ತ ಓಡಾಡುತ್ತಿದ್ದ ಭಾರತಿಯೂ ತಮ್ಮನ್ನು ಅಣಕಿಸುತ್ತಿರುವಂತೆ ಕಂಡಿತು. ಈ ಸಂದರ್ಭದಲ್ಲಿ ಅನಂತನಾದರೂ ಇದ್ದಿದ್ದರೆ, ಎಂದೊಮ್ಮೆ ಅವರಿಗೆ ತೋರಿತು. ಧನ, ದರ್ಪ ಎರಡೂ ಇಲ್ಲದಿದ್ದರೂ ತನ್ನ ವಿದ್ವತ್ತಿನಿಂದ ಸಭೆಯಲ್ಲಿ ಮೆರೆಯುವ ಯೋಗ್ಯತೆಯಿದ್ದ ಹುಡುಗ—ಆ ಹುಡುಗ ವಕೀಲರ ಅಳಿಯ, ತಮ್ಮ ಮಗ ಎಂದು ಹೇಳಿಕೊಂಡು ತಾವು ಈ

ಸಮಾರಂಭದಲ್ಲಿ ಮೆರೆಯಬಹುದಿತ್ತು, ಎಂದು ಉಡುಪರು ಯೋಚಿಸಿದರು.

ಆದರೆ ಅನಂತ ಬರಲಿಲ್ಲ. ಶುಭಾಶಯಗಳನ್ನು ಕಳುಸಿದ ತಂತಿಯ ಬೆನ್ನಹಿಂದೆ ಸುನಂದೆಯ ವಿಳಾಸಕ್ಕೆ ಒಂದು ಪಾರ್ಸೆಲ್ ಬಂದಿತ್ತು.

ಮದುವಣಗಿತ್ತಿ ಅದನ್ನು ಒಡೆದು ನೋಡಿದಾಗ ಅದರಲ್ಲಿದ್ದುದು ಖಾದೀ ಸಿಲ್ಕಿನ ಸೀರೆ ಮತ್ತು ಖಣ.

ಬಳಿಯಲ್ಲೆ ನಿಂತಿದ್ದ ಅಕ್ಕನನ್ನು ಮೂದಲಿಸಿ ಸುನಂದೆ ಹೇಳಿದಳು :

"ಜಾರ್ಜೆಟ್, ಲಿನ್ನನ್, ಕಾಶ್ಮೀರ್, ಬೆಂಗಳೂರು ಸಿಲ್ಕು ಯಾವುದೂ ಸಿಗಲಿಲ್ಲ, ಭಾವನಿಗೆ" ಎಂದು.

ಭಾರತಿಗಾದ ವೇದನೆ ಅಷ್ಟಿಷ್ಟಲ್ಲ.

ಭಾರತಿಯನ್ನು ಆ ರೀತಿ ಅವಮಾನಕ್ಕೆ ಗುರಿಪಡಿಸಿದುದು ಸುನಂದೆ ಮಾತ್ರವಲ್ಲ. ಬಂದ ಬೀಗರ ಕಡೆಯವರೂ, ಭಾರತಿಯ ಸೌಂದರ್ಯವನ್ನು ಅಸೂಯೆಯ ದೃಷ್ಟಿಯಿಂದಲೇ ನೋಡಿ,

"ಇವಳ ಗಂಡ ಏನು ಬರಲಿಲ್ಲ? ಏನು ಕೆಲಸದಲ್ಲಿದ್ದಾರೆ? ಸಂಬಳ ಎಷ್ಟು? ಎಷ್ಟು ಓದಿದ್ದಾರೆ? ಮದುವೆಯಾಗಿ ಇಷ್ಟು ದಿನವಾದರೂ ಇನ್ನೂ ಮನೆ ಮಾಡಿಲ್ಲವೆ?" ಎಂದು ಮತ್ತೆ ಮತ್ತೆ ಕೇಳಿದ ಪ್ರಶ್ನೆಗಳನ್ನೇ ಕೆಣಕಿ ಕೆಣಕಿ ಕೇಳುತ್ತಿದ್ದರು. ಇವಕ್ಕೆ ಕೊಟ್ಟ ಉತ್ತರಗಳಿಗೆ ಮತ್ತೆ ನೂರೆಂಟು ಮರುಸವಾಲುಗಳು: "ಬಿ.ಎ. ಕೂಡ ಆಗಿಲ್ಲವೇ? ಜೇಲಿಗೆ ಹೋಗಿ ಬಂದಿದ್ದಾರೆಯೇ? ಬರೇ ಗುಮಾಸ್ತಿಕೆಯೆ?"

ಈ ಅವಹೇಳನದ ನೋವಿನಿಂದ ಭಾರತಿ ಸೋತುಹೋದಳು. ಒಮ್ಮೊಮ್ಮೆ ಇವರು ಹೇಳುತ್ತಿರುವುದೆಲ್ಲ ಸರಿಯಲ್ಲವೆ? ಎಂದೂ ಕಾಣುತ್ತಿತ್ತು.

ಮದುವೆಗೆ ಪಾರ್ವತಿ ಬಂದಿರಲಿಲ್ಲ. ಈಗೀಗ ಮನೆಯನ್ನು ಬಿಡುವಷ್ಟು ಶಕ್ತಿಯೂ ಅವಳಲ್ಲಿರುತ್ತಿರಲಿಲ್ಲ. ತಿಂಗಳು ತುಂಬುತ್ತಿರುವಂತೆ ಆಕೆ ಮುಂಚಿನಷ್ಟು ಉಲ್ಲಸಿತಚಿತ್ತಳೂ ಹಾಸ್ಯಪ್ರಿಯಳೂ ಆಗಿರಲಿಲ್ಲ. ಯಾವುದೋ ಒಂದು ಹೆದರಿಕೆ ಅವಳನ್ನು ಕಾಡುತ್ತಿತ್ತು. ಅಕ್ಕನ ಸಾವಿನಿಂದುಂಟಾದ ಭೀತಿ ಈ ರೀತಿಯ ಮಾನಸಿಕ ಪ್ರಕ್ರಿಯೆಗೆ ಕಾರಣ ಮಾತ್ರವಾಗಿದ್ದಿರಬಹುದು. ಅದೇನಿದ್ದರೂ, ಹೊತ್ತ ಜೀವವನ್ನು ಭೂಮಿಗಿಳಿಸುವ ದಿನ ಸಮೀಪಿಸುತ್ತಿರುವಂತೆ ಪಾರ್ವತಿ ಬದಲುತ್ತಿದ್ದಳು. ಆಕೆ ಮುಂಚಿನ ಪಾರ್ವತಿಯಾಗಿರಲಿಲ್ಲ.

ಮದುವೆಯ ಗಲಭೆಯೆಲ್ಲ ಮುಗಿದು ಬಂದ ನೆಂಟರೆಲ್ಲ ಚದರಿದ ಮೇಲೆ

ಭಾರತಿ, ಪಾರ್ವತಿಯನ್ನು ನೋಡುವ ನೆಪದಿಂದ ಅತ್ತೆಯ ಮನೆಗೆ ಹಿಂದಿರುಗುವ ಆಸೆಯನ್ನು ತಂದೆಯೊಡನೆ ಸೂಚಿಸಿದಳು. ಆದರೆ ಹೊಸ ಅಳಿಯ ಮಗಳು ಇನ್ನೂ ಮನೆಯಲ್ಲಿದ್ದುದರಿಂದ ಭಾರತಿ ಮತ್ತೆ ನಾಲ್ಕು ದಿನ ನಿಂತು ಹೋಗಬೇಕೆಂದು ರಾಯರು ಒತ್ತಾಯ ಮಾಡಿದರು. ಆಮೇಲೊಂದು ರಾತ್ರೆ, ಊಟ ತೀರಿದ ಮೇಲೆ ರಾಧಾಕೃಷ್ಣನೊಂದಿಗೆ ಆ ಮಾತು ಈ ಮಾತು ಆಡುತ್ತಿದ್ದಾಗ. ಮಾತು ಅನಂತನೆಡೆ ಹೊರಳಿತು.

"ಅವರೇಕೆ ಬರಲಿಲ್ಲ? ಒಂದು ಹತ್ತು ದಿನಗಳ ರಜೆ ಪಡೆಯುವುದು ಸಾಧ್ಯವಾಗಲಿಲ್ಲವೆ?" ಎಂದು ರಾಧಾಕೃಷ್ಣ ಕೇಳಿದ.

"ಅವನಿಗೆ ಸಾವಿರಾರು ಕೆಲಸ. ಆಫೀಸು ಕೆಲಸದ ಜೊತೆಗೆ 'ಸೋಶಲ್ ವರ್ಕ್.' ಇದರ ಜೊತೆಗೆ ಈಗೊಂದು ಪತ್ರಿಕೆಯ ಕೆಲಸವೂ ಸೇರಿಕೊಂಡಿದೆಯೆಂದು ಕಾಣುತ್ತದೆ. ಒಂದಕ್ಕೆ ಬಿಡುವಿದ್ದರೆ ಇನ್ನೊಂದಕ್ಕೆ ಬಿಡುವಿಲ್ಲ."

ಭಾರತಿಯ ದೃಷ್ಟಿ ಮಾತನಾಡುತ್ತಿದ್ದ ತಂದೆಯೆಡೆ ಹರಿದಿತ್ತು.

"ಹಾಗಾದರೆ ಅವರು ಜರ್ನಲಿಸ್ಟೇ?"

"ಆ 'ಇಸ್ಟ್' ಈ 'ಇಸ್ಟ್' ಎಂದೇನು? ಇಪತ್ತನಾಲ್ಕು ತಾಸು ಕೂಡಾ ಮಿದುಳಿಗೆ ಶ್ರಮ."

"ವ್ಯರ್ಥ ಪರಿಶ್ರಮ. ಏನೆಲ್ಲ ಕನಸು ಕಟ್ಟಿಕೊಂಡು, ಕಡೆಗೆ ಯಾವುದೂ ಆಗದೆ ಕಮ್ಯೂನಿಸ್ಟರಾಗುವುದು."

ಈಗ ಶ್ರೀಪತಿರಾಯರು ರಾಧಾಕೃಷ್ಣನನ್ನೇ ನೋಡುತ್ತಿದ್ದರು. ಅನಂತನಿಗೂ ಇವನಿಗೆ ಎಷ್ಟು ವ್ಯತ್ಯಾಸ, ಎಂದು ಮನಸ್ಸು ಪ್ರಶ್ನಿಸಿತು.

ಒಂದು ಪೂರ್ವ—ಇನ್ನೊಂದು ಪಶ್ಚಿಮ.

"ಕಮ್ಯೂನಿಸ್ಟರ ಕುರಿತು ಏನೋ ಪೂರ್ವಗ್ರಹ ಇದ್ದಂತೆ ಕಾಣುತ್ತದಲ್ಲ ನಿಮಗೆ" ಎಂದು ಮಾತು ಮುಂದುವರಿಸುವ ಇಚ್ಛೆಯಿಂದ ರಾಯರು ಹೇಳಿದರು.

"ಪೂರ್ವಗ್ರಹ ಏನು ಬಂತು? ಯಾವುದೂ ಇಲ್ಲದುದಕ್ಕೆ ಏನಾದರೊಂದು ವೇಷ ಕಟ್ಟಿಕೊಂಡು ಕುಣಿಯಬೇಕಲ್ಲ. ಅದಕ್ಕೆ ಅರ್ಧ ಬೆಂದ ಮಿದುಳುಳ್ಳ ಇಂದಿನ ಯುವಕರ ಅವಸ್ಥೆಯೇ ಹಾಗೆ. ಮಾತಿಗೊಂದು 'ಇಸಮ್' ತರುತ್ತಾರೆ."

ಅಚ್ಚ ಸಂಪ್ರದಾಯವಾದ ಮನೆತನದ ರಕ್ತ ರಾಧಾಕೃಷ್ಣನ ಧಮನಿಗಳಲ್ಲಿ ಹರಿಯುತ್ತಿತ್ತು. ಆದರೆ ಶ್ರೀಪತಿರಾಯರಿಗೆ ಮಾತ್ರ ಸುನಂದೆಯ ಮದುವೆ

ಯಾಗಿ ನಾಲ್ಕಾರು ದಿನಗಳೊಳಗೆ ಆತನ ವಿಚಾರಗತಿಯ ಕುರಿತು ಜಿಗುಪ್ಸೆ ಉಂಟಾಯಿತು.

ಭಾರತಿ ಈಗ ರಾಧಾಕೃಷ್ಣನನ್ನೇ ನೋಡತೊಡಗಿದಳು.

ತಿದ್ದಿದ ಕ್ರಾಪು, ಗುಂಗುರು ಗುಂಗುರಾದ ಕೂದಲು, ಸುಂದರ ಮುಖ. ಅದರ ಮೇಲೆ ಬಣ್ಣ.

ತಂದೆ ಹೊಸ ಅಳಿಯನನ್ನು ನೋಡುವ ದೃಷ್ಟಿಯಲ್ಲಿ ಜಿಗುಪ್ಸೆ ಮೊಳೆತಿದೆ ಎಂದು ಭಾರತಿಗೆ ತಿಳಿಯಲು ಹೆಚ್ಚು ಅವಕಾಶ ಬೇಕಾಗಿರಲಿಲ್ಲ. ಇದರಿಂದಾಗಿ ಆಕೆಗೆ ಸಂತೋಷವಾಗತೊಡಗಿತು. ಆ ಸಂತೋಷ ಏಕೆ ಬಂತೆಂದು ಆಕೆಗೇ ತಿಳಿದಿರಲಿಲ್ಲ.

ಮತ್ತೆರಡು ದಿನ ಕಳೆದು ರಾಧಾಕೃಷ್ಣ ಸುನಂದೆಯ ಜೊತೆಗೆ ಮಂಗಳೂರಿಗೆ ಹೊರಟ. ಸುನಂದೆ ಅಕ್ಕನನ್ನೂ ಜೊತೆಗೆ ನಾಲ್ಕು ದಿನವಿರುವಂತೆ ಬರಲು ಒತ್ತಾಯ ಪಡಿಸಿದರೂ ಆಕೆ ಒಪ್ಪಲಿಲ್ಲ. ಮದುವೆಯ ಗಡಿಬಿಡಿಯಲ್ಲಿ 'ಲಾ ಕಾಲೇಜು' ಎಲ್ಲಿದೆಯೆಂದು ಸದಾನಿಗೆ ಭಾವನೊಡನೆ ಕೇಳಿ ತಿಳಿದುಕೊಳ್ಳುವುದು ಸಾಧ್ಯವಾಗಲಿಲ್ಲ. ಈಗ ಅಕ್ಕನ ಜೊತೆಗೆ ಹೋಗಬೇಕಾದ ಸಂದರ್ಭ ಬಂದೊದಗಿದಾಗ 'ಲಾ ಕಾಲೇಜು' ಮಂಗಳೂರಿನಲ್ಲಿರುವುದಾದರೆ ಅದನ್ನು ಕಾಣಲೂಬಹುದು ಎಂಬಾಸೆಯಿಂದ ಸದಾನಂದ ಜೊತೆಗೆ ಹೊರಟ.

ಸುನಂದೆ, ಸದಾನಂದ ಹೊರಟುಹೋದಮೇಲೆ ಮನೆ ಬರಿದಾದಂತೆ ಕಾಣುತ್ತಿತ್ತು. ಹೊಸದಾಗಿ ಮದುವೆಯಾದರೂ ಯಾವ ಸಂಕೋಚವೂ ಇಲ್ಲದೆ ಮನೆಯವರೊಂದಿಗೆ ಬೆರೆಯುತ್ತಿದ್ದ ರಾಧಾಕೃಷ್ಣ ಹೊರಟುಹೋದ ಮೇಲೆ ಬರಿಮನೆಯ ಏಕಾಂತತೆ ಗೌರಮ್ಮನ ಮಾತಿನಲ್ಲಿ ಪ್ರಕಟವಾಯಿತು.

"ಭಾರಿಯ ಗಂಡನ ಹಾಗೆ ಊಟದ ನಡುವೆಯೂ ಯೋಚನೆ ಮಾಡುವುದಿಲ್ಲ ಹೊಸ ಅಳಿಯ. ಮಾತಿನಲ್ಲೂ ನಡವಳಿಕೆಯಲ್ಲೂ ಎಷ್ಟು ನಾಜೂಕು."

ಶ್ರೀಪತಿರಾಯರು ಹೆಂಡತಿಯ ಕಡೆ ನೋಡಿದರೂ ಅದು ಗೌರಮ್ಮನ ನಿರ್ಮಲ ಅಂತಃಕರಣದ ಅಭಿಪ್ರಾಯ. ಭಾರತಿಯ ಗಂಡನನ್ನು ತೆಗಳಬೇಕೆಂಬ ಉದ್ದೇಶದಿಂದ ಸೂಚಿಸಿದ ಅಭಿಪ್ರಾಯ ಅದಾಗಿರಲಿಲ್ಲ. ರಾಯರಿಗೆ ಸಮಾಧಾನವಾಯಿತು. ಹೆಂಡತಿಗೆ ಉತ್ತರ ಕೊಡಲಿಲ್ಲ.

ಭಾರತಿಗೆ ಮಾತ್ರ ನಗು ಬಂತು.

ಮತ್ತೆರಡು ದಿನ ಭಾರತಿಯನ್ನು ಬಲವಂತದಿಂದ ರಾಯರು ಮನೆ

ಯಲ್ಲಿಯೇ ಉಳಿಸಿಕೊಂಡರು. ಏಕೋ ಭಾರತಿಯೂ ಹೋದರೆ ಈ ಏಕಾಂತತೆ ಯನ್ನು ಸಹಿಸಲಾರೆ ಎನ್ನುವಂತಿತ್ತು ಅವರ ಮನಃಸ್ಥಿತಿ. ಅದರೆ ಎರಡು ದಿನ ಕಳೆದು ಭಾರತಿ ಹೋಗುವೆನೆಂದು ಹೇಳಿದಾಗ 'ಇನ್ನೂ ನಿಲ್ಲು' ಎಂದು ಹೇಳುವುದು ಸರಿಯೆಂದು ತೋರಲಿಲ್ಲ, ಉಡುಪರ ಸಿಟ್ಟನ್ನು ಅವರು ಗಮನಿಸ ಬೇಕಿತ್ತು. ಸಾಲದುದಕ್ಕೆ ಅಲ್ಲಿ ಪಾರ್ವತಿ ಗರ್ಭಿಣಿ.

ಭಾರತಿಗೆ ತಂದೆಯ ಮನೆ ಬಿಟ್ಟು ಹೊರಡುವಾಗ ಮನಸ್ಸೇಕೋ ತುಂಬ ಭಾರವಾಯಿತು. ಅಲ್ಲಿಗೆ ಬಂದಮೇಲೆ ಅನಂತನ ಕಾಗದ ಬಂದೇ ಇರಲಿಲ್ಲ. 'ಇಷ್ಟು ದಿನ ತಾಯಿಯ ಮನೆಯ 'ಸಂಭ್ರಮ' ಮುಗಿಸಿ, ಇನ್ನು ಆ ದುಃಖದ ತಾಣಕ್ಕೆ ದುಡಿಯಲು ಹೋಗುತ್ತಿದ್ದೇನೆ' ಎನ್ನುವಂತಿತ್ತು ಆಕೆಯ ಮನಸ್ಸು.

ಭಾರತಿಯ ಕಣ್ಣಲ್ಲಿ ನೀರು ತುಂಬುತ್ತಿರುವುದನ್ನು ಕಂಡ ರಾಯರು ತಮ್ಮ ಕೋಣೆಯೊಳಗೆ ಹೋದರು. ಅವರಿಗೂ ದುಃಖ ತಡೆಯಲಾಗಲಿಲ್ಲ.

ಮನೆಗೆ ಮರಳಿದಾಗ, ಭಾರತಿ ಯೋಚಿಸಿಕೊಂಡಿದ್ದಂತೆ ಅಲ್ಲಿ ಕೂಡ ಕಳವಳವೆ. ಪಾರ್ವತಿ ನಾಲ್ಕು ದಿನಗಳಿಂದ 'ಜ್ವರ' ಎಂದು ಮಲಗಿದ್ದಳು.

"ಏನಾಯಿತು, ಪಾರೂ ?" ಎಂದು ಭಾರತಿ ಕೇಳಿದಾಗ,

"ಏನಿಲ್ಲ, ಅತ್ತಿಗೆ. ದಿನ ಹತ್ತಿರ ಬರುತ್ತಿರುವ ಹಾಗೆ ಹೆದರಿಕೆ ತುಂಬಿ ಕೊಂಡಿದೆ. ಶೀತ, ಜ್ವರ ಅಷ್ಟೆ. ಆ ನರಹರಿ ಸ್ವಲ್ಪ ಹೇಗಿದ್ದಾನೆಂದು ನೋಡು ಹೋಗು" ಎಂದಳು.

"ಅವನಿಗೇನಾಗಿದೆ ?"

"ರಜೆ. ಸಿಕ್ಕಿದ್ದೆಲ್ಲ ತಿನ್ನುತ್ತಾನೆ. ಕಂಡಕಂಡಲ್ಲಿ ತಿರುಗುತ್ತಾನೆ. ಎಂಟು ದಿನಗಳಿಂದ ಹೊಟ್ಟೆ ಸರಿಯಿಲ್ಲ. ಈಗ ನೋಡಿದರೆ ಪೆದ್ದನ ಹಾಗೆ ಕಾಣುತ್ತಾನೆ. ಇವೊತ್ತು ಸ್ವಲ್ಪ ವಾಸಿ ಎಂದು ಕಾಣುತ್ತದೆ.

ಭಾರತಿ ನರಹರಿಯನ್ನು ಕಂಡು ಬಂದಳು. ತುಂಬ ಕೃಶವಾಗಿದ್ದ ದೇಹ, "ಬಂದೀಯಾ, ಅತ್ತಿಗೆ ?" ಎಂದು ಅವಳನ್ನು ಸ್ವಾಗತಿಸಿತು.

ನಾಗಮ್ಮ ಒಳಗೆ ಅಡುಗೆಯ ಮನೆಯಲ್ಲಿದ್ದರು.

ನಾಲ್ಕು ದಿನ ಕಳೆದ ಮೇಲೆ ಪಾರ್ವತಿ ಸ್ವಲ್ಪ ಚೇತರಿಸಿಕೊಂಡು, ಎದ್ದು ಓಡಾಡುವಷ್ಟು ಶಕ್ತಿ ಪಡೆದಳು. ನರಹರಿಯೂ ಗುಣಮುಖನಾಗುತ್ತ ನಡೆದಿದ್ದ.

ಭಾರತಿ ಪುನಃ ಗಂಡನ ಕಾಗದದ ದಾರಿ ಕಾಯುತ್ತಿದ್ದಳು.

ಒಂದು ತಿಂಗಳಿಂದ ಕಾಗದವೇ ಇದ್ದಿರಲಿಲ್ಲ. ಮನೆಯಿಂದ ಬರೆದಿದ್ದ ಮೂರು ಕಾಗದಗಳಿಗೂ ಉತ್ತರವಿರಲಿಲ್ಲ. ಮದುವೆಗೆ ಬರುವರೆಂಬ ಆಸೆ ನಿರಾಶೆಯಾಗಿತ್ತು. ಇನ್ನು ಮಳೆ ಆರಂಭವಾಗುವುದರೊಳಗಾದರೂ ಬಂದಾರು, ಎಂದು ಭಾರತಿ ಒಂದು ಅಸ್ಪಷ್ಟ ಆಸೆಯಿರಿಸಿಕೊಂಡು ಕಾಗದದ ದಾರಿ ಕಾಯು ತ್ತಿದ್ದಳು. ತಂಗಿಯ ಮದುವೆಯ ವೈಭವದ ನಡುವೆಯೇ ಇಲ್ಲಿಂದ ಹೋಗಿದ್ದರೆ ಎಂದು ಯೋಚಿಸಿದುದೆಷ್ಟೋ ಬಾರಿ. ಆದರೆ ಅದು ಸಾಧ್ಯವಾಗಲಿಲ್ಲ. ಪುನಃ ಮಾವನ ಮನೆಗೆ ಬಂದರೂ ಗಂಡನ ವರ್ತಮಾನವಿಲ್ಲ.

ಅನಂತನ ಈ ವರ್ತನೆ ಪಾರ್ವತಿಗೂ ಆಶ್ಚರ್ಯವನ್ನುಂಟುಮಾಡಿತ್ತು. ಆದರೂ ಆಕೆಗೆ ಅಣ್ಣನಲ್ಲಿ ಅಚಲ ವಿಶ್ವಾಸ. ಮದುವೆಯಾಗಿ ಎರಡು ವರ್ಷ ಗಳಾದರೂ ಹೆಂಡತಿಯನ್ನು ಕಾಣುವ ಹಂಬಲವಿರದೆ ಯಾವುದೋ ಒಂದು ಉದ್ದೇಶಕ್ಕಾಗಿ ದುಡಿಯುತ್ತಿರುವನಲ್ಲಾ, ಎಂದು ನೆನಪಾದಾಗಲೆಲ್ಲ, ವಾರಕ್ಕೆ ಎರಡು ಬಾರಿ ಬಂದು ತನ್ನನ್ನು ನೋಡಿಕೊಂಡು ಹೋಗುತ್ತಿದ್ದ ತನ್ನ ಗಂಡನ ಸ್ನೇಹ ಕಣ್ಣೆದುರು ನಿಲ್ಲುತ್ತಿತ್ತು.

ಈ ಅತೃಪ್ತಿ, ಭಾರತಿಯ ಮನಸ್ಸಿನ ಮೇಲೆ ಮಾಡುತ್ತಿದ್ದ ಪರಿಣಾಮ ಗಳನ್ನು ತುಂಬ ಸಹಾನುಭೂತಿಯಿಂದ ಪಾರ್ವತಿ ನಿರೀಕ್ಷಿಸುತ್ತಿದ್ದಳು. ಆದರೆ ಆಕೆಗೆ ಧೈರ್ಯ ಹೇಳುವುದು ಮಾತ್ರ ಪಾರ್ವತಿಗೆ ಈಗೀಗ ಸಾಧ್ಯವಾಗು ತ್ತಿರಲಿಲ್ಲ.

ಮತ್ತೊಂದು ಸಂಜೆ ನೀರಿಕ್ಷಿಸಿದ ಕಾಗದ ಬಂತು.

ಪಾರ್ವತಿ ಭಾರತಿಯರಿಬ್ಬರೂ ಕೂಡಿ ತುಸು ಗಾಳಿಗೆ ಅಡ್ಡಾಡಿ ಬರುವು ದೆಂದು ಹೊರಟಾಗ, ನರಹರಿ ಟಪಾಲುಪೇದೆ ಕೊಟ್ಟ ಕಾಗದವನ್ನು ತಂದು ಅತ್ತಿಗೆಗೆ ಕೊಟ್ಟ.

ಮೆಟ್ಟಲಿಳಿಯಲು ಸಿದ್ಧಳಾಗುತ್ತಿದ್ದ ಭಾರತಿಯನ್ನು ಚಾವಡಿಯಲ್ಲಿ ನಿಂತಿದ್ದ ಉಡುಪರು ಎವೆಯಿಕ್ಕದೆ ನೋಡುತ್ತಿದ್ದರು. ಶ್ರೀಪತಿರಾಯರು ಮಗಳಿಗೆ ಮಾಡಿಸಿದ್ದ ಹೊಸ ಸರ ಸೊಸೆಯ ಕೊರಳಲ್ಲಿ ಮಿಂಚುತ್ತಿತ್ತು. ಅವರು ಅದನ್ನು ಕಂಡುದು ಅಂದೇ.

ನಿಂತಲ್ಲಿಯೇ ಕಾಗದ ಒಡೆದು ಓದಿದಳು ಭಾರತಿ. ಓದುತ್ತ ಹೋದಂತೆ ಆಕೆಯ ಮುಖ ವಿವರ್ಣವಾಯಿತು. ಕುತ್ತಿಗೆಯ ನರಗಳು ಉಬ್ಬಿಕೊಂಡವು. ತಲೆ ತಿರುಗಿದಂತಾಯಿತು. ಅಲ್ಲಿಯೇ ಭಾರತಿ, "ಅತ್ತಿಗೆ, ಅತ್ತಿಗೆ" ಎಂದು ಕೂಗುತ್ತಿರುವಂತೆಯೇ ಕುಸಿದುಬಿದ್ದಳು.

ಬಿದ್ದ ಭಾರತಿಗೆ ಪ್ರಜ್ಞೆಯಿರಲಿಲ್ಲ.

ಹಣೆಯಿಂದ ರಕ್ತ ಸೋರುತ್ತಿತ್ತು. ಉಡುಪರು ಸೊಸೆಯ ಬಳಿ ಓಡಿ ಬಂದರು. ಎಲ್ಲರೂ ಆಕೆಯನ್ನೆತ್ತಿ ಚಾವಡಿಯಲ್ಲಿ ಮಲಗಿಸಿದರು. ಗಾಯವಾದ ಜಾಗಕ್ಕೆ ಒಂದಷ್ಟು ಬೆಲ್ಲ ಹಚ್ಚಿ, ಸಕ್ಕರೆಯ ಪಾನಕ ತಯಾರಿಸಿ ತಂದು ಭಾರತಿಗೆ ಕುಡಿಸಿದರು. ಆಗ ಮೆಲ್ಲನೆ ಭಾರತಿ ಕಣ್ಣು ತೆರೆದು ನೋಡಿದಳು. ಪಾರ್ವತಿಯನ್ನು ನೋಡಿದೊಡನೆ ಆಕೆಗೆ ಅಳು ತಡೆಯಲಾಗಲಿಲ್ಲ.

"ಅವರು ಯಾವಾಗ ಬರುತ್ತಾರೋ ದೇವರಿಗೇ ಗೊತ್ತು, ಪಾರೂ. ಇನ್ನೂ ನಾಲ್ಕು ತಿಂಗಳು ಮನೆ ಸಿಗುವುದಿಲ್ಲವಂತೆ."

ಮೆಲ್ಲನೆ ಮೆಲ್ಲನೆ ಅಸ್ಪಷ್ಟವಾಗಿ ಹೇಳಿದ ಮಾತುಗಳನ್ನು ಕೇಳುತ್ತ ಹೋದಂತೆ ಪಾರ್ವತಿಯ ಕಣ್ಣಲ್ಲೂ ನೀರು ತುಂಬಿತು. ಅರ್ಧ ಹೊಲಿದ ಮಗುವಿನ ಕಾಲುಚೀಲವನ್ನು ಹಿಸುಕುತ್ತ ಕಣ್ಣಲ್ಲಿ ನೀರು ತಂದುಕೊಂಡ ಅತ್ತಿಗೆಯ ಮುಖ ಕಣ್ಣೆದುರು ಬಂತು. ಆದರೆ ಆಕೆ ಮಾತನಾಡಲಿಲ್ಲ.

ರಾತ್ರೆ ಇಡೀ ಭಾರತಿಗೆ ವಿಪರೀತ ಜ್ವರ.

ಸುದ್ದಿ ಕೇಳಿ ಮಾರನೆಯ ದಿನ ಶ್ರೀಪತಿರಾಯರು ಧಾವಿಸಿ ಬಂದರು. ಉಡುಪರ ಅನುಮತಿ ಪಡೆದು ಕಾರು ಮಾಡಿ ಮಗಳನ್ನು ಮನೆಗೆ ಸಾಗಿಸಿದರು. ತಜ್ಞ ವೈದ್ಯರನ್ನು ಕರೆಸಿ ಶುಶ್ರೂಷೆ ನಡೆಸಿದರು.

ಭಾರತಿಗೆ ಜ್ವರ ನಿಂತಿತು. ಆಕೆ ಮೆಲ್ಲನೆದ್ದು ಓಡಾಡುವಂತಾಯಿತು. ಆದರೆ ಆಕೆಯ ಮನಸ್ಸಿಗೆ ಬಿದ್ದ ಏಟಿನ ನೋವು ಮಾಸಲಿಲ್ಲ. ಅಪರೂಪವಾಗಿದ್ದ ನಗುವೂ ಈಗ ಮಾಯವಾಯಿತು.

ಭಾರತಿ ಜೀವಂತ ಶವ ಎನ್ನುವ ಸ್ಥಿತಿಗೆ ತಲಪಿದಳು.

ಕೋರ್ಟಿನ ರಜೆ ಮುಗಿಯುವುದರಲ್ಲಿತ್ತು. ಮಳೆಗಾಲ ಆರಂಭವಾಗುವ ಸೂಚನೆ ಕಾಣುತ್ತಿತ್ತು. ಶ್ರೀಪತಿರಾಯರು ಮಗಳನ್ನು ಮನೆಗೆ ಕರೆದು ತಂದ ದಿನ, ತಾರು ಕೊಟ್ಟು ಅನಂತನನ್ನು ಕರೆಸುವ ಆಲೋಚನೆ ಮಾಡಿದ್ದರು. ಆದರೆ ಅವನನ್ನು ಈ ರೀತಿ ಹೆದರಿಸುವುದು ಸರಿಯಲ್ಲವೆಂದು ಮನಗಂಡು ಸುಮ್ಮನಾದರು. ಬರೇ ಕಾಗದ ಮಾತ್ರ ಬರೆದು, ಆಕೆಯ ದೇಹಸ್ಥಿತಿಯನ್ನು ವಿವರಿಸಿ ತಿಳಿಸಿದರು.

ಆದರೆ ಭಾರತಿ ಗುಣಮುಖಳಾಗುತ್ತ ನಡೆದಂತೆ ಅವರು ಮುಂದೇನು ಮಾಡುವುದೆಂದು ಯೋಚಿಸಬೇಕಾಗಿ ಬಂತು. ಭಾರತಿ ಬಿದ್ದುದರ ಕಾರಣ

ತಿಳಿಸಿದಾಗಲೇ ಅನಂತನನ್ನು ಬೇಡಿಯಾದರೂ ಆತ ಭಾರತಿಯನ್ನು ಕರೆಸಿಕೊಳ್ಳುವಂತೆ ಒತ್ತಾಯ ಪಡಿಸಬೇಕೆಂದು ಅವರು ನಿಶ್ಚಯಿಸಿಯಾಗಿತ್ತು. ಆದರೆ ಆತ ಹೀಗೆ ಪ್ರತಿಸಲವೂ ಏನಾದರೊಂದು ಕಾರಣ ಕೊಟ್ಟು ಊರಿಗೆ ಮರಳಲು ಹಿಂಜರಿಯುತ್ತಿದ್ದುದರ ಹಿಂದೆ ಯಾವುದಾದರೊಂದು ಪ್ರಬಲ ಕಾರಣ ಇರಲೇಬೇಕೆಂದು ಅವರಿಗೆ ಮನವರಿಕೆಯಾಗತೊಡಗಿತ್ತು. ಅಂಥ ಕಾರಣ ಆರ್ಥಿಕವಿರಬಾರದೇ ಎಂದು ಈಗೀಗ ಅವರಿಗೆ ಹೊಳೆಯತೊಡಗಿತ್ತು.

ಆಮೇಲೆ ರೂಪುಗೊಂಡಿತು ಅವರ ನಿರ್ಧಾರ: 'ಕೋರ್ಟು ಆರಂಭವಾಗುವುದರೊಳಗೆ ಭಾರತಿಯನ್ನು ಕರೆದುಕೊಂಡು ಮುಂಬಯಿಗೆ ಹೋಗಿ ಬರಲೇಬೇಕು' ಎಂದು.

ಭಾರತಿಯೊಡನೆ ಈ ಅಭಿಪ್ರಾಯವನ್ನು ಅವರು ಒಮ್ಮೆಗೇ ತಿಳಿಸಲಿಲ್ಲ. ಉಡುಪರ ಮನೆಗೆ ಹೋಗಿ ಅವರೊಡನೆ ಮಾತನಾಡಿದರು. ಹಾಗೆ ಮಾತನಾಡುವಾಗ ಪುಣ್ಯವಶಾತ್ ಪಾರ್ವತಿ ತಂದೆಯ ಬಳಿ ಇದ್ದಳು. ಉಡುಪರು ತಮ್ಮ ಅಭಿಪ್ರಾಯ ಸೂಚಿಸುವ ಮೊದಲೇ,

"ನೀವು ಹಾಗೆಯೆ ಮಾಡಿ, ಮಾವಯ್ಯ. ಅತ್ತಿಗೆಯನ್ನು ಕರೆದುಕೊಂಡು ಹೋಗಿ ಬನ್ನಿ. ಅಣ್ಣ ಒಂದು ಗಾದೆ ಹೇಳುತ್ತಿದ್ದ: ಮಹಮ್ಮದ ಬೆಟ್ಟಕ್ಕೆ ಬರದಿದ್ದರೆ ಬೆಟ್ಟವಾದರೂ ಮಹಮ್ಮದನ ಹತ್ತಿರ ಹೋಗಬೇಕಂತೆ. ಹಾಗೆ ಒಂದು ವೇಳೆ ಮನೆ ಸಿಗದಿದ್ದರೆ ನಾಲ್ಕು ದಿನವಾದರೂ ಅತ್ತಿಗೆ ಗಂಡನ ಜೊತೆಗಿದ್ದು ಮರಳಿದ ಹಾಗೆ ಹಾಗಾಗುತ್ತದೆ."

ಉಡುಪರು ಪಾರ್ವತಿಯ ಕಡೆ ನೋಡಿದರು. ಅವಳನ್ನು ತಿನ್ನುವಂತಿತ್ತು ಆ ದೃಷ್ಟಿ. ಆದರೆ ಪಾರ್ವತಿ ಹೆದರಲಿಲ್ಲ. ಶ್ರೀಪತಿರಾಯರು ಅಭಿಪ್ರಾಯ ಗೆದ್ದಿತು. "ಹೋಗಿ ಬನ್ನಿ, ಬೇಕಾದರೆ. ಮನೆ ಸಿಗಲಿಲ್ಲವಾದರೆ ಸುಮ್ಮಗೆ ಅವನಿಗೇಕೆ ತೊಂದರೆ; ಇನ್ನು ನಾಲ್ಕು ತಿಂಗಳು ಕಳೆದ ಮೇಲೆ ಕರೆದುಕೊಂಡು ಹೋದರಾಗದೆ?" ಎಂದರು ಉಡುಪರು.

ಒಂದು ಸಾವಿರದ ಬ್ಯಾಂಕ್ 'ಡ್ರಾಫ್ಟ್' ಪಡೆದು ಮೂರನೆ ದಿನ ಶ್ರೀಪತಿರಾಯರು ಭಾರತಿಯೊಡನೆ "ಮುಂಬಯಿಗೆ ಹೊರಡಲು ತಯಾರಿಮಾಡು" ಎಂದಾಗ ಆಕೆಗಾದ ಆಶ್ಚರ್ಯ ಅಷ್ಟಿಷ್ಟಲ್ಲ.

ಆ ಆಶ್ಚರ್ಯದಲ್ಲಿ ಆನಂದವಿತ್ತು. ಮುಂಬಯಿಯ ಕನಸು ಕಣ್ಣಮುಂದೆ ಕುಣಿಯುತ್ತಿತ್ತು.

ಅತ್ತೆ, ಮಾವ, ತಾಯಿ ಪಾರ್ವತಿಯರನ್ನೆಲ್ಲ ಬೀಳ್ಕೊಟ್ಟು ಮುಂಬಯಿಗೆ ಹೊರಟ ಭಾರತಿಯ ಉತ್ಸಾಹ ವರ್ಣನಾತೀತವಾಗಿತ್ತು.

ಯಾವ ಯೋಚನೆಯೂ ಇಲ್ಲದೆ, ಸ್ವಪ್ನದಲ್ಲಿ ಎಂಬಂತೆ, ಆಕೆ ತಂದೆಯನ್ನು ಅನುಸರಿಸಿದಳು

ಹೇಮಂತಗಾನ

ಭಾಗ ೨

ಅನಂತ

೧೦

ಅನಂತ 'ಕ್ರಾಂಗ್ರೆಸ್ ಭವನ' ಬಿಡುವಾಗಲೆ ಹೊತ್ತು ಕಂತುವುದರಲ್ಲಿತ್ತು. ಅದಕ್ಕೆ ಸರಿಯಾಗಿಯೇ ಅವನ ಮನಸ್ಸು ತುಂಬ ಬಾಡಿತ್ತು. ಹಿಂದಿನ ರಾತ್ರೆಯಿಡೀ ನಿದ್ದೆಗೆಟ್ಟುದರ ಗುರುತು ಅವನ ಕಣ್ಣುಗಳಲ್ಲಿ ಸ್ಪಷ್ಟವಾಗಿತ್ತು. ಮೇಲೆ ದಿನವಿಡೀ ದುಡಿದುದರ ಆಯಾಸ. ಜೊತೆಗೆ ಪ್ರೆಸ್ಸಿನ ಚಿಂತೆ. ನಡುವೆ ಇದೊಂದು ಕರ್ತವ್ಯನಿರ್ವಹಣ. ಆ ಸಂದರ್ಭದಲ್ಲಿ ಅವನು ಕೇಳಿದ ಆ ನಂಜು ಮಾತು.

'ಸ್ವಯಂಸೇವಕರಿಗೂ ನಿರ್ಣಯಾಧಿಕಾರ ಬಂದಂತೆ ಕಾಣುತ್ತದೆ. ಅವರ ತಲೆಯಲ್ಲಿಯೂ ತಾವು ದೊಡ್ಡ ರಾಜಕಾರಣಿಗಳೆಂಬ ಭಾವನೆ. ರಾಜೀನಾಮೆಯ ಹೆದರಿಕೆ ತೋರಿಸಿ ಕಾಂಗ್ರೆಸ್ಸನ್ನೇ ತಲೆಕೆಳಗೆ ಮಾಡಿಬಿಡಬಹುದೆಂದು ಅವರ ಯೋಚನೆ.'

ಅನಂತ ಆ ಮಾತುಗಳನ್ನೇ ಮತ್ತೆ ಮತ್ತೆ ಮೆಲಕುಹಾಕುತ್ತಿದ.

ಪಾಟಣ್‌ಕರ್ ಹಾಗೇಕೆ ಮಾತನಾಡಿದ?

ಮುಂದೆ ಬಿ.ಪಿ.ಸಿ.ಸಿ.ಯ ಕಾರ್ಯದರ್ಶಿಯಾಗುವ ಯೋಚನೆಯೇ? ಈಗಲೇ ಶಿಸ್ತುಭಂಗದ ವಿರುದ್ಧ ಯಾವ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬ ಅಭ್ಯಾಸವೆ?

'ಸ್ವಯಂಸೇವಕರು ಕ್ಷುದ್ರ ಜೀವಿಗಳೆಂಬ ಅಭಿಪ್ರಾಯ ಗಾಂಧೀಭಕ್ತರಲ್ಲಿ ಇದೆಯೆಂಬ ವಿಚಾರ ನನಗೆ ತಿಳಿದುದು ಇವೊತ್ತೇ, ಪಂಡಿತ್ ರಾವ್. ದಯಮಾಡಿ ನನ ರಾಜೀನಾಮೆಯನ್ನು ಕಾರ್ಯದರ್ಶಿಗಳಿಗೆ ತಲಪಿಸುವ ವ್ಯವಸ್ಥೆಮಾಡಿ. ಇಂದಿನಿಂದ ನನಗೂ ಮುಂಬಯಿ ಕಾಂಗ್ರೆಸ್ಸಿಗೂ ಯಾವ ಸಂಬಂಧವೂ ಇಲ್ಲ.'

ಆದರೆ ಆಗತಾನೇ ಓಡಿಬಂದ ಕಾರ್ಯದರ್ಶಿಗಳು ಈ ವಾದ ಹೆಚ್ಚು ಬೆಳೆಯಲು ಬಡಲಿಲ್ಲ. ಬಿಡುವಿಲ್ಲದ ಆ ದಿನದಲ್ಲೂ ಗಲಭೆ ಕೇಳಿ ಬಿಡುವು ಮಾಡಿಕೊಂಡು ಓಡಿಬಂದರು. ಒಂದು ಕ್ಷಣ ಅವಕಾಶವಿರದಂತೆ ಬರುತ್ತಿದ್ದ ಟೆಲಿಫೋನ್ ಕರೆಗಳು; ದಿಲ್ಲಿಯಿಂದ ಬರುತ್ತಿದ್ದ ಟ್ರಂಕ್ ವರ್ತಮಾನಗಳು. ಇವುಗಳ ಗಲಭೆಯ ನಡುವೆ ಒಬ್ಬ ಸಾಮಾನ್ಯ ಸ್ವಯಂಸೇವಕನ ದುಃಖಶಮನ ಮಾಡುವುದೂ ಅಗತ್ಯವೆಂದು ಅವರಿಗೆ ಕಂಡಿತ್ತು. ಆದರೆ ಪಾಟಣ್‌ಕರ್ ಹಾಗೇಕೆ ಮಾತನಾಡಿದ!

"ಛೆ ಉಡುಪರೆ. ಹೀಗೇಕೆ ದುಡುಕುತ್ತೀರಿ. ನಿಮ್ಮಂಥ ಉತ್ಸಾಹಿ ಯುವಕರು ಒಮ್ಮಿಂದೊಮ್ಮೆಗೆ ಇಷ್ಟು ದೊಡ್ಡ ರಾಷ್ಟ್ರೀಯ ಸಂಸ್ಥೆಯನ್ನು ತ್ಯಜಿಸಿ ಓಡಿಹೋಗುವುದೇ ? ಮೌಂಟ್‌ಬ್ಯಾಟನ್ ಯೋಜನೆಯನ್ನು ಕಾಂಗ್ರೆಸ್ ಒಪ್ಪಿ ಕೊಂಡಿದೆಯೆಂದು ರೇಡಿಯೋ ಸಮಾಚಾರ ಕೇಳಿಯೇ ನೀವು ರಾಜೀನಾಮೆ ಕೊಡುವುದೇ ? ಎ.ಐ.ಸಿ.ಸಿ. ಸೇರಿಲ್ಲ. ಬಾಪುವಿನ ಅಭಿಪ್ರಾಯ ತಿಳಿದಿಲ್ಲ. ನೀವು ಹೀಗೆ ಮಾಡಬಾರದು." ಕಾರ್ಯದರ್ಶಿಗಳ ಸಲಹೆಯಲ್ಲಿ ಆತ್ಮೀಯತೆ ಇತ್ತು. ಆದರೆ ಅನಂತನ ನಿರ್ಧಾರವನ್ನು ಬದಲಿಸಲು ಅದು ಸಮರ್ಥವಾಗ ಲಿಲ್ಲ. ಅವನಿಗೆ ಪಾಟಣ್‌ಕರ್‌ನ ಮಾತುಗಳೇ ಮತ್ತೆ ಮತ್ತೆ ಮನಸ್ಸಿನೆದುರು ಬರುತ್ತಿದ್ದುವು.

"ಕ್ಷಮಿಸಿ, ಮಹಾಶಯ. ಒಂದು ರಾತ್ರಿಯ ಯೋಚನೆಯ ಫಲವಾಗಿ ರೂಪುಗೊಂಡ ನನ್ನ ನಿರ್ಣಯವನ್ನು ನಾನು ಬದಲಿಸುವುದಿಲ್ಲ. ಎ.ಐ.ಸಿ.ಸಿ.ಯ ಅಂಗೀಕಾರ ಮುದ್ರೆಯ ನಾಟಕ ಮಾತ್ರ ಇನ್ನು ನಡೆಯಲಿದೆಯೆಂದು ನನಗೆ ಗೊತ್ತು. ಆದರೆ ಈ ನಿರ್ಣಯವನ್ನು ಬದಲಿಸುವ ಅಧಿಕಾರ ಅದಕ್ಕಿಲ್ಲ. ಆ ಕಾರಣ ದಯಮಾಡಿ ನನ್ನ ರಾಜೀನಾಮೆಯನ್ನು ಸ್ವೀಕರಿಸಬೇಕು. ಇಂದಿ ನಿಂದ ನಾನು ಕಾಂಗ್ರೆಸ್ ಶಿಸ್ತಿನಿಂದ ವಿಮುಕ್ತ."

ಅವಸರದ ಮತ್ತೊಂದು ಟೆಲಿಫೋನ್ ಕರೆ ಕಾರ್ಯದರ್ಶಿಗಳಿಗಾಗಿ ಕಾಯುತ್ತಿತ್ತು. ಈ ದುಃಖದ ಸನ್ನಿವೇಶಕ್ಕೆ ಮುಗಿತಾಯ ತರಲು ಪಾಟಣ್‌ಕರ್ ಮುಂದೆ ಬಂದ.

"ಹೋಗಲಿ ಬಿಡಿ. ಮಿಂಚುಹುಳುಗಳಂತೆ ತಮ್ಮಿಂದಲೇ ಬೆಳಗಾಗುವು ದೆಂದು ತಿಳಿದಿರುವ ಈ ಸೋಶಿಯಲಿಸ್ಟ್ ಪುಂಡರು ಎಷ್ಟು ಬೇಗ ಹೊರಗೆ ಹೋಗುವರೋ ಅಷ್ಟು ವಾಸಿ."

"ಪಾಟಣ್‌ಕರ್ !" ಎಂದು ಕಾರ್ಯದರ್ಶಿಗಳು ಗದ್ದರಿಸಿದರು.

ಆದರೆ ಅನಂತ "ನಮಸ್ತೇ" ಎಂದು ಹೊರಟುನಿಂತ.

ಕಾರ್ಯದರ್ಶಿಗಳಿಗೆ ಹೆಚ್ಚು ಮಾತನಾಡಲು ಅವಕಾಶವಿದ್ದಿಲ್ಲ.

"ನಿಮ್ಮದು ತಪ್ಪು ಹೆಜ್ಜೆಯೆಂದು ನನಗೆ ತೋರುತ್ತಿದೆ. ಆದರೆ ನಿಮ್ಮ ಧೋರಣೆ ಸರಿಯೆಂದು ನೀವು ಪ್ರಾಮಾಣಿಕವಾಗಿ ತಿಳಿದಿರುವಿರಾದರೆ, ನಿಮ್ಮಿಷ್ಟ ಎನ್ನುತ್ತೇನೆ. ನಮಸ್ತೆ."

ಅನಂತನ ಮುಂಬಯಿ ಜೀವನದ ಒಂದು ಅಂಕಕ್ಕೆ ತೆರೆ ಬಿದ್ದಿತ್ತು.

ಅಲ್ಲಿಂದ ಕಾಲೆಳೆದುಕೊಂಡು ಪ್ರಾರ್ಥನಾಸಮಾಜದ ತನಕ ಬರುವುದರೊಳಗೆ ಆತನ ಕಣ್ಣಲ್ಲಿ ಹನಿಗೂಡಿತು. ಸಾವಿರ ನೆನಪುಗಳು ಆತನನ್ನು ಕಾಡುತ್ತಿದ್ದವು. ಎರಡು ಎರಡೂವರೆ ವರ್ಷಗಳಲ್ಲೇ ಅಷ್ಟು ಆತ್ಮೀಯವಾಗಿದ್ದ ಆ ವರ್ತುಲ ವನ್ನು ಬಿಟ್ಟು, ಅದರೊಂದಿಗಿದ್ದ ಎಲ್ಲ ಸಂಬಂಧಗಳನ್ನೂ ಕಡಿದುಹೋಗುವುದು ಎಷ್ಟು ದುಃಖದ ಮಾತು!

ಮುಂಬಯಿಗೆ ಬಂದ ಮೊದಲಿನಲ್ಲಿ ಕಾಂಗ್ರೆಸ್ ಕೆಲಸದಲ್ಲಿ ಇದ್ದ ಆ ಉತ್ಸಾಹ! ಮಹಾ ಮಹಾ ಘಟನೆಗಳ ಆ ಮರೆಯಲಾಗದ ದಿನಗಳು!

೪೫ರ ಆದಿಯಲ್ಲಿ ಬಾಪು ಮುಂಬಯಿಗೆ ಬಂದಾಗ ಅನಂತನ ಆನಂದ ವರ್ಣನಾತೀತವಾಗಿತ್ತು.

ಮೊದಲ ಬಾರಿಗೆ ಮುಖತಃ ಕಂಡ ತೇಜೋಮಯ ಮೂರ್ತಿ!

೪೫ರ ರಾಷ್ಟ್ರೀಯ ಸಪ್ತಾಹಾಚರಣೆ. 'ರಂಗ್ಟಾ' 'ಬಿರ್ಲಾಭವನ್' ಗಳಲ್ಲಿ ಸಂಜೆ ಪ್ರತಿನಿತ್ಯ ನಡೆಯುತ್ತಿದ್ದ ಆ ಪ್ರಾರ್ಥನಾಸಭೆಗಳು.

ವೇದಿಕೆಯ ಮೇಲೆ ಧ್ಯಾನಾಸಕ್ತ ಕರ್ಮಯೋಗಿಯಂತೆ ಕುಳಿತಿರುತ್ತಿದ್ದ ಬಾಪು!

ಆಸ್ಟಿ-ಚಿಮೂರ್ ದಿನಾಚರಣೆಯ ಸಂಬಂಧ ಅವರು ಮಾಡಿದ ಆ ಮರೆಯಲಾಗದ ಭಾಷಣ!

ಅನಂತನ ನೆನಪು ಹಿಂದೋಡುತ್ತಿತ್ತು. ವಿಠಲಭಾಯಿ ಪಟೇಲ್ ರಸ್ತೆ ಯಲ್ಲಿ ಮುಂದುವರಿಯುತ್ತಿದ್ದಂತೆ ನೂರಾರು ನೆನಪುಗಳು ಆತನನ್ನು ಕಾಡು ತ್ತಿದ್ದವು.

೧೯೪೫ ರ ಜೂನ್ ತಿಂಗಳು!

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರನ್ನು ಬಿಡುಗಡೆ ಮಾಡಿ ದಾಗ ಇದ್ದ ಪ್ರಚಂಡ ಉತ್ಸಾಹ. ಪಂಡಿತ ನೆಹರು, ರಾಷ್ಟ್ರಪತಿ ಆಜಾದ್ ಮುಂಬಯಿಗೆ ಬಂದಾಗ ಅವರಿಗೆ ದೊರಕಿದ ಅಭೂತಪೂರ್ವ ಸ್ವಾಗತ.

ಅಮೆರಿಕನ್ ಸೈನಿಕನೊಬ್ಬನ 'ಜೀಪ್'ನಲ್ಲಿ ನಿಂತು ಬೋರಿಬಂದರ್ ದಿಂದ ಕಿಕ್ಕಿರಿದು ತುಂಬಿದ್ದ ಆ ಬೀದಿಗಳಲ್ಲಿ ಲಕ್ಷಗಟ್ಟಲೆ ಜನರ ಜಯಜಯಕಾರ ಗಳನ್ನು ಸ್ವೀಕರಿಸಿ ನಗುತ್ತ ಬಂದಿದ್ದ ಪಂಡಿತ್ ನೆಹರೂ.

ಆ ಮಳೆಯಲ್ಲೂ ನಾಡಿನ ನಾಯಕನಿಗೆ ಉತ್ಸಾಹದ ಸ್ವಾಗತವಿತ್ತ ಜನ ಕೋಟಿ! ಈ ಜನಕೋಟಿಯ ಉತ್ಸಾಹ ಮೇರೆಮೀರಿ ಅನರ್ಥವಾಗದಂತೆ

ಸ್ವಯಂಸೇವಕರು ಪಡಬೇಕಾಗಿದ್ದ ಪಾಡು! ಆ ಕೆಲಸದಲ್ಲಿ ದೊರಕುತ್ತಿದ್ದ ತನ್ಮಯತೆಯಿಂದುಂಟಾಗುತ್ತಿದ್ದ ಅಪೂರ್ವ ಆನಂದ!

ಅನಂತ ಮತ್ತೆ ಮತ್ತೆ ಯೋಚಿಸುತ್ತಿದ್ದ.

೪೫ರ ಸೆಪ್ಟಂಬರ್, ಗೋವಾಲಿಯಾ ಕೆರೆಯ ಮೈದಾನದಲ್ಲಿ ಆ ಇತಿಹಾಸ ಪ್ರಸಿದ್ಧ ಅಖಿಲಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನ. ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯನ್ನೂ ಮರೆತು ಜನತೆ ಕಾಂಗ್ರೆಸ್ಸಿನ ಕುರಿತು ತೋರಿಸಿದ್ದ ಆದರ ಹಾಗೂ ಆಸಕ್ತಿ!

ಇಂದು ಅದೇ ಕಾಂಗ್ರೆಸ್ಸಿನ ಅಂಗೀಕಾರದಂತೆ ಭಾರತವನ್ನು ತುಂಡರಿಸಲಾಗುತ್ತಿದೆಯೆ? ಆಗಸ್ಟ್ ಹದಿನೈದರಂದು ದೊರಕುವ ಸಾಮಂತ ಸ್ವಾತಂತ್ರ್ಯದ ಪ್ರಲೋಭನ, ರಾವೀ ತೀರದ ಪೂರ್ಣಸ್ವರಾಜ್ಯನಿರ್ಣಯದ ಪಾವಿತ್ರ್ಯವನ್ನು ನಾಶಗೊಳಿಸಿದೆಯೆ?

'ಭಾರತವನ್ನು ತುಂಡರಿಸುವ ಮೊದಲು ನನ್ನನ್ನು ತುಂಡರಿಸಿರಿ' ಎಂದು ಗೋವಾಲಿಯಾ ಕೆರೆಯ ಮೈದಾನದಿಂದ ೪೨ರ ಆಗಸ್ಟ್‌ನಲ್ಲಿ ಕಳಕಳಿಯಿಂದ ಕೂಗಿದ ಬಾಪೂ ಇಂದು ವಿಭಜನೆಗೆ ಒಪ್ಪಿದರೆ?

ಪ್ರಾರ್ಥನಾಸಮಾಜ ತಲಪಿದ್ದ ಅನಂತ 'ಟ್ರಾಂ'ನ ದಾರಿ ಕಾಯುತ್ತಿದ್ದಾಗ, ಹೋಗಬೇಕಾಗಿದ್ದ ತಾಣದ ನೆನಪಾಗಿ, ಕರ್ತವ್ಯದ ಪ್ರಜ್ಞೆ ಬಂತು.

ಪ್ರೆಸ್ಸಿನಲ್ಲಿ ಎಲ್ಲ ತನ್ನ ದಾರಿ ಕಾಯುತ್ತಿರಬಹುದು. ಸಂಪಾದಕೀಯ ಇನ್ನೂ ಬರೆದುಕೊಟ್ಟಿಲ್ಲ.

ಟ್ರಾಂ ಬಂದ ಕೂಡಲೆ ಅನಂತ ಹತ್ತಿ ಕುಳಿತ. ಏಳೆಂಟು ವರ್ಷದ ಸಣ್ಣ ಹುಡುಗಿಯೊಬ್ಬಳು ಕುಳಿತಿದ್ದಲ್ಲಿ ಒಂದು ಜಾಗವಿದ್ದುದರಿಂದ ಅನಂತ ಅಲ್ಲಿಯೇ ಕುಳಿತ. ಎರಡು ನಿಮಿಷಗಳಾಗಿರಲಿಕ್ಕಿಲ್ಲ; ಹಿಂದಿನ ಬೆಂಚಿನಿಂದ ಕನ್ನಡದ ದನಿಯೊಂದು ಹೊರಟಿತು, ಈ ಮಗುವನ್ನುದ್ದೇಶಿಸಿ:

"ರಾಧಾ, ಕುತ್ತಿಗೆಯ ಚಿನ್ನ ಜೋಕೆ!"

ಅನಂತನಿಗೆ ಕನ್ನಡ ಮಾತು ಕೇಳಿದಾಗ ಉಂಟಾಗಿದ್ದ ಆನಂದಕ್ಕಿಂತ ಆ ಮಾತಿನ ಹಿಂದಿದ್ದ ಎಚ್ಚರಿಕೆಯಿಂದಾಗಿ ತುಂಬ ವೇದನೆಯಾಯಿತು. ತನಗರಿಯದೇನೇ ಕೈ ಗಡ್ಡದ ಕಡೆ ಹೋಯಿತು. ಅದರ ಬೆಳೆ ಹುಲುಸಾಗಿತ್ತು. ಮನಸ್ಸಿನ ಇದಿರು ಒಂದು ಆಕೃತಿ ಮಿಂಚಿತು.

ಭಾರಿ, ಭಾರತಿ!

ಅನಂತನ ಗಡ್ಡ ಸ್ವಾತಂತ್ರ್ಯದಾಹದ, ಪ್ರತಿಜ್ಞೆಯ, ಬ್ರಹ್ಮಚರ್ಯದ ಗಡ್ಡವಾಗಿರಲಿಲ್ಲ. ಭಾರತಿಯನ್ನು ಮುಂಬಯಿಗೆ ಕರೆಸುವ ತನಕ, ಮುಂಬಯಿಯಲ್ಲಿ ನಿಲ್ಲಲು ಒಂದು ಅನುಕೂಲವಾದ ತಾಣ ದೊರಕುವ ತನಕ 'ಗಡ್ಡ' ಇದ್ದಂತೆಯೇ ಇರಲಿ, ಎಂದು ಒಂದು ಹುಚ್ಚುಗಳಿಗೆಯಲ್ಲಿ ಅನಂತ ನಿರ್ಧರಿಸಿದ್ದ. ಆ ನಿರ್ಧಾರದಿಂದಾಗಿ, ಈಗ ಮುಂಬಯಿಯ ಕಳ್ಳರ ತಂಡದ ಸದಸ್ಯನಾಗಿರಲೂ ಬಹುದು ಎಂಬ ಸಂಶಯವನ್ನು ಬೇರೆಯವರ ಮನಸ್ಸಿನಲ್ಲಿ ಬಿತ್ತಲು ಆತನ ರೂಪ ಸಹಾಯಮಾಡಿತ್ತು.

ಅನಂತನಿಗೆ ನಗು ಬಂತು. ಕನ್ನಡದಲ್ಲಿಯೇ ಒಂದು ಮಾತು ಹೇಳಿ ಆ ಮಗುವಿನ ತಂದೆಯನ್ನು ಆಶ್ಚರ್ಯ ಹೆದರಿಕೆಗಳಿಗೆ ಗುರಿಮಾಡೋಣವೆ ಎಂದು ಕಂಡಿತಾದರೂ, ಅನಂತ ಮಾತನಾಡಲಿಲ್ಲ.

ಠಾಕುರ್‌ದ್ವಾರ್‌ನಲ್ಲಿ 'ಟ್ರಾಂ' ನಿಂತಾಗ ಅನಂತನಿಗೆ ಇನ್ನೊಂದು ಆಶ್ಚರ್ಯ ಕಾದಿತ್ತು.

ಯಾವುದೋ ಆಲೋಚನೆಯಲ್ಲಿ ಮಗ್ನನಾಗಿದ್ದವನನ್ನು ಒಂದು ದನಿ ಎಚ್ಚರಿಸಿತು :

"ನಮಸ್ತೆ, ಅನಂತಬಾಬೂ."

ಅನಂತ ತಿರುಗಿ ನೋಡಿದ.

"ಉಷಾ ಬಹೆನ್ ! ನಮಸ್ತೆ."

"ಎಲ್ಲಿಂದ ಪ್ರಯಾಣ ?"

"ಕಾಂಗ್ರೆಸ್ ಹೌಸ್."

"ಏನಾದರೂ ವಿಶೇಷವಿತ್ತೇ ?" ನಮಗೇಕೆ ತಿಳಿಸಲಿಲ್ಲ ?

"ವಿಶೇಷವೆಲ್ಲ ಇನ್ನು ಮುಂದೆ, ಉಷಾ. ನಾನು ರಾಜೀನಾಮೆ ಕೊಟ್ಟು ಬಂದೆ. ನನಗೂ ಸ್ವಯಂಸೇವಕ ದಳಕ್ಕೂ ಇನ್ನು ಯಾವ ಸಂಬಂಧವೂ ಇಲ್ಲ."

"ಅರೆ ! ಹೀಗೇಕೆ ಮಾಡಿದಿರಿ ?"

"ನನ್ನ ಆದರ್ಶದ ಕಾಂಗ್ರೆಸ್ ನಿನ್ನೆ ರಾತ್ರಿ ಪಂಡಿತ್ ನೆಹರೂ ಮಾತನಾಡಿದಾಗಲೇ ತೀರಿಕೊಂಡಿತು, ಉಷಾ ಬಹೆನ್. ಇನ್ನು ಕಾಂಗ್ರೆಸ್, ನಾಡಿನ ಎಲ್ಲರ ಸಂಸ್ಥೆಯಲ್ಲ, ವಿಭಜನೆಯನ್ನು ಒಪ್ಪಿಕೊಂಡ ಸಂಸ್ಥೆ !"

"ಹಾಗೆ ಮಾಡದೆ ಬೇರೆ ದಾರಿಯಿದ್ದಿತ್ತೇ, ಅನಂತಬಾಬೂ ?"

ಅನಂತ ಆ ಬಿಳೀ ಖಾದೀ ಸೀರೆಯುಟ್ಟು ಹಸುರು ರವಕೆಯನ್ನು

ತೊಟ್ಟು, ಸಾಮಾನ್ಯ ವ್ಯವಹಾರದ ದಿನಗಳಲ್ಲೂ ಸ್ವಯಂಸೇವಿಕೆಯ ಸಮ ವಸ್ತ್ರದಿಂದ ಶೋಭಿಸುತ್ತಿದ್ದ ಉಷಾ ಮೇಥಾಳ ಕಡೆ ನೋಡಿದ.

"ಈಗ ಹಿಡಿದ ದಾರಿಯಿಂದಾಗುವ ಅನರ್ಥಪರಂಪರೆಯ ಯೋಚನೆ ಇದೆಯೆ ನಿಮಗೆ, ಉಷಾ ಬಹೆನ್ ?"

ಆಕೆ ಮಾತನಾಡಲಿಲ್ಲ. ಅಕ್ಕಪಕ್ಕದಲ್ಲಿ ಕುಳಿತಿದ್ದವರೆಲ್ಲ ತಮ್ಮ ಕಡೆ ನೋಡತೊಡಗಿದುದರಿಂದ ಅನಂತನಿಗೂ ಮಾತು ಮುಂದುವರಿಸುವ ಇಚ್ಛೆ ಯಾಗಲಿಲ್ಲ.

"ಈಗೆಲ್ಲಿಗೆ ಹೊರಟಿದ್ದೀರಿ ?—ಮಾತುಂಗಾ ?" ಉಷಾ ವಿಷಯವನ್ನು ಬದಲಿಸಿ ಕೇಳಿದಳು.

"ಮೊದಲು ಬೋರಿಬಂದರ್. ನಮ್ಮದೊಂದು ಪ್ರೆಸ್ಸಿದೆ. ಒಂದು ಪೇಪರ್ ಇದೆ. ಅಲ್ಲಿಯ ಕೆಲಸ ಮುಗಿಸಿ, ಮತ್ತೆ ಮಾತುಂಗಾ."

"ಹಾಗೇನು ?"

ತುಸು ಹೊತ್ತು ಮೌನವಾಗಿದ್ದು, ಇಳಿಯುವ ಠಾಣ ಬಂದಾಗ ಉಷಾ ಎದ್ದು ನಿಂತು ಹೇಳಿದಳು :

"ಇನ್ನು ಯಾವಾಗ ಭೆಟ್ಟಿ ?"

ಹೀಗೆಯೇ. ಯಾವಾಗಾದರೊಮ್ಮೆ."

"ಕಾಂಗ್ರೆಸ್ ಬಿಟ್ಟರೂ 'ಗಿರಿಗಾಂ'ಗೆ ಬರದಿರುವಿರೆ? ನಮ್ಮ ಮನೆ ಗಾದರೂ ಬರುತ್ತಿರಿ. ತಂದೆಯವರು ಆಗಾಗ ನಿಮ್ಮ ನೆನಪು ಮಾಡುತ್ತಾರೆ."

ಅನಂತ ನಗುತ್ತ ಸಂಪ್ರದಾಯದ ಉತ್ತರ ಕೊಟ್ಟ : "ಹೂ."

ಉಷಾ ಕೆಳಗಿಳಿದು ಹೋದೊಡನೆ ಅನಂತನ ಮನಸ್ಸು ಭಾರತಿಯ ಕುರಿತು ಚಿಂತಿಸತೊಡಗಿತು.

ಆಕೆಯನ್ನು ನೋಡಲು ಎದೆಯಲ್ಲಿ ಕಾತರವುಕ್ಕುತ್ತಿದೆ. ಆದರೆ ಮುಂಬಯಿ ಬಿಡಲು ವ್ಯವಧಾನವೂ ಇಲ್ಲ ; ಹೋಗಿ ಕರೆದುಕೊಂಡು ಬರಲು, ವಸತಿಯ ಸೌಕರ್ಯವೂ ಇಲ್ಲ.

ಮನಸ್ಸಿನ ಕಳವಳ ಇನ್ನಷ್ಟು ಹೆಚ್ಚಲು, ಆಕೆಯ ಆರೋಗ್ಯ ಕೆಟ್ಟಿದೆ ಎಂದು ಪತ್ರ ಬೇರೆ.

ಭಾರತಿಯ ಕುರಿತು ಚಿಂತಿಸುತ್ತಲೇ ಅನಂತ ಬೋರಿಬಂದರ್ ತಲಪಿದ.

'ಭಾರತಿ ಬಳಿಯಿದ್ದರೆ ನನಗೆ ನಾಲ್ಕು ಭುಜ ಬಂದಂತಾಗುತ್ತದೆ. ನನ್ನ

ಕರ್ತವ್ಯದ ಹೋರಾಟದಲ್ಲಿ ಎದೆಗುಂದುವ ಪ್ರಶ್ನೆಯುದ್ಭವಿಸುವುದೇ ಇಲ್ಲ. ಪಾಟಿಣ್‌ಕರ್‌ನಂಥ ಪ್ರಭೃತಿಗಳ ನಂಜುಮಾತುಗಳಿಗಾಗಿ ಇಷ್ಟು ನೊಂದು ಕೊಳ್ಳಬೇಕಾದ ಪ್ರಮೇಯ ಬಂದೊದಗುತ್ತಿದ್ದಿಲ್ಲ' ಎಂದು ಭಾರತಿಯ ಕನಸು ಕಾಣುತ್ತಲೇ ಅನಂತ ಫ್ರಿಯರ್ ರೋಡಿನಲ್ಲಿದ್ದ ಪ್ರೆಸ್ಸು ತಲಪಿದಾಗ ಸರೀ ಕತ್ತಲಾಗಿತ್ತು.

ವಿದ್ಯುದ್ದೀಪದ ಬೆಳಕಿನಲ್ಲಿ ಅಲ್ಲಿ ಕೆಲಸ ನಡೆಯುತ್ತಿತ್ತು. ಅದು ಮುದ್ರಣಾಲಯ. ಆ ಮುದ್ರಣಾಲಯದ ವ್ಯವಸ್ಥಾಪಕನ ಕೃಪೆಯಿಂದ ದೊರೆತ ಒಂದು ಮೇಜುಸ್ಥಳವೇ 'ಕಹಳೆ' ಸಾಪ್ತಾಹಿಕದ ಕಾರ್ಯಾಲಯ. ಮಾಸಲು ಗೋಡೆಗಳ ಹಳೆಯ ಕಟ್ಟಡದ ಒಂದು ದೊಡ್ಡ ಕೋಣೆ. ಕೋಣೆಯ ತುಂಬ ಮೊಳೆಗಳ 'ಕೇಸು'ಗಳು. ಮೂಲೆಯಲ್ಲಿ ಮುದ್ರಣಯಂತ್ರ.

ರಾಜೀವ, ಸೋಮಯಾಜಿ. ಶಂಕರಶೆಟ್ಟಿ ಅನಂತನ ದಾರಿ ಕಾಯು ತ್ತಿದ್ದರು. ಆದರೆ ಹರಟೆಹೊಡೆಯುತ್ತಿದ್ದಂತೆಯೇ ತಾವು ವಹಿಸಿಕೊಂಡಿದ್ದ ಕೆಲಸಗಳನ್ನು ಆಸಕ್ತಿಯಿಂದ ಮಾಡುತ್ತಿದ್ದರು. ರಾಜೀವ 'ಗ್ಯಾಲಿ ಪ್ರೂಫ್' ತಿದ್ದುತ್ತಿದ್ದ. ಸೋಮಯಾಜಿ ಏಜಂಟರಿಂದ ಬರಬೇಕಾಗಿದ್ದ ಹಣದ ಲೆಕ್ಕ ತಯಾರಿಸುತ್ತಿದ್ದರು. ಶಂಕರಸೆಟ್ಟಿ, 'ಕಹಳೆ'ಯ ಕುರಿತು ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಬಂದ ಅಭಿಪ್ರಾಯಗಳನ್ನು ಸಂಗ್ರಹಿಸಿ ಕತ್ತರಿಸಿ ಇಡುತ್ತಿದ್ದ.

ಅನಂತ ಬಂದೊಡನೆ ಒಮ್ಮೆಗೆ ಎಲ್ಲರೂ ಅವನ ಮುಖ ನೋಡಿದರು.

"ಬಂತು ಸನ್ಯಾಸಿ" ಎಂದು ರಾಜೀವ ರಾಗ ಎಳೆದ.

ಸೋಮಯಾಜಿ ಮಾತನಾಡಲಿಲ್ಲ. ಶಂಕರಸೆಟ್ಟಿ ಮಾತ್ರ ನಗತೊಡಗಿದ.

ಅನಂತನ ಕೈ ಗಡ್ಡದೆಡೆ ಹೋಯಿತು. ಗಾಡಿಯಲ್ಲಿನ ಪ್ರಸಂಗ ಮತ್ತೆ ನೆನಪಾಗಿ ನಗು ಬಂತು.

"ಈ ರಾಜಕಾರಣಕ್ಕಿಂತ ಸನ್ಯಾಸಿಯಾಗುವುದೇ ವಾಸಿ ನೋಡು, ರಾಜೀವ. ಮಠದಲ್ಲಿ ಎಲ್ಲ ಬಿಟ್ಟು ಸುಖವಾಗಿರಬಹುದು."

"ಅಷ್ಟು ವೈರಾಗ್ಯಕ್ಕೇನಾಯಿತೀಗ ? ಏನು, ಮನೆಯಿಂದ ಕಾಗದ ಬರಲಿಲ್ಲವೆ ?"

ರಾಜೀವನ ಉತ್ತರ ಕೇಳಿ ಅನಂತನಿಗೆ ನಗು ಬಂತು.

"ಭೂಕಂಪವಾದರೂ ನೀನು ನಗುವುದನ್ನು ನಿಲ್ಲಿಸುವುದಿಲ್ಲ, ರಾಜೂ."

"ಈಗ ಭೂಕಂಪವಾಗಿದೆಯೆ ?"

"ಬರೇ ಕಂಪನ ಮಾತ್ರವಲ್ಲ, ಭೂಮಿ ತುಂಡಾಗಿದೆ. ಭಾರತವು ಎರಡಾಗಿದೆ."

ರಾಜೀವ ಅನಂತನ ಕಡೆ ನೋಡುತ್ತಿದ್ದಿಲ್ಲ. ತನ್ನ ತಿದ್ದುವ ಕೆಲಸವನ್ನು ಮುಂದುವರಿಸುತ್ತಿದ್ದಂತೆಯೇ,

"ಇನ್ನು ಭಾಷಣ ಸುರುವಾಗುವುದೇ ? ದಯಮಾಡಿ ಒಂದು ನಿಮಿಷ. ಇದಕ್ಕೇನು ತಲೆಬರಹ ಕೊಡುವುದು ?" ಎಂದ.

ಉತ್ತರ ಕೊಟ್ಟುದು ಸೋಮಯಾಜಿಗಳು :

" 'ಕಾಂಗ್ರೆಸ್ ಸಂಸ್ಥೆಯ ಅವಸಾನ' ಎಂದು ಕೊಡು."

ಸೋಮಯಾಜಿ ಅನಂತನನ್ನೆ ನೋಡುತ್ತಿದ್ದರು. ಅವನ ಹೃದಯದಲ್ಲಿ ಆಗುತ್ತಿದ್ದ ವಿಚಾರವಿಪ್ಲವವನ್ನು ಗಮನಿಸಿಯೇ ಅವರು ನಗುತ್ತ ರಾಜೀವನಿಗೆ ಈ ರೀತಿ ಉತ್ತರ ಕೊಟ್ಟಿದ್ದರು.

ಆದರೆ ರಾಜೀವನ ರಸಿಕತೆ ಇಲ್ಲೂ ಸನ್ನಿವೇಶದ ಗಾಂಭೀರ್ಯವನ್ನು ಕೆಡಸಿತು.

ಅಡ್ಡಿಯಿಲ್ಲ. ೩೬ 'ಪೈಂಟ್'ನಲ್ಲಿ ಹಾಕಲು ಹೇಳುತ್ತೇನೆ. ಆದರೆ ಅದರ ಅಡಿ ಬರುವ ಸುದ್ದಿ 'ಕೂಪರೇಜ್'ನ ಚೆಂಡಾಟದ ವರದಿ."

ಎಲ್ಲರೂ ನಗತೊಡಗಿದಾಗ ಅನಂತನೂ ನಗಲಾರಂಭಿಸಿದ.

ಆಗತಾನೇ ಬಂದ ಇನ್ನೊಂದು 'ಗ್ಯಾಲಿ ಪ್ರೂಫ್' ಕೈಗೆ ತೆಗೆದುಕೊಂಡು ಅನಂತ ತಿದ್ದಲು ಆರಂಭಿಸಿದಾಗ, ರಾಜೀವ ಮಾತನಾಡಿದ :

"ಏ ! ಮಿಸ್ಟರ್. ಮೌಂಟ್‌ಬ್ಯಾಟನ್ ಬಂದು ಮೂರನೆಯ ಪುಟಕ್ಕೆ ಕಲ್ಲುಹಾಕಿದ. ಎಲ್ಲಿದೆ ನಿಮ್ಮ ಲೇಖನ ? ನಾಳೆ ಬೆಳಿಗ್ಗೆಯೊಳಗೆ ಕೊಡದಿದ್ದರೆ ಬೇರೆ ಏನಾದರೂ ತುಂಬಿಸಬೇಕಾಗುತ್ತದೆ. ನೀವು ಕೊಡದಿದ್ದರೆ ನಾನು 'ಕುರಿಗಳನ್ನು ಸಾಕುವುದು ಹೇಗೆ ?' ಎಂದು ಒಂದು ಲೇಖನ ಬರೆದು ಕೊಡುತ್ತೇನೆ. ಇಲ್ಲನಾದರೆ ಆದಿತ್ಯವಾರ 'ಪೇಪರ್' ಬರುವುದಿಲ್ಲ."

" 'ಕುರಿಗಳನ್ನು ಸಾಕುವುದು ಹೇಗೆ ?' ಬಹಳ ಚೆನ್ನಾಗಿದೆ ವಿಷಯ. ಅದರ ಮೇಲೆ ಬರೆದರೂ ವಿಭಜನೆಯ ಮೇಲೆ ಬರೆದಂತೆಯೇ ಆಗಬಹುದು. ನಾಡಿನ ಜನತೆಯನ್ನು ಕುರಿಗಳೆಂದು ತಿಳಿದುದರಿಂದಲ್ಲವೇ ನಾಯಕರು ಈ ರೀತಿಯ ನಿರ್ಧಾರಕ್ಕೆ ಬಂದುದು."

ಅನಂತನ ದನಿಯಲ್ಲಿ ಉದ್ವೇಗವಿತ್ತು. ಆದರೆ ರಾಜೀವ ಇದನ್ನು ಗಮನಿಸಲಿಲ್ಲ.

"ನಾನು ಆ ಕುರಿಗಳ ವಿಚಾರ ಹೇಳಲಿಲ್ಲ. ಈ ಕುರಿಗಳ ವಿಚಾರ —ಮುಂಬಯಿಯ ಒಂದು ಲಕ್ಷ ಕುರಿಗಳ ವಿಚಾರ ಹೇಳಿದ್ದು."

"ಎಂದರೆ?"

"ಎಂದರೆ ಒಂದು ಲಕ್ಷ ಕನ್ನಡಿಗರು! ಸ್ವಾಭಿಮಾನಶೂನ್ಯ ಒಂದು ಲಕ್ಷ ಜನಸಮುದಾಯ ನಾವು ಪತ್ರಿಕೆ ಹೊರಡಿಸಿ ಎರಡೂವರೆ ತಿಂಗಳಾದರೂ ಎರಡೂವರೆ ಸಾವಿರ ಚಂದಾದಾರರನ್ನು ಒದಗಿಸಿಕೊಡದ, ಕನ್ನಡ, ನಾಡ, ನುಡಿಯ, ಗುಡಿಯ ಪ್ರೇಮಿಗಳು!"

ರಾಜೀವನ ದನಿಯಲ್ಲಿ ತಿರಸ್ಕಾರವಿತ್ತು, ಅಣಕವಿತ್ತು, ಜಿಗುಪ್ಸೆಯಿತ್ತು. ಈಗ ಆತನನ್ನು ಸಮಾಧಾನ ಪಡಿಸಿದುದು ಅನಂತ:

"ನಮ್ಮನ್ನು ಪತ್ರಿಕೆ ಹೊರಡಿಸುವಂತೆ ಯಾರು ಕೇಳಿಕೊಂಡಿಲ್ಲ, ರಾಜೂ,"

"ನಾವೂ ಯಾರನ್ನೂ ಚಂದಾದಾರರಾಗುವಂತೆ ಕೇಳಿಕೊಂಡಿಲ್ಲ."

"ಹಾಗಾದರೆ ಈ ನಿಷ್ಠುರದ ಮಾತು ಯಾಕೆ?"

"ಒಂದು ಪತ್ರಿಕೆಯನ್ನು ಎರವಲು ತೆಗೆದುಕೊಂಡು ಹತ್ತು ಜನ ಓದುವ ಚಟ ಅವರಿಗೆ ಯಾಕೆ?"

"ನಿನ್ನೊಡನೆ ತರ್ಕಿಸಿ ಏನು ಪ್ರಯೋಜನ, ರಾಜೂ. ಅಲ್ಲವೇ ಸೋಮಯಾಜಿಗಳೇ?" ಎಂದು ಅನಂತ ಅವರೆಡೆ ನೋಡಿದ.

ಅವರಿಗೆ ಈ ವಿಷಯವನ್ನು ಮುಂದುವರಿಸುವ ಇಚ್ಛೆಯಿರಲಿಲ್ಲ.

"ಅದಿರಲಿ, ಅನಂತ. ಕನ್ನಡ ಪತ್ರಿಕೆಗಳಿಗೆ 'ಬಾಲಗ್ರಹ ಕಟ್ಟಿಟ್ಟದ್ದು' ಎಂದು ಈಗಾಗಲೇ ಬೇಕಾದಷ್ಟು ಮಂದಿ ಟೀಕಿಸಿಯಾಗಿದೆ. ನಾವು ನಮ್ಮ ಆದರ್ಶವೆಂದು ತಿಳಿದುಕೊಂಡು ಹೊಸ ಸಮಾಜ ಸೃಷ್ಟಿಗಾಗಿ ಮಾಡುವ ಪ್ರಯತ್ನವನ್ನು ಮಾಡಲೇಬೇಕು. ಈ ಅತೃಪ್ತಿಯಿರದೆ ಪ್ರಗತಿ ಸಾಧ್ಯವೇ? ಸಂಜೆ ಎಲ್ಲಿಗೆ ಹೋಗಿತ್ತು ಸವಾರಿ?"

"ಕಾಂಗ್ರೆಸ್ ಹೌಸ್."

"ಪಾಟೀಲರ 'ಸ್ಟೇಟ್‌ಮೆಂಟ್' ತೆಗೆದುಕೊಂಡಿರೇನು?" ಹೀಗೆ ಕೇಳಿದುದು ರಾಜೀವ.

"ಸ್ಟೇಟ್‌ಮೆಂಟ್ ತೆಗೆದುಕೊಳ್ಳಲಿಕ್ಕಲ್ಲ; ಕೊಡಲಿಕ್ಕೆ ಹೋಗಿದ್ದೆ—ರಾಜೀನಾಮೆ."

"ಯಾವುದಕ್ಕೆ?"

ನಮ್ಮ ಸ್ವಯಂಸೇವಕ ಪದವಿಗೆ, ಹಾಗೆಯೇ ನಾಲ್ಕಾಣೆ ಸದಸ್ಯತ್ವಕ್ಕೆ."

"ಈಗ ಅಲ್ಲವಾದರೆ ನಾಳೆಯಾದರೂ ಕೊಡಬೇಕಿತ್ತು. ಅದರಲ್ಲಿ ವಿಶೇಷವೇನಿದೆ?"

"ಯಾಕೆ ಹಾಗೆ ಹೇಳಿದಿ?"

"ಅಧಿಕಾರ ಕೈಗೆ ಸಿಗುವುದೆಂದಮೇಲೆ ಕಾಂಗ್ರೆಸ್ಸಿನಲ್ಲಿ ಎಂಥವರು ತುಂಬುತ್ತಾರೆಂದು ನಿಮಗೆ ಹೇಳಿಕೊಡಬೇಕೇನು? ಆಳುವ ವರ್ಗ ಯಾವಾಗಲೂ ಆಳಲಿಚ್ಛಿಸುತ್ತದೆ. ದುಡಿಯುವ ವರ್ಗ ಯಾವಾಗಲೂ ದುಡಿಯುತ್ತಲೇ ಇರುತ್ತದೆ. ದುಡಿಯುವ ವರ್ಗ ಆಳುವ ವರ್ಗವನ್ನು ತುಳಿದೆದ್ದು ನಿಂತಾಗ ಮಾತ್ರ ನಿಮ್ಮ ಹೊಸ ಸಮಾಜ ಸೃಷ್ಟಿ ಸಾಧ್ಯ. ಇನ್ನು ಕಾಂಗ್ರೆಸ್ ಆಳುವ ವರ್ಗ. ಆದರೆ ನೀವು ದುಡಿಯುವ ವರ್ಗಕ್ಕೆ ಸೇರಿದವರು."

ಅನಂತ ಎವೆಯಿಕ್ಕದೆ ರಾಜೀವನನ್ನೇ ನೋಡುತ್ತಿದ್ದ.

ಇಪ್ಪತ್ತೈದು ಸುಗ್ಗಿ ತುಂಬಿರದ ಎಳೆಹರೆಯದ ನಗುಮೊಗ. ಅದರಲ್ಲಿ ಎಪ್ಪತ್ತರ ಅನುಭವ ಹಾಗೂ ಧೃಢತೆ. ರಾಜೀವನೊಡನೆ ಮಾತನಾಡುವುದೆಂದರೆ ಘಂಟೆ ಘಂಟೆಗಳ ಕಾಲಕಳೆದರೂ ಅನಂತನಿಗೆ ಸಂತೋಷವೆ. ಅವನ ನೈಷ್ಠುರ್ಯದ ಗಡಸುತನದಲ್ಲಿ ಆದರ್ಶದ ಕಾವಿತ್ತು; ಕೆಚ್ಚು ಕೂಡಾ ಇತ್ತು. ಅನಂತನ ಹೃದಯದ ಮಾರ್ದವಕ್ಕೆ ಅಲ್ಲಿ ಸ್ಥಾನವಿರಲಿಲ್ಲ.

"ಶಹಭಾಸ್. ಕ್ರಾಂತಿಯ ಮಹಾಪ್ರವಾದಿ!"

"ಕ್ರಾಂತಿಯ ಚೇತನ ಗುರುತಿಸಲು ಯಾವ ಪ್ರವಾದಿಯೂ ಅನಗತ್ಯ. ಈ ಚೇತನವನ್ನು ನಮ್ಮ ನಾಯಕರು ಗುರುತಿಸಿದ್ದಾರೆಂದೇ ಈ ರೀತಿಯ ಅನಾಹುತ ನಡೆದಿದೆ. ನಾವಿಕರ ದಂಗೆಯ ಹಿಂದಿನ ಪ್ರಚೋದಕ ಶಕ್ತಿ; ನಿರಪರಾಧಿ ಜನತೆ ರೊಚ್ಚಿಗೆದ್ದು ನಿಂತಾಗ ಕಂಡ ರುದ್ರತೇಜ....ಇವನ್ನು ನೀವು ಗಮನಿಸಿದ್ದೀರೇನು? ಈ ಶಕ್ತಿಗಳ ಹಿಂದಿರುವ ಕೋಟಿ ಕೋಟಿ ಜನ, ಇದೇ ಶಕ್ತಿಯನ್ನು ಉತ್ತಮ ಬದುಕಾಗಿ, ಉತ್ತಮ ಸಮಾಜಕ್ಕಾಗಿ ಉಪಯೋಗಿಸಿಕೊಳ್ಳಬಹುದು ಎಂದು ತಿಳಿಯಲು ಹಾಲುಹಕ್ಕಿ ಬೇಕೇ? ಆ ಕಾರಣ ಜನತೆಗಿಂತ ಮುಂಚೆ ಜನನಾಯಕರಾಗಿ ಮೆರೆಯಲು ಹವಣಿಸುವ ಶಕ್ತಿಗಳು ತಮ್ಮ

ಸ್ಥಾನವನ್ನು ಭದ್ರವಾಗಿರಿಸಿಕೊಂಡಿದ್ದಾವೆ. ಹೀಗಾಗಿ ಮೌಂಟ್‌ಬ್ಯಾಟನ್. ಕ್ಯೂ.ಇ.ಡಿ.

ಸೋಮಯಾಜಿಗಳನ್ನುಳಿದು ಎಲ್ಲರೂ ನಗತೊಡಗಿದರು.

ರಾತ್ರೆ ಘಂಟೆ ಎಂಟಾಗಿತ್ತು. ಪ್ರೆಸ್ಸಿನ ಕೆಲಸಗಾರರು ಆಗಲೇ ಕೆಲಸ ನಿಲ್ಲಿಸಿಯಾಗಿತ್ತು. ಅನಂತ ಮಾರನೆ ದಿನದ ಕೆಲಸದ ಬಗ್ಗೆ ನಿರ್ದೇಶನ ಕೊಟ್ಟು, ಇನ್ನೇನು ಎಲ್ಲರೂ ಹೊರಡಬೇಕು ಎನ್ನುವಷ್ಟರಲ್ಲಿ ವ್ಯವಸ್ಥಾಪಕರ ಸವಾರಿ ಬಂತು.

"ಎಲ್ಲ ಹೊರಟಾಯಿತೇನು? ಸೋಮಯಾಜಿಗಳೇ, ದುಡ್ಡಿಗೇನು ಮಾಡಿದ್ದೀರಿ? ತಂದಿದ್ದೀರೇನು?"

ನಾಳೆ ನೋಡುತ್ತೇವಪ್ಪ. ಇವೊತ್ತು ಯಾವ ಮನಿಯಾರ್ಡರ್ ಹಣವೂ ಬರಲಿಲ್ಲ. ನಾಳೆ, ತಪ್ಪಿದರೆ ನಾಡಿದ್ದು ಖಂಡಿತ ಸ್ವಲ್ಪ ಹಣ ಕೊಡುತ್ತೇವೆ."

"ಸ್ವಲ್ಪ? ಕಳೆದ ತಿಂಗಳ ಹಣದಲ್ಲಿ ಮುಕ್ಕಾಲು ಪಾಲು ಬಾಕಿ. ಈ ತಿಂಗಳಂತೂ ಇಲ್ಲ. ಮುಂದಿನ ತಿಂಗಳ 'ಎಡ್ವಾನ್ಸಿ'ಗೆ ದೇವರೇ ಗತಿ. ಸ್ವಲ್ಪ? ನನಗೆ ನಾಳೆ ಸಂಜೆಯೊಳಗೆ ೫೦೦ ರೂಪಾಯಿ ಬೇಕೆ ಬೇಕು, ಇಲ್ಲವಾದರೆ ಈ ಸಲ 'ಪೇಪರ್' ಕೊಡುವುದಿಲ್ಲ. ಹೇಳಲಿಕ್ಕೆ ಕಷ್ಟವಾಗುತ್ತದೆ. ಆದರೆ ವ್ಯವಹಾರ ವ್ಯವಹಾರವೇ."

ಸೋಮಯಾಜಿಗಳು ತುಸು ಹೊತ್ತು ಮೌನ. ಉಳಿದವರೆಲ್ಲ ಮಿಕಿ ಮಿಕಿ ನೋಡಲಾರಂಭಿಸಿದರು.

ಸರಿ. ನಾಳೆಯ ಸಂಜೆಯ ವರೆಗಾದರೂ ಅವಕಾಶವಿದೆಯಲ್ಲ. ಹೋಗೋಣ." ಎಂದು ಸೋಮಯಾಜಿ ಅನಂತನ ಕೈ ಹಿಡಿದೆಳೆದು ಹೊರಗೆ ಬಂದರು ದಾರಿಯಲ್ಲಿ ಶಂಕರಸೆಟ್ಟಿ ಮಾತನಾಡಿದ :

"ಮುಂದೇನು ಗತಿ?"

"ಯಾರಿಗೆಲ್ಲ ಸಂಬಳವಾಗಿದೆ?" ರಾಜೀವ ಕೇಳಿದ.

ಅನಂತ ತನ್ನ ಕಿಸೆ ಮುಟ್ಟಿಕೊಂಡ. ಅಂದು ಪಗಾರ ದೊರಕಿತ್ತು. ಮಾರನೆಯ ದಿನ ಮನೆಗೆ ಎಪ್ಪತ್ತು ರೂಪಾಯಿ ಕಳುಹಿಸಬೇಕಿತ್ತು. ಭಾರತಿಯ ಆರೋಗ್ಯ ಚೆನ್ನಾಗಿಲ್ಲ; ಆಕೆಯ ಸಮಾಧಾನಕ್ಕೆಂದಲ್ಲವಾದರೂ ತನ್ನ ಮನಃಸಂತೋಷಕ್ಕೆ ಒಂದಿಪ್ಪತ್ತು ರೂಪಾಯಿಗಳನ್ನಾದರೂ ಆಕೆಗೆ ಕಳುಹಿಸಬೇಕೆಂದು ತೀರ್ಮಾನಿಸಿದ್ದ. ಮನೆ ದೊರಕಿಸಿಕೊಳ್ಳಲು ಇಡುಗಂಟು ಕೊಡಲು ತಿಂಗಳು ತಿಂಗಳು ಐವತ್ತು ರೂಪಾಯಿಗಳನ್ನಾದರೂ ಕೂಡಿಡಬೇಕೆಂಬ ಆಲೋಚನೆ,

ಪದ್ಮನಾಭ, ಪಾರ್ವತಿಯರಿಂದಾಗಿ ಕರಗಿತ್ತು. ತನ್ನ ವಸತಿಗೃಹದ ತಿಂಗಳ ಹಣ, ಮಾಡಿದ್ದ ಸಾಲದ ಕಂತು........ಮತ್ತೆಲ್ಲಿದೆ ಹಣ !

ರಾಜೀವ ಆಗಲೇ ಐವತ್ತು ರೂಪಾಯಿ ತೆಗೆದಿದ್ದ, ಸೋಮಯಾಜಿ ಇನ್ನೊಂದೈವತ್ತು ತೆಗೆದಿದ್ದರು. ಶಂಕರಸೆಟ್ಟಿ ತಾನೂ ಇಪ್ಪತ್ತು ರೂಪಾಯಿ ತೆಗೆದ. ಅನಂತ ಅದಕ್ಕೆ ಮೂವತ್ತು ಕೂಡಿಸಿದ.

"ನೂರೈವತ್ತು ರೂಪಾಯಿ ! ಇನ್ನುಳಿದ ಹಣ ?"

"ಏನಾದರೂ ಮಾಡುತ್ತೇನೆ. ಇಷ್ಟಾದರೂ ದೊರಕಿತಲ್ಲ" ಎಂದು ಸೋಮಯಾಜಿ ಹೇಳಿದರು.

ಗೆಳೆಯರು ಮೌನವಾಗಿ ಮುಂದೆ ಸಾಗಿದರು. ಮಾತನಾಡುವ ಹುಮ್ಮಸ್ಸು ಯಾರಲ್ಲೂ ಉಳಿದಿರಲಿಲ್ಲ. ಹಣ ಕೈಬಿಟ್ಟಮೇಲೆ ಅನಂತ ಆ ಕುರಿತು ಚಿಂತಿಸಲಿಲ್ಲ. ಪುನಃ ಮೌಂಟ್‌ಬಾಟನ್ ಯೋಜನೆಯ ಕುರಿತು ಚಿಂತಿಸತೊಡಗಿದ. ಸೋಮಯಾಜಿ ಅವನನ್ನು ಎಚ್ಚರಿಸಿದರು :

"ನಿನಗೊಂದು ಟೆಲಿಫೋನ್ ಕರೆ ಬಂದಿತ್ತು, ಅನಂತ—ಶಾರದಾ ಭವನದಿಂದ."

"ಹಾಗೇನು ? ಏನಂತೆ ವಿಶೇಷ ?"

"ಯಾರೋ ಬಂದಿದ್ದರಂತೆ, ಊರಿನವರು ನಿನ್ನನ್ನು ಕೇಳಿಕೊಂಡು"

"ಊರಿನವರು ?"

"ಹೌದು."

ಅವನ ಕುತೂಹಲ ಚಿಗುರಿತು. ಆದರೆ ಯಾರೋ ಪರಿಚಯದವರಿರ ಬಹುದು ಎಂದು ಸುಮ್ಮನಾದ.

ವಿ.ಟಿ. ನಿಲ್ದಾಣೆಯಲ್ಲಿ ಗೆಳೆಯರೆಲ್ಲ ಬೀಳ್ಕೊಟ್ಟರು. ಮರುದಿನ ಬೆಳಗ್ಗೆ 'ಮ್ಯಾಟರ್' ಒಪ್ಪಿಸುವುದಾಗಿ ಆಶ್ವಾಸನೆ ಕೊಟ್ಟು, ಅನಂತ ಮಾತುಂಗದ ಗಾಡಿ ಹಿಡಿದ.

'ಶಾರದಾ ಭವನ' ತಲಪಿದ ಮೇಲೂ ಅನಂತನಿಗೆ ಬಂದುದು ಯಾರೆಂದು ತಿಳಿಯಲಿಲ್ಲ. ವಿಚಾರಿಸಿದಾಗ, ಯಾರೋ ಕೇಳಿಕೊಂಡು ಬಂದಿದ್ದರೆಂದೂ ರಾತ್ರೆ ಮತ್ತೆ ಬರುವುದಾಗಿ ಹೇಳಿ ಹೋಗಿರುವರಾಗಿಯೂ ತಿಳಿದುಬಂತು. ಯಾರೋ, ಏನೋ ಎಂದು ಊಟ ತೀರಿಸಿ ಬಂದು ಅನಂತ ಮೇಜಿನ ಬಳಿ ಕುಳಿತು ಮಾರನೆಯ ದಿನ ಕೊಡಬೇಕಾಗಿದ್ದ ಲೇಖನವನ್ನು ಸಿದ್ಧಪಡಿಸಲು ತೊಡಗಿದ.

ವಿಭಜಿತ ಭಾರತದ ದುರಂತ ಪ್ರತಿಕ್ರಿಯೆಗಳ ಚಿತ್ರ ಕಣ್ಣಮುಂದಿತ್ತು. ರಾಜೀವನಂತ ಉಗ್ರಗಾಮಿ ಆದರ್ಶವಾದಿ ಯುವಕರ ನಿರಾಶೆಯು ಕಳಕಳಿ ಮನಸ್ಸಿನಲ್ಲಿ ಬಿಂಬಿತವಾಗಿತ್ತು. ಪಾಟಣ್‌ಕರ್‌ನ ಅಣಕದ ನೋವು ಮನಸ್ಸನ್ನು ಗಲಿಬಿಲಿಗೊಳಿಸಿತ್ತು. ಭಾಪುವಿನ ಆದರ್ಶ ಬಾರತದ ಕನಸು ಕಣ್ಣಮುಂದಿತ್ತು.

ಅನಂತ ಮನೆ, ಮಠ, ಬಂಧು, ಬಳಗ ಎಲ್ಲರನ್ನೂ ಮರೆತು ಬರೆಯಲಾರಂಭಿಸಿದ.

'ಮೇಲೆ ಆಗಸದಲ್ಲಿ ಚಂದ್ರಗ್ರಹಣ. ಕೆಳಗೆ ಭಾರತದಲ್ಲಿ ರಾಜಕೀಯ ಮುಂದಾಳುಗಳ ಬುದ್ಧಿಗೆ ಅಕಾಲಗ್ರಹಣ.

'ರಾವಿಯ ತೀರದಲ್ಲಿ ಪೂರ್ಣಸ್ವಾತಂತ್ರ್ಯವನ್ನು ದೊರಕಿಸಿಕೊಳ್ಳಲೆಂದು ಮಾಡಿದ ಪ್ರತಿಜ್ಞೆಯ ಪಾವಿತ್ರ್ಯ, ೩ ಜೂನ್ ೧೯೪೭ರಂದು ನಾಶವಾಯಿತೆ?

'ಸಂಪೂರ್ಣ, ಸಾರ್ವಭೌಮ, ಪ್ರಜಾಸತ್ತಾತ್ಮಕ ಭಾರತದ ಘಟನೆಯನ್ನು ರಚಿಸುವುದು ನಮ್ಮ ಗುರಿಯೆಂದು, ಗೊತ್ತುಗುರಿಗಳ ಕುರಿತು ಭಾರತದ ಸಾರ್ವಭೌಮ ಘಟನಾಸಮಿತಿ ಅಂಗೀಕರಿಸಿದ ನಿರ್ಣಯ, ಮೌಂಟ್‌ಬ್ಯಾಟನ್ ಯೋಜನೆಯಿಂದಾಗಿ ಬದಲಾಯಿತೆ?

....................'

ಅನಂತನ ಲೆಕ್ಕಣಿಕೆ ಮುಂದುವರಿಯುತ್ತಿತ್ತು. ಆಗ ಬಾಗಿಲ ಸದ್ದಾಯಿತು. ಅನಂತನಿಗೆ ಅದರ ಕಡೆ ಗಮನವಿದ್ದಿಲ್ಲ.

ಗೆಳೆಯರೊಬ್ಬರು ಹೋಗಿ ಬಾಗಿಲು ತೆಗೆದರು.

"ಅನಂತ ಇಲ್ಲಿ ಇದ್ದಾನೆಯೆ ?"

ದನಿ ಕೇಳಿಯೇ ಬೆಚ್ಚಿಬಿದ್ದು ಅನಂತ ತಿರುಗಿ ನೋಡಿದ. "ಮಾವಯ್ಯ" ಎಂದು ಸಂತೋಷದಿಂದ ಕೂಗಿಕೊಂಡ.

ಅವರ ಹಿಂದೆ ಸಂತೋಷದ ಸಾಮ್ರಾಜ್ಯವೇ ಅಡಗಿತ್ತು.

ತಂದೆಯನ್ನನುಸರಿಸಿ ಕೋಣೆಯೊಳಗೆ ಬಂದ ಭಾರತಿಯನ್ನು ನೋಡಿದಾಗ ಅನಂತನಿಗೆ ಇದೇನು ಸ್ವಪ್ನವೇ ಎಂದು ಭಾಸವಾಯಿತು. ಕ್ಷಣಕಾಲ ತನ್ನ ಕಣ್ಣುಗಳನ್ನೇ ನಂಬುವುದು ಸಾಧ್ಯವಾಗಲಿಲ್ಲ. ಮೇರೆಮೀರಿದ ಆನಂದವನ್ನು ತಡೆದುಕೊಳ್ಳುವುದು ಅಸಾಧ್ಯವಾಯಿತು.

"ಭಾರೀ" ಎಂದು ಎಲ್ಲರ ಇರವನ್ನೂ ಮರೆತು, ಮುಂದೆ ಹೋಗಿ ಭಾರತಿಯನ್ನು ಬಿಗಿದಪ್ಪಿದ.

ಈ ರೀತಿಯ ಸ್ವಾಗತದಿಂದ ಸಂತೋಷವಾದರೂ ಅಪರಿಚಿತರ ನಡುವೆ ಭಾರತಿಯ ಮುಖ ಲಜ್ಜೆಯಿಂದ ಕೆಂಪೇರಿತು. ಆಕೆಯ ಕಣ್ಣು ತುಂಬಿ ಕೊಳ್ಳುತ್ತಿತ್ತು.

ಅನಂತ ಇದಾವುದರ ಗಮನವೂ ಇರದೆ, "ಭಾರೀ........" ಎಂದು ಆಕೆಯ ತಲೆಯನ್ನು ನೇವರಿಸುತ್ತ, "ಇದೇನು ಮಾವಯ್ಯ, ಇದು ಕನಸೇ, ಅಥವಾ ನಿಜವೇ" ಎಂದು ಕೇಳಿದ.

ಭಾರತಿ ಗಂಡನ ಬಾಹುಬಂಧನದಿಂದ ಬಿಡಿಸಿಕೊಂಡು ಬಳಿಯಿದ್ದ ಅವನ ಮಂಚದ ಮೇಲೆ ಕುಳಿತಳು.

ಶ್ರೀಪತಿರಾಯರು ಉಸಿರು ಬಿಟ್ಟು ಅನಂತನ ಕಡೆ ನೋಡಿ, "ಮದುವೆ ಯಾದ ಭೂಪತಿ ಮರತೇಬಿಟ್ಟೆಯೇನು ?" ಎಂದು ನಗುತ್ತಲೇ ಕೇಳಿದರು.

ಅನಂತನಿಗೆ ಭಾರತಿಯ ಮುಖವೇ ಸ್ವರ್ಗವಾಗಿತ್ತು. ಉತ್ತರ ಕೊಡುವ ಯೋಚನೆ ಅವನಿಗಿದ್ದಂತೆ ತೋರಲಿಲ್ಲವಾದ ಕಾರಣ ಸ್ವಲ್ಪ ಸಮಯ ಶ್ರೀಪತಿ ರಾಯರೂ ಮೌನವನ್ನವಲಂಬಿಸಿದರು.

೧೧

ಆರಂಭದ ಉದ್ವೇಗ ಕಡಿಮೆಯಾದ ಮೇಲೆ ಭಾರತಿ ಗಂಡನನ್ನು ಚೆನ್ನಾಗಿ ದಿಟ್ಟಿಸಿ ನೋಡಿದಳು. ಅನಂತ ತುಂಬ ಕೃಶನಾಗಿದ್ದ. ಎದ್ದು ಕಾಣುತ್ತಿದ್ದ ಗಡ್ಡ ಮುಖಕ್ಕೆ ಅನಪೇಕ್ಷಿತ ಕಾಠಿಣ್ಯವನ್ನು ಕೊಟ್ಟಿತ್ತು. ಬಾಚಿಕೊಳ್ಳಲು ವ್ಯವಧಾನವಿರದೆ, ತಲೆ ತುಂಬಿದಾಗ ಕತ್ತರಿಸಿಕೊಳ್ಳಲು ಸಮಯವೇ ಸಿಗದೆ, ಅದು ಬ್ರಹ್ಮಾಂಡವಾಗಿತ್ತು. ಆಯಾಸದಿಂದ ನೆರಿ ಬಿದ್ದ ಚರ್ಮ, ಅನಿಯಮಿತ ಅನ್ನಪಾನಾದಿಗಳಿಂದಾಗಿ ಎದ್ದುಕಾಣುತ್ತಿದ್ದ ಎಲಬು ಗಳಿಂದಾಗಿ ಅನಂತನ ಸೌಂದರ್ಯದಲ್ಲಿ ಮಾದಕತೆಯೇನೂ ಇರಲಿಲ್ಲ. ನಗು ತಿದ್ದುದು ಆತನ ಕಣ್ಣುಗಳು ಮಾತ್ರ.

ಎರಡು ವರ್ಷಗಳಲ್ಲಿ ಎಂಥ ಬದಲಾವಣೆ ? ಎಂದು ಭಾರತಿ ಮನಸ್ಸಿನಲ್ಲೆ ಯೋಚಿಸಿದಳು. ವೆಲ್ಲೋರಿನಿಂದ ಬಿಡುಗಡೆಯಾಗಿ ಬಂದಾಗಲೂ ಅನಂತ ಈ ರೀತಿ ಇದ್ದಿರಲಿಲ್ಲ.

ಶ್ರೀಪತಿರಾಯರೂ ಮೌನವಾಗಿ ಅಳಿಯನನ್ನೇ ನಿರೀಕ್ಷಿಸುತ್ತಿದ್ದರು. ಭಾರತಿಯ ಮನಸ್ಸಿನಲ್ಲಿ ಹೊಳೆದ ಭಾವಗಳನ್ನೇ ಅವರು ಕೂಡ ಆಶ್ರಯಿ

ಸಿದ್ದರು. ಆದರೆ ಈ ಕಳವಳ ಮಾತಿನಲ್ಲಿ ಪ್ರಕಟವಾಯಿತು :

"ಹೋಟಲು ಊಟ ಹಿಡಿಯುವಂತೆ ಕಾಣುವುದಿಲ್ಲ, ಅನಂತಾ."

ಅನಂತ ಕನಸಿನ ಸಾಮ್ರಾಜ್ಯದಿಂದ ಭೂಮಿಗಿಳಿದು ಬಂದ. ಭಾರತಿಯನ್ನು ನೋಡಿದ ಗಳಿಗೆಯಿಂದ 'ಮೌಂಟ್‌ಬ್ಯಾಟನ್ ಯೋಜನೆ' ಮರೆತು ಹೋಗಿತ್ತು. ಆತನ ವಿಚಾರಗತಿ ಈಗ ತನ್ನ ಭವಿಷ್ಯದ ಕುರಿತು ಚಿಂತನೆಗೆ ಮೀಸಲು. ಮಾವ ಮತ್ತು ಭಾರತಿ ಹೀಗೆ ಅನೀರಿಕ್ಷಿತವಾಗಿ ಒಂದು ರಾತ್ರೆ ಯಾಕೆ ಆಗಮಿಸಿದ್ದಾರೆಂಬುದು ಸಮಸ್ಯೆಯಾಗಿತ್ತು. ತನಗೆ ಇರಲು ಜಾಗವಿಲ್ಲ. ಮಾವ ಭಾರತಿಯನ್ನು ಕರೆದುಕೊಂಡು ಒಮ್ಮಿಂದೊಮ್ಮೆಗೆ ಮುಂಬಯಿಗೆ ಬಂದಿದ್ದಾರೆ. ಅವರಿಗೆ ನಾಲ್ಕು ದಿನಗಳ ಮಟ್ಟಿಗೆ ನಿಲ್ಲಲು ಕೂಡ ಎಲ್ಲಿ ಅನುಕೂಲ ತಾಣವಿದೆಯೆಂದು ಅನಂತ ಚಿಂತಿಸುತ್ತಿದ್ದ. ತುಂಬಿಹೋಗಿದ್ದ 'ಶಾರದಾ ಭವನ'ದಲ್ಲಿ ಒಂದು ರಾತ್ರೆ ಕೂಡ ನಿಲ್ಲಲು ಅನುಕೂಲವಿದ್ದಿಲ್ಲ.

ಆಗ ಬಂತು ಮಾವನ ಮಾತು : ಹೋಟೆಲು ಊಟ ಹಿಡಿಯುವಂತೆ ಕಾಣುವುದಿಲ್ಲ, ಅನಂತಾ.'

"ಖಾನಾವಳಿ ಏನೆಂದರೂ ಖಾನಾವಳಿಯೆ. ಭಾರತಿಯ ಅಡುಗೆಯ ರುಚಿ ದೊರಕೀತೇ ? "

ಸೋತುಹೋದಂತೆ ಕಾಣುತ್ತಿದ್ದ ಗಂಡನನ್ನು ನೋಡಿದಾಗ ಉಂಟಾಗಿದ್ದ ನೋವಿನಿಂದ ಭಾರತಿ ಬಿಡುಗಡೆ ಹೊಂದಿದುದು ಆತನ ಹಾಸ್ಯದ ಮಾತನ್ನು ಕೇಳಿದಾಗಲೆ. ಮುಖತುಂಬ ನಗು ಹರಡಿತು.

"ತುಂಬ ಕೆಲಸವಿದೆಯೇ? ನಾಳೆ ಮಾಡಬಾರದೆ ? ಈಗ ಸ್ವಲ್ಪ ಹೊರಗೆ ಹೋಗೋಣವೆ ? ಕಾರು ಕಾಯುತ್ತಿರಬಹುದು" ಎಂದು ಶ್ರೀಪತಿರಾಯರು ಹೀಗೆ ಮಾತನಾಡಿದಾಗ ಅನಂತನಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ.

"ಎಂದರೆ ? ನೀವು ಬಂದದ್ದು ಯಾವಾಗ? ಎಲ್ಲಿ ಉಳಿದುಕೊಂಡಿದ್ದೀರಿ ?"

"ಈಗಲೇ ಹೇಳಬೇಕೆ ? ದಾರಿಯಲ್ಲಿ ಬೇಕಾದಷ್ಟು ಮಾತನಾಡಲು ಅವಕಾಶವಿದೆ. ಹೊರಡು." ಎಂದು ತುಸು ಅಧಿಕಾರವಾಣಿಯಿಂದಲೇ ಶ್ರೀಪತಿರಾಯರು ಹೇಳಿದರು.

ಅನಂತ ಶರಟು ಸಿಕ್ಕಿಸಿಕೊಂಡು ಮಾವನ ಜೊತೆಗೆ ಹೊರಟ.

ಕೆಳಗೆ ಕಾರು ಕಾಯುತ್ತಿತ್ತು. ಬಾಡಿಗೆಯ ಟ್ಯಾಕ್ಸಿ ಇರಬಹುದೆಂದು

ತಿಳಿದಿದ್ದ ಅನಂತನಿಗೆ ಈ ಹೊಸ ಕಾರನ್ನು ಕಂಡಾಗ ಆದ ಆಶ್ಚರ್ಯ ಅಷ್ಟಿಷ್ಟಲ್ಲ. ಒಂದರ ಹಿಂದೊಂದು ಬರುತ್ತಿದ್ದ ಆಶ್ಚರ್ಯಗಳಿಂದಾಗಿ ಆತನ ಮಾತಿನ ಶಕ್ತಿ ಉಡುಗಿಹೋಗಿತ್ತು.

ಮೂವರೂ ಹಿಂದಿನ ಸೀಟಿನಲ್ಲಿ ಕುಳಿತ ಮೇಲೆ ರಾಯರೇ ಮೊದಲು ಮಾತನಾಡಿದರು :

"ಭಾರತಿಯ ಕೈಹಿಡಿದಿ, ಅನಂತಾ. ಆದರೆ ಮುಂಬಯಿಯಲ್ಲಿ ಮನೆ ಮಾಡಿ ಒಂದು ಸಂಸಾರ ನಡೆಸುವ ಯೋಚನೆಯೇ ನಿನಗಿಲ್ಲವೇ ?"

ನಾನು "ಬರೆದಿದ್ದೆನಲ್ಲ, ಮಾವಯ್ಯ. ಇಲ್ಲಿ ಮನೆ ಸಿಗಬೇಕಾದರೆ ಪಡಬೇಕಾದ ಅವಸ್ಥೆ ಇಷ್ಟೇ ಎಂದು ಹೇಳುವಂತಿಲ್ಲ. ನೀವು ಅನಿರೀಕ್ಷಿತ ವಾಗಿ ಬಂದು ಯಾರೋ ಪರಿಚಯದವರ ಮನೆಯಲ್ಲಿ ಉಳಿದುಕೊಂಡಿರುವಿ ರೆಂದು ಕಾಣುತ್ತದೆ. ಹಾಗಲ್ಲದೆ ಬಂದಿದ್ದರೆ, ಎಲ್ಲಿಯಾದರೂ ನಿಲ್ಲುವುದು ಸಾಧ್ಯವೆ ? ಹೋಟೆಲುಗಳಲ್ಲಿಯೇ ಸ್ಥಳ ಸಿಕ್ಕುವುದಿಲ್ಲ. ಹಾಗೆಂದಮೇಲೆ 'ಮನೆ'ಯೆಂದರೆ ಏನೆಂದು ನೀವೇ ಯೋಚಿಸಿ."

"ಅದು ಸರಿ. ನಾನು ಇಲ್ಲವೆಂದು ಹೇಳುವುದಿಲ್ಲ, ಆದರೆ ಇದಕ್ಕೆ ಏನಾದರೊಂದು ದಾರಿಯಿರಲೇ ಬೇಕಲ್ಲ. ಮದುವೆಯಾದವರೆಲ್ಲ ಇದೇ ರೀತಿ ಉದಾಸೀನರಾದರೆ ಆ ಹೆಣ್ಣುಮಕ್ಕಳ ಗತಿಯೇನು ?"

ಅನಂತ ಬಳಿಯಲ್ಲೆ ಕುಳಿತಿದ್ದ ಭಾರತಿಯ ಬೆರಳುಗಳೊಡನೆ ಆಡುತ್ತಿದ್ದ. ಕತ್ತಲಲ್ಲಿ ಬೇರೆ ಯಾರಿಗೂ ಕಾಣುತ್ತಿರಲಿಲ್ಲ. ಭಾರತಿಗೆ ಈ ಆಟ ಸುಖದ ಸ್ವರ್ಗವಾಗಿತ್ತು. ಗಂಡ ತನ್ನೆಡೆ ನೋಡಿದಾಗ ಆಕೆ ತಲೆ ತಿರುಗಿಸಿ ಹೊರಗಡೆ ನೋಡಿದಳು—ಮುಂಬಯಿಯ ವೈಭವದತ್ತ.

"ದಾರಿಯಿದೆ ಮಾವಯ್ಯ. ಸಾವಿರ ಎರಡು ಸಾವಿರ ರೂಪಾಯಿ 'ದಂಡ' ತೆತ್ತು ಮನೆ ಬಾಡಿಗೆಗೆ ಪಡೆಯಲು ಚೈತನ್ಯವಿದೆಯಾದರೆ ಮನೆ ದೊರಕಿಸಿ ಕೊಳ್ಳುವುದು ಸಾಧ್ಯ. ಆದರೆ ನನ್ನಂಥ ಬಡಪಾಯಿಗಳಿಗೆ ಅದು ಸಾಧ್ಯವೆ ? ಮನೆಗೆಂದು ಕೂಡಿಸಿಟ್ಟಿದ್ದ ಒಂದು ಮೂನ್ನೂರು ರೂಪಾಯಿ ಕೂಡ ಪದ್ಮನಾಭ ನಿಗೆಂದು, ಪಾರ್ವತಿಗೆಂದು ಮಾಯವಾಯಿತು."

"ಹಾಗೆಯೇ ವಿವರವಾಗಿ ಕಾಗದ ಬರೆಯಬಾರದಾಗಿತ್ತೆ ? ನೀನು ಇಂಥದೇ ತೊಂದರೆಯಿದೆಯೆಂದು ಬರೆದಿದ್ದರೆ ನಾನಾದರೂ ಸಹಾಯ ಮಾಡದೆ ಇರುತ್ತಿದ್ದೇನೇ ?"

ಮಾವ ಕೇಳಿದಾಗ, ಇಷ್ಟರ ತನಕ ಅವರಿಂದ ಮರೆಮಾಚಿದ್ದ ಸತ್ಯವನ್ನು ಯಾವ ಸಂಕೋಚವೂ ಇಲ್ಲದೆ ತಿಳಿಸಿಬಿಟ್ಟಿದ್ದ. ಆದರೆ ಅವರು ಸಹಾಯದ ಮಾತೆತ್ತಿದೊಡನೆ, ತಾನು ನಿಜಸ್ಥಿತಿಯನ್ನು ತಿಳಿಸಬಾರದಿತ್ತು ಎಂದು ಅನಂತನಿಗೆ ತೋರಿತು.

"ಮಾವಯ್ಯ."

"ಏನೋ."

"ನಿಮ್ಮಿಂದ ನಾನು ಪಡೆದಿರುವ ಸಹಾಯ ಇಷ್ಟೇ ಎಂದು ಹೇಳಲಾರೆ." ಹಾಗೆಯೇ ಎಡತೋಳನ್ನು ಭಾರತಿಯ ಭುಜದ ಮೇಲೆ ಹಾಕಿ, "ಇದಕ್ಕಿಂತ ಹೆಚ್ಚಿನ ಸಹಾಯ ಇನ್ನೇನು ಬೇಕಿತ್ತು, ಮಾವಯ್ಯ. ಆದರೆ ಮದುವೆ ಮಾಡಿಕೊಂಡ ಮೇಲೆ ಮನೆಯನ್ನು ನಿರ್ವಹಿಸಲು ಕೂಡ ನಿಮ್ಮನ್ನು ಕಾಡಲು ಮನಸ್ಸೊಪ್ಪಲಿಲ್ಲ. ಆ ಕಾರಣ ದಿನ ಮುಂದೆ ದೂಡುತ್ತಲೇ ಬಂದೆ. ಹೇಗಿದ್ದರೂ ಇನ್ನೊಂದು ನಾಲ್ಕು ತಿಂಗಳಲ್ಲಿ ಈ 'ಪ್ರಸಾದ' ಹಣ ದೊರಕಿಸಿಕೊಂಡು, ಮನೆ ಮಾಡದೆ ಇರುವುದಿಲ್ಲ."

"ನೀನು ಕಾಡಿದ್ದರಾದರೂ ನನಗೆ ಇಷ್ಟು ನೋವಾಗುತ್ತಿರಲಿಲ್ಲ, ಅನಂತ. ನೀನು ಭಾರತಿಯ ಪಾಡಿನ ಕುರಿತು ಒಂದು ನಿಮಿಷವಾದರೂ ಯೋಚಿಸಿದ್ದರೆ ನನಗೆ ಇಷ್ಟು ಬೇಸರವಾಗುತ್ತರಲಿಲ್ಲ."

"ಯೋಚಿಸಿದ್ದೇನೆ, ಮಾವಯ್ಯ ದಮ್ಮಯ್ಯ ಅಂಥ ಮಾತು ಹೇಳಬೇಡಿ. ಭಾರತಿ ನನ್ನ ಬಳಿಯಿದ್ದರೆ, ಸತ್ತು ಕೈಗಳಲ್ಲಿ ಕೆಲಸ ನಿರ್ವಹಿಸುವುದು ಸಾಧ್ಯ. ನಾಲ್ಕು ಕಣ್ಣುಗಳಿಂದ ಭವಿಷ್ಯವನ್ನು ನೋಡುವುದು ಸಾಧ್ಯ ಎಂದು ನನಗೆ ತಿಳಿದಿದೆ. ಆದರೆ ಇಲ್ಲಿಯ ವಸತಿಯ ಸಮಸ್ಯೆಯ ಜ್ಞಾನವಿರದ ನಿಮಗೆ ಹಣ ಕಳುಹಿಸಿಕೊಡಿ ಮನೆ ಮಾಡುತ್ತೇನೆ ಎಂದು ಬರೆಯಲು ಮನಸ್ಸು ಒಪ್ಪಲಿಲ್ಲ, ಮಾವಯ್ಯ. ಇದು ಸತ್ಯ.

ಗಂಡನ ಮಾತುಗಳನ್ನು ಕೇಳುತ್ತಿದ್ದಂತೆ ಭಾರತಿ ಅವರ್ಣನೀಯ ಸುಖವನ್ನನುಭವಿಸುತ್ತಿದ್ದಳು.

"ಹಾಗಾದರೆ ಇನ್ನೂ ನಾಲ್ಕು ತಿಂಗಳು ಭಾರತಿ ಕಾಯಬೇಕೆ? ಅದರೊಳಗೆ ನಿನ್ನ ಕೈಯಲ್ಲಿ ನಾಲ್ಕು ಕಾಸು ಉಳಿಯುವುದೆಂದಾದರೂ ಭರವಸೆ ಇದೆಯೆ?"

ಅನಂತನಿಗೆ 'ಕಹಳೆ'ಯ ನೆನಪು ಬಂತು. ಸಂಜೆ ಸೋಮಯಾಜಿಗಳ ಕೈಯಲ್ಲಿ ಹಾಕಿದ್ದ ಮೂವತ್ತು ರೂಪಾಯಿಗಳ ನೆನಪು ಬಂತು.

ಕಾರು ರೆಮಿಂಗ್ಟನ್ ರಸ್ತೆ ಹಿಡಿದು 'ಗಿರಗಾಂ'ಗೆಂಬಂತೆ ಮುಂದೆ ಸಾಗುತ್ತಿತ್ತು. ಅನಂತ 'ಎಲ್ಲಿಗೆ ಹೋಗುತ್ತಿದ್ದೇವೆ?' ಎಂದು ಒಂದು ಕ್ಷಣ ಯೋಚಿಸಿದ. ಆದರೆ ಮಾವನೊಡನೆ ಕೇಳಲಿಲ್ಲ. ಅವರ ಪ್ರಶ್ನೆಗೆ ಉತ್ತರ ಹೇಳಲೂ ಇತ್ತು.

ಅನಂತನ ಮೌನ ನೋಡಿ ಶ್ರೀಪತಿರಾಯರಿಗೆ ನಗು ಬಂತು.

"ಸರ್ವಸಂಗ ಪರಿತ್ಯಾಗ ಮಾಡಿದ ನೀನು ಹೊಸ ಸಮಾಜದ ಹುಚ್ಚಿಗಾಗಿ ಯತ್ನಿಸುವಾತ. ಹಣ ಕೂಡಿಸಿಕೊಳ್ಳುವ ಭರವಸೆ ಕೊಡುವುದು ಸಾಧ್ಯವೆ? ಎಲ್ಲರ ದುಃಖ ನಿವಾರಣೆಯಾದ ಮೇಲಲ್ಲವೆ, ನಿನ್ನ ದುಃಖದ ಕುರಿತು ಯೋಚನೆ."

ಯಾವುದೋ ಅಸ್ಪಷ್ಟ ಭೀತಿಯಿಂದ ಭಾರತಿಯ ಮೈ ನಡುಗಿತು. ಆದರೆ ಗಂಡನ ಕೈಯ ಹಿತವಾದ ಸ್ಪರ್ಶದಲ್ಲಿ ಆಕೆ ಆಸರೆಯನ್ನು ಕಂಡುಕೊಂಡಳು.

ಅನಂತ ಮಾವನಿಂದ ಈ ರೀತಿಯ ಮಾತಗಳನ್ನು ನಿರೀಕ್ಷಿಸಿರಲಿಲ್ಲ. ಅಷ್ಟು ವರ್ಷಗಳ ಒಟನಾಟದಿಂದಾಗಿ ಅವನು ಅವರಲ್ಲಿರಿಸಿದ್ದ ಪೂಜ್ಯಭಾವನೆಗೆ ಮುಖ್ಯ ಕಾರಣ, ತನ್ನಷ್ಟೇ, ತನ್ನ ಕನಸಿನ ಹೊಸ ಬದುಕನ್ನು ಅವರೂ ಆಶಿಸುತ್ತಾರೆ, ಎಂಬುದಾಗಿತ್ತು. ಹೀಗಾಗಿ, ಈಗ ಅವರು ತಮ್ಮ ವ್ಯಕ್ತಿಸಹಜ ಚಾತುರ್ಯದಿಂದ ತನ್ನನ್ನು ಕೆಣಕಿ ತನ್ನ ಅಭಿಪ್ರಾಯಗಳನ್ನು ಹೊರಗೆಳೆಯಲು ಪ್ರಯತ್ನಿಸುತ್ತಿದ್ದಾರೆ ಎಂದು ತಿಳಿಯದೆಹೋದ.

"ನೀವೂ ಹೀಗೆ ಹೇಳುವುದೆ, ಮಾವಯ್ಯಾ, ಹೊಸ ಬಾಳು ನನ್ನನ್ನು ಕರೆಯುತ್ತಿರುವುದು ನಿಜ. ಆದರೆ ಜೊತೆಗೆ ಭಾರತಿಯೂ ಇದ್ದಾಳೆ ಎಂದು ಆಕೆಯ ಕೈ ಹಿಡಿದಂದೇ ನಾನು ನಿಶ್ಚಯಿಸಿದ್ದೇನೆ."

"ಹಾಗಾದರೆ ಈಗ ನಿನ್ನ ಸಹಾಯಕ್ಕೆ ನಾನು ಬಂದರೆ ನೀನು ಬೇಡ ಎನ್ನುವುದಿಲ್ಲ."

ಅನಂತರ ಪುನಃ ಮೌನವನ್ನವಲಂಬಿಸಿದ. ಮಾವ ಇದೇ ಉದ್ದೇಶದಿಂದ ಬರುವರೆಂದು ಅವನಿಗೆ ತಿಳಿದಿದ್ದರೆ ಯಾವುದೊಂದು ಯೋಜನೆಯನ್ನೋ, ದಾರಿಯನ್ನೋ ಆತ ಕಂಡುಹಿಡಿದು ಅದರಂತೆ ಮುಂದುವರಿಯುತ್ತಿದ್ದ. ಆದರೆ ಈ ಅನಿರೀಕ್ಷಿತ ಆಗಮನ ಅವನನ್ನು ಗಲಿಬಿಲಿಯಲ್ಲಿ ಕೆಡವಿತ್ತು.

"ಏನು, ಅನಂತಾ? ಏನು ಯೋಚನೆ?"

"ಯೋಚನೆಯೇನಿಲ್ಲ, ಮಾವಯ್ಯ. ಆದರೂ...."

"ಏನು.... ಆದರೂ ?"

"ಪುನಃ ನಿಮಗೆ ತೊಂದರೆ ಕೊಡಬೇಕೇ ?"

"ನನಗೆ ತೊಂದರೆ ಕೊಡುವ ಇಚ್ಛೆಯಿಲ್ಲವಾದರೆ ಭಾರಿಗಾದರೂ ತೊಂದರೆ ಕೊಡಬೇಕಲ್ಲ. ನಮ್ಮಿಬ್ಬರಲ್ಲಿ ಯಾರನ್ನು ನೋಯಿಸಿದರೂ ಇಬ್ಬರಿಗೂ ನೋವಾದಂತೆ. ಈಗ ಹೇಳು, ಏನು ಮಾಡುತ್ತೀ ?"

"ಆದರೆ, ಮಾವಯ್ಯ...."

"ಆದರೆ ಗೀದರೆ ಈಗ ಬೇಡ, ಅನಂತಾ. 'ಮನೆ' ಎಲ್ಲಿ ಸಿಗಬಹುದೆಂದು ಹೇಳು. ಏನು ಖರ್ಚು ತಗಲಬಹುದೆಂದು ಹೇಳು."

"ಖರ್ಚಿನ ಪ್ರಶ್ನೆಯಲ್ಲ, ಮಾವಯ್ಯಾ. ನಮ್ಮಿಬ್ಬರಿಗೆ ಇರಲು ಎರಡು ಕೋಣೆಗಳಾದರೆ ಯಥೇಷ್ಟ ಸಾಕು. ಮುಂಬಯಿಯಲ್ಲಿ ಇವಕ್ಕಿಂತ ಹೆಚ್ಚಿನ ಅನುಕೂಲವನ್ನು ಎಲ್ಲರೂ ದೊರಕಿಸಿಕೊಳ್ಳುವುದು ಸಾಧ್ಯವಿಲ್ಲ. ಇಷ್ಟಕ್ಕಾಗಿ ಐನೂರು ರೂಪಾಯಿಗಳಾದರೂ ಸುರಿಯಬೇಕಾದೀತು...."

"ಅಷ್ಟೆಯೇ ?"

"ಮಾವಯ್ಯಾ !"

ಅನಂತನ ಹೃದಯ ಕೃತಜ್ಞತೆಯಿಂದ ತುಂಬಿ ಬಂತು. ಇನ್ನು ಎಷ್ಟೋ ದಿನ ಭಾರತಿಯ ಒಡನಾಟವಿಲ್ಲವೆಂದು ತಿಳಿದವನಿಗೆ, ಭಾರತಿಯ ಒಡನಾಟ ಈಗಿನಿಂದಲೇ ಸಾಧ್ಯ ಎಂದು ತಿಳಿದಾಗ ಆದ ಸಂತೋಷ ಸೀಮಾತೀತವಾಗಿತ್ತು. ಅನಂತ ಮನಸ್ಸಿನಲ್ಲಿಯೇ ತಾನು ಕೇಳಿ ವಿಚಾರಿಸಿದ್ದ ಹಲವಾರು ಹೊಸ ಕಟ್ಟಡಗಳಲ್ಲಿ ಯಾವುದು ಯೋಗ್ಯವೆಂದು ಯೋಚಿಸತೊಡಗಿದ.

ಕಾರು ಗ್ರಾಂಟ್‌ರೋಡ್ ತಲುಪಿ, ಮಲಬಾರ್ ಹಿಲ್‌ನತ್ತ ತಿರುಗಿದಾಗ ಒಮ್ಮಿಂದೊಮ್ಮೆಗೆ ಎಲ್ಲ ವಿಚಾರ ಮರೆತುಹೋಗಿ ಕಾರು ಕಂಡಾಗಲೇ ಉಂಟಾಗಿದ್ದ ಕುತೂಹಲ ಅನಂತನಲ್ಲಿ ಪುನಃ ಚಿಗುರಿಕೊಂಡಿತು.

ಆದರೂ ಮಾವನನ್ನು ಕೇಳಲು ಯಾವುದೋ ಒಂದು ಸಂಕೋಚ ಬಿಡಲಿಲ್ಲ.

ಕಾರು 'ನಾನಾ ಚೌಕ'ನ್ನು ಹಾದುಕೊಂಡು 'ಗಾಂದೇವಿ'ಯ ದಾರಿ ಹಿಡಿದುಹೋಗಿ ವಾಲುಕೇಶ್ವರ ದೇವಾಲಯದ ಸಮೀಪ ಕಟ್ಟಡವೊಂದರ ಪ್ರಾಕಾರದೊಳಗೆ ಸೇರಿದಾಗ ಅನಂತ ಕುತೂಹಲವನ್ನು ತಡೆಯಲಾಗದೆ ಪ್ರಶ್ನಿಸಿದ :

"ಯಾರ ಮನೆಯಲ್ಲಿ ಇಳಿದಿದ್ದೀರಿ, ಮಾವಯ್ಯ ?" ಎಂದು.

ಮನೆ ಕಂಡಾಗಲೇ ಆತನ ಹೃದಯದಲ್ಲಿ ಒಂದು ಸಂದೇಹ ಮೂಡಿತ್ತು. ಕತ್ತಲಲ್ಲಿ ತನ್ನ ಸಂದೇಹ ಸುಳ್ಳಾಗಿರಬಹುದು ಎಂದು ಅನಂತ ಭಾವಿಸಿದ್ದ. ಆದರೆ ಅನಂತನಿಗೆ ಉತ್ತರ ಹೇಳದೆ ಮೊದಲನೆಯ ಮಾಳಿಗೆಯ ಮೆಟ್ಟಲೇರಿ ಶ್ರೀಪತಿರಾಯರು ಕರೆಗಂಟೆ ಬಾರಿಸಿದಾಗ ಬಾಗಿಲು ತೆರೆದ ಮಧ್ಯವಯಸ್ಸಿನ ಗೃಹಸ್ಥರನ್ನು ನೋಡಿದ ಮೇಲೆ ಆತನಿಗೆ ಯಾವ ಸಂದೇಹವೂ ಉಳಿಯಲಿಲ್ಲ.

ಬಾಗಿಲು ತೆರೆದ ವ್ಯಕ್ತಿ ಅನಂತನನ್ನು ಗುರುತಿಸಲಿಲ್ಲ. ಶ್ರೀಪತಿರಾಯರನ್ನು ಕಂಡು ನಗುತ್ತಲೇ "ಬಂದುಬಿಟ್ಟರಾ ? ಸಿಕ್ಕಿದರೇನು, ನಿಮ್ಮ ಅಳಿಯ ? ಎಳೆದುಕೊಂಡೇ ಬಂದಿರೇ ? ಚೆನ್ನಾಯಿತು. ಊಟ ತಯಾರಾಗಿದೆ. ಕಾಲು ತೊಳೆದುಕೊಳ್ಳಿ. ಒಳಗೆ ಹೋಗಮ್ಮ, ಭಾರತೀ" ಎಂದರು.

ಭಾರತಿ ಒಳಕೋಣೆಗೆ ಹೋದಳು. ಶ್ರೀಪತಿರಾಯರು ಅಲ್ಲೇ ಸೋಫಾದಲ್ಲಿ ವಿಶ್ರಮಿಸಿದರು. ಅನಂತನೂ ಅವರ ಬಳಿಯೇ ಕುಳಿತ.

ಬೇಡವಾದ ಯೋಚನೆಯೊಂದು ಅವನ ಮನಸ್ಸಿನಲ್ಲಿ ಸುಳಿದು ಮಾಯವಾಯಿತು.

'ಭಾರತಿ ಬರುವ ವಿಚಾರ ಒಂದು ಪಙ್ಕ್ತಿಯಾದರೂ ಬರೆದು ತಿಳಿಸಿದ್ದರೆ ಈ ಗಡ್ಡ ತೆಗೆಸಿ ಸ್ವಲ್ಪ ನಿರ್ಮಲನಾಗಿರುತ್ತಿದ್ದೆ.'

ಶ್ರೀಪತಿರಾಯರು ತಮ್ಮ ಗೆಳೆಯನಿಗೆ ಅನಂತನ ಪರಿಚಯ ಮಾಡಿಸಿ ಕೊಡುವ ಆತುರದಲ್ಲಿದ್ದರು. ಅನಂತ ತಾನು ಹಿಂದೆ ಅದೇ ಸೋಫಾದ ಮೇಲೆ ಕುಳಿತ ಸಂದರ್ಭವನ್ನು ಸ್ಮರಿಸಿಕೊಳ್ಳುತ್ತಿದ್ದ.

"ಇವನೇ, ನಾಗೇಶರಾಯರೆ, ನನ್ನ ಅಳಿಯ, ಅನಂತ. ಇಬ್ಬರೂ ಮುಂಬಯಿಯಲ್ಲಿದ್ದು, ಇಬ್ಬರೂ ಕಾಂಗ್ರೆಸ್ಸಿಗರಿದ್ದು, ಪರಸ್ಪರ ಪರಿಚಯ ಇಷ್ಟರಲ್ಲೇ ಆಗಬೇಕಿತ್ತು. ನಾನು ಬರಬೇಕಾಯಿತು, ಈ ಕೆಲಸ ಮಾಡಿಸಲು."

ಅನಂತ ಈಗ ಮಾತನಾಡಿದ :

"ನನಗೆ ನಾಗೇಶರಾಯರ ಪರಿಚಯವಿದೆ. ಅವರಿಗೆ ನನ್ನ ಪರಿಚಯ ವಿರಲಿಕ್ಕಿಲ್ಲ. ಮಾತನಾಡುವ ಸಂದರ್ಭಗಳು ಬಂದಿದ್ದರೂ ಅವರು ಮರೆತಿರಬಹುದು."

ಶ್ರೀಪತಿರಾಯ ನಾಗೇಶರಾಯರಿಬ್ಬರಿಗೂ ಆಶ್ಚರ್ಯವಾಯಿತು. ನಾಗೇಶರಾಯರು ಅನಂತನನ್ನು ದಿಟ್ಟಿಸಿ ನೋಡಿದ ಮೇಲೆ ಹೇಳಿದರು :

"ಓಹೋ! ಇವರೆಯೋ? ಇವರನ್ನು 'ಕಾಂಗ್ರೆಸ್ ಹೌಸ್'ನಲ್ಲಿ ಎರಡು ಮೂರು ಸಲ ನಾನು ಕಂಡಿದ್ದೆ. ನಮ್ಮ ಸ್ವಯಂಸೇವಕ ಪಥಕದ ಮುಂದಾಳು. ಆದರೆ ನಮ್ಮ ಊರಿನವರೆಂದು ತಿಳಿಯಲೇ ಇಲ್ಲ ನೋಡಿ."

ನಾಗೇಶರಾಯರು ಒಂದು ಪೇಚಿನ ಪರಿಸ್ಥಿತಿಯಿಂದ ಪಾರಾಗಿ ಹೋದವರಂತೆ ನಗಲಾರಂಭಿಸಿದರು.

"ಹೂಂ. 'ಕಾಂಗ್ರೆಸ್ ಹೌಸ್'ನಲ್ಲಿ ನೋಡಿದ ಮಾತು ಬೇರೆ. ಊರಿನವರೆಂದು ತಿಳಿಯುವ ಸಂದರ್ಭ ಕೂಡಾ ಬಂದಿತ್ತು. ಈಗ ನಿಮಗೆ ನೆನಪಿರಲಿಕ್ಕಿಲ್ಲ."

"ಹಾಗೇನು? ಯಾವಾಗ? ಈಗೀಗ ನನಗೆ ಜ್ಞಾಪಕ ಶಕ್ತಿಯೂ ಕಡಿಮೆಯಾಗುತ್ತಿದೆ."

ಅನಂತನ ದನಿಯಿಂದಲೇ ತಮಗೆ ತಿಳಿದಿರದ ಯಾವುದೋ ಒಂದು ವಿರಸದ ಸನ್ನಿವೇಶ ಕುರಿತು ಚರ್ಚೆ ನಡೆದಿದೆಯೆಂದು ಗ್ರಹಿಸಿದ ಶ್ರೀಪತಿರಾಯರು ಮಾತಿಗೆ ತಡೆಹಾಕುವ ಉದ್ದೇಶದಿಂದ ಅನಂತನೆಡೆ ನೋಡಿದರು. ಆದರೆ ಆತ ಈ ನೋಟವನ್ನು ಗಮನಿಸಲಿಲ್ಲ.

"'ಕಹಳೆ'ಗೆ ಚಂದಾ ಹಣ ಕೂಡಿಸಲು ಒಮ್ಮೆ ಬಂದಿದ್ದೆ. 'ಜೈಹಿಂದ್' ರಾತ್ರಿ ಶಾಲೆಗೆ ಪೋಷಕರಾಗುವಂತೆ ಕೇಳಿಕೊಳ್ಳಲು ಇನ್ನೊಮ್ಮೆ ಬಂದಿದ್ದ."

ಈಗ ಮಾತ್ರ ನಾಗೇಶರಾಯರಿಗೆ ಸಿಟ್ಟೇರತೊಡಗಿತು. ಆದರೆ ಗೆಳೆಯನ ಇದಿರಿನಲ್ಲಿ ಅದನ್ನು ತೋರಿಸುವ ಇಚ್ಛೆಯಿರಲಿಲ್ಲ. ಆದರೂ ತಮ್ಮ ಮನೆಯಲ್ಲಿಯೇ ತಮಗಾಗುತ್ತಿದ್ದ ಅಪಮಾನವನ್ನು ಸಹಿಸಿಕೊಂಡಿರಲು ಅವರಿಗೆ ಕಷ್ಟವಾಗುತ್ತಿತ್ತು.

"ಆಗ ಬಂದ ನಾಲ್ಕಾರು ಜನರ ಜೊತೆಗೆ ನೀವೂ ಇದ್ದಿರೇನು? ನೋಡಿ, ನನಗೆ ನೆನಪೇ ಆಗುವುದಿಲ್ಲ. ನೂರಾರು ಸಂಘಗಳು, ಶಾಲೆಗಳು, ಆ ಸಂಸ್ಥೆ, ಈ ಸಂಸ್ಥೆ ಎಂದು ಇಲ್ಲಿ ಬರುವವರಿಗೆ ಲೆಕ್ಕಮಿತಿಯಿಲ್ಲ. ನನ್ನ ಕೈಲಾದಷ್ಟು ಸಂಸ್ಥೆಗಳಿಗೆ ಸಹಾಯ ಮಾಡುತ್ತಿದ್ದೇನೆ. ನೀವು 'ಜೈಹಿಂದ್'ನಲ್ಲಿ ಅಧ್ಯಾಪಕರೇನು? ಶ್ರೀಪತಿರಾಯರ ಅಳಿಯ ಅದರಲ್ಲಿದ್ದಾರೆಂದು ತಿಳಿದಿದ್ದರೆ ಖಂಡಿತ ಏನಾದರೂ ಸಹಾಯ ಮಾಡುತ್ತಿದ್ದೆ."

"ಶ್ರೀಪತಿರಾಯರ ಅಳಿಯನಿಗೆ ಸಹಾಯ ಬೇಕಿರಲಿಲ್ಲ. ಆ ಶಾಲೆಯ ಬಡ ವಿದ್ಯಾರ್ಥಿಗಳಿಗೆ ಸಹಾಯ ಬೇಕಿತ್ತು. ಆ ಕಾರಣ ಬಂದಿದ್ದೆ. ಹಾಗೆಯೇ

ಅನಂತನ ಸಂಪಾದಕತ್ವದ ಪತ್ರಿಕೆಗೆ ಚಂದಾದಾರರು ಬೇಕಿರಲಿಲ್ಲ. ಮುಂಬ ಯಿಯ ಕನ್ನಡಿಗರ ಆಸೆ ಆಕಾಂಕ್ಷೆಗಳನ್ನು ಪ್ರತಿನಿಧಿಸುವ ಒಂದು ಕನ್ನಡ ಪತ್ರಿಕೆಗೆ ನೆರವು ಅಗತ್ಯವಿತ್ತು—ಅದೂ ಚಂದಾಹಣದ ನೆರವು ಮಾತ್ರ. ಪೋಷಕವರ್ಗದ ನೆರವನ್ನು ಪತ್ರಿಕೆಗೆ ಕೇಳಿಕೊಂಡು ಯಾರೂ ಬರಲಿಲ್ಲ’”

ನಾಗೇಶರಾಯರ ಮನಸ್ಸಿನಲ್ಲಿ ಅಂದು ಅನಂತನೊಡನೆ ವಾದಿಸಿದ ಸನ್ನಿವೇಶ ಅಚ್ಚಳಿಯದಂತೆ ನಿಂತಿತ್ತು. ‘ಒಂದು ಆದರ್ಶಸಾಧನೆಯ ಕಾರ್ಯದಲ್ಲಿ ನೆರವು ಕೊಡಲೆಂದಾದರೂ ನಾವು ಬೇಡುವುದು ಬರೇ ಆರೂವರೆ ರೂಪಾಯಿ’ ಎಂದು ಅನಂತ ಹೇಳಿದ್ದಾಗ, ‘ನಮ್ಮ ಮನೆಗೆ ಸಾಕಷ್ಟು ಪತ್ರಿಕೆಗಳು ಬರುತ್ತಿವೆ. ನೀವು ಕನ್ನಡದ ಉದ್ಧಾರ ಮಾಡಿ ನಮಗಾಗುವ ಲಾಭವೇನೂ ಇಲ್ಲ.’ ಎಂದು ನಿಷ್ಠುರವಾಗಿಯೇ ಹೇಳಿದ್ದರು. ಆದರೆ ಗೆಳೆಯನ ಇದಿರಿನಲ್ಲಿ ಆ ಮಾತನ್ನು ಆಡಿದ್ದ ಸನ್ನಿವೇಶವನ್ನು ಒಪ್ಪಿಕೊಳ್ಳುವುದು ಉಚಿತವೇ ಎಂದು ಅವರ ಮನಸ್ಸು ಪ್ರಶ್ನಿಸುತ್ತಿತ್ತು.

ತಾವು ಕೃಷ್ಣದರ್ಶನಕ್ಕೆಂದು ಉಡುಪಿಗೆ ಹೋಗಿದ್ದಾಗ ಶ್ರೀಪತಿರಾಯರ ಮನೆಯಲ್ಲಿ ದೊರಕಿದ್ದ ರಾಜಾತಿಥ್ಯ ನೆನಪಿಗೆ ಬಂತು. ಆ ಕಾರಣ ಅನಂತನ ಮೇಲಿನ ಸಿಟ್ಟನ್ನೆಲ್ಲ ನಗೆಯಲ್ಲಿ ತೇಲಿಸುವ ಪ್ರಯತ್ನವನ್ನು ನಾಗೇಶರಾಯರು ಮಾಡಿದರು.

“ನೋಡಿ, ಅನಂತರಾಯರೆ. ನಿಮಗೆ ಲೋಕಜ್ಞಾನ ಕಡಿಮೆ. ಒಂದು ಆದರ್ಶದ ಹೋರಾಟದಲ್ಲಿ ಹದಿನೇಳು ವರ್ಷ ಕಳೆದ ನಮಗೆ, ದಾರಿಯಲ್ಲಿ ಸಿಗುವ ಕೊಳೆ ಕೆಸರುಗಳ ಪರಿಚಯು ಹೆಚ್ಚಾಗಿಯೇ ಇರುವುದರಿಂದ ಹೆದರಿಕೆ ಮುತ್ತಿಕೊಂಡಿದೆ. ‘ಕಹಳೆ’ ನಿಮ್ಮ ಅಷ್ಟು ಅಭಿಮಾನದ ಪತ್ರಿಕೆಯಾದರೆ ನಾನು ನಾಳೆಯೇ ಚಂದಾದಾರನಾಗುತ್ತೇನೆ. ಒಬ್ಬರಲ್ಲ, ಹತ್ತು ಜನ ಚಂದಾ ದಾರರನ್ನು ಕೂಡಿಸಿ ಕೊಡುತ್ತೇನೆ. ಆದರೆ ಒಂದು ಮಾತು ಮಾತ್ರ ಕೇಳಿ ಕೊಳ್ಳುತ್ತೇನೆ. ಈಗೀಗ ಎಲ್ಲ ಕಡೆಗಳಲ್ಲೂ ತೋರುತ್ತಿರುವ, ಕಾಂಗ್ರೆಸ್ಸನ್ನು ಕಂಡಾಬಟ್ಟೆ ಟೀಕಿಸುವ ರೋಗಕ್ಕೆ ಮಾತ್ರ ನಿಮ್ಮ ಪತ್ರಿಕೆ ಅಂಟಿಕೊಳ್ಳ ಬಾರದು ”

ಈಗ ಅನಂತನಿಗೂ ನಗು ಬಂತು.

“ಹಾಗಾದರೆ ನೀವು ‘ಕಹಳೆ’ಯನ್ನು ಓದುತ್ತಿದ್ದೀರಿ. ಚಂದಾದಾರ ರಾಗದಿದ್ದರೂ ಪರವಾಯಿಲ್ಲ.”

ನಾಗೇಶರಾಯರಿಗೆ ಏನೋ ಹೇಳುವ ಆಸೆಯಿತ್ತು. ಆದರೆ ಅವರ ಹೆಂಡತಿ ಬಂದು "ಊಟಕ್ಕೇಳಿ" ಎಂದುವರಿಂದ ಅವರು ಶ್ರೀಪತಿರಾಯರನ್ನು ಎಬ್ಬಿಸಿದರು. ಅನಂತನನ್ನೂ ಏಳುವಂತೆ ಒತ್ತಾಯ ಮಾಡಿದಾಗ ಆತ "ಊಟವಾಗಿದೆ. ಒಲ್ಲೆ" ಎಂದ. ನಾಗೇಶರಾಯರ ಬಲವಂತವೂ ಪರಿಣಾಮ ಮಾಡದುದರಿಂದ, "ಹಾಲಾದರೂ ಕುಡಿಯಿರಿ. ಕಳುಹಿಸುತ್ತೇನೆ." ಎಂದಾಗ ಆತ "ಹೂಂ" ಎಂದು ಅಲ್ಲೇ ಮೇಜಿನ ಮೇಲಿದ್ದ ಪತ್ರಿಕೆಯೊಂದರ ಹಾಳೆಗಳನ್ನು ತಿರುವಲಾರಂಭಿಸಿದ.

ಗೆಳೆಯರಿಬ್ಬರೂ ಒಳಗೆ ಊಟಕ್ಕೆ ತೆರಳಿದಮೇಲೆ, ಭಾರತಿ ಹಾಲಿನ ಲೋಟ ಹಿಡಿದುಕೊಂಡು ಗಂಡನ ಬಳಿಗೆ ಬಂದಳು. ಅನಂತ ಬಯಸಿದ್ದುದೂ ಅದನ್ನೇ. ಆಕೆಯೊಡನೆ ಏಕಾಂತದಲ್ಲಿ ಮಾತನಾಡುವ ಸಂದರ್ಭ ಯಾವಾಗ ದೊರಕಬಹುದೆಂದು ಮನಸ್ಸು ಕಾತರಗೊಂಡಿತ್ತು. ಅಂಥ ಸಂದರ್ಭ ಬಂದಾಗ ಮಾತ್ರ ಕೂಡಲೇ ಮಾತು ಹೊರಡಲಿಲ್ಲ.

"ಭಾರೀ........"

"ಹೂಂ."

"ಬರುವ ಸುದ್ದಿ ತಂತಿ ಮೂಲಕವಾದರೂ ತಿಳಿಸಬಾರದಿತ್ತೇನೇ?"

"ಹೊರಡುವ ತನಕ ಅಪ್ಪ ನನಗೆ ತಿಳಿಸಿದ್ದರಲ್ಲವೆ, ನಾನು ನಿಮಗೆ ತಿಳಿಸುವುದು?"

"ಯಾಕೆ ಕೇಳಿದೆ ಗೊತ್ತೇ?"

"ಯಾಕೆ?"

"ನೀನು ಬರುವುದು ತಿಳಿದಿದ್ದರೆ ಹೇಗಾದರೂ ಅವಕಾಶ ಮಾಡಿಕೊಂಡು 'ಗಡ್ಡ' ತೆಗೆಸುತ್ತಿದ್ದೆ."

ಭಾರತಿಗೆ ನಗು ಬಂತು. ಅನಂತನೂ ನಗತೊಡಗಿದ.

"ಬಂದವಳು ಬಿಟ್ಟುಹೋಗುವುದಿಲ್ಲವಷ್ಟೇ?"

"ಉಳಿಸಿಕೊಂಡರೆ ಉಳಿಯುವುದಿಲ್ಲವೇ?"

"ಅದಕ್ಕೂ ಮಾವನೇ ಗತಿ."

ಈಗ ಭಾರತಿ ಮಾತನಾಡಲಿಲ್ಲ.

"ಭಾರೀ. ......"

"ಹೂಂ."

"ಬಹಳ ಸಮಯದಿಂದ ಮುಂಬಯಿಗೆ ಬರುವ ಆಸೆಯಿರಿಸಿಕೊಂಡಿದ್ದಿಯಲ್ಲ!"

ಭಾರತಿ ಮೌನ.

"ಈಗ ಸಂತೋಷವಾಯಿತೆ?"

"ಮನೆ ಸಿಗಲಿ. ಮತ್ತೆ ಆ ಮಾತು."

"ಮನೆಯಲ್ಲ, ಭಾರೀ. ಸಿಗುವುದು ಗೂಡು. ಮುಂಬಯಿಯ ಅವಸ್ಥೆ ಅದು. ಆದರೆ ನೀನು ನನ್ನ ಜೊತೆಗೆ ಎಂಥಾ ಕಷ್ಟ ಅನುಭವಿಸಲಿಕ್ಕೂ ಸಿದ್ಧಳಿದ್ದೀಯಲ್ಲ?"

"ಕಷ್ಟದ ಮಾತು ಯಾಕೀಗ?"

"ನನ್ನ ಜೊತೆಗಿದ್ದರೆ ಬೇರೆಲ್ಲ ಕಷ್ಟಗಳನ್ನು ಮರೆಯುವ ಶಕ್ತಿ ನಿನಗಿದೆಯಲ್ಲ!"

"ಇಲ್ಲವಾದರೆ ಬೇಡಿ, ಕಾಡಿ, ಓಡಿಬರುತ್ತಿದ್ದೆನೇ?"

"ಭಾರೀ........"

"ಆಂ."

"ನಿನ್ನ ಪ್ರೀತಿ ನನಗೆ ನಾಲ್ಕು ಭುಜ ಕೊಡುತ್ತೆ."

"ಈಗ ಎರಡು ಕೈಲಿ ಹೊರಡುವುದು ಸಾಕಾಗೋಲ್ಲ ಎಂತ ಕಾಣುತ್ತದೆ."

"ಹಾಗಲ್ಲ, ಭಾರೀ. ನನಗೆ ಬೇಕಾದ್ದು ಆ ವಿಶ್ವಾಸ. ಸೋತಾಗ ಧೈರ್ಯ ಕೊಡುವ ಪ್ರೀತಿಯ ಸಂಜೀವಿನಿ."

"ಅದಕ್ಕೇ ಇಷ್ಟು ದಿನ ಕರೆಸಿಕೊಳ್ಳುವ ಯೋಚನೆಯನ್ನೇ ಬಿಟ್ಟಿದ್ದು, ಎಂದು ಕಾಣುತ್ತದೆ."

ಅನಂತನಿಗೆ ನಗು ಬಂತು. ನಾಗೇಶರಾಯರ ಹೆಂಡತಿ ಭಾರತಿಯನ್ನು ಕರೆಯುತ್ತಿದ್ದರು. ಅನಂತ ಹಾಲು ಕುಡಿಯುವುದನ್ನು ಸಂಪೂರ್ಣ ಮರೆತು ಬಿಟ್ಟಿದ್ದ. ಅವಸರವಸರವಾಗಿ ಕುಡಿದು ಮುಗಿಸಿದ ಮೇಲೆ ಬರಿದಾದ ಲೋಟಿಯನ್ನು ಹಿಡಿದುಕೊಂಡು ಭಾರತಿ ಒಳಗೆ ನಡೆದಳು.

ಊಟ ಮುಗಿಸಿ ಬಂದಮೇಲೆ ಒಂದರ್ಧ ತಾಸು ಎಲ್ಲರೂ ಜೊತೆಗೆ ಕುಳಿತು ಹರಟೆ ನಡೆಯಿತು. ನಾಗೇಶರಾಯರು ಅನಂತನ ಮೇಲಿನ ಸಿಟ್ಟನ್ನೆಲ್ಲ ಮರೆತವರಂತೆ ಅತಿಯಾದ ಸ್ನೇಹದಿಂದ ಮಾತು ಬೆಳೆಸಿದರು. "ನೀವು ಮೊದಲೇ ತಿಳಿಸಿದ್ದರೆ ನಾನು ಯಾವುದಾದರೊಂದು ಮನೆ ಹುಡುಕಿ ಕೊಡುತ್ತಿ

ದ್ದಿಲ್ಲವೆ ? ಅಷ್ಟು ಸಹಾಯ ಮಾಡುವ ಶಕ್ತಿಯಿಲ್ಲವಾದರೆ ಗೆಳೆತನದಿಂದೇನು ಪ್ರಯೋಜನ ?" ಎಂದು ವಾದಿಸಿದರು. ಅನಂತ ತನಗೆ ತಿಳಿದಿದ್ದ ನಾಲ್ಕಾರು ವಸತಿಗಳ ವಿಚಾರ ತಿಳಿಸಿದ. ನಾಗೇಶರಾಯರು ಮಾರನೆ ದಿನವೇ ವಿಚಾರಿಸುವುದಾಗಿ ಆಶ್ವಾಸನೆ ಕೊಟ್ಟರು.

ಅನಂತ ಮಾತುಂಗಾಕ್ಕೆ ಮರಳುವಾಗ ಮಧ್ಯರಾತ್ರಿಯಾಗಿತ್ತು. ನಾಗೇಶರಾಯರು 'ಕಾರು' ಕಳಿಸುವೆನೆಂದು ಹೇಳಿದರೂ 'ಬೇಡ' ಎಂದು ಟ್ರೈನು ಹಿಡಿದು ಬಂದಿದ್ದ. ಭಾರತಿಯನ್ನು ಬೀಳ್ಕೊಟ್ಟು ಬರುವಾಗ ಮನಸ್ಸು ಭಾರವಾಗಿತ್ತು. ಆದರೆ ಹೃದಯದಲ್ಲಿ ಮುಂದಿನ ಜೀವನದ ಮಧುರ ಕನಸಿತ್ತು. ಮಾರನೆಯ ದಿನ ಆಫೀಸಿನಿಂದಲೂ, ಎಲ್ಲ ಕೆಲಸಗಳಿಂದಲೂ ರಜೆ ಪಡೆದು ಮಾವನನ್ನು ಕಾಣುವುದಾಗಿ ಭರವಸೆ ಕೊಟ್ಟು ಬಂದಿದ್ದ.

'ಶಾರದಾ ಭವನ' ತಲಪಿ ಮೇಜಿನ ಮುಂದೆ ಕುಳಿತಾಗಲೇ ಆತನಿಗೆ 'ಮೌಂಟ್‌ಬ್ಯಾಟನ್ ಯೋಜನೆ'ಯ ಕುರಿತು ಆರಂಭಿಸಿದ್ದ ಲೇಖನ ಕಂಡುಬಂದುದು.

ಮರುದಿನ ಬೆಳಿಗ್ಗೆ ಲೇಖನ ಒದಗಿಸದೆ ನಿವೃತ್ತಿಯಿದ್ದಿಲ್ಲ. ಅನಂತ ಭಾರತಿಯನ್ನು ಮರೆತ. ಆಕೆಯನ್ನು ಕಂಡು ಪುಳಕಿತವಾದ ಹೃದಯದ ಆನಂದದ ಉನ್ಮಾದದಲ್ಲಿ, ರಾಜೀವನ ಕಳಕಳಿಯ ಮಾತುಗಳಿಂದ ಸ್ಫೂರ್ತಿಗೊಂಡ ನೆನಪಿನ ಹಿನ್ನೆಲೆಯಲ್ಲಿ, ಒಂದು ದಿನವಿಡೀ ಅಭ್ಯಾಸಮಾಡಿ ಕಂಡುಹಿಡಿದಿದ್ದ ಯೋಜನೆಯ ಹುಳುಕುಗಳನ್ನೆತ್ತಿಕೊಂಡು ಅನಂತ ಲೆಕ್ಕಣಿಕೆ ಓಡಿಸಿದ.

ನಸುಕು ಹರಿಯುವ ಹೊತ್ತಿಗೆ ಅನಂತ ಲೇಖನ ಮುಗಿಸಿ ಮೇಜಿನ ಮೇಲೆಯೇ ತಲೆಯಿರಿಸಿ ಮಲಗಿದ್ದ.

ಬೆಳಗಾಯಿತೆಂದು ಎದ್ದ ಗೆಳೆಯರು ಅನಂತನನ್ನು ಕಂಡು ಮೆಲ್ಲಗೆ, ಅವನಿಗೆ ಎಚ್ಚರವಾಗದಂತೆ ಮೇಜಿನ ಬಳಿ ಉರಿಯುತ್ತಿದ್ದ ದೀಪವನ್ನು ಆರಿಸಿದರು.

೧೨

ಪ್ರೆಸ್ಸಿಗೆ 'ಮ್ಯಾಟರ್' ತಲಪಿಸಿ, ಸೋಮಯಾಜಿಗಳಿಗೂ ರಾಜೀವನಿಗೂ ಎರಡು ಕಾಗದ ಬರೆದಿಟ್ಟು, ಆಫೀಸಿನಿಂದಲೂ ರಜೆ ಪಡೆದು ಅನಂತ ನಾಗೇಶರಾಯರ ಮನೆಯ ದಾರಿ ಹಿಡಿದ.

ಮತ್ತೆ ನಾಲ್ಕು ದಿನ ನಾಗೇಶರಾಯರ ಜೊತೆ ಅವರ ಕಾರಿನಲ್ಲಿ ಓಡಾಟ ನಡೆದಿತ್ತು—ಮನೆಗಾಗಿ. ನಾಗೇಶರಾಯರು ಮೊದಲು ಕೊಟ್ಟ ಆಶ್ವಾಸನೆಗಳೆಲ್ಲ ಫಲಿಸಲಿಲ್ಲವಾದರೂ ಕೊನೆಗೆ ಕುರ್ಲಾದಲ್ಲಿ ಎರಡು ಕೋಣೆಗಳ ಬಿಡಾರವೊಂದನ್ನು ಅನಂತನಿಗೆ ದೊರಕಿಸಿಕೊಟ್ಟರು. ಅನಂತ ಇಂಥವೇ ಕೋಣೆಗಳು ಸಿಗಬೇಕಾಗಿ ಹೇಳಿದುದರಿಂದಲೇ ಹೀಗಾಯಿತು. "ನಿಮ್ಮ ಅಳಿಯನಿಗೆ ಹೇಳಿ ಶ್ರೀಪತಿರಾಯರೆ, ಈ ಆದರ್ಶದ ಹುಚ್ಚು ಬೇಡ. ಮೂರು ನಾಲ್ಕು ಕೋಣೆಗಳ ಸ್ವಯಂ ಪರಿಪೂರ್ಣ ಮನೆಗಳನ್ನು ನಾನು ತೆಗೆಸಿಕೊಡುತ್ತೇನೆ, ಬೇಕಾದರೆ; ಒಂದು ಒಂದೂವರೆ ಸಾವಿರವೇನು ನಿಮಗೆ ಹೆಚ್ಚಲ್ಲ." ಎಂದಾಗ ಅನಂತನ ಖಂಡಿತ ವಿರೋಧ ವ್ಯಕ್ತವಾಗಿತ್ತು. "ಐನೂರು ರೂಪಾಯಿಗಳಿಗಿಂತ ಹೆಚ್ಚಿಗೆ ಈ ಹುಚ್ಚಿಗೆ ಹಾಳುಮಾಡುವುದನ್ನು ನಾನು ವಿರೋಧಿಸುತ್ತೇನೆ, ಮಾವಯ್ಯ. ಸಿರಿವಂತಿಕೆಯ ಆಲಸ್ಯ ನನ್ನನ್ನು ಕರ್ತವ್ಯವಿಮುಖನಾಗುವಂತೆ ಮಾಡಬಹುದು. ಅಷ್ಟೇ ಅಲ್ಲದೆ, ತಿಂಗಳು ತಿಂಗಳು ಎಷ್ಟು ಬಾಡಿಗೆ ಕೊಡಬೇಕಾಗುವುದೆಂದು ನಾನು ಯೋಚಿಸಬೇಕಾಗುತ್ತದೆ" ಎಂದಿದ್ದ.

"ಹಾಳಾಗಿಹೋಗಲಿ" ಎಂದು ಗೊಣಗುಟ್ಟಿಕೊಂಡು ನಾಗೇಶರಾಯರು ಕುರ್ಲಾದ ಮನೆ ತೋರಿಸಿದರು.

ಅನಂತ "ನಮಗಿದು ಸಾಕು" ಎಂದಾಗ ಒಂದು ಕೆಲಸ ಮುಗಿಯಿತು ಎನ್ನುವಷ್ಟು ತೃಪ್ತಿಪಡೆದರು. ಭಾರತಿಗೆ ಮನೆ ನೋಡಿದಾಗ 'ಇದು ಮನೆಯೇ ?' ಎಂದು ತೋರಿದರೂ ಆಕೆ ಮಾತನಾಡಲಿಲ್ಲ.

ನಾಗೇಶರಾವ್ ದಂಪತಿಗಳೇ ಮುಖ್ಯ ಅತಿಥಿಗಳಾಗಿ ಹೊಸ ಮನೆಯ ಪ್ರವೇಶವೂ ನಡೆಯಿತು. ಮನೆ ದೊರಕಿಸಿಕೊಟ್ಟುದಲ್ಲದೆ, ಹೊಸದಾಗಿ ಸಂಸಾರ ಹೂಡಲು ಅಗತ್ಯವಿರುವ ಸಾಮಾನುಗಳನ್ನೂ ಸರಿಪಡಿಸಿಕೊಟ್ಟು, ಅನಂತ ಗೃಹಸ್ಥನಾದನೆಂಬ ಸಂತೋಷದಿಂದ ಶ್ರೀಪತಿರಾಯರು ಊರಿಗೆ ಹೊರಡುವ ಸಿದ್ಧತೆ ನಡೆಸಿದರು.

ಶ್ರೀಪತಿರಾಯರು ಹೊರಡುವ ತನಕವೂ ಅನಂತ ಅವರ ಜೊತೆಗೇ ಇದ್ದ. ಒಂದು ವಾರದ ರಜೆ ಪಡೆದು, ಬೇರೆಲ್ಲ ಕೆಲಸಗಳನ್ನೂ ಬದಿಗಿರಿಸಿದ್ದ. ಆದರೂ ಶ್ರೀಪತಿರಾಯರು ಅನಂತನ ವೈಯಕ್ತಿಕ ಜೀವನದ ಕುರಿತು ಯಾವ ಮಾತನ್ನೂ ಆಡಿರಲಿಲ್ಲ. ಅನಂತನಿಗೆ ಇದರಿಂದಾದ ಆಶ್ಚರ್ಯ ಕಡಿಮೆಯೇನಲ್ಲವಾದರೂ, ಆತ ಮಾವನನ್ನು ಈ ವಿಚಾರ ವಾದಕ್ಕೆಳೆಯುವ ಗೋಜಿಗೆ ಹೋಗಲಿಲ್ಲ.

ಕೆಲವೊಂದು ಬಾರಿ, ತನ್ನ ಮಾವನಲ್ಲಿ, ಇಂದಿನ ಜಗತ್ತಿನ ಕುರಿತು, ಮುಂಚೆ ಇದ್ದ ಕಳಕಳಿ ಈಗಲೂ ಇದೆಯೇ ಎಂದು ಆತ ಯೋಚಿಸಿದುದುಂಟು. ಆದರೆ ಅವರ ನಿಷ್ಕಲ್ಮಷ ಮುಖವನ್ನು ನೋಡಿದಾಗಲೆಲ್ಲ ತನ್ನ ಸಂದೇಹದ ಬಗ್ಗೆ ತನಗೇ ನಾಚಿಕೆಯಾಗುತ್ತಿತ್ತು, ತನ್ನ ಕುರಿತಾದ ಅತೃಪ್ತಿ ತಾನು ಭಾರತಿಗೆ ಕೊಟ್ಟಿರುವ ನೋವಿನಿಂದಾಗಿ ಇರಬಹುದೇ ಎಂದು ಅವನು ಯೋಚಿಸಿದುದೂ ಇದೆ. ಈ ಪ್ರಶ್ನೆಗೆ ಸಮರ್ಪಕ ಉತ್ತರ ದೊರಕುತ್ತಿದ್ದಿಲ್ಲ.

ಹೊರಡುವ ದಿನ ಬಂದಾಗ ಮಾತ್ರ ರಾಯರು ಅನಂತನನ್ನು ತಮ್ಮ ಮನಸ್ಸಿನ ಸಂದೇಹ ನಿವಾರಣೆಗಾಗಿ ಮಾತನಾಡಿಸಿದರು.

"ಭಾರತಿಯನ್ನು ನಿನ್ನ ವಶ ಒಪ್ಪಿಸಿ ಹೊರಟುಹೋಗುತ್ತೇನೆ, ಅನಂತ."

"ಯಾಕೆ ಈ ಮಾತು, ಮಾವಯ್ಯಾ?"

"ನಿನ್ನಲ್ಲಿ ನನಗೆ ವಿಶ್ವಾಸವಿದೆ; ಸಂಪೂರ್ಣ ವಿಶ್ವಾಸವಿದೆ. ಆದರೆ ಒಂದು ಪರಂಪರೆಯನ್ನೆ, ಒಂದು ಜನಾಂಗದ ಇತಿಹಾಸವನ್ನೆ ಬದಲಿಸುವ ಹೋರಾಟದಲ್ಲಿ ನನ್ನ ಮಗುವಿಗೆ ದುಃಖವಾಗಬಾರದು, ಅನಂತ."

ಅನಂತ ಈಗ ಮಾತ್ರ ಮಾತನಾಡಲಿಲ್ಲ.

"ಭಾರತಿ, ಸುಖವುಂಡು ಬೆಳೆದ ಹುಡುಗಿ, ಅನಂತ. ಆ ಕಾರಣ ಕಷ್ಟವನ್ನು ಸಹಿಸಲಾರಳು ಎಂದು ನಾನು ಹೇಳುವುದಿಲ್ಲ. ಅಷ್ಟು ದೌರ್ಬಲ್ಯವನ್ನು ನಾನು ಅವಳಿಗೆ ಆರೋಪಿಸುವುದಿಲ್ಲ. ಆದರೆ ಎಲ್ಲ ಪ್ರಲೋಭನಗಳಿಂದ ವಿಮುಕ್ತವಾದ ಹೋರಾಟದ ವಿರಕ್ತ ಜಗತ್ತಿನಲ್ಲಿ ಅರಳುವ ಹೂವಲ್ಲ ಅದು."

ಶ್ರೀಪತಿರಾಯರ ಮಾತಿನಲ್ಲಿ ತುಂಬ ದುಃಖವಿತ್ತು. ಅನಂತನಿಗೆ ಆಶ್ಚರ್ಯವಾಯಿತು. ಆದರೆ ಮಾವನಿಗೆ ಏನು ಸಮಾಧಾನ ಹೇಳುವುದೆಂದು ಮಾತ್ರ ತಿಳಿಯಲಿಲ್ಲ.

"ಆಕೆ ಏನು ತಪ್ಪುಮಾಡಿದರೂ ನೀನು ಮರೆತು ಸುಧಾರಿಸಿಕೊಂಡು ಹೋಗು. ನಿನ್ನ ಕೈಯಲ್ಲಿ ಪಳಗಿ ಅವಳು ಅಪರಂಜಿಯಾಗಲಿ. ಜಗತ್ತಿನ ಕಷ್ಟಗಳನ್ನೆಲ್ಲ ತನ್ನ ಮಡಿಲಲ್ಲಿ ಹಾಕಿಕೊಂಡು, ತನ್ನ ಸುಖವನ್ನು ಜಗತ್ತಿಗೆ ಕೊಡುವ ಸೇವಾಬುದ್ಧಿ ಅವಳಲ್ಲಿ ಜಾಗ್ರತವಾಗಲಿ."

ಈಗ ಅನಂತನ ಕಣ್ಣಲ್ಲಿ ನೀರು ತುಂಬಿತ್ತು. ಕಣ್ಣ ಎವೆ ಚಲಿಸುತ್ತಿದ್ದಿಲ್ಲವಾದಕಾರಣ ಆ ನೀರು ಕೆಳಗೆ ಉದುರದೆ ನಿಂತಿತ್ತು. ಅಳಿಯನ ಮುಖಭಾವವನ್ನು ಗುರುತಿಸಿದ ಶ್ರೀಪತಿರಾಯರು ಸಮಾಧಾನಕ್ಕೆಂಬಂತೆ ಹೇಳಿದರು:

"ಈಗ ನೀನು ಏನೆಲ್ಲ ಕೆಲಸಗಳನ್ನು ಹಿಡಿದಿರುವೆಯೋ ನನಗೆ ತಿಳಿದಿಲ್ಲ. ನಿನ್ನ ಹೋರಾಟದ ಕಾರ್ಯಕ್ಷೇತ್ರ ನಮ್ಮ ಸಮಾಜದ ಯಾವುದೇ ಕ್ಷೇತ್ರಕ್ಕೆ ವಿಸ್ತರಿಸಲಿ; ಒಂದು ಮಾತನ್ನು ಮಾತ್ರ ಮರೆಯಬೇಡ. ಸ್ವಾತಂತ್ರ್ಯ ಬಂದೊಡನೆ ನಮ್ಮ ದುಃಖಗಳೆಲ್ಲ ನಿವಾರಣೆಯಾದಂತಾಗುವುದಿಲ್ಲ."

ಮಾವ ಏಕೆ ಈ ಮಾತು ಹೇಳುತ್ತಿರುವರೆಂಬುದು ಅನಂತನಿಗೆ ಸ್ಪಷ್ಟವಾಗಲಿಲ್ಲ. ಆದರೂ ಧೈರ್ಯದಿಂದಲೇ ಉತ್ತರಿಸಿದ:

"ನನಗೂ ಕಾಂಗ್ರೆಸ್ಸಿಗೂ ಇದ್ದ ಎಲ್ಲ ಸಂಬಂಧಗಳೂ ಜೂನ್ ಮೂರರಂದು ಮುಗಿದಿವೆ, ಮಾವಯ್ಯ. ನಾನು ಕಾಂಗ್ರೆಸ್ಸಿನಿಂದ ಹೊರ ಬಂದಿದ್ದೇನೆ.

"ಹಾಗೇನು?" ಎಂದು ಕೇಳಿ ಶ್ರೀಪತಿರಾಯರು ಮಾತು ಮುಂದುವರಿಸಿದರು:

"ಅದೇ ಕಾರಣ ನಾಗೇಶರಾಯರೊಡನೆ ನೀನು ಅಷ್ಟು ರೇಗಿಕೊಂಡದ್ದು?"

ಅನಂತ ನಗತೊಡಗಿದ.

"ಅವರ ವಿಚಾರ ಮಾತನಾಡದೆ ಇರುವುದೇ ಲೇಸು ಮಾವಯ್ಯ. ಅಂಥ ಸ್ವಪ್ರತಿಷ್ಠೆಯ ಸ್ವಲಾಭಪ್ರವೃತ್ತಿಯ ವ್ಯಕ್ತಿಗಳ ಸೇರುವಿಕೆಯಿಂದಾಗಿಯೇ ಕಾಂಗ್ರೆಸ್ಸಿಗೆ ಈ ಗತಿ ಬಂದದ್ದು."

ಶ್ರೀಪತಿರಾಯರು ಈ ವಿಚಾರ ಮಾತು ಬೆಳೆಸಲಿಲ್ಲ.

ಹೊರಟು ನಿಂತ ತಂದೆಯನ್ನು ಕಂಡು ಹೆದರಿಕೊಂಡುದು ಭಾರತಿ. ವಿ.ಟಿ. ನಿಲ್ದಾಣೆಯಲ್ಲಿ ಗಾಡಿಯಲ್ಲಿ ಕುಳಿತ ತಂದೆ ಕಣ್ಮರೆಯಾಗುವ ತನಕ ಗಂಡನ ಬಳಿ ನಿಂತು ಕೈಯಾಡಿಸುತ್ತ ವಿದಾಯ ವಂದನೆ ಸಲ್ಲಿಸಿದ ಭಾರತಿಯ ಮನಸ್ಸು ಕಳವಳದ ಸಾಗರವಾಗಿತ್ತು. ತನ್ನ ಸಂಸಾರಜೀವನ ಈ ರೀತಿ ಆರಂಭವಾಗುವುದೆಂದು ಆಕೆ ಕನಸಿನಲ್ಲಿಯೂ ಯೋಚಿಸಿರಲಿಲ್ಲ. ಓದು ಕೊಟ್ಟಿದ್ದ ಧೈರ್ಯವೇನೋ ತುಂಬ ಇದ್ದಿತ್ತಾದರೂ, ಸಲಿಗೆ ಬೆಳೆಯಲು ಅವಕಾಶವಿರದೆ ಗಂಡನೊಡನೆ ಮಾತನಾಡುವಾಗಲೂ ಯಾವುದೋ ಒಂದು ಹೆದರಿಕೆಯು ಕೀಳರಿಮೆ ಅವಳನ್ನು ಕಾಡುತ್ತಿತ್ತು.

ಆದರೂ ತುಂಬ ಧೈರ್ಯ ತಂದುಕೊಂಡು ಆ ರಾತ್ರಿ ಮಲಗುವ ಮುನ್ನ ಗಂಡನೊಡನೆ ಕೇಳಿದಳು:

"ಸ್ವಲ್ಪ ದೊಡ್ಡ ಮನೆ ಹಿಡಿದಿದ್ದರೇನು ನಷ್ಟವಾಗುತ್ತಿತ್ತು. ನಾಗೇಶ ರಾಯರು ಕೊಡಿಸುತ್ತೇನೆ ಎಂದಾಗ, ಯಾಕೆ ಬೇಡ ಎಂದು ಹೇಳಿದಿರಿ ?"

"ಇದಕ್ಕೇನಾಗಿದೆ, ಭಾರೀs ?"

"ನಾಲ್ಕು ಹೆಜ್ಜೆ ತಿರುಗಲು ಸ್ಥಳವಿಲ್ಲ. ಅರೆವಾಸಿ ಜಾಗದಲ್ಲಿ ಸಾವಿರ ಪುಸ್ತಕ ಬೇರೆ."

ಅನಂತ ನಗತೊಡಗಿದ. ಆದರೆ ಆ ನಗೆಯಲ್ಲಿ ವೇದನೆ ತುಂಬಿದ್ದಿತೆಂದು ಭಾರತಿಗೆ ತಿಳಿಯಲಿಲ್ಲ.

ಹೊಸ ಮನೆಯ ಗಡಿಬಿಡಿಯಲ್ಲಿ, ತನ್ನ ಆಫೀಸಿನಿಂದ ರಜೆ ದೊರಕಿಸಿ ಕೊಂಡಿದ್ದ ಅನಂತ ಪತ್ರಿಕೆಯ ಕೆಲಸಕ್ಕೂ ಕೈಹಾಕಿರಲಿಲ್ಲ. ಎಲ್ಲ ಹೊಣೆಯನ್ನು ರಾಜೀವನಿಗೊಪ್ಪಿಸಿಕೊಟ್ಟು ನಿಶ್ಚಿಂತನಾಗಿದ್ದ. ಈಗ ಶ್ರೀಪತಿರಾಯರು ಹೊರಟು ಹೋದೊಡನೆ ತನ್ನ ಕರ್ತವ್ಯದ ಪ್ರಶ್ನೆ ಬಂತು.

ಮತ್ತೆ ಆಫೀಸು ಸೇರಿದ ದಿನ, ಕೆಲಸ ಮುಗಿಸಿ, ಅನಂತ ಪ್ರೆಸ್ಸಿನ ದಾರಿ ಹಿಡಿದ. ಅಂದು ಮುಂಜಾನೆ "ಸಂಜೆ ಎಷ್ಟು ಗಂಟೆಗೆ ಬರುತ್ತೀರಿ ?" ಎಂದು ಭಾರತಿ ಕೇಳಿದಾಗ "ತಡವಾಗಬಹುದು. ನನಗಾಗಿ ನೀನು ಕಾಯುವುದು ಬೇಡ. ಊಟ ಮಾಡಿ ಮಲಗಿಕೊ" ಎಂದು ಸಮಾಧಾನ ಹೇಳಿ ಬಂದಿದ್ದ. ಭಾರತಿಗೆ ಅದು ಸಮಾಧಾನವಾಗಿರಲಿಲ್ಲ. ಈಟಿಯ ಇರಿತವಾಗಿತ್ತು.

ಪ್ರೆಸ್ಸಿನಲ್ಲಿ ರಾಜೀವ ಮತ್ತು ಸೋಮಯಾಜಿ ಇಬ್ಬರೆ ಇದ್ದರು. ಗಡ್ಡ ತೆಗೆಸಿ ಬಂದಿದ್ದ ಅನಂತನನ್ನು ಕೆಣಕಲು ರಾಜೀವನಿಗೆ ಸುಲಭವಾಯಿತು.

"ಸನ್ಯಾಸಿ ಸಂಸಾರಿಯಾದಮೇಲೆ ಪತ್ರಿಕೆಯ ನೆನಪೆಲ್ಲಿ ಉಳಿಯ ಬೇಕು ?"

"ನೆನಪಿದೆಯೆಂದೇ ಈಗ ಬಂದಿಲ್ಲವೇನು ?"

"ಈಗ ಬಂದಿದ್ದೀರಿ. ಬರಲಿಲ್ಲವೆಂದು ಯಾರು ಹೇಳಿದ್ದಾರೆ ? ಬಳಗದ ಮಹಾಸಭೆ ಮೊನ್ನೆ ರಾತ್ರಿ ಎಂಟು ಗಂಟೆಗೆಂದು ನೆನಪಿರಲಿಲ್ಲ, 'ಜೈ ಹಿಂದ್' ಶಾಲೆಯ ಅಧ್ಯಾಪಕ ವರ್ಗದ ಅವಸರದ ಸಭೆಗೆ ಕರೆಬಂದಿದ್ದುದು ನೆನಪಿರಲಿಲ್ಲ. ಟಾಡ್ ಎಂಡ್ ಕಂಪೆನಿಯ ಕೆಲಸಗಾರರ ಯೂನಿಯನ್ನಿನ ಕಾರ್ಯದರ್ಶಿ ಮೂರು ಸಲ ನಿಮ್ಮನ್ನು ಕೇಳಿಕೊಂಡು ಬಂದಿದ್ದ. ಪೆಟಿಟ್ ಇಂಜಿನಿಯರಿಂಗ್ ವರ್ಕ್ಸ್‌ನ ಯೂನಿಯನ್ ಮಹಾಸಭೆಯಲ್ಲಿ ಭಾಷಣ ಮಾಡುವುದಾಗಿ ಮಾತು ಕೊಟ್ಟಿದ್ದಿರಂತೆ. ಎರಡು ಸಲ ಬಂದು ಕೇಳಿಹೋದರು. ಶಾರದಾ ಭವನಕ್ಕೆ

ಟೆಲಿಫೋನ್ ಮಾಡಿದರೂ, ಆಸಾಮಿ ನಾಪತ್ತೆ.”

ಅನಂತ ಎಲ್ಲವನ್ನೂ ಮರೆತಿದ್ದ—ಹೊಸ ಮನೆಯ ಹೊಸ ಜೀವನದ ಸಂಭ್ರಮದಲ್ಲಿ.

“ಆದರೆ ಏನು ಮಾಡುವುದು, ರಾಜೂ ; ಪರಿಸ್ಥಿತಿ ಹಾಗಿತ್ತು. ಬಂದ ಹೆಂಡತಿ ಮಾವಂದಿರನ್ನು ಅವರ ಪಾಡಿಗೆ ಬಿಟ್ಟುಬಿಟ್ಟು ಬಂದಿದ್ದರೆ ಸರಿಯಾಗುತ್ತಿತ್ತೇ ?”

“ಅದಕ್ಕೇ ನಾನು ಹೇಳಿದ್ದು ; ಸನ್ಯಾಸಿ ಸಂಸಾರಿಯಾಗಿದೆ, ಎಂದು.”

ಅನಂತ ನಗತೊಡಗಿದ. ರಾಜೀವ ಮಾತು ಮುಂದುವರಿಸಿದ :

“ಇಷ್ಟೆಯೇ ? ಏನಾದರೂ ತಪ್ಪುಮಾಡಿ ಹೋಗಿಬಿಡುವುದು. ಉಳಿದವರಿಗೆ ಅದರ ಉತ್ತರದಾಯಿತ್ವ ; ಪ್ರಾಣಸಂಕಟ.”

“ಏನಾಯಿತೋ ?”

“ ‘ಮೌಂಟ್‌ಬ್ಯಾಟನ್ ಪ್ಲಾನ್’ನ ಮೇಲೆ ಏನು ಮಾಡಿದಿರಿ ?”

“ಯಾಕೆ, ಲೇಖನ ದೊಡ್ಡದಾಯಿತೆ ?”

ದೊಡ್ಡದಿರಲಿ, ಸಣ್ಣದಿರಲಿ, ಯಾರು ಬೇಸರಪಡುತ್ತಾರೆ ? ಆದರೆ ಅಚ್ಚಾದಮೇಲೆ ಎದ್ದ ಬಿರುಗಾಳಿಗೆ ಯಾರು ಹೊಣೆ ?”

“ಎಂದರೆ ?”

“ಎಂದರೆ, ಸಿ.ಐ.ಡಿ. ಆಫೀಸಿನಿಂದ ನಿಮಗೆ ಹೇಳಿಕಳಿಸಿದ್ದರು : ನಿಮ್ಮನ್ನು ಹುಡುಕಿಕೊಂಡು ಬಂದಿದ್ದರು. ಈ ಅಭಿಪ್ರಾಯಗಳೆಲ್ಲ ನಿಮ್ಮವು ಹೌದೇ ಎಂದು ಕೇಳಲು.”

“ಹಾಗೇನು ?”

“ಮತ್ತೇನು ? ಸಾಲಮದಕ್ಕೆ ಬೇರೆ ಬೇರೆ ಮಹಾನ್ ಮಹಾನ್ ಪ್ರಭೃತಿಗಳಿಂದ ಉಪದೇಶ ಬಂದಿದೆ : ‘ಹೊಸ ಪತ್ರಿಕೆ. ಜೋಕೆ. ಸರಕಾರ ಮುಟ್ಟುಗೋಲು ಹಾಕುವಂತಾಗಬಾರದು. ಬಾಗಿಲು ಹಾಕಿಕೊಳ್ಳಬೇಕಾದೀತು’ ಎಂದು.”

ಈಗ ಮಾತನಾಡಿದವರು ಸೋಮಯಾಜಿ. ಅನಂತ ಇನ್ನೂ ರಾಜೀವನ ಮಾತುಗಳನ್ನೇ ಮೆಲುಕು ಹಾಕುತ್ತಿದ್ದ.

“ಇದನ್ನೆಲ್ಲ ಮನಸ್ಸಿಗೆ ಹಚ್ಚಿಕೊಳ್ಳಬೇಡ ಅನಂತ. ಇದು ಹೆದರಿಸುವ ರೀತಿ—‘ಈ ರೀತಿಯ ಟೀಕೆಯಿಂದ ನಿನಗೆ ಉಳಿಗಾಲವಿಲ್ಲ’ ಎಂದು ಎಚ್ಚ

ರಿಸುವ ವಿಧಾನ ಇದು. ಒಂದು ವೇಳೆ ಅಂಥ ಟೀಕೆಯಲ್ಲಿ ಆಕ್ಷೇಪಣೀಯವೆಂದು ಖಂಡಿಸಬಹುದಾದ ಯಾವುದಾದರೊಂದು ಹುಳುಕು ಇದೆಯಾದರೆ, ಅವರು ಕೇಳಿಕೊಂಡು ಬರುವುದಿಲ್ಲ. ತಮ್ಮ ಕೆಲಸ ತಾವು ಮಾಡುತ್ತಾರೆ.''

ಸೋಮಯಾಜಿಯವರ ಮಾತುಗಳಿಂದ ಅನಂತನಿಗೆ ತುಸು ಸಮಾಧಾನವಾಯಿತು. ಹೀಗಾಗಿ ಮಾತು ಬೇರೆ ವಿಚಾರಗಳ ಕಡೆ ತಿರುಗಿತು.

"ಪ್ರೆಸ್ಸಿನ ಬಿಲ್ಲು ಕೊಟ್ಟರೇ ?"

"ಮೇ ಅಂತ್ಯದವರೆಗೆ ಕೊಟ್ಟಾಯಿತು. ಈ ಸಲದ ಹಣಕ್ಕೆ ಐದುನೂರು ರೂಪಾಯಿ ಸಂದಾಯವಾಗಿದೆ. ಇನ್ನು ಐದುನೂರು ಕೊಡಬೇಕು."

"ಎಲ್ಲಿಂದ ಹಣ ಸಂಗ್ರಹಿಸಿದಿರಿ ? ಏಜಂಟರ ಹಣ ಬಂತೇ ?"

"ಏಜಂಟರ ಹಣ ನಂಬಿ ಕನ್ನಡ ಪತ್ರಿಕೆಗಳು ಪ್ರೆಸ್ ಬಿಲ್ ತುಂಬಿಸುವುದು ಸಾಧ್ಯವೇ, ಅನಂತ ?"

"ಹಾಗಾದರೆ ?"

"ಹಾಗಾದರೆ, ಯಾವಾಗಲೂ ಪ್ರಶ್ನೆಯೆ ? ಸದ್ಯ ಏನೋ ಮಾಡಿದೆ. ಆದರೆ ಆ ಸಹಾಯವನ್ನು ನಂಬಿ ಎಷ್ಟರ ತನಕ ಮುಂದುವರಿಯಬಹುದು ಎಂಬುದು ಮಾತ್ರ ಸಮಸ್ಯೆಯೆ."

"ಈ ರೀತಿಯಾದರೆ ಪತ್ರಿಕೆ ಮುಂದರಿಯುವುದೆ ?"

"ನಾನು ಕೇಳುವುದೂ ಅದನ್ನೇ ನಾಲ್ಕು ದಿನ ಕಾರಿನಲ್ಲಿ ಓಡಾಡಿದಿಯಲ್ಲ; ನಾಗೇಶರಾಯರ ಹತ್ತಿರ ಸ್ವಲ್ಪ ಜಾಹೀರಾತಿಗಾದರೂ ಸಹಾಯ ಮಾಡಲು ಕೇಳಬಾರದಿತ್ತೆ ?"

"ಅವರ ಸ್ವಭಾವ ಗೊತ್ತಿದ್ದೂ ನೀವು ಹೀಗೆ ಕೇಳುತ್ತೀರಲ್ಲ, ಸೋಮಯಾಜಿಯವರೆ. ಚಂದಾಹಣ ಆರೂವರೆ ರೂಪಾಯಿಗಳಿಗೆ ಇಲ್ಲ ಎಂದ ಆಸಾಮಿ ಅದು. ಆದರೂ ಸಹಾಯ ಮಾಡಿಯಾರು, ಒಂದು ಶರ್ತದ ಮೇಲೆ."

"ಏನದು ಶರ್ತ ?"

"ಕಾಂಗ್ರೆಸ್ಸನ್ನು ಟೀಕಿಸುವ ಸ್ವಾತಂತ್ರ್ಯ ಬಿಟ್ಟುಕೊಡಿ—ಎಂದರೆ ನಿಮಗೆ ಒಳ್ಳೆಯದಾಗುತ್ತದೆ."

"ನನ್ನ ಬೆನ್ನು ನೀವು ತುರಿಸಿ, ನಿಮ್ಮ ಬೆನ್ನು ನಾನು ತುರಿಸುತ್ತೇನೆ." ಹೀಗೆ ನಗುತ್ತ ಹೇಳಿದುದು ರಾಜೀವ.

"ಅದಿರಲಿ. ಈಗ ನಮ್ಮ ಸರ್ಕ್ಯುಲೇಶನ್ ಹೇಗಿದೆ?'' ಅನಂತ ವಿಷಯ ಬದಲಿಸಿದ.

"ಒಂದು ವಾರದಲ್ಲಿ ಏನು ಮಹಾ ಬದಲಾವಣೆ? ಮುನ್ನೂರು ಪ್ರತಿ. ಹೆಚ್ಚು ಹೋಗಿವೆ, ಅಷ್ಟೆ.''

"ಪ್ರತಿ ವಾರವೂ ಮುನ್ನೂರು ಪ್ರತಿಗಳು ಹೆಚ್ಚುತ್ತ ಹೋದರೆ?''

"ಆದರೆ, ಹೋದರೆ, ಹತ್ತೀ ಬೆಳೆದರೆ.''

"ಇಷ್ಟರಲ್ಲಿಯೇ ನಿರಾಶೆ ಬಂತೇನೋ.''

"ನಿರಾಶೆಯಲ್ಲ, ಅನಂತಾ. ಸರ್ಕ್ಯುಲೇಶನ್ ನಂಬಿ ಪತ್ರಿಕೆ ಬದುಕುವುದಿಲ್ಲ. ಜಾಹೀರಾತು ಇಲ್ಲದಿದ್ದರೆ ಪತ್ರಿಕೆ ಸತ್ತಂತೆ. ಪ್ರಸಾರ ಹೆಚ್ಚಿದಷ್ಟು ಖರ್ಚೂ ಹೆಚ್ಚು. ಲಾಭ ಬೇಕಾದರೆ ಜಾಹೀರಾತು ಬೇಕು.''

"ಜಾಹೀರಾತು ಬೇಕಾದರೆ, ವರ್ಚಸ್ಸು ಬೇಕು.''

"ಅದು ನಿಜವೆನ್ನು.''

"ವರ್ಚಸ್ಸು ಸಿಗಬೇಕಾದರೆ ಸ್ವಾತಂತ್ರ್ಯವನ್ನು ಬಿಟ್ಟುಕೊಡಬೇಕು. ಈ ವಿಷವರ್ತುಲದಿಂದ ವಿಮೋಚನೆಯಿಲ್ಲ.''

ಎಲ್ಲರು ತುಸುಹೊತ್ತು ಮೌನವಾಗಿ ಕುಳಿತಿದ್ದರು. ಆಮೇಲೆ ಅನಂತ ಬಾಕಿಯುಳಿದಿದ್ದ ಪತ್ರವ್ಯವಹಾರದ ಕಡೆ, ಮುಂದಿನ ವಾರದ ಸಂಚಿಕೆಯ ವಿಷಯಗಳ ಹಂಚಿಕೆಯ ಕಡೆ ಗಮನಕೊಟ್ಟು ಎರಡು ತಾಸು ಕೆಲಸ ಮಾಡಿದ.

ರಾತ್ರಿ ಮನೆಗೆ ಮರಳಿದಾಗ ಘಂಟೆ ಹತ್ತಾಗಿತ್ತು.

ಭಾರತಿ ಅನಂತನ ದಾರಿ ಕಾಯುತ್ತಿದ್ದಳು. ಸೋತು ಬಂದಿದ್ದ ಗಂಡನ ಮುಖ ನೋಡಿ ಕಳವಳದಿಂದಲೇ ಕೇಳಿದಳು:

"ಇಷ್ಟು ರಾತ್ರಿ ಮಾಡಿಕೊಂಡರೆ ಆಯಾಸವಾಗುವುದಿಲ್ಲವೆ?''

ಅನಂತ ಅವಳ ಪ್ರಶ್ನೆಯನ್ನು ಉತ್ತರಿಸುವುದನ್ನು ಬಿಟ್ಟು ಮರು ಸವಾಲು ಹಾಕಿದ:

"ನೀನು ಊಟ ಮಾಡಿಲ್ಲವೇನು?''

"ನೀವು ಬಾರದೆ ನಾನು ಹೇಗೆ ಊಟ ಮಾಡಲಿ?''

"ಬೆಳಿಗ್ಗೆ ಹೇಳಿ ಹೋಗಿಲ್ಲವೇನು?''

"ಆದರೆ ನನಗೆ ಹಾಗೆ ಊಟ ಸೇರುವುದಿಲ್ಲ.''

ಸಿಟ್ಟು ಬಂದಿದ್ದ ಅನಂತನಿಗೆ ಹೆಂಡತಿಯ ಕೊನೆಯ ಮಾತಿನಿಂದ

ತುಸು ಸಮಾಧಾನವಾಯಿತು. ಮರುಮಾತನಾಡದೆ ಭಾರತಿಯನ್ನು ಎಳೆದು ತನ್ನ ಬಳಿಯೇ ಮಣೆ ಹಾಕಿ ಕುಳಿತುಕೊಳ್ಳುವಂತೆ ಒತ್ತಾಯ ಮಾಡಿದ. ಇಬ್ಬರೂ ಜೊತೆಯಾಗಿ ಊಟ ತೀರಿಸಿದರು.

ಅನಂತನ ಜೀವನದ ಅನಿಯಮಿತ ಅವ್ಯವಸ್ಥೆಗೆ ಹೊಂದಿಕೊಳ್ಳಲು ಎರಡು ತಿಂಗಳಕಾಲ ಭಾರತಿ ಒಂದು ಹೋರಾಟವನ್ನೇ ಮಾಡಿದಳು. ಆದರೆ ಅನಂತನಿಗೆ ಇದಾವುದರ ಕಡೆಗೂ ಗಮನವಿದ್ದಿಲ್ಲ. ಮೊದಮೊದಲು ತಾನು ದುಡಿದು ಬಂದು ಮನೆ ಸೇರಿದ ಮೇಲೆ ದಿನವಿಡೀ ಮಾಡಿದ ಕೆಲಸಗಳ ವರದಿಯನ್ನು ಭಾರತಿಗೆ ಒಪ್ಪಿಸುವ ಸಡಗರ ತೋರಿಸಿದ. ಆದರೆ ಅದಕ್ಕೆ ದೊರಕಿದ ಅರೆಮನಸ್ಸಿನ ಸ್ವಾಗತದಿಂದಾಗಿ ನೊಂದುಕೊಂಡು ಆತ ಆ ಕೆಲಸವನ್ನು ನಿಲ್ಲಿಸಿಬಿಟ್ಟ.

ಆದರೆ ಅನಂತನ ಕಾರ್ಯಾಸಕ್ತಿಗೆ ಈ ನೋವಿನಿಂದ ಯಾವ ತೊಂದರೆಯೂ ಆಗಲಿಲ್ಲ.

'ಮೌಂಟ್‌ಬ್ಯಾಟನ್ ಯೋಜನೆ'ಯ ಕುರಿತಾದ ಲೇಖನ ವಿಚಾರವಾದಿಗಳ ಕುತೂಹಲವನ್ನು ಕೆರಳಿಸಿದೆಯೆಂದು ತಿಳಿದ ಮೇಲೆ ಅನಂತನ ವಿಚಾರಧಾರೆ ಇನ್ನಷ್ಟು ತೀಕ್ಷ್ಣವಾಯಿತು.

ಪತ್ರಿಕೆಯ ಕೀರ್ತಿ ಹೆಚ್ಚುತ್ತ ಹೋಯಿತು.

ವಿಭಜನೆಯ ತತ್ವವನ್ನು ನಾಡಿನ ಹಿರಿಯ ಸಂಸ್ಥೆ ಒಪ್ಪಿಕೊಂಡಮೇಲೆ, ಇದರಿಂದಾದ, ಆಗುವ ಪರಿಣಾಮಗಳ ಕುರಿತು 'ಕಹಳೆ'ಯಲ್ಲಿ ಅವ್ಯಾಹತವಾಗಿ ಬಂದ ಲೇಖನಮಾಲೆ ಈ 'ಅನಂತ' ಯಾರಿರಬಹುದೆಂಬುದರ ಬಗ್ಗೆ ಜನತೆಯಲ್ಲಿ ಆಸಕ್ತಿ ಕೆರಳಿಸಲು ಕಾರಣವಾಯಿತು.

ಮುಂಬಯಿಯಲ್ಲೂ ಕರ್ನಾಟಕದಲ್ಲೂ 'ಕಹಳೆ' ಮರುದನಿ ಕೊಡಹತ್ತಿತು.

ಅನಂತ ಅಹರ್ನಿಶಿ ದುಡಿಯುತ್ತಿದ್ದ.

ಪತ್ರಿಕೆಯ ಕೀರ್ತಿ ಹೆಚ್ಚುತ್ತ ಹೋಗುತ್ತಿದ್ದುದು ನಿಜ. ಪತ್ರಿಕೆಯನ್ನು ಹೆಚ್ಚು ಹೆಚ್ಚು ಮಂದಿ ಮೆಚ್ಚುತ್ತಿದ್ದುದೂ ನಿಜ. ಆದರೆ ಪತ್ರಿಕೆಯ ಆರ್ಥಿಕ ಸ್ಥಿತಿಯಲ್ಲಿ ಮಾತ್ರ ಗಮನಾರ್ಹ ಬದಲಾವಣೆಯೇನೂ ಆಗಲಿಲ್ಲ. ದಿನದಿಂದ ದಿನಕ್ಕೆ ಸಾಲ ಮಾತ್ರ ಹೆಚ್ಚುತ್ತಿತ್ತು. ಜೂನ್ ತಿಂಗಳ ಮುದ್ರಣದ ವೆಚ್ಚವನ್ನು ಸೋಮಯಾಜಿಗಳು ಹೇಗೋ ತೀರಿಸಿದ್ದರು. ಜುಲೈ ತಿಂಗಳಲ್ಲಿ

ಮುಂಗಡ ಹಣ ಕೊಡುವುದು ಸಾಧ್ಯಲಿವಾಗಲಿಲ್ಲವಾಗಿ ಮುದ್ರಣ ಕೆಲಸ ನಿಲ್ಲಿಸುವೆನೆಂದು ವ್ಯವಸ್ಥಾಪಕ ಬೆದರಿಕೆ ಹಾಕಿದ್ದ. ಆದರೂ ಹೇಗೋ ಸಮಾಧಾನ ಪಡಿಸಿ ಸೋಮಯಾಜಿಗಳು ತಿಂಗಳು ಕಳೆದಿದ್ದರು.

ಆಗಸ್ಟ್‌ನಲ್ಲಿ, ಸ್ವಾತಂತ್ರ್ಯ ದಿನಾಚರಣೆಯ ಸಂಬಂಧ ವಿಶೇಷ ಸಂಚಿಕೆ ಹೊರಡಿಸಬೇಕು ಎನ್ನುವ ಎತ್ತುಗಡೆಯಲ್ಲಿರುವಾಗ ವ್ಯವಸ್ಥಾಪಕ ಖಂಡಿತವಾಗಿ ಹೇಳಿಬಿಟ್ಟ :

"ನಿಮ್ಮ ಆದರ್ಶದ ಹುಚ್ಚು ನನಗಿಲ್ಲ. ಕಳೆದ ತಿಂಗಳ ಬಾಕಿ ಹಣ ಸಂದಾಯಮಾಡಿ, ಈ ಸಲಕ್ಕೆ ಮುಂಗಡ ಹಣ ಕೊಡದಿದ್ದರೆ, ನಾನು ಪತ್ರಿಕೆ ಮುದ್ರಿಸುವುದಿಲ್ಲ.''

ಸೋಮಯಾಜಿಗಳು ಬಳಗದ ಗೆಳೆಯರಿಂದ ಕಷ್ಟಪಟ್ಟು ಹೇಗೂ ಐದುನೂರು ರೂಪಾಯಿ ಸಂಪಾದಿಸಿಕೊಂಡು ಅನಂತನ ಬಳಿಗೆ ಬಂದರು.

ಹಿಂದಿನ ಸಂದರ್ಭದ ನೆನಪು ಬಂದ ಅನಂತ ಮಾತನಾಡದೆ ಆ ದಿನ ಬಂದಿದ್ದ ಸಂಬಳದ ಹಣದಲ್ಲಿ ಅರೆವಾಸಿ ತೆಗೆದು ಅವರ ಕೈಲಿಟ್ಟ.

"ನಿನ್ನೊಡನೆ ಒಂದು ಮಾತು ಹೇಳಬೇಕಾಗಿದೆ, ಅನಂತ.''

"ಏನದು ?''

"ನಾನು ಯಾರೊಡನೆಯೂ ಈ ಮಾತು ಹೇಳಿಲ್ಲ. ಕಳೆದ ತಿಂಗಳು ಕೊಡಲು ಹಣ ಸಂಪೂರ್ಣ ಸಿಗದಿದ್ದಾಗ, ಒಂದು ವ್ಯಕ್ತಿಯ ನೆರವು ಕೇಳಲು ಹೋಗಿದ್ದೆ. ಹಿಂದೆ ಮುಂದೆ ನೋಡದೆ ಆ ವ್ಯಕ್ತಿ ಸಹಾಯ ಮಾಡಿತು. ಈ ಸಲವೂ ಅವರು ಸಹಾಯ ಮಾಡುವ ಭರವಸೆಯಿದೆ. ಆದರೆ ಅವರು ದಿಲ್ಲಿಗೆ ಹೋಗಿರುವ ನಿಮಿತ್ತ ನಾನು ಏನು ಮಾಡಲೂ ಸಾಧ್ಯವಾಗಲಿಲ್ಲ. ಹೀಗಾಗಿ ನಿನ್ನ ಬಳಿ ಬರಬೇಕಾಯಿತು.'' ಎಂದರು.

ಅನಂತ "ಚಿಂತೆಯಿಲ್ಲ'' ಎಂದು ಯೋಚಿಸುತ್ತಲೇ ಮನೆ ತಲಪಿದಾಗ ಭಾರತಿ ಉಡುಪರಿಂದ ಬಂದಿದ್ದ ಒಂದು ಕಾಗದ ತೋರಿಸಿದಳು. 'ಪಾರ್ವತಿ ಹೆತ್ತಿದ್ದಾಳೆ. ಮಗು ತೀರಿಕೊಂಡಿತೆಂದು ತಿಳಿಸಲು ಬೇಸರವಾಗುತ್ತದೆ. ಅವಳ ಆರೋಗ್ಯವೂ ನೆಟ್ಟಗಿಲ್ಲ. ಒಂದು ನೂರು ರೂಪಾಯಿಗಳನ್ನಾದರೂ ಕಳುಹಿಸದೆ ಇರಬೇಡ' ಎಂದಿತ್ತು ಅದರಲ್ಲಿ.

ಅನಂತ ಆ ರಾತ್ರಿ ಊಟವನ್ನೇ ಮಾಡಲಿಲ್ಲ.

ಗಂಡನ ಕಳವಳ ಭಾರತಿಗೆ ತಿಳಿದಿತ್ತು. ಆದರೂ ಆಕೆ ಮಾತನಾಡಲಿಲ್ಲ.

ಆತ ನಿದ್ದೆಯಿಲ್ಲದೆ ರಾತ್ರೆಯಿಡೀ ಕಳೆದಿದ್ದನೆಂದು ತಿಳಿದಿತ್ತು. ಆದರೂ ಮಾತನಾಡಲಿಲ್ಲ. ಬೆಳಿಗ್ಗೆ ಆತ ಆಫೀಸಿಗೆ ಹೊರಡುವ ಹೊತ್ತಿಗೆ, ತನ್ನ ಚಿಪ್ಪಿನ ಸರವನ್ನು ತಂದು ಅವನ ಕೈಗೆ ಕೊಟ್ಟು, "ಇದನ್ನು ಅಡವಿಟ್ಟು ಎಲ್ಲಿಂದಾದರೂ ಹಣ ತನ್ನಿ" ಎಂದಳು.

ಅನಂತನ ಕಣ್ಣಲ್ಲಿ ನೀರು ತುಂಬಿತು.

ಹೆಂಡತಿಯ ತ್ಯಾಗಬುದ್ಧಿ ಅನಂತನ ಹೃದಯದಲ್ಲಿ ಪ್ರೀತಿಯ ಮಹಾಪೂರವನ್ನೇ ಹರಿಸಿತು. ಆ ಆಭರಣವನ್ನು ಒತ್ತೆಯಿಡದೆ ಬೇರೆ ದಾರಿಯೇ ಇಲ್ಲವೆಂದು ಮನಗಂಡ .ಆತನಿಗೆ ಹಾಗೆ ಮಾಡದೆ ನಿವೃತ್ತಿಯಿದ್ದಿಲ್ಲ. ಆದರೆ ಆ ಹಣ ಪಡೆದು ಒನ್ಮೆ ಮುತ್ತಿದ ತಾಪತ್ರಯಗಳಿಂದ ವಿಮುಕ್ತನಾದ ಮೇಲೆ ಮಾತ್ರ ಭಾರತಿಯ ಬೋಳು ಕುತ್ತಿಗೆ ಆತನನ್ನು ಕೊರಗಿಸುತ್ತಿತ್ತು.

ಈ ಕೊರಗನ್ನು ಪ್ರೀತಿಯಲ್ಲಿ ತುಂಬಲು ಅನಂತ ಬಹುವಾಗಿ ಪ್ರಯತ್ನಿಸಿದ.

೧೯೪೭ರ ಆಗಸ್ಟ್ ಹದಿನೈನು ಭಾರತದ ಇತಿಹಾಸದಲ್ಲಿ, ವಿಭಕ್ತ ಭಾರತದ ಇತಿಹಾಸದಲ್ಲಿ ಸ್ವಾತಂತ್ರ್ಯದ ಸಂದೇಶವನ್ನು ತಂದಿತ್ತು.

ಎಲ್ಲ ಕೆಲಸವನ್ನು ಮರೆತು ಅನಂತ ಮೊದಲ ಬಾರಿಗೆ, ಭಾರತಿಯ ಜೊತೆಗೆ, ಮುಂಬಯಿ ಸುತ್ತಿದ. ಆ ಪ್ರಚಂಡ ಜನಕೋಟಿಯ ಉತ್ಸಾಹದಿಂದ ಪುಳಕಿತವಾದ ಮನಸ್ಸಿನಿಂದ ಮಧ್ಯರಾತ್ರೆಗೆ ಶಹರನ್ನು ಸುತ್ತಿ ಬಂದ.

ಭಾರತಿ ಮುಂಬಯಿಗೆ ಬಂದಮೇಲೆ ಮೊದಲ ಬಾರಿಗೆ ಗಂಡನ ಜೊತೆಯಲ್ಲಿ ಸಂತೋಷವೆಂದರೇನೆಂದು ತಿಳಿದು ಹಿಗ್ಗಿದಳು. ಮಧ್ಯರಾತ್ರೆಗೆ ಸರಿಯಾಗಿ ಸೈರನ್ ಬಾರಿಸಿದಾಗ, ಉನ್ಮತ್ತ ಜನತೆ ಜಯಜಯಕಾರ ಮಾಡಿದಾಗ, ಮುಂಬಯಿಯ ಸೆಕ್ರೆಟೆರಿಯೆಟ್‌ನಲ್ಲಿ ಸ್ವತಂತ್ರ ರಾಷ್ಟ್ರದ ಬಾವುಟ ಮೇಲೇರಿದಾಗ, ಬಿಡುಗಡೆಯ ಸಂಕೇತವೆಂಬಂತೆ, ಮುಖ್ಯಮಂತ್ರಿಗಳ ಕೈಯಿಂದ ಹಾರಿದ ಬಿಳಿಯ ಪಾರಿವಾಳ ಬಾನಲ್ಲಿ ಹಾರಿದಾಗ ಅನಂತ ಭಾರತಿಯನ್ನು ಒಂದು ಕೈಯಿಂದ ತಬ್ಬಿ ಹಿಡಿದುಕೊಂಡು ಹೇಳುತ್ತಿದ್ದ :

"ನೋಡು, ಭಾರೀ. ನಮ್ಮ ಹೋರಾಟದ ಒಂದು ಘಟ್ಟ ಮುಗಿದಿದೆ. ಇನ್ನೊಂದು ಆರಂಭವಾಯಿತು" ಎಂದು.

ಆ ವಿದ್ಯುದ್ದೀಪಗಳ ಪ್ರಭೆಯನ್ನೇ ನೋಡುತ್ತಿದ್ದ ಭಾರತಿಗೆ ಗಂಡನ ಮಾತು ಅರ್ಥವಾಗಲಿಲ್ಲ.

೧೩

ಕೊಲಾಬಾ ತುದಿಯಿಂದ, ಕಲ್ಯಾಣ ವಿರಾರ್‌ಗಳ ತನಕ, ಭಾರತದ ನಾಗರಿಕತೆಯ ಪ್ರತೀಕವಾದ ಮಹಾ ಶಹರ ಮುಂಬಯಿ ಮಲಗಿದೆ.

ಶತಮಾನಗಳ ದಾಸ್ಯಶೃಂಖಲೆಗಳನ್ನು ಕಡಿದೊಗೆಯಲು ಎತ್ತಿದ ಕೈ. ಏಳು ಲಕ್ಷ ಹಳ್ಳಿಗಳ ಉದ್ಧಾರಕ್ಕಾಗಿ, ಹಳ್ಳಿ ಪಟ್ಟಣಗಳ ಸುಮಧುರ ಬಾಂಧವ್ಯದ ಮುಂದಿನ ಸಮಾಜದ ಆಸೆ ತೋರಿಸಿ, ಬಂಧವಿಮೋಚನೆಯ ಹಾಡು ಹಾಡುತ್ತಿದ್ದ ಮಹಾ ನಗರ ಮುಂಬಯಿ.

ಸ್ವಾತಂತ್ರ್ಯ ಯಜ್ಞದಲ್ಲಿ, ಕಣ್ಣೀರು, ಚೆನ್ನೀರುಗಳ ತರ್ಪಣ ಕೊಟ್ಟು ಪವಿತ್ರವಾಗಿದ್ದ ಮುಂಬಯಿ.

ಭವ್ಯತೆಯ ಪ್ರತೀಕವಾದ ಒಂದು ವಿರಾಟ್ ಯಂತ್ರ. ವೈಯಕ್ತಿಕತೆಯನ್ನು ನಾಶಗೊಳಿಸಿ ಸಾಮೂಹಿಕ ಜೀವನದಲ್ಲಿ ಅನಂತ ವ್ಯಕ್ತಿತ್ವದ ಚೇತನಗಳನ್ನೂ ಯಂತ್ರದ ಕೀಲಿಗಳನ್ನಾಗಿ ಮಾಡಿ, ದಿನರಾತ್ರಿ ತಿರುಗುತ್ತಿರುವ ಪ್ರಗತಿಯ ಚಕ್ರ.

ಅನಂತ ಮುಂಬಯಿಯನ್ನು ಕಂಡಾಗ ಮೊದಲ ಬಾರಿಗೆ ದಿಙ್ಮೂಢನಾಗಿದ್ದ.

'ಎಲ್ಲಿ ಆರಂಭಿಸಲಿ? ನನ್ನ ಕರ್ತವ್ಯಕ್ಷೇತ್ರ ಎಲ್ಲಿದೆ? ಈ ಸಾಗರದಲ್ಲಿ ಮೇಲೇಳಬಹುದಾದ ಒಂದು ಸಣ್ಣ ತೆರೆ ಎಷ್ಟು ಕ್ಷುದ್ರಸ್ವರೂಪದ್ದು?' ಎಂದು ಆತನ ಅಂತರಾಳ ಕೂಗುತ್ತಿತ್ತು.

ಅದಕ್ಕೆ ಉತ್ತರ ಸಿಗುತ್ತಿರಲಿಲ್ಲ.

ಒಮ್ಮೆ, ಪ್ರಜ್ವಲಿಸಿ ನಂದಿಹೋಗುತ್ತಿದ್ದ ನಲವತ್ತೆರಡರ ಹೋರಾಟದ ಅನಂತರದ ಭಾರತದಲ್ಲಿ ನಾಯಕರಿಲ್ಲದ ನಾಡಿನಲ್ಲಿ, ಅನಂತ ಕಿಂಕರ್ತವ್ಯ ಮೂಢನಾಗಿದ್ದ.

ಸೆಲ್ಲೋರು ಆತನನ್ನು ಹಣ್ಣಾಗಿಸಿತ್ತು. ಆದರೆ ಹೋರಾಟದ ಕೆಚ್ಚನ್ನು ಹೆಚ್ಚಿಸಿತ್ತು. ದೇಹ ಕಳೆಗುಂದಿತ್ತು; ಧೈರ್ಯ ಅನಂತವಾಗಿತ್ತು; ಮನೆಯ ಬಡತನ, ಜೀವನ ನಿರ್ವಹಣ ಹಾದಿ ಹುಡುಕೆಂದು ಕೂಗುತ್ತಿತ್ತು. ಶ್ರೀಪತಿ ರಾಯರ ಸ್ನೇಹದಿಂದ ಪರಿಮಳಿಸಿದ್ದ ಆತನ ಮಾನವ ಹೃದಯ ಸಮಗ್ರ ವಿಶ್ವಕ್ಕೆ ವ್ಯಾಪಿಸಲು ಹಾತೊರೆಯುತ್ತಿತ್ತು.

ಆದರೂ ಅನಂತ ಏಕಾಂಗಿಯಾಗಿದ್ದ.

ಈ ಕೊರಗು ಪಸರಿಸಿದ್ದ ಮೌನದಲ್ಲಿ ಅನಂತ ಮುಂಬಯಿಯಲ್ಲಿ ಕಾಣುತ್ತಿದ್ದ ಕೋಟಿ ಕೋಟಿ ದೀಪಗಳತ್ತ ಕಣ್ಣು ಹೊರಳಿಸಿ ಕೇಳುತ್ತಿದ್ದ :

'ಮುಂದೇನು ?' ಎಂದು.

ವಿ.ಟಿ.ಯಿಂದ ಕುರ್ಲಾವ ತನಕ, ಚರ್ಚ್‌ಗೇಟ್‌ನಿಂದ ಅಂಧೇರಿಯ ತನಕ, ಲೋಕಲ್ ಗಾಡಿಗಳಲ್ಲಿ ನಿಂತು ಪ್ರಯಾಣ ಮಾಡುತ್ತ ದಾರಿಯ ಎರಡೂ ಬದಿಗಳಲ್ಲಿ ಕಾಣುತ್ತಿದ್ದ ಲಕ್ಷಗಟ್ಟಲೆ ಮನೆಗಳಲ್ಲಿ, ಹೊತ್ತು ಕಂತಿದ ಮೇಲೆ ಮಿಂಚಿ ಮಾಯವಾಗುತ್ತಿದ್ದ ದೀಪಗಳನ್ನೂ ಗಮನಿಸಿ, ಆತ ಹಲವಾರು ಬಾರಿ ತನ್ನಲ್ಲೇ ತಾನು ಕೇಳಿಕೊಂಡುದುಂಟು :

'ನನ್ನ ಹೋರಾಟದ ಪ್ರಜ್ಞೆ ಇಷ್ಟೇ ಕ್ಷಣಿಕವಾದುದೆ, ಕ್ಷಣಭಂಗುರ ವಾದುದೇ' ಎಂದು.

ಯುದ್ಧದ ಬೇಗೆಯಿಂದ ಬಸವಳಿದಿದ್ದ ಮಹಾ ಮುಂಬಯಿ ಸಾವಿರ ಗಟ್ಟಲೆ ಜನರನ್ನು ತನ್ನೆದೆಯೊಳಗೆ ತುಂಬಿಕೊಳ್ಳಲು ಕರೆಯುತ್ತಿತ್ತು. ಅತ್ಯು ತ್ಪಾದನೆಯ ನೆಪದಿಂದ ಸಾಮೂಹಿಕವಾಗಿ, ಮೊದಲ ಬಾರಿಗೆ ನಿರುದ್ಯೋಗ ವನ್ನು ಹೊಡೆದೋಡಿಸಿ, ಅಲ್ಪತೃಪ್ತಿಯ ಜೀವನಾವಕಾಶವನ್ನು ಲಕ್ಷಗಟ್ಟಲೆ ಜನರಿಗೆ ಒದಗಿಸಿತ್ತು.

ಇವೇ ಸಂದರ್ಭದಲ್ಲಿ ಅನಂತ ಬಂದ. ತನ್ನ ಆದರ್ಶವನ್ನು ಗುರುತಿಸಲು, ಳಿರ ಕಹಳೆಯ ಕರೆಕೊಟ್ಟ ಆದರ್ಶ ಶಹರಿಗೆ ಬಂದ. ಬಂದೊಡನೆ 'ಅಂಡರ್ ಗ್ರಾಜುಯೇಟ್' ಎಂದು ಮೂರು ವರ್ಷ ಕಾಲೇಜಿನಲ್ಲಿ ಕಲಿತು ಕಬಳಿಸಿದ್ದನ್ನು ಪ್ರದರ್ಶಿಸಿ, ನೂರೈವತ್ತು ರೂಪಾಯಿ ತಲುಬಿನ ಬಳಿಯಂಗಿ ಧರಿಸಿದ.

ಮೊದಲ ತಿಂಗಳ ಸಂಬಳ ಕೈಗೆ ಬಂದ ದಿನ, ಆಫೀಸಿನ ಗೆಳೆಯರು 'ಚಹಾ' ಎಂದು ನಗು ತಂದುಕೊಂಡು ಅಭಿನಂದನೆ ಸಲ್ಲಿಸಲು ಬಂದಾಗ ಅನಂತದ ಕಣ್ಣಲ್ಲಿ ನೀರು ತುಂಬಿತ್ತು.

'ದೇಶಕ್ಕೇ ಸ್ವಾತಂತ್ರ್ಯವನ್ನು ದೊರಕಿಸಬೇಕೆಂದು, ವಿದ್ಯೆಗೆ ತಿಲಾಂಜಲಿ ಕೊಟ್ಟು ಸೆರೆಮನೆಗೆ ಹೋಗಿ ಮರಳಿದ ಯೋಧ ನೂರೈವತ್ತು ರೂಪಾಯಿಯ ಗುಲಾಮಗಿರಿಯನ್ನು ಒಪ್ಪಿಕೊಂಡೆಯಲ್ಲೋ' ಎಂದು ಹೃದಯ ಕೂಗುತ್ತಿ ದ್ದಾಗ, ಅನಂತ ಹಣ್ಣಾಗುತ್ತಿದ್ದ.

ಈ ದುಃಖದಿಂದಾಗಿ ಏಕಾಂತತೆಯನ್ನು ಇನ್ನಷ್ಟು ನೆಚ್ಚಿಕೊಳ್ಳುತ್ತಿದ್ದ.

ಬಂಧುಗಳಿಲ್ಲ, ಸ್ನೇಹಿತರಿಲ್ಲ. ಯಾಂತ್ರಿಕವಾಗಿ ಸಾಗುವ ಆಫೀಸಿನ ದುಡಿಮೆಯೊಂದನ್ನು ಬಿಟ್ಟರೆ ಬೇರೇನೂ ಕೆಲಸವಿಲ್ಲ. ಯಾವುದೊಂದು ರಾಜಕೀಯ ಚಟುವಟಿಕೆಯಲ್ಲಿ ಕೈಹಾಕದಂತೆ ನಿರ್ಬಂಧಿಸಲಾಗಿದ್ದ ವಾತಾವರಣ, ನಾಯಕರಹಿತವಾದ ಕಂಗಾಲ ರಾಜಕೀಯ ಪ್ರಪಂಚ, ಇವುಗಳಿಂದಾಗಿ ಅನಂತ, ಬರೇ ದೀಪದ ಕಂಬಗಳನ್ನು, ಚೌಪಾಟಿಯ ಮಳಲ ದಂಡೆಯನ್ನು, ಟ್ರಾಂ, ಬಸ್ಸು, ರೈಲುಬಂಡಿಯನ್ನು, ಈತನ ನಿರೀಕ್ಷಣೆಯಿಂದ ತಾವು ಸಂಪೂರ್ಣ ನಿರ್ಲಿಪ್ತರು ಎಂದು ತೋರಿಸುತ್ತಿದ್ದ ಮುಂಬಯಿಯ ಮೂಕ ಜನ ಕೋಟಿಯನ್ನು ತನ್ನ ಬಂಧುಗಳನ್ನಾಗಿ ಸ್ವೀಕರಿಸಿ, ಬರೇ ಅಭ್ಯಾಸದ ಪ್ರಪಂಚದಲ್ಲಿ ತನ್ನ ಕಲ್ಪನೆಯ ಹೊಸ ಸಮಾಜವನ್ನು ಕಾಣುತ್ತಿದ್ದ.

ಶಹರದ ಇಂಗ್ಲೀಷು, ಕನ್ನಡ ವಾಚನಾಲಯಗಳು ಆತನ ಅಭ್ಯಾಸ ಕೇಂದ್ರಗಳಾದವು. ಅಭ್ಯಾಸವೂ ಇಲ್ಲದ ಬಿಡುವೇಳೆಯಲ್ಲಿ ಶಹರದ ಸುತ್ತ ಅಲೆದಾಟವೇ ಅವನ ಅಸ್ಥಿರ ಮನಸ್ಸಿಗೆ ತುಸು ಚೈತನ್ಯ ಕೊಡುವ ಸಂಜೀವಿನಿಯಾಗಿತ್ತು.

ಈ ಅಲೆದಾಟ ನಿಷ್ಪ್ರಯೋಜಕವಾಗಿರಲಿಲ್ಲವಾದರೂ ಹೆಚ್ಚಿನ ಪರಿಣಾಮವನ್ನು ಮಾಡಲಿಲ್ಲ. ಒಬ್ಬಿಬ್ಬರು ಪ್ರಮುಖ ಆಂಗ್ಲ ಪತ್ರಿಕೋದ್ಯಮಿಗಳ ಪರಿಚಯ, ನಾಲ್ಕಾರು ಬೇರೆ ಬೇರೆ ಭಾಷೆಗಳ ಬುದ್ಧಿಜೀವಿಗಳ ಪರಿಚಯ, ಇವಷ್ಟೆ ಅನಂತನಿಗೆ ದೊರಕಿದ್ದವು. ಈ ಪರಿಚಯದಿಂದಾಗಿ, ಅವರ ಸಾಮಿಪ್ಯದಲ್ಲಿ, ಒಡನಾಟದಲ್ಲಿ, ಬಿಡುವೇಳೆಯನ್ನು ಕಳೆಯುವ ಚಟ, ಬರೇ ತಾರ್ಕಿಕ ರಾಜಕಾರಣಕ್ಕಿಳಿಯುವುದಲ್ಲದೆ ಬೇರೇನನ್ನೂ ಮಾಡಲು ಸಮರ್ಥವಾಗಿಲ್ಲವೆಂದು ತಿಳಿದಾಗ ಅನಂತ ನಿರಾಶನಾದ.

ಬಾಪೂ ಬಿಡುಗಡೆಯಾಗಿ ಪರ್ಣಕುಟಿಗೆ ಬಂದಾಗ, ಪುಣೆಯ ತನಕ ಧಾವಿಸಿ, ಮೊದಲ ಬಾರಿಗೆ ಆ ತೇಜೋಮಯ ಮೂರ್ತಿಯನ್ನೂ, ಅಕ್ಕ ಸರೋಜಿನಿ ದೇವಿಯನ್ನೂ ಕಂಡುಬಂದಾಗ ಅನಂತನ ಚೈತನ್ಯ ಪುನಃ ತುಳುಕ ಹತ್ತಿತು. ಹೋರಾಟದ ಕೆಚ್ಚು ಪುನಃ ತುಂಬಿಕೊಂಡಿತು.

ಆದರೆ ಆ ಕೆಚ್ಚಿಗೆ ಬಿಡುಗಡೆಯ ದಾರಿ ತೋರುತ್ತಿರಲಿಲ್ಲ. ನಲವತ್ತೆರಡರ ಚಳವಳಿಯ ಅಂಕ ಮುಗಿದಿತ್ತು. ಭವಿಷ್ಯ ಇನ್ನೂ ಅಸ್ಪಷ್ಟವಾಗಿತ್ತು.

ಈ ದಿನಗಳಲ್ಲಿ ಅನಂತನ ಹೃದಯದ ಏಕಾಂತತೆಯ ಕುದಿ. ಅಚ್ಛಾದಿತ ಜ್ವಾಲಾಮುಖಿಯಂತೆ ಒಳಗೊಳಗೆ ವೇದನೆಯ ಮಹಾಪೂರವನ್ನು ಸೆರೆ

ಹಾಕಿತ್ತು. ಹೃದಯ ದಹಿಸುವ ದಾವಾನಲವಾಗಿತ್ತು.

ಮುಂದುವರಿಯುವುದು ಹೇಗೆ? ಎಂದು ಅನಂತ ದಾರಿ ಕಾಣದೆ ಬಳಲುತ್ತಿದ್ದ. ದೇಶದ ರಾಜಕೀಯ ವಾತಾವರಣ ಆತನ ಬುದ್ಧಿಗೆ ದಿಗ್ಬಂಧನ ಹಾಕಿತ್ತು.

ರಾಜಕೀಯ ಸ್ವಾತಂತ್ರ್ಯದಿಂದ ಮಾತ್ರ ವಿಮೋಚನೆಯ ಹಾದಿ ಸಾಧ್ಯವೆಂಬ ಆದರ್ಶದ ಪ್ರಪಂಚದಲ್ಲಿ ಇಷ್ಟು ವರ್ಷಕಾಲ ಕಳೆದ ಆತನ ದೂರಾಲೋಚನೆ, ಆ ಬಲವಾದ ಕೋಟೆಯನ್ನು ಯಾವ ರೀತಿ ಒಡೆದು ಮುಂದುವರಿಯಬೇಕೆಂದು ಯೋಚಿಸುವುದರಲ್ಲೇ ಸೋತು ಸುಣ್ಣವಾಗಿತ್ತು.

ಈ ಸಂದರ್ಭದಲ್ಲಿಯೇ ಹೃದಯ, ನಲ್ಮೆಯ, ನಗುವಿನ ಸ್ನೇಹಕ್ಕಾಗಿ ಕಾತರಿಸುತ್ತಿದ್ದಾಗ, ಮುಂದುವರಿಯಲು ಸಹಾನುಭೂತಿಯ ಸಲಹೆ ಕೊಡುವ ಸ್ನೇಹದ ಸಿಂಚನಕ್ಕಾಗಿ ಸುಡುತ್ತಿದ್ದ ಎದೆ ಕಾತರಿಸುತ್ತಿದ್ದಾಗ, ಶ್ರೀಪತಿರಾಯರು ಭಾರತಿಯ ಮದುವೆಯ ಪ್ರಸ್ತಾಪವೆತ್ತಿದ್ದರು.

ಭಾರತದ ಸೌಂದರ್ಯ ಸರ್ವಸ್ವವನ್ನು, ತನ್ನ ಆದರ್ಶಕ್ಕೆ ನೀರೆರೆದಿದ್ದ ಶ್ರೀಪತಿರಾಯರ ಮಗಳಲ್ಲಿ ಈ ಮೊದಲೇ ಕಂಡುಕೊಂಡಿದ್ದ ಅನಂತ, ದಡ ಕಾಣದೆ ನಡುನೀರಿನಲ್ಲಿದ್ದಾತ ಆಸರೆ ದೊರಕಿಸಿಕೊಂಡ ಸುಖವನ್ನನುಭವಿಸಿ, ಭಾರತಿ ತನ್ನ ಹೋರಾಟದ ಕಾರ್ಯಕ್ಷೇತ್ರದಲ್ಲಿ ಸಂಗಾತಿಯಾಗಿ ಬರುತ್ತಾಳೆ, ಎಂದು ತಿಳಿದು ಶ್ರೀಪತಿರಾಯರಿಗೆ ಒಪ್ಪಿಗೆಯ ನಗುವಿನಲ್ಲೇ ಹೃದಯದ ಕೃತಜ್ಞತೆಯ ವಂದನೆ ಸಲ್ಲಿಸಿದ.

ಭಾರತಿಯ ಕೈಹಿಡಿದ.

ಆಗ ನಿಜಕ್ಕೂ ಆತನ ಭಾಗ್ಯ ತೆರೆದಿತ್ತು. ಬಂಧವಿಮುಕ್ತ ಕಾಂಗ್ರೆಸ್ ಕಾರ್ಯಕರ್ತರೆಲ್ಲ ಪುನಃ ಕರ್ತವ್ಯಕ್ಷೇತ್ರಕ್ಕಿಳಿದಿದ್ದರು. ಮುಂಬಯಿಯ ರಾಜಕೀಯ ವಾತಾವರಣ ಪುನಃ ಚೇತರಿಸಿಕೊಳ್ಳುತ್ತಿತ್ತು.

ಅನಂತನಿಗೆ ಒಂದು ಕ್ಷಣವೂ ಬಿಡುವಿರದಂತೆ ಮಾಡಲು ಕೆಲಸ ಕಾದು ನಿಂತಿತ್ತು.

ಬರೇ ಸ್ವಯಂಸೇವಕ ಪಥಕದ ಮುಂದಾಳುವೆನಿಸಿ ಅನಂತ ಸಮಾಧಾನ ಪಡುತ್ತಿರಲಿಲ್ಲ; ಪಡುವಂತೆಯೂ ಇರಲಿಲ್ಲ; ಚುನಾವಣೆಗಳ ಸಂಭ್ರಮದಿಂದಾಗಿಯೂ ಆತ ಸಂಪೂರ್ಣ ತೃಪ್ತಿಹೊಂದಲಿಲ್ಲ. ಮುಂಬಯಿಯ ವಾತಾವರಣವನ್ನು ಹೊಲೆಗೆಡಿಸಿದ ಕೋಮುವಾರು ದಂಗೆಗಳು ತಲೆಯೆತ್ತಿದಾಗ

ಸಾಕಷ್ಟು ಕೆಲಸಕ್ಕೆ ಅವಕಾಶವಿದ್ದಿತ್ತು. ಆದರೆ ಈ ದುಃಖದ ಕೆಲಸದಲ್ಲಿ, ಅನಂತ ಇನ್ನಷ್ಟು ದುಃಖಿಯೇ ಆಗುತ್ತಿದ್ದ. 'ಎಷ್ಟೊಂದು ಪರಿಶ್ರಮ ಈ ವ್ಯರ್ಥ ಕಾದಾಟಕ್ಕಾಗಿ ವಿನಿಯೋಗವಾಗುತ್ತಿರುವುದಲ್ಲಾ' ಎಂದು ಆತ ಕೊರಗಿ ಹಲುಬಿದುದುಂಟು.

ದಿನದಿಂದ ದಿನಕ್ಕೆ ರಾಷ್ಟ್ರದ ಹಿರಿಯ ರಾಜಕೀಯ ಸಂಸ್ಥೆ 'ಯಾವುದೇ ಬೆಲೆಯಿರಲಿ, ಸ್ವಾತಂತ್ರ್ಯ ಮಾತ್ರ ಬರಲಿ' ಎಂದು ಮುಂದುವರಿಯತೊಡಗಿದಾಗ ಮಾತ್ರ ಅನಂತನ ಹೃದಯದಲ್ಲಿ ವಿಚಾರವಿಪ್ಲವ ಆರಂಭವಾಯಿತು.

ತನ್ನ ಮುಂದಿನ ದಾರಿ ಯಾವುದು? ಎಂದು ಅನಂತ ಹಗಲೂ ರಾತ್ರಿ ತನ್ನನ್ನೇ ಕೇಳಿಕೊಳ್ಳುತ್ತಿದ್ದ. ಭಾರತಿಗೆ ಬರೆಯುತ್ತಿದ್ದ ಪತ್ರಗಳಲ್ಲಿ ತನ್ನ ಹೃದಯದ ಏಕಾಂತತೆಯನ್ನೆಲ್ಲ, ತನಗೆ ಈ ಮೊದಲೇ ಸಾಧಿಸಿದ್ದ ಶೈಲಿಯಲ್ಲಿ ತುಂಬಲು ಯತ್ನಿಸುತ್ತಿದ್ದ.

ಆದರೆ ಈ ಕರೆ ಮರುದನಿ ಕೊಡುತ್ತಿರಲಿಲ್ಲ.

ಇದೇ ಸಂದರ್ಭದಲ್ಲಿ ಆತನಿಗೆ ರಾಜೀವನ ಪರಿಚಯವಾದುದು.

ಒಂದು ರಾತ್ರೆ.

ಮುಂಬಯಿಯ ದುಡಿಮೆಕಾರರ ಇತಿಹಾಸದಲ್ಲೇ ಒಂದು ಪರ್ವಕಾಲ ಅದು. ಇಷ್ಟರತನಕ ಕೂಲಿಕಾರರಿಗೆ ಮಾತ್ರ ಸಂಬಂಧಿಸಿದೆಯೆಂದು ತಿಳಿಯಲಾಗಿದ್ದ ಟ್ರೇಡ್ ಯೂನಿಯನ್ ಚಳವಳಿ, ಮೆಲ್ಲಮೆಲ್ಲನೆ, 'ಬಿಳಿಯಂಗಿ'ಯ ಕಾರಕೂನರಿಗೂ ಸಂಬಂಧಿಸಿದೆಯೆಂಬ ಅರಿವು ಉಂಟಾಗಿದ್ದ ಕಾಲ. ಒಂದೆರಡು ವಿಮಾ ಕಂಪೆನಿಗಳ ಕೆಲಸಗಾರರು ಧೈರ್ಯದಿಂದ ತೋರಿಸಿಕೊಟ್ಟ ದಾರಿಯನ್ನು ಇಷ್ಟರತನಕ ಸದ್ದಿಲ್ಲದೆ, ಗುಲಾಮಗಿರಿಯ ಎಲ್ಲ ಯಾತನೆಯನ್ನು ಸಹಿಸಿಕೊಂಡು ಯಾವ ರೀತಿಯ ಕ್ರಾಂತಿಕಾರಕ ಮುನ್ನಡೆಗೂ ಹಿಂಜರಿಯುತ್ತಿದ್ದ ಬಡ ಮಧ್ಯಮ ವರ್ಗ, ಅನುಸರಿಸುವುದು ಒಳ್ಳೆಯದೆಂದು ಯೋಚಿಸಲಾರಂಭಿಸಿದ್ದ ಕಾಲ.

ಅನಂತನ ಕಡಡಿದ ಮನಸ್ಸಿಗೆ, ಕಾರ್ಯೋತುರ ಚೇತನಕ್ಕೆ, ಒಂದು ಉತ್ತಮ ಅವಕಾಶ ದೊರಕಿತ್ತು.

ತನ್ನ ಆಫೀಸಿನ ಕೆಲಸಗಾರರನ್ನೇ, ಕಾರಕೂನರನ್ನೇ ಮೊದಲು ಸಂಘಟಿಸಿಕೊಳ್ಳುವೆನೆಂದು ಬಗೆದು ಅನಂತ ಆ ದಿಸೆಯಲ್ಲಿ ಕಾರ್ಯಪ್ರವೃತ್ತನಾಗಿದ್ದ; ಸಾಕಷ್ಟು ಯಶಸ್ವಿಯೂ ಆಗಿದ್ದ.

ಸದ್ದಿಲ್ಲದೆ, ಅಂಧೇರಿಯ ಗೆಳೆಯರೊಬ್ಬರ ಮನೆಯಲ್ಲಿ ಒಂದು ಸಭೆ ಸೇರಿತ್ತು ; ಆಫೀಸಿನ ಎಲ್ಲಾ ಶಾಖೆಗಳ ಪ್ರತಿನಿಧಿಗಳನ್ನು ಕರೆದು ಕೂಡಿಸಿದ್ದ ಅವಸರದ ಸಭೆ.

ಸಭೆ ಮುಗಿಸಿದ ಅನಂತ ತುಂಬ ಆನಂದದಿಂದಲೇ ರಾತ್ರೆ ಗ್ರಾಂಟ್ ರೋಡಿಗಾಗಿ ಗಾಡಿ ಹಿಡಿದಿದ್ದ. ಮನಸ್ಸು ಊರಿನ ಸಭೆಯ ಕಾರ್ಯಕಲಾಪಗಳ ಕುರಿತೇ ಚಿಂತಿಸುತ್ತಿತ್ತು. ಹೀಗೆ ಸಂಘಟಿತರಾದ ಕೆಲಸಗಾರರ ಮೇಲೆ ಕಂಪೆನಿಯ ಅಧಿಕಾರ ವರ್ಗ ಯಾವ ರೀತಿ ದ್ವೇಷ ಸಾಧಿಸುವುದು, ಅದರ ಪರಿಣಾಮಗಳೇನಾಗಬಹುದು ಎಂಬ ವಿಚಾರ ಚಿಂತಿಸುತ್ತ ಅನಂತ ಕುಳಿತಿದ್ದ.

ರಾತ್ರೆಯ ಗಾಡಿಯಾಗಿದ್ದುದರಿಂದ ಜನಸಂದಣಿ ವಿಶೇಷವಾಗಿರಲಿಲ್ಲ. ಅಲ್ಲೊಬ್ಬ ಇಲ್ಲೊಬ್ಬ ಎಂಬಂತೆ ಕಾಲುನೀಡಿ ಕುಳಿತಿದ್ದರು. ಮುಂದಿನ ದಿನದ ಬೆಳಗಿನ ಹಾಲಿನ ಸರಬರಾಯಿಗೆಂದು ದೊಡ್ಡ ಹಿತ್ತಾಳೆಯ ಪಾತ್ರೆಗಳನ್ನು ಸಾಗಿಸುತ್ತಿದ್ದ ಹಾಲಿನ ಭಯ್ಯಾ ಜನರು ಯಾರ ಪರಿವೆಯೂ ಇಲ್ಲದೆ ಹಾಡುತ್ತಿದ್ದರು.

ಅನಂತ ಇದಾವುದರ ಗೊಡವೆಯೂ ಇಲ್ಲದೆ ಯೋಚನೆಯ ಸಾಮ್ರಾಜ್ಯದಲ್ಲಿ ತಲ್ಲೀನನಾಗಿದ್ದಾಗ, ಡಬ್ಬಿಯ ಕೊನೆಯಲ್ಲಿ ಮಲಗಿ ಹಾಡುತ್ತಿದ್ದವನ ಹಾಡಿನ ಸೊಲ್ಲೊಂದು ಆತನನ್ನು ಎಚ್ಚರಿಸಿತು :

"ಗಿಡಗಿಡದಲಿ ಹಾರಾಡುವ ಗಿಳಿಯೇ ನುಡಿ, ನುಡಿ, ಕನ್ನಡವಾ."

ಆ ರಾತ್ರೆಯ ನೀರವತೆಯನ್ನು ಭೇದಿಸಿಕೊಂಡು, ಶ್ರುತಿ ಹಿಡಿದ ಗಾಡಿಯ ಸದ್ದಿಗೆ ಹೊಂದಿಕೊಂಡು ಬರುತ್ತಿದ್ದ ಕನ್ನಡದ ಮುದ್ದು ನುಡಿಯ ಹಾಡು ಕೇಳಿದಾಗ, ಅನಂತ ತಾನು ಯೋಚಿಸುತ್ತಿದ್ದುದೆಲ್ಲವನ್ನೂ ಮರೆತು ಕುಳಿತಲ್ಲಿಂದ ಎದ್ದ.

ಅನಂತ ಮುಂದುವರಿದು ಹೋದಾಗಲೂ ಹಾಡು ನಿಂತಿರಲಿಲ್ಲ. ಮುಂದಿನ ಬೆಂಚಿನ ಮೇಲೆ ಕಾಲು ಚಾಚಿ ಗಾಡಿಯ ಮಾಡಿನ ಕಡೆ ನೆಟ್ಟ ನೋಟದಿಂದ ನೋಡುತ್ತ ಹಾಡುತ್ತಿದ್ದ ವ್ಯಕ್ತಿಗೆ, ಬಳಿಯಲ್ಲಿ ಕುಳಿತಿದ್ದ ಇಬ್ಬರ ಯೋಚನೆಯೂ ಇರಲಿಲ್ಲ.

ಅನಂತ ಬಂದು ಅದೇ ಬೆಂಚಿನ ಮೇಲೆ ಕುಳಿತು ಕೇಳಿದ :

"ನೀವು ತುಂಬ ಕನ್ನಡದ ಅಭಿಮಾನಿಗಳಿರುವಂತೆ ಕಾಣುತ್ತದೆ."

ಹಾಡು ನಿಂತಿತು. ಹಾಡುತ್ತಿದ್ದ ವ್ಯಕ್ತಿ ಈ ಅನಿರೀಕ್ಷಿತ ತಡೆ ಯಾರಿಂದ

ಎಂದು ಬಂದಿದ್ದ ಅನಂತನೆಡೆ ನೋಡಿತು. ಒಂದು ಕ್ಷಣ ಮಾತನಾಡಲಿಲ್ಲ. ಆಮೇಲೆ ಮಾತು ಹೊರಟಿತು :

"ಏನು, ಟ್ರೈನಿನಲ್ಲಿಯೂ ಕಾಂಗ್ರೆಸ್ ಸಂಘಟನೆಯ ವಿಚಾರವೆ ?"

ಅನಂತ ದಿಗ್ಭ್ರಾಂತನಾದ. ಮಾತನಾಡುತ್ತಿದ್ದ ವ್ಯಕ್ತಿಯ ಪರಿಚಯ ಆತನಿಗಿರಲಿಲ್ಲ. ಆದರೆ ತನ್ನ ಪರಿಚಯ ಆ ವ್ಯಕ್ತಿಗೆ ಇದೆಯೆಂಬುದು ಸ್ಪಷ್ಟವಾಗಿತ್ತು.

"ನಿಮ್ಮ ಮಾತು ನೋಡುವಾಗ ನೀವು ತ್ರಿಕಾಲಜ್ಞಾನಿಗಳೆಂದು ಕಾಣುತ್ತದೆ. ನನ್ನ ಜಾತಕವನ್ನು ಹೊಸದಾದ ಪರಿಚಯದಲ್ಲೇ ಬಿಡಿಸ ತೊಡಗಿದ್ದೀರಿ."

"ಖದ್ದರ್ ಕ್ಯಾಪ್‌ನ ಇತಿಹಾಸ ಬರೆಯಲಿಕ್ಕೆ ಜೋತಿಷ್ಯ ಕಲಿಯ ಬೇಕಾಗಿಲ್ಲ. ಕಾಂಗ್ರೆಸ್ ಹೌಸ್‌ನಲ್ಲಿ ನಿಮ್ಮನ್ನು ಎಷ್ಟು ಸಲ ಕಂಡಿದ್ದೇನೆ ಗೊತ್ತೇ ? ದಹಿನೇ ರುಕ್........ದಹಿನೇ ನೀವ್ ರುಕ್........ಏಕ್ ದೋ, ಲೆಫ್ಟ್ ರೈಟ್."

ಅನಂತನಿಗೆ ನಗು ತಡೆಯುವುದು ಸಾಧ್ಯವಾಗಲಿಲ್ಲ.

"ಸ್ವಯಂಸೇವಕರ ಡ್ರಿಲ್ ನೋಡುವುದರಲ್ಲೇ ನಿಮ್ಮ ಆಯುಷ್ಯದ ಬಹುಭಾಗ ಸಂದಾಯವಾಗಿರುವ ಹಾಗೆ ಕಾಣುತ್ತದೆ."

"ಹೌದು. ಅದೇ ಕಾರಣ ಕಾಂಗ್ರೆಸ್ಸಿನ ಕಸರತ್ ನನಗೆ ಸರಿಯಾಗಿ ಅರ್ಥವಾಗುತ್ತಿದೆ."

"ಎಂದರೆ ?''

''ಅದು ಸಾಯಲಿ ಬಿಡಿ. ಮೊದಲ ಪರಿಚಯಕ್ಕೆ ಪಾಲಿಟಿಕ್ಸ್ ಯಾಕೆ ನಿಮ್ಮ ಹೆಸರು ?''

''ಹಾಗಾದರೆ ನನ್ನ ಮುಖಪರಿಚಯ ಮಾತ್ರ ನಿಮಗೆ. ಹೆಸರು ತಿಳಿದಿಲ್ಲ.''

"ಹೆಸರು ತಿಳಿದಿದ್ದರೆ ಕಾಂಗ್ರೆಸ್ ಹೌಸಿಗೇ ಬಂದು ಕನ್ನಡದಲ್ಲಿ ಮಂಗಳಾರತಿ ಮಾಡುತ್ತಿದ್ದಿಲ್ಲವೆ ? ಹೇಳಲು ಆಕ್ಷೇಪವೇನಾದರೂ ಇದೆಯಾದರೆ ಬೇಡ. ನನ್ನ ಹೆಸರು ರಾಜೀವ.''

"ನನ್ನದು ಅನಂತ ಉಡುಪ.

"ಅರೆ! ಮಂಗಳೂರಿನ ಆಸಾಮಿ ಬೇರೆ. ಅನಂತ ಉಡುಪ ನೀವೇಯೋ ? ದೇ ಭ. ಅನಂತ ಉಡುಪ. ಬಹಳ ಚೆನ್ನಾಗಿದೆ. ಜೈಲು ಗೀಲು ಕಂಡಿದ್ದಿರೇನು ? ಮುಂದೆ ಮಂತ್ರಿಪದವಿಗೆ ಪಾಸುಪೋರ್ಟು ?''

ಅನಂತ ನಗತೊಡಗಿದರೂ ಏಕೋ ಹೃದಯದಲ್ಲಿ ಕಳವಳವಾಗಹತ್ತಿತು. ಆತ ತಾನು ಹಿಡಿದ ದಾರಿ ಸರಿಯೆಂದು ತ್ರಿಕರಣಪೂರ್ವಕ ನಂಬಿದ್ದ. ಅದು ತಪ್ಪೆಂದು ಯಾರಾವರೂ ಸಾಧಿಸಿದ್ದರೆ ಆತನಿಗೆ ಬೇಸರವಾಗುತಿದ್ದಿಲ್ಲ. ಆದರೆ ಅದನ್ನು ಹೀಗಳೆಯುವ ದೃಷ್ಟಿಕೋನದಿಂದ ತುಂಬ ನೋವಾಯಿತು. ಆದರೂ ಆ ನೋವನ್ನು ಹೊರಗೆ ತೋರಿಸಿ ಒಂದು ಅಮೂಲ್ಯ ಪರಿಚಯ ಹಾಳಾಗುವುದೇ ಎಂಬ ಶಂಕೆ ಬೇರೆ.

"ತುಂಬ ಸಮಾಜಸೇವೆ ಮಾಡುತ್ತಿರಬೇಕಲ್ಲ! ಮನೆಯಲ್ಲಿ ಯಾರಾದರೂ ಮಾಡಿಟ್ಟ ಗಂಟಿವೆಯೆ? ಅಥವಾ ಇದೊಂದು 'ಹಾಬಿ'ಯೆ?"

ಈಗ ಮಾತ್ರ ಅನಂತನಿಗೆ ಸಿಟ್ಟು ಬರತೊಡಗಿತು.

"ಎಲ್ಲರನ್ನೂ, ಎಲ್ಲವನ್ನೂ ತೆಗಳುವ ಚಟ ನಿಮಗೆ ಅಂಟಿಕೊಂಡಿದೆಯೇನು? ಅಥವಾ ನಿಮ್ಮ ಉದ್ಯೋಗವೇ ನಿರಸನಿಯಾಗಿರುವುದೆ?"

ರಾಜೀವ ಮೊದಲ ಬಾರಿಗೆ ನಗತೊಡಗಿದ.

"ಕನ್ನಡದ ಪಾಂಡಿತ್ಯವೂ ಇವೆ ನಿಮಗೆ. ನಿರಸನಿ ಎಂದರೆ cynic ಎಂದಿರಬೇಕಲ್ಲ. ಹೌದು ನಾನು ನಿರಸನಿ. ನಿಮ್ಮ ತಾಳ್ಮೆಯ ಮಟ್ಟದ ಪರೀಕ್ಷೆ ಮಾಡಲು ಹೊರಟಿದ್ದೇನೆ, ಕ್ಷಮಿಸಿ. ನಿಮಗೆ ಇಷ್ಟವಿಲ್ಲವಾದರೆ, ಈ ಸಂಭಾಷಣೆಗೆ ಇಲ್ಲಿ ಪೂರ್ಣವಿರಾಮ"

ಅನಂತ ನಡುವೆಯೇ ತಡೆದು ಮಾತನಾಡಿದ :

"ಛೆ! ಛೆ! ಹಾಗೇನೂ ಇಲ್ಲ. ನಿಮ್ಮ ಪರಿಚಯವಾಗಿ ನನಗೆ ತುಂಬ ಸಂತೋಷವಾಗಿದೆ. ನಿಮ್ಮನ್ನು ನೋಯಿಸಬೇಕೆಂದು ನನಗೇನೂ ಇಷ್ಟವಿಲ್ಲ."

"ನಿಮಗೆ ಇಷ್ಟವಿದ್ದರೂ ನನಗೆ ಹಾಗೆಲ್ಲ ನೋವು ನಾಟುವಂತಿಲ್ಲ, ಮಿಸ್ಟರ್ ಉಡುಪ. ನಿಮಗೆ ಗೊತ್ತಿದೆಯಲ್ಲ, ಮೀನು ಮಾರುವಾತ ಹೂವು ಮಾರುವಾತನ ಮನೆಯಲ್ಲಿ ಕಳೆದ ರಾತ್ರಿಯ ಕತೆ. ನೋವು ಉಂಡುಬಿಟ್ಟು, ನಮಗೆ ನೋವೇ ಬೇಕೆನಿಸುತ್ತದೆ. ಸುಖದ ಸಂಭ್ರಮ ನಮ್ಮ ಅನುಭವ ಕ್ಷೇತ್ರದಿಂದ ಹೊರಗೆ. ಆ ಕಾರಣ ನಮ್ಮ ಊಹೆಯ ಸಾಮ್ರಾಜ್ಯದಿಂದಲೂ ಹೊರಗೆ. ಅದಿರಲಿ. ನೀವೆಲ್ಲಿಗೆ ಹೊರಟಿದ್ದೀರಿ?"

"ಗ್ರ್ಯಾಂಟ್ ರೋಡ್."

"ನಾನು ಇಳಿಯುವಲ್ಲಿಗೇ ಹಾಗಾದರೆ. ಅಲ್ಲಿಯೇ ವಾಸವೇನು?"

"ಹೂಂ. ಒಂದು ಮರಾಟೀ ಖಾನಾವಳಿಯಲ್ಲಿದ್ದೇನೆ. ಆದರೆ ಸದ್ಯದಲ್ಲಿಯೇ ಮಾತುಂಗಕ್ಕೆ ಬದಲಿಸುವ ಆಲೋಚನೆಯಿದೆ."

"ಹಾಗೇನು ? ಗಿರಗಾಂ ಹವೆ ಒಗ್ಗುವುದಿಲ್ಲವೆಂದು ತೋರುತ್ತದೆ."

"ಹಾಗೇನಿಲ್ಲ. ಮಾತುಂಗದಲ್ಲಿ ನಮ್ಮವರದೇ ಖಾನಾವಳಿಯಿದೆ.

"ಹಾಗಾದರೆ ನಿಮ್ಮ ಕಾಂಗ್ರೆಸ್ ಚಟುವಟಿಕೆಗಳು ?"

"ಅವುಗಳಿಗೇನು ? ಇನ್ನೂ ಸಂಸಾರದ ಭಾರ ಹೊತ್ತಿಲ್ಲ. ಮಾತುಂಗಾ ಗಿರ್‌ಗಾಂಗಳೊಳಗಣ ನಾಲ್ಕಾರು ಮೈಲುಗಳ ಅಂತರವೇನು ಮಹಾ ?"

ಅನಂತನಿಗೆ ಈ ಪರಿಚಯದಿಂದ ಸಂತೋಷವಾಗಿತ್ತು; ಆದರೆ ತುಸು ಬೇಸರವೂ ಆಗಿತ್ತು. ರಾಜೀವ ತನ್ನ ವಿಚಾರ ಏನೂ ಹೇಳಿರಲಿಲ್ಲ; ಅನಂತನ ಕುರಿತು ಬೇಕಾದಷ್ಟು ಮಾಹಿತಿಯನ್ನು ಸಂಗ್ರಹಿಸಿದ್ದ. ಹೇಳುವ ಇಚ್ಛೆಯೂ ಆತನಿಗೆ ಇದ್ದಂತೆ ತೋರಲಿಲ್ಲವಾಗಿ ಅನಂತನಿಗೆ ಈ ವಿಚಾರ ಪ್ರಶ್ನಿಸುವ ಎದೆಗಾರಿಕೆಯುಂಟಾಗಲಿಲ್ಲ.

"ಈಗ ಎಲ್ಲಿಂದ ಬರುತ್ತಿದೆ, ಸವಾರಿ ? ಅಂಧೇರಿಯಲ್ಲಿ ಯಾರಾದರೂ ಪರಿಚಯವವರಿರುವರೇನು ?" ಈಗಲೂ ಪ್ರಶ್ನೆ ಕೇಳಿದುದು ರಾಜೀವನೆ.

"ಹೌದು ಸ್ವಲ್ಪ ಟ್ರೇಡ್ ಯೂನಿಯನ್ ಕೆಲಸದ ನಿಮಿತ್ತ ಅಲ್ಲಿಗೆ ಹೋಗಬೇಕಾಗಿತ್ತು."

ಈಗ ಮಾತ್ರ ರಾಜೀವ ಕಣ್ಣರಳಿಸಿ ಅನಂತನನ್ನು ನೋಡತೊಡಗಿದ.

"ಟ್ರೇಡ್ ಯೂನಿಯನ್ ಕೆಲಸ ! ನಿಮ್ಮಂಥ ಸುಖಜೀವಿಗಳಿಗೆ !"

ಅನಂತನಿಗೆ ಪುನಃ ಸಿಟ್ಟೇರತೊಡಗಿತು.

"ಹತ್ತು ನಿಮಿಷಗಳ ಪರಿಚಯದಿಂದ, ನನ್ನ ಜೀವನ ಯಾವ ರೀತಿಯದೆಂದು ಕಲ್ಪಿಸಿ ಏನೇನನ್ನು ಆರೋಪಿಸುವ ಧಾರ್ಷ್ಟ್ಯ ಕಂಡು ನಾನು ಮೆಚ್ಚಿದ್ದೇನೆ, ರಾಜೀವ."

ರಾಜೀವ ಕೈ ಮುಂದೆ ಮಾಡಿದ.

"ಕ್ಷಮಿಸಿ, ಅನಂತರಾವ್. ಮೊದಲ ಪರಿಚಯದಲ್ಲಿ ಅಸಭ್ಯ ವರ್ತನೆ ತೋರಿಸಿದೆ. ನನ್ನ ಮನಸ್ಸೇ ಸ್ತಿಮಿತದಲ್ಲಿಲ್ಲ ಇವೊತ್ತು."

ಆಮೇಲೆ ಇಬ್ಬರೂ ಗ್ರ್ಯಾಂಟ್ ರೋಡಿನಲ್ಲಿ ಗಾಡಿಯಿಂದಿಳಿದು ನಿಲ್ದಾಣ ಬಿಟ್ಟು ಹೊರಗೆ ಬರುವ ತನಕ ಯಾವ ಮಾತನ್ನೂ ಆಡಲಿಲ್ಲ.

ರಾಜೀವನ ದಾರಿ ಬೇರೆಯಿದೆಯೆಂದು ಅನಂತ ತಿಳಿದೊಡನೆ, "ಗುಡ್ ನೈಟ್ ಹಾಗಾದರೆ, ನಮಸ್ತೇ. ಮುಂದೆ ಎಂದಾದರೂ ಭೆಟ್ಟಿಯಾಗೋಣ" ಎಂದಾಗ ರಾಜೀವ ಕೈಹಿಡಿದು ಅವನನ್ನು ನಿಲ್ಲಿಸಿದ.

"ನಿಮಗೆ ಅವಸರದ ಕೆಲಸವೇನಾದರೂ ಇದೆಯೆ ಈಗ ?"

ಅನಂತನಿಗೆ ಆಶ್ಚರ್ಯವಾದರೂ ತೋರಗೊಡಲಿಲ್ಲ.

"ಹಾಗೇನಿಲ್ಲ. ಊಟ, ಸ್ವಲ್ಪ ಓದು, ಮತ್ತೆ ನಿದ್ರೆ."

"ಅಷ್ಟೆಯೆ ? ಪರವಾಯಿಲ್ಲ. ನನ್ನೊಡನೆ ಬರುವಿರೇನು, ಒಂದೆರಡು ಘಂಟೆ ಹೊತ್ತು ?"

"ಎಲ್ಲಿಗೆ ?"

"ಮೊದಲು ಒಂದು ಶವವಹನ. ಆಮೇಲೆ ಬೇಕಾದರೆ ಮಾತುಕತೆ."

ಅನಂತ ರಾಜೀವನನ್ನೇ ಎವೆಯಿಕ್ಕದೆ ನೋಡಲಾರಂಭಿಸಿದ. ಯಾವುದೋ ಒಂದು ವಿಯೋಗದಿಂದ ನೊಂದುಕೊಂಡಿದ್ದ ರಾಜೀವನನ್ನು ಅನವಶ್ಯಕ ನೋಯಿಸಿದೆನೇ ಎಂದು ಮರುಗಿ,

"ಕ್ಷಮಿಸಿ, ರಾಜೀವ. ನಿಮ್ಮ ಆಪ್ತರು ಯಾರೋ ತೀರಿಕೊಂಡಿರುವರೆಂದು ನನಗೆ ತಿಳಿದಿರಲಿಲ್ಲ."

"ಎಲ್ಲರೂ ನನಗೆ ಆಪ್ತರೇ, ಅನಂತರಾವ್. ತೀರಿಕೊಂಡವರು ಸಮೀಪದ, ರಕ್ತಸಂಬಂಧದ ಬಂಧುಗಳೇನೂ ಆಗಿರಲಿಲ್ಲ. ಅಲ್ಲಿಯ ಜೀವನ ನೀವೇ ನೋಡುವಿರಂತೆ, ಬನ್ನಿ" ಎಂದು ಅನಂತನನ್ನು ಎಳೆದುಕೊಂಡೇ ಮುಂದೆ ನಡೆದ. ಅನಂತನ ಮನಸ್ಸಿನ ಅಂತರಾಳದಲ್ಲಿ 'ಈ ಪ್ರವಾಸ ಬೇಡ' ಎನ್ನುತ್ತಿದ್ದ ಒಂದು ವಿರೋಧದ ದನಿಯೂ ರಾಜೀವನ ಒತ್ತಾಯದಿಂದಾಗಿ ಸದ್ದಿಲ್ಲದೆ ನಾಶವಾಗಿತ್ತು.

"ನೀನು ಮುಂದೆ ಹೋಗು, ಗಿರಿಯು. ನಾವು ಹಿಂದಿನಿಂದ ಬರುತ್ತೇವೆ" ಎಂದು ರಾಜೀವ ಹೇಳಿದಾಗಲೇ ಅನಂತ ಮೊದಲ ಬಾರಿಗೆ ರಾಜೀವನ ಜೊತೆಯಲ್ಲಿದ್ದ ಹತ್ತು ವರ್ಷದ ಎಳೆಯ ಹುಡುಗನನ್ನು ಗುರುತಿಸಿದುನು. ಮೌನವಾಗಿ ಅವನು ರಾಜೀವನನ್ನನುಸರಿಸಿದ್ದುದರಿಂದ, ಯಾರೋ ಬೇರೆ ಪ್ರಯಾಣಿಕನಿರಬಹುದೆಂದು ಅನಂತ ಭಾವಿಸಿದ್ದ.

"ಆ ಹುಡುಗ ನಿಮ್ಮ ಸಂಬಂಧಿಕನೇ ?"

"ನಾನು ಈ ಮೊದಲೇ ಹೇಳಿದೆನಲ್ಲ, ಎಲ್ಲರೂ ನನ್ನ ಸಂಬಂಧಿಕರೆಂದು. ತೀರಿಕೊಂಡಿರುವುದು ಈ ಹುಡುಗನ ಅಣ್ಣ, ಹದಿನೆಂಟು ವರ್ಷ ಪ್ರಾಯದ ಇನ್ನೊಬ್ಬ ಹುಡುಗ."

ಅನಂತ ಈ ವಿಚಾರ ಮತ್ತೆ ಮಾತು ಬೆಳೆಸಲಿಲ್ಲ.

ಇಬ್ಬರೂ ಮೌನವಾಗಿಯೇ ಮುಂದೆ ಸಾಗಿದ್ದರು. ಆದರೆ ಮೌನ ಅವರಿಬ್ಬರ ಮಾತಿಗಷ್ಟೆ ಅನ್ವಯಿಸಿತ್ತು. ಶಹರವಿನ್ನೂ ನಿದ್ರಿಸಲು ಆರಂಭಿಸಿರಲಿಲ್ಲ. ಗ್ರ್ಯಾಂಟ್ ರೋಡ್ ವಿಭಾಗದ, ಅತ್ಯಂತ ಜನನಿಬಿಡ ಪ್ರದೇಶಗಳಲ್ಲಿ, ದಿನದ ಗೊಂದಲ ಇನ್ನೂ ಇತ್ತು.

ಅನಂತ, ರಾಜೀವ ಮಾತನಾಡದೆಯೇ ಮುಂದೆ ಸಾಗಿದ್ದರು.

ಲೆಮಿಂಗ್ಟನ್ ರಸ್ತೆಯನ್ನು ಹಾದು ತಾರ್‌ದೇವ್ ಟ್ರಾಂ ಜಂಕ್ಶನಿಗೆ ಬರುವ ತನಕವೂ ಅನಂತನಿಗೆ ತಾನೆಲ್ಲಿಗೆ ಹೊರಟಿದ್ದೇನೆಂಬುದರ ಕಲ್ಪನೆ ಇರಲಿಲ್ಲ. ಸಮೀಪದಲ್ಲಿಯೇ 'ಕೆಂಪು ದೀಪ'ದ ಶಹರದ ಅಸಹ್ಯಸ್ವರೂಪದ ವಿಭಾಗವಿದೆಯೆಂದು ಮನವರಿಕೆಯಾಗತೊಡಗಿದೊಡನೆ ರಾಜೀವನೊಡನೆ ಕೇಳಿದ :

"ಇನ್ನೂ ದೂರವಿದೆಯೆ ?"

ಅನಂತನ ಸಂದೇಹ ರಾಜೀವನಿಗೆ ಅರ್ಥವಾಗಿತ್ತು.

"ಹೆದರಬೇಕಾದ ಅಗತ್ಯವೇನೂ ಇಲ್ಲ, ಅನಂತರಾವ್. ಈಗಲೇ ಹೇಸಿಗೆಯಾಗತೊಡಗಿತೇನು ? ಇನ್ನೈದೇ ನಿಮಿಷ. ಆ 'ಮಹಾರಾಜಾ ಟೆರೇಸ್' ಇದೆಯಲ್ಲ ; ಅದರ ಪಕ್ಕದ ಕಟ್ಟಡದಲ್ಲಿ, ಮೂರನೆಯ ಮಾಳಿಗೆ."

ಅನಂತನಿಗೆ ತನ್ನ ಸಂದೇಹದ ಬಗ್ಗೆ ತನಗೇ ನಾಚಿಕೆಯಾಯಿತು.

ಗುರಿ ತಲಪಿದ ಮೇಲೂ ಅನಂತ ಮೊದಲು ನಿಧಾನಿಸಿದ. ಶಹರದಲ್ಲಿ ವಿದ್ಯುದ್ದೀಪದ ಪ್ರಭೆಯಿತ್ತು. ಈ ಕಟ್ಟಡಕ್ಕೆ ಆ ಸೌಭಾಗ್ಯವಿರಲಿಲ್ಲ. ಐದು ಮಾಳಿಗೆಗಳ ಕಟ್ಟಡದಲ್ಲಿ ಕಡಿಮೆಯೆಂದರೆ ಮುನ್ನೂರು ಕುಟುಂಬಗಳಾದರೂ ವಾಸಿಸುತ್ತಿದ್ದವು ; ಹೆಚ್ಚುಕಡಿಮೆ ಮೂರು ಸಾವಿರ ಜನ.

ಮಾಳಿಗೆಯ ಮೆಟ್ಟಲೇರುವಾಗ ಅನಂತನ ಕೈಹಿಡಿದು ರಾಜೀವ ಹೇಳಿದ :

"ಸ್ವಲ್ಪ ಜಾಗ್ರತೆ ಬನ್ನಿ. ಕತ್ತಲಲ್ಲಿ ಕಾಣುವುದಿಲ್ಲ. ಈ ಮೆಟ್ಟಲುಗಳು ಯಮಲೋಕದ ಮೆಟ್ಟಲುಗಳೇ."

ಅನಂತ ಈಗಲೂ ಮಾತನಾಡಲಿಲ್ಲ. ಆಗಲೇ ಕೆಳಗಿನ ವಸತಿಗಳ, ಬಳಿಯಿದ್ದ ಕಸ ಕೊಳಚೆಗಳ ದುರ್ಗಂಧ ಮೂಗಿಗೆ ಬಡಿಯಲಾರಂಭಿಸಿತ್ತು. ಅನಂತ ಕರವಸ್ತ್ರ ತೆಗೆದು ಮುಖ ಮುಚ್ಚಿಕೊಂಡಾಗ ರಾಜೀವನಿಗೆ ನಗುಬಂತು.

"ಆಗಲೇ ಹೆದರಿದಿರೇನು ? ಇದು ಸಮ್ಮಿಶ್ರ ಜನಜೀವನದ ಸಂಕೇತದಂತಿರುವ ಕಟ್ಟಡ, ಅನಂತರಾವ್. ಮುಸ್ಲಿಮರ ಬಿರಿಯಾಣಿಯ ವಾಸನೆ

ನಿಮಗಾಗುವ್ರದಿಲ್ಲವೆ ? ಕಸ, ಕೊಳೆ, ಎಲ್ಲ ಕಡೆಗಳಲ್ಲೂ ಇದ್ದುದೇ, ಬಿಡಿ. ಮ್ಯುನಿಸಿಪಾಲಿಟಿಯವರಿಗೆ ಬೇರೆಲ್ಲ ಕಡೆಗಳ ಕಸ ತೆಗೆದು ಮುಗಿಸುವಾಗ ಸಮಯವೇ ಉಳಿಯುವುದಿಲ್ಲ; ಸಮಯ ದೊರಕಿದಾಗ ಈ ಕಟ್ಟಡದ ಪತ್ತೆಯೇ ಸಿಗುವುದಿಲ್ಲ, ಗ್ರಹಚಾರ."

ಅನಂತ ಈಗಲೂ ಮಾತನಾಡಲಿಲ್ಲ.

ಮೂರು ಮಾಳಿಗೆಗಳನ್ನು ಕಷ್ಟದಿಂದ ಏರಿ, ಒಂದು ಕೊಟಡಿಯ ಬಳಿ ಬಂದು ರಾಜೀವ ನಿಂತ. ಹೊರಗೆ ಬಾಗಿಲ ಬಳಿ ಇರಿಸಿದ್ದ ಬಿದಿರಿನ ಸಿದಿಗೆಯನ್ನು ಕಂಡೇ ಅನಂತನಿಗೆ 'ಇದೇ ನಮ್ಮ ಗುರಿ' ಎಂದೆನಿಸಿತ್ತು. ಆದರೆ ಏಳೆಹರೆಯದ ಹುಡುಗ ಸಾವನ್ನಪ್ಪಿದ ಮನೆ ಇದೇ ಎಂದು ಸಂದೇಹ ತರಿಸಲು ಆ ಮನೆಯ ಮೌನ ಕಾರಣವಾಗಿತ್ತು. ಅಲ್ಲಿ ಯಾರೂ ಗಟ್ಟಿಯಾಗಿ ಅಳುವ ಸದ್ದು ಕೇಳಿಸುತ್ತಿರಲಿಲ್ಲ.

ರಾಜೀವ ಯಾವ ಉಪಚಾರವೂ ಇಲ್ಲದೆ, ಬಾಗಿಲು ದೂಡಿಕೊಂಡು ಒಳಗೆ ಹೋದ. ಅನಂತ ಅವನನ್ನೇ ಹಿಂಬಾಲಿಸಿದ. ಒಳಗೆ ಹೋದ ಅನಂತ ಮಾತ್ರ ತನ್ನ ಕಣ್ಣುಗಳನ್ನೇ ತಾನು ನಂಬಲಿಲ್ಲ.

ನೂರಿಪ್ಪತ್ತು ಚದರಡಿ ಸ್ಥಳದ ಕೊಟಡಿಯಲ್ಲಿ, ಒಂದು ಮೂಲೆಗೆ ಮಾತ್ರ ಅಡಿಗೆಯ ಚಿಟ್ಟಿಗೊಂದಿಷ್ಟು ಸ್ಥಳ. ಇನ್ನೊಂದು ಮೂಲೆಯಲ್ಲಿ ಒಂದು ಹರಕಲು ಚಾಪೆಯ ಮೇಲೆ ಈಗ ಪ್ರೇತವಾಗಿದ್ದ ದೇಹ. ಒಂದು ಚಿಮಿಣಿ ಎಣ್ಣೆಯ ಕಂದೀಲು ಕೋಣೆಗೆ ಬೆಳಕಾಗಿತ್ತು. ಉಳಿದ ಸ್ಥಳದಲ್ಲಿ ನಾಲ್ಕಾರು ಮಕ್ಕಳು, ಮೂರು ನಾಲ್ಕು ಜನ ಹೆಂಗಸರು ಕುಳಿತಿದ್ದರು. ಅಡಿಗೆಯ ಚಿಟ್ಟಿಯ ಬಳಿ ಕುಳಿತ ಒಂದು ಮುದುಕಿಯ ಕಣ್ಣಿಂದ ಮಾತ್ರ ಧಾರಾಕಾರವಾಗಿ ನೀರಿಳಿಯುತ್ತಿತ್ತು.

ಮೂಕರೋದನ ಕೋಣೆಯಗಲ ವ್ಯಾಪಿಸಿತ್ತು.

"ನಂದ್ಯಪ್ಪ ಇನ್ನೂ ಬರಲಿಲ್ಲವೆ, ಗಿರಿಯ ?" ಎಂದು ರಾಜೀವ ಹುಡುಗನನ್ನು ಕೇಳಿದ.

"ಬಂದು ಸೋನಾಪುರಕ್ಕೆ ಹೋಗಿದ್ದಾರಂತೆ" ಎಂದು ತೆಗೆದ ಬಾಯಿಗೆ ಗಿರಿಯ ಉತ್ತರವಿತ್ತ.

ರಾತ್ರೆ ಘಂಟೆ ಹತ್ತಾಗಿತ್ತು. ಮಕ್ಕಳೆಲ್ಲ ಅಲ್ಲಲ್ಲಿ ಮುದುಡಿ. ಅತ್ತು

ಕೊಂಡು ಮಲಗಿಕೊಳ್ಳಲು ಯತ್ನಿಸುತ್ತಿದ್ದವು ಒಬ್ಬಿಬ್ಬ ಹೆಂಗಸರು ಅಳು ತ್ತಿದ್ದರು—ಅದೂ ಸದ್ದಿಲ್ಲದೆ.

"ಸೂರಪ್ಪ, ರಾಘು ಬಂದಿಲ್ಲವೇನು ?" ರಾಜೀವ ಪುನಃ ಕೇಳಿದ.

"ಚಿಕ್ಕ ತಂದೆಗೆ 'ರಾತ್ ಪಾಳಿ'; ಹೋಗಿದ್ದಾರೆ. ಮಾವ...."ಎಂದು ಹೇಳುತ್ತಿದ್ದಂತೆ ರಾಘು ಒಳಗೆ ಬಂದ.

ತುಂಬ ಕುಡಿದಿದ್ದುದರಿಂದ ದೇಹ ಜೋಲುತ್ತಿತ್ತು. ಬಂದವ ಯಾರನ್ನೂ ನೋಡದೆ ತನ್ನ ಹಳೆಯ ಕೋಟು ಕಳಚಿ ಗೂಟಕ್ಕೆ ತಗಲಿಸಿ, ನೆಟ್ಟಗೆ ಬಂದು ಶವದ ಬಳಿ ಕುಳಿತು, "ಹೇಗಿದ್ದೀ ಮಗನೆ ?" ಎಂದು ಕೇಳಿದ.

ಆಗ ಮಾತ್ರ ರಾಜೀವ ಅವನನ್ನು ಹಿಡಿದೆಳೆದು ಕೆನ್ನೆಗೊಂದು ಏಟು ಬಿಗಿದ.

"ಪ್ರಜ್ಞೆಯಿದೆಯೇನು ಮೈಯಲ್ಲಿ ? ಸಂಕು ಸ್ವರ್ಗಕ್ಕೆ ಹೋಗಿದ್ದಾನೆ. ಕುಡಿದು ಬಂದು ಬಾಯಿಗೆ ಬಂದಂತೆ ಬೊಗಳುತ್ತಾನೆ. ಕೈಯಲ್ಲಿ ಒಂದು ರೂಪಾಯಿಯಾದರೂ ಉಳಿದಿದೆಯೆ ?"

"ನನಗೆ ಬುದ್ಧಿ ಹೇಳುವವ ನೀನು ಯಾರೋ ಬೋ....?"

ರಾಜೀವ ಇನ್ನೊಂದು ಏಟು ಬಿಗಿದ ಮೇಲೆ ರಾಘು ಮಾತನಾಡದೆ, ಪುನಃ ಕೋಟು ಸಿಕ್ಕಿಸಿಕೊಂಡು ಅಲ್ಲಿಂದ ಹೊರಬಿದ್ದ.

ಅಲ್ಲಿದ್ದ ಹೆಂಗಸರೆಲ್ಲ ಈಗ ಜೋರಾಗಿ ಅಳತೊಡಗಿದರು.

ಈಗಲೂ ಗದರಿಸಿದ್ದು ರಾಜೀವನೆ.

"ದಯಮಾಡಿ ಬೊಬ್ಬೆ ಹಾಕಬೇಡಿ. ಹೆತ್ತ ಕರುಳಿಗೆ ನಾಲ್ಕು ದಿನ ವೇದನೆಯಾಗುತ್ತದೆ. ಆಮೇಲೆ ಮರೆತುಹೋಗುತ್ತದೆ. ಇನ್ನಾದರೂ, ರೋಗಿಯನ್ನು ಉಪಚರಿಸುವ ರಗಳೆಯಿಲ್ಲವಲ್ಲ."

ಅನಂತನಿಗೆ ತಾನೆಲ್ಲಿದ್ದೇನೆಂಬುದರ ಪ್ರಜ್ಞೆಯೇ ಇರಲಿಲ್ಲ. ಒಂದು ಅಪರಿಚಿತ ವ್ಯಕ್ತಿ ಬಂದು ಮನೆಯಲ್ಲಿ ಈ ರೀತಿಯ ಅಧಿಕಾರ, ಅದೂ ಸಾವಿನ ರುದ್ರರಾತ್ರಿಯಂದು, ನಡೆಸುವುದು ಸರಿಯೇ ಎಂದು ಆತ ಯೋಚಿಸುತ್ತಿದ್ದ. ರಾಜೀವನ ಮಾತಿನಲ್ಲಿ ಅಡಕವಾಗಿದ್ದ ನೈಷ್ಠುರ್ಯದಿಂದ ಆತ ಅಚ್ಚರಿಗೊಂಡಿದ್ದ.

ರಾಜೀವ ಶವವನ್ನು ಹೊದಿಸಿ, ಅನಂತನ ಸಹಾಯದಿಂದ ಸಿವಿಗೆಯಲ್ಲಿ ಕಟ್ಟಿ, ಎಲ್ಲ ಕೆಲಸಗಳನ್ನು ಮುಗಿಸಿದಾಗ ನಂಟ್ಯಪ್ಪ ಬಂದ. ರಾಜೀವನನ್ನು ಕಂಡು ಅವನ ಕಣ್ಣಲ್ಲಿ ನೀರಿಳಿಯಲಾರಂಭಿಸಿತು.

"ದೇವರ ಹಾಗೆ ಬಂದಿರಿ. ನನಗೆ ಏನು ಮಾಡುವುದೆಂದು ಗೊತ್ತಿಲ್ಲ."

"ದಯಮಾಡಿ ದೇವರಿಗೆ ನನ್ನನ್ನು ಹೋಲಿಸುವುದು ಬೇಡ. ಈಗ ಮಾಡಬೇಕಾಗಿರುವುದು ಬೂದಿ. ಹೊರಡೋಣವೇ ಅಥವಾ ಇನ್ನು ಯಾರ ನ್ನಾದರೂ ಕಾಯಬೇಕಾಗಿದೆಯೆ ?"

"ಯಾರು ಬರುತ್ತಾರೆ, ರಾಘು...."

"ದಯಮಾಡಿ ಅವನ ಸುದ್ದಿಯೆತ್ತಬೇಡ. ಯಾರೂ ಇಲ್ಲವಾದರೆ ಸರಿ. ನನ್ನ ಗೆಳೆಯರೊಬ್ಬರಿದ್ದಾರೆ. ಪಕ್ಕದ ಮನೆಯಿಂದ ಇನ್ನು ಯಾರಾದರೊಬ್ಬ ರನ್ನು ಕರಿ. ರಾತ್ರಿ ಈಗಲೇ ತಡವಾಯಿತು."

ಸಂಕುವಿನ ಸ್ಮಶಾನ ಮೆರವಣಿಗೆ ಮೌನವಾಗಿಯೇ ಸಾಗಿತು. ಶವವನ್ನು ಕೈಗೆತ್ತಿಕೊಂಡಾಗ ಮನೆಯಲ್ಲಿ ಆದ ಆರ್ತನಾದ ಅನಂತನ ಹೃದಯದಲ್ಲಿ ಮರುದನಿ ಕೊಡಲಾರಂಭಿಸಿತು. ಅವನ ಕಣ್ಣಲ್ಲೂ ನೀರೊಸರಿತ್ತು. ಆದರೆ ರಾಜೀವ ಮಾತ್ರ ಅಳಲಿಲ್ಲ.

ಶವದಹನ ಮುಗಿಸಿದ ಮೇಲೆ, ರಾಜೀವ ನಂಜ್ಯಪ್ಪನೊಡನೆ "ನಾಳೆ ಮನೆಯೆಲ್ಲ ಸ್ವಲ್ಪ ಸಾಧ್ಯವಾದರೆ ತೊಳೆದುಬಿಡು. ನಾಳೆ, ತಪ್ಪಿದರೆ ನಾಡಿದ್ದು ನಾನು ಬಂದು ನೋಡುತ್ತೇನೆ" ಎಂದು, ಅನಂತನ ಜೊತೆಗೆ ನಡೆದ.

ರಾತ್ರೆ ಒಂದು ಘಂಟೆಯಾಗಿತ್ತು. "ನನ್ನೊಡನೆ ಬರುವ ಅಗತ್ಯವಿಲ್ಲ; ನಾನು ಒಬ್ಬನೇ ಹೋಗುತ್ತೇನೆ. ಪ್ರಾರ್ಥನಾ ಸಮಾಜದವರೆಗೆ ಹೋದರೆ ಸರಿ" ಎಂದು ಅನಂತ ಹೇಳಿದರೂ ರಾಜೀವ ಕೇಳಲಿಲ್ಲ.

ಜೊತೆಗೆ ನಡೆಯುತ್ತಿದ್ದಾಗ ಅನಂತ ಕೇಳಿದ :

"ಹುಡುಗನಿಗೇನಾಗಿತ್ತು ?"

"ಟೈಫೈಡ್,"

"ಅಂಥ ರೋಗಕ್ಕೆ ಮನೆಯಲ್ಲೇ ಆರೈಕೆಯೆ ? ಆಸ್ಪತ್ರೆಗೆ ಕಳಿಸಬಹು ದಿತ್ತಲ್ಲ ?"

"ಆಸ್ಪತ್ರೆಗೆ ಟೈಫೈಡ್ ಬಂದರೆ 'ಐಸೋಲೇಶನ್' ಆಗಬೇಕೆಂದು, ಆರ್ಥರ್ ರೋಡಿಗೆ ಹೋಗಬೇಕಾಗಿದೆಯೆಂದು ತಿಳಿದಿದೆಯೇನು, ಅನಂತರಾವ್. ಬೇರೆ ಆಸ್ಪತ್ರೆಗಳಲ್ಲಿ ಬಡ ರೋಗಿಗಳಿಗೆ 'ಟೈಫೈಡ್' ಬಂದರೆ ಪ್ರವೇಶ ಸಿಗುವುದೆ ?"

"ಮನೆಯಲ್ಲಿ ಅಷ್ಟೊಂದು ಜನರಿದ್ದಾರಲ್ಲ; ಉಳಿದವರಿಗೆ ಯಾರಿಗಾದರೂ ಅಂಟಕೊಂಡರೆ?"

"ನೀವು ಇದೇ ಮೊದಲು ಮುಂಬಯಿಯ 'ಚಾಳ್'ಗಳನ್ನು ನೋಡಿದಂತಿದೆ, ಅನಂತರಾವ್. ಮೂರು ಕುಟುಂಬಗಳು ಆ ಕೋಣೆಯೊಂದರಲ್ಲಿ ಬೀಡುಬಿಟ್ಟಿದ್ದಾವೆ. ನಂಧ್ಯಪ್ಪ ಒಬ್ಬ ಆಫೀಸು ಸಿಪಾಯಿ. ಈಗ ತೀರಿಕೊಂಡದ್ದು ಅವನ ಮಗ ಸಂಕು. ಇನ್ನು ಐದು ಜನ ಮಕ್ಕಳು ಅವನಿಗೇ ಇದ್ದಾವೆ. ತಮ್ಮ ಸೂರಪ್ಪ ಒಂದು ಮಿಲ್‌ನಲ್ಲಿ ದುಡಿಯುತ್ತಾನೆ. ಟ್ಯಾಕ್ಸಿ ಡ್ರೈವರ್ ರಾಘು ನಂಧ್ಯಪ್ಪನ ಹೆಂಡತಿಯ ತಮ್ಮ. ಬಂದ ಹಣವೆಲ್ಲ ಬಾಟಲಿಗೆ ಮೀಸಲು. ಆ ಮೂರು ಸಂಸಾರಗಳು ಒಂದು ಕೋಣೆಯಲ್ಲಿ. ನೋಡಿದಿರೇನು ಜೀವನ, ಹೇಗಿದೆಯೆಂದು?"

ಅನಂತ ಮಾತನಾಡಲಿಲ್ಲ. ಈ ಕುಟುಂಬ ಜೀವನದ ಸಾಮಾಜಿಕ ಸ್ವರೂಪ, ಇದರ ಸಾಮಾಜಿಕ ಪ್ರತಿಕ್ರಿಯೆಗಳು, ಇವುಗಳ ಕುರಿತು ಆತ ಚಿಂತಿಸತೊಡಗಿದ್ದ. ಎಲ್ಲಕ್ಕಿಂತ ಹೆಚ್ಚು, ಈ ರೀತಿಯ ಕುಟುಂಬ ಜೀವನದಲ್ಲಿ ಅಡಕವಾಗಿದ್ದ ಲೈಂಗಿಕ ಪ್ರಶ್ನೆಯ ಶಿಥಿಲ ಸ್ವರೂಪ ಆತನನ್ನು ಕಂಗೆಡಿಸಿತ್ತು.

ಮೂರು ಕುಟುಂಬಗಳು ಒಂದೇ ಕೋಣೆಯಲ್ಲಿರುವುದು ಸಾಧ್ಯವೇ? ಎಂದು ಆತ ತನ್ನನ್ನೇ ತಾನು ಕೇಳಿಕೊಳ್ಳುತ್ತಿದ್ದ.

ಹಾಗಾದರೆ ಏಕಾಂತತೆಯೆಲ್ಲಿಯಿತು?

'ನಾವು ಮನುಷ್ಯರೇ ಅಥವಾ ಪ್ರಾಣಿಗಳೇ?' ಎಂದು ಆತ ಚಿಂತಿಸುತ್ತಿದ್ದಾಗ ರಾಜೀವ ಎಚ್ಚರಿಸಿದ:

"ಅಷ್ಟು ಯೋಚನೆ ಮಾಡಬಾರದು, ಅನಂತರಾವ್. ದೀಪದಡಿಯ ಕತ್ತಲನ್ನು ಯಾರೂ ಗಮನಿಸುವುದಿಲ್ಲ." ಆ ಮಾತಿನಲ್ಲಿ ನಂಜು ಬೆರೆತಿತ್ತು.

ಪ್ರಾರ್ಥನಾ ಸಮಾಜದ ಬಳಿಯ ಖಾನಾವಳಿ ತಲಪಿದೊಡನೆ ಅನಂತ ರಾಜೀವನೊಡನೆ ಇಷ್ಟರತನಕ ಮರೆತಿದ್ದ ಒಂದು ಪ್ರಶ್ನೆ ಕೇಳಿದ:

"ನೀವಿರುವುದೆಲ್ಲಿ?"

"ಅಂಧೇರಿಯಲ್ಲಿ."

"ಈಗ ಇನ್ನು ಅಲ್ಲಿಯ ತನಕ ಹೋಗಬೇಕೇ? ನಮ್ಮಲ್ಲಿ ನಿಲ್ಲಬಹುದಲ್ಲ."

"ಸಾಧ್ಯವಿಲ್ಲ. ಹೋಗಲೇ ಬೇಕು ನಾಳೆ ಪುನಃ ನಿಮ್ಮನ್ನು ಕಾಣು

ತ್ತೇನೆ. ಸಂಜೆಗೆ ಬಿಡುವಿದೆಯೆ? ಬೋರಿಬಂದರ ನಿಲ್ದಾಣೆಯಲ್ಲಿ ಸಿಗುವಿರೇನು ಆರು ಘಂಟೆಗೆ? ನಿಮಗಾಗಿ ಕಾದಿರುತ್ತೇನೆ."

ಅನಂತ "ಹೂಂ" ಎಂದ

ಶಹರ ಸಂಪೂರ್ಣ ನಿದ್ರಿಸಿತ್ತು. ಕತ್ತಲಲ್ಲಿ ದೂರದಲ್ಲಿ ಮರೆಯಾಗುತ್ತಿದ್ದ ರಾಜೀವನನ್ನೇ ನೋಡುತ್ತ ಐದು ನಿಮಿಷ ಅನಂತ ನಿಂತಿದ್ದ. ಮತ್ತೆ ತನ್ನ ಖಾನಾವಳಿಯ ಮಾಳಿಗೆಯ ಮೆಟ್ಟಲೇರಲಾರಂಭಿಸಿದ.

೧೪

ರಾಜೀವನನ್ನು ಬೀಳ್ಕೊಟ್ಟು ತನ್ನ ಕೋಣೆಗೆ ಮರಳಿದ ಅನಂತನ ತಲೆ ತುಂಬ ಆಲೋಚನೆ.

ಈ ರಾಜೀವ ಯಾರಾಗಿರಬಹುದು? ಆತನ ಉದ್ಯೋಗವೇನಾಗಿರಬಹುದು? ಆತ ಏಕೆ ಇಷ್ಟು ನಿಷ್ಠುರಿ, ನಿರ್ದಯಿಯೆಂದು ಕಂಡುಬರುತ್ತಿದ್ದಾನೆ?

ತನ್ನನ್ನು ಆ ಹೊಲಗೇರಿಗೆ ಕೊಂಡೊಯ್ದ ಆತನ ಉದ್ದೇಶವಾದರೂ ಏನಿದ್ದಿರಬಹುದು?

ಬರೇ ಸಂಕುವಿನ ಶವವನ್ನು ಹೊರಲೆಂದೇ?

ಆ ನಿರ್ಭಾಗ್ಯ ಜೀವಿಯ ನೆನಪಾದೊಡನೆ ಅನಂತನ ಯೋಚನೆ ಇನ್ನೊಂದೆಡೆ ಹರಿಯಿತು.

ಆ ಕುಟುಂಬದ ಇನ್ನೊಂದು ಬೆಳಕು ನಂದಿಹೋಯಿತು. ನಾಳೆ ದುಡಿದು ಸಹಾಯ ಮಾಡಬಹುದಾಗಿದ್ದ ಜೀವ. ಸರಿಯಾದ ಆರೈಕೆ ಉಪಚಾರಗಳ ಕೊರತೆಯಿಂದ ನಿಷ್ಕಾರಣವಾಗಿ ಕೊನೆಯುಸಿರೆಳೆದ ಜೀವ.

ಏಕೆ ಹೀಗಾಗುತ್ತಿದೆ?

ಕೋಣೆಗೆ ಬಂದು ಅನಂತ ದೀಪ ಹತ್ತಿಸಿದಾಗಲೇ ಪಕ್ಕದ ಮಂಚದಲ್ಲಿದ್ದ ಸಹವಾಸಿಗಳು ತಮ್ಮ ನಿದ್ರಾಭಂಗವಾಯಿತೆಂದು ತೋರಿಸಲು ಅತ್ತಿತ್ತ ಹೊರಳಲಾರಂಭಿಸಿದ್ದರು. ಸಂಜೆ ಅನಂತ ಹೋಟೆಲಿಗೆ ಬಂದಿರಲಿಲ್ಲ. ಸೀದಾ ಅಂಧೇರಿಗೆ ಹೋಗಿದ್ದ. ಹೀಗಾಗಿ ಮೇಜಿನ ಮೇಲೆ ದೃಷ್ಟಿ ಹೊರಳಿಸಿದಾಗ ತನ್ನ ವಿಳಾಸದ ಒಂದು ಪತ್ರ ಕಂಡುಬಂದುದರಿಂದ ಅನಂತ ಅದನ್ನು ಒಡೆದು ಓದಿದ—ಮನೆಯಿಂದ ಬಂದ ಪತ್ರ. 'ಎರಡು ತಿಂಗಳುಗಳಿಂದ ಪಪ್ಪನಿಗೆ

ಸೌಖ್ಯವಿಲ್ಲ. ಅವನ ಶಾಲೆ ನಿಂತಿದೆ. ಔಷಧಿ ಕೊಡಿಸುತ್ತಿದ್ದೇನೆ ಯಾರಿಗೂ ರೋಗ ಯಾವುದೆಂದು ಸರಿಯಾಗಿ ಹೇಳಲು ಗೊತ್ತಿಲ್ಲ.'

ಅನಂತ ಪತ್ರವನ್ನು ಮೇಜಿನ ಮೇಲೊಗೆದು ದೀಪವಾರಿಸಿ ಮಂಚದ ಮೇಲೊರಗಿ ಪುನಃ ಆಲೋಚಿಸಲಾರಂಭಿಸಿದ.

'ಸದ್ದ ಕೂಡ ಓದು ಮುಗಿಸಿ ದುಡಿಯಲು ತೊಡಗುತ್ತಾನೆ, ಎಂದು ಅಪ್ಪಯ್ಯನ ಆಸೆ. ಅವನ ಓದಿಗೂ ಅರ್ಧದಲ್ಲಿಯೇ ತಡೆಯೆ? ಎರಡು ತಿಂಗಳು ಕಾಡಿಸುತ್ತಿರುವ ಕಾಯಿಲೆ ಎಂಥದಾಗಿರಬಹುದು?'

ಯೋಚಿಸುತ್ತಲೇ ಅನಂತ ನಿದ್ದೆ ಹೋದ.

ಮರುದಿನ ಅನಂತ ಬೇಗ ಎದ್ದಿದ್ದ; ಹಿಂದಿನ ರಾತ್ರಿ ನಿದ್ದೆಯಿಲ್ಲದಿದ್ದುದರಿಂದ ಉಂಟಾದ ಆಯಾಸವನ್ನೂ ಮರೆತು, ಮನಸ್ಸು ರಾಜೀವನನ್ನು ಕಾಣಲು ತವಕಿಸುತ್ತಿತ್ತು. ಆತ ಏಕೆ ಸಂಜೆಗೆ ಅವಶ್ಯ ಸಿಗುವಂತೆ ಹೇಳಿ ಹೋಗಿದ್ದಾನೆ? ಯಾವ ಉದ್ದೇಶದಿಂದ ಆತ ತನ್ನ ಪರಿಚಯವನ್ನು ಬೆಳೆಸಿಕೊಳ್ಳಲಿಚ್ಛಿಸುತ್ತಾನೆ?

ಅಂದು ಆಫೀಸಿನಲ್ಲಿಯೂ ತುಂಬ ಗಡಿಬಿಡಿಯೆ. ಇನ್ನೂರು ಜನ ಕಾರಕೂನರು ಸಾಮೂಹಿಕ ಶಕ್ತಿಯೆಂಬುದರೇನೆಂಬುದನ್ನು ಅರಿತಿದ್ದಾರೆ ಎಂದು ಹಲವಾರು ಉದ್ಯಮಗಳ ಮುಖ್ಯ ಸೂತ್ರಗಳನ್ನು ತನ್ನೊಳಗೆ ಇರಿಸಿಕೊಂಡು ಮೆರೆಯುತ್ತಿದ್ದ ಅಧಿಕಾರ ವರ್ಗಕ್ಕೆ ತಿಳಿದಾಗ, ಗೊಂದಲವೆದ್ದಿತ್ತು. ಸಿಮೆಂಟ್, ಬಣ್ಣ, ಮೆಶಿನರಿ, ಔಷಧಿಗಳೆಂದು ಆ ಕಂಪೆನಿಯವರು ನಡೆಸುತ್ತಿದ್ದ ವಹಿವಾಟಿಗೆ ಇತಿಮಿತಿಯಿರಲಿಲ್ಲ; ಎರಡು ಕಾರ್ಖಾನೆಗಳ ಮುಖ್ಯ ಸಂಚಾಲಕರೂ ಅವರೇ. ವರ್ಷಕ್ಕೆ ಬರುತ್ತಿದ್ದ ಮೂವತ್ತು ನಲವತ್ತು ಲಕ್ಷ ರೂಪಾಯಿಗಳ ಲಾಭದ ಬಹ್ವಂಶ ಸಿಗುತ್ತಿದ್ದುದೂ ಅವರಿಗೇ. ಆದರೆ ಈ ಎಲ್ಲ ಉದ್ಯಮಗಳ ಮುಖ್ಯ ಕಚೇರಿಯ ಕಾರಕೂನನು ಕೂಡ 'ಲಾಭದಲ್ಲಿ ನಮ್ಮ ಪಾಲು ಕೊಡಿ' ಎಂದು ಕೇಳುವರೆಂದು ಅವರು ಊಹಿಸಿರಲಿಲ್ಲ.

ಈ ಕೆಲಸಗಾರರ ಸಂಘದ ಕಾರ್ಯದರ್ಶಿಯಾಗಿ ಹಿಂದಿನ ದಿನ ಅನಂತ ಚುನಾಯಿತನಾಗಿದ್ದ.

ಸಂಘದ ಕಾರ್ಯಕಾರಿ ಸಮಿತಿಯ ಆಯ್ಕೆಯ ಸುದ್ದಿ ಕಾಡ್ಗಿಚ್ಚಿನಂತೆ ಆಫೀಸಿನಲ್ಲಿ ಹರಡಿತು. ನೌಕರರ ಮುಖದಲ್ಲಿ ಮುಂದೇನಾಗಬಹುದೆಂಬುದರ ಬಗ್ಗೆ ಆತುರ; ಅಧಿಕಾರಿಗಳ ಮುಖದಲ್ಲಿ ಗಂಭೀರ ಮೌನ—ಒಳಗೊಳಗೇ

ಈ ಸಂಘ ಶಕ್ತಿಗೆ ನಾವು ಮಣಿಯಬೇಕಾಗಿ ಬರಬಹುದೇ ಎಂಬ ಶಂಕೆಯಿಂದ ಉತ್ಪನ್ನವಾದ ಭೀತಿ.

ಸಂಘದ ಮನ್ನಣೆಗೆಂದು ಯೂನಿಯನ್ ಕಂಪೆನಿಗೆ ಬರೆದ ಪತ್ರ ಅವರಿಗೆ ತಲಪಿದೊಡನೆ, ಅನಂತನಿಗೂ ಸಂಘದ ಅಧ್ಯಕ್ಷರಾದ ಇನ್ನೊಬ್ಬರಿಗೂ ಒಳಗಿನಿಂದ ಕರೆಬಂತು. ಅಲ್ಲಿ ಅಧಿಕಾರ ಸಹಜವಾದ ಸಾಮ, ದಾನ, ಭೇದೋಪಾಯಗಳೆಲ್ಲ ಪ್ರದರ್ಶಿಸಲ್ಪಟ್ಟವು. ಹಿಂದಿನ ದಿನದ ನೋವಿನ ಅನುಭವದ ಚಿತ್ರ ಅನಂತನ ದೃಷ್ಟಿ ಪಥದಲ್ಲಿತ್ತು. ಹೊಸ ಬದುಕಿನತ್ತ ತನ್ನ ಸಂಗಾತಿಗಳನ್ನೆಲ್ಲ ಕೊಂಡೊಯ್ಯುವೆನೆಂಬ ಕೆಚ್ಚು ಎದೆಯಲ್ಲಿತ್ತು. ನಿರ್ಭೀತನಾಗಿ ಅನಂತ ಅಧಿಕಾರಿಗಳೆದಿರು ತಮ್ಮ ಕಾರ್ಯಕ್ರಮದ ಆವಶ್ಯಕತೆ, ಯೋಗ್ಯತೆಗಳ ಕುರಿತು ಸಕಾರಣವಾಗಿ ವಾದಿಸಿದ. ತಮ್ಮ ಬೇಡಿಕೆಗಳನ್ನು ಅವರ ಮುಂದಿರಿಸಿದ.

“ಈಗಿಂದೀಗಲೇ ನಿನ್ನನ್ನು ಕೆಲಸದಿಂದ ನಿವೃತ್ತಿಗೊಳಿಸುತ್ತೇನೆ” ಎಂಬ ಅವರ ಕೊನೆಯ ಬೆದರಿಕೆಯೂ ಫಲಕಾರಿಯಾಗಲಿಲ್ಲ.

ಶಹರದ ಸುತ್ತು ಬೇರೆ ಬೇರೆ ಕಡೆಗಳಲ್ಲಿ ಆಗುತ್ತಿದ್ದ ಮುಷ್ಕರಗಳಿಂದಲೇ ಹೆದರಿಹೋಗಿದ್ದ ಅಧಿಕಾರಿವರ್ಗ ಸಂಘದಲ್ಲಿ ಒಡಕಿನ ಚಿಹ್ನೆ ಕಾಣಿಸುತ್ತಿಲ್ಲ, ಒಡಕನ್ನು ತರಲು ಪ್ರಯತ್ನಿಸಿದರೆ ಫಲಕಾರಿಯಾಗುವಂತೆಯೂ ಇಲ್ಲ, ಎಂದು ಮನವರಿಕೆಯಾದೊಡನೆ, ಮೆಲ್ಲನೆ ಮಣಿಯುತ್ತ ಬಂದು, ಅನಂತ ಮುಂದಿರಿಸಿದ್ದ ಬೇಡಿಕೆಗಳಿಗೆ ಅರ್ಧಮರ್ಧ ಒಪ್ಪಿಗೆಯಿತ್ತಿತು.

ಇದರ ಒಳಗುಟ್ಟು ಅನಂತನಿಗೆ ತಿಳಿದಿತ್ತು. ಇದೇ ಕಂಪೆನಿಯ ಆಡಳಿತೆಯಡಿಯ ಒಂದು ಯಂತ್ರೋಪಕರಣಗಳ ತಯಾರಿಕೆಯ ಕಾರ್ಖಾನೆಯಲ್ಲಿ ಆಗತಾನೇ ಮುಗಿದಿದ್ದ ಆರು ತಿಂಗಳ ಮುಷ್ಕರ ಅಧಿಕಾರ ವರ್ಗವನ್ನು ಹಣ್ಣಾಗಿಸಿತ್ತು. ಸದ್ಯ ತಮ್ಮ ಕೇಂದ್ರ ಕಚೇರಿಯಲ್ಲಿ ಯಾವ ರೀತಿಯ ಅವ್ಯವಸ್ಥೆಯಾಗುವುದನ್ನು ಸಹಿಸಿಕೊಳ್ಳಲು ಅವರು ಸಿದ್ಧರಿರಲಿಲ್ಲ.

ಅನಂತ ಈ ಸಂಧಿಯ ಮಹತ್ವವನ್ನು ಗ್ರಹಿಸಿಯೇ ‘ಯೂನಿಯನ್’ ಚಟುವಟಿಕೆಗೆ ಕೈ ಹಾಕಿದ್ದ.

ಆಫೀಸಿನಲ್ಲಿ ತಾತ್ಕಾಲಿಕವಾಗಿಯಾದರೂ ದೊರಕಿದ ವಿಜಯದಿಂದ ಅನಂತ ಉಬ್ಬಿದ್ದ. ಸುತ್ತಮುತ್ತು ಕಾಣುತ್ತಿದ್ದ ನಗುಮೊಗಗಳನ್ನು ನೋಡಿದಾಗಲೇ ಆತನಿಗೆ ತನ್ನ ವಿಜಯದ ಸ್ವರೂಪ ಎಷ್ಟು ವ್ಯಾಪಕವಾದುದೆಂದು

ತಿಳಿವಿತ್ತು. ಈ ವಿಜಯದಿಂದ ಎಲ್ಲರಿಗೂ ದೊರಕಬಹುದಾಗಿದ್ದ ಒಂದೆರಡು ನೂರು ರೂಪಾಯಿಗಳ ಮಟ್ಟಿನ ಆರ್ಥಿಕ ಸುಧಾರಣೆಯಷ್ಟೆ ಆತನ ಆನಂದದ ಮುಖ್ಯ ಕಾರಣವಾಗಿರಲಿಲ್ಲ. ಹೊಸ ಬದುಕಿನತ್ತ ಹೋಗಲು ತವಕಿಸುವ ತನ್ನ ಜೊತೆಗೆ ಸಂಗಾತಿಗಳಾಗಿ ನಿಲ್ಲಲು ಇಷ್ಟು ಜನ ಸಿದ್ಧರಿದ್ದಾರಲ್ಲ ಎಂಬುದೇ ಆತನ ಸಂತೋಷಕ್ಕೆ ಮುಖ್ಯ ಕಾರಣವಾಗಿತ್ತು.

ಸಂಜೆ ಆರಕ್ಕೆ ಸರಿಯಾಗಿ ಅನಂತ ಬೋರಿಬಂದರ ನಿಲ್ದಾಣೆಯಲ್ಲಿ 'ಇಂಡಿಕೇಟರಿ'ನ ಬಳಿ ರಾಜೀವನಿಗಾಗಿ ಕಾದಿದ್ದ.

ಆದರೆ ರಾಜೀವ ಬರುವಾಗ ಅರ್ಧ ಘಂಟೆ ತಡ.

"ತುಂಬ ಹೊತ್ತು, ಕಾದಿದ್ದಿರೇನು ?"

"ಇಲ್ಲ. ಬರೇ ಅರ್ಧ ಘಂಟೆ. ನೀವು ಕೇಳಿದಂತೆ ಆರಕ್ಕೆ ಸರಿಯಾಗಿ ಬಂದಿದ್ದೆ."

"ಆದರೂ ಅರ್ಧ ಘಂಟೆ ಕಾದಿರಿ. ನಿಮ್ಮ ತಾಳ್ಮೆಯನ್ನು ಅರ್ಧ ಘಂಟೆ ಪರೀಕ್ಷಿಸೋಣವೆಂದೇ ತಾನು ತಡಮಾಡಿ ಬಂದೆ."

ಅನಂತನಿಗೆ ಈಗ ಯೋಚನೆಗಿಟ್ಟುಕೊಂಡಿತು.

"ಇದೇನು, ನನ್ನ ಪರಿಚಯವಾದ ಗಳಿಗೆಯಿಂದಲೂ ನೀವು ನನ್ನನ್ನು ಮತ್ತೆ ಮತ್ತೆ ಪರೀಕ್ಷಿಸುವಂತಿದೆಯಲ್ಲ. ನೀವು ನನ್ನನ್ನು ಅವಮಾನಿಸುತ್ತಿರುವಿರೆಂದು ನಾನು ತಿಳಿಯಬಹುದೆಂದು ನಿಮಗೆ ಎನಿಸಿಲ್ಲವೇನು ?"

"ಇಲ್ಲ. ಹಾಗಿದ್ದರೆ, ನಿಮ್ಮ ಸ್ವಭಾವ ಆ ರೀತಿಯದಾಗಿದ್ದರೆ, ಕನ್ನಡ ಹಾಡು ಕೇಳಿದೊಡನೆ ನೀವು ಅಪರಿಚಿತರ ಬಳಿಗೆ ಓಡಿಬರುತ್ತಿದ್ದಿಲ್ಲ."

ಈಗ ಅನಂತ ನಗಲಾರಂಭಿಸಿದ.

"ಅದು ಸರಿ. ಮನೋವಿಶ್ಲೇಷಣದಲ್ಲಿ ನೀವು ತುಂಬ ಪಾರಂಗತರಿದ್ದಂತೆ ತೋರುತ್ತದೆ."

"ನಿತ್ಯ ನೋವಿನ ಜೀವನ ಮತ್ತೇನನ್ನು ಕಲಿಸದಿದ್ದರೂ ವಿವೇಚನೆಯ ಚೇತನವನ್ನು ತೀಕ್ಷ್ಣಗೊಳಿಸಲು ಕಾರಣವಾಗುವುದಿಲ್ಲವೆ ?"

ಇಬ್ಬರೂ ನಿಲ್ದಾಣೆ ಬಿಟ್ಟು ಹೊರಬಂದಿದ್ದರು.

"ಸ್ವಲ್ಪ ಚಹಾ ಕುಡಿದು ಹೋಗೋಣವೆ ? ಇನ್ನೂ ಅರ್ಧ ಘಂಟೆ ಹೊತ್ತಿದೆ."

ಪುನಃ ರಾಜೀವನ ಮಾತು ಒಗಟಿನಂತೆ.

"ಎಂದರೆ ಇನ್ನರ್ಧ ಘಂಟೆಯಾದ ಮೇಲೆ ಯಾವ ಕಾರ್ಯಕ್ರಮ? ಇಂದು ಕೂಡ ಯಾರೊಬ್ಬರದು ಶವ ಹೊರಲಿದೆಯೇನು?"

"ನೀವು ಶವ ಹೊರುವುದನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳುವಿರೆಂದು ತಿಳಿದಿದ್ದರೆ ನಾನು ನಿನ್ನೆ ನಿಮ್ಮನ್ನು ಕರೆದುಕೊಂಡು ಹೋಗುತ್ತಲೇ ಇರಲಿಲ್ಲ." ರಾಜೀವನ ಮಾತಿನಲ್ಲಿ ವೇದನೆ ಬೆರೆತಿತ್ತು.

"ಛೆ! ಛೆ! ತಮಾಷೆಗಾಗಿ ಹೇಳಿದೆ ಅಷ್ಟೆ. ನಮ್ಮ ಅಸಮಾನ ಆರ್ಥಿಕ ವ್ಯವಸ್ಥೆಯು ಪೂರ್ಣ ಪ್ರಜ್ಞೆ ಹೊಸ ಬದುಕಿನ ಹರಿಕಾರನಲ್ಲಿ ಉದಯಿಸಬೇಕಾದರೆ, ಆತ ಮೊದಲು ಅಂಥ ಜೀವನವನ್ನು ಕಣ್ಣಾರೆ ನೋಡಲೇಬೇಕು."

"ಹಾಗಾದರೆ ನಿಮ್ಮನ್ನು ನಾನು ಅಲ್ಲಿಗೆ ಕರೆದುಕೊಂಡು ಹೋಗಿ ಒಂದು ಅನುಚಿತ ಕೆಲಸ ಮಾಡಿಲ್ಲ."

"ಖಂಡಿತವಾಗಿಯೂ ಇಲ್ಲ."

"ನನಗೆ ಅಷ್ಟೇ ಬೇಕಾಗಿತ್ತು. ನೀವು ಸಮಾಜವನ್ನು ನೋಡುವ ದೃಷ್ಟಿಕೋನವೇ ತಪ್ಪು. ಮೇಲಿನಿಂದ ಕೆಳಗೆ. ಗೋಪುರ ಮುಗಿಸಿ ಮತ್ತೆ ತಳಪಾಯ. ಅದೇ ಕಾರಣ ರಾಜಕೀಯ ಸ್ವಾತಂತ್ರ್ಯ ಬಂದರೆ, ನಮ್ಮೆಲ್ಲ ದುಃಖಗಳ ನಿವಾರಣೆಯಾಗುವುದೆಂಬ ದಿವ್ಯ ಮಂತ್ರ. ನೀವು ಸಮಾಜದ ಮುಖ್ಯ ಘಟಕಗಳಾದ ಬೇರೆ ಬೇರೆ ಕುಟುಂಬಗಳ ವ್ಯವಸ್ಥೆ ಹೇಗಿದೆಯೆಂಬುದರ ಕಡೆ ಗಮನ ಕೊಡುವುದೇ ಇಲ್ಲ. ಸ್ವಾತಂತ್ರ್ಯ ಸಮಾನಾವಕಾಶಗಳು ರಾಜಕೀಯ ಧುರೀಣರಿಗೆ ಬಂದರಷ್ಟೇ ಸಾಲದು. ಸಂಕು, ಗಿರಿಯರಿಗೆ ಕಾಯಿಲೆ ಬಂದಾಗಲಾದರೂ ಉತ್ತಮ ಉಪಚಾರ ದೊರಕಿಸಿಕೊಳ್ಳುವುದು ಅಗತ್ಯ; ನಾವು ಸಲ್ಲಿಸುತ್ತಿರುವ ಬೆವರಿನ ಸೇವೆಗೆ ಅಷ್ಟಾದರೂ ಉಪಕಾರ ನಮಗೆ ಸಿಗಬೇಕಾದುದೇ ಎಂಬ ತಿಳಿವಳಿಕೆ ಅವರಲ್ಲಿ ಮೊದಲು ಮೂಡಬೇಕು. ಸರಕಾರ ಅದನ್ನು ಒದಗಿಸುವ ಮಾತು ಬೇರೆ."

ಅನಂತ ಪದ್ಮನ ಕಾಯಿಲೆಯ ವಿಚಾರ ಯೋಚಿಸಲಾರಂಭಿಸಿದ. ಅನಂತ ಮೌನ ವಹಿಸಿದುದನ್ನು ಕಂಡು ರಾಜೀವನೂ ಮಾತು ಬೆಳೆಸಲಿಲ್ಲ.

ಸಮೀಪದ ಇರಾಣಿ ಹೋಟೆಲೊಂದರಲ್ಲಿ ಚಹಾ ಮುಗಿಸುತ್ತಿದ್ದಂತೆ ಅನಂತ ಕೇಳಿದ:

"ನೀವು ನನ್ನನ್ನು ಏಳು ಘಂಟೆಗೆ ಎಲ್ಲಿಗೆ ಕರೆದುಕೊಂಡು ಹೋಗುವಿರೆಂದು ಹೇಳಲೇ ಇಲ್ಲ.

"ಈಗಲೇ ಹೇಳಬೇಕಾಗಿದೆಯೆ ? ನಿನ್ನೆ ಕರೆದುಕೊಂಡು ಹೋಗಿದ್ದೆನಲ್ಲ ; ಹಾಗೆಯೆ. ಇಂದು ಜೀವಂತ ಶವಗಳನ್ನು ತೋರಿಸುತ್ತೇನೆ. ಬೆಳಕು ಕಾಣಲು ಬಯಸುತ್ತ ಓದಿನ ಆಸೆಯಿಂದ ಓಡಿಬರುವ ನೂರಾರು ಪ್ರೇತಗಳು."

ಅನಂತನಿಗೆ ಚಹಾ ಸೇರಲಿಲ್ಲ! ಪ್ರೇತ ಶಬ್ದದ ಉಚ್ಚಾರವೇ ಹಿಂದಿನ ರಾತ್ರಿಯನ್ನು ನೆನಪಿಗೆ ತಂದಿತ್ತು. ಹಾಗೆ ಮಾತನಾಡಿದ ರಾಜೀವ. ಇನ್ನೂ ಇಪ್ಪತ್ತೈದು ಮೀರಿರದ ವಯಸ್ಸು, ದೃಢಕಾಯ, ಕಠೋರತೆಯನ್ನು ಸೂಚಿಸುವ ಕೆನ್ನೆಗಳು, ಉಬ್ಬಿದ ಹಣೆ, ಬುದ್ಧಿವಂತಿಕೆಯ ಪ್ರತೀಕವಾದ ಸೊಂಪಾದ ಮೂಗು. ಆ ಮುಖದ ತುಂಬೆಲ್ಲ ದೃಢತೆ ನೈಷ್ಠುರ್ಯಗಳನ್ನು ಅನಂತ ಗುರುತಿಸುವಂತಿತ್ತು. ಅಲ್ಲಿ ಮಾರ್ದವದ ಮಾನವೀಯ ಛಾಯೆ ಎಲ್ಲಾದರೂ ಗೋಚರಿಸುತ್ತಿದ್ದಿತಾದರೆ, ಅದು ರಾಜೀವನ ಕಣ್ಣುಗಳಲ್ಲಿ ಮಾತ್ರ.

"ಚಹಾ ಏಕೆ ಕುಡಿಯುವುದಿಲ್ಲ. ಪ್ರೇತದ ಹೆಸರೇ ಓಕರಿಕೆ ತರಿಸಿತೇನು ? ಅಷ್ಟು ಮೃದುವಾದ ಹೃದಯ ಪ್ರಯೋಜನವಿಲ್ಲ, ಅನಂತರಾವ್."

ಅನಂತ ಹಿಂದಿನ ದಿನ ರಾಜೀವ ರಾಘವಿನ ಕೆನ್ನೆಗೆ ಎರಡೇಟು ಬಿಗಿದುದನ್ನು ನೆನಸಿಕೊಂಡ. ಹಾಗೆಯೇ ಚಹಾದ ಬಸಿಯನ್ನೆತ್ತಿಕೊಂಡು ಕುಡಿದು ಮುಗಿಸಿದ.

"ಎಂದರೆ ನಿಮ್ಮ ದೃಷ್ಟಿಯಲ್ಲಿ ಮಾನವತೆಗೆ ಸ್ಥಾನವೇ ಇಲ್ಲ ಎಂದ ಹಾಗಾಯಿತು."

"ತಪ್ಪು ತಿಳಿವಳಿಕೆ. ಮಾನವತೆಗಿಂತ ದೊಡ್ಡ ಆದರ್ಶವೇ ಇಲ್ಲ ನನಗೆ. ಆದರೆ ಮಾನವತೆಯ ದೃಷ್ಟಿಕೋನಕ್ಕೆ ಹೃದಯದೌರ್ಬಲ್ಯ ಅತಿ ದೊಡ್ಡ ಶತ್ರು."

ಈ ವಿಚಾರ ಹೆಚ್ಚು ತರ್ಕ ಬೆಳೆಸುವ ಇಚ್ಛೆಯಿಲ್ಲದೆ "ಇದ್ದರೂ ಇರಬಹುದು" ಎಂದಿಷ್ಟೆ ಹೇಳಿ ಅನಂತ ಮಾತು ಮುಗಿಸಿದ.

ಏಳು ಘಂಟೆಗೆ ಸರಿಯಾಗಿ ಗೆಳೆಯರಿಬ್ಬರೂ, ಅನಂತ ಈ ಮೊದಲೇ 'ಜೀವಂತ ಶವ'ಗಳ ಹೆಸರು ಕೇಳಿಯೇ ಊಹಿಸಿದ್ದಂತೆ, ಒಂದು 'ರಾತ್ರಿ ಶಾಲೆ'ಯ ಬಳಿ ಬಂದರು.

"ನನ್ನ ಊಹೆ ತಪ್ಪಾಗಲಿಲ್ಲ. ನೀವು ಇಲ್ಲಿ ಅಧ್ಯಾಪಕರೇನು ?" ಎಂದು ಅನಂತ ಕೇಳಿದ.

ರಾಜೀವನಿಗೆ ಈಗ ನಗು ಬಂತು.

"ನಾನು ತಿಳಿದುಕೊಂಡಿರುವುದಕ್ಕಿಂತ ಹೆಚ್ಚಿನ ಬುದ್ಧಿಶಕ್ತಿ ನಿಮಗಿವೆ

ಎಂದು ನನಗೆ ತಿಳಿದಿತ್ತು. ಬನ್ನಿ. ಇದೇ 'ಜೈಹಿಂದ್' ರಾತ್ರಿಶಾಲೆ" ಎಂದು ಅನಂತನನ್ನು ಅಲ್ಲಿಗೆ ಕರೆದೊಯ್ದ.

ಕೇಳಿ ಮಾತ್ರ ತಿಳಿದಿದ್ದ ರಾತ್ರಿಶಾಲೆಯನ್ನು ಅನಂತ ಪ್ರತ್ಯಕ್ಷ ನೋಡಿ ದುದು ಅಂದೇ. ಶಹರದ ಸಾವಿರಾರು ವ್ಯವಹಾರಕೇಂದ್ರಗಳಲ್ಲಿ ಬದುಕಿ ಉಳಿಯಬೇಕೆಂದು ದುಡಿಯುತ್ತಿದ್ದ ಬಡಪಾಯಿಗಳಿಗೆ ಬೆಳಕಿನ ದಾನ ಮಾಡುತ್ತಿದ್ದ ರಾತ್ರಿಶಾಲೆಗಳನ್ನು ಆತ ಕಂಡುದು ಇದೇ ಮೊದಲು. ರಾಜೀವ ಹೋದವನು ಅನಂತನನ್ನು ಕರೆದುಕೊಂಡು ನೇರವಾಗಿ ತನ್ನ ತರಗತಿಗೇ ಹೋದ. "ಮುಕ್ಕಾಲು ಘಂಟೆ ಈ ವಿದ್ಯಾರ್ಥಿಗಳ ಆಸಕ್ತಿಯನ್ನಷ್ಟು ಗಮನಿಸಿ. ಆಮೇಲೆ ನಿಮಗೊಬ್ಬರ ಪರಿಚಯ ಮಾಡಿಸಿಕೊಡುತ್ತೇನೆ. ನನಗಿರುವುದು ಒಂದೇ ಪೀರಿಯಡ್, ಜೊತೆಗೇ ಮರಳಬಹುದು " ಎಂದ.

ರಾಜೀವನ 'ಕ್ಲಾಸು' ಮುಗಿಯುವ ತನಕ ಅನಂತ ಒಬ್ಬ ವಿದ್ಯಾರ್ಥಿ ಯಾಗಿ ಕುಳಿತಿದ್ದ.

ಸಾಧಾರಣ ಮೂವತ್ತು ವಿದ್ಯಾರ್ಥಿಗಳ ತರಗತಿಯಲ್ಲಿ ಒಬ್ಬನನ್ನಾದರೂ 'ಹಸುಳೆ'ಯೆಂದು ಅಲ್ಲಿ ಕರೆಯುವಂತಿರಲಿಲ್ಲ. ಎಲ್ಲ ದುಡಿಯುವ ವರ್ಗಕ್ಕೆ ಸೇರಿದವರೇ. ದಿನದ ದುಡಿತದ ಆಯಾಸ ಆ ಮೊಗಗಳಿಂದ ಇನ್ನೂ ಮಾಸಿರ ಲಿಲ್ಲ, ಆದರೆ ವಿದ್ಯೆಯ ಹಸಿವು ಆ ಆಯಾಸವನ್ನು ಮರೆಸಿತ್ತು. ಹೇಗಾದರೂ ಮೆಟ್ರಿಕ್ ಮುಗಿಸಲೇಬೇಕು, ಕೇಳಿದುದೆಲ್ಲವನ್ನು ಓದಿದುದೆಲ್ಲವನ್ನು ಅರಗಿಸಿ ಕೊಳ್ಳಲೇಬೇಕು? ಎಂಬ ಹಂಬಲ ಪ್ರತಿಯೊಂದು ವಿದ್ಯಾರ್ಥಿಯ ಆಸಕ್ತಿ ಯಲ್ಲಿಯೂ ಸ್ಪಷ್ಟವಾಗುತ್ತಿತ್ತು.

ಪಾಠ ಸಾಗಿಸುತ್ತಿದ್ದ ರಾಜೀವನೂ ತೀರ ಬೇರೆಯೇ ಎನ್ನಿಸುವಷ್ಟು ಬದ ಲಾಗಿದ್ದ. ಸಾವಿನ ಮನೆಯಲ್ಲಿ ಆತ ತೋರಿದ್ದ ಕಾಠಿಣ್ಯ ಈಗೆಲ್ಲಿ ಮಾಯ ವಾಗಿದೆಯೆಂದು ಅನಂತ ತನ್ನನ್ನೇ ತಾನು ಕೇಳಿಕೊಂಡ. ಹಿಂದೆ ಕಾಣದಿದ್ದ ಸಂಸ್ಕಾರವೂ ನಯವೂ ಈಗೇಕೆ ಮಾತಿನಲ್ಲಿ ವ್ಯಕ್ತವಾಗುತ್ತಿದೆಯೆಂದು ಅನಂತ ನಿಗೆ ಆಶ್ಚರ್ಯ. ದುಡಿತದಿಂದ ಸೋತುಬಂದಿದ್ದ ವಿದ್ಯಾರ್ಥಿಗಳನ್ನು ರಾಜೀವ ಪ್ರತಿ ಮಾತಿಗೂ ನಗಿಸುತ್ತಿದ್ದ. ಆಯಾಸದ ಕಲ್ಪನೆಯೂ ಅವರ ಮನಸ್ಸಿನಲ್ಲಿ ಸುಳಿಯದಂತೆ ಪಾಠ ಸಾಗಿತ್ತು. ಕಲಿಸುತ್ತಿದ್ದ ವಿಷಯದ ತಿರುಳು ಕೂಡ ಉತ್ತಮ ಶಿಕ್ಷಣದ ಮುಖ್ಯ ಸೂತ್ರದಂತೆ ವಿನಿಮಯ ಹೊಂದಿತ್ತು.

ಕ್ಲಾಸು ಮುಗಿದುದೂ ಅನಂತನಿಗೆ ತಿಳಿಯಲಿಲ್ಲ. ಆತ ಅಷ್ಟು ತಲ್ಲೀನ

ನಾಗಿದ್ದ. ರಾಜೀವ ಬಂದು "ಹೋಗೋಣ" ಎಂದು ಎಬ್ಬಿಸಿದಾಗಲೇ ಆತನಿಗೆ ಎಚ್ಚರ. ಆತನ ಮನಸ್ಸೆಲ್ಲ ಈ ವಿದ್ಯಾರ್ಥಿಗಳಿಗೆ ಈ ಪಾಡು ಬರಲು ಯಾರು ಹೊಣೆಯೆಂದು ಚಿಂತಿಸುತ್ತಿತ್ತು. ಅಭ್ಯಾಸದ, ಆಟದ ವೇಳೆಯಲ್ಲಿ ಈ ಹುಡುಗರಿಗೇಕೆ ದುಡಿಮೆ, ನಿದ್ರೆಯ ವೇಳೆಯಲ್ಲೇಕೆ ಓದು ಎಂದು ಮನಸ್ಸು ಪ್ರಶ್ನಿಸುತ್ತಿತ್ತು.

ತರಗತಿ ಬಿಟ್ಟು ಇನ್ನೊಂದು ಕೋಣೆಗೆ ಹೋಗುತ್ತಿರುವಂತೆ, ರಾಜೀವ ಕೇಳಿದ :

"ನೋಡಿದಿರೇನು ?"

"ಏನನ್ನು ?"

"ನೀವು ನೋಡಬೇಕಾಗಿದ್ದುದನ್ನು."

ಅನಂತ ಉತ್ತರ ಕೊಡಲಿಲ್ಲ. ಬರೇ ತಲೆಯಲ್ಲಾಡಿಸಿದ.

ರಾಜೀವ ಯಾರದೋ ಪರಿಚಯ ಮಾಡಿಸಿಕೊಡಲು ತನ್ನನ್ನು ಕರೆದೊಯ್ಯುತ್ತಿದ್ದಾನೆಂದು ಅನಂತನಿಗೆ ಗೊತ್ತು. ಇನ್ನು ಮತ್ತೇನು ಆಶ್ಚರ್ಯಕಾದಿದೆಯೋ ಎಂದು ಅವನ ಮನಸ್ಸು ಪ್ರಶ್ನಿಸುತ್ತಿತ್ತು.

ಕೋಣೆಯ ಒಳಗೆ ಸಾಧಾರಣ ಮಧ್ಯ ವಯಸ್ಸಿನ ಗೃಹಸ್ಥರೊಬ್ಬರು ಕುಳಿತಿದ್ದರು. ರಾಜೀವ ಯಾರೋ ಅಪರಿಚಿತರ ಜೊತೆಯಲ್ಲಿ ಬಂದುದನ್ನು ಕಂಡೊಡನೆ ಅವರು ಕುರ್ಚಿ ಬಿಟ್ಟೆದ್ದರು.

"ಇವರೇ ನೋಡಿ ಅನಂತರಾವ್, ಶ್ರೀನಿವಾಸ ಸೋಮಯಾಜಿ. ಇವರು ಅನಂತ ಉಡುಪರು, ಸೋಮಯಾಜಿಗಳೇ. ಕರ್ನಾಟಕದ ವಿಚಾರ 'ಭಾರತ್ ಜ್ಯೋತಿ'ಯಲ್ಲಿ ನಾಲ್ಕಾರು ಲೇಖನ ಬರೆದಿದ್ದರಲ್ಲ. ಅವರೇ."

ಅನಂತನಿಗಾದ ಆಶ್ಚರ್ಯಕ್ಕೆ ಮಿತಿಯಿಲ್ಲ. ರಾಜೀವನಿಗೆ ತನ್ನ ವಿಚಾರ ಇನ್ನೂ ಏನೆಲ್ಲ ತಿಳಿದಿರಬಹುದೆಂದು ಆತ ಯೋಚಿಸತೊಡಗಿದ.

ಸೋಮಯಾಜಿಗಳು ನಗುತ್ತಲೇ ನಮಸ್ಕರಿಸಿದರು.

"ತುಂಬ ಸಂತೋಷ, ನಿಮ್ಮ ಪರಿಚಯವಾದುದು. ನಿಮ್ಮ ಲೇಖನಗಳನ್ನು ನಾವೆಲ್ಲ ಆಸಕ್ತಿಯಿಂದ ಓದಿದ್ದೇವೆ. 'ವಾಹಿನಿ'ಯಲ್ಲೂ ಇದೇ ವಿಚಾರ ಬರೆದಿದ್ದಿರಲ್ಲ. ನಿಮ್ಮಂಥವರು ಮುಂಬಯಿ ಕನ್ನಡಿಗರ ವಿಚಾರ ಹೆಚ್ಚು ಆಲೋಚಿಸಬೇಕು ನೋಡಿ."

"ಅವರು ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರು, ಸೋಮಯಾಜಿಗಳ.

ಸೇವಾದಳದಲ್ಲಿದ್ದಾರೆ. ಕಳೆದ ಸಲ ಮುಂಬಯಿಗೆ ಪೀಸ್ ಕಮಿಟಿಯ ಹುಚ್ಚು ಹಿಡಿಯಬೇಕಾದ ಸಂದರ್ಭ ಬಂದಾಗ ಸೆಂಟ್ರಲ್ ಪೀಸ್ ಕಮಿಟಿಯಲ್ಲೂ ಅವರ ಹೆಸರಿತ್ತು. ಅಲ್ಲವೇ ಅನಂತರಾವ್ ?"

ಅನಂತ ನಗುತ್ತಲೇ ಉತ್ತರ ಕೊಟ್ಟ :

"ಕ್ಷಮಿಸಿ, ಸೋಮಯಾಜಿಗಳೆ. ನನ್ನ ವಿಚಾರ ನನಗಿಂತ ಹೆಚ್ಚು ಇವರಿಗೇ ತಿಳಿದಿರುವ ಹಾಗೆ ಕಾಣುತ್ತದೆ. ಒಂದು ಗುಪ್ತಚಾರರ ದಲವೇ ಇವರ ಹಿಂದಿದೆಯೋ ಎಂದು ಸಂದೇಹ. ನಿನ್ನೆ ಮುಖಪರಿಚಯವಾದರೂ ಹತ್ತು ವರ್ಷಗಳ ನನ್ನ ಇತಿಹಾಸವನ್ನೆಲ್ಲ ಅವರು ತಿಳಿದಿರುವಂತೆ ತೋರುತ್ತದೆ."

ಸೋಮಯಾಜಿಗಳು ನಕ್ಕರು. "ಅವನ ಸ್ವಭಾವವೇ ಹಾಗೆ, ಉಡುಪರೆ. ಇಡೀ ಸಮಾಜವೇ ತನ್ನಿಂದ ಉದ್ಧಾರವಾಗುತ್ತಿದೆಯೆಂದು ಅವನ ತಿಳಿವಳಿಕೆ. ಆ ಕಾರಣ ಸಮಾಜಸೇವೆಯ ಕ್ಷೇತ್ರದಲ್ಲಿ ಯಾರು ಯಾರು ತನ್ನ ಪ್ರತಿಸ್ಪರ್ಧಿಗಳೋ ಅವರ ಪೂರ್ವಾಪರವೆಲ್ಲ ಅವನಿಗೆ ಗೊತ್ತು."

ರಾಜೀವನೂ ನಗತೊಡಗಿದ.

"ಪರಿಚಯವಾಯಿತಷ್ಟೆ. ಇನ್ನು ಹೋಗೋಣವೇ ?" ಎಂದು ಅನಂತ ನನ್ನು ಕೇಳಿದ.

ಅನಂತ "ಹೂಂ" ಎಂದ.

ಶಾಲೆ ಬಿಟ್ಟು ಇಬ್ಬರೂ 'ಟ್ರಾಂ' ಹಿಡಿದರು. ಪ್ರಾರ್ಥನಾ ಸಮಾಜದ ವರೆಗೆ ರಾಜೀವನೂ ಜೊತೆಗೇ ಬಂದ. ಅನಂತನ ಕೋಣೆಯ ತನಕವೂ ಬಂದ. ಅನಂತನಿಗೆ ಇನ್ನೂ ರಾಜೀವ ತನ್ನ ಪರಿಚಯವನ್ನು ಬೆಳೆಸಿಕೊಂಡುದರ ಉದ್ದೇಶ ಸ್ಪಷ್ಟವಾಗಿರಲಿಲ್ಲ. ಈತ ತನ್ನನ್ನು ರಾತ್ರಿಶಾಲೆಯ ತನಕ ಕರೆದು ಕೊಂಡುಹೋದುದರ ಅರ್ಥವೇನು, ಸೋಮಯಾಜಿಗಳ ಪರಿಚಯದಿಂದ ತನಗೆ ಏನು ಆಗಬೇಕಾಗಿದೆ ಎಂದು ಆತ ಯೋಚಿಸುತ್ತಿದ್ದ.

ಅನಂತನ ಒತ್ತಾಯದಂತೆ ರಾಜಿವ ಅವನ ಜೋತೆಗೇ ಊಟ ತೀರಿಸಿದ ಮೇಲೆ ಅನಂತ ಕೇಳಿದ :

"ನೋಡಿ, ರಾಜೀವ...."

"ನಾನೊಂದು ಮಾತು ಕೇಳುತ್ತೇನೆ. ನನಗೂ ನಿಮಗೂ ವಯಸ್ಸಿನಲ್ಲಿ ನಾಲ್ಕು ವರ್ಷಗಳ ಅಂತರವಾದರೂ ಇರಬೇಕು. ಪಾಂಡಿತ್ಯ ದಲ್ಲೂ ಲೋಕಜ್ಞಾನದಲ್ಲೂ ನೀವು ನನಗೆ ಹಿರಿಯರು. ನೀವು ನನ್ನನ್ನು 'ರಾಜೀವ' ಎಂದೇ ಕರೆಯಿರಿ. ಬಹುವಚನದ ಸಂಬೋಧನೆ ಬೇಡ."

ಅನಂತನಿಗೆ ಈಗ ಆಶ್ಚರ್ಯಕ್ಕಿಂತ ಹೆಚ್ಚು ಆನಂದವಾಯಿತು.

"ಹಾಗೆಯೇ ಆಗಲಿ, ರಾಜೀವ. ನಿನ್ನ ಸ್ನೇಹ ನನಗೆ ಹೆಚ್ಚು. ಅಲ್ಲಿ ಹಿರಿ-ಕಿರಿಯ ಭಾವನೆಯಿಲ್ಲ. ಅದಿರಲಿ. ನೀನು ನನ್ನನ್ನು ಶಾಲೆಗೆ ಕರೆದು ಕೊಂಡು ಹೋದುದರ ಮುಖ್ಯ ಉದ್ದೇಶವೇನು ?"

"ಈಗ ಹೇಳುವುದಿಲ್ಲ. ನಾಡಿದ್ದು ಆದಿತ್ಯವಾರ ಮಧ್ಯಾಹ್ನ ನಿಮಗೆ ಬಿಡುವಿದೆಯೇನು ?"

"ರಜೆ. ಖಂಡಿತವಾಗಿಯೂ ಇದೆ."

"ಹಾಗಾದರೆ ಮೂರು ಘಂಟೆಗೆ ಸರಿಯಾಗಿ ನಾನು ಬರುತ್ತೇನೆ. ನಾಲ್ಕು ಘಂಟೆಗೆ ಒಂದು ಕಡೆ ಹೋಗೋಣ. ಅಲ್ಲಿ ನನ್ನ ಉದ್ದೇಶಗಳ ಪರಿಚಯ ನಿಮಗೆ ಚೆನ್ನಾಗಿ ಆಗುತ್ತದೆ."

ಅನಂತ ಮತ್ತೆ ಮಾತನಾಡಲಿಲ್ಲ.

ರಾಜೀವ ಹೊರಟುಹೋದನಮೇಲೂ ಈ ವಿಚಿತ್ರ ವ್ಯಕ್ತಿತ್ವದ, ಗಂಡೆದೆಯ ಕುರಿತೇ ಆತ ಚಿಂತಿಸುತ್ತಿದ್ದ. ನಿನ್ನೆ ತೀರಿಹೋದ ಸಂಕು ರಾಜೀವನ ವಿದ್ಯಾರ್ಥಿಯೇ ? ಆ ಕುಟುಂಬವನ್ನು ಬೆಳಕಿನೆಡೆ ಒಯ್ಯುವ ಪ್ರಯತ್ನ ಸಂಕು ವಿನ ಮರಣದಿಂದ ವಿಫಲವಾದುದನ್ನು ಕಂಡು ಉಂಟಾದ ಕ್ರೋಧದಿಂದ ಆತ ನಿನ್ನೆ ಅಷ್ಟು ನಿಷ್ಠುರನಾದುದೇ ?

ಭಾನುವಾರ ತನಕ ಅನಂತನ ಕುತೂಹಲ ಅದೇ ರೀತಿಯಿತ್ತು. ಸಮಯ ಮಾತ್ರ ಬಹು ಬೇಗನೆ ಸಾಗುತ್ತಿತ್ತು. ಆಫೀಸಿನ ಕೆಲಸದ ಜೊತೆಗೆ ಹೊಸದಾಗಿ ಕಟ್ಟಿದ ಒಂದು ಟ್ರೇಡ್ ಯೂನಿಯನ್ ಸಂಸ್ಥೆಯ ಯೋಗಕ್ಷೇಮ ನೋಡಿಕೊಳ್ಳಬೇಕಿತ್ತು. ಒಂದು ಉತ್ತಮ ಸಮಾಜವಾದಿ ವ್ಯವಸ್ಥೆಯಿಂದ ಮಾತ್ರ ದೇಶದ ಉನ್ನತಿ ಸಾಧ್ಯವೆಂದು ನಂಬಿ ದುಡಿಯುವ ಗೈಮೆಗೆ. ಸಂಬಂಧಿ ಸಿದ ಶಾಸ್ತ್ರಜ್ಞಾನ ಅಗತ್ಯವಾಗಿ ನಿರಂತರ ಅಭ್ಯಾಸವೂ ಸಾಗಬೇಕಿತ್ತು.

ಭಾನುವಾರ ಸಂಜೆ ಹೇಳಿದ ಹೊತ್ತಿಗೆ ಸರಿಯಾಗಿ ರಾಜೀವ ಹಾಜರು. ಇಬ್ಬರೂ ಜೊತೆಗೂಡಿ ನಾಲ್ಕು ಘಂಟೆಗೆ ಕೋಟೆಯನ್ನು ತಲಪುವಂತೆ ಹೊರಟರು.

ಈ ಸಲ ಹೋದುದು ಸೋಮಯಾಜಿಗಳ ಮನೆಗೆ. ಮೂರು ಮಾಳಿಗೆ ಗಳ ಒಂದು ಜೀರ್ಣವಾದ ಕಟ್ಟಡದ ಒಂದು ದೊಡ್ಡ ಕೋಣೆ. ಸೋಮಯಾಜಿ ಗಳಿಗೆ ಬಂಧು ಬಳಗ ಯಾರೂ ಇದ್ದಂತೆ ತೋರಲಿಲ್ಲ. ಕೋಣೆಯ ಒಂದು

ಮೂಲೆಯಲ್ಲಿ ಮಾತ್ರ ಅಡಿಗೆಗಾಗಿ ಕೆಲವು ಪಾತ್ರೆಗಳು, ಒಂದು ಸ್ಟವ್, ಇಷ್ಟೆ. ಮತ್ತೆ ಕೋಣೆ ತುಂಬ ಪುಸ್ತಕಗಳು.

ಅಲ್ಲಿ ಒಂದು ಸಭೆ ಜರುಗಿತು. ಬಂದಿದ್ದವರು ಸಾಧಾರಣ ಇಪ್ಪತ್ತು ಮಂದಿ. ಸೋಮಯಾಜಿಗಳನ್ನುಳಿದು, ಇಬ್ಬರು ಪತ್ರಿಕೋದ್ಯಮಿಗಳನ್ನು ಬಿಟ್ಟರೆ, ಅನಂತನಿಗೆ ಉಳಿದವರ ಪರಿಚಯವಿರಲಿಲ್ಲ. ಕನ್ನಡಿಗರೆಂದು ತಿಳಿದಿದ್ದ ಆ ಪತ್ರಿಕೋದ್ಯೋಗಿಗಳನ್ನು ಕಂಡು ಇವನಿಗೆ ಆಶ್ಚರ್ಯವಾದರೂ ಅವರಿಗೆ ಇವನ ಆಗಮನದಿಂದ ಆಶ್ಚರ್ಯವಾದಂತೆ ತೋರಲಿಲ್ಲ.

ಒಳಗೆ ಬಂದೊಡನೆ ರಾಜೀವ ಗೆಳೆಯರೆಲ್ಲರಿಗೆ ಅನಂತನ ಪರಿಚಯ ಮಾಡಿಸಿಕೊಟ್ಟ. ಆಮೇಲೆ ಅನಂತನನ್ನು ಬದಿಗೆ ಕರೆದು,

"ಇಲ್ಲಿರುವವರೆಲ್ಲ ನಮ್ಮ ಗೆಳೆಯರೇ. ಯಾವುದೊಂದು ಶಿಸ್ತಿನಿಂದ ಕಟ್ಟಿದ ಸಂಸ್ಥೆಯಿದೆಂದು ತಿಳಿಯಬೇಡಿ. ನಮ್ಮ ಸ್ನೇಹ ನಮ್ಮ ಬಂಧನ. ನಮ್ಮ ಆದರ್ಶ ಒಂದೇ. ಸಭೆ ಮುಗಿದ ಮೇಲೆ ಹೆಚ್ಚು ಹೇಳುತ್ತೇನೆ."

ಸಭೆ ಜರುಗಿದುದು ಒಂದು ಕನ್ನಡ ದೈನಿಕವನ್ನು ಮುಂಬಯಿಯಿಂದ ಹೊರಡಿಸುವ ವಿಚಾರ. ಅರ್ಧ ತಾಸಿನ ತನಕ ಗೆಳೆಯರೆಲ್ಲ ತಮ್ಮ ತಮ್ಮ ಅಭಿಪ್ರಾಯವನ್ನು ಸೂಚಿಸಿದರು. ಆದರೆ ಸಂಬಂಧಿಸಿದ ಹಣಕಾಸಿನ ಅಂದಾಜು ಪಟ್ಟಿ ಸಭೆಯ ಮುಂದೆ ಬಂದಾಗ ಇದು ಕೈಲಾಗದ ಕೆಲಸವೆಂದು ಎಲ್ಲರಿಗೂ ತೋರಿತು. ದೈನಿಕವನ್ನು ಬಿಟ್ಟು ಸಾಪ್ತಾಹಿಕಕ್ಕೆ ಮಾತು ಇಳಿಯಿತು. ಸ್ವಲ್ಪ ಹಣ ಸಂಗ್ರಹದಿಂದ ಈ ಕೆಲಸ ಸಾಧ್ಯವಾಗಬಹುದೆಂದು ತೋರಿತು. ಸಾಧ್ಯವಾದಷ್ಟು ಬೇಗನೆ ಈ ಗೆಳೆಯರ ಕೂಟ ಈ ವಿಚಾರ ನಿರ್ಧರಿಸಬೇಕೆಂದು ನಿಶ್ಚಯವಾಗಿ ಸಭೆ ಚದರಿತು.

ಎಲ್ಲ ಹೋದಮೇಲೆ ಉಳಿದುದು ರಾಜೀವ, ಅನಂತ, ಸೋಮಯಾಜಿ, ಶಂಕರಸೆಟ್ಟಿ, ಮತ್ತೊಬ್ಬ ಗೆಳೆಯರು. ಸೋಮಯಾಜಿಗಳು ಅನಂತನ ಬಳಿಗೆ ಬಂದು "ನಿಮ್ಮ ನೆರವು. .." ಎನ್ನುತ್ತಿರುವಾಗಲೇ ಅನಂತ ತಡೆದು ಹೇಳಿದ:

"ನಿಮ್ಮೆಲ್ಲರ ಆದರ್ಶ ನನಗೆ ಗೊತ್ತು. ಮೊನ್ನೆ ರಾಜೀವ ವಯಸ್ಸಿನಲ್ಲಿ ನಾನು ಹಿರಿಯನೆಂದು, ಕಿರಿಯನೆಂದೇ ಅವನನ್ನು ಸಂಬೋಧಿಸಬೇಕೆಂದು ಕೇಳಿಕೊಂಡ. ಈಗ ನಾನು ನಿಮ್ಮೊಡನೆ ಕೇಳಿಕೊಳ್ಳುತ್ತಿರುವುದೂ ಅದನ್ನೇ. ದಯಮಾಡಿ ಎಲ್ಲ ವಿಚಾರಗಳಲ್ಲೂ ನಾನು ನಿಮ್ಮ ವಿದ್ಯಾರ್ಥಿಯೆಂದೇ ಬಗೆದು ನೀವು ನನ್ನೊಡನೆ ಚರ್ಚಿಸಬೇಕು."

"ಹಾಗೇ ಆಗಲಿ, ಅನಂತ. ನಿನ್ನ ನೆರವು ತುಂಬ ಬೇಕು, ಎಂದಿಷ್ಟೇ ಕೇಳಿದೆ" ಎಂದರು.

ಒಂದು ಆದರ್ಶದಿಂದ ಬೆಳಗುತ್ತಿದ್ದ ಆ ವಾತಾವರಣದಲ್ಲಿ ಅನಂತ ನೆರವೆಂದೇನು, ಏನನ್ನೂ ಕೊಡಲು ಸಿದ್ಧನಿದ್ದ.

ಹಿಂದಿರುಗುವಾಗ ಅನಂತ ರಾಜೀವನೊಡನೆ ಕೇಳಿದ :

"ಹೌದು, ರಾಜೀವ. ನಿಮ್ಮ ಯೋಚನೆಯೆಲ್ಲ ಸರಿ. ಆದರೆ ಒಂದು ಪತ್ರಿಕೆ ಹೊರಡಿಸಿದಾಕ್ಷಣ ನಮ್ಮ ಬದುಕೆಲ್ಲ ಸುಧಾರಿಸತೊಡಗುವುದೆ? ಆದರ್ಶ ಸಮಾಜ ಹುಟ್ಟಿಕೊಳ್ಳುವುದೆ?"

"ಅದು ಒಂದು ಪ್ರಬಲ ಸಾಧನ, ಉಡುಪರೆ. ನಾನು ಹಿಂದೊಮ್ಮೆ ಹೇಳಿದ್ದೆನಲ್ಲ—ನಾವು ನೋಡುವುದು ತಳಹದಿಯ ಕಡೆ—ಗೋಪುರದ ತುದಿಯ ಕಡೆಗಲ್ಲ ಎಂದು. ಮುಂಬಯಿ ಶಹರದ ಜನಜೀವನದತ್ತ ದೃಷ್ಟಿ ಹೊರಳಿಸು ವಾಗ ತೋರುವ ಅಸಮಾನತೆಯ ರುದ್ರಚಿತ್ರ ನಮ್ಮ ಮನಸ್ಸನ್ನು ಕೊರೆಯು ತೊಡಗಿದಾಗ, ನಾವು ಇಡೀ ಸಮಾಜದ ಪರಿವರ್ತನೆಯ ಹಾದಿ ನೋಡಲಿಲ್ಲ. ಮೊದಲು ನೋಡಿದುದು ನಮ್ಮ ಅನುಭವ ಕಾರ್ಯಕ್ಷೇತ್ರದೆಡೆ ಮಾತ್ರ; ಕನ್ನಡಿಗರೆಡೆ. ಒಂದೆರಡು ಲಕ್ಷ ಜನ ಶಹರದ ವ್ಯವಹಾರಜೀವನದ ಅಂಗವಾಗಿ ದುಡಿಯುತ್ತಿದ್ದಾರೆ. ಅವರ ಬದುಕಿನ ಅಂತಿಮ ಗುರಿಯೇನೆಂದು ಯಾರಿಗಾ ದರೂ ತಿಳಿದಿದೆಯೆ? ಸಂಕು ಕನ್ನಡಿಗನಾಗಬೇಕೆಂದೇ ಏನಿಲ್ಲ. ಅವನಂಥ ಮರಾಠಿ ಗುಜರಾಥಿ ಹುಡುಗರೂ ಲಕ್ಷಗಟ್ಟಲೆಯಲ್ಲಿದ್ದಾರೆ. ಅವರೆಲ್ಲರ ಬದುಕು ಉತ್ತಮಗೊಳ್ಳಬೇಕೆಂಬ ಆಸೆ ನಮಗಿದೆಯಾದ ಕಾರಣ ಅವರ ಬದುಕು ಯಾವ ರೀತಿಯಿದೆಯೆಂದು ಇಡೀ ಸಮಾಜದ ಕಣ್ಣು ಕುಕ್ಕಿಸುವಂತೆ ತೋರುವ ಶಕ್ತಿ ಯನ್ನು ಸೃಷ್ಟಿಮಾಡಬೇಕು. ಆ ಶಕ್ತಿಗಾಗಿ ಇದು ನಮ್ಮ ಸಿದ್ಧತೆ, ಅನಂತ ರಾವ್. ನಿಮ್ಮನ್ನು ನೋಡಿದೊಡನೆ ನಿಮ್ಮ ಸಹಾಯ ನಮಗೆ ದೊರಕುವು ದೆಂಬ ನಂಬಿಕೆ ನನಗಿತ್ತು. ನಮ್ಮ ಸಾಮಾಜಿಕ ರೋಗಗಳ ಮೇಲೆ ಶಸ್ತ್ರ ಕ್ರಿಯೆ ನಡೆಸಲು ನಮಗೆ ಸೋಮಯಾಜಿ ತೋರಿಸಿಕೊಟ್ಟ ಸಾಧನ, ಒಂದು ಪತ್ರಿಕೆ. ಅದಕ್ಕಾಗಿ ನಿಮ್ಮ ಸ್ನೇಹ ಬೇಕೆಂದು ಗಾಳ ಹಾಕಿದ...."

"ನನ್ನ ಸ್ನೇಹ ಯಾವಾಗಲೂ ನಿಮ್ಮದೇ, ರಾಜೀವ."

"ಬರೇ ಸ್ನೇಹ ಮಾತ್ರ ಸಾಲದು. ನಮ್ಮ ಪತ್ರಿಕೆಯ ಸಂಪಾದಕತ್ವ ನೀವು ವಹಿಸಿಕೊಳ್ಳಬೇಕು."

"ಆಂ !"

"ಹೌದು. ನಮ್ಮ 'ಕಹಳೆ'ಯ ಸಂಪಾದಕರು ನೀವಾಗಬೇಕು."

"ಆದರೆ, ರಾಜೀವ"

"ಏನು ಆದರೆ ?"

"ನೋಡು, ಆಫೀಸಿನ ದುಡಿಮೆಯ ಜೊತೆಗೆ, ಟ್ರೇಡ್ ಯೂನಿಯನ್ ಕೆಲಸ ಬೇರೆ ಇದೆ. ನಮ್ಮ ಯೂನಿಯನ್ನಿನ ಕಾರ್ಯದರ್ಶಿ ನಾನು. ಸೇವಾ ದಲದ ಕೆಲಸ ಬೇರೆ....ಅದೂ ಅಲ್ಲದೆ, ನನಗಿಂತ ಯೋಗ್ಯರಾರಾದರೂ...."

"ಯೋಗ್ಯತೆಯ ಪ್ರಶ್ನೆಯೇ ಇಲ್ಲಿ ಇಲ್ಲ. ನಿಮ್ಮ ಹೆಸರನ್ನು ಸೂಚಿ ಸಿದ್ದು ನಾನಲ್ಲ, ಸೋಮಯಾಜಿಗಳು. ಮತ್ತೆ....ಬೇರೆ ಕೆಲಸ ಇಲ್ಲವೆನ್ನುವು ದಿಲ್ಲ. ಆದರೆ ಕೆಲಸಕ್ಕಾಗಿ ಹೆದರುವ ಜೀವ ನೀವಲ್ಲವೆಂದು ತಿಳಿದಿದ್ದೆ."

ಅನಂತನಿಗೆ ಈಗ ನಾಚಿಕೆಯಾಯಿತು. "ನಿಮ್ಮಿಷ್ಟ, ರಾಜೀವ." ಎಂದಿಷ್ಟೇ ಹೇಳಿದ.

ಈ ಪರಿಚಯ ಸಲಿಗೆಗೆ ಬೆಳೆದು, ಸ್ನೇಹದ ಬಾಂಧವ್ಯದಲ್ಲಿ ಅನಂತ ಬಳಗದ ಪ್ರಮುಖ ಸದಸ್ಯನಾದ.

ಎಲ್ಲ ಸಾಮಾಜಿಕ ಕೊಳೆಗಳ ಮೇಲೆ ಕಣ್ಣುಹಾಯಿಸಿ, ಇವನ್ನು ಸಹಿಸಿ ಕೊಂಡಿರುವ ಎಲ್ಲ ವ್ಯಕ್ತಿ ಶಕ್ತಿಗಳ ಮೇಲೆ ಕಿಡಿ ಕಾರಲು, ಎಂಟು ತಿಂಗಳು ಕಳೆದ ಮೇಲೊಂದು ದಿನ 'ಕಹಳೆ' ಸಾಪ್ತಾಹಿಕ ಹೊರಬಂತು.

ಸಂಪ್ರದಾಯದ, ಅಜ್ಞಾನದ, ದಾರಿದ್ರ್ಯದ ಒಂದು ದೊಡ್ಡ ಕೋಟೆ ಯನ್ನೇ ಒಡೆಯಲು ಅನಂತ ಇತರ ಗೆಳೆಯರೊಂದಿಗೆ ಮುಂದುವರಿದು ಹೋದ.

ಒಂದು ಅಸ್ಥಿರ ಆರ್ಥಿಕ ಹಂದರ, ದುರ್ಬಲ ವ್ಯವಸ್ಥೆಯ ಮೇಲೆ ನಿಂತಿದ್ದಿತ್ತಾದರೂ 'ಕಹಳೆ' ಮರುದನಿ ಕೊಡಲಾರಂಭಿಸಿದಾಗ ಅನಂತ ಇತರ ಗೆಳೆಯರೊಡನೆ, ಪರಿಣಾಮ ನಿರೀಕ್ಷಣೆಯಲ್ಲಿ ತನ್ಮಯನಾದ.

ಒಂದು ಸಾಪ್ತಾಹಿಕ, ಜೊತೆಗೆ ಟ್ರೇಡ್ ಯನಿಯರ್ನ ಚಟುವಟಿಕೆಗಳು —ಹೀಗೆ ಬಿಡುವಿಲ್ಲದಂತೆ ದುಡಿಮೆಯ ಕಾರ್ಯಕ್ಷೇತ್ರದಲ್ಲಿ ಅನಂತ ಶಕ್ತಿಮೀರಿ ಹೆಣಗುತ್ತಿದ್ದ.

ಭಾರತಿ ಬಂದಾಗ ಕೆಲಸದ ಈ ಸಾಗರದಲ್ಲಿ ಆಸರೆಯ ದ್ವೀಪವೊಂದು, ತನಗೆ ಆಯಾಸ ಪರಿಹಾರಕ್ಕಾಗಿ ಸದಾ ಸಿದ್ಧವಿದೆಯೆಂದು ಆತನ ನಿಚ್ಚಳ ನಂಬಿಕೆಯಾಗಿತ್ತು.

ಆಕೆಯ ಪ್ರೇಮದ ಸಾನ್ನಿಧ್ಯ ತನ್ನನ್ನು ಈ ಹೋರಾಟದ ಯಜ್ಞದಲ್ಲಿ ಪುನೀತನನ್ನಾಗಿ ಮಾಡುವುದೆಂದು ನಂಬಿಕೆಯಿತ್ತು.

ಭಾರತಿಯ ಸಾನ್ನಿಧ್ಯ ಆತ ಬಯಸಿದಂತೆ ಒದಗಿಬಂತು.

ಆದರೆ........

೧೫

ಭಾರತಿಗೆ ಕನಸಿನಲ್ಲಿ ಕಾಣುತ್ತಿದ್ದುದೂ ಸುನಂದೆಯ ಪತ್ರವೇ; ಆ ಪತ್ರ ಮನಸ್ಸಿನಲ್ಲಿ ಮೂಡಿಸಿದ ಚಿತ್ರನೆ.

'ಕದ್ರಿಯ ಮನೆ ಎಷ್ಟು ಚಂದವಾಗಿದೆ ಗೊತ್ತೆ, ಅಕ್ಕಾ. ಮಾವ ಹೊಸದೊಂದು ಕಾರು ಕೂಡಾ ತೆಗೆದುಕೊಳ್ಳುವುದರಲ್ಲಿದ್ದಾರೆ. ಮನೆಯಲ್ಲೇ 'ಬ್ಯಾಡ್‌ಮಿಂಟನ್' ಕೋರ್ಟು ಇದೆ. ಆದರೆ ಆಡಲು ಇರುವುದು ನಾವಿಬ್ಬರೇ. ಟೆನ್ನಿಸ್ ಕಲಿಯಲು ಎಷ್ಟು ಒತ್ತಾಯ ಮಾಡುತ್ತಾರೆ ಗೊತ್ತೆ? ಆದರೆ 'ಲೈಟ್‌ಹೌಸ್ ಹಿಲ್ಲಿ'ನ ತನಕ ಹೋಗಿಬರುವುದೆಂದರೆ ನನ್ನ ಜೀವ ಅರ್ಧ ಹಣ್ಣಾಗಿ ಬರುತ್ತದೆ. ಸೀಸನ್ ಇನ್ನೂ ತೊಡಗಿಲ್ಲವಲ್ಲ.

ನಿನಗೇನು? ದೊಡ್ಡ ಪಟ್ಟಣದಲ್ಲಿದ್ದೀ. ಇಲ್ಲಿ ಎಲ್ಲಿ ನೋಡಿದರೂ ಮುಂಬಯಿ ಫ್ಯಾಶನ್ನೆ. ಆದರೂ ಮಂಗಳೂರೇನು ಕಡಿಮೆಯಲ್ಲ. ಎರಡು ದಿನ 'ಸೈಕಲ್' ಹತ್ತಲು ನಾನೂ ಪ್ರಯತ್ನಪಟ್ಟೆ. ಆದರೆ ವೈಲ್ ಸೀರೆ ಉಡಬಾರದಿತ್ತು. ಎರಡು ಸೀರೆ ಹೋದನಕ್ಕೆ ನಾಲ್ಕು ತಂದರು, ಆ ಮಾತು ಬೇರೆ ಎನ್ನು. ಆದರೆ ಕೈ ನ್ಯೆ ಗಾಯಕ್ಕೆ ಟಿಂಕ್ಚರ್ ಸುರಿದು ಸಾಕಾಯಿತು. ಬಿಟ್ಟುಬಿಟ್ಟೆ.

ನಾವು ಯಾವಾಗ ಮುಂಬಯಿಗೆ ಬರಬೇಕೇ? ಅಥವಾ ಬರುವುದೇ ಬೇಡವೆ?'

ಒಂದು ಕಟ್ಟಡದಲ್ಲಿ ಇಪ್ಪತ್ತು ಮನೆಗಳು; ಎರಡೆರಡು ಕೋಣೆಗಳ ಮನೆಗಳು. ಇಲ್ಲಿ 'ಬ್ಯಾಡ್‌ಮಿಂಟನ್' ಕೋರ್ಟಿನ ಮಾತೆಲ್ಲಿ ಬಂತು.

ಕನಸಿನಲ್ಲಿ ಭಾರತಿ ಮಂಗಳೂರನ್ನೇ ಕಾಣುತ್ತಿದ್ದಳು. ಒಂದು ಬಾರಿ ತಂಗಿಯೊಡನೆ ಹೋಗಿದ್ದ ನೆನಪಿನ ಆಧಾರದಿಂದ ಯಾವುವೊ ಸುಂದರ ಗೃಹಗಳ, ಸುಂದರ ತೋಟಗಳ, ವಿಶಾಲ ಆವರಣಗಳುಳ್ಳ ವಸತಿಗಳ ನಡುವೆ ಹಾದು ಹಾದು ಮುಂದೆ ಹೋಗುತ್ತಿದ್ದರು.

ಒಮ್ಮಿಂದೊಮ್ಮೆಗೆ ಆಕೆಗೆ ಪಾರ್ವತಿ ಇದಿರಾದಳು.

'ಯಾರಿಗೂ ಹೇಳುವುದಿಲ್ಲೆಂದು ಭಾಷೆ ಕೊಡು, ಅತ್ತಿಗೆ. ಕೈ ತಾ. ನನಗೆ ಮೂರು ತಿಂಗಳು.'

'ನಿನ್ನ ಮಗುವೆಲ್ಲಿ, ಪಾರೂ? ನಿನ್ನ ಮಗುವೆಲ್ಲಿ, ಪಾರೂ?'

'ಈಗಲೇ ಕಾಲುಚೀಲ ಹೊಲಿಯಲು ಸುರುವೆ? ಕೂಸು ಹುಟ್ಟುವ ಮುಂಚೆ ಕುಲಾವಿ, ಎನ್ನುತ್ತಾರಲ್ಲ, ಹಾಗೆ.'

'ಆದರೆ ಕೂಸು ಹುಟ್ಟುತ್ತದೆ, ಅತ್ತಿಗೆ.'

'ನಿನ್ನ ಮಗುವೆಲ್ಲಿ, ಪಾರೂ?'

ಕೆದರಿದ ತಲೆಕೂದಲು, ಜೋಲುಬಿದ್ದ ಮೋರೆ, ಊದಿಕೊಂಡ ಕಣ್ಣುಗಳು. ಪಾರ್ವತಿ ಅಳುತ್ತಿದ್ದಾಳೆ. ಭಾರತಿ ಪಾರುವನ್ನು ಎಂದೂ ಆ ರೀತಿ ಕಂಡಿರಲಿಲ್ಲ.

ಯಾವಾಗಲೂ ನಗುತ್ತಿರುವ ಪಾರ್ವತಿ ಅಳುತ್ತಿದ್ದಾಳೆ.

'ಅಳಬೇಡ, ಪಾರು. ಅಳಬೇಡವೆ. ಛಿ! ಅಳಬೇಡವೆ. ಅಯ್ಯೋ!"

"ಭಾರೀs, ಭಾರೀs, ಏನಾಯಿತೇ?"

ಹೆಂಡತಿಯ ಭುಜಗಳನ್ನು ಅಲುಗಿಸುತ್ತಾ ಅನಂತ ಕೇಳಿದ.

"ಏನಾಯಿತೇ, ಭಾರೀs?"

ಭಾರತಿ ಮೆಲ್ಲಮೆಲ್ಲನೆ ಕಣ್ಣು ತೆರೆದಳು. ಗಂಡನ ಕೈಗಳು ತನ್ನ ಭುಜಗಳನ್ನು ಬಂಧಿಸಿವೆಯೆಂದು ತಿಳಿದಾಗ, ಆಕೆ ಕನಸಿನ ರಾಜ್ಯದಿಂದ ಮೆಲ್ಲಮೆಲ್ಲನೆ ಹೊರಬಂದಳು. ಆ ರಾತ್ರಿಯಲ್ಲೂ ಅನಂತನ ಕಣ್ಣುಗಳಲ್ಲಿದ್ದ ಹೆದರಿಕೆಯನ್ನು ಆಕೆ ಗುರುತಿಸಬಹುದಿತ್ತು.

"ಏನಾಯಿತೆ, ಭಾರೀs"

ಭಾರತಿ ಮಾತನಾಡಲಿಲ್ಲ. ಗಂಡನ ಹಿಡಿತದಲ್ಲಿ ಆಕೆ ಯಾವುದೋ ಅಪೂರ್ವ ಸುಖವನ್ನನುಭವಿಸುತ್ತಿದ್ದಳು. ಅವನಿಗಾಗಬಹುದಾಗಿದ್ದ ಆಯಾಸದ ಪರಿವೆಯೂ ಇಲ್ಲದೆ 'ಅವರು ಇದೇ ರೀತಿ ನನ್ನನ್ನು ಹಿಡಿದುಕೊಂಡಿರಬಾರದೆ' ಎಂದು ಯೋಚಿಸಿದಳು.

ಅನಂತ ಪುನಃ ಕೇಳುತ್ತಿದ್ದ:

"ಏನಾಯಿತೆ, ಭಾರೀs?"

ಆ ಮುಖವನ್ನು ನೋಡಿದಷ್ಟು ತೃಪ್ತಿಯೆನಿಸುತ್ತಿದ್ದಿಲ್ಲ. ಆದರೆ ಆ

ರೀತಿ ನೋಡುವುದರಲ್ಲೂ ಯಾವುದೋ ವೇದನೆ. ಒಂದು ಭಯಂಕರ ಅತೃಪ್ತಿಯ ಕೊರಗು.

'ಹೀಗೇ ಏಕೆ ನೋಡುತ್ತಿದ್ದಾರೆ. ಅಷ್ಟೇಕೆ ಹೆದರಿಕೆ? ಪ್ರೀತಿಯಿಂದ ಮುದ್ದಿಡಬಾರದೆ?'

ಭಾರತಿಯ ಹಣೆಯೆಲ್ಲ ಬೆವರಿತ್ತು. ಹೊರಗೆ ಜೋರಾಗಿ ಮಳೆ ಬರುತ್ತಿತ್ತು. ಹೆಂಡತಿಯಿಂದ ತನ್ನ ಪ್ರಶ್ನೆಗೆ ಉತ್ತರ ಬಾರದುದನ್ನು ಕಂಡು ಅನಂತ ಎದ್ದು ದೀಪ ಹತ್ತಿಸಿದ.

ಕೋಣೆ ಬೆಳಗಿದಾಗ ಭಾರತಿ ತೆರೆದ ಕಣ್ಣುಗಳಿಂದ ಗಂಡನನ್ನು ನೋಡುತ್ತಿದ್ದಳು.

"ಏನಾಯಿತು ಭಾರೀ ?"

"ದೀಪ ಯಾಕೆ ಹಾಕಿದಿರಿ?"

"ಮತ್ತೆ ಕಿರಿಚಿಕೊಂಡು, ಮಾತನಾಡಿದರೂ ಮಾತನಾಡದೆ ಇದ್ದಾಗ ನಾನೇನು ಮಾಡಬೇಕು?"

ಗಂಡನ ಪ್ರೇಮಲ ಹಿಡಿತದ ಸುಖ, ತನಗಾಗಿಯಾಗಿತ್ತು, ಎಂದು ಇನ್ನೊಂದು ಕನಸಿನಿಂದ ಹೊರಬರುತ್ತಿದ್ದ ಭಾರತಿಗೆ ಅನಂತನ ಮಾತಿನಿಂದ ಬೇಸರವೇ ಆಯಿತು. ಮಗ್ಗುಲಲ್ಲಿ ಹೊರಳಿಕೊಂಡು "ದೀಪ ತೆಗೆದುಬಿಡಿ. ಏನೂ ಆಗಿಲ್ಲ" ಎಂದಿಷ್ಟೇ ಹೇಳಿದಳು.

ಅನಂತ ದೀಪವಾರಿಸಿ ಬಂದು ಮಲಗಿನ ಮೇಲೂ ಆಕೆಗೆ ಮಾತನಾಡುವ ಇಚ್ಛೆಯಾಗಲಿಲ್ಲ.

ಭಾರತಿಯ ಬಲಗೈಯನ್ನು ತನ್ನ ಅಂಗೈಯೊಳಗಿರಿಸಿ ಅನಂತ ಕೇಳಿದ:

"ಏನಾಗಿತ್ತೇ?"

"ಕನಸು." ಸ್ವಲ್ಪ ಉದಾಸೀನಳಾಗಿಯೇ ಭಾರತಿ ಈ ಮಾತು ಹೇಳಿದರೂ ಗಂಡನ ಹಿಡಿತ ಹಿತಕರವಾಗಿತ್ತು.

"ಅಷ್ಟೆಯೇ? ಕರಡಿ ಬಂದಿತ್ತೇ?" ಅನಂತ ನಗುತ್ತಲೇ ಕೇಳಿದ.

ಭಾರತಿ ಮಾತನಾಡಲಿಲ್ಲ.

ಇಬ್ಬರೂ ತುಸು ಹೊತ್ತು ಹಾಗೆಯೇ ಮಲಗಿದ್ದರು. ಇಬ್ಬರ ಆಲೋಚನೆಗಳೂ ಎರಡು ಕಡೆ ಹರಿದಿದ್ದುವು. ಆ ರಾತ್ರಿಯ ನೀರವತೆಯಲ್ಲಿ ಮಳೆಯ ಸದ್ದು ಶ್ರುತಿ ಹಿಡಿದಂತೆ ಕೇಳುತ್ತಿತ್ತು. ಅನಂತ, ಯಾವುದೊಂದು

ವಸತಿಯ ಸೌಕರ್ಯವಿರದೆ, ಕಾಲುದಾರಿಗಳಲ್ಲೋ ಜೋಪಡಿಗಳಲ್ಲೋ ಇರುವ ಲಕ್ಷಗಟ್ಟಲೆ ಜನರ ಅವಸ್ಥೆ ಇಂಥ ಮಳೆಯ ದಿನಗಳಲ್ಲಿ ಹೇಗಿರಬಹುದು ಎಂದು ಚಿಂತಿಸುತ್ತಿದ್ದ.

ಭಾರತಿ ಯೋಚಿಸುತ್ತಿದ್ದುದು ಬೇರೆಯೆ.

ಕನಸು ಮರೆಯಾಗಿತ್ತು. ಆದರೆ ಕನಸಿನಲ್ಲಿ ಕಂಡಿದ್ದ ಪಾರ್ವತಿಯ ಮುಖ ಇನ್ನೂ ಕಣ್ಣಮುಂದಿತ್ತು.

ಭಾರತಿ ಮುಂಬಯಿಗೆ ಬಂದಮೇಲೆ ಕಣ್ಣೀರು ತೆಗೆಯುವ ಪ್ರಸಂಗ ಬಂದಿದ್ದುದು, ಈ ಮೂರು ತಿಂಗಳುಗಳಲ್ಲಿ, ಅದೇ ಮೊದಲು—ಪಾರ್ವತಿಯ ಮಗು ತೀರಿಕೊಂಡ ಸುದ್ದಿ ತಿಳಿದಾಗ; ಆ ಕಾಗದ ಕಂಡಾಗ, ಮಾವನ ಪತ್ರ ಕಂಡು ಪಾರ್ವತಿಯ ಕುರಿತು ಉಂಟಾಗಿದ್ದ ಮರುಕದಿಂದಲೇ ಅವರ ವಿಚಾರ ಸಹಾನುಭೂತಿ ಮೂಡಿತ್ತು. ಎಂತಲೇ ಗಂಡನ ಬಾಡಿದ ಮೊಗ ನೋಡಿದಾಗ, ಹಣಸಹಾಯ ಯಾಚಿಸಿದ ತಂದೆಯ ಪತ್ರ ನೋಡಿ ಅವರು ನೊಂದುಕೊಂಡುದನ್ನು ಗಮನಿಸಿದಾಗ ಬೇಸರವಿಲ್ಲದೆ ತನ್ನ ಚಿನ್ನವನ್ನು ಗಂಡನ ಕೈಲಿರಿಸಿದ್ದಳು.

ಆದರೆ ಪಾರ್ವತಿಗೆ ಯಾಕೆ ಈ ಅವಸ್ಥೆ ಬಂತು ?

ಚೊಚ್ಚಲು ಹೇಗೆಯೆಂದು ಹೆದರಿಕೊಂಡಿದ್ದ ಪಾರ್ವತಿಯ ಮನಸ್ಸಿನಲ್ಲಿ ಆ ಹೆದರಿಕೆಯ ಹಿಂದೆ ಮನೆಮಾಡಿದ್ದ ಸುಂದರ ಆಸೆ. ತಾಯ್ತನದ ಸಂಭ್ರಮವನ್ನು ನೆನೆಸಿಕೊಂಡೇ ಆಕೆ ಹೊಲಿಯುತ್ತಿದ್ದ ಆ ಪುಟ್ಟ ಕಾಲುಚೀಲಗಳು.

ಈ ಆಸೆಗೆ ಮುಳುವಾಗುವಂತೆ ಆ ಕೂಸು ತೀರಿಕೊಳ್ಳಬೇಕೇ? ಅವರ ಸುಂದರ ದಾಂಪತ್ಯದ ಪ್ರೇಮದ ಹೂ ಅರಳುವುದು ದೇವರಿಗೆ ಬೇಡವಾಯಿತೆ ?

ಭಾರತಿ ಹೊರಳಿ ಮಲಗಿದ್ದ ಗಂಡನ ಕಡೆ ನೋಡಿದಳು. ಆ ಕತ್ತಲಲ್ಲಿ ಆತನ ಮುಖಭಾವವನ್ನು ಗ್ರಹಿಸುವುದು ಸಾಧ್ಯವಾಗಿರಲಿಲ್ಲವಾದರೂ, ಹೊಳೆಯುವ ಆ ಕಣ್ಣುಗಳನ್ನು ಕಾಣಬಹುದಿತ್ತು. ನೆಟ್ಟನೋಟದಿಂದ ಗೋಡೆಯ ಕಡೆ ನೋಡುತ್ತಿದ್ದ ಗಂಡನನ್ನು ಕಂಡಾಗ ಭಾರತಿಗೆ ಪುನಃ ಹೃದಯದಲ್ಲಿ ಅತೀವ ವೇದನೆ.

ಮಗ್ಗಲು ಬದಲಿಸಿ ಭಾರತಿ ಯೋಚಿಸಲಾರಂಭಿಸಿದಳು.

ಅಂದು ರಾತ್ರೆಯೂ ಎಂದಿನಂತೆಯೇ ಅನಂತ ಬರುವಾಗ ಘಂಟೆ ಹತ್ತನ್ನು ಸಮೀಪಿಸಿತ್ತು. ಇದು ನಿತ್ಯ ರೂಢಿಯಾಗಿದ್ದುದರಿಂದ ಭಾರತಿಗೆ

ಈ ವಿಚಾರ ಮೊದಲಿನ ಕಳವಳವಿರಲಿಲ್ಲ. ಅದೂ ಇಂದು ಗಂಡ ಬಂದೊಡನೆ ಸಂತೋಷದ ಸುದ್ದಿಯೊಂದನ್ನು ತಿಳಿಸುವ ಆತುರ ಬೇರೆ. ಈ ಸಂತೋಷದ ಹಿನ್ನೆಲೆಯಲ್ಲಿ ಸುನಂದೆಯ ಪತ್ರ, ಮಂಗಳೂರಿನ ಪ್ರಪಂಚವನ್ನು ಬಣ್ಣಿಸಿ ಬರೆದ ಪತ್ರ, ತುಸು ಹೆಚ್ಚು ನೋವು ಕೊಟ್ಟಿತ್ತು. ಆದರೆ ಮನೆಗೆ ಬಂದ ಅನಂತನನ್ನು ನೋಡಿದೊಡನೆ ಭಾರತಿಗೆ ಆ ಸುದ್ದಿಯನ್ನು ತಿಳಿಸುವ ಎದೆಗಾರಿಕೆಯುಂಟಾಗಲಿಲ್ಲ.

ಆ ಸುದ್ದಿ ಬರೀ ಒಂದು ಆಮಂತ್ರಣ. ಸಭೆ ಸಮಾರಂಭ, ಸಂಭ್ರಮಗಳಿಗಾಗಿ ಹಸಿದಿದ್ದ ಭಾರತಿಗೆ ಗಂಡನೊಡನೆ, ಸ್ನೇಹಿತರ ಮನೆಯಲ್ಲಿ ಒಂದು ದಿನವಿಡೀ ಆವರೂ ಸಂತೋಷದಿಂದ ಕಳೆಯಬಹುದು ಎಂದು ಭಾವಿಸಲು ಅನುವು ಮಾಡಿಕೊಟ್ಟಿದ್ದ ಆಮಂತ್ರಣ.

ಹೊಸಮನೆಗೆ ಪ್ರವೇಶಿಸುವ ಸಂಭ್ರಮ ಮುಗಿದ ಮೇಲೆ ಭಾರತಿ ನಾಗೇಶರಾಯರ ಹೆಂಡತಿ ಮೀನಾಕ್ಷಮ್ಮನನ್ನು ಮತ್ತೆ ಕಂಡುದು ಅಂದು ಸಂಜೆಯೆ. ಅನಂತ ತಾನಾಗಿ ಭಾರತಿಯನ್ನು ಅವರಲ್ಲಿಗೆ ಕರೆದೊಯ್ದಿರಲಿಲ್ಲ. ಶ್ರೀಪತಿರಾಯರು ಹೊರಟುಹೋದಮೇಲೆ ನಾಗೇಶರಾಯರೂ ಅನಂತನ ಸಂಸಾರದ ಕುರಿತು ಅಷ್ಟೇನೂ ಆಸಕ್ತಿ ವಹಿಸಿದಂತಿರಲಿಲ್ಲ. ಬಂದು ನಾಲ್ಕು ತಿಂಗಳುಗಳಾದರೂ ಮುಂಬಯಿಯ ಸರಿಯಾದ ಪರಿಚಯವಿರದ ಭಾರತಿಗೆ—ಅನಂತನಿಗೆ ಇದನ್ನು ಮಾಡಿಸಿಕೊಡುವಷ್ಟು ವ್ಯವಧಾನವೂ ಇರಲಿಲ್ಲ—ನಾಗೇಶರಾಯರ ಮನೆಗೆ ಒಬ್ಬಾಕೆ ಹೋಗಿ ಬರುವುದು ಸಾಧ್ಯವಿರಲಿಲ್ಲ. ತಂದೆಯೊಡನೆ ಮಾತನಾಡುವಾಗಲೇ ಅನಂತನಿಗೆ ನಾಗೇಶರಾಯರ ಕುರಿತು ಇದ್ದ ಆದರಭಾವದ ಪರಿಚಯ ಭಾರತಿಗೆ ಸ್ವಲ್ಪಮಟ್ಟಿಗೆ ಆಗಿದ್ದುದರಿಂದ ಆಕೆ ಗಂಡನೊಡನೆ ಈ ವಿಚಾರ ಒತ್ತಾಯಿಸಿರಲೂ ಇಲ್ಲ. ಆದರೆ ಅಂದು ಸಂಜೆ ಕಾರಿನಲ್ಲಿ ಮೀನಾಕ್ಷಮ್ಮ ಬಂದಾಗ ಮಾತ್ರ ಭಾರತಿಗೆ ಈ ತನಕ ಪ್ರಯತ್ನಪೂರ್ವಕ ತಾನು ತಡೆಹಿಡಿದಿದ್ದ ಆಸೆ ಆಕಾಂಕ್ಷೆಗಳನ್ನು ಇನ್ನೂ ತಡೆದುಕೊಳ್ಳುವುದು ಸಾಧ್ಯವಿಲ್ಲ ಎಂದು ತೋರಿತು.

ಮನೆಯ ಮುಂದೆ ಕಾರು ಬಂದು ನಿಂತಾಗ ಭಾರತಿ ಬಾಲ್ಕನಿಯಲ್ಲೇ ನಿಂತಿದ್ದಳು. ಯಾರ ಮನೆಗೆ ಯಾರು ಬಂದಿದ್ದಾರೇನೋ ಎಂದು ಭಾರತಿ ಉದಾಸೀನಳಾಗಿಯೇ ಇದ್ದಳು. ಬಂದು ನಾಲ್ಕು ತಿಂಗಳಾದರೂ ಆಕೆ ನೆರೆಯವರಲ್ಲಿ ಯಾರನ್ನೂ ಅಷ್ಟಾಗಿ ಹಚ್ಚಿಕೊಂಡಿರಲಿಲ್ಲ. ಮೇಲೆ ಮಾಳಿಗೆಯಲ್ಲಿದ್ದ

ಹತ್ತು ಸಂಸಾರಗಳಲ್ಲಿ ಹೆಚ್ಚಿನವು ಗುಜರಾತೀ ಜನರವು. ಮೂರು ನಾಲ್ಕು ತಮಿಳರವು. ಭಾಷೆಯ ಬಾಂಧವ್ಯವೂ ಇರದ ಭಾರತಿಗೆ ವ್ಯವಹಾರದ ಜಗತ್ತಿನಲ್ಲಿ ಏಕಾಂತತೆಯ ಉಪವಾಸವೇ ಗತಿಯಾಗಿತ್ತು. ಅದೂ ಅನಂತನ ವಿಚಿತ್ರ ನಡತೆಯಿಂದಾಗಿ ಆತ ಆ ಜಗತ್ತಿಗೆ ಅಪರಿಚಿತ ಹಾಗೂ ವಿಚಿತ್ರ ವ್ಯಕ್ತಿಯಾಗಿದ್ದ. ನಸುಕು ಹರಿದು ಒಂದೆರಡು ತಾಸುಗಳೊಳಗೆ ಆತ ಮನೆ ಬಿಟ್ಟರೆ ಮತ್ತೆ ಆತನನ್ನು ಕಾಣುವುದೆಂದರೆ ಮಧ್ಯರಾತ್ರಿಗೇ ಸರಿ. ಆದಿತ್ಯವಾರ ಕೂಡ ಇದಕ್ಕೆ ಆಕ್ಷೇಪವಾಗಿರಲಿಲ್ಲ. ಹೀಗಾಗಿ ಆತ ಆ ಮಧ್ಯಮವರ್ಗದ ಸಂಸಾರಿಗಳ ಕೂಟ ಜೀವನಕ್ಷೇತ್ರದಿಂದ ತನಗರಿಯದಂತೆಯೇ ಬಹಿಷ್ಕೃತನಾಗಿ ನಿಲ್ಲಬೇಕಾಯಿತು. ಇದರಿಂದ ಭಾರತಿಯ ಮೇಲೆ ಯಾವ ರೀತಿಯ ಪರಿಣಾಮಗಳಾಗಬಹುದು ಎಂಬುದನ್ನೂ ಅನಂತ ಯೋಚಿಸಿರಲಿಲ್ಲ.

ಗಂಡನ ಈ ತೆರನಾದ ಜೀವನ ತನ್ನ ಸುತ್ತ ಒಂದು ವೈಚಿತ್ರ್ಯದ ಕೋಟೆಯನ್ನು ಕಟ್ಟಿದ್ದರೆ, ತನ್ನ ಸೌಂದರ್ಯ ಹಾಗೂ ಇಂಗ್ಲಿಷ್ ಜ್ಞಾನ ಇವು ತನ್ನ ನೆರೆಯ ಹೆಂಗಸರೊಡನೆ ಬೆರೆಯಲು ಇನ್ನೊಂದು ರೀತಿಯ ತಡೆಯನ್ನು ತಂದಿವೆಯೆಂದು ಭಾರತಿಗೆ ತಿಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ. ಇದರಿಂದ ಆಕೆಗೆ ಇನ್ನಷ್ಟು ಬೇಸರವಾಗುತ್ತಿತ್ತು. ಕಾಲಕಳೆದಂತೆ, ಸಾಮೀಪ್ಯ, ಈ ತಡೆಗಳನ್ನು ಒಡೆಯಲು ತುಸು ಸಹಾಯ ಮಾಡಿದರೂ, ತನ್ನ ಗಂಡನ ಜೀವನದ ನೆರಳಿನಲ್ಲಿ ಬಾಳಬೇಕಾಗಿದ್ದ ಭಾರತಿ, ಈ ರೀತಿಯ ವಿಕ್ಷಿಪ್ತತೆಯಿಂದ ಬಿಡುಗಡೆ ಹೊಂದಲು ತೀರ ಸಮರ್ಥಳಾಗಿರಲಿಲ್ಲ.

ಎಂತಲೇ ಕಾರಿನಲ್ಲಿ ಬಂದ ಅತಿಥಿಗಳು ಬೇರೆಲ್ಲಿಗಾದರೂ ಬಂದಿರಬಹುದು ಎಂದು ಭಾವಿಸಿದ್ದ ಭಾರತಿಗೆ ಮೀನಾಕ್ಷಮ್ಮ ಮಾಳಿಗೆಯೇರಿ ಬಂದು ತನ್ನ ಹೆಸರು ಹಿಡಿದು ಕೂಗಿದಾಗ ಆದ ಆಶ್ಚರ್ಯ ಅಷ್ಟಿಷ್ಟಲ್ಲ.

"ಏನೇ, ಭಾರತೀ, ಗುರುತು ಸಿಗದವರ ಹಾಗೆ ನೋಡುತ್ತಿದ್ದೀಯಲ್ಲ? ಮನೆ ಒಕ್ಕಲಿಗೆ ಬಂದದ್ದು ಮರೆತುಹೋಗಿದೆಯೇನು?" ಎಂದಿದ್ದರು.

ಆಗ ಭಾರತಿಯ ಮುಖದಲ್ಲಿ ನಗು ಮೂಡಿತ್ತು.

"ಇಲ್ಲ ಅಕ್ಕ, ಬನ್ನಿ. ಕಾರಿನಲ್ಲಿ ಬರುವವರು ಯಾರಿರಬಹುದೆಂದು ಯೋಚಿಸುತ್ತಿದ್ದೆ. ಬಹಳ ಸಮಯದ ಮೇಲೆ ಹುಡುಗಿಯ ನೆನಪಾಯಿತೇನು?"

"ಹಾಗಲ್ಲ, ಭಾರತೀ. ನಾವು ವಯಸ್ಸಾದವರು. ತಿರುಗಾಡಿದರೂ ಎಷ್ಟು ತಿರುಗಾಡಿಯೇವು? ನಿಮಗಾದರೆ ಇದು ಪ್ರಾಯ. ಅಲ್ಲಿ ಇಲ್ಲಿ ಓಡಾಡಿ

ಕೊಂಡಿರಬೇಕಾದ ಕಾಲ. ಒಂದು ಸಲವಾದರೂ ಮನೆಯ ಕಡೆ ಮುಖ ತೋರಿಸಬಾರದೆ?"

ಭಾರತಿಗೆ ಉತ್ತರ ಹೇಳಲು ತುಸು ಕಷ್ಟವಾಗಿತ್ತು. ಆದರೂ ಅನಂತನನ್ನು ಬಿಟ್ಟುಕೊಡಲು ಮನಸ್ಸಾಗದೆ,

"ಅವರಿಗೆ ಪುರಸೊತ್ತು ಸಿಗುವುದೆಂದೇ ಇಲ್ಲ, ಅಕ್ಕ. ಆಫೀಸಿನ ಕೆಲಸ; ಒಂದು ಪೇಪರಿನ ಕೆಲಸ—ಇವೆಲ್ಲವುಗಳಿಂದ ಬಿಡುಗಡೆ ಪಡೆದು ಬರಬೇಕಲ್ಲ." ಎಂದಿದ್ದಳು.

"ಸರಿಯಪ್ಪ. ನೀನಾದರೂ ಬರಬಹುದಿತ್ತಲ್ಲ."

"ನನಗೊಬ್ಬಳಿಗೇ? ಮಾತುಂಗಾದ ತನಕ ಹೋಗಿ ಬರಲು ಮೂರು ಸಲ ಆಲೋಚನೆ ಮಾಡಬೇಕಾಗುತ್ತದೆ. ಅಷ್ಟು ಧೈರ್ಯ ನನಗಿದೆಯೆ?"

"ಹಾಗಾದರೆ ಈಗ ಹೊರಡು. ಮತ್ತೆ ಕಾರಿನಲ್ಲಿಯೇ ಹಿಂದೆ ಕಳಿಸಿಕೊಡುತ್ತೇನೆ."

ಮೀನಾಕ್ಷಮ್ಮನ ಆಹ್ವಾನ ತುಂಬ ಪ್ರಲೋಭನಕಾರಿಯಾಗಿತ್ತಾದರೂ ಭಾರತಿ ಒಪ್ಪಿಕೊಳ್ಳಲಿಲ್ಲ.

"ಅದಿರಲಿ. ಈಗ ಅಪರೂಪದಲ್ಲಿ ಬಂದವರು ಸ್ವಲ್ಪ ಕುಳಿತುಕೊಳ್ಳಿ" ಎಂದು ಅವರನ್ನು ಒಳಗೆ ಅಡುಗೆಯ ಮನೆಗೆ ಕರೆಯೊಯ್ದು ಕುಳ್ಳಿರಿಸಿ, ಭಾರತಿ ಕಾಫಿಯ ಸಿದ್ಧತೆ ನಡೆಸಿದ್ದಳು.

ಮೀನಾಕ್ಷಮ್ಮ ಬಂದುದರ ಉದ್ದೇಶ ಬೇರೆಯೇ ಆಗಿತ್ತು.

ಒಂದು ತಾಸು ಲೋಕಾಭಿರಾಮ ಹರಟೆಯಾದ ಮೇಲೆ, ಭಾರತಿಯ ನೆರೆಕರೆಯವರ ಇತಿಹಾಸಗಳನ್ನೆಲ್ಲ ವಿಚಾರಿಸಿಯಾದ ಮೇಲೆ ಮೀನಾಕ್ಷಮ್ಮ ತಾವು ಬಂದ ಮುಖ್ಯ ಉದ್ದೇಶವನ್ನು ಸೂಚಿಸಿದ್ದರು:

"ನಾಡಿದ್ದು ಭಾನುವಾರ ನಿನ್ನ ಗಂಡನಿಗೆ ಬಿಡುವಿದೆಯೇ? ಬಿಡುವಿರದೆ ಏನು, ಭಾನುವಾರವಲ್ಲವೆ?"

"ಏನೋ! ಹೇಳುವುದು ಕಷ್ಟ. ರಜೆಯಿದ್ದರೂ ಬೇರೇನಾದರೂ ಕೆಲಸವಿರಬಹುದು."

"ಅಂಥದೇನು ಕೆಲಸ? ಇದ್ದರೂ ಅದು ಬೇರೆ ಯಾವಾಗಲಾದರೂ ಮಾಡದಂಥ ಕೆಲಸವೆ? ನಾಡಿದ್ದು ಆದಿತ್ಯವಾರ ಯಾವ ಕೆಲಸವೂ ಇಟ್ಟುಕೊಳ್ಳದೆ ನೀವಿಬ್ಬರೂ ಮನೆಗೆ ಬರಬೇಕು. ಬೆಳಿಗ್ಗೆಯೇ ಬನ್ನಿ. ಸಂಜೆಗೆ

ಮರಳಬಹುದು. ಬೇರೇನೂ ವಿಶೇಷವಿಲ್ಲ. ನನ್ನ ಮಗ, ಸೊಸೆ ದಿಲ್ಲಿಯಿಂದ ಬಂದಿದ್ದಾರೆ. ನಾಲ್ಕು ಮಂದಿ ಬೇಕಾದವರನ್ನು ಕರೆಯಬೇಕೆಂದು ಆಸೆ, ಅಷ್ಟೆ."

"ಅವರ ಹತ್ತಿರ ಹೇಳಿ ನೋಡುತ್ತೇನೆ."

"ನೋಡುವುದೇನೂ ಇಲ್ಲ. ಬರಲೇಬೇಕು. ಅವರು ಹಾಗೆಯೇ ತಿಳಿಸಿದ್ದಾರೆ. ನಿನ್ನ ಗಂಡನಿಗೆ ಟೆಲಿಫೋನ್ ಮಾಡುತ್ತಾರೆ, ಅಗತ್ಯವಿದ್ದರೆ. ಎಷ್ಟು ಮಾತ್ರಕ್ಕೂ ಬಾರದೆ ಇರಬಾರದು. ಒಂದು ಕೊಂಪೆಯಲ್ಲಿ ಬಿದ್ದುಕೊಂಡು ಆಯುಷ್ಯ ಸಂದಾಯ ಮಾಡುವುದಕ್ಕೇನಮ್ಮಾ ನೀನು ಮುಂಬಯಿಗೆ ಬಂದದ್ದು? ನಾಲ್ಕು ಜನರೊಂದಿಗೆ ಬೆರೆಯದಿದ್ದರೆ ಹೇಗೆ? ಬಾರದೆ ಇರಬೇಡ."

ಆ ಒತ್ತಾಯ, ಸ್ನೇಹದ ಕರೆ, ಒಂದು ದಿನದ ಸಂತೋಷದ ಆಸೆ, ಭಾರತಿಯ ಮೇಲೆ ಪರಿಣಾಮ ಮಾಡಿದವು. ನಗುತ್ತಲೇ "ಹೂಂ" ಎಂದಿದ್ದಳು.

ಆದರೆ ಮೀನಾಕ್ಷಮ್ಮ ಹೊರಟುಹೋದಮೇಲೆ ಮಾತ್ರ ಭಾರತಿಗೆ ತಾನು ಒಪ್ಪಿಕೊಂಡುದು ಸರಿಯೇ ಎಂದು ಆಲೋಚನೆ ಆರಂಭವಾಯಿತು. ಗಂಡ ಮರಳುವ ತನಕವೂ ಈ ಆಲೋಚನೆ ಆಕೆಯನ್ನು ಬಿಡಲಿಲ್ಲ. ಆದರೂ ಮೀನಾಕ್ಷಮ್ಮ ಬಂದ ಸುದ್ದಿಯನ್ನು ತಿಳಿಸಬೇಕೆಂಬ ಆನಂದದ ಹಿಗ್ಗು ಮನಸ್ಸಿನಲ್ಲಿದ್ದುದರಿಂದ, ಅನಂತ ಭಾನುವಾರದ ಕಾರ್ಯಕ್ರಮಕ್ಕೆ ಒಪ್ಪಿಕೊಳ್ಳಬಹುದೆಂಬ ಆಸೆಯೂ ಇತ್ತು.

ಆದರೆ ಗಂಡನನ್ನು ನೋಡಿದಾಗ ಈ ಧೈರ್ಯ ಮಾಯವಾಯಿತು. ಅತೀವ ಆಯಾಸದಿಂದ ಅನಂತ ಸೋತಿದ್ದ. ಇದು ದಿನನಿತ್ಯದ ಮಾತೇ ಆಗಿದ್ದರೂ ಇಂದು ಯಾವುದೇ ಸಹನಾತೀತ ವೇದನೆಯಿಂದ ಆತ ಬಳಲುತ್ತಿರುವಂತೆ ಭಾರತಿಗೆ ಕಂಡುದರಿಂದ, ಆಕೆಗೆ ತಾನು ಹೇಳಬೇಕಾಗಿದ್ದ ಸುದ್ದಿಯ ಕಡೆ ಗಮನಕೊಡಲು ಮನಸ್ಸಾಗಲಿಲ್ಲ; ಧೈರ್ಯವೂ ಬರಲಿಲ್ಲ.

ಊಟ ತೀರಿಸಿದ ಮೇಲೆ ಹೇಳುತ್ತೇನೆ, ಎಂದು ಭಾವಿಸಿದಳು. ಆದರೆ ಸುನಂದೆಯ ಪತ್ರದ ನೆನಪಾಗಿ ಆಕೆಯ ಯೋಚನೆಯೆಲ್ಲ ಅದಕ್ಕೆ ಮೀಸಲಾಯಿತು.

ಈಗ ನಡುರಾತ್ರಿಗೆ, ಹೆದರಿಕೊಂಡು ಎದ್ದಮೇಲೆ, ನೆಟ್ಟನೋಟದಿಂದ

ಗೋಡೆಯನ್ನು ನೋಡುತ್ತ ಮಲಗಿದ್ದ ಗಂಡನ ಕಡೆ ದೃಷ್ಟಿ ಹೊರಳಿಸಿದಾಗ, ಸಂಜೆಯ ಘಟನೆಗಳೆಲ್ಲ ನೆನಪಾಗಿ ಭಾರತಿ, ಮತ್ತೆ ಮೀನಾಕ್ಷಮ್ಮನ ಆಮಂತ್ರಣ ವನ್ನು ತಿಳಿಸೋಣವೇ ಎಂದು ಯೋಚಿಸಿದಳು. ಗಂಡ ನಿದ್ರಿಸಿರಲಿಲ್ಲವೆಂದು ತಿಳಿದಿತ್ತು. ಹೀಗೆಂದು ಪುನಃ ಮಗ್ಗಲು ಬದಲಿಸಿ ಅನಂತನೆಡೆ ನೋಡಿದಾಗ ಆತ,

"ಭಾರೀS" ಎಂದ.

"ಹೂಂ...."

"ನಿದ್ದೆ ಬಂದಿಲ್ಲವೇನೇ ?"

"ಇಲ್ಲ."

"ಯೋಚನೆಯೆ ?"

ಈಗ ಭಾರತಿ ಮೌನ.

"ಯೋಚಿಸಬೇಕಾದ ಸಮಯವೇ ಇದು, ಭಾರೀ. ಇವೊತ್ತು 'ಟೈಮ್ಸ್' ನೋಡಿದ್ದೀಯೇನು ?"

ಭಾರತಿ ಪತ್ರಿಕೆ ಓದುತ್ತಿದ್ದುದು ಗಂಡನ ಒತ್ತಾಯಕ್ಕಾಗಿ ಮಾತ್ರ. ಆ ವಿಚಾರ ಆಕೆಗೆ ಅಷ್ಟಾಗಿ ಆಸಕ್ತಿಯೇನೂ ಇದ್ದಿರಲಿಲ್ಲ. ಇಂದು ಗಂಡ ಪರೀಕ್ಷಿಸಿದಾಗ ಈ ಸತ್ಯ ಹೊರಬಿತ್ತು.

"ಓದಿಲ್ಲ. ಏನಾದರೂ ವಿಶೇಷವಿದೆಯೆ ?"

"ವಿಶೇಷ ?" ತುಂಬ ಉದಾಸೀನನಾಗಿಯೇ ಅನಂತ ಉತ್ತರವಿತ್ತ. ಮತ್ತೆ ಮಾತು ಮುಂದರಿಸುವ ಇಚ್ಛೆ ಆತನಿಗಿದ್ದಿರಲಿಲ್ಲವೆಂಬುದು ಆ ದನಿಯಲ್ಲೆ ವ್ಯಕ್ತವಾಗುವಂತಿತ್ತು. ಆದರೂ ಅನಂತ ಮಾತನಾಡಿದ. ರಾತ್ರಿಯ ಮೌನ ವನ್ನು ಭೇದಿಸಿಕೊಂಡು ಬಂತು ಗಂಡಹೆಂಡಿರ ಏಕಾಂತತೆಯ ಸನ್ನಿವೇಶದಲ್ಲಿ ನೋವಿನ, ಎದೆಯಾಳದ ನೋವಿನ, ಮಹಾಪೂರ.

"ಮಿಲಿಯಗಟ್ಟಲೆ ಜನ, ನನ್ನ ನಿನ್ನಂಥ ಜನ, ಇಂದು ಮಧ್ಯರಾತ್ರಿಗೆ, ಸಾವಿನ ದವಡೆಯ ನಡುಹಾದಿಯಲ್ಲಿದ್ದಾರೆ, ಭಾರೀ. ಇದು ವಿಶೇಷವೇ ? ಶಹರಾನ್‌ಪುರ, ಲುಧಿಯಾನಾ, ಮಾಂಟ್ಗೊಮೆರಿ, ಇವೆಲ್ಲ ಇಂದು ಉರಿಯುವ ಅಗ್ನಿಕುಂಡಗಳು. ಪಂಚನದಿಗಳ ನಾಡು ನೋಡು, ಭಾರೀ, ಪಂಜಾಬ್ ಇಂದು ಸ್ಮಶಾನ. ಮನೆ, ಮಠ, ಬಂಧುಬಳಗ, ಎಲ್ಲ ತೊರೆದು ಹೊರಟ ಲಕ್ಷಗಟ್ಟಲೆ ಕುಟುಂಬಗಳು ಇಂದು ದಾರಿಯ ಮಧ್ಯೆ. ಮಾನ ಹೋದ ಹೆಂಗಸ ರೆಷ್ಟೋ ? ಮರೆಯಾದವರೆಷ್ಟೋ ? ಜೀವ ತೆಗೆದುಕೊಂಡವರೆಷ್ಟೋ ?

ಭೂಮಿಗೆ ಭೂಮಿಯೇ ಬದಲಾಗುತ್ತಿದೆ, ಭಾರೀ. ಇದು ವಿಶೇಷವೇ? ನಿನ್ನ ದಿನದ ಒಂದು ನಿಮಿಷವನ್ನಾದರೂ ಆ ಕೋಟಿಗಟ್ಟಲೆ ಬಂಧುಗಳ ದುಃಖವನ್ನು ನೆನೆಯಲು ವಿನಿಯೋಗಿಸಬಾರದೇ?"

ಅನಂತ ಸುಮ್ಮನಾದ. ಭಾರತಿಯ ತಲೆ ಗಂಡನ ತೋಳನ್ನೇ ದಿಂಬಾಗಿ ಮಾಡಿಕೊಂಡು ಮಲಗಿತ್ತು. ಅನಂತ ಅದನ್ನೇ ನೇವರಿಸುತ್ತಿದ್ದ.

ಭಾರತಿಯ ಧೈರ್ಯ ಸಂಪೂರ್ಣ ಕುಸಿದಿತ್ತು. ಮೀನಾಕ್ಷಮ್ಮನ ಆಗಮನದ ವಿಚಾರ ತಿಳಿಸುವ ಮಾತು ಒತ್ತಟ್ಟಿಗುಳಿಯಿತು. ಅವರ ಆಮಂತ್ರಣದ ಯೋಚನೆ ದೂರವೆ.

ಎಲ್ಲಿಲ್ಲದ ಧೈರ್ಯವನ್ನು ತಂದುಕೊಂಡು ಭಾರತಿ ಒಂದು ಮಾತು ಹೇಳಿದಳು:

"ದುಃಖದ ಕುರಿತು ಯೋಚಿಸುವುದರಿಂದ ದುಃಖ ಕಡಿಮೆಯಾಗುವುದೆ?"

ಅನಂತ ನಕ್ಕ. ಅವನ ಕೈ ತನ್ನ ಕೆಲಸವನ್ನು ಅದೇ ರೀತಿ ಮುಂದುವರಿಸಿತ್ತು. "ಹುಚ್ಚೀ....ನಾನು ಯೋಚಿಸಿರುವುದಕ್ಕಿಂತ ಹೆಚ್ಚಿನ ತಿಳಿವಳಿಕೆ ನಿನಗಿದೆ" ಎಂದ.

ಹೊರಗೆ ಮಳೆ ಜೋಗುಳ ಹಾಡುತ್ತಿತ್ತು. ಭಾರತಿಗೆ ನಿದ್ದೆ ಬಂತು.

ಮರುದಿನ ಬೆಳಿಗ್ಗೆ ಮಾತ್ರ ಭಾರತಿ ಅನಂತ ಹೊರಡುವ ಮುಂಚೆ ಹಿಂದಿನ ಸಂಜೆಯ ಘಟನೆಗಳನ್ನು ತಿಳಿಸಿದಳು:

"ನಾಗೇಶರಾಯರ ಹೆಂಡತಿ ನಿನ್ನೆ ಬಂದಿದ್ದರು. ನಾಡಿದ್ದು ಆದಿತ್ಯವಾರ ಅವರಲ್ಲಿಗೆ ಹೋಗಲೇಬೇಕಂತೆ."

"ನಾಡಿದ್ದು ಆದಿತ್ಯವಾರ?"

"ಯಾಕೆ, ಆಗುವುದಿಲ್ಲವೆ?"

"ನಮ್ಮ 'ಕಹಳೆ'ಯ ತಿಂಗಳ ಲೆಕ್ಕಾಚಾರ ಆಗಬೇಕಲ್ಲ?"

"ಅದಕ್ಕೆ ಬೇರೆ ದಿವಸವೇ ಇಲ್ಲವೇ?"

"ನೀನೊಬ್ಬಳೇ ಹೋಗು. ನಾನು ಬಿಟ್ಟು ಬರುತ್ತೇನೆ. ಸಂಜೆಗೆ ಮತ್ತೆ ಕರೆದುಕೊಂಡು ಬರುತ್ತೇನೆ."

"ನಾನೊಬ್ಬಳೇ ಹೋಗುವಂತಿದ್ದರೆ ನಿಮ್ಮ ಹತ್ತಿರ ಹೇಳಬೇಕಾದ ಅಗತ್ಯವಿತ್ತೇನು?"

ಮೊದಲ ಬಾರಿಗೆ ಅನಂತ ಭಾರತಿಯ ಮಾತಿಗೆ ಹಿಮ್ಮೆಟ್ಟಿದ. ಮಾತ ನಾಡುತ್ತಿರುವುದು ಭಾರತಿಯೇ ಎಂಬ ಸಂದೇಹ ಬಂತು.

"ನೀನು ಅಷ್ಟು ಮನಸ್ಸಿಗೆ ಹಚ್ಚಿಕೊಳ್ಳುವಿಯಾದರೆ ಬರುತ್ತೇನೆ, ಭಾರೀ...."

"ನನಗಾಗಿಯಾದರೆ ಹೋಗುವುದೇ ಬೇಡ. ನೀವು ಸಂತೋಷದಿಂದ ಜೊತೆಗೆ ಬರುವಂತಿದ್ದರೆ ಮಾತ್ರ ನಾನು ಹೋಗುತ್ತೇನೆ."

"ಸರಿ. ನಿನ್ನಿಷ್ಟ ಹಾಗಾದರೆ" ಎಂದು ಅನಂತ ಮೆಲ್ಲನೆ ಹೇಳಿ ನಗಲು ಪ್ರಯತ್ನಿಸಿದ. ಅದು ನಿಜಕ್ಕೂ ತುಂಬ ಪ್ರಯತ್ನದ ನಗೆಯಾಗಿತ್ತು.

೧೬

ಮುಂದಿನ ಭಾನುವಾರ ಭಾರತಿಯ ದಿನ. ಏಳುವಾಗಲೇ ಉಲ್ಲಸಿತ ಚಿತ್ತಳಾಗಿ, ಭಾರತಿ ಗಂಡನೊಡನೆ ಹೇಳಿದಳು :

"ಸಂತೋಷದಿಂದ ನನ್ನ ಜೊತೆಗೆ ಬರುವಿರಲ್ಲ ?"

ಅನಂತ ನಕ್ಕು ಮುಸುಕೆಳೆದುಕೊಂಡ. ಭಾರತಿಯ ಬಲವಂತಕ್ಕಾಗಿ ಈ ನಗುವಿನ ಪ್ರದರ್ಶನ ಎಂಬುದು ಆತನಿಗೆ ತಿಳಿದಿತ್ತು. ಆದರೆ ಯಾಕೋ ಮೊದಲ ಬಾರಿಗೆ, ತಾನು ಭಾರತಿಯ ದೃಷ್ಟಿಯಲ್ಲಿ ಅಪರಾಧಿ ಎಂಬ ತೀವ್ರ ಕೂಡ ಆತನ ಮನಸ್ಸಿನಲ್ಲಿ ಮೂಡಿತ್ತು. ಆ ಕಾರಣ ಇಂದು ಆಕೆಯ ಜೊತೆಗೆ ಹೋಗುವಾಗ, ಮನವೊಗ್ಗದ ತಾಣದಲ್ಲೂ ಗೆಲುಮುಖ ತೋರಿಸಲು ಪ್ರಯತ್ನಿಸುತ್ತೇನೆ ಎಂದು ಅನಂತ ನಿಶ್ಚಯಿಸಿದ್ದ. ನಾಗೇಶರಾಯರ ಕುರಿತು ಆತನಿಗೇನು ಅಭಿಮಾನ ಹೆಚ್ಚಿರಲಿಲ್ಲ. ಅವರ ಮಗ ಸೊಸೆಯರನ್ನು ನೋಡುವು ದಕ್ಕಿಂತ ಹೆಚ್ಚಿನ ಮಹತ್ವದ ಕೆಲಸ ತನಗೆ ಕಾದಿದೆಯೆಂದು ಅವನಿಗೆ ಅನಿಸಿತ್ತು. ಅದೂ ಅಲ್ಲದೆ, ದೇಶವೆಲ್ಲ ದುಃಖದ ಅಂಧಕಾರದಲ್ಲಿ ಮುಳುಗಿರುವಾಗ, ಈ ಕೂಟ ಸಂಭ್ರಮಗಳಿಗೆ, ಕಾರಣ ಎಷ್ಟೇ ಸಾಧುವಾದುದಾಗಿರಲಿ, ಅವುಗಳ ಕುರಿತು ಆತನಿಗೆ ಜಿಗುಪ್ಸೆಯೇ.

ಅಲ್ಲದೆ ಪತ್ರಿಕೆಗೆ, ಒಂದು ನಿಮಿಷದ ಅವಧಿಯೂ ನಿರುಪಯೋಗ ಗೊಳಿಸದಂಥ ಅವಧಿಯೆಂಬ ರೀತಿಯ ನೆರವು ಅಗತ್ಯವಿತ್ತು. 'ಕಹಳೆ' ಬದುಕಿ ಉಳಿಯಬೇಕಾಗಿದ್ದರೆ ಅದೊಂದೇ ದಾರಿಯಾಗಿತ್ತು. ದಿನವೂ ಸಾಲದ ನೋವನ್ನನುಭವಿಸುವ ಬಳಗದ ಗೆಳೆಯರಿಗೆ, ಆಸೆಯ ಬೆಳಕು, ಜನಪ್ರಿಯತೆ ಯೊಂದನ್ನುಳಿದರೆ ಯಾವ ಕಡೆಯಲ್ಲೂ ತೋರುತ್ತಿರಲಿಲ್ಲ.

'ಒಂದು ಕಾಮಧೇನುವಿನ ಸಹಾಯುವನ್ನು ಎಷ್ಟೆಂದು ಯಾಚಿಸುವುದು, ಅನಂತ? ಈಗಾಗಲೇ ಎರಡು ಸಾವಿರ ರೂಪಾಯಿಗಳ ತನಕ ಆ ವ್ಯಕ್ತಿಯಿಂದ ಪಡೆದಾಗಿದೆ. ಕೊಡುವ ಚೈತನ್ಯವಿದೆಯಾದರೂ, ಕೊಟ್ಟಷ್ಟು ಉಳಿಯುವ ಸಂಪನ್ನ ಮನೆತನವದೆಂದೂ ನನಗನಿಸುವುದಿಲ್ಲ. ಇನ್ನೂ ನಾವು ನಮ್ಮ ಕಾಲ ಮೇಲೆ ನಿಲ್ಲುವುದು ಸಾಧ್ಯವಾಗುವುದಿಲ್ಲವಾದರೆ ನಮ್ಮ ಬದುಕು ಶಾಶ್ವತವೆ?'

ಇದು ಸೋಮಯಾಜಿಗಳ ನೋವಿನ, ದುಃಖದ ವೇದಾಂತ. ಇದರ ಮುಂದೆ ರಾಜೀವನೂ ನಿರುತ್ತರನಾಗುತ್ತಿದ್ದ.

ಅನಂತನಿಗೆ 'ಆ ವ್ಯಕ್ತಿ ಯಾರು?' ಎಂದು ಕೇಳುವ ಕುತೂಹಲ ನಾಲಿಗೆಯ ತುದಿಯ ತನಕ ಬಂದಿತ್ತು. ಆದರೆ ಸೋಮಯಾಜಿಗಳು ಹಿಂದೊಮ್ಮೆ ಹೇಳಿದ ಮಾತಿನ ನೆನಪಾಗಿ, ಆತ ವಿಚಾರಿಸಲಿಲ್ಲ. ಇಂದಲ್ಲ ನಾಳೆ ಅವರಾಗಿಯೇ ಹೇಳುವಾಗ ತಿಳಿಯೋಣವೆಂದು ಭಾವಿಸಿ, ಪತ್ರಿಕೆಯ ಉತ್ಕರ್ಷಕ್ಕೆ ಬೇರಾವ ರೀತಿಯಲ್ಲಿ ಪ್ರಯತ್ನಿಸಲು ಸಾಧ್ಯವಿದೆಯೆಂದು ನೋಡಲು ಹೆಣಗುತ್ತಿದ್ದ.

ಇದರಿಂದ ಅನಂತನಿಗೆ ತನ್ನ ಟ್ರೇಡ್ ಯೂನಿಯನ್ ಚಟುವಟಿಕೆಗಳಿಗೂ ಸಮಯ ಸಿಗುವುದು ಕಡಿಮೆಯಾಗುತ್ತಿತ್ತು. ಅದನ್ನೂ ಆತ ಬಿಡುವಂತಿರಲಿಲ್ಲ. ತಾನು ಕಷ್ಟಪಟ್ಟು ಒಂದು ವರ್ಷದಿಂದ ಬೆಳೆಸಿದ ತಮ್ಮ ಆಫೀಸಿನ ಸಂಸ್ಥೆಯೇ, ತಾನಿಲ್ಲವಾದರೆ, ಎರಡೇ ದಿನಗಳೊಳಗೆ ಮುರಿದು ಬೀಳಬಹುದು ಎಂಬ ಅರಿವು ಅನಂತನಿಗಿತ್ತು. ಮಧ್ಯಮವರ್ಗದ ಕಾರಕೂನರ ಸಂಘಟನೆ, ಕಾರ್ಮಿಕರ ಸಂಘಟನೆಗಿಂತ ಕಷ್ಟವಾಗಿತ್ತು. ಒಡೆಯನ ಅಪಶ್ರುತಿ ಹೊರಟಂದು ಸಂಘಟನೆ ಮುಗಿದಂತೆಯೇ ಎಂದು ಹೇಳಲು ಎರಡು ಬಾರಿ ಯೋಚಿಸಬೇಕಾಗಿರಲಿಲ್ಲ. ಬಡ ಕಾರಕೂನವರ್ಗಕ್ಕೆ ಸಂಘಟನೆಯಲ್ಲಿ ಸಂಬಳಕ್ಕಿಂತ ಹೆಚ್ಚಿನ ವಿಶ್ವಾಸವಿರಲಿಲ್ಲ.

ಭಾರತಿಯ ಜೊತೆಯಲ್ಲಿ ನಾಗೇಶರಾಯರ ಮನೆಗೆ ಹೊರಟ ಅನಂತನ ತಲೆ ತುಂಬ ಈ ವಿಚಾರಗಳಿದ್ದಿಲ್ಲವಾದರೂ ಆತ ಭಾರತಿಗೆ ತೋರಿಸುತ್ತಿದ್ದುದು ತೋರಿಕೆಯ ಸಂತೋಷವನ್ನು ಎಂಬುದನ್ನು ಚಿಕ್ಕ ಮಗು ಕೂಡ ಹೇಳಬಹುದಿತ್ತು. ಅನಂತನನ್ನು ಉತ್ಸಾಹಕ್ಕೆ ಪ್ರೇರೇಪಿಸಬಹುದಾಗಿದ್ದ ಒಂದೇ ಒಂದು ಆಸೆಯೆಂದರೆ, 'ನಾಗೇಶರಾಯರನ್ನು ಜಾಹೀರಾತುಗಳಿಗಾಗಿ ನೆರವು

ನೀಡುವಂತೆ ಕೇಳಿಕೊಳ್ಳಬಹುದೆ? ಅಂಥ ನೆರವು ಪ್ರಯೋಜನಕಾರಿಯಾದೀತೇ?' ಎಂಬುದು.

ಗಂಡನ ಕುಂದಿದ ಉತ್ಸಾಹವನ್ನು ಕಂಡು ಭಾರತಿಯ ಮುಖ ಬಾಡಿತು. ಹೊರಟು ಸ್ಟೇಶನಿಗೆ ಬಂದಮೇಲೂ ಆಕೆ ಗಂಡನೊಡನೆ ಹೇಳಿದಳು :

"ನಿಮಗೆ ಮನಸ್ಸಿಲ್ಲವಾದರೆ ಮನೆಗೆ ಹೋಗೋಣ. ನಿಮಗೆ ದುಃಖ ಕೊಟ್ಟು ನನಗೆ ನಾಗೇಶರಾಯರ ಮನೆಯ ಸುಖ ಬೇಡ. ಹಾಗಲ್ಲದೆ ಜೊತೆಗೆ ಬರುವಿರಾದರೆ, 'ಇದು ಭಾರತಿಯ ದಿನ'ವೆಂದಾದರೂ ನೀವು ಎಲ್ಲ ಯೋಚನೆಗಳನ್ನು ಮರೆತು ನಗುನಗುತ್ತ ಬರಬೇಕು."

"ಇಲ್ಲ, ಭಾರೀ. ಖಂಡಿತ ಬೇರೇನೂ ಯೋಚನೆ ಮಾಡುವುದಿಲ್ಲ" ಎಂದು ಅನಂತ ಹೆಂಡತಿಗೆ ಸಮಾಧಾನ ಹೇಳಿದ.

ನಾಗೇಶರಾಯರ ಮನೆ ಸೇರುವಾಗ ಮಾತ್ರ ಈ ದಂಪತಿಗಳಿಗೊಂದು ಆಶ್ಚರ್ಯ ಕಾದಿತ್ತು. ವಿಶಾಲಾಕ್ಷಮ್ಮ ಹೇಳಿದಂತೆ ಅಲ್ಲಿ ಹಲವಾರು ಜನ ಆಪ್ತರೂ ಹಾಗೂ ನೆಂಟರ ಸಮ್ಮೇಳನವಿರಲಿಲ್ಲ. ಅಲ್ಲಿ ಮುಖ್ಯ ಅತಿಥಿಗಳು ಅನಂತ ಮತ್ತು ಭಾರತಿ ಮಾತ್ರ. ಇದು ಅನಂತನಿಗೆ ತಿಳಿಯಲು ತುಸು ತಡವಾದರೂ, ಅವನಿಗೆ ಒಳಗೊಳಗೇ ಈ ಆಮಂತ್ರಣದ ಹಿಂದೆ ಬೇರೆ ಯೇನಾದರೂ ಉದ್ದೇಶವಿದೆಯೋ ಎಂಬ ಯೋಚನೆ ಮನಸ್ಸಿನಲ್ಲಿ ಚಿಗುರಲು ಹೆಚ್ಚು ಹೊತ್ತು ಬೇಕಾಗಿರಲಿಲ್ಲ.

ಅನಂತ ದಂಪತಿಗಳನ್ನು ಸ್ವಾಗತಿಸಿದ್ದು ನಾಗೇಶರಾಯರೇ. "ಬನ್ನಿ, ಅನಂತರಾಯರೇ. ಕಾಂಗ್ರೆಸ್ಸು ಬಿಟ್ಟುಹೋದಮೇಲೆ ಕಾಂಗ್ರೆಸ್ಸಿಗರ ನೆನಪು ಹೇಗೆ ಉಳಿದೀತು, ಅಲ್ಲವೆ? ಆದರೆ ಪರಿಚಯದವರು, ಆಪ್ತರು ಎಂದಾದರೂ ಮುಖ ತೋರಿಸುವುದು ಬೇಡವೆ? ಏನಮ್ಮಾ ಭಾರತೀ, ನೀನಾದರೂ ನಿನ್ನ ಗಂಡನಿಗೆ ಬುದ್ಧಿ ಹೇಳಬಾರದೆ?" ಎಂದು ನಗುತ್ತಲೇ ಹೇಳಿದರು.

"ನೂರೆಂಟು ಕೆಲಸ, ನಾಗೇಶರಾಯರೆ. ಸಾರ್ವಜನಿಕ ಕ್ಷೇತ್ರದಲ್ಲಿ ದುಡಿದ, ದುಡಿಯುತ್ತಿರುವ ನಿಮಗೆ ನಾನು ಈ ಮಾತು ಹೇಳಬೇಕೆ?" ಅನಂತ ಬೇರೆ ಯಾರೊಡನೆಯೂ ಈ ರೀತಿ ಮಾತನಾಡುತ್ತಿದ್ದಿರಲಿಲ್ಲ. ಬೇರಾರಾದರೂ ನಾಗೇಶರಾಯರಂತೆ ಮಾತನಾಡಿದ್ದರೆ ಒಂದೇ ತನ್ನ ವೇಳೆಯನ್ನು ತಿನ್ನುವ ಕೆಲಸಗಳ ವರದಿ ಕೊಡುತ್ತಿದ್ದ. ಇಲ್ಲವೇ ರೊಚ್ಚಿಗೆದ್ದು ಕಟುವಾಗಿ ಉತ್ತರಿಸುತ್ತಿದ್ದ. ಇಂದು ಹಾಗೆ ಮಾತನಾಡದಂತೆ ತಡೆದುದು ಒಂದೇ ಆಸೆ—ಜಾಹೀರಾತಿನ ಆಸೆ.

"ಹೌದಪ್ಪ. ಕಾಂಗ್ರೆಸ್ಸಿನ ಕೆಲಸವೆಲ್ಲ ಆಯಿತು. ಸ್ವಾತಂತ್ರ್ಯ ಬಂತಲ್ಲ. ಇನ್ನೇನು ಕಾಂಗ್ರೆಸ್ಸಿಗರ ಹಂಗು? ಅದೇ ಸೋಶಿಯಲಿಸ್ಟರ ಪ್ರಾಬಲ್ಯ ಬೆಳೆಯುತ್ತಿದೆ."

ಭಾರತಿ ಗಂಡನ ಕಡೆ ನೋಡುತ್ತಿದ್ದಳು, ಒಳಗಿನಿಂದ ಮೀನಾಕ್ಷಮ್ಮ ಕರೆಯುತ್ತಿರುವರೆಂಬುದನ್ನು ಮರೆತು.

"ನಾನು ಸಮಾಜವಾದಿ ಪಕ್ಷಕ್ಕೆ ಸೇರಿದವನೆಂದು ನಿಮ್ಮೊಡನೆ ಯಾರಾದರೂ ಸುಳ್ಳು ವರದಿ ಮಾಡಿದ್ದಾರೆಯೆ?"

"ನಿಮ್ಮ 'ಕಹಳೆ' ನೋಡಿದರೆ ತಿಳಿಯುವುದಿಲ್ಲವೇನು? ಅಂಗೈ ನೋಡಲು ಕನ್ನಡಿ ಬೇಕೇ?"

"ನಿಮ್ಮ ತಿಳಿವಳಿಕೆಯ ಬಗೆಗೆ ನನಗೆ ತುಂಬ ಅಭಿಮಾನವೆನಿಸುತ್ತದೆ" ಎಂದು ಅನಂತ ಉತ್ತರಿಸಿದ. ನಾಗೇಶರಾಯರಿಗೆ ಅನಂತ ತಮ್ಮನ್ನು ಹೊಗಳುತ್ತಿರುವನೇ ಅಥವಾ ಆತನ ಮಾತಿನಲ್ಲಿ ಯಾವುದಾದರೂ ವ್ಯಂಗ್ಯ ಅಡಗಿದೆಯೇ ಎಂದು ಹೊಳೆಯಲಿಲ್ಲ. ಇದೇ ತೊಳಲಾಟದಲ್ಲಿರುವಾಗಲೇ ಮೂರು ವರ್ಷದ ಪುಟ್ಟ ಕೂಸೊಂದು "ಅಜ್ಜಾ, ಅಜ್ಜಾ" ಎನ್ನುತ್ತ ನಾಗೇಶ ರಾಯರೆಡೆಗೆ ಓಡಿ ಬಂತು.

ಎಲ್ಲರನ್ನೂ ಮರೆತು ಓಡಿಹೋಗಿ ಮಗುವನ್ನು ಎತ್ತಿಕೊಂಡುದು ಭಾರತಿ. ಮಗುವನ್ನೆತ್ತಿಕೊಂಡು ಅದರೊಡನೆ ಆಡಲಾರಂಭಿಸಿ ನಗುತ್ತಿದ್ದ ಭಾರತಿಯೆಡೆ ಅನಂತ ಎವೆಯಿಕ್ಕದೆ ನೋಡತೊಡಗಿದ.

"ಏನೇ ಕಳ್ಳೀ, ಸುಭಾ....ಯಾರೇ ಅದು, ನಿನ್ನನ್ನು ಎತ್ತಿಕೊಂಡದ್ದು?" ಎಂದು ನಾಗೇಶರಾಯರು ಮಗುವಿನೊಡನೆ ಕೇಳಿದರು.

ಭಾರತಿಯ ಕರಿಮಣಿಯೊಂದಿಗೆ ಆಡುತ್ತಿದ್ದ ಮಗು ತನ್ನನ್ನು ಎತ್ತಿ ಕೊಂಡಿದ್ದ ಅಪರಿಚಿತ ವ್ಯಕ್ತಿಯನ್ನೆ ನೋಡುತ್ತಿತ್ತು. ಅಜ್ಜನ ಮಾತಿಗೆ ಉತ್ತರ ಹೇಳಲಿಲ್ಲ.

"ನಿಮ್ಮ ಮಗ, ಸೊಸೆ ಬಂದಿದ್ದಾರಂತಲ್ಲ. ಎಲ್ಲಿ ಕಾಣಿಸುವುದಿಲ್ಲ?" ಎಂದು ಅನಂತ ನಾಗೇಶರಾಯರೊಡನೆ ಕೇಳಿದ.

" 'ಆನಂದಾಶ್ರಮ'ದಲ್ಲಿ ಯಾರನ್ನೋ ನೋಡಬೇಕಿತ್ತಂತೆ. ಹೋಗಿದ್ದಾರೆ ಮಗುವನ್ನು ಬಿಟ್ಟುಬಿಟ್ಟು. ಇನ್ನೇನು ಬರುವ ಹೊತ್ತಾಯಿತು" ಎಂದು ಹೇಳಿದರು.

"ನಿಮ್ಮ ಮಗ ದಿಲ್ಲಿಯಲ್ಲಿರುವರೆಂದು ನನಗೆ ತಿಳಿದಿರಲೇ ಇಲ್ಲ."

"ನೀವು ಈಕಡೆ ಬರುವ ಅಭ್ಯಾಸವಿಟ್ಟುಕೊಂಡಿದ್ದರಲ್ಲವೇ, ತಿಳಿಯು ವುದು ?"

"ಪುನಃ ಮೊದಲು ಮಾತನಾಡಿದ ವಿಷಯದ ಕಡೆಗೇ ನಾವು ಬರು ತ್ತಿದ್ದೇವೆ."

"ಅದು ಸರಿ. ಆ ವಿಚಾರ ಬಿಟ್ಟುಬಿಡೋಣ. ಇನ್ನಾದರೂ ಸ್ವಲ್ಪ ಆಗಾಗ ಬಂದು ಹೋಗುವ ಅಭ್ಯಾಸವಿಟ್ಟುಕೊಳ್ಳಿ. ಪತ್ರಿಕೆ ಹೇಗಿದೆ ?"

"ಕಷ್ಟದಿಂದ ಸಾಗಿದೆ. ಜಾಹೀರಾತು ಇಲ್ಲದೆ ಪತ್ರಿಕೆ ಸುಖವಾಗಿ ಬದುಕುವುದೆ ?"

"ಜಾಹೀರಾತು ಸಿಗುವುದಿಲ್ಲವೆ ?"

"ವರ್ಚಸ್ಸಿಲ್ಲದೆ ಅದು ಸಿಗುವಂತಿದೆಯೆ ? ನಾವು ಹೇಳಿ ಕೇಳಿ ಹುಡುಗರು."

"ವರ್ಚಸ್ಸಿನ ನಿಷ್ಠುರ ಕಟ್ಟಿಕೊಂಡಾಗ ಅದರ ನೆರೆಹೊಗುವುದು ಸಾಧ್ಯವೇ ? ಟೀಕೆಗೂ ಒಂದು ಯೋಗ್ಯವಾದ ನೆಲೆಯಿರಬೇಕಲ್ಲ."

ಅನಂತ ಈಗ ನಿರುತ್ತರನಾಗಬೇಕಿತ್ತು. ನಾಗೇಶರಾಯರೊಡನೆ ನಾದ ಕ್ಕಿಳಿಯಲು ಆತನಿಗೆ ಮನಸ್ಸಿದ್ದಿಲ್ಲ. ಆದರೆ ಜಾಹೀರಾತಿನ ಕುರಿತು ಅವರ ನೆರವು ಅಗತ್ಯವಿತ್ತು.

"ನಮ್ಮ ನಮ್ಮ ಆದರ್ಶಗಳನ್ನು ನಮಗೆ ಸರಿದೋರಿದಂತೆ ರೂಪಿಸಿ ಕೊಳ್ಳುವುದು ನಮ್ಮ ಕರ್ತವ್ಯವಲ್ಲವೆ ? ನಿಮ್ಮಂಥ ತಿಳಿದವರು ನಮ್ಮದು ಏನಾದರೂ ತಪ್ಪಿದ್ದರೆ ಮರೆತು ನಮ್ಮನ್ನು ಸುಧಾರಿಸಿಕೊಂಡು ಹೋಗುವುದು ಬೇಡವೆ ?"

ಅನಂತನ ಮಾತಿನ ಮೃದುತನಕ್ಕೆ ನಾಗೇಶರಾಯರು ಅಪಾರ್ಥ ಕಲ್ಪಿ ಸಿದರು. ಅನಂತ ದಾರಿಗೆ ಬರುತ್ತಿದಾನೆ ಎಂದು ತಿಳಿದು, ಪ್ರಯೋಜನ ಪಡೆಯಲು ಇಚ್ಛಿಸಿದರು.

"ಬೈಯುವುದೂ ಒಂದು ಆದರ್ಶವೆ ? ನಾಯಿ ಕೂಡಾ ಬೊಗಳುತ್ತದೆ. ಟೀಕೆಯಿರಲಿ; ಆದರೆ ಅದು ರಚನಾತ್ಮಕವಾದುದಿರಲಿ. ಸುಮ್ಮಸುಮ್ಮಗೆ 'ನೀವು ಮಾಡಿದ್ದೆಲ್ಲ ತಪ್ಪು' ಎಂದು ಸಾಧಿಸುವುದರಿಂದ ಜಗತ್ತು ಬದಲಾಗು ವುದೆ ?"

"ಜಗತ್ತು ಬದಲಾಗುತ್ತದೇ ಇಲ್ಲವೇ ಎಂದು ಹೇಳುವ ಕೆಲಸ ಇತಿಹಾಸದ್ದು" ಎಂದು ಅನಂತ ಉತ್ತರ ಕೊಟ್ಟ. ಆತನ ಸಂಯಮದ ನೇರೆ ಮೀರುತ್ತಿತ್ತು. ಜಾಹೀರಾತಿನ ಆಸೆಯನ್ನೇ ಬಿಟ್ಟುಬಿಟ್ಟ. ಹೇಗಾದರೂ ತಾಳ್ಮೆಯಿಂದ ಮಾತು ವಿರಸಕ್ಕಿಳಿಯದಂತೆ ಯತ್ನಿಸುತ್ತೇನೆ, ಎಂದು ನಿಶ್ಚಯ ಮಾಡುತ್ತಿದ್ದಾಗಲೇ, ನಾಗೇಶರಾಯರ ಮಗ, ಸೊಸೆ ಒಳಗೆ ಬಂದರು.

"ಇವನೇ ನೋಡಿ, ವಿಶ್ವನಾಥ. ಇದು ನನ್ನ ಸೊಸೆ, ಸುಶೀಲ—ನಿಮ್ಮ ಪತ್ರಿಕೆಯನ್ನು ಬಹಳ ಮೆಚ್ಚಿಕೊಂಡವಳು. ಇವರೇ ವಿಶ್ವ, ಅನಂತರಾಯರು, ನಾನು ಹೇಳುತ್ತಿದ್ದೆನಲ್ಲ, ಶ್ರೀಪತಿರಾಯರ ಅಳಿಯ."

ಅನಂತ "ನಮಸ್ತೇ" ಎಂದು ಇಬ್ಬರಿಗೂ ವಂದಿಸಿದ. ಸುಶೀಲೆ ನಗುತ್ತಲೇ ಪ್ರಶ್ನಿಸಿದಳು :

"ನಿಮ್ಮ ಶ್ರೀಮತಿ ?"

"ಒಳಗಿದ್ದಾಳೆ, ನೋಡು" ಎಂದು ನಾಗೇಶರಾಯರೇ ಹೇಳಿದರು.

ವಿಶ್ವನಾಥನನ್ನು ಅನಂತನ ಜೊತೆಗೆ ಮಾತನಾಡಲು ಬಿಟ್ಟು ನಾಗೇಶರಾಯರು ಒಳಗೆ ಹೋದರು. ವಿಶ್ವನಾಥ ವಯಸ್ಸಿನಲ್ಲಿ ಅನಂತನಿಗಿಂತ ಎರಡು ಮೂರು ವರ್ಷಗಳಿಗೆ ಹಿರಿಯನಾಗಿದ್ದಿರಬಹುದು. ಆತ ದಿಲ್ಲಿಗೆ ಹೋಗಿ ಮೂರು ನಾಲ್ಕು ವರ್ಷ ಕಳೆದಿತ್ತು. ಅಲ್ಲೊಂದು ಚಿತ್ರವಿತರಣ ಸಂಸ್ಥೆಯ ಸಂಚಾಲಕನಾಗಿದ್ದ. ಸಾಕಷ್ಟು ಉತ್ಪನ್ನ, ಸಂಭ್ರಮದ ಜೀವನ ; ಮನೆ, ಮಡದಿ ಮತ್ತು ಮಗಳು.

ಹೊಸ ಗೆಳೆಯರ ಮಾತು ಸುತ್ತು ಸುತ್ತಾಗಿ ಹಲವಾರು ವಿಚಾರಗಳ ಕುರಿತು ತಿರುಗುತ್ತಿತ್ತು. ವಿಶ್ವನಾಥನಿಗೆ ರಾಜಕಾರಣ ಒಗ್ಗುತ್ತಿರಲಿಲ್ಲ. ಅನಂತನಿಗೆ ಈತನೊಡನೆ ಆ ವಿಚಾರ ತರ್ಕಕ್ಕಿಳಿಯಲು ಮನಸ್ಸೂ ಇರಲಿಲ್ಲ.

ಮಧ್ಯಾಹ್ನದ ಊಟ ಮುಗಿಯುವ ತನಕ ಒಣ ಚರ್ಚೆ ಇದೇ ರೀತಿ ಮುಂದುವರಿದಿತ್ತು. ಒಂದೈದು ನಿಮಿಷಕಾಲ ಸುಶೀಲೆಯೂ ಬಂದು ನಿರ್ಭೀತಿಯಿಂದ ಮಾತುಕತೆಯಲ್ಲಿ ಭಾಗವಹಿಸಿದಳು. ಆದರೆ ಭಾರತಿ ಒಳಗೇ ಇದ್ದುದರಿಂದ ಆಕೆಗೆ ಹೆಚ್ಚು ಹೊತ್ತು ನಿಲ್ಲಲಾಗಲಿಲ್ಲ. ಆಕೆಯ ಮಾತಿನ ರೀತಿಯನ್ನು ಗಮನಿಸಿದಾಗಲೇ, ಅನಂತನಿಗೆ ಅವಳು ಏನನ್ನೋ ಹೇಳಬಯಸುತ್ತಾಳೆ ಎಂದು ತಿಳಿದಿತ್ತು. ಆದರೆ ಸ್ಪಷ್ಟವಾಗಿ ಏನೆಂದು ತಿಳಿಯಲಿಲ್ಲ. ಆ ಸಂಧಿ ಸಂಜೆಗೆ ಬಂತು.

ಊಟ ತೀರಿಸಿ, ಕಾಸು ವಿಶ್ರಾಂತಿ ಪಡೆದಮೇಲೆ, ಕಾಫಿಯ ಹೊತ್ತಿಗೆ ಪುನಃ ಎಲ್ಲರೂ ಬೆರೆಯುವ ಸಂದರ್ಭ ಬಂದಾಗ ನಾಗೇಶರಾಯರು ಹೇಳಿದರು :

"ಭಾರತಿಗೆ ಸುಭದ್ರೆಯನ್ನು ಬಿಟ್ಟಿರಲು ಮನಸ್ಸೇ ಇಲ್ಲ. ಇಷ್ಟುಬೇಗ ಮಗುವಿನ ಆಲೋಚನೆಯೆ?"

ಭಾರತಿಯ ಮುಖ ನಾಚಿಕೆಯಿಂದ ಕೆಂಪೇರಿತು. ಆಗ ಸುಶೀಲೆ ಮಾತನಾಡಿದಳು :

"ಗಂಡನ ಪ್ರೀತಿಯ ಮಗು ಪತ್ರಿಕೆಯಾದರೆ, ಹೆಂಡತಿಗೊಂದು ಬಿಡುಗಡೆಯ ದಾರಿ ಬೇಕಲ್ಲ. ಅದಕ್ಕಾಗಿ ಮಗು."

ಅನಂತ ಕೂಡ ನಗತೊಡಗಿದ.

ನಾಗೇಶರಾಯರು ಪುನಃ ಮಾತನಾಡಿದರು :

"ನಿನಗೇನು ಹುಚ್ಚು, ಹೇಳು, ಆ ಪತ್ರಿಕೆಯ ಕುರಿತು. ದಿಲ್ಲಿಯಲ್ಲಿ ಸಿಗುವ ಕನ್ನಡ ಪತ್ರಿಕೆ ಇದೇಯೇನೇ. ಅದಕ್ಕೇ ಅನಂತರಾಯರನ್ನೂ ಉಬ್ಬಿಸಿ ಉಬ್ಬಿಸಿ ಸ್ವರ್ಗಕ್ಕೇರಿಸಿದ್ದೀರಿ."

"ಎಷ್ಟಾದರೂ ಇಂದಿರೆ ಹೊಗಳುವಷ್ಟು ನಾನು ಹೊಗಳಲಾರೆ."

ಈಗ ಅನಂತನ ಕುತೂಹಲ ಚಿಗುರಲು ಆರಂಭ.

"ನೀನು ಮಾತನಾಡುವಾಗ ಅದು ಹರಿವೆಯ ಸೊಪ್ಪಿನ ಕುರಿತಾದರೂ ಇಂದಿರೆಯ ಹೆಸರು ಬಾರದೆ ಇಲ್ಲ." ವಿಶ್ವ ಹೀಗೆ ಹೇಳುತ್ತ ಎದ್ದು ಬಾಲ್ಕನಿಗೆ ಹೋದ. ಆದರೆ ಸುಶೀಲೆ ಅವನನ್ನನುಸರಿಸಲಿಲ್ಲ.

"ಯಾರದು, ಇಂದಿರೆ?" ಎಂದು ಭಾರತಿ ಸುಶೀಲೆಯೊಡನೆ ಕೇಳಿದಳು. ಆದರೆ ಪ್ರಶ್ನೆ ಅನಂತನ ಪ್ರಶ್ನೆಯಾಗಿತ್ತು. ಅವನ ಕುತೂಹಲ ಇಷ್ಟೇ ಎಂದು ಹೇಳುವಂತಿರಲಿಲ್ಲ.

"ಅರೆ! ನಿಮಗೆ ಯಾರಿಗೂ ಇಂದಿರೆಯ ಪರಿಚಯವಿಲ್ಲವೆ? ನೀವೂ ಮಾಡಿಸಿಕೊಡಲಿಲ್ಲವೆ, ಮಾವಯ್ಯಾ?"

ನಾಗೇಶರಾಯರಿಗೆ ಮಾತು ಮುಂದುವರಿದ ರೀತಿಯಲ್ಲಿ ಸಮಾಧಾನ ವಿದ್ದಿತ್ತೋ ಇಲ್ಲವೋ ತಿಳಿಯುವಂತಿರಲಿಲ್ಲ. ಆದರೆ ಸೊಸೆಯೊಂದಿಗೆ ಚಿನ್ನಾಟ ಅವರಿಗೆ ಯಾವಾಗಲೂ ಪ್ರಿಯವಾಗಿತ್ತು.

" 'ಟೈಮ್ಸ್' ಡೈರೆಕ್ಟರಿಯಲ್ಲಿ ಇಂದಿರೆಯ ಹೆಸರು ಇರಬೇಕಲ್ಲ!"

"ಹೋಗಿ, ಮಾವಯ್ಯ. ನಿಮಗೆ ಯಾವಾಗಲೂ ತಮಾಷೆಯೇ.

ಇಂದಿರೆಯ ಹೆಸರು ಡೈರೆಕ್ಟರಿಯಲ್ಲಿಲ್ಲದಿದ್ದರೂ ತಲಪಾಡಿಯವರ ಹೆಸರು ಇರದೆ ಇರುತ್ತದೆಯೇ ?"

"ಅವರು ರಾಜಕೀಯ ಸನ್ಯಾಸ ತೆಗೆದುಕೊಂಡು ವರ್ಷ ಎಷ್ಟಾಯಿತೆಂದು ಅವರನ್ನೆ ಕೇಳು. ಕೇಶವ ತೀರಿಹೋದ ಮೇಲೆ ಅವರು ಏನಾದರೂ ಕೆಲಸ ಮಾಡಿದ್ದಾರೆಯೆ ?"

ಅನಂತನಿಗೆ ಈ ಮಾತುಗಳೆಲ್ಲ ಒಗಟಾಗಿದ್ದವು. ಧೈರ್ಯ ತಂದುಕೊಂಡು, "ಯಾರವರು, ತಲಪಾಡಿ ಎಂದರೆ ?" ಎಂದು ಕೇಳಿದ.

"ಇಂದಿರೆಯ ತಂದೆ" ಎಂದು ಸುಶೀಲೆ ಉತ್ತರ ಕೊಟ್ಟಳು.

"ನನಗೆ ಈ ಇಂದಿರೆಯೇ ಯಾರೆಂದು ತಿಳಿದಿಲ್ಲವಲ್ಲ" ಎಂದು ನಗುತ್ತ ಅನಂತ ಹೇಳಿದ.

"ತಲಪಾಡಿಯವರ ಮಗಳು" ಎಂದು ನಾಗೇಶರಾಯರು ನಗುತ್ತ ಹೇಳಿದರು. ಹಾಗೆಯೇ ಮುಂದುವರಿಸಿ "ಅವರೂ ನಮ್ಮಂತೆಯೇ ಹೊಟ್ಟೆಯ ಪಾಡಿಗೆ ಮೊದಲು ಮುಂಬಯಿಗೆ ಬಂದು ಅನಂತರ ರಾಜಕಾರಣಕ್ಕೆ ಧುಮುಕಿದವರು. ಸ್ವಲ್ಪ ವ್ಯಾಪಾರ ವಹಿವಾಟು ಇದೆ. ತಲಪಾಡಿ ಸಂಜೀವರಾಯರೆಂದು ಅವರ ಹೆಸರು. ೪೨ರ ಹೋರಾಟದಲ್ಲಿ ಅವರ ಅಳಿಯ, ಒಬ್ಬಾಕೆ ಮಗಳ ಗಂಡ, ಕೇಶವ, ತೀರಿಕೊಂಡ."

ಅನಂತ ತಟಸ್ಥನಾದ. ೪೨ರ ಹೋರಾಟದ ನೆನಪು ಬಂದಾಗಲೇ ಸಾವಿರ ಭಾವನೆಗಳು ಅವನ ಹೃದಯವನ್ನು ಮುತ್ತಿಕ್ಕಿದವು. ಹುತಾತ್ಮನೊಬ್ಬನ ಸ್ಮೃತಿ ಮಾತಿನಲ್ಲಿ ಬಂದಾಗ ಅನಂತನಿಗೆ ಮಾತು ಮುಂದುವರಿಸುವುದು ಕಷ್ಟವಾಗುತ್ತಿತ್ತು.

"ಎರಡನೆಯ ವರ್ಷ ಲಾ ಓದುತ್ತಿದ್ದರಂತೆ. ಇಂದಿರೆಯನ್ನು ಮದುವೆಯಾಗಿ ಒಂದು ವರ್ಷ ಕೂಡ ಆಗಿದ್ದಿಲ್ಲ." ಹೀಗೆ ಹೇಳಿದುದು ಸುಶೀಲೆ.

"ಅವರ ರಕ್ತದಿಂದ ಪಡೆದ ಸ್ವಾತಂತ್ರ್ಯವನ್ನು ಇಂದು ನಾವು ಬಳಸಿಕೊಳ್ಳುವ ರೀತಿ!" ಅನಂತನ ಮಾತಿನಲ್ಲಿ ತನ್ನ ಸುತ್ತಮುತ್ತಣ ವ್ಯವಸ್ಥೆಯ ಅಸಮಾನತೆಯ ಕುರಿತಾದ ತಿರಸ್ಕಾರವೆಲ್ಲ ಪ್ರಕಟವಾಗಿತ್ತು.

"ಇಂದಿರೆಗೆ ನಿಮ್ಮ ಪತ್ರಿಕೆಯ ಮೇಲೆ ತುಂಬ ಅಭಿಮಾನ. ಅವಳು ಅದನ್ನು ದಿಲ್ಲಿಗೆ ಕಳಿಸಿ ನನಗೆ ರುಚಿ ತೋರಿಸದಿದ್ದರೆ, ನನಗೆ ನಿಮ್ಮ ಪರಿಚಯ ವಿರುತ್ತಿತ್ತೆ ? ಹಾಗಾಗಿ ಈ ಸಲ ಇಲ್ಲಿಗೆ ಬಂದ ಕೂಡಲೆ ಈ ಪತ್ರಿಕೆ ಯಾರದ್ದು

ಎಂದು ಕೇಳಿದೆ ಆದರೆ ನಿಮಗೆ ಮಾವನ ಪರಿಚಯ ಇಷ್ಟು ಚೆನ್ನಾಗಿ ಇದೆ ಎಂದು ನನಗೆ ತಿಳಿದಿರಲಿಲ್ಲ."

"ನಿಮಗೆ ತಲಪಾಡಿ ಮನೆತನದ ಪರಿಚಯ ಬಹಳ ಹಿಂದಿನಿಂದ ಇದೆಯೆ?"

ಇಷ್ಟು ಹೇಳುವಾಗ ವಿಶ್ವ ಒಳಗೆ ಬಂದಿದ್ದ. ಸುಶೀಲೆ, "ಇಲ್ಲವಪ್ಪ. ನನಗೆ ಪರಿಚಯ ಮಾಡಿಸಿಕೊಟ್ಟದ್ದು ನಮ್ಮವರೇ—ಮದುವೆಯ ದಿನ. ಆದರೆ ಆ ಪರಿಚಯದಿಂದ ನಾನು ಪಡೆದ ಲಾಭ ಸ್ವಲ್ಪವಲ್ಲ."

"ಹರಿವೆಯ ಸೊಪ್ಪಿನಿಂದ ಹಾಗಲಕಾಯಿಗೆ ಬಂದರೂ 'ಇಂದಿರೆ' ನಿಲ್ಲುವುದಿಲ್ಲ. ಕಾರಿನಲ್ಲಿ ಅನಂತರಾಯರನ್ನು ಕರೆದುಕೊಂಡು ಅವರಿದ್ದೆಡೆಗೆ ಒಮ್ಮೆ ಹೋಗಿ ಬರಬಾರದೆ?" ಎಂದು ವಿಶ್ವ ನಗುತ್ತಲೇ ಹೇಳಿದ.

"ಅವಳು ಇವೊತ್ತು ಬಂದರೂ ಬರಬಹುದೆಂದು ತೋರುತ್ತದೆ. ಮೊನ್ನೆ ಹಾಗೆ ಹೇಳಿದ್ದಳು."

ಸಂಜೆಯಾಗುತ್ತಿತ್ತು. ಅನಂತ ಒಂದು ಇಡೀ ದಿನವನ್ನು ನಾಗೇಶ ರಾಯರಲ್ಲಿ ವ್ಯರ್ಥವಾಗಿ ಕಳೆದಿದ್ದ. ಬೇಗ ಭಾರತಿಯನ್ನು ಮನೆಯಲ್ಲಿ ಬಿಟ್ಟಾದರೂ 'ಕಹಳೆ' ಕಾರ್ಯಾಲಯಕ್ಕೆ ಹೋಗಿ ಬರಬೇಕೆಂದಿದ್ದ ಆಸೆ ಫಲಿಸುವಂತೆ ತೋರುತ್ತಿರಲಿಲ್ಲ. ಈ 'ಇಂದಿರೆ' ಬರುವದಾದರೆ ಆಕೆಯನ್ನೊಮ್ಮೆ ನೋಡಿ ಹೋಗೋಣವೇ ಎಂದು ಮನಸ್ಸು ಕೇಳುತ್ತಿತ್ತು. ಈ ರೀತಿಯ ತೊಳಲಾಟದಿಂದ ನಾಗೇಶರಾಯರೇ ಬಿಡುಗಡೆ ಮಾಡಿದರು.

"ಕೊಲಾಬಕ್ಕೆ ಬರುತ್ತೇನೆಂದು ಹೇಳಿದ್ದಿಯಲ್ಲ, ಸುಶೀ—ಡಾ. ಸಂಪತ್ ಅವರಲ್ಲಿಗೆ. ಅಲ್ಲಿಗೆ ಹೋಗುವುದಿಲ್ಲವೆ?"

"ಹೋ! ಹೌದು. ಅಲ್ಲಿಗೆ ಹೋಗದೆ ನಿವೃತ್ತಿಯಿಲ್ಲ" ಎಂದಳು.

ಭಾರತಿ ಗಂಡನೊಡನೆ, "ನಾವೂ ಹೊರಡೋಣವೆ?" ಎಂದು ಕೇಳಿದಳು.

"ಹೋಗೋಣ" ಎಂದು ಅನಂತ ಉತ್ತರಿಸಿದ. ಆಗ ಭಾರತಿ,

"ನೀವು ಯಾವಾಗ ನಮ್ಮಲ್ಲಿಗೆ ಬರುತ್ತೀರಿ? ಮುಂದಿನ ಆದಿತ್ಯವಾರ ಬರುವಿರೇನು?" ಎಂದು ಕೇಳಿದಳು. ಅನಂತ ಹೆಂಡತಿಯ ಕಡೆ ನೋಡಲಾರಂಭಿಸಿದ—ಇನ್ನೊಂದು ಭಾನುವಾರ ಕೂಡ ಎಲ್ಲಿ ತಪ್ಪಿಹೋಗುವುದೊ ಎಂಬ ಶಂಕೆಯಿಂದ.

"ನೀವು ಯಾವಾಗ ಹೇಳುವಿರೋ ಆವಾಗ. ಇನ್ನೆರಡು ವಾರವಷ್ಟೆ ನಾವಿರುವುದು ಮುಂಬಯಿಯಲ್ಲಿ."

"ಹಾಗಿದ್ದರೆ ನೀವು ಖಂಡಿತ ಬರಬೇಕು. ಮೀನಾಕ್ಷಕ್ಕ, ನೀವು ಕೂಡ, ನಿಮ್ಮ ಯಜಮಾನರನ್ನು ಕರೆದುಕೊಂಡು ಬೆಳಿಗ್ಗೆಯೇ ಬರಬೇಕು." ಭಾರತಿಯ ಆಗ್ರಹ ಹೆಚ್ಚುತ್ತಿತ್ತು.

"ನಾನು ಬರುವುದಿಲ್ಲ, ಭಾರತೀ. ನನಗೆ ಕೆಲಸವಿದೆ. ಬಿ.ಪಿ.ಸಿ.ಸಿ. ಮೀಟಿಂಗ್ ಇದೆ. ನಾನು ಇನ್ನೊಂದು ದಿನ ಬರುತ್ತೇನೆ. ಉಳಿದವರೆಲ್ಲ ಬರುತ್ತಾರೆ, ನಿನಗೆ ಅಷ್ಟು ಆಸೆಯಿದೆಯಾದರೆ."

'ನಿನಗೆ ಅಷ್ಟು ಆಸೆಯಿದೆಯಾದರೆ' ಎಂಬ ಮಾತು ಅನಂತನನ್ನು ಚುಚ್ಚಿತು.

"ಮೀಟಿಂಗಿಗೆ ಆನಂತರ ಹೋದರಾಗುವುದಿಲ್ಲವೆ ? ಹೇಗಾದರೂ ಬಿಡುವು ಮಾಡಿಕೊಂಡು ಬನ್ನಿ" ಎಂದ.

ಈಗ ಭಾರತಿ ಗಂಡನೆಡೆ ನೋಡುತ್ತಿದ್ದಳು. ಅವನು ಒತ್ತಾಯಿಸಬಹುದೆಂದು ಆಕೆ ಯೋಚಿಸಿರಲಿಲ್ಲ.

"ನಾನು ಬಂದರೆ ಬಂದೆ, ಅನಂತರಾಯರೆ. ಉಳಿದವರೆಲ್ಲ ಬರಬಹುದು ಭಾರತಿಯ ಮನೆ ನೋಡಲು" ಎಂದು ನಾಗೇಶರಾಯರು ತಮ್ಮ ನಿರ್ಧಾರವನ್ನು ತಿಳಿಸಿದರು.

ಭಾರತಿ ಸುಭದ್ರೆಯನ್ನು ಮುತ್ತಿಟ್ಟು ಹೊರಡುವಾಗ, ಸುಶೀಲೆ ನಗುತ್ತ ನಿಂತು ನೋಡುತ್ತಿದ್ದಾಗ, ಅನಂತ ಸುಶೀಲೆಯೊಡನೆ ಒಂದು ಮಾತು ಹೇಳಿದ :

"ಸಾಧ್ಯವಾದರೆ ನಿಮ್ಮ ಇಂದಿರೆಯನ್ನೂ ಅವರ ತಂದೆಯನ್ನೂ ಆ ದಿನ ಕರೆದುಕೊಂಡು ಬರುವಿರೇನು ?"

"ಮುಂಬಯಿಗರ ಪರಿಚಯವನ್ನು ದಿಲ್ಲಿಯ ಹುಡುಗಿ ಮಾಡಿಕೊಡಬೇಕೇ? ಬಂದರೆ ಅವಶ್ಯ ಕರೆದು ತರುತ್ತೇನೆ" ಎಂದು ಹೇಳಿದಳು.

೧೭

ಗಂಡನ ಜೊತೆಗೆ ಮನೆಗೆ ಮರಳುವಾಗ ದಾರಿಯಲ್ಲಿ ಭಾರತಿ ಕೇಳಿದಳು :

"ಸುಭಾ ಎಷ್ಟು ಮುದ್ದಾಗಿದೆಯಲ್ಲ ?"

ಅನಂತ ಸುಶೀಲೆಯ ವಿಚಾರ ಯೋಚಿಸುತ್ತಿದ್ದ. ತಾನು ರೂಪಿಸಿ

ಬೆಳೆಸಿದ್ದ ತನ್ನ ಆದರ್ಶದ ಪ್ರತೀಕವಾದ ಪತ್ರಿಕೆಯ ಕುರಿತು ನಾಗೇಶರಾಯರ ಸೊಸೆಗಿರುವ ಅಭಿಮಾನ ಭಾರತಿಗೇಕಿಲ್ಲ? ಎಂದು ಮನಸ್ಸು ಪ್ರಶ್ನಿಸುತ್ತಿತ್ತು. ಈ ಸಂದರ್ಭದಲ್ಲಿ ಭಾರತಿಯ ಪ್ರಶ್ನೆ ಬಂತು.

"ಹೂಂ. ಮುದ್ದಾಗಿದೆ."

"ಒಳಗೆ ಎಷ್ಟು ಹೊತ್ತು ನನ್ನ ಬಳಿ ಆಡುತ್ತಿತ್ತು ಗೊತ್ತೇ? ಹೊಸ ಪರಿಚಯದ ಸಂಕೋಚ ಎಳ್ಳಷ್ಟೂ ಇರಲಿಲ್ಲ."

"ಹಾಗೇನು?"

"ಮಗುವಿದೆಯೆಂದು ಮೊದಲೇ ತಿಳಿದಿದ್ದರೆ ಒಂದು ಪ್ಯಾಕೆಟ್ ಬಿಸ್ಕಿಟ್ ತೆಗೆದುಕೊಂಡು ಹೋಗಬಹುದಿತ್ತು."

"ಹೌದು, ತೆಗೆದುಕೊಂಡು ಹೋಗಬಹುದಿತ್ತು."

"ಆದರೆ ಗೊತ್ತಿರಲಿಲ್ಲವಲ್ಲ?"

"ಗೊತ್ತಿರಲಿಲ್ಲವಲ್ಲ? ಏನು ಮಾಡೋಣ."

ದಾರಿ ದಾಟುವಾಗ ವೇಗದಿಂದ ಹೋಗುತ್ತಿದ್ದ ಒಂದು ವಾಹನಕ್ಕೆಡೆ ಮಾಡಿಕೊಡಲೆಂದು ಅನಂತ ಭಾರತಿಯ ಕೈ ಹಿಡಿದು ನಿಲ್ಲಿಸಿದ.

"ನೀವು ತಮಾಷೆ ಮಾಡುತ್ತಿದ್ದೀರಿ, ಅಲ್ಲವೆ?" ಗಂಡ ತನ್ನನು ಅಣಕಿಸುತ್ತಿದ್ದಾನೆಂದು ತಿಳಿದಾಗ ಭಾರತಿ ಕೇಳಿದಳು.

ಅನಂತ ನಗತೊಡಗಿದ.

"ತಮಾಷೆಯೆ? ಛೆ! ತಮಾಷೆಯೆಲ್ಲಿಂದ ಬಂತು?"

ಭಾರತಿ ಸುಮ್ಮನಾದಳು. ತುಸು ಹೊತ್ತು ತಡೆದು ಪುನಃ ಕೇಳಿದಳು:

"ಗೊಂಬೆಯೆಂದರೆ ಜೀವವಂತೆ ಸುಭದ್ರೆಗೆ. ಗೊಂಬೆಯಿಲ್ಲದೆ ಊಟವಿಲ್ಲ; ಗೊಂಬೆ ಜೊತೆಗಿರದೆ ನಿದ್ದೆ ಮಾಡುವ ಹಾಗಿಲ್ಲ. ಹೇಸಿಗೆ ಮಾಡುವಾಗಲೂ ಬಳಿಯಲ್ಲಿ ಗೊಂಬೆಗೆ ಒಂದು ಕಾಗದವಿಡಬೇಕಂತೆ."

"ನಿಜಕ್ಕೂ? ಇದನ್ನೆಲ್ಲ ಸುಭದ್ರೆಯೇ ಹೇಳಿದಳೆ?" ಅನಂತನಿಗೆ ನಗು ತಡೆಯಲು ಕಷ್ಟವಾಗುತ್ತಿತ್ತು. ಆದರೆ ಭಾರತಿ ನೊಂದುಕೊಳ್ಳಬಹುದೆಂದು ಮುಖ ತಿರುಗಿಸಿ ಹೇಳಿದ.

ಆದರೆ ಭಾರತಿಗೆ ಗಂಡನ ನಗುವಿನ ಕಡೆ ಲಕ್ಷ್ಯವಿರಲಿಲ್ಲ. ಆಕೆಯ ಕನಸಿನ ಪ್ರಪಂಚದಲ್ಲಿ ಕುಣಿಯುತ್ತಿದ್ದುದು ಸುಭದ್ರೆ.

"ಮೀನಾಕ್ಷಮ್ಮ ಹೇಳಿದರು. ಆ ಮಗುವಿನೊಡನೆ ಒಂದು ತಾಸು ಜೊತೆಗಿದ್ದರೆ ತಿಳಿಯುವುದಿಲ್ಲವೆ ?"

"ತಿಳಿಯದೆ ಉಂಟೆ ? ನೀನು ಇಡೀ ದಿನ ಜೊತೆಗಿದ್ದಿ ಬೇರೆ."

"ಮಗು ಊಟ ಮಾಡುವ ಹೊತ್ತಿನಲ್ಲಿ ಅದರ ಕಣ್ಣಾಲಿ ನೋಡ ಬೇಕಿತ್ತು ನೀವು."

ಅನಂತನಿಗೆ ನಗು ತಡೆದುಕೊಳ್ಳುವುದು ಸಾಧ್ಯವಾಗಲಿಲ್ಲ. ನಗುತ್ತಲೇ ಹೇಳಿದ :

"ಊಟ ಮಾಡುವಾಗ ಕಣ್ಣಾಲಿ ಕುಣಿಯುತ್ತಿತ್ತೇ ?

"ನಿಮಗೆ ತಮಾಷೆಯೆಂದು ತೋರಬಹುದು. ಎಲ್ಲ ಮಕ್ಕಳ ಹಾಗಲ್ಲ. ಸುಭದ್ರೆ ನಗುವಾಗಲೂ ಹೂ ನಕ್ಕ ಹಾಗಾಗುತ್ತದೆ."

ಅನಂತ ಭಾರತಿಯ ಕೈ ಹಿಡಿದು ಹೇಳಿದ :

"ನೀನು ನಕ್ಕಾಗ ಹಾಗೆಯೇ ಆಗುವುದಿಲ್ಲವೇನು, ಭಾರೀ..... ......" ಗಂಡನ ಮಾತು ತುಂಬ ಪ್ರಿಯವಾಗಿದ್ದರೂ, ಕರಸ್ಪರ್ಶ ತುಂಬ ಹಿತಕರ ವೆನಿಸಿದರೂ, ಭಾರತಿ ಸುಭದ್ರೆಯ ಪ್ರಪಂಚದಿಂದ ಹೊರಬಂದಿರಲಿಲ್ಲ. ಎಂತಲೇ ಪುನಃ ಹೇಳಿದಳು :

"ಬರುವ ವರ್ಷ ನೃತ್ಯಾಭ್ಯಾಸ ಆರಂಭಿಸುತ್ತಾರಂತೆ ಸುಭದ್ರೆಗೆ - ಭರತನಾಟ್ಯ."

ಅನಂತ ವಿಷಯವನ್ನೇ ಬದಲಿಸಲೆಂದು ಹೆಂಡತಿಯೊಡನೆ ಕೇಳಿದ :

"ನಿನಗೂ ಮಗುವಿನ ಆಸೆಯಾಗಿದೆಯೇನು ?"

ಭಾರತಿಯ ಮುಖ ತೀರ ಕೆಂಪೇರಿತು. ಗಂಡ ಸ್ವಾಭಾವಿಕವಾಗಿ ಆಡಿದ ಒಂದು ಮಾತು ಎದೆಯಾಳದಲ್ಲಿ ಭಾವಸಾಗರದ ತೆರೆಯುಕ್ಕಿಸುತ್ತಿತ್ತು. ಕೈಯ ಮುಷ್ಟಿ ಬಿಗಿಹಿಡಿದು ಎರಡು ಸಲ ಸಡಲಿಸಿದಳು ಭಾರತಿ. ಪಾರ್ವತಿ ಕಾಲು ಚೀಲಗಳನ್ನು ಹೊಲಿಯಲೆಂದು ತಂದ ಉಣ್ಣೆ ಇನ್ನೂ ತನ್ನ ಕೈಲಿದೆ ಎಂದು ಭಾಸವಾಗುತ್ತಿತ್ತು.

ಅನಂತನಿಗೆ ಇದಾವುದರ ಕಡೆಯೂ ಗಮನವಿರಲಿಲ್ಲ. ಭಾರತಿಯ ಮನಸ್ಸಿನ ಏರಿಳಿತಗಳ ಕಡೆ ಗಮನ ಹೊರಳಿಸುವಷ್ಟು ಕುತೂಹಲ ಆಗ ಆತನಲ್ಲಿ ಇರಲಿಲ್ಲ. ಆತ ಯೋಚಿಸುತ್ತಿದ್ದುದು ಬೇರೆಯೆ. 'ಆ ಇಂದಿರೆ ಯಾರಾಗಿರಬಹುದು ? ಆಕೆಗೇಕೆ 'ಕಹಳೆ'ಯಲ್ಲಿ ಅಷ್ಟು ಅಭಿಮಾನ ?'

"ಪಾರುವಿನ ಮಗು ಉಳಿದಿದ್ದರೆ ಈಗ ಐದು ತಿಂಗಳು ತುಂಬುತ್ತಿತ್ತು."

ಭಾರತಿಯ ಮಾತು ಬಲವಂತದಿಂದ ಅನಂತನನ್ನು ಸುಶೀಲೆ, ಇಂದಿರೆ ಇವರ ಕುರಿತಾದ ಯೋಚನೆಯ ಜಗತ್ತಿನಿಂದ ಎಳೆದು ತಂದಿತು. ಆತ ಭಾರತಿಯೆಡೆ ದೃಷ್ಟಿ ಹೊರಳಿಸಿದಾಗ ಆಕೆಯ ಕಣ್ಣಂಚಿನಲ್ಲಿ ಹನಿಯಿದ್ದು ದನ್ನು ಗುರುತಿಸಿದ.

"ಛೆ! ಭಾರೀ. ದಾರಿಯ ನಡುವೆ ಏನೆಲ್ಲ ಯೋಚನೆ ತಂದುಕೊಂಡು ಅಳಲು ಆರಂಭವೇ?"

ಭಾರತಿಯ ಸಮಾಧಾನಕ್ಕಾಗಿ ಅನಂತ ಈ ಮಾತು ಆಡಿದ್ದನಾದರೂ ಪಾರ್ವತಿಯ ನೆನಪು ಬಂದಾಗ ಮನಸ್ಸು ತುಂಬ ಕಸವಿಸಿಯಾಯಿತು. ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ತಂಗಿ. ಚೊಚ್ಚಲ ಮಗುವನ್ನು ಕಳೆದುಕೊಂಡು ಕಾಯಿಲೆಯಿಂದಲೂ ದುಃಖದಿಂದಲೂ ನರಳುತ್ತಿದ್ದ ತಂಗಿ. ಅಪರೂಪವಾಗಿಯಾದರೂ ಆಗೊಮ್ಮೆ ಈಗೊಮ್ಮೆ ತಂಗಿಗೆ ಕಾಗದ ಬರೆಯುವ ಪರಿಪಾಟ ಹಿಂದೆ ಇತ್ತು. ಈಗ ಅದಕ್ಕೂ ವ್ಯವಧಾನವಿರಲಿಲ್ಲ.

ಇನ್ನು ಮನೆಯ ಅವಸ್ಥೆ ಏನೋ!

ತಿಂಗಳು ತಿಂಗಳು ರೂಪಾಯಿ ಕಳಿಸುವ ಸಂದರ್ಭನಲ್ಲಿ ಉಡುಪರ ಪತ್ರ ತಪ್ಪದೆ ಬರುತ್ತಿತ್ತು. ಎಂದಿನದೇ ನೋವಿನ ಕತೆ. ತನ್ನ ಉತ್ಪನ್ನದಿಂದ ಶಕ್ತಿಮೀರಿ ಉಳಿಸಿ ಮನೆಗೆ ಅನಂತ ಕಳಿಸುತ್ತಿದ್ದ. 'ರಾವಣನ ಹೊಟ್ಟೆಗೆ ಇದು ಕಾಸಿನ ಮಜ್ಜಿಗೆ' ಎಂದು ಉಡುಪರು ಬರೆಯುತ್ತಿದ್ದರು. ಇಂಥ ಮಾತು ಕೇಳಿಕೇಳಿ ಬೇಸರ ಬಂದುದರಿಂದ ಅನಂತ ತುಸು ಉದಾಸೀನನಾಗಿಯೇ ಇದ್ದ.

ಆದರೂ ಮನೆಯ ಅವಸ್ಥೆ ಯಾವ ರೀತಿಯಿದೆಯೋ ಎಂಬ ಚಿಂತೆ ಆತನನ್ನು ಕಾಡುತ್ತಲೇ ಇತ್ತು.

ತಿಂಗಳ ಅಂತ್ಯ. ಮುಂದಿನ ಭಾನುವಾರ ಇನ್ನು ಮನೆತುಂಬ ಅತಿಥಿಗಳು ಬರಲಿದ್ದಾರೆ. ಕೈಯಲ್ಲಿ ಕಾಸಿಲ್ಲ. ಸಾಲ ಎಲ್ಲಿ ಸಿಗಬಹುದು ಎಂದು ಅನಂತ ಯೋಚಿಸುತ್ತಿದ್ದಂತೆ ಭಾರತಿ ಕೇಳಿದಳು:

"ನಾಡಿದ್ದು ಬರುವಾಗ ಸುಭದ್ರೆಗೆ ಒಂದು ಗೊಂಬೆ ಉಡುಗೊರೆ ಕೊಡೋಣವೆ?"

ಅನಂತ ಕೂಡಲೆ ಉತ್ತರ ಕೊಡಲಿಲ್ಲ. ಆದರೆ ಪಾರ್ವತಿಯ ಮಗು

ವಿನ ನೆನಪಿನ ನೋವು ಬಂದಾಗ ಭಾರತಿಯನ್ನು ನೋಯಿಸುವುದು ಸರಿಯಾದುದಲ್ಲ ಎಂದು ತೋರಿದುದರಿಂದ,

"ಕೊಡೋಣ! ಅದಕ್ಕೇನು?" ಎಂದ.

ಭಾರತಿ ತುಸು ತಡೆದು ಕೇಳಿದಳು :

"ಮೀನಾಕ್ಷಮ್ಮನ ಸೊಸೆ ಎಷ್ಟು ಧೈರ್ಯವಾಗಿ ಮಾತನಾಡುತ್ತಾರಲ್ಲ. ನಿಮ್ಮ ಪತ್ರಿಕೆಯ ಮೇಲೆ ಎಷ್ಟು ಅಭಿಮಾನ ಅವರಿಗೆ? ನಿಮ್ಮ ಹೆಂಡತಿಗೂ ಅಷ್ಟು ಅಭಿಮಾನವಿಲ್ಲ, ಅಲ್ಲವೆ?" ಎಂದು ನಗುತ್ತಲೇ ಕೇಳಿದಳು.

ಈ ಪ್ರಶ್ನೆ ಏಕೆ ಬಂತೆಂದು ಅನಂತನಿಗೆ ತಿಳಿಯಲಿಲ್ಲ. ಯಾವುದೊಂದು ಸಮರ್ಪಕ ಉತ್ತರ ಹೊಳೆಯದೆ,

"ನಿನಗೂ ಅದೇ ರೀತಿಯ ಅಭಿಮಾನವಿದ್ದಿದ್ದರೆ ನಾನೆಷ್ಟು ಸುಖಿಯಾಗಿರುತ್ತಿದ್ದೆ ಗೊತ್ತೆ, ಭಾರೀ........?" ಎಂದು ಕೇಳಿದ. ಮಾತು ಆಡಿದಮೇಲೆ ಹೀಗೆ ಹೇಳಬಾರದಿತ್ತು ಎನಿಸಿತು. ಭಾರತಿಯ ಮುಖ ಕಪ್ಪಾಯಿತು. ಆದರೂ ಪ್ರಯತ್ನಪೂರ್ವಕ ನಗು ತಂದುಕೊಂಡು ಆಕೆ ಉತ್ತರಿಸಿದಳು :

"ಅಭಿಮಾನವಿರದೆ ಇದೆಯೆ? ಆದರೆ ಈ ತಲೆಗೆ ರಾಜಕಾರಣ ಹಿಡಿಸುವುದಿಲ್ಲವಲ್ಲ. ಅದಕ್ಕೇನು ಮಾಡುವುದು ಹೇಳಿ?"

ಅನಂತನಿಗೆ ಈ ಮಾತಿಗೆ ಉತ್ತರ ಹೇಳುವುದು ಸಾಧ್ಯವಾಗಲಿಲ್ಲ. ಭಾರತಿ ಮತ್ತೆ ಕೇಳಿದಳು :

"ನಿಮಗೆ ಇವೊತ್ತು ಪ್ರೆಸ್ಸಿಗೆ ಹೋಗುವುದು ಬೇಡವೆ?"

"ಹೋಗಬೇಕಿತ್ತು. ಆದರೆ ನಿನ್ನನ್ನು ಮನೆಯಲ್ಲಿ ಬಿಟ್ಟು ಪುನಃ ಬರುವಾಗ ಹೊತ್ತು ಕಂತಬಹುದು. ನಾಳೆ ಹೋದರೆ ಸರಿ."

"ನಾನು ಜೊತೆಗಿದ್ದರೆ ನಿಮಗೆ ಅಪಮಾನವಾಗುವುದೇನು?"

ಚಾಟಿಯೇಟಿನಂತೆ ಭಾರತಿಯ ಮಾತು ಬಂತು. ಅನಂತ ನಗುತ್ತಿದ್ದ ಹೆಂಡತಿಯ ಕಡೆ ನೋಡಿ,

"ನನಗೆ ಅಪಮಾನವೆ, ಭಾರೀ? ನೀನು ಜೊತೆಗಿದ್ದರೆ? ನಿನಗೆ ಮನಸ್ಸಿಲ್ಲವಾದರೆ ನನ್ನ ಬಲವಂತ ಏಕೆ ಎಂದು ತಿಳಿದಿದ್ದುದರಿಂದ ನಾನಾಗಿ ಕೇಳಲಿಲ್ಲ. ಬರುತ್ತೀಯಾ?"

"ಹೋಗೋಣ" ಎಂದು ಭಾರತಿ ಮರುನುಡಿದಳು.

ನಗುತ್ತ ಬಂದ ದಂಪತಿಗಳನ್ನು ಕಂಡಾಗ ಪ್ರೆಸ್ಸಿನಲ್ಲಿದ್ದವರಿಗೆ ತುಂಬ

ಆಶ್ಚರ್ಯವಾಯಿತು. ರಾಜೀವ, ಸೋಮಯಾಜಿಗಳನ್ನು ಬಿಟ್ಟರೆ ಅಲ್ಲಿದ್ದುದು ಕೆಲಸಗಾರರು ಮಾತ್ರ. ದೀಪದ ಬೆಳಕಿನಲ್ಲಿ ಅಲ್ಲಿ ಕೆಲಸ ನಡೆಯುತ್ತಿತ್ತು.

ಬೆವರಿಳಿಸುತ್ತ ಮೊಳೆ ಜೋಡಿಸುತ್ತಿದ್ದ ಹುಡುಗರು, 'ಘಡಲ್........ ಘಡಲ್' ಎಂದು ಸದ್ದುಮಾಡುತ್ತಿದ್ದ ಮುದ್ರಣ ಯಂತ್ರ. ಮುರುಕು ಕುರ್ಚಿಯೊಂದರಲ್ಲಿ ಕುಳಿತು ಪ್ರೂಫ್ ತಿದ್ದುತ್ತಿದ್ದ ರಾಜೀವ. ದೊಡ್ಡವೆರಡು ಲೆಕ್ಕದ ಪುಸ್ತಕಗಳನ್ನು ಮುಂದಿರಿಸಿಕೊಂಡು ಎಣಿಸುತ್ತಿದ್ದ ಸೋಮಯಾಜಿಗಳು.

ಅನಂತನ ಪ್ರೀತಿಯ ಕಾರ್ಯಕ್ಷೇತ್ರವನ್ನು ಪ್ರವೇಶಿಸಿದಾಗ, ತನ್ನ ಮನಸ್ಸಿನ ಪ್ರತಿಕ್ರಿಯೇನೆಂದು ಭಾರತಿಯು ತನ್ನನ್ನೆ ತಾನು ಕೇಳಿಕೊಂಡಳು. ಅಲ್ಲಿ ಯಾವ ಪ್ರತಿಕ್ರಿಯೆಯೂ ಇರಲಿಲ್ಲ. ಉತ್ಸಾಹವೂ ಇರಲಿಲ್ಲ. ಬೇಸರವೂ ಇರಲಿಲ್ಲ. ಕೋಣೆಯೊಳಗಿನ ಕಾವು ಮಾತ್ರ ಬೆವರಿಳಿಸುವಂತಿತ್ತು.

ಭಾರತಿ ಬಂದೊಡನೆ ರಾಜೀವ ಎದ್ದು ನಿಂತು ತಾನು ಕುಳಿತಿದ್ದ ಕುರ್ಚಿಯನ್ನು ಆಕೆಗೆ ಬಿಟ್ಟುಕೊಟ್ಟಿದ್ದ. ಭಾರತಿಯನ್ನು ಕುಳ್ಳಿರಿಸಿ, ಅಚ್ಚಾದ ಹಾಳೆಯನ್ನು ನೋಡಲೆಂದು ಮುದ್ರಣಯಂತ್ರದ ಬಳಿ ಹೋದ ಅನಂತ ಸೋಮಯಾಜಿಗಳನ್ನುದ್ದೇಶಿಸಿ ಹೇಳಿದ :

"ನಾಗೇಶರಾಯರಲ್ಲಿಗೆ ಹೋಗಿದ್ದೆ, ಸೋಮಯಾಜಿಗಳೆ."

"ಹೇಳಿದ್ದಿಯಲ್ಲ. ಏನಾದರೂ ಗಿಟ್ಟಿತೇ ?"

"ಗಿಟ್ಟುವ ಮಾತಂತಿರಲಿ. ಆ ವಿಚಾರ ಮಾತು ತೆಗೆಯಲು ಅವಕಾಶ ಕೊಡಲಿಲ್ಲ ಪುಣ್ಯಾತ್ಮ. 'ರಚನಾತ್ಮಕ' ಟೀಕೆ ಬರುವ ತನಕ ನಮಗೆ ನಳದ ನೀರೇ ಗತಿಯೆಂದು ತೋರುತ್ತದೆ."

"ತಿಳಿದೂ ತಿಳಿದೂ ಆ ಎಂಜಲಿಗೆ ಆಸೆಪಡುತ್ತೀರಲ್ಲ. ಅಂಥವರ ಸಹವಾಸದಿಂದ ದೂರವಿರುವುದು ಲೇಸೆಂದು ನಿಮಗೆ ಇನ್ನೂ ಅನುಭವಕ್ಕೆ ಬಂದಂತಿಲ್ಲ. ಒಂದು ದಿನ ಹಾಳುಮಾಡಿ ಏನು ಪುರುಷಾರ್ಥ ಸಾಧಿಸಿದಿರಿ ? ಮುಂದಿನ ವಾರದ ಪತ್ರಿಕೆಯ ಯೋಚನೆ ಬೇಡವೆ? ನಾಳೆ ಬೆಳಿಗ್ಗೆ 'ಮ್ಯಾಟರ್' ಸಿಗುವುದೇ ?"

ಭಾರತಿಯ ಇರವನ್ನು ಮರೆತು ರಾಜೀವ ಈ ರೀತಿ ಮಾತನಾಡಿದ್ದ. ಆದರೆ ಭಾರತಿ ಮಾತ್ರ ಆ ಮಾತುಗಳನ್ನೇ ಮತ್ತೆ ಮತ್ತೆ ಮೆಲುಕು ಹಾಕುತ್ತಿದ್ದಳು. ಅನಂತ ಒಂದು ಕ್ಷಣ ಹೆಂಡತಿಯ ಕಡೆ ನೋಡಿ, ತನ್ನ ಕೆಲಸ ಮುಂದುವರಿಸಿದ. ಸೋಮಯಾಜಿಗಳು ರಾಜೀವನನ್ನೆಚ್ಚರಿಸಿದರು.

"ಅರ್ಥವಿಲ್ಲದ ಮಾತು ಆಡಬಾರದು, ರಾಜೂ." ರಾಜೀವನಿಗೆ ಆಗ ಪ್ರಜ್ಞೆ ಬಂತು. ಒಮ್ಮೆ ಭಾರತಿಯ ಕಡೆ ನೋಡಿದ. ಆಮೇಲೆ "ಸಾರಿ, ಅನಂತ. ನಿಮ್ಮ ಒಂದು ದಿನದ ಸಂತೋಷಕ್ಕೂ ನನ್ನ ಅಸೂಯೆಯ ದೃಷ್ಟಿಯೆ. ನಮ್ಮಂಥ ಪರದೇಶಿಗಳ ಜೊತೆಯಲ್ಲಿ ಕಲೆತು ನೀವೂ ಪರದೇಶಿ ಆಗುವುದು ಬೇಡ."

ಆದರೂ ಭಾರತಿಗೆ ರಾಜೀವನ ಮಾತಿನಿಂದ ಸಮಾಧಾನ ಸಿಗಲಿಲ್ಲ. ತನ್ನದು ಇಲ್ಲಿ ಅನಧಿಕೃತ ಪ್ರವೇಶ ಎಂಬ ಭಾವನೆ ಆಕೆಯ ಹೃದಯವನ್ನು ಹಿಂಡುತ್ತಿತ್ತು. ಸುಭದ್ರೆಯ, ಸುಶೀಲೆಯ, ಮೀನಾಕ್ಷಮ್ಮನ ಸಹವಾಸದ ಒಂದು ದಿನದ ಸಂಭ್ರಮ, ಇವರಿಗೆ ಇಷ್ಟು ತುಚ್ಛವಾಗಿ ತೋರಲು ಏನಾದರೂ ಕಾರಣವಿದೆಯೇ ಎಂದು ಮನಸ್ಸು ಶಂಕಿಸುತ್ತಿತ್ತು.

ಈಗ ಅನಂತ ಮಾತನಾಡಿದ :

"ನಾಗೇಶರಾಯರ ಸೊಸೆಗೆ ನಮ್ಮ ಪತ್ರಿಕೆಯ ಮೇಲೆ ತುಂಬ ಅಭಿಮಾನ ವಿರುವಂತಿದೆ ಅವರು ಚಂದಾದಾರರೆ? ದಿಲ್ಲಿಗೆ ಪ್ರತಿ ಹೋಗುತ್ತಿದೆಯೇ ?"

"ಚಂದಾದಾರರಲ್ಲದಿದ್ದರೂ ಪ್ರತಿ ಹೋಗುವುದಂತೂ ಖಂಡಿತ. ಬಹುಶಃ ತಲಪಾಡಿಯವರ ಮನೆಯಿಂದ ಕಳಿಸುತ್ತಿರಬೇಕು."

"ಅರೆ! ತಲಪಾಡಿಯವರ ವಿಚಾರ ನಿಮಗೆ ತಿಳಿದಿದೆಯೆ? ಅವರಿಗೂ ತುಂಬ ಅಭಿಮಾನವಂತೆ ನಮ್ಮ ಪತ್ರಿಕೆಯ ಕುರಿತು. ಮಾತು ಬಂದಿತ್ತು."

"ಅಭಿಮಾನವಿರದೆ ಏನು? ಎರಡು ಪುಕ್ಕಟೆ ಪ್ರತಿ ದೊರಕುತ್ತಿಲ್ಲವೆ, ಪ್ರತಿ ವಾರ. ಇವೊತ್ತು ಬೆಳಿಗ್ಗೆ ನಾನೇ ಬಟವಾಡೆ ಮಾಡಿ ಬರಲಿಲ್ಲವೇನು ?" ಹೀಗೆ ಹೇಳಿದುದು ರಾಜೀವ.

ರಾಜೀವನ ಮಾತು ಕೇಳಿ ಸೋಮಯಾಜಿಗಳಿಗೆ ಸಿಟ್ಟು ಬಂತು.

"ನಿನಗೇನೂ ತಿಳಿದಿಲ್ಲವಾದರೆ, ಬೇಡವಾದ ಟೀಕೆ ಮಾಡಬಾರದು, ರಾಜೂ. ಹೇಳಿದಷ್ಟು ಮಾಡುವುದು ನಿನ್ನ ಕೆಲಸ."

ಏಕೋ ಮಾತು ವಿರಸಕ್ಕಿಳಿಯುವುದೆಂದು ತಿಳಿದ ಅನಂತ ಆ ವಿಷಯ ವನ್ನು ಮುಂದುವರಿಸಲಿಲ್ಲ.

ಮನೆಗೆ ಮರುಳುವಾಗ ಭಾರತಿ ಮೌನವಾಗಿಯೇ ಇದ್ದಳು. 'ಇದು ಎಂಥ ಆದರ್ಶ, ಎಂಥ ಪ್ರಯೋಗ, ಇದರಿಂದ ಯಾರಿಗೆ ಪ್ರಯೋಜನ' ಎಂದು ಆಕೆಯ ಮನಸ್ಸು ಗಂಡನ ಪತ್ರಿಕೆಯ ಆದರ್ಶದ ಕುರಿತು ಶಂಕಿಸುತ್ತಿತ್ತು.

ಆದರೆ ಮನಬಿಚ್ಚಿ ಆತನೊಡನೆ ಈ ವಿಚಾರ ಮಾತನಾಡುವ ಧೈರ್ಯ ಮಾತ್ರ ಇರಲಿಲ್ಲ.

"ಪ್ರೆಸ್ಸು ಹೇಗಿದೆ, ಭಾರೀ. ಸಂತೋಷವಾಯಿತೇನು ನೋಡಿ" ಎಂದು ಅನಂತ ಕೇಳಿದ.

ಭಾರತಿ "ಹೂ" ಎಂದಳಷ್ಟೆ. ಅವಳ ದನಿಯಿಂದಲೇ ಅನಂತನಿಗೆ ಇದು ತನ್ನ ಸಮಾಧಾನಕ್ಕಾಗಿ ಕೊಟ್ಟ ಹೂಂಕಾರವೆಂದು ತಿಳಿಯಿತು. ಆ ಕಾರಣ ಆತ ಹೆಚ್ಚು ವಿಚಾರಿಸುವ ಗೋಜಿಗೆ ಹೋಗಲಿಲ್ಲ ಭಾರತಿಗೆ ಬೇಕಾಗಿದ್ದುದೂ ಅಷ್ಟೆ. ಏಕೋ ಸುಭದ್ರೆಯಂಥ ನಗುಮೊಗದ ಮಗುವಿನೊಂದಿಗೆ ತಾನು ಕಳೆದ ಒಂದು ದಿನಕ್ಕೆ ಎಂಥ ವ್ಯರ್ಥ ಕಾಲಕ್ಷೇಪದ ದಿನವೆಂದು ಆರೋಪ ಹೊರಿಸಿದರು, ಎಂಬ ಕಳವಳವೇ ಮನೆ ಸೇರುವವರೆಗೂ ಆಕೆಯನ್ನು ಕೊರೆಯುತ್ತಲಿತ್ತು.

ಮತ್ತೆ ಒಂದು ವಾರದ ತನಕ ಭಾರತಿಗೆ ಮನೆಗೆ ಬರಲಿರುವ ಅತಿಥಿಗಳ ಸ್ವಾಗತದ ಕುರಿತಾದ ಚಿಂತೆಯೆ. ಒಂದೆರಡು ಬಾರಿ ಅನಂತನನ್ನು ಎಚ್ಚರಿಸಿದಳು. "ಬೇಕಾದಂತೆ ಮಾಡು" ಎಂದು ಆತ ಹತ್ತು ರೂಪಾಯಿ ತಂದು ಆಕೆಯ ಕೈಲಿಟ್ಟ. ಅಷ್ಟೇನು ಸಂತೋಷದಿಂದ ಈ ಹಣ ಕೊಟ್ಟಂತಿಲ್ಲ ಎಂದು ತಿಳಿದ ಭಾರತಿ ಆಮೇಲೆ ಈ ವಿಚಾರ ಹೆಚ್ಚಿಗೆ ಮಾತು ಬೆಳೆಸಲಿಲ್ಲ.

ಶನಿವಾರ ಸಂಜೆ ಅನಂತ ಕೆಲಸ ಮುಗಿಸಿ ಮರಳಿದಾಗ ಮಾತ್ರ ಕೇಳಿದಳು :

"ನಾನು ಹೇಳಿದ್ದು ಮರೆತುಹೋಯಿತೆ ?"

ದಣಿದು ಬಂದಿದ್ದ ಅನಂತನಿಗೆ ಭಾರತಿಯ ಮಾತು ಕೇಳಿ ಬೇಸರವಾಯಿತು.

"ಏನದು, ಸ್ಪಷ್ಟವಾಗಿ ಹೇಳಬಾರದೆ ?"

ಅನಂತ ದಣಿದು ಬಂದಿದ್ದನಷ್ಟೇ ಅಲ್ಲ; ಘಾಸಿಗೊಂಡ ಮನಸ್ಸಿನಿಂದ ಬಂದಿದ್ದ. ಪತ್ರಿಕೆಯ ಹದಗೆಡುತ್ತಿದ್ದ ಆರ್ಥಿಕ ಪರಿಸ್ಥಿತಿಯ ಕುರಿತು ಎರಡು ತಾಸು ಗೆಳೆಯರೊಂದಿಗೆ ಚರ್ಚಿಸಿ ಯಾವುದೊಂದು ನಿರ್ಧಾರಕ್ಕೂ ಬರದೆ, ತಲೆ ಕೆಡಿಸಿಕೊಂಡು ಬಂದಿದ್ದ. ಅವಕ್ಕೆ ಸರಿಯಾಗಿ, ಎಲ್ಲರಿಗೂ ನಿರ್ದೇಶನ ಕೊಡುವ ಯೋಗ್ಯತೆಯಿದ್ದ ಸೋಮಯಾಜಿಗಳು, ಏನೋ ಅವಸರದ ಕೆಲಸ ವಿದ್ದುದರಿಂದ ನಾಲ್ಕು ದಿನಗಳ ಮಟ್ಟಿಗೆಂದು ಪುಣೆಗೆ ಹೋಗಿದ್ದರು. ಹೀಗಾಗಿ

ಸಾಲಿಗರ ಮಾತುಗಳ ನೋವು ಸಹಿಸಿಕೊಂಡು ಮೊದಲೇ ಬೇಸರದಿಂದಿದ್ದ ಅನಂತನಿಗೆ ಭಾರತಿಯ ಮಾತು ಒಗಟಾಗಿ ಕಂಡುಬಂತು.

ಭಾರತಿ ಉತ್ತರ ಕೊಡದೆ ಒಳಗೆ ನಡೆದಳು. ಅವಳ ಕಣ್ಣಲ್ಲಿ ನೀರು ತುಂಬುತ್ತಿದ್ದುದನ್ನು ಅನಂತ ಗಮನಿಸಲಿಲ್ಲವಾದರೂ ತನ್ನ ಮೇಜಿನ ಬಳಿ ಬಂದಾಗ ಆತನ ದೃಷ್ಟಿಗೆ ಬಿದ್ದಿದ್ದ ಮಂಜಿನ ಪರದೆ ಕರಗಿತು.

ಮೇಜಿನ ಮೇಲೆ ಪುಟ್ಟದೊಂದು ಮಣಿಸರ, ನಾಲ್ಕು ಸಣ್ಣ ಸಣ್ಣ ತುಂಡು ಚೀಟಿನ ಅರಿವೆ, ಸೂಜಿ, ನೂಲು ಇವನ್ನು ಕಂಡಾಗ ಅನಂತನಿಗೆ ಭಾರತಿ ಆಶಿಸುತ್ತಿದ್ದುದೇನೆಂದು ತಿಳಿದುಬಂತು.

ಗೊಂಬೆ!

ಸುಭದ್ರೆಗೆ ಕೊಡಲು ನಿಶ್ಚಯಿಸಿದ್ದ ಗೊಂಬೆಗೆ ಪರಿಕಾರ ಹೊಲಿಯಲೆಂದು ಭಾರತಿ ಅನಂತನ ದಾರಿ ಕಾಯುತ್ತಿದ್ದಳು.

ಅನಂತನಿಗೆ ಅತೀವ ವೇದನೆಯಾಯಿತು. ಕಾರಣವಿಲ್ಲದೆ ಭಾರತಿಯನ್ನು ನೋಯಿಸಿದೆನೆಂದು ಮನಸ್ಸು ತಳಮಳಗೊಂಡಿತು. ಭಾರತಿಗೆ ಹೇಳದೇನೇ, ಆ ರಾತ್ರಿಗೇ ಶರಟು ಸಿಕ್ಕಿಸಿಕೊಂಡು, ಮನೆಯಿಂದ ಹೊರಬಿದ್ದ. ಪೇಟೆಯ ತನಕ ನಡೆದು ಹೋಗಿ, ಯಾವುದೋ ಇರಾಣಿ ಅಂಗಡಿಯಲ್ಲಿ ಪುಣ್ಯವಶಾತ್ ಮಾರಲಿರಿಸಿದ್ದ ಗೊಂಬೆಯೊಂದನ್ನು ಕೊಂಡುಕೊಂಡು ಮನೆಗೆ ಮರಳಿದಾಗ ರಾತ್ರಿ ಘಂಟೆ ಹತ್ತಾಗಿತ್ತು.

ಗಂಡ ಪುನಃ ಎಲ್ಲಿಗೆ ಹೊರಟುಹೋದನೆಂದು ತಿಳಿಯದೆ ಚಿಂತಿಸುತ್ತಿದ್ದ ಭಾರತಿ ಆತ ಮರಳುವ ತನಕವೂ ಅಳುತ್ತಲೇ ಇದ್ದಳು. ಗಂಡನ ಕೈಲಿದ್ದ ಗೊಂಬೆ ನೋಡಿದಾಗ ಮಾತ್ರ ಅಳು ನಿಂತಿತು. ಈ ರಾತ್ರಿಗೆ ಅವರನ್ನು ಮನೆಯಿಂದ ಹೊರಡಿಸಿದೆನೇ ಎಂದು ಎದೆ ತುಂಬ ಕಳವಳವಾಯಿತು. ಹೆಂಡತಿಯನ್ನು ರಮಿಸಲೆಂದು ಅನಂತ ತನ್ನೆಲ್ಲ ದುಃಖವನ್ನು ಮರೆತು,

"ಮೊದಲು ಪರಿಕಾರ ಹೊಲಿ, ಭಾರೀ.... ಇದರ ಮ್ಯೆಮೇಲೆ ಈಗಾಗಲೇ ಒಂದು ಇದೆ. ಇನ್ನೊಂದು ಹಾಕಿದರೂ ಚಿಂತಿಲ್ಲ. ಆಮೇಲೆ ಊಟ...." ಎಂದು ನಗುತ್ತಲೇ ಹೇಳಿದಾಗ ಭಾರತಿಯ ಮುಖ ಬೆಳಗಿತು.

ಮರುದಿನ ಬೆಳಗ್ಗೆ ಅತಿಥಿಗಳ ಸ್ವಾಗತಕ್ಕಾಗಿ ಎಲ್ಲ ಸಿದ್ಧತೆಗಳಾದ ಮೇಲೆ, ಅನಂತ ಒಮ್ಮೆ ಪತ್ರಿಕೆಯ ಕಾರ್ಯಾಲಯಕ್ಕೆ ಹೋಗಿಬರುವೆನಾಗಿ ಹೊರಟು ನಿಂತ. ಭಾರತಿಗೆ ಅಸಮಾಧಾನವಾದರೂ ಅದನ್ನು ತೋರಿಸಲಿಲ್ಲ.

"ಅವರು ಬರುವಾಗ ನೀವು ಮನೆಯಲ್ಲಿರುವುದಿಲ್ಲವೆ? ಇಷ್ಟೊತ್ತೂ ಹೋಗ ಬೇಕೇ?" ಎಂದಿಷ್ಟೇ ಹೇಳಿದಳು. "ಒಬ್ಬರನ್ನು ಕಾಣುವೆನೆಂದು ಮಾತು ಕೊಟ್ಟಿದ್ದೇನೆ, ಭಾರೀ....ಆದಷ್ಟು ಬೇಗ ಬರುತ್ತೇನೆ" ಎಂದು ಹೇಳಿ ಅನಂತ ಹೊರಬಿದ್ದ.

ಆತ ಮರಳುವಾಗ ಘಂಟೆ ಹತ್ತು ಮೀರಿತ್ತು. ಮನೆಯ ಬಾಗಿಲಿಗೆ ಬಂದಾಗಲೇ ಮನೆತುಂಬ ನಗೆ ಪ್ರತಿಧ್ವನಿಸುತ್ತಿತ್ತು. ಅನಂತ ತೆರೆದೇ ಇದ್ದ ಬಾಗಿಲಲ್ಲಿ ನಿಂತು ನೋಡಿದಾಗ ತನ್ನ ಕಣ್ಣನ್ನೇ ತಾನು ನಂಬಲಿಲ್ಲ. ಬರುವಾಗಲೇ ಸುಶೀಲೆ ಪರಿಚಯಮಾಡಿಸಿದ್ದ 'ಇಂದಿರೆ' ಬಂದಿರಬಹುದೇ, ಆಕೆ ಯಾರಿರಬಹುದು, ಹೇಗಿರಬಹುದೆಂಬ ಕುತೂಹಲ ಆತನನ್ನು ಕಾಡುತ್ತಿದ್ದಿತು. ಆಗಸ್ಟ್ ಕ್ರಾಂತಿಯಲ್ಲಿ ಮಡಿದ ವೀರನೊಬ್ಬನ ಪತ್ನಿ ಹೇಗಿರಬಹುದೆಂದು ಅವನ ಮನಸ್ಸು ಭಾರತಿಯೊಂದಿಗೆ ಆ ಅಪರಿಚಿತ ವ್ಯಕ್ತಿಯನ್ನು ಹೋಲಿಸಿ ನೋಡುತ್ತಿತ್ತು.

ಆತ ಮನೆಯಲ್ಲಿ ಕಂಡುದು ಸುಭದ್ರೆಯೊಂದಿಗೆ ಆಡುತ್ತಿದ್ದ ಮೂರು ಮಕ್ಕಳನ್ನು.

ಪುಟ್ಟ ಸೀರೆಯುಟ್ಟು ಸುಭದ್ರೆ ಮೋಹಕ ಭಂಗಿಯಲ್ಲಿ ನಿಂತು ಕುಲು ಕುಲು ನಗುತ್ತಿದ್ದಳು. ಕೈಯಲ್ಲಿ ಅನಂತ ಹಿಂದಿನ ದಿನ ತಂದ ಗೊಂಬೆ. ಹಸಿದ ಕಣ್ಣುಗಳಿಂದ ಮಗುವನ್ನೇ ನೋಡುತ್ತ ಅವಳ ಬಳಿ ಕುಳಿತಿದ್ದುದು ಭಾರತಿ. ಇದಿರಿಗೆ ಮಗುವನ್ನೂ ಭಾರತಿಯನ್ನೂ ಆಡಿಸುತ್ತಿದ್ದುದು, ಒಬ್ಬಾಕೆ ಸುಶೀಲೆ, ಇನ್ನೊಬ್ಬಾಕೆ ಇಂದಿರೆಯೇ ಇರಬೇಕೆಂದು ಅನಂತ ನಿಶ್ಚಯಿಸಿದ.

ಮೀನಾಕ್ಷಮ್ಮ ತುಂಬ ದೂರದಲ್ಲಿ ಕುಳಿತು ನಗುತ್ತಿದ್ದರು.

ನಗುತ್ತಿದ್ದುದರ ಕಾರಣ ಅನಂತನಿಗೆ ತಿಳಿಯಲಿಲ್ಲ. ಆದರೆ ಇವರೆಲ್ಲ ಜೊತೆಯಾಗಿ ಆ ಮಗುವಿನೊಂದಿಗೆ ಆಡುತ್ತಿದ್ದರೆಂಬುದಕ್ಕೆ ಯಾವ ಸಂದೇಹವೂ ಇರಲಿಲ್ಲ.

ಅನಂತನನ್ನು ಕಂಡೊಡನೆ ಈ ನಗುವಿನ ಉಬ್ಬರವಿಳಿಯಿತು. ಪೂರ್ತಿ ನಿಲ್ಲಲಿಲ್ಲವಾದರೂ ಸುಶೀಲೆ, ಭಾರತಿ ಏಳುತ್ತಿದ್ದಂತೆಯೆ ಅನಂತನನ್ನು ಸ್ವಾಗತಿಸಿದಳು:

"ಬಂದಿರಾ. ಸುಭದ್ರೆಯ ಹುಚ್ಚು ಹಿಡಿದು ನಿಮ್ಮ ಶ್ರೀಮತಿಯೂ ಮಗುವಾಗಿದ್ದಾರೆ."

ಅನಂತನಿಗೆ ಈ ಮಾತು ಸ್ಪಷ್ಟವಾಗಿ ಕೇಳಿಸಲಿಲ್ಲ. ಆತ ಎವೆಯಿಕ್ಕದೆ ಇಂದಿರೆಯನ್ನು ನೋಡುತ್ತಿದ್ದ. ಆಗ ಸುಶೀಲೆ ಏನೋ ಮಾತನಾಡಿದಳೆಂದು ತಿಳಿದುದರಿಂದ ಪ್ರಸಂಗಾವಧಾನ ತಂದುಕೊಂಡು ಕೇಳಿದ :

"ವಿಶ್ವನಾಥರಾಯರು ಬಂದಿಲ್ಲವೆ ?"

"ಬರುತ್ತಾರೆ. ಮಧ್ಯಾಹ್ನ ಊಟದ ಹೊತ್ತಿಗೆ ಬಂದರಾಯಿತಲ್ಲ. ಏನೋ ಅವಸರದ ಕೆಲಸವಂತೆ—ಮಹಾಲಕ್ಷ್ಮಿಗೆ ಹೋಗಿದ್ದಾರೆ. ರಜೆ ಪಡೆದು ಬಂದರೂ ಅವರ ಕೆಲಸ ಮುಗಿಯುವ ಹಾಗಿಲ್ಲ."

"ನಾಗೇಶರಾಯರು ?"

"ಬೆಳಿಗ್ಗೆ ಇಬ್ಬರು ಮೂವರು ಅವರನ್ನು ಹುಡುಕಿಕೊಂಡು ಬಂದಿದ್ದರು. ಅವರು ಇವೊತ್ತು ಮನೆ ಬಿಡುವ ಮಾತೇ ಇಲ್ಲ ಎಂದು ತೋರುತ್ತದೆ. ಸಂಜೆ ಮೀಟಿಂಗಿಗೆ ಹೇಗೆ ಹೋಗುತ್ತಾರೋ ?" ಮೀನಾಕ್ಷಮ್ಮ ಈ ರೀತಿಯ ಸಮಾಧಾನ ಹೇಳಿದರು.

'ತಲಪಾಡಿಯವರು ?' ಎಂದು ಕೇಳಬೇಕೆಂದು ನಾಲಿಗೆಯ ತುದಿಯ ತನಕ ಬಂದಿದ್ದ ಅಭಿಪ್ರಾಯವನ್ನು ಅನಂತ ಯಾಕೋ ತಡೆಹಿಡಿದ. ಆಗ ಸುಶೀಲೆಯೇ, ಇಂದಿರೆಯನ್ನು ನೋಡುತ್ತಿದ್ದ ಅನಂತನ ಮನಸ್ಸಿನ ಕಳವಳ ವನ್ನು ಗುರುತಿಸಿ ಹೇಳಿದಳು :

"ನೋಡಿ, 'ಇಂದಿರಾ'. ಮುಖ ಪರಿಚಯವಿಲ್ಲದವರನ್ನು ಮನೆಗೆ ಕರೆದು ತರುವುದೆಂದರೆ ಒಂದು ಯಾಗ ಮಾಡಿದಷ್ಟು ಪ್ರಯಾಸವಾಯಿತು. ಆದರೂ ಬಂದಳು. ಸಂಕೋಚಕ್ಕಿಂತ ನಿಮ್ಮ ಪತ್ರಿಕೆಯ ಕುರಿತಾದ ಆತ್ಮೀಯ ತೆಯ ಯೋಗ್ಯತೆ ಹೆಚ್ಚಾಯಿತು. ಅವಳ ತಂದೆಯವರಿಗೆ ಸ್ವಲ್ಪ ಅನಾರೋಗ್ಯ. ಆ ಕಾರಣ ಬರಲಿಲ್ಲ. ಬರಲು ಸಂಕೋಚವೂ ಆಗಿದ್ದಿರಬಹುದು, ಬಿಡಿ."

"ನಾನೇ ಹೋಗಿ ಕರೆಯಬೇಕಾಗಿತ್ತು." ಅನಂತ ತನ್ನನ್ನು ತಾನೇ ತಿದ್ದಿಕೊಂಡ.

"ಇನ್ನು ಹೋಗಿ ಕರೆಯಬಹುದಲ್ಲ, ಇಂದಿರೆಯ ಪರಿಚಯವಾದಮೇಲೆ."

ಅನಂತ ಪುನಃ ಇಂದಿರೆಯನ್ನು ನೋಡತೊಡಗಿದ.

ವಯಸ್ಸು ಇಪ್ಪತ್ತೈದನ್ನು ಮೀರಿರಲಿಕ್ಕಿಲ್ಲ. ವಯಸ್ಸಿಗೆ ತಕ್ಕ ಬೆಳ ವಣಿಗೆ. ಉಟ್ಟಿದ್ದುದು ಶ್ವೇತವರ್ಣದ ಒರಟು ಖಾದಿ. ಇಂದಿರೆ ನಗುತ್ತಿದ್ದಿಲ್ಲ. ಅನಂತ ಬಂದಾಗ ಇದ್ದ ನಗು ಮಾಯವಾಗಿತ್ತು. ಎದ್ದುಕಾಣುತ್ತಿದ್ದ ಹಣೆ

ವಿಶ್ವವನ್ನೇ ಪ್ರತಿಭಟಿಸಿಯೇನು, ಎಂದು ಕುಣಿಯುತ್ತ ಸಾರುವಂತಿದ್ದ ಹೊಳೆಯುವ ಕಣ್ಣುಗಳು. ಬಿಳೀ ಖಾದಿಗೊಪ್ಪುವ ಬಿಳಿಯ ಮೈಬಣ್ಣ. ಮಗುವನ್ನು ಆಡಿಸುವ ಸಂಭ್ರಮದಲ್ಲಿ ಇದಿರುಬಿದ್ದು, ಇನ್ನೂ ಹಾಗೆಯೇ ಇಳಿದಿದ್ದ ಸೀಳವಾದ ಜಡೆ.

ಕುಂಕುಮವಿಲ್ಲದ ಮುಖ. ಕರಿಮಣಿಯಿರದ ಕೊರಳು.

ಯಾವುದೋ ಒಂದು ಸಾತ್ವಿಕ ಪ್ರಭೆಯ ಇದಿರು ತಾನು ಸತ್ವಹೀನನಾಗುತ್ತಿದ್ದೇನೆ, ಎಂದು ಅನಂತನಿಗೆ ತೋರಿತು. 'ಹೀಗೇಕೆ ಇಂದಿರೆಯನ್ನೇ ನೋಡುತ್ತಿದ್ದೇನೆ' ಎಂದು ಆತ ತನ್ನನ್ನೇ ತಾನು ಕೇಳಿಕೊಂಡ.

ಇಂದಿರೆ "ನಮಸ್ತೇ" ಎಂದಳು. ಆಗ ಅನಂತ ಇನ್ನಷ್ಟು ಗಲಿಬಿಲಿಗೊಂಡ. ಶಿಷ್ಟಾಚಾರದಂತೆ ತಾನೇ ಆಕೆಯನ್ನು ಮೊದಲು ವಂದಿಸಬೇಕಿತ್ತು.

"ನಮಸ್ತೇ. ತುಂಬ ಸಂತೋಷವಾಯಿತು, ನಿಮ್ಮ ಪರಿಚಯವಾಗಿ" ಎಂದು ಹೇಳಿದ.

"ಸರಿ, ಅಷ್ಟೇ ಸಾಕು. ಮಾತಿಗೆ ಆರಂಭಿಸಬೇಡಿ. ಸಂಜೆಯ ತನಕ ಬೇಕಾದಷ್ಟು ಅವಕಾಶವಿದೆ" ಎಂದು ಸುಶೀಲೆ ನಗುತ್ತಲೇ ಹೇಳಿದಳು.

ಅನಂತ ಒಮ್ಮೆ ಉಸಿರು ಬಿಟ್ಟು ನಗತೊಡಗಿದ. ಆದರೆ ಇಂದಿರೆ ನಗಲಿಲ್ಲ.

೧೮

ಹನ್ನೊಂದೂವರೆ ಘಂಟೆಗೆ ಸರಿಯಾಗಿ ವಿಶ್ವನಾಥರಾಯರು ಕಾರಿನಲ್ಲಿ ಬಂದಿಳಿದರು. ಅನಂತನ ಮನೆ ತುಂಬಿಕೊಂಡಿತು.

ಮನೆತುಂಬ ಮಾತು ; ಮನೆತುಂಬ ನಗು—ಕಾರಣ ಮನೆತುಂಬ ಜನ. ಎಲ್ಲರಿಗೆ ಮುಂದಾಳಾಗಿ ಹರಟುತ್ತಿದ್ದುದು ಸುಶೀಲೆ.

ಭಾರತಿಯ ಸಡಗರಕ್ಕೆ ಮೇರೆಯೇ ಇರಲಿಲ್ಲ. ಅಡುಗೆಯ ಕೆಲಸ ಒಂದೆಡೆ, ಮಗು ಸುಭೆಯನ್ನು ಮುದ್ದಿಡುವ ಕೆಲಸ ಇನ್ನೊಂದೆಡೆ, ಸುಶೀಲೆಯೊಂದಿಗೆ ಮಾತನಾಡುತ್ತ ಇರುವುದು ನಿಲ್ಲದ ಕೆಲಸ. ಈ ಸಂಭ್ರಮದಲ್ಲಿ ಸೋಲುತ್ತಿದ್ದಾಕೆಗೆ ಬಂದ ಅತಿಥಿಗಳೆಲ್ಲರ ಮುಖಭಾವವನ್ನು ಗಮನಿಸುವಷ್ಟು ವ್ಯವಧಾನವಿರಲಿಲ್ಲ. ಈ ಸಂಭ್ರಮದ ತನ್ಮಯತೆಯಲ್ಲಿ ಆಕೆ ಸುಖಿ. ತನ್ನ ಮುಂಬಯಿ ಜೀವನದಲ್ಲಿ ಹಿಂದೆಂದೂ ಅನುಭವಿಸದ ಸುಖವನ್ನು ಇಂದು ಆಕೆ ಅನುಭವಿಸುತ್ತಿದ್ದಳು.

ಮೀನಾಕ್ಷಮ್ಮ ಅಡುಗೆಯ ಕೆಲಸದಲ್ಲಿ ಭಾರತಿಗೆ ನೆರವು ನೀಡುತ್ತಿದ್ದರು. ಸುಶೀಲೆ ಮಾತ್ರ ನಿಂತಲ್ಲಿ ನಿಲ್ಲುತ್ತಿರಲಿಲ್ಲ. ಒಂದೆಡೆ ಕುಳಿತಿರುವುದಂತೂ ಆಕೆಯ ಸ್ವಭಾವಕ್ಕೆ ತೀರ ವಿರುದ್ಧವಾದುದು. ಹಕ್ಕಿಯಂತೆ ಹಾರುತ್ತಿದ್ದ ಆಕೆಯ ಉತ್ಸಾಹವನ್ನು ಕಂಡು ನಕ್ಕು ಸುಶೀಲೆಯ ಜಡೆ ಹಿಡಿದೆಳೆದು ಈ ಉತ್ಸಾಹಕ್ಕೆ ತಡೆಹಾಕಿದುದು ಇಂದಿರೆಯೆ.

"ಕಂಡವರ ಮನೆಯಲ್ಲಿ ನೀನು ಜಿಗಿಯುವುದನ್ನು ನಿಲ್ಲಿಸುವುದಿಲ್ಲ ವೇನೇ, ಸುಶೀ ?"

"ಭಾರತಿಯ ಮನೆ ಕಂಡವರ ಮನೆಯೆ?" ಸುಶೀಲೆಯ ಉತ್ತರ ಬರಲು ಹೆಚ್ಚು ಹೊತ್ತು ಬೇಕಿರಲಿಲ್ಲ. ಈ ಮಾತಿನ ಸತ್ಯ ಇಂದಿರೆಗೆ ತಿಳಿದಿತ್ತು. ಮದುವೆಯ ದಿನ ತನ್ನನ್ನು ನೋಡಿದಾಗಿನಿಂದ ನೆಚ್ಚಿಕೊಂಡ ಸುಶೀಲೆಯ ಹೃದಯದ ಸೌಜನ್ಯವನ್ನು ಆಕೆ ಎಂದೆಂದಿಗೂ ಮರೆಯುವಂತಿರಲಿಲ್ಲ.

ಅನಂತ ನಕ್ಕು ಇಂದಿರೆಯ ಕಡೆಗೊಮ್ಮೆ ನೋಡಿದ. ತಾನು ಬಂದಾಗ ನಿಂತ ನಗು ಅರಳಿದುದು ಮತ್ತೆ ಈಗಲೇ. ತಾಸೊಂದು ತಾಸು, ವಿಶ್ವನಾಥ ರಾಯರು ಬರುವ ತನಕ ಆತ ಸುಶೀಲೆಯೊಡನೆ ಹರಟಲು ಸಮರ್ಥನಾಗಿದ್ದ. ಆದರೆ ಇಂದಿರೆಯನ್ನು ಮಾತನಾಡಿಸುವುದು ಸಾಧ್ಯವಾಗಿರಲಿಲ್ಲ. ತನ್ನ ಪತ್ರಿಕೆಯ ಕುರಿತು ಅಂಥಿಂಥ ಅಭಿಮಾನವಿದೆಯೆಂದು ತಿಳಿದ ಇಂದಿರೆ ಇನೇಕೆ ಈಗ ಮೌನ ಎಂಬುದು ಆತನಿಗೆ ಸಮಸ್ಯೆಯಾಗಿತ್ತು. ಸುಶೀಲೆಯನ್ನು ಕೆಣಕಿ ಆಕೆ ಮೊದಲ ಬಾರಿಗೆ ನಕ್ಕಾಗ ಇಡೀ ಮನೆಯಲ್ಲಿ ಜೀವಕಳೆ ತುಂಬಿದಂತೆ ಆತನಿಗೆ ಭಾಸವಾಯಿತು.

'ಭಾರತಿಯ ಮನೆ ಕಂಡವರ ಮನೆಯೆ?' ಮಾತು ಆಡಿದ್ದುದು ಸುಶೀಲೆ. ಆದರೆ ಅನಂತನಿಗೆ ಕೇಳಿಸಿದುದು ತಂಗಿ ಪಾರ್ವತಿಯ ದನಿ. ಆ ದನಿಯ ಹಿಂದಿನ ಅನುದಿನದ ಉತ್ಸಾಹ.

ಇಂದಿರೆ ನಕ್ಕುದು ಅದೊಂದೇ ಬಾರಿ. ವಿಶ್ವನಾಥರಾಯರು ಬಂದ ಮೇಲೆ ಆಕೆ ಇನ್ನಷ್ಟು ಮೌನಿಯಾದಳು. ಸುಶೀಲೆ ಕೆಣಕಿದರೂ ಆಕೆಯಿಂದ ಮಾತು ಹೊರಡಿಸುವುದು ಸಾಧ್ಯವಾಗಲಿಲ್ಲ.

"ಏನೇ, ಅಂಥ ವಾಚಾಳಿಗೆ ಇಲ್ಲಿ ಬಾಯಿ ಮುಚ್ಚಿಹೋಯಿತೇನು? ನೀನು ಕಾಗದದಲ್ಲಿ ಬರೆಯುತ್ತಿದ್ದುದನ್ನೆಲ್ಲ ಈಗ ಹೇಳಲ್ಲ. ಅನಂತರಾಯರು ತಮ್ಮ ಪತ್ರಿಕೆ ನ್ಯೂಯಾರ್ಕ್ ಟೈಮ್ಸ್ ಎಂದು ತಿಳಿದು ಅಟ್ಟಕ್ಕೇರಿಬಿಡುತ್ತಾರೆ."

ಈ ಕೆಣಕುವಿಕೆ ವ್ಯರ್ಥವಾಯಿತು. ಇಂದಿರೆ ಬಾಯಿಬಿಡಲಿಲ್ಲ.

ವಿಶ್ವನಾಥರಾಯರು ಬಂದೊಡನೆ, ಹೆಂಗಸರೆಲ್ಲ ಒಳಗೆ ಸರಿದುದರಿಂದ ಅನಂತ ಅವರೊಡನೆ ಮಾತನಾಡತೊಡಗಿದ. ಯಾವುದೊಂದು ನಿರ್ದಿಷ್ಟ ವಿಚಾರದ ಕುರಿತಾಗಿರದ ಮಾತುಗಳು: ಮಳೆ, ಬೆಳೆ, ದಿಲ್ಲಿ, ದರಿದ್ರರು, ತಾಜ ಮಹಲ್, ಸಿನೆಮಾ ಹಂಚಿಕೆಯ ದಾರಿಯಲ್ಲಿ ನೂರಾರು ತಾಪತ್ರಯಗಳು. ಅನಂತ ಬೇಸತ್ತುಹೋದ.

ಆತನ ಮನಸ್ಸು ಇಂದಿರೆಯೊಡನೆ ಮಾತನಾಡಲು ತವಕಿಸುತ್ತಿತ್ತು. ಮಾತನಾಡಿಸಿ ಆಕೆಯ ಅಂತರ್ಯವನ್ನೆಲ್ಲ ಹೊರಗೆಡಹಬೇಕು. ಆಕೆಯ ಹೃದಯದ ನೋವಿರಲಿ, ಆನಂದವಿರಲಿ, ಅವಕ್ಕೆ ಸಂಬಂಧಿಸಿದ ಎಲ್ಲ ವಿಚಾರ ಗಳನ್ನು ಆಕೆಯಿಂದಲೇ ಕೇಳಿ ತಿಳಿದುಕೊಳ್ಳಬೇಕು ಎಂಬ ಕುತೂಹಲ ಹೃದಯ ವನ್ನು ಕೊರೆಯುತ್ತಿತ್ತು.

ಊಟ ಕೂಡ ಮೌನವಾಗಿಯೇ ಸಾಗಿತು. ಮಾತನಾಡಿ ಬೇಸತ್ತ ಸುಶೀಲೆಯೂ ಮೌನ ತಾಳಿದಳು. ಕೊನೆಗೆ ಆ ಮೌನ ಅವಳಿಗೇ ಅಸಹನೀಯ ವಾಗಿ ಕಂಡುದರಿಂದ ಭಾರತಿಯ ಅಡುಗೆಯನ್ನು ಪ್ರಶಂಸಿಸಲು ಆರಂಭಿಸಿದಳು.

"ಉಡುಪಿಯ ಖೀರು ಪಾಯಸದ ರುಚಿ ಇವೊತ್ತೇ ನೋಡಿದ್ದು, ಭಾರತೀ."

"ಆದರೆ ನಾನು ಹೆಸರಿಗೆ ಮಾತ್ರ ಅದಕ್ಕೆ ಕೈಹಾಕಿದ್ದು. ಮಾಡಿದ್ದು ನಿಮ್ಮ ಅತ್ತೆಯವರೆ."

"ಹಾಗೇನು? ಅದೇ, ಮುಂಬಯಿಯ ಹಾಲಿನ ವಾಸನೆ ಪೂರ್ತಿ ಹೋದಂತಿಲ್ಲ."

ಈಗ ಮಾತ್ರ ಎಲ್ಲ ನಗಬೇಕಾಯಿತು. ಆ ನಗುವಿನೊಂದಿಗೆ ಪುನಃ ಮೆಲ್ಲಮೆಲ್ಲನೆ ಮಾತು ಕೂಡ ಆರಂಭವಾಯಿತು.

ಊಟ ಮುಗಿದ ಮೇಲೆ ವಿಶ್ವನಾಥರಾಯರು ಅರ್ಧ ತಾಸು ಕೂಡ ಅಲ್ಲಿರಲಿಲ್ಲ. "ನನಗೆ ಅಂಧೇರಿಯ ತನಕ ಹೋಗಬೇಕು. 'ಎಂ. ಎಂಡ್. ಟಿ. ಸ್ಟುಡಿಯೋ'ದಲ್ಲಿ ಸ್ವಲ್ಪ ಕೆಲಸವಿದೆ. ಸಂಜೆ ಐದಕ್ಕೆ ಇದೇ ದಾರಿಯಾಗಿ ಬರುತ್ತೇನೆ. ಆಗ ಎಲ್ಲರೂ ಹೊರಟು ತಯಾರಾಗಿರಿ" ಎಂದು ಅನಂತನ ಒತ್ತಾಯವನ್ನೂ ಗಮನಿಸದೆ ಹೊರಟುಹೋದರು.

"ನಿನ್ನ ಮಾತು ಕೇಳಿ ತಲೆ ಬೇಸರ ಬಂದು, ಅವರು ಇಲ್ಲಿ ನಿಲ್ಲುವುದೇ

ಬೇಡವೆಂದು ಓಡಿರಬೇಕು, ನೋಡು, ಸುಶೀ" ಎಂದು ಇಂದಿರೆ, ವಿಶ್ವನಾಥ ರಾಯರು ಹೊರಟುಹೋದಮೇಲೆ ಸುಶೀಲೆಯೊಡನೆ ಹೇಳಿದಳು.

"ಹಾಗೇನೂ ಇರಲಿಕ್ಕಿಲ್ಲ. ಇಷ್ಟರ ತನಕ ಮೌನವಾಗಿದ್ದಾಕೆ ಇನ್ನು ನೀನು ನಿನ್ನ 'ಪಾಲಿಟಿಕ್ಸ್' ಆರಂಭಿಸಿದರೆ ಹುಚ್ಚು ಹಿಡಿದೀತು ಎಂದು ಅವರು ಓಡಿಹೋಗಿರಬೇಕು." ಇದು ಸುಶೀಲೆಯ ಉತ್ತರ.

ಈ ಮಾತಿಗೆ ಉತ್ತರ ಹೇಳುವುದರ ಬದಲು ಇಂದಿರೆ ಅನಂತನೆಡೆ ನೋಡಿದಳು. ಆತ ನಗುತ್ತಿದ್ದ.

ಇಂದಿರೆ ಪುನಃ ಮೌನ.

ಈಗ ಮಾತ್ರ ಅನಂತನಿಗೆ ತಡೆಯಲಾಗಲಿಲ್ಲ. ಇನ್ನೂ ಇಂದಿರೆ ಮಾತನಾಡದಿದ್ದರೆ, ಸಂಕೋಚವನ್ನು ಬದಿಗಿರಿಸಿ ಮಾತನಾಡದಿದ್ದರೆ, ತಾನು ಮನೆಯಲ್ಲಿ ನಿಲ್ಲುವುದೇ ಸಾಧ್ಯವಿಲ್ಲ; ಎಲ್ಲಿಗಾದರೂ ಹೊರಗೆ ಹೋಗಲೇಬೇಕು ಎಂಬ ಉತ್ಕಟ ಭಾವ ಮನಸ್ಸಿನಲ್ಲಿ ಮೂಡಿತು. ತುಂಬ ಧೈರ್ಯ ತಂದು ಕೊಂಡು ಕೇಳಿದ. ಮಾತು ಇಂದಿರೆಯನ್ನುದ್ದೇಶಿಸಿತ್ತು. ಆದರೆ ಮುಖ ಇಂದಿರೆಯನ್ನು ನೋಡುತ್ತಿದ್ದಿಲ್ಲ.

"ರಾಜಕಾರಣದಲ್ಲಿ ನಿಮಗೆ ಅಷ್ಟು ಆಸಕ್ತಿಯಿದೆಯೆ?"

ತೀರ ಕ್ಷುಲ್ಲಕ ಪ್ರಶ್ನೆ. ಇಂದಿರೆಯ ಮನೆತನದ ಇತಿಹಾಸ ಬಲ್ಲವರಿಗೆ ಅದು ಕ್ಷುಲ್ಲಕ ಪ್ರಶ್ನೆಯೇ ಆಗಿತ್ತು. ಆದರೆ ಅನಂತನಿಗೆ ಹಾಗಿರಲಿಲ್ಲ. ಅನಂತನ ಮನಸ್ಸಿನ ಕಳವಳ ಇನ್ನಷ್ಟು ಹೆಚ್ಚಲು, ಈ ಪ್ರಶ್ನೆಗೆ ಉತ್ತರಿಸಿದುದು ಸುಶೀಲೆಯೆ.

"ಆಸಕ್ತಿ! ಶಾಲೆಗೆ ಹೋಗುವ ವಯಸ್ಸಿನಲ್ಲಿ ಪಂಡಿತ್ ನೆಹರೂರವರನ್ನು ಮಾತನಾಡಿಸಿ ಅವರ ಕೊರಳಿಗೆ ಹಾರ ಹಾಕಿ ಬಂದಾಕೆಗೆ ರಾಜಕೀಯದಲ್ಲಿ ಆಸಕ್ತಿಯೆ? ನನ್ನ ಸಲಹೆಯನ್ನು ಯಾರಾದರೂ ತೆಗೆದುಕೊಳ್ಳಲು ಸಿದ್ಧ ರಿರುವರಾದರೆ, ನಾನು ಇಂದಿರೆಯನ್ನು ರಾಯಭಾರಿಯಾಗಿ ಕಳುಹಿಸಬೇಕು ಎನ್ನುತ್ತೇನೆ."

ಈಗ ಇಂದಿರೆಯ ಮುಖದಲ್ಲಿ ನಗು ಮಿಂಚಿತು.

"ಎಲ್ಲಿಗೆ?" ಎಂದು ಕೇಳಿದಳು.

"ಎಲ್ಲಿಗೆ ಬೇಕಾದಲ್ಲಿಗೆ. ಬೇರೆಲ್ಲೂ ಜಾಗವಿಲ್ಲವಾದರೆ ಅಂದಮಾನಕ್ಕೆ."

"ಅದು ನಮ್ಮದೇ ಅಲ್ಲವೇನೇ, ಸುಶೀ."

"ತಪ್ಪಿದೆನಮ್ಮ, ನನ್ನ ಭೂಗೋಳಜ್ಞಾನ ಯಾವಾಗಲೂ ಅಪ್ಪಕೃಷ್ಟ."

"ಇದು ಭೂಗೋಳಕ್ಕೆ ಸಂಬಂಧಪಟ್ಟದ್ದೇ? ಇತಿಹಾಸಕ್ಕೆ, ರಾಜಕಾರಣಕ್ಕೆ ಸಂಬಂಧಪಟ್ಟದ್ದು."

"ಅದರಲ್ಲಿಯೂ ನನಗೆ ಸೊನ್ನೆ ಮಾರ್ಕು. ನಾನು ಅನಂತರಾಯರ 'ಕಹಳೆ'ಯನ್ನು ಮೆಚ್ಚಿಕೊಂಡದ್ದು ಆ ಪತ್ರಿಕೆಯ ರಾಜಕಾರಣಕ್ಕಾಗಿಯಲ್ಲ; ಅದರ ಮಹಿಳಾ ವಿಭಾಗಕ್ಕಾಗಿ. ಯಾರೋ ಆಕೆ, ಪ್ರಿಯಂವದಾ ಎಂದು ಬರೆಯುತ್ತಿದ್ದಾರಲ್ಲ?"

ಇಂದಿರೆ ತನ್ನ ಪ್ರಶ್ನೆಗೆ ಉತ್ತರ ಕೊಡದುದರಿಂದುಂಟಾದ ನೋವಿನಿಂದ ಅನಂತ ನೆಲ್ಲಮೆಲ್ಲಗೆ ಚೇತರಿಸಿಕೊಳ್ಳುತ್ತಿದ್ದ. ಮಾತು ಅವನಿಚ್ಛೆಯಂತೆ ಪತ್ರಿಕೆಯ ಕಡೆ ತಿರುಗುತ್ತಿತ್ತು.

"ನಿಮ್ಮಂತೆಯೇ ಅವರೂ ತುಂಬ ಮಾತುಗಾರಿಕೆಯಲ್ಲಿ ನುರಿತವರು."

"ಮುಂದಿನ ವಾರದಿಂದ ಆ ವಿಭಾಗವನ್ನು ಸುಶೀಲೆಗೆ ಒಪ್ಪಿಸಿಬಿಡಿ. ಒಂದು ನಾಲ್ಕು ವಾರ ಆಕೆ ತನ್ನ ಮಾತಿನ ಹದವನ್ನು ಬರವಣಿಗೆಯಲ್ಲಿ ತೋರಿಸಲಿ." ಇಂದಿರೆ ಅನಂತನನ್ನೇ ಉದ್ದೇಶಿಸಿ ಆಡಿದ್ದ ಮೊದಲನೆಯ ಮಾತು ಇದು. ಅನಂತನ ಮೇಲೆ ಅದು ವಿಚಿತ್ರ ಪರಿಣಾಮವನ್ನುಂಟುಮಾಡಿತು; ಯಾವುದೋ ಉನ್ಮಾದಕಾರಿ ಹೂವಿನ ಕಂಪು ಮೂಗಿಗೆ ಬಡಿದಂತೆ.

ಅನಂತ ಉತ್ತರ ಕೊಡುವುದಕ್ಕೆ ಮೊದಲೇ ಸುಶೀಲೆ ಮಾತನಾಡಿದಳು:

"ಇನ್ನು ಅದೊಂದು ಉಪದ್ವ್ಯಾಪ ಬಾಕಿ. ಬೇರೆಲ್ಲ ಮಾಡಿಯಾಯಿತು. ನನಗೆ ಬೇಡವಪ್ಪ ಅಂಥ ಕೆಲಸ. ಬರೆದಷ್ಟನ್ನು ಓದುವುದು ನನ್ನ ಕೆಲಸ. ಓದಲು ಮನಸ್ಸೊಗ್ಗದ್ದನ್ನು ಓದದೆ ಇರುವುದೂ ನನ್ನ ಸ್ವಾತಂತ್ರ್ಯ."

"ಎಂದರೆ ನಾನು ಒತ್ತಾಯ ಮಾಡಿ 'ಕಹಳೆ' ಓದಿಸುತ್ತಿದ್ದೇನೆಂದು ಈ ಆರೋಪವೆ?" ಇಂದಿರೆ ಕೇಳಿದಳು.

"ಹಾಗಲ್ಲ, ಇಂದೂ. 'ಕಹಳೆ' ಓದಲು ಬೇಸರವಾಗುವುದೆಂದು ನಾನು ಯಾವಾಗಲಾದರೂ ಹೇಳಿದ್ದೆನೇ?"

"ಹಾಗಾದರೆ 'ಕಹಳೆ'ಯ ರಾಜಕಾರಣವೂ ನಿಮ್ಮ ಮಟ್ಟಿಗೆ ಪ್ರಿಯವೆಂದ ಹಾಗಾಯಿತು." ಅನಂತ ಸುಶೀಲೆಯನ್ನುದ್ದೇಶಿಸಿ ಹೇಳಿದ.

"ಸ್ವಲ್ಪಮಟ್ಟಿಗೆ. ಅದರ ಕುರಿತು ನಮ್ಮ ಮಾವನಿಗಿರುವಷ್ಟು ಸಿಟ್ಟು ನನಗಿಲ್ಲ. ಆದರೆ ಇಂದಿರೆಗಿರುವಷ್ಟು ಪ್ರೀತಿಯೂ ಇಲ್ಲ. ಉದಾಹರಣೆಗಾಗಿ,

ನೀವು ಮೊನ್ನೆ ಬರೆದಿದ್ದಿರಲ್ಲ, ಒಂದು ಲೇಖನ....ಅಪಹೃತ ಭಗಿನಿಯರ ವಿಚಾರ...."

"ಸುಶೀ, ಸುಭಾ ನಿದ್ದೆಹೋದಳು ನೋಡು."

ಭಾರತಿಯು ತೊಡೆಯಲ್ಲಿ ಮಲಗಿ ಸುಭದ್ರೆ ನಿದ್ರಿಸಿದ್ದುದು ನಿಜವಾಗಿದ್ದರೂ ಇಂದಿರೆ ಸುಶೀಲೆಯ ಮಾತಿನ ನಡುವೆ ಬಾಯಿಹಾಕಿದುದು ವಿಷಯ ಬದಲಿಸಲೆಂದು. ಇಂದಿರೆಯ ವರ್ತನೆ ಅನಂತನಿಗೆ ಅರ್ಥವಾಗಲಿಲ್ಲ. ಪ್ರತ್ಯಕ್ಷವಾಗಿ ತನ್ನ ಪತ್ರಿಕೆಗೆ ಸಂಬಂಧಿಸಿದ ಯಾವ ವಿಚಾರವನ್ನೂ ತನ್ನ ಇದಿರು ಚರ್ಚಿಸಲು ಇಂದಿರೆ ಅನುಮಾನಿಸುವಂತಿತ್ತು. ಇದರಿಂದ ಕೆರಳಿದ ಸ್ವಾಭಿಮಾನ ಅದೇ ವಿಚಾರ ಮಾತು ಮುಂದುವರಿಸಲು ಇನ್ನಷ್ಟು ಪ್ರಚೋದನೆ ಕೊಟ್ಟಿತು.

"ಹೌದು, ಆ ಲೇಖನ ನಿಮಗೆ ಪ್ರಿಯವಾಗಿರಲೇಬೇಕು. ಇಂದು ಪಂಜಾಬಿನಲ್ಲಿ ನಡೆಯುತ್ತಿರುವ ಮಾರಣ ಹೋಮದ ಪ್ರತಿಕ್ರಿಯೆಗಳ ಸಂಪೂರ್ಣ ಮಾಹಿತಿ ಸಿಗಲು ಇನ್ನೂ ಸಮಯ ಬೇಕು. ಇದು ಬರೇ ಪೂರ್ವ ಪರಿಚಯವಷ್ಟೆ. ನಮ್ಮ ಸುತ್ತಮುತ್ತ ಕವಿದಿರುವ ಕತ್ತಲಿನ ಪರಿಣಾಮ ನಮ್ಮ ನಾಡಿನ ಮೇಲೆ ಎಷ್ಟಾಗಬಹುದೆಂದು ತೋರಿಸಿಕೊಡುವ ಒಂದು ಸಣ್ಣ ಪ್ರಯತ್ನ ಅಷ್ಟೆ. ನಮ್ಮ ಸ್ವಾತಂತ್ರ್ಯೋತ್ತರ ಕಣ್ಣೀರಿನ ಇತಿಹಾಸದ ಪೀಠಿಕಾ ಪ್ರಕರಣ. ಅದರಿಂದ ನಿಮಗೆ ದುಃಖವಾಯಿತೇನು ? ಆದರೆ ನೀವು ಈ ಗಲಭೆಯ ಸ್ಥಳಕ್ಕೆ ನಮಗಿಂತಲೂ ಸಮೀಪದಲ್ಲಿದ್ದೀರಿ. ದಿಲ್ಲಿಯಲ್ಲಿ ನೀವು ಕಾಣುವ ದುಃಖವನ್ನು ನಾವು ಮುಂಬಯಿಯಲ್ಲಿ ಬಹುಶಃ ಕಾಣುವಂತಿಲ್ಲ. ಕಾಣುವ ಆಸೆ ನಮಗಿಲ್ಲವೂ ಇಲ್ಲ. ಇಲ್ಲಿ ಬಂದಿರುವ, ಬರುತ್ತಿರುವ ಕರಾಚಿಯ ನಿರ್ವಾಸಿತರ ಪಾಡೇ ನಮಗೆ ದುಃಖಕ್ಕೆ ಸಾಕಷ್ಟು ಆಹಾರ ಒದಗಿಸಿದೆ. ಆದರೆ ಇದು ನಾಡಿಗೇ ಕವಿದಿರುವ ಕತ್ತಲೆ. ಬಾಪುವಿನಂಥ ಮಹಾನ್ ವ್ಯಕ್ತಿಗೆ ಸುತ್ತ ಕತ್ತಲು ಕಾಣುವಾಗ ನಮ್ಮಂಥವರ ಪಾಡೇನು ?"

ಇಂದಿರೆ ತದೇಕಚಿತ್ತಳಾಗಿ ಅನಂತನ ಮಾತುಗಳನ್ನು ಕೇಳುತ್ತಿದ್ದಳು. ಯಾವ ಸಂಕೋಚವೂ ಇಲ್ಲದೆ ಅನಂತನ ಮುಖವನ್ನು ನೋಡುತ್ತಿದ್ದಳು. ಅನಂತ ಮಾತನಾಡಿದ್ದುದು ಇಂದಿರೆಯ ಗಮನವನ್ನು ಸೆಳೆಯಲೆಂದಾದರೂ, ಮಾತನಾಡುತ್ತ ಹೋದಂತೆ, ತಾನು ಆರಿಸಿಕೊಂಡಿದ್ದ ವಿಷಯದಲ್ಲಿ ಪರವಶನಾಗುತ್ತಿದ್ದ.

"ಒಂದು ಉಪನ್ಯಾಸವನ್ನೇ ಆರಂಭಿಸಿಬಿಟ್ಟಿರಿ. ನನಗೆ ತಿಳಿದಿತ್ತು,

ನೀವು ಹೀಗೆ ಮಾಡುವಿರೆಂದು. ಆದರೆ ನಾನು ನಿಮ್ಮ ಲೇಖನದ ವಿಚಾರ ಮಾತನಾಡಿದುದು ಬೇರೆಯೇ ಉದ್ದೇಶದಿಂದ.” ಸುಶೀಲೆ ಹೇಳಿದಳು.

“ದಿಲ್ಲಿಯಲ್ಲಿ ಈ ವಿಚಾರ ಪರಿಹಾರದ, ದುಃಖಶಮನದ ಕೆಲಸ ನಡೆದೇ ಇದೆ. ಅದು ಇಂದಿರೆಗೆ ತಿಳಿದೂ ಇದೆ. ಅಲ್ಲಿಯ ಮುಖ್ಯ ಸ್ತ್ರೀಕಾರ್ಯ ಕರ್ತರಲ್ಲಿ ಕೆಲವರ ಪರಿಚಯ ಕೂಡ ಆಕೆಗಿದೆ. ಪಂಜಾಬಿಗೆ ಹೋಗಿರುವ ಸ್ವಯಂಸೇವಿಕೆಯರಲ್ಲಿ ನಾಲ್ಕೈದು ಮಂದಿಯಾದರೂ ಆಕೆಯ ಗೆಳತಿಯರೇ. ಹೀಗಿದ್ದೂ, ಆಕೆ ಐನೂರು ರೂಪಾಯಿಗಳ ಚೆಕ್ ಕಳಿಸಿ, ಇಂಥ ಅಭಾಗಿನಿಯರಿಗೆ ನೆರವು ನೀಡಿ ಎಂದು ಹೇಳಲು ನಿಮ್ಮ ಲೇಖನ ಬರಬೇಕಾಯಿತು— ಮುಂಬಯಿಯಿಂದ. ಇಂದುವಿನ ಮೇಲೆ ಆ ರೀತಿ ಪರಿಣಾಮ ಮಾಡಿದ ಲೇಖನ ನನ್ನ ಮೇಲೆ ತುಸುವಾದರೂ ಪರಿಣಾಮ ಮಾಡದೆ ಇರಬಹುದಿತ್ತೇ?”

ಇಂದಿರೆ ಸುಶೀಲೆಯ ಮಾತಿನ ನಡುವೆ ತಡೆದುದರ ಉದ್ದೇಶ ಅನಂತನಿಗೆ ಈಗ ಸ್ಪಷ್ಟವಾಯಿತು. ಇಂದಿರೆ ಮುಖ ತಗ್ಗಿಸಿ ಕುಳಿತಿದ್ದಳು. ಹಾಗೆ ಕುಳಿತುದರಲ್ಲೂ ಒಂದು ರೀತಿಯ ಗಾಂಭೀರ್ಯವಿತ್ತು. ತನ್ನ ಲೇಖನ ಈ ರೀತಿಯ ಪರಿಣಾಮ ಮಾಡಿರಬಹುದೇ ಎಂದು ಅನಂತ ಯೋಚಿಸಿದ. ಆದರೆ ಸುಶೀಲೆಯ ಮಾತನ್ನು ನಂಬದೆ ಇರುವಂತಿರಲಿಲ್ಲ. ಹಾಗೆಯೇ ರಾಜೀವನ ಮಾತು ನೆನಪಿಗೆ ಬಂತು. ತಲಪಾಡಿಯವರ ಮನೆಗೆ ಹೋಗುವುದು 'ಕಹಳೆ'ಯ ಎರಡು ಪುಕ್ಕಟೆ ಪ್ರತಿಗಳು. ಉದ್ದೇಶ ಎಷ್ಟೇ ಮಹತ್ವವಾದುದಿರಲಿ, ತಮ್ಮ ಪತ್ರಿಕೆಯಿಂದ ಸ್ಫೂರ್ತಿಗೊಂಡು ಕೊಟ್ಟ ನೆರವು ಐದುನೂರು ರೂಪಾಯಿಯದು. ಆದರೆ ಆ ಪತ್ರಿಕೆಯ ಅವಸ್ಥೆ ನಿತ್ಯದಾರಿದ್ರ್ಯದ ನೋವಿನ ಅವಸ್ಥೆ.

ಹೆಚ್ಚಿನ ಮಹಾನ ಅಪಾರ್ಥಕ್ಕೆಡೆಕೊಡಬಹುದೆಂದು ಅನಂತ ಮಾತನಾಡಿದ:

“ಅಪ್ರತ್ಯಕ್ಷರೀತಿಯಲ್ಲಾದರೂ ಅಂಥ ಭಗಿನಿಯರ ನೆರವಿಗೆ ಬಂದೆವಲ್ಲ; ನಮಗೆ ಅದೇ ಸಂತೋಷ.”

ಅನಂತನ ಮಾತಿನ ಅರ್ಥ ಸರಿಯಾಗಿ ಆಗದೆ ಇಂದಿರೆ ತಲೆಯೆತ್ತಿ ನೋಡಿದಳು. ಅವಳ ಮುಖದಲ್ಲಿ ನಗು ಮೂಡಿತ್ತು. ಅನಂತನನ್ನು ಇದು ಇನ್ನಷ್ಟು ಗಲಿಬಲಿಯಲ್ಲಿ ಕೆಡವಿತು. ಅವಳು ತನ್ನನ್ನು ಹಂಗಿಸಲೆಂದೇ ನಗುತ್ತಿರುವಳೆಂದು ಭಾವಿಸಿದ ಅನಂತ ಇನ್ನಷ್ಟು ಕೆಣಕಲೆಂದು, ಒಂದು ಮಾತು ಹೇಳಿದ:

"ಪ್ರತ್ಯಕ್ಷವಾಗಿ, ಒಂದು ಸಂಸ್ಥೆಯಾಗಿ, ನಮ್ಮ ಪತ್ರಿಕೆಯು ಸಹಾಯ ಮಾಡಬೇಕಿತ್ತು. ಆದರದು ಸಾಧ್ಯವಿಲ್ಲ. ನಮ್ಮ ಇರುವಿಕೆಯೇ ದಿನನಿತ್ಯದ ಕಣ್ಣೀರಿನ ಪ್ರಶ್ನೆ. ಆದರೆ ಅಪ್ರತ್ಯಕ್ಷವಾಗಿಯಾದರೂ ಹೀಗೆ ಸಹಾಯಮಾಡುತ್ತಿರುವೆವಾದ ಕಾರಣ, ನಮ್ಮ ಉದ್ದೇಶ ತುಸುಮಟ್ಟಿಗೆ ಸಾಧಿಸಿದಂತಾಗಿದೆ ಎಂದು ಹೇಳಬಹುದೇನೋ. ಆದರೂ ಮುಂಬಯಿಯ ಕನ್ನಡಿಗರು ಚೆನ್ನಾಗಿ ಕಣ್ಣು ತೆರೆಯಲು ಇಚ್ಛಿಸುವುದಿಲ್ಲವಾದರೆ, ನಮ್ಮ ಇರುವಿಕೆ ಇನ್ನು ಎಷ್ಟು ದಿನಗಳದೋ?"

"ನೀವು ಸಾಬರಮತಿಯಲ್ಲಾಗಲೀ, ಸೇವಾಗ್ರಾಮದಲ್ಲಾಗಲೀ ಯಾವಾಗಲಾದರೂ ಇದ್ದಿರೇನು?" ಇಂದಿರೆ ಅನಂತನನ್ನುದ್ದೇಶಿಸಿ ಕೇಳಿದಳು.

"ಆ ಭಾಗ್ಯ ನನಗೆ ಸಿಗಲಿಲ್ಲ."

"ಬಾಪುವನ್ನು ನೋಡಿರಬಹುದಲ್ಲ?"

"ಮುಂಬಯಿಯಲ್ಲೇ—ಪುಣೆಯಲ್ಲಿ ಪರ್ಣಕುಟಿಯಲ್ಲಿ ಕಳೆದ ಒಂದೆರಡು ದಿನಗಳನ್ನು ಬಿಟ್ಟರೆ."

"ಅಂತೂ ತೀರ ಸಮೀಪದ ಒಡನಾಟ ಸಿಕ್ಕಿರಲಿಲ್ಲ."

"ಇಲ್ಲ. ನಿಮ್ಮಷ್ಟು ಪುಣ್ಯ ನಾನು ಮಾಡಿಲ್ಲ."

"ಇಲ್ಲಿ ಪುಣ್ಯದ ಮಾತು ಉದ್ಭವಿಸುವುದಿಲ್ಲ, ನಾನು ಯಾಕೆ ಹೀಗೆ ಹೇಳಿದೆ ಗೊತ್ತೇ? ಬಾಪುವಿನ ವರ್ಚಸ್ಸಿನಡಿ ಬಂದ ವ್ಯಕ್ತಿಗೆ ದುಃಖ ವೈಯಕ್ತಿಕವಾದುವಿರಲಿ, ಸಾಮಾಜಿಕವಾದುದಿರಲಿ, ಅದು ಧೃತಿಗೆಡಿಸುವುದಿಲ್ಲ. ಉದ್ದೇಶ ಪವಿತ್ರವಾದುದಾದರೆ, ಮನಸ್ಸು ನಿರ್ಮಲವಿರುವುದಾದರೆ, ಅಂಥ ದುಃಖ ಹೋರಾಟದ ಹಾದಿಯಲ್ಲಿ ಒಂದು ಕ್ಷುದ್ರ ತಡೆ ಅಷ್ಟೆ—ಹೋರಾಟದ ಚೇತನವನ್ನು ಇನ್ನಷ್ಟು ಪರಿಶುದ್ಧಗೊಳಿಸುವ ತಡೆ."

ಅನಂತ ಸುಮ್ಮನಾದ. ತಮ್ಮ ಪತ್ರಿಕೆಗಾಗಿ ತಾವು ಪಡುತ್ತಿರುವ ಕಷ್ಟದ ಕುರಿತಾಗಿಯೇ ಇಂದಿರೆ ಈ ಮಾತು ಹೇಳುತ್ತಿರುವಳೆಂಬುದು ಆತನಿಗೆ ತಿಳಿದಿತ್ತು. ಆದರೂ ವ್ಯವಹಾರದ ನೋವಿನ ಮುಂದೆ ಈ ಆದರ್ಶ ಎಷ್ಟು ಕಷ್ಟವಾದುದು ಎಂಬ ಚಿಂತೆಯನ್ನು ಆತ ಬದಿಗಿರಿಸಲು ಸಮರ್ಥನಾಗಲಿಲ್ಲ.

"ಒಂದೆರಡು ಲಕ್ಷ ಜನ ಕನ್ನಡಿಗರಿಗೆ ಬೆಳಕು ತೋರಿಸುವ ಉದಾತ್ತ ಉದ್ದೇಶ ನಿಮಗಿದೆಯಲ್ಲ. ನಿಮ್ಮ ಕಾರ್ಯಕ್ಷೇತ್ರವನ್ನು ನೀವೇ ನಿರ್ಮಿಸಿಕೊಂಡು, ಹೊಸ ಬದುಕಿಗಾಗಿ, ಹೊಸ ಸಮಾಜಕ್ಕಾಗಿ ಪ್ರಯತ್ನಿಸುತ್ತಿದ್ದೀ

ರಲ್ಲ. ಹಾಗಿದ್ದರೆ, ಬರೇ ಆರ್ಥಿಕ ತಾಪತ್ರಯದ ನೋವು ಕನ್ನಡಿಗರ ಮೇಲೆ ರೊಚ್ಚಿಗೇಳುವಷ್ಟು ತೀಕ್ಷ್ಣವಾಗಬಾರದು."

ಅನಂತನಿಗೆ ತನ್ನ ವರ್ತನೆಯ ಬಗ್ಗೆ ನಾಚಿಕೆಯಾಯಿತು. ಕೊನೆಗೆ ಒಂದು ಆಶ್ಚರ್ಯವೂ ಮನಸ್ಸಿನಲ್ಲಿ ಮೂಡಿತು: 'ಸೋಮಯಾಜಿಗಳು ಹೇಳಿದ್ದ, ರಾಜೀವ ಸೂಚಿಸಿದ್ದ, ತಮ್ಮ ಪತ್ರಿಕೆಯ ಉದ್ದೇಶವನ್ನು ಈ ಅಪರಿಚಿತ ವ್ಯಕ್ತಿ ಹೇಗೆ ವಿವರಿಸುತ್ತಿದೆ? ಇಂದಿರೆಗೆ ಇದೆಲ್ಲ ತಿಳಿದ ಬಗೆ ಹೇಗೆ?'

ಪುಕ್ಕಟೆ ಎರಡು ಪ್ರತಿ 'ಕಹಳೆ' ತಲಪಾಡಿಯವರಲ್ಲಿಗೆ ಕೊಟ್ಟು ಬಂದೆನೆಂದು ರಾಜೀವ ಸಿಟ್ಟಿನಿಂದ ನುಡಿದಾಗ, ಸೋಮಯಾಜಿಗಳು ಗದ್ದರಿಸಿದ ಸನ್ನಿವೇಶ ಕಣ್ಣಮುಂದೆ ಬಂತು. ಹಿಂದೊಮ್ಮೆ ಸೋಮಯಾಜಿಗಳು ಹೇಳಿದ್ದರು: 'ಒಂದು ವ್ಯಕ್ತಿ ಕೈತುಂಬ ನೆರವು ಕೊಡುತ್ತಿದೆ, ಅನಂತಾ. ಅದು ಯಾರೆಂದು ಈಗ ಕೇಳಬೇಡ. ಆದರೆ ಅವರ ಸಹಾಯವನ್ನು ಎಷ್ಟೆಂದು ಸ್ವೀಕರಿಸಬಹುದೆಂದು ನನಗೆ ಬೇಸರವಾಗಿದೆ.'

ಆ ವ್ಯಕ್ತಿ ತಲಪಾಡಿಯವರಿರಬಹುದೆ?

ಎಷ್ಟು ಕ್ಷುದ್ರ ಆಲೋಚನೆಗಳನ್ನೆಲ್ಲ ತಲೆಯಲ್ಲಿ ತುಂಬಿಕೊಂಡು ಏನೆಲ್ಲ ಮಾತನಾಡಿದೆನೆಂದು ಅನಂತ ನೊಂದುಕೊಂಡ. ಇವನ ಮನಸ್ಸಿನ ಆಲೋಚನೆಯನ್ನು ಗಮನಿಸಿಯೋ ಎಂಬಂತೆ ಇಂದಿರೆ ಹೇಳಿದಳು:

"ಒಮ್ಮೆ ನಮ್ಮಲ್ಲಿಗೆ ಬನ್ನಿ, ಸೋಮಯಾಜಿಗಳ ಜೊತೆಗೆ. ಅವರಿಗೆ ತಂದೆಯವರ ಪರಿಚಯವಿದೆ. ಅವರು ನಿಮ್ಮ ಸ್ನೇಹವನ್ನು ಸಂಪಾದಿಸಲು ತುಂಬ ಆಶಿಸುತ್ತಿದ್ದಾರೆ. ನಿಮ್ಮ ಪತ್ರಿಕೆಯ ಕುರಿತು ಅವರಿಗೂ, ನನ್ನಷ್ಟು ಅಲ್ಲವಾದರೂ, ತುಂಬ ಅಭಿಮಾನವಿದೆ."

"ನಿಮ್ಮ ತಂದೆಯವರ ಪರಿಚಯದ ವಿಚಾರ ಸೋಮಯಾಜಿಗಳು ಏನನ್ನೂ ನನ್ನೊಡನೆ ಹೇಳಿಲ್ಲ. ಇಲ್ಲವಾದಲ್ಲಿ ನಾನು ಈ ಮೊದಲೇ ನಿಮ್ಮಲ್ಲಿಗೆ ಬರುತ್ತಿದ್ದೆ."

ಇಂದಿರೆ ಬರೇ ನಕ್ಕಳು. ಅನಂತನ ಕುತೂಹಲದ ವಿಚಾರ ಅತಿಯಾದ ಸ್ವಾಗತವನ್ನು ಆಕೆ ಮಾತಿನಲ್ಲಿ ಪ್ರಕಟಿಸಲಿಲ್ಲ. ಪ್ರಕಟಿಸುವ ಆಸೆ ಆಕೆಗಿದ್ದಂತೆ ಕಂಡುಬರಲಿಲ್ಲ.

ಭಾರತಿ ಆಗಲೇ ಮಗುವನ್ನು ಕೆಳಗಿಳಿಸಿ, ಸಂಜೆಯ ಕಾಫಿಯ ಸಿದ್ಧತೆಗೆಂದು ಎದ್ದಿದ್ದಳು. ಇಂದಿರೆ ಮಾತು ನಿಲ್ಲಿಸಿದಾಗ ಸುಶೀಲೆ ಕೇಳಿದಳು:

"ಮುಗಿಯಿತೇನು ?"

"ಏನು ?"

"ಅಪಹೃತ ಭಗಿನಿಯರ ಕುರಿತಾದ ಚರ್ಚೆ."

ಇಂದಿರೆ ನಗತೊಡಗಿದಾಗ ಸುಶೀಲೆಯಿಂದ ಇನ್ನೊಂದು ಮಾತು ಬಂತು :

"ಇನ್ನು ಆಗಸ್ಟ್ ಚಳವಳಿ ಆರಂಭವಾಗುವುದೇನು ?"

ನಗುತ್ತಿದ್ದ ಇಂದಿರೆ ಒಮ್ಮೆ ಬೆಚ್ಚಿಬಿದ್ದಳು. ತಾನು ಏಕಾಂತದಲ್ಲಿ ಪೂಜಿಸುತ್ತಿದ್ದಾಗ ಯಾರೋ ಅಡ್ಡಬಂದು, ತನ್ನ ಏಕಾಂತತೆಯನ್ನು ಭಂಗ ಪಡಿಸುವಂತೆ, ಹೃದಯ ನೆಚ್ಚಿಕೊಂಡ ಒಂದು ಸ್ಮೃತಿಯನ್ನು ಯಾರೋ ಅಪಮಾನಗೊಳಿಸಿದಂತೆ, ಅತೀವ ವೇದನೆಯಾಯಿತು. ದುರದೃಷ್ಟವಶಾತ್, ಸುಶೀಲೆ ಮಾತನಾಡಿದಾಗ ಅನಂತ ಇಂದಿರೆಯ ಮುಖಭಾವವನ್ನು ಗಮನಿಸು ತ್ತಿದ್ದಿಲ್ಲ. ಸುಶೀಲೆಗೆ ಮಾತಿಗೆ ಪುಷ್ಟಿ ಕೊಡಲೆಂದು, ತಾನೂ ಕೇಳಿದ :

"ಆಗಸ್ಟ್ ಚಳವಳದ ಇತಿಹಾಸವನ್ನು ಅವರಿಂದ ಪುನಃ ಕೇಳುವ ಆಸೆಯಾಗಿದೆಯೇನು ?"

ಇಂದಿರೆಯ ಹೃದಯದಲ್ಲಿ ಒಂದು ವಿಕಲ್ಪ ಹೋರಾಟ ಆರಂಭ ವಾಯಿತು. ಶ್ವಾಸ ನಿಶ್ವಾಸ ಜೋರಾಗುತ್ತಿತ್ತು. ಮುಖವೆತ್ತಿ ಯಾರನ್ನೂ ನೋಡುವುದು ಸಾಧ್ಯವಾಗಲಿಲ್ಲ. ಅಲ್ಲಿ ಕುಳಿತಿರಲು ಸಾಧ್ಯವಾಗದೆ, ಎದ್ದು ಬಾಲ್ಕನಿಗೆ ಹೋಗಿ ನಿಂತಳು. ಇದರಿಂದ ಅನಂತನಿಗೆ ಅಪಮಾನವಾದಂತಾ ಗುವುದು ಎಂಬುದನ್ನೂ ಆಕೆ ಗಮನಿಸಲಿಲ್ಲ.

ಸುಶೀಲೆಗೆ ಒಂದು ಕ್ಷಣ ಆಶ್ಚರ್ಯವಾಯಿತು. ಆದರೆ ಆಕೆಯ ಪ್ರಸಂಗಾವಧಾನ ಇಲ್ಲಿ ಪ್ರಯೋಜನಕ್ಕೆ ಬಂತು. "ಒಂದೈದು ನಿಮಿಷ ನಿಂತು ಬಾ, ಇಂದೂ....ಆಮೇಲೆ ಮನಸ್ಸಿದ್ದರೆ ಮಾತನಾಡೋಣ, ಇಲ್ಲವಾದರೆ ಕಾಫಿ ಕುಡಿದು ಹೊರಡೋಣ" ಎಂದಳು.

ಅಪಮಾನಿತ ಅನಂತ ತಾನು ಹಾಗೆ ಕೇಳಿದುದು ಅನುಚಿತವಾಯಿತೇ ಎಂದು ತನ್ನನ್ನು ತಾನೇ ಸಾವಿರ ಬಾರಿ ಶಪಿಸಿಕೊಂಡ. ತಾರುಣ್ಯದ ಹೊಸ್ತಿ ಲಲ್ಲಿ, ಪ್ರೀತಿಯ ಗಂಡನನ್ನು ಬಲಿಕೊಡಬೇಕಾಗಿ ಬಂದ ಆ ಮಹಾ ಹೋರಾ ಟದ ಇತಿಹಾಸವನ್ನು ಈ ಸಂದರ್ಭದಲ್ಲಿ ಕೇಳಿ ತಪ್ಪು ಮಾಡಿದೆ, ಎಂದು ತೋರಿತು. ತನ್ನ ತಪ್ಪನ್ನು ತಿದ್ದುವ ಉದ್ದೇಶದಿಂದ ಭಾರತಿಯನ್ನು ಕರೆದು ಹೇಳಿದ :

"ಅವರಿಗೆ ಒಂದು ಸಮಾಧಾನದ ಮಾತು ಹೇಳು, ಭಾರೀ....ಒಂದು ದುಡುಕಿನ ಪ್ರಶ್ನೆ ಕೇಳಿ ಮನಸ್ಸು ನೋಯಿಸಿದೆನೆಂದು ಕಾಣುತ್ತದೆ."

ಇವನ ಮಾತು ಕೇಳಿಯೇ ಇಂದಿರೆ ಹಿಂದಿರುಗಿದಳು.

"ಛೆ! ಛೆ! ನೀವು ಹಾಗೆಲ್ಲ ತಿಳಿದುಕೊಳ್ಳಬಾರದು. ನಿಮ್ಮ ಮಾತಿನಿಂದ ಬೇಸರವಾಗಿಲ್ಲ. ದಯಮಾಡಿ ಹಾಗೆ ತಿಳಿದುಕೊಳ್ಳಬೇಡಿ" ಎಂದವಳೇ ಹೋಗಿ, ಮಲಗಿದ್ದ ಸುಭದ್ರೆಯನ್ನೆತ್ತಿಕೊಂಡು, ಆಕೆಯ ಬೆನ್ನು ತಟ್ಟುತ್ತ ಆಡಿಸತೊಡಗಿದಳು. ಮಗು ಇನ್ನೂ ನಿದ್ರಿಸಿತ್ತು. ಅದನ್ನು ಎತ್ತಿಕೊಂಡುದು ಆಕೆ ತನ್ನ ಮನಸ್ಸಿನ ಕಳವಳವನ್ನು ಸ್ತಿಮಿತಕ್ಕೆ ತರಲೆಂದು. ಈ ಹುಚ್ಚು ವರ್ತನೆಯ ಅರ್ಥ ಅಲ್ಲಿ ನೆರದಿದ್ದವರಿಗೆಲ್ಲ ಆಗಿರಬೇಕು.

ಅನಂತ ಮತ್ತೆ ಮಾತನಾಡಲಿಲ್ಲ.

ಬೆಳಗಿನ ನಗು ಮಾತ್ರ ಮತ್ತೆ ಕಾಣಿಸಿಕೊಳ್ಳಲಿಲ್ಲ. ಸುಶೀಲೆ ಪರಿಸ್ಥಿತಿಯನ್ನು ಸುಧಾರಿಸಲು ತುಂಬ ಪ್ರಯತ್ನಿಸಿದರೂ ಅದು ಅಷ್ಟೇನೂ ಪರಿಣಾಮಕಾರಿಯಾಗಲಿಲ್ಲ.

ಸಂಜೆ ಐದು ಘಂಟೆಗೆ ವಿಶ್ವನಾಥರಾಯರು ಹೇಳಿದಂತೆಯೇ ಬಂದರು. ಬಂದವರೇ ಹೊರಡುವ ಅವಸರ ತೋರಿಸಿದರು. ಹೊಸ ಗೊಂಬೆ ತಂದುಕೊಟ್ಟ ಅತ್ತೆ ಭಾರತಿಯನ್ನು ಬಿಟ್ಟು ತೆರಳಲು ಸುಭದ್ರೆಗೆ ಮನಸ್ಸಿರಲಿಲ್ಲವಾದರೂ ತಂದೆಯ ಬಲವಂತ ಜೋರಾದುವರಿಂದ ಹೊರಡಬೇಕಾಗಿ ಬಂತು.

ಹೊರಡುವ ಮುಂಚೆ ಸುಶೀಲೆ ಭಾರತಿಯನ್ನು ಕರೆದು ಹೇಳಿದಳು: "ಒಂದು ಹದಿನೈದು ದಿನಗಳ ಮಾತಿಗಾದರೂ ದಿಲ್ಲಿಗೆ ಬನ್ನಿ. ಆಗ್ರಾದಲ್ಲಿ ತಾಜಮಹಾಲ್ ನೋಡುವುದು ಬೇಡವೆ? ಆದಷ್ಟು ಬೇಗ ಬಿಡುವು ಮಾಡಿಕೊಂಡು ಬರುವಂತೆ ಹೇಳು ನಿನ್ನ ಗಂಡನಿಗೆ" ಎಂದು.

ಭಾರತಿಯ ಉತ್ತರ ಬರೇ ನಗುವಾಗಿತ್ತು.

ಇಂದಿರೆ ಹೊರಟು ನಿಂತಾಗ ಹೇಳಿದುದು ಇಷ್ಟೆ: "ಮನೆಯ ಕಡೆ ಬರುವಿರಾ ಯಾವಾಗಾದರೊಮ್ಮೆ? ಭಾರತಿಯನ್ನು ಬಿಟ್ಟು ಬರಬೇಡಿ" ಎಂದು

ಎಲ್ಲ ಕಾರಿನಲ್ಲಿ ಕುಳಿತಮೇಲೆ, ಕಾರು ಮರೆಯಾಗುವ ವರೆಗೆ ಅನಂತ ಭಾರತಿಯರು ಬಾಲ್ಕನಿಯಲ್ಲಿ ನಿಂತು ನೋಡುತ್ತಿದ್ದರು. ಕಾರು ಮರೆಯಾದರೂ ಅನಂತನ ದೃಷ್ಟಿ ಮಾತ್ರ ಕದಲಲಿಲ್ಲ.

ಹೊರಗೆ ಮುಗಿಲೇರುತ್ತಿತ್ತು. ಮಳೆ ಬೀಳುವ ಲಕ್ಷಣ. ಮುಂಬಯಿಯಲ್ಲಿ ಆ ವರ್ಷದ ಕೊನೆಯ ಮಳೆಗಳು.

ಹನಿ ಬೀಳತೊಡಗಿದಾಗ ಅನಂತ ಒಳಗೆ ಬಂದ.

೧೯

ತುಂಬಿದ್ದ ಮನೆ ಬರಿದಾದುದು ಕಂಡು ಭಾರತಿಯ ಮನಸ್ಸಿಗೆ 'ಬಿಕೊ' ಎನಿಸಿತು. ಒಂದು ವಾರವಿಡೀ ಸ್ವಾಗತದ ಸಿದ್ಧತೆ ನಡೆಸಿದ್ದಳು. ಒಂದು ದಿನವಿಡೀ ಸಂಭ್ರಮವಲ್ಲಿಯೇ ಕಳೆದಿದ್ದಳು. ಈಗ ಅದು ಮುಗಿದಾಗ ಮನೆ ತುಂಬ ದುಃಖ ಮುಸುಕಿದಂತೆ ಆಕೆಗೆ ಕಂಡುಬಂತು.

ಪುಟ್ಟ ಸುಭದ್ರೆಯನ್ನು ಇನ್ನು ಕಾಣುವುದು ಯಾವಾಗಲೋ!

ಒಳಗೆ ಬಂದು ಬೇಸರದಿಂದ ಮಂಚದ ಮೇಲೆ ಮಲಗಿದಾಕೆಗೆ ಗಂಡ ಒಳಗೆ ಬಂದುದು ತಿಳಿಯಲಿಲ್ಲ. ಆತ ಮೇಜಿನ ಮೇಲೆ ತಲೆಯಿರಿಸಿ ಏನನ್ನೋ ಯೋಚಿಸುತ್ತ ಅರ್ಧ ತಾಸು ಮಲಗಿದ್ದುದೂ ತಿಳಿಯಲಿಲ್ಲ. ಕೊನೆಗೆ ಏನನ್ನೋ ನಿರ್ಧರಿಸಿ ಶರಟು ಸಿಕ್ಕಿಸಿಕೊಂಡು ಹೊರಟುನಿಂತು, "ಭಾರೀ........" ಎಂದು ಕರೆದಾಗ ಮಾತ್ರ ಆಕೆಗೆ ಎಚ್ಚರವಾಯಿತು.

"ನಾನು ಪ್ರೆಸ್ಸಿನ ತನಕ ಹೋಗಿಬರುತ್ತೇನೆ. ರಾತ್ರಿ ನನಗಾಗಿ ಕಾದಿರಬೇಡ. ನಾನು ಊಟ ಮಾಡುವುದಿಲ್ಲ. ಹಸಿವಿಲ್ಲ."

ಉತ್ತರದ ದಾರಿ ಕಾಯದೆ ಅನಂತ ಹೊರಟುಹೋದ.

ಭಾರತಿ ಉತ್ತರ ಹೇಳಲು ಬಯಸಲೂ ಇಲ್ಲ. ಬರಿದಾದ ಮನೆಯ ಏಕಾಂತತೆಯ ನೋವನ್ನನುಭವಿಸುತ್ತಿದ್ದ ಆ ಜೀವ ಗಂಡ ಹೀಗೆ ಹೊರಟು ನಿಂತಾಗ ತಳಮಳಗೊಂಡಿತು. ಆದರೆ ಆಶ್ಚರ್ಯವಾಗಲಿಲ್ಲ. ಅನಂತನ ಈ ರೀತಿಯ ವರ್ತನೆ ಸ್ವಾಭಾವಿಕವಾದುದಾಗಿತ್ತು. ಆದರೆ ತನಗೇಕೆ ಇಂದು ಇಷ್ಟು ದುಃಖ ಬರುತ್ತಿದೆಯೆಂದು ಭಾರತಿಗೆ ತಿಳಿಯದೆ ಹೋಯಿತು. ಕಣ್ಣೀರು ತುಂಬುತ್ತಿತ್ತು. ಬಿಕ್ಕಳಿಕೆ ಬರುತ್ತಿತ್ತು. ಅದುಮಿ ಹಿಡಿದಿದ್ದ ದಿಂಬು ಒದ್ದೆಯಾಗುತ್ತಿತ್ತು.

ಭಾರತಿ ಸುಶೀಲೆಯನ್ನು ಬಾರಿಬಾರಿಗೂ ನೆನೆಸಿಕೊಂಡಳು. ಪಾರ್ವತಿಯ ನೆನಪು ತಂದುಕೊಡುವ ಸುಶೀಲೆ. ಚಿರಂತನ ಉತ್ಸಾಹದ ಪ್ರತಿಮೂರ್ತಿ.

ಸುಖಮಯ ಸಂಸಾರಜೀವನ ಸಾಗಿಸುವ ಗೃಹಿಣಿ. ತುಂಬ ಹಣ ಸಂಪಾದಿಸಿ ತರುವ ಗಂಡ. ಮುದ್ದಿನ ಮಗು.

ತನಗೂ ಒಂದು ಮಗುವನ್ನಾಡಿಸುವ ಭಾಗ್ಯ ದೊರಕಿದ್ದರೆ?

ತನ್ನ ಏಕಾಂತತೆಯ ಸಹನಾತೀತ ವೇದನೆ ಮೂಕರೋದನದಲ್ಲಿ ಪರಿವರ್ತನೆ ಹೊಂದುತ್ತಿತ್ತು. ಹೊರಗೆ ಮಳೆ ಬರುತ್ತಿದ್ದಂತೆಯೇ ಒಳಗೆ ಭಾರತಿ ಅಳುತ್ತಿದ್ದಳು. ತಮ್ಮ ಸದಾನಂದನಾದರೂ ಜೊತೆಗಿದ್ದಿದ್ದರೆ! ಮೈದುನ ನರಹರಿಯಾದರೂ ಇಲ್ಲಿದ್ದಿದ್ದರೆ! ಪಟ್ಟು ತೀರಿಕೊಳ್ಳದೆ ಅವನ ಆರೈಕೆಯನ್ನು ಮುಂಬಯಿಯಲ್ಲಾದರೂ ಮಾಡುವಂತಾಗಿದ್ದರೆ!

ಬಳಿಯಲ್ಲಿ ಯಾರೂ ಇಲ್ಲ. ಗಂಡನ ಸಹವಾಸದಲ್ಲಿ ತನ್ನನ್ನು ತಾನೇ ಮರೆಯುವೆನೆಂದು ಇರಿಸಿಕೊಂಡಿದ್ದ ನೂರಾರು ಕನಸುಗಳಲ್ಲಿ ಎಷ್ಟು ನನಸಾಗಿವೆ?

'ಇಂದೇಕೆ ಅವರು ನನ್ನನ್ನು ಬಿಟ್ಟುಹೋದರು?' ಎಂದು ಭಾರತಿ ತನ್ನ ಮನಸ್ಸಿನ ಕಳವಳವನ್ನು ಕೊನೆಗೊಳಿಸಲು ತನ್ನನ್ನೇ ತಾನು ಪ್ರಶ್ನಿಸಿ ಕೊಂಡಳು. ಗಂಡನ ವರ್ತನೆಯ ಕುರಿತು ಯಾಕ್ಕೊದೋ ಒಂದು ರೀತಿಯ ಜಿಗುಪ್ಸೆ ತಲೆದೋರಿತು.

ಮನಸ್ಸಿನ ಕಳವಳವನ್ನು ಕಡಿಮೆ ಮಾಡಿಕೊಳ್ಳುವೆನೆಂದು ಭಾರತಿ, ಬೆಳಿಗ್ಗೆ ಬಂದಿದ್ದ, ಓದನೆಯೇ ಉಳಿದಿದ್ದ ಎರಡು ಪತ್ರಗಳನ್ನು ತಂದು ಓದಲಾರಂಭಿಸಿದಳು.

ಒಂದು ತಂಗಿ ಸುನಂದೆಯದು; ಇನ್ನೊಂದು ಅತ್ತಿಗೆ ಪಾರ್ವತಿಯದು.

ಅತ್ತಿಗೆಯ ಕಾಗದವನ್ನು ಭಾರತಿ ಮೊದಲು ಓದಿಕೊಂಡಳು. ಪಾರ್ವತಿಯ ಕಾಗದದಲ್ಲಿ, ಅಂಥ ಆಶಾದೇವತೆಯ ಕಾಗದದಲ್ಲಿ ಇಂದು ತುಂಬಿದ್ದುದು ದುಃಖ. ತೀರಿಹೋದ ಮಗುವಿಗಾಗಿ ಕೊರಗು, ಆರೋಗ್ಯ ಸರಿಯಿಲ್ಲದುದರ ಚಿಂತೆ, ಗಂಡನ ಬಡತನದಿಂದ ಈ ವಿಚಾರ ಸಹಜವಾಗಿಯೇ ಉಂಟಾಗಿದ್ದ ವಿಷಮ ಪರಿಣಾಮಗಳು, ತಂದೆಯ ಸಿಟ್ಟು, ತಾಯಿಯ ದುಃಖ, ಗೋವಿಂದನ ನೋವು, ನರಹರಿಯ ಪರಾಜಯ—

ಭಾರತಿ ಆ ಕಾಗದವನ್ನು ಹಾಗೆಯೇ ಬಿಟ್ಟು ಸುನಂದೆಯ ಕಾಗದವನ್ನು ಓದಿಕೊಂಡಳು:

'ಕ್ರಿಸ್‌ಮಸ್ ರಜೆಗೆ ಮುಂಬಯಿಗೆ ಬರುತ್ತೇನೆ. ನೀನು 'ಬಾ'

ಎಂದು ಕರೆಯುವಿದ್ದರೂ ನೋಡುವ ಆಸೆ ಬಹಳವಾಗಿದೆ. ಕೋರ್ಟಿಗೆ ರಜೆ ಇದೆಯಲ್ಲ. ಖಂಡಿತ ಬರುತ್ತೇನೆ. ಬರುವುದು ಮಾತ್ರ ನಾವಿಬ್ಬರೇ.'

ಆ ಕ್ಷಣದಲ್ಲಿ, ಆ ಸಂದರ್ಭದಲ್ಲಿ ತನಗೆ ಈ ಸುದ್ದಿ ಸಂತೋಷವನ್ನು ಕೊಡುತ್ತಿದೆಯೋ ಕಳವಳನನ್ನು ಕೊಡುತ್ತಿದೆಯೋ ಎಂದು ಭಾರತಿಗೆ ತಿಳಿಯು ಲಿಲ್ಲ. ಅಕ್ಕನ ಮನೆಗೆ ತಂಗಿ ಅಗತ್ಯ ಬರಬೇಕು. ಹೊಸ ದಂಪತಿಗಳನ್ನು ತುಂಬ ಆದರದಿಂದ ಸ್ವಾಗತಿಸಬೇಕು. ಇವೆಲ್ಲ ನಿಜ. ಆದರೆ ತನ್ನ ಗಂಡ ಏನು ಹೇಳಬಹುದು, ಎಂಬುದು ಭಾರತಿಗೆ ತಿಳಿಯದ ವಿಚಾರವಾಗಿತ್ತು.

ತಾನು ಸಿಲುಕಿದ್ದ ಪರಿಸ್ಥಿತಿಯಲ್ಲಿ, ಭಾರತಿಗೆ ಜಗತ್ತಿನಲ್ಲಿ ಎರಡೇ ಸುಖ ಜೀವಿಗಳಿದ್ದಂತೆ ಕಂಡಿತು : ಒಂದು ಸುಶೀಲೆ—ಇನ್ನೊಂದು ತಂಗಿ ಸುನಂದೆ.

ಹೀಗೆ ಯೋಚಿಸುತ್ತ ನಿದ್ದೆಹೋದ ಭಾರತಿಯನ್ನು ಅನಂತ ಪುನಃ ಬಂದು ಎಚ್ಚರಿಸಬೇಕಾಗಿ ಬಂತು :

"ಮಲಗಿಯೇ ಇದ್ದೀಯೇನೇ ? ಊಟ ಕೂಡ ಮಾಡಿಲ್ಲವೇನು ?"

"ಹಸಿವಿಲ್ಲ." ಗಂಡನ ಮಾತನ್ನೇ ಭಾರತಿ ಹಿಂದಿರುಗಿಸಿದಳು. ಏಕೋ ಆ ಮಾತಿನ ಹಿಂದಿದ್ದ ಅಪಾರ ವೇದನೆ ಅನಂತನನ್ನು ಎಚ್ಚರಿಸಿತು. ಹೆಂಡತಿಯ ಬಾಡಿದ ಮೊಗ, ಅತ್ತು ಬತ್ತಿದ್ದ ಕಣ್ಣು, ಇವುಗಳನ್ನು ನೋಡಿದ ಅನಂತ, ಭಾರತಿ ಸಂಜೆ ಯಾವ ರೀತಿ ಸಮಯ ಕಳೆದಿದ್ದಳೆಂಬುದನ್ನು ಊಹಿಸಿಕೊಂಡು ಆಕೆಯನ್ನು ರಮಿಸತೊಡಗಿದ.

ಗಂಡನ ಸಂತಯಿಸುವಿಕೆಯಿಂದ ಭಾರತಿ ಚೇತರಿಸಿಕೊಂಡಳು. ಆತನ ಒತ್ತಾಯಕ್ಕೆ ಜೊತೆಗೇ ಕುಳಿತು ಊಟ ಮಾಡಿದಳು. ಹೀಗೆಯೇ ಮಾತು ಬಂದಾಗ ಮುಂಜಾನೆ ಬಂದಿದ್ದ ಎರಡು ಕಾಗದಗಳ ವಿಚಾರ ಹೇಳಿದಳು.

"ಸುನಂದೆ ಬರುತ್ತಾಳೆಯೆ ? ಜೊತೆಗೆ ವಕೀಲರು ಬರುತ್ತಾರೆ ಹಾಗಾ ದರೆ. ಅವರಿರುವ ಎಂಟು ದಿನಗಳ ಮಟ್ಟಿಗಾದರೂ ತೋರಿಕೆಯ ಸಿರಿವಂತಿಕೆ ತೋರಿಸಬೇಕಾಗುವುದಲ್ಲ, ಭಾರೀ. ಅತ್ತಿತ್ತ ಓಡಾಟಕ್ಕೆ ಇನ್ನೊಂದೈವತ್ತು ರೂಪಾಯಿ ಖರ್ಚು ಬೇರೆ. ಇರಲಿ. ಹೇಗೂ ಎರಡು ತಿಂಗಳಿದೆಯಲ್ಲ" ಎಂದು ಅನಂತ ಉತ್ತರ ಕೊಟ್ಟ.

ಗಂಡನಿಗೆ ಸಂತೋಷವಾಗಿದೆಯೋ ಬೇಸರವಾಗಿದೆಯೋ ಎಂದು ತಿಳಿಯಲು ಭಾರತಿ ಅಸಮರ್ಥೆಯಾದಳು. ತನ್ನ ಮನಸ್ಸಿನ ಪ್ರತಿಕ್ರಿಯೆಗಳು ತನ್ನ ಗಂಡನ ಮನಸ್ಸಿನ ಪ್ರತಿಕ್ರಿಯೆಗಳಿಗಿಂತ ತೀರ ಭಿನ್ನವಿರಬಹುದು ಎಂದು

ಆಕೆ ಅರಿತು ಬಹಳ ಸಮಯವಾಗಿತ್ತು. ಆ ಕಾರಣ ಆಕೆ ಹೆಚ್ಚು ಯೋಚಿಸುವ ಗೋಜಿಗೆ ಹೋಗಲಿಲ್ಲ.

ಆಮೇಲೆ ಅಂದಿನ ಅತಿಥಿಗಳ ಕುರಿತಾದ ಮಾತು ಬಂತು. ಇಂದಿರೆಯನ್ನು ಭಾರತಿ ಯಾವ ರೀತಿ ಕಂಡಿರುವಳೆಂದು ತಿಳಿಯುವ ಆತುರ ಅನಂತನಿಗೆ.

"ನೋಡಿದಿಯಲ್ಲ ಭಾರೀ, ಇಂದಿರಾಬಾಯಿಯನ್ನು. ಅವರ ಮನೆಗೆ ಹೋಗುವ ಆಸೆ ಈಗಾಗಲೇ ಮೊಳೆತಿದೆಯೇನು ?"

ಅನಂತನ ಪ್ರಶ್ನೆಯಿಂದ ಭಾರತಿಗೆ ಒಂದು ರೀತಿಯ ಆಶ್ಚರ್ಯವಾಯಿತು. ಆ ಪ್ರಶ್ನೆ ಆಕೆಯ ಮನಸ್ಸಿಗೂ ಪ್ರಶ್ನೆಯಾಗಿತ್ತು. ಇಂದಿರೆಯ ಕುರಿತು ಭಾರತಿ ಆ ತನಕ ಏನನ್ನೂ ಯೋಚಿಸಿರಲೇ ಇಲ್ಲ. ಆಕೆಯ ಮನಸ್ಸಿನಲ್ಲಿ, ಅದರ ಕಾರ್ಯಕ್ಷೇತ್ರದಲ್ಲಿ ಸುಳಿದಿದ್ದುದು ಸುಶೀಲೆ ಮಾತ್ರ. ಸುಶೀಲೆಯ ಗೆಳತಿಯಾಗಿ ಇಂದಿರೆ ಬಂದಿದ್ದಳಷ್ಟೆ. ಹಾಗೆಂದೇ ಅವಳಿಗೆ ಭಾರತಿಯ ಸ್ವಾಗತ. ಇಂಥ ವ್ಯಕ್ತಿಯ ಪೂರ್ವಾಪರಗಳ ಕುರಿತು ಚಿಂತಿಸುವ ಯೋಚನೆ ಆಕೆಗೆ ಉಂಟಾಗದಿದ್ದುದರಲ್ಲಿ ಆಶ್ಚರ್ಯವಿರಲಿಲ್ಲ. ಕುಂಕುಮವಿರದ ಇಂದಿರೆಯ ಮುಖ ನೋಡಿದಾಗ ಒಂದು ಕ್ಷಣ ಆಕೆಯ ಹೃದಯದಲ್ಲಿ ಅನುಕಂಪ ಮೂಡಿದ್ದುದು ನಿಜ. ಅದು ವಿಧವೆಯ ಕುರಿತು ಏದೆಗಿರುವ ಸ್ವಾಭಾವಿಕ ಅನುಕಂಪ, ಅಷ್ಟೆ. ಈಗ ಗಂಡ ಅಂಥ ಇಂದಿರೆಯ ಕುರಿತು ತನಗೆ ಯಾವ ಅಭಿಪ್ರಾಯವಿದೆಯೆಂದು ಪ್ರಶ್ನಿಸುತ್ತಿದ್ದಾರೆ.

"ಪರಿಚಯ, ಸಲಿಗೆಗಳಿರುವ ಬಂಧುಗಳ ಮನೆಗೆ ಹೋಗಲು ನಮಗೆ ಅವಕಾಶ ಸಿಗುವುದಿಲ್ಲ. ಹಾಗಿರುವಾಗ, ಹೊಸಬರ ಮನೆಗೆ ಹೋಗಲು ಬಿಡುವು ಸಿಗುವುದೆ ?"

ಅನಂತನ ಪ್ರಶ್ನೆಗೆ ಭಾರತಿಯ ಉತ್ತರ!

ತನ್ನ ಹೃದಯವನ್ನೇ ಭಾರತಿ ಹಿಂಡುತ್ತಿರುವಂತೆ ಆತನಿಗೆ ತೋರಿತು. ತನ್ನ ಸರಳ ಪ್ರಶ್ನೆಗೆ ಭಾರತಿ ಏಕೆ ಈ ರೀತಿಯ ನಂಜು ಬೆರೆತ ಉತ್ತರ ಕೊಡುತ್ತಿದ್ದಾಳೆ ಎನ್ನುವುದಕ್ಕಿಂತಲೂ ಇಂದಿರೆಯ ಕುರಿತು ತನ್ನಲ್ಲಿ ಮೂಡಿರುವ ಅಭಿಮಾನದ ಎಳ್ಳಿನಷ್ಟು ಅಂಶ ಕೂಡ ಭಾರತಿಯಲ್ಲಿ ಮೂಡಿಲ್ಲವಲ್ಲ ಎನ್ನುವ ಕಳವಳ ಹೆಚ್ಚಿತ್ತು.

"ನಾಗೇಶರಾಯರ ಮನೆಗೆ ಹೋಗುವ ವಿಚಾರ ನಿನಗಿರುವ ಆಸಕ್ತಿ, ಇಂದಿರಾಬಾಯಿಯವರನ್ನು ಕಾಣಲು ಇಲ್ಲವೆಂದು ತೋರುತ್ತದೆ. ಹಾಗಾದರೆ ನೀನು ಅವರಲ್ಲಿಗೆ ಬರುವುದಿಲ್ಲವೆ ?"

ಭಾರತಿಯ ಆಶ್ಚರ್ಯ ಹೆಚ್ಚುತ್ತಲೇ ಇತ್ತು.

"ಯಾರಲ್ಲಿಗೆ ಹೋಗಲೂ ಎರಡು ಸಲ ಆಲೋಚನೆ ಮಾಡುವ ನೀವು ಇಂದಿರಕ್ಕನ ಮನೆಗೆ ಹೋಗುವ ವಿಚಾರ ಇಷ್ಟೇಕೆ ಉತ್ಸಾಹ ತೋರಿಸುತ್ತಿದ್ದೀರಿ ?"

ಅನಂತನಿಗೆ ಈ ಪ್ರಶ್ನೆಯಿಂದ ಮುಖಭಂಗವಾದಂತಾಯಿತು. ಈ ಪ್ರಶ್ನೆಗೆ ಉತ್ತರ ಹೇಳುವುದೂ ಸುಲಭದ ಕೆಲಸವಾಗಿರಲಿಲ್ಲ ಅಲ್ಲಿಗೆ ಹೋಗಲು ತನಗೇಕೆ ಇಷ್ಟು ಆಸಕ್ತಿಯೆಂದು ಆತನಿಗೇ ತಿಳಿದಿರಲಿಲ್ಲ. ಬರೇ ಇಂದಿರೆಯ ಆಮಂತ್ರಣಕ್ಕೆ ಅಷ್ಟು ಮಹತ್ವವೆ ?

"ನಿನಗೆ ಮನಸ್ಸಿದೆಯಾದರೆ ಬಾ ; ಇಲ್ಲವಾದರೆ ಬಿಡು" ಎಂದು ಅನಂತ ಅಲ್ಲಿಗೆ ಮಾತು ಮುಗಿಸಿದ.

ಅನಂತನಿಗೆ ಇಂದಿರೆಯನ್ನು ನೋಡುವ, ಆಕೆಯೊಡನೆ ಮಾತನಾಡುವ ಆಸೆ ತುಂಬ ಇದ್ದಿತಾದರೂ ಮತ್ತೆ ಮೂರು ತಿಂಗಳು ಆಕೆಯನ್ನು ಕಾಣುವುದು ಸಾಧ್ಯವಾಗಲಿಲ್ಲ.

ಅನಂತ ತಲಪಾಡಿಯವರ ಕುರಿತು ಸೋಮಯಾಜಿಗಳನ್ನು ಮೊದಲು ಪ್ರಶ್ನಿಸಿದಾಗ ಅವರು ಬೆಚ್ಚಿಬಿದ್ದಿದ್ದರು. ಅವರು ಪುಣೆಯಿಂದ ಮರಳಿದ ಮೇಲೆ, ಪತ್ರಿಕೆಯ ಸಾಲ—ಸೋಲುಗಳ ವಿಚಾರ ಮೊದಲು ಮಾತನಾಡುವ ಪ್ರಸಂಗ ಬಂದಾಗ, ಬೇರಾರೂ ಇಲ್ಲದ ಸಂದರ್ಭ ನೋಡಿ ಅನಂತ ಕೇಳಿದ :

"ನನ್ನ ಕುತೂಹಲವನ್ನು ಕ್ಷಮಿಸಿ, ಸೋಮಯಾಜಿಗಳೆ. ನೀವು ಹಿಂದೊಮ್ಮೆ ಹೇಳಿದ ಮಾತು ನೆನಪಿಗೆ ಬರುತ್ತಿದೆ. 'ಕಹಳೆ'ಯ ಸಾಲದ ಹೆಚ್ಚಿನ ಹೊರೆ ಹೊತ್ತಿರುವುದು ತಲಪಾಡಿ ಸಂಜೀವರಾಯರೆ ?"

ಏನನ್ನೋ ಯೋಚಿಸುತ್ತಿದ್ದ ಸೋಮಯಾಜಿಗಳು ಮುಖವೆತ್ತಿ ಅನಂತನನ್ನು ನೋಡಿದರು.

"ಯಾರು ಹೇಳಿದರು, ಅನಂತ ?"

"ಬರೇ ಊಹನೆ. ಯಾರೂ ಹೇಳಿಲ್ಲ. ತಲಪಾಡಿ ಮನೆತನದ ಪರಿಚಯವಾಗುವ ಸಂದರ್ಭ ಒಂದು ಬಂದಿತ್ತು. ಅವರ ಸ್ವಭಾವ ಪರಿಚಯವಾದ ಮೇಲೆ ನನ್ನ ಮಿದುಳಿಗೆ ಸ್ವಲ್ಪ ಕೆಲಸ ಕೊಟ್ಟೆ. ಹೀಗಾಗಿ ನಿಮ್ಮನ್ನು ಕೇಳಿದೆ."

"ದಯವಿಟ್ಟು ಬೇರೆ ಯಾರೊಡನೆಯೂ ಹೀಗೆ ಹೇಳಬೇಡ. ಅವರ ಸಹಾಯದ ಒಂದು ಶರ್ತ ಅದು."

"ಇಲ್ಲವಪ್ಪ. ನನಗೇನು ಹುಚ್ಚೇ. ಆದರೆ ಅವರ ಪರಿಚಯ ಮಾಡಿ ಕೊಳ್ಳುವ ಆತುರವಿದೆ. ಒಂದು ದಿನ ನನ್ನನ್ನು ಅಲ್ಲಿಯವರೆಗೆ ಕರೆದುಕೊಂಡು ಹೋಗುವಿರಾ ?"

ತುಸು ಹೊತ್ತು ಆಲೋಚಿಸಿ ಸೋಮಯಾಜಿಗಳು ಉತ್ತರಿಸಿದರು :

"ಅದಕ್ಕೇನಂತೆ ? ಅವಶ್ಯ ಕರೆದುಕೊಂಡು ಹೋಗುತ್ತೇನೆ. ಮುಂದಿನ ಭಾನುವಾರ ಬೆಳಿಗ್ಗೆ ಹೋಗೋಣ. ಆದರೆ ತಪ್ಪಿಯಾದರೂ ಪತ್ರಿಕೆಯ ವಿಚಾರ ಮಾತು ಬಾರದಂತೆ ಎಚ್ಚರಿಕೆಯಿಂದಿರುವುದು ಮಾತ್ರ ನಿನ್ನ ಕೆಲಸ."

ಅನಂತ ನಕ್ಕು ಹೇಳಿದ :

"ಅಷ್ಟು ಹೆದರಬೇಕಾದ ಅಗತ್ಯವಿದೆಯೇನು? ನಿಮ್ಮ ಬಾಯಿಂದ ಹೊರಬಿದ್ದಿದ್ದ ಎಷ್ಟೋ ಮಾತುಗಳನ್ನು ನಾನು ಅವರ ಮಗಳ ಬಾಯಿಂದ ಕೇಳಿದ್ದೇನೆ. ಹೀಗಿದ್ದೂ ತಲಪಾಡಿಯವರಿಗೆ ನಮ್ಮ ಪತ್ರಿಕೆಯ ವಿಚಾರ ಯಾವ ಅಭಿಮಾನವೂ ಇಲ್ಲ ೆಂಬಂತೆ ನಾನು ಸೋಗಿನ ನಡವಳಿಕೆ ತೋರಿ ಸುವುದು ಸರಿಯೆ ?"

"ಅರೆ ! ನಿನಗೆ ಅವರ ಪರಿಚಯವಿದೆ ಹಾಗಾದರೆ ?"

"ಅವರ ಪರಿಚಯವಿಲ್ಲ. ಆದರೆ ಅವರ ಮಗಳು ಇಂದಿರೆಯ ಪರಿಚಯ ಇದೆ" ಎಂದು ಅನಂತ ನಾಗೇಶರಾಯರ ಮನೆಯ ಸತ್ಕಾರದ ಪರಿಣಾಮ ಗಳನ್ನೆಲ್ಲ ವಿವರಿಸಿದ. ಎಲ್ಲ ಕೇಳಿಯಾದ ಮೇಲೆ ಸೋಮಯಾಜಿಗಳು,

"ಹಾಗಾದರೆ ನಾನು ಬರಬೇಕಾದ ಅಗತ್ಯವೂ ಇಲ್ಲ" ಎಂದರು.

"ಛೆ ! ಛೆ ! ಅದು ಹೇಗೆ ಸಾಧ್ಯ. ನನಗೆ ಸಂಜೀವರಾಯರ ಮುಖ ಪರಿಚಯವಿಲ್ಲ. ನೀವು ಬರಲೇಬೇಕು."

ಸೋಮಯಾಜಿಗಳು "ಸೈ" ಎಂದರು.

ಆದರೂ ಮತ್ತೆ ಒಂದು ತಿಂಗಳ ತನಕ ಅನಂತನಿಗೆ ತಲಪಾಡಿಯವರನ್ನು ನೋಡಲಾಗಲಿಲ್ಲ. ಒಂದಲ್ಲ ಒಂದು ಕಾರಣದಿಂದಾಗಿ, ಭಾನುವಾರದ ಆ ಕಾರ್ಯಕ್ರಮವನ್ನು ಮುಂದುವರಿಸಬೇಕಾಗಿ ಬಂತು. ಮುಖ್ಯವಾಗಿ ಪತ್ರಿಕೆಯ ಕೆಲಸದ ಗಡಿಬಿಡಿಯ ನಡುವೆ, ತನ್ನ ಆಫೀಸಿನ ಯೂನಿಯನ್ ಕಾರ್ಯಕ್ಷೇತ್ರ ದಲ್ಲಿ ಮತ್ತೆ ಗಲಭೆ ಆರಂಭವಾಗುವ ಚಿಹ್ನೆಗಳು ಕಂಡುಬಂದುದರಿಂದ ಅನಂತ ಆ ದಿಸೆಯಲ್ಲೂ ತುಂಬ ಪರಿಶ್ರಮ ವಹಿಸಬೇಕಾಗಿ ಬಂದುದರಿಂದ, ಬೇರಾವ

ವಿಚಾರದ ಕಡೆಗೂ ಗಮನ ಕೊಡುವಷ್ಟು ಅವಕಾಶವಾಗಲೀ ಮನಃಸ್ವಾಸ್ಥ್ಯ ವಾಗಲೀ ಆತನಿಗೆ ಸಿಗುತ್ತಿರಲಿಲ್ಲ.

ಒಮ್ಮೆ ಸೋಲಿನ ನೋವನ್ನನುಭವಿಸುತ್ತಿದ್ದಾಗ, ಕಾರಕೂನರ ಸಂಘಟನೆಯ ಏಟು ಬಂದಾಗ ಉಂಟಾದ ನೋವಿನಿಂದ ಅಧಿಕಾರಿವರ್ಗ ಮೆಲ್ಲ ಮೆಲ್ಲನೆ ಚೇತರಿಸಿಕೊಳ್ಳುತ್ತಿತ್ತು. ಹಾಗೆ ಚೇತರಿಸಿಕೊಳ್ಳುತ್ತಿದ್ದಂತೆಯೇ ನೌಕರ ವರ್ಗದ ಸಂಘಟನೆಯನ್ನೊಡೆಯುವ ವಿಧಾನ, ಹಂಚಿಕೆಗಳೂ ಮೆಲ್ಲ ಮೆಲ್ಲನೆ ರೂಪುಗೊಳ್ಳುತ್ತಿದ್ದವು. ಅನಂತನಿಗೆ ಇದು ತಿಳಿದಿತ್ತು. ಅವರ ಸಂಘಟನೆಯ ಜೀವಾಳವಾಗಿ ಅನಂತನನ್ನು ಬಿಟ್ಟು ಉಳಿದಿದ್ದುದು ಬರೇ ನಾಲ್ಕಾರು ವ್ಯಕ್ತಿಗಳು. ಇವರೆಲ್ಲರ ಪರಿಶ್ರಮದಿಂದ ಈ ಸಂಘಟನೆಯನ್ನು ಜೀವಂತ ಉಳಿಸಬೇಕಿತ್ತು. ಪತ್ರಿಕೆಯ ಕೆಲಸದ ನಡುವೆ ಇಲ್ಲಿಯೂ ಅಷ್ಟೇ ಆಸಕ್ತಿಯಿಂದ ಕೆಲಸ ಮಾಡಲು ಅನಂತನಿಗೆ ಅವಕಾಶ ಸಿಗುತ್ತಿರಲಿಲ್ಲ.

ಹೀಗಾಗಿ ತಲಪಾಡಿಯವರನ್ನು ಕಾಣಲು ಒಂದು ಒಂದೂವರೆ ತಿಂಗಳು ಅನಂತ ವಿಲಂಬಿಸಿದ. ಮತ್ತೊಂದು ದಿನ ಸೋಮಯಾಜಿಗಳ ಜೊತೆಗೆ ಅವರ ಮನೆಗೆ ಹೋದ.

ಅನಂತನ ಮುಂಬಯಿ ಜೀವನದ ಮೊದಲ ದಿನಗಳ ಪ್ರೀತಿಯ ಕಾರ್ಯಕ್ಷೇತ್ರವಾದ ಗಿರಗಾಂ ವಿಭಾಗದಲ್ಲೇ ತಲಪಾಡಿಯವರ ಮನೆ. ಪ್ರಾರ್ಥನಾ ಸಮಾಜ ಜಂಕ್ಶನಿಗೂ 'ಕಾಂಗ್ರೆಸ್ ಹೌಸಿ'ಗೂ ನಡುವೆ, ವಿಠಲಭಾಯಿ ಪಟೇಲ್ ರಸ್ತೆಗೆ ಹೊಂದಿಕೊಂಡೇ ಇದೆ.

ಸೋಮಯಾಜಿಗಳ ಜೊತೆಗೆ ಹೊರಟಾಗಲೇ ಅನಂತನ ಮನಸ್ಸನ್ನು ಯಾವುದೋ ಒಂದು ರೀತಿಯ ಭೀತಿ ಆವರಿಸಿತ್ತು. ತಲಪಾಡಿಯವರನ್ನು ನೋಡುವುದಕ್ಕಿಂತಲೂ ಹೆಚ್ಚಿನ ಆಸಕ್ತಿ ಆತನಿಗೆ ಇಂದಿರೆಯನ್ನು ಕಂಡು ಮಾತನಾಡುವುದರಲ್ಲಿತ್ತು. ಹೀಗಾಗಿ ತಾನು ಹೋಗುತ್ತಿರುವ ಉದ್ದೇಶ, ಸಂಜೀವರಾಯರ ಪರಿಚಯ ಮಾಡಿಕೊಳ್ಳಲೆಂದೇ ಅಥವಾ ಇಂದಿರೆಯೊಡನೆ ಮಾತನಾಡುವ ಸುಖ ಸಿಗಬಹುದೆಂದೇ ಎಂದು ಅನಂತ ಯೋಚಿಸುತ್ತಿದ್ದ.

ಇಬ್ಬರೂ ಅವರ ಮನೆ ಸೇರಿದಾಗ ಬೆಳಿಗ್ಗೆ ಒಂಬತ್ತು ಘಂಟೆಯ ಹೊತ್ತು. ತಲಪಾಡಿಯವರು ಮನೆಯಲ್ಲೇ ಇದ್ದರು. ಐದು ಕೋಣೆಗಳ ದೊಡ್ಡ ಮನೆ. ತಲಪಾಡಿಯವರಿದ್ದ, ಅವರು ಸೋಮಯಾಜಿಗಳನ್ನೂ ಅನಂತನನ್ನೂ ಸ್ವಾಗತಿಸಿದ ದೊಡ್ಡ ಕೋಣೆಯಲ್ಲಿ ಅನಂತನಿಗೆ ಕಂಡ ವೈಶಿಷ್ಟ್ಯ ಅಲ್ಲಿನ ಪುಸ್ತಕ

ಭಂಡಾರ. ಓರಣವಾಗಿರಿಸಿದ್ದ ಸಾಧಾರಣ ಒಂದು ಸಾವಿರ ಪುಸ್ತಕಗಳು ಬೇರೆ ಬೇರೆ ಕಪಾಟುಗಳಲ್ಲಿ ಮೆರೆಯುತ್ತಿದ್ದವು. ನೆಲದ ಮೇಲೆ ಹಾಸಿದ್ದ ಒಂದು ಚಾಪೆಯಲ್ಲಿ ಕುಳಿತು ಸಂಜೀವರಾಯರು ರಾಟೆ ತಿರುಗಿಸಿ ನೂಲುತ್ತಿದ್ದರು.

ಒಳಗೆ ಬಂದೊಡನೆ ' ಗಾಂಧೀ ಯುಗದ ವರ್ಚಸ್ಸಿನ ಒಂದು ವಿಶಿಷ್ಟ ವ್ಯಕ್ತಿ ' ಎಂದು ಅನಂತ ಮನಸ್ಸಿನಲ್ಲಿ ತನ್ನ ತಾನೇ ಹೇಳಿಕೊಂಡ. "ಬನ್ನಿ ಸೋಮಯಾಜಿಗಳೇ" ಎಂದು ಹೇಳಿದ ತಲಪಾಡಿಯವರು ನೂಲುವ ಕೆಲಸ ನಿಲ್ಲಿಸಲಿಲ್ಲ. ಅನಂತನ ಪರಿಚಯವಾಗದೆ ಅವರು ಸೋಮಯಾಜಿಗಳ ಮುಖ ನೋಡಿದರು.

"ಅನಂತರಾಯರು, ನಮ್ಮ ' ಸಂಪಾದಕ 'ರು" ಎಂದು ಸೋಮಯಾಜಿಗಳು ಪರಿಚಯ ಮಾಡಿಸಿ ಕೊಡುತ್ತಿದ್ದಂತೆಯೇ ಅನಂತ " ನಮಸ್ತೇ " ಎಂದು ಕೈಜೋಡಿಸಿದ್ದ.

"ನಮಸ್ಕಾರ. ಬಹಳ ಚೆನ್ನಾಯಿತು. ಇಂದೂ ಇದ್ದಿದ್ದರೆ ಸೋಮಯಾಜಿಗಳಿಗೆ ಪರಿಚಯ ಮಾಡಿಸಿಕೊಡುವ ಕೆಲಸವಿರುತ್ತಿದ್ದಿಲ್ಲ. ಒಂದು ಮೈಲು ದೂರದಿಂದಲೇ ನಿಮ್ಮ ಪರಿಚಯ ಹೇಳುತ್ತಿದ್ದಳು" ಎಂದು ಸಂಜೀವರಾಯರು ನಗುತ್ತ ಹೇಳಿದರು.

ಇಂದಿರೆಯ ಹೆಸರು ಬಂದಾಗ ಅನಂತನಿಗೆ ಸಂತೋಷವಾಗಿತ್ತು. ಅವಳು ಮನೆಯಲ್ಲಿಲ್ಲವೆಂದು ತಿಳಿದು ಅಷ್ಟೇ ಆಶ್ಚರ್ಯವೂ ಆಯಿತು.

"ಅವರು ಮನೆಯಲ್ಲಿಲ್ಲವೆ ?" ಎಂದು ಅನಂತ ಕೇಳಿದ.

"ಅವಳಿದ್ದಿದ್ದರೆ ನನಗೆ ಈ ಕೋಣೆಗೆ ಬರುವ ಧೈರ್ಯವಾಗುತ್ತಿತ್ತೇ ? ಬಂದೆನೆಂದರೆ ಒಂದು ತಾಸು ಅವಳ ಉಪನ್ಯಾಸ ಕೇಳಬೇಕು. ಈ ಕೋಣೆ ಅವಳದೇ ಸ್ವರ್ಗ. ಇಲ್ಲಿ ನಮ್ಮದೆಲ್ಲ ಅನಧಿಕೃತ ಪ್ರವೇಶ. ಈಗ ದಿಲ್ಲಿಗೆ ಹೋಗಿದ್ದಾಳೆ, ಎರಡು ತಿಂಗಳ ಮಾತಿಗೆ. ಕುರುಕ್ಷೇತ್ರ, ಪಾಣಿಪತ, ಎಲ್ಲ ನಿರ್ವಾಸಿತ ಜನಕೋಟಿಯ ದುಃಖದ ಪುಣ್ಯಕ್ಷೇತ್ರಗಳ ಯಾತ್ರೆ ಮುಗಿಸಿಬರುವ ಆಸೆ. ಅವಳು ಬರುವ ತನಕ ನನಗಿಲ್ಲಿ ಸ್ವಾತಂತ್ರ್ಯ."

ಮಗಳ ಕುರಿತಾದ ಮೋಹದ, ನೇಹದ ಮಾತುಗಳು. ಅವರ ದನಿಯಿಂದಲೇ ತಂದೆ-ಮಗಳ ಮೈತ್ರಿಯ ಆಳವನ್ನು ಅಳೆಯುವುದು ಸಾಧ್ಯವಿತ್ತು. ಅನಂತ ಪುನಃ ಕೋಣೆ ತುಂಬ ದೃಷ್ಟಿ ಹೊರಳಿಸಿದ.

ಕಿಟಕಿಯ ಬಳಿಯಲ್ಲೆ ಸಣ್ಣದೊಂದು ಮೇಜು. ಅದರ ಮೇಲೆಲ್ಲ

ಪತ್ರಿಕೆಗಳು—ಲೆಕ್ಕವಿಲ್ಲದಷ್ಟು. ಕೋಣೆ ತುಂಬ ಪುಸ್ತಕಗಳು: ಇತಿಹಾಸ, ರಾಜಕಾರಣ, ಸಮಾಜಶಾಸ್ತ್ರ, ಕಾದಂಬರಿ, ಮತ್ತೇನೆಲ್ಲ ಇವೆಯೊ. ಅನಂತನಿಗೆ ಕುಳಿತಲ್ಲಿಂದ ಕೆಲವನ್ನಷ್ಟೇ ಗುರುತಿಸುವುದು ಸಾಧ್ಯವಿತ್ತು. ಪತ್ರಿಕೆಗಳೂ ಅಂತೆಯೇ. ರಾಜೀವ ಕೊಟ್ಟುಹೋಗಿದ್ದ ಆ ವಾರದ 'ಕಹಳೆ'ಯ ಎರಡು ಪ್ರತಿಗಳೂ ಮೇಜಿನ ಮೇಲಿದ್ದವು. ಪಕ್ಕದ ಟೀಪಾಯ್ ಒಂದರ ಮೇಲೆ ದೇಶ ವಿದೇಶಗಳ ಹಲವಾರು ಸಮಾಜವಾದಿ ಪತ್ರಿಕೆಗಳ ಜೊತೆಗೆ 'ಕಹಳೆ'ಯ ಪ್ರತಿಗಳ ಒಂದು ಕಟ್ಟನ್ನೇ ಗುರುತಿಸಿದ.

"ಬೇರೇನು ವಿಶೇಷ, ಸೋಮಯಾಜಿಗಳೇ. ಎಲ್ಲ ಸೌಖ್ಯವಷ್ಟೆ" ಎಂದು ತಲಪಾಡಿಯವರು ಮಾತು ಮುಂದುವರಿಸಿದರು.

"ನಮ್ಮ ಮಟ್ಟಿಗೆ. ಅನಂತರಾಯರಿಗೆ ನಿಮ್ಮನ್ನು ಕಾಣುವ ಅಪೇಕ್ಷೆ ಇತ್ತು. ಆ ಕಾರಣ ಕರೆದುಕೊಂಡು ಬಂದೆ. ನಿಮ್ಮ ಮಗಳಿಗೆ ಅವರ ಪರಿಚಯ ಇದೆಯಂತೆ."

"ನನಗೂ ಪರಿಚಯವಿದೆ, ಸೋಮಯಾಜಿಗಳೇ; ಮುಖಪರಿಚಯ ಮಾತ್ರವಿರಲಿಲ್ಲ. ನನಗೆ ಪರಿಚಯವಾದುದು ನನ್ನ ಮಗಳ ಮುಖಾಂತರವೆ. ನಾನು ನಿಮ್ಮ ಪತ್ರಿಕೆಯನ್ನು ಓದುತ್ತಿಲ್ಲವೆಂದಲ್ಲ. ಆದರೆ ಇಂದೂ ಓದಿ ವಿವರಿಸದಿದ್ದರೆ ನನಗೆ ನೀವು ಬರೆದ ಅಭಿಪ್ರಾಯಗಳೆಲ್ಲ ಅರ್ಥವಾಗುವುವೆಂದು ನಾನು ಹೇಳಲಾರೆ. ನಾವು ಹಳೆಯ ಸಂಪ್ರದಾಯವಾದಿಗಳು. ನಮ್ಮ ಫೇಡಿಯ ಕೆಲಸದ ಜೊತೆಗೆ, ಅಲ್ಪಸ್ವಲ್ಪ ಆ ಮಹಾತ್ಮ ತೋರಿಸಿದ ಬೆಳಕನ್ನು ನೋಡಲು ಸಾಧ್ಯವೇ ಎಂದು ಎಡವುತ್ತ ತಡವುತ್ತ ಪ್ರಯತ್ನಿಸಿದವರು. ನಮಗೆ ಇಂದಿನ ಜಗತ್ತಿನ ಸಮಸ್ಯೆಗಳೆಲ್ಲ ಹೇಗೆ ಅರ್ಥವಾಗಬೇಕು ಹೇಳಿ?"

ಅನಂತನಿಗೆ ತಲಪಾಡಿಯವರೊಂದಿಗೆ ಚರ್ಚೆಗಿಳಿಯಲು ಮನಸ್ಸಿದ್ದಿಲ್ಲ. ಅವರು ಮಾತನಾಡುತ್ತಿರಬೇಕು; ತಾನು ಅವರನ್ನು ನೋಡುತ್ತಿರಬೇಕು, ಎನ್ನುವುದರಲ್ಲೇ ಆತನಿಗೆ ತೃಪ್ತಿ.

ಶುದ್ಧ ಖಾದೀ ಧೋತರವುಟ್ಟು, ಖಾದೀ ಬನೀನು ಧರಿಸಿ ತಲಪಾಡಿ ಯವರು ಕುಳಿತಿದ್ದರು. ವಯಸ್ಸು ಕೂದಲನ್ನು ಹಣ್ಣಾಗಿಸಿತ್ತು. ಅದರಿಂದಲೇ ಆ ದುಂಡು ಮುಖದ ಸಾತ್ವಿಕ ವರ್ಚಸ್ಸು ಇನ್ನಷ್ಟು ಸ್ಪಷ್ಟವಾಗಿ ಪ್ರಕಟ ವಾಗುತ್ತಿತ್ತು.

ಮಾತು ಮುಂದುವರಿಯುತ್ತಿದ್ದಂತೆ ಹತ್ತಿ ಎಳೆಯಾಗಿ ಸುತ್ತಿಕೊಳ್ಳು ತ್ತಿತ್ತು.

ಸೋಮಯಾಜಿಗಳು ತುಂಬ ಮಾತನಾಡಿದರು. ಅನಂತನಿಗೆ ಮೊದಲೇ ಹೇಳಿದ್ದಂತೆ 'ಕಹಳೆ'ಯನ್ನುಳಿದು ಎಲ್ಲ ವಿಚಾರಗಳ ಮೇಲೂ ಮಾತನಾಡಿ ದರು. ಅನಂತ ಕುಳಿತು ಬರೀ ಆಲಿಸುತ್ತಿದ್ದ. ಆಗೀಗ ಒಂದು ಮಾತಿನ ಸಮರ್ಥನೆಗೋ ಅಥವಾ ತನ್ನ ಅಭಿಪ್ರಾಯ ಅದಕ್ಕೆ ತೀರ ವಿರುದ್ಧವೆಂದೋ, ನಗುತ್ತಿದ್ದ. ಆದರೆ ಆ ನಗುವನ್ನು ವಿವರಿಸುವ ಗೋಜಿಗೆ ಹೋಗುತ್ತಿರಲಿಲ್ಲ.

ತಲಪಾಡಿಯವರೇ 'ಕಹಳೆ'ಯ ಪರಿಸ್ಥಿತಿ ಹೇಗಿದೆಯೆಂದು ಕೇಳಿದಾಗ ಮಾತ್ರ ಸೋಮಯಾಜಿಗಳು ತಬ್ಬಿಬ್ಬಾಗಿ ಅನಂತನೆಡೆ ನೋಡಿದರು.

"ಅವರಿದ್ದರೇನು ಚಿಂತಿಲ್ಲ ಬಿಡಿ. ನಿಮ್ಮ ಅವಸ್ಥೆ ಅವರಿಗೆ ತಿಳಿಯದು ದೇನಿಲ್ಲ."

"ಹೊರಗಿನ ಸಾಲ ಒಂದೂವರೆ ಸಾವಿರವಿದೆ. ಪ್ರೆಸ್ಸಿಗೆ ಐದುನೂರು ರೂಪಾಯಿ ಸಲ್ಲಬೇಕು. ಬರಬೇಕಾದ ಬಾಕಿ ಹಣ ಒಂದೂವರೆ ಸಾವಿರಕ್ಕೂ ಹೆಚ್ಚಿದೆ. ಅದು ಬಂದಮೇಲೆ ಮಾತ್ರ ಬಂದಿತೆಂದು ಹೇಳಬಹುದು."

ಸಂಜೀವರಾಯರು ಮಾತನಾಡಲಿಲ್ಲ.

"ಇನ್ನು ನಾಲ್ಕು ತಿಂಗಳಲ್ಲಿ ವರ್ಷವಾಗುತ್ತದೆ. ಆಗ ಲೆಕ್ಕಾಚಾರ ಮಾಡಿ, ಬದುಕುವ ದಾರಿಯಿದೆಯೇ, ಮುಂದರಿಯಬೇಕೇ ಎಂದು ನಿಶ್ಚಯ ಮಾಡುವುದೆಂದು ನಿರ್ಧರಿಸಿದ್ದೇವೆ. ಅಷ್ಟರತನಕ ಹೇಗೂ ಸಾಗುತ್ತೇವೆ."

"ಅಷ್ಟು ನಿರಾಶೆಯಿಂದ ಪ್ರಯೋಜನವಿಲ್ಲ, ಸೋಮಯಾಜಿಗಳೆ. ಬದುಕಲು ಆಶಿಸುವ ಜನ ಸಾವಿನ ಯೋಚನೆ ಮಾಡಬಾರದು. ನಿಮ್ಮ ಆದರ್ಶ ದೊಡ್ಡದು. ಬರೇ ಒಂದು ಪತ್ರಿಕೆಯಿಂದ ವಿಜಯನಗರದ ಸೌಭಾಗ್ಯವನ್ನು ಪುನಃ ಮುಂಬಯಿಗೆ ತರಲು ನಿಮಗೆ ಸಾಧ್ಯವಾಗಬಹುದು ಎಂದು ನಾನು ನಂಬಿಲ್ಲವಾದರೂ ಹಲವಾರು ಕೊಳೆ ರೋಗಗಳಿಗೆ ಶಸ್ತ್ರಚಿಕಿತ್ಸೆ ನಿಮ್ಮಿಂದ ಆಗುತ್ತಿದೆಯೆಂದು ನನಗೆ ನಂಬಿಕೆಯಿದೆ. ನನಗಿಂತ ಹೆಚ್ಚು ಇಂದು...."

ಏಕೋ ಸಂಜೀವರಾಯರು ಅಲ್ಲಿಗೆ ಮಾತು ನಿಲ್ಲಿಸಿದರು. ಏಕೆ ನಿಲ್ಲಿಸಿದ ರೆಂದು ಕೇಳುವ ಇಚ್ಛೆ ಸೋಮಯಾಜಿಗಳಿಗೆ ಇರಲಿಲ್ಲ ತುಸು ಹೊತ್ತು ಅದೇ ರೀತಿಯ ಮೌನ ಮುಂದುವರಿದ ಮೇಲೆ ಸೋಮಯಾಜಿಗಳು ಹೊರಡಲೆಂದು ಎದ್ದರು. ಆಗ ಸಂಜೀವರಾಯರು,

"ಅವ್ಯವಸ್ಥೆ ಹೆಚ್ಚಿದರೆ, ಬದುಕುವುದು ಕಷ್ಟವೆಂದಾದರೆ, ಬಂದು ನೋಡಿ" ಎಂದರು. ನಗುತ್ತ ಹಾಗೆಯೇ ಅನಂತನನ್ನುದ್ದೇಶಿಸಿ,

"ನೀವೂ ಬರುತ್ತಾ ಇರಿ. ಇಂದಿರೆಯಿದ್ದಿದ್ದರೆ ಒಂದು ಘಂಟೆ ನಿಮಗೆ ಕೂಡ ಸಮಾಜವಾದದ ಕುರಿತು ಹರಟುತ್ತಿದ್ದಳು. ಆದರೆ ಅವಳಿಲ್ಲ. ನಿಮ್ಮ ಶ್ರೀಮತಿಯನ್ನೂ ಒಮ್ಮೆ ಕರೆದುಕೊಂಡು ಬನ್ನಿ. ಆಗಾಗ ಬರುತ್ತಿರಿ. ಇಂದಿನ ಪೀಳಿಗೆಯ ಆಶಾವಾದವಷ್ಟೇ ನಮಗೆ ಇಂದು ಕಾಣುತ್ತಿರುವ ಅಂಧಕಾರದಲ್ಲಿ ಬೆಳಕು. ಆ ಕಾರಣ ನಿಮ್ಮೊಡನೆ ಮಾತನಾಡುವಾಗ ಸುತ್ತಲಿನ ದುಃಖ ದುಃಖವೆಂದು ಕಾಣುವುದಿಲ್ಲ."

ಅನಂತ ನಗುತ್ತಿದ್ದ. ಆದರೆ ಸಂಜೀವರಾಯರು ಇಂದಿರೆಯ ಕುರಿತು ಹೇಳಿದ ಮಾತಿನಲ್ಲಿ ಅವನಿಗೆ ವಿಶ್ವಾಸವಿರಲಿಲ್ಲ. ಅವಳು ತನ್ನೊಡನೆ ಒಂದು ತಾಸು ಹರಟಿದ್ದರೆ, ತಾನು ಅತ್ಯಂತ ಸುಖಿಯೆಂದು ತಿಳಿದುಕೊಳ್ಳಬಹುದಾಗಿದ್ದಿತಾದರೂ ಆಕೆ ತನ್ನೊಡನೆ ಮನಬಿಚ್ಚಿ ಹರಟಲಾರಳು ಎಂದು ಆತನ ಅಂತರಾಳದಲ್ಲಿ ಒಂದು ದನಿ ಕೂಗುತ್ತಿತ್ತು

ಆಚಾರ ವಿಚಾರಗಳಲ್ಲಿ, ಆಸೆ ಆಕಾಂಕ್ಷೆಗಳಲ್ಲಿ ತಮ್ಮಿಬ್ಬರಲ್ಲಿ ತುಂಬ ಸಾಮ್ಯವಿರಬಹುದಾದರೂ ತಾವಿರುವುದು ಒಂದು ದೊಡ್ಡ ಕೋಟೆಯ ಗೋಡೆಯ ಎರಡು ಬದಿಗಳಲ್ಲಿ ಎಂದು ಅನಂತ ಚಿಂತಿಸುತ್ತಿದ್ದ.

ಇಂದಿರೆಯ ಸಾಮೀಪ್ಯ ಆಗ ಆತನಿಗೆ ದಿಗಂತದಷ್ಟು ದೂರವೆಂದು ಕಂಡಿತು.

೨೦

ಒಂದು ಅಪ್ಪನ ಕಾಗದ, ಇನ್ನೊಂದು ಪಾರ್ವತಿಯದು, ಮತ್ತೊಂದು ಸುಶೀಲಕ್ಕನದು, ಅದರಲ್ಲಿ ಆಕೆ ಮೋಜಿಗೆಂದು ಕಾಫಿಯಲ್ಲಿ ಅದ್ದಿ ಕಾಗದದಲ್ಲಿ ಮೂಡಿಸಿದ್ದ ಸುಭದ್ರೆಯ ಎಡ ಹೆಬ್ಬೆಟ್ಟಿನ ಗುರುತು, ಮಗದೊಂದು ಸುನಂದೆಯ ಪತ್ರ.

ಹೀಗೆ ಪತ್ರಗಳ ಸುರಿಮಳೆ.

ಭಾರತಿಗೆ ಅದು ತೃಪ್ತಿಯ ಸರ್ವಸ್ವ.

ವಾರಕ್ಕೊಂದು ತಪ್ಪದಂತೆ ಸುಶೀಲೆಯ ಕಾಗದ—ದೂರದ ದಿಲ್ಲಿಯಿಂದ. ಅದರಲ್ಲಿ 'ಕುತುಬ್ ಮಿನಾರ್'ದಿಂದ ಹಿಡಿದು ಕರಗುಂಬಳಕಾಯಿಯ ತನಕ

ಬರೆಯುದುದೇನಿಲ್ಲ! 'ನನ್ನ ಸ್ವಭಾವವೇ ಹೀಗೆ, ಭಾರತೀ. ಪರಿಚಯು ಪರಿಚಯುದಲ್ಲೆ ನಿಲ್ಲಬಾರದು. ಹತ್ತಿರ ಇಲ್ಲವಾದರೆ, ಅಂಚೆಯು ಮನೆಯೇನೂ ದೂರವಿಲ್ಲವಲ್ಲ. ಹೀಗಾಗಿ ಮಾತನಾಡಲು ಕಷ್ಟವಾಗುವುದೆ?'

ಪಾರ್ವತಿಯು ಒಡನಾಟ ತಪ್ಪಿದ ಮೇಲೆ ಸುಶೀಲೆಯಲ್ಲೇ ಪಾರ್ವತಿಯು ಗುಣವನ್ನು ಭಾರತಿ ಮೊದಲ ಬಾರಿಗೆ ಕಂಡುದು. ಅದೇ ರಸಿಕತೆ, ಆದರೆ ಇಲ್ಲಿ ಸಿರಿವಂತಿಕೆಯು ಆವರಣದಲ್ಲಿ—ಸುಖ ಸಂಭ್ರಮಗಳ ಹಿನ್ನೆಲೆಯಲ್ಲಿ.

ಹಿಂದಿನ ದಿನ ದೊಡ್ಡದೊಂದು ಪಾರ್ಸೆಲು ಭಾರತಿಯ ವಿಳಾಸಕ್ಕೆ ಬಂದಾಗ ಆಕೆಗೆ ಆಶ್ಚರ್ಯವಾಗಿತ್ತು. 'ಅಮ್ಮ ಏನಾದರೂ ತಿಂಡಿ ಕಳುಹಿಸಿರ ಬಹುದು' ಎಂದು ಅದನ್ನು ಪಡೆದು ಒಡೆದು ನೋಡಿದಾಗ ಕಂಡುದು ದೊಡ್ಡ ದೊಂದು ಕರ್ಪೂರದ ಗೊಂಬೆ.

ಅದರ ವಿವರಣೆ ಸುಶೀಲೆಯು ಕಾಗದದಲ್ಲಿ:

'ಇದು ಸುಭದ್ರೆಗೆ ಕೊಟ್ಟ ಉಡುಗೊರೆಗೆ ಮರು ಉಡುಗೊರೆಯೆಂದು ತಿಳಿಯಬೇಡ. ಇದು ನಿನಗೆ ಕೂಡ ಅಲ್ಲ. ಬರಲಿರುವ ಯುವರಾಣಿಗೆ, ತಪ್ಪಿದರೆ ಯುವರಾಜನಿಗೆ.'

ಆ ನಾಲ್ಕು ಪಂಕ್ತಿ ನೋಡಿದಾಗ ಭಾರತಿಯ ಹೃದಯು ಹಿಗ್ಗಿನ ಹೂ, ಅರುಳುಮಲ್ಲಿಗೆ.

ಆ ಗೊಂಬೆಯುನ್ನು ಅನಂತನಿಗೆ ತೋರಿಸಲು ಮಾತ್ರ ನಾಚಿಕೆ ತಡೆ ಯಾಗಿ ಬಂತು.

ಮುಂಬಯಿ ಜೀವನದ ಆರಂಭದ ನಾಲ್ಕು ತಿಂಗಳ ನೋವು ಭಾರತಿಯ ಹೃದಯುದಿಂದ ಮೆಲ್ಲಮೆಲ್ಲನೆ ದೂರ ಸರಿಯುತ್ತಿತ್ತು. ಅನಂತನ ಜೊತೆಗೆ ಸಾಗಿಸಬಹುದೆಂದು ಭಾವಿಸಿದ್ದ ಸುಖಮಯು ಸಂಸಾರಜೀವನದ ಕನಸು ದೂರ. ಆದರೆ ತನ್ನ ವೈಯಕ್ತಿಕ ಬದುಕಿನ ಆವರಣವಲ್ಲಿ, ಮೊದಲ ಏಟಿನ ನೋವಿನಿಂದ ನರಳಿ ಬದಿಗೆ ಸರಿದಿದ್ದ ಆಸೆ ಆಕಾಂಕ್ಷೆಗಳೆಲ್ಲ ಮತ್ತೆ ಚೇತರಿಸಿಕೊಳ್ಳುತ್ತಿದ್ದವು. ಪತ್ರ, ನೆರೆತನ, ಗೆಳೆತನಗಳು ರೂಪಿಸುತ್ತಿದ್ದ ಈ ಆವರಣಕ್ಕೆ ಭಾರತಿ ಹೊಂದಿ ಕೊಳ್ಳುತ್ತಿದ್ದಳು. ಸುಖವಾಗಿ ಹೊಂದಿಕೊಳ್ಳುತ್ತಿದ್ದಳು.

ಆದರೆ ಅನಂತನಿಂದ ದೂರವಾಗಿ.

ಸಂಜೀವರಾಯುರ ಮನೆಯಿಂದ ಹೊರಬಿದ್ದ ಅನಂತ ಸೋಮಯಾಜಿಗಳ ಜೊತೆಗೇ ಪ್ರೆಸ್ಸಿಗೆ ಹೊರಟ. ಅಲ್ಲಿ ಒಂದು ತಾಸಿನ ಕೆಲಸ ಮುಗಿಸುವಾಗ

ಹೊತ್ತು ನೆತ್ತಿಗೇರಿತ್ತು. ಸಾಧ್ಯವಾದಷ್ಟು ಬೇಗ ಮನೆ ಸೇರಬೇಕು ಎಂದು ಅಲ್ಲಿಂದ ಹೊರಡುವಷ್ಟರೊಳಗೆ ಆತನನ್ನು ಹುಡುಕಿಕೊಂಡು ಆಫೀಸಿನ ಯೂನಿಯನ್ ಅಧ್ಯಕ್ಷರೂ ಕೋಶಾಧಿಕಾರಿಯೂ ಅನಂತನ ಪ್ರೆಸ್ಸಿಗೆ ಬಂದರು.

"ಮನೆಗೆ ಹೋಗಿದ್ದೆವಪ್ಪ. ಪ್ರೆಸ್ಸಿಗೆ ಬಂದಿರಬಹುದೆಂದು ಸುದ್ದಿ ತಿಳಿದು ಇಲ್ಲಿಗೆ ಬಂದೆವು" ಎಂದರು.

"ಏನಾಗಬೇಕಾಗಿದೆ ?"

"ತುಂಬ ತೊಂದರೆ ಆರಂಭವಾಗಿದೆ. ಈಗ ಎರಡು ಘಂಟೆಗೆ ಅಂಧೇರಿಯಲ್ಲಿ ಕಾರ್ಯಕಾರಿ ಸಮಿತಿಯ ಸಭೆ ಅವಸರದಲ್ಲಿ ಸೇರಲಿದೆ. ಊಟವಾಗಿದೆಯೆ ? ಹೊರಡಿ."

ಅನಂತ ಕಾರಣವನ್ನು ವಿಚಾರಿಸುವ ಗೋಜಿಗೆ ಹೋಗಲಿಲ್ಲ. ಮನೆಗೆ ಹೋಗುವ ಮಾತು ದೂರ ಉಳಿಯಿತು. ಪಕ್ಕದಲ್ಲೇ ಒಂದು ಉಪಾಹಾರ ಗೃಹದಲ್ಲಿ ಹೊಟ್ಟೆ ತುಂಬಿಸಿಕೊಂಡು ಗೆಳೆಯರೊಂದಿಗೆ ಅಂಧೇರಿಗೆ ಹೊರಟ.

ಸೋಮಯಾಜಿಗಳು "ಮನೆಯಲ್ಲಿ ಹೇಳಿದ್ದಿಯೇನು ?" ಎಂದು ಕೇಳಿದರು. "ತಡವಾದರೆ ತನ್ನ ತಾನೇ ಅರ್ಥವಾಗುವುದಿಲ್ಲವೆ ?" ಎಂದು ನಕ್ಕು ಅನಂತ ಉತ್ತರಿಸಿದ.

ಅಂಧೇರಿ ತಲಪುವಾಗ ಘಂಟೆ ಒಂದಾಗಿತ್ತು. ಕಾರ್ಯಕಾರಿ ಸಮಿತಿಯ ಅವಸರದ ಸಭೆ, ಸಮಿತಿಯ ಸದಸ್ಯರೊಬ್ಬರು ಅಧಿಕಾರಿ ವರ್ಗದಿಂದ ಗುಟ್ಟಾಗಿ ತಿಳಿದಿದ್ದ ಒಂದೆರಡು ವಿಚಾರಗಳನ್ನು ವಿವೇಚಿಸಲೆಂದು ಸೇರಿತ್ತು. ಕಾರಕೂನರ ಸಂಘಟನೆಯನ್ನು ಒಡೆದೇ ಸಿದ್ಧ ಎಂದು ನಿಶ್ಚಯಿಸಿದ್ದ ಅಧಿಕಾರಿಗಳು, ಕಾರ್ಯಕಾರಿ ಸಮಿತಿಯ ಇಬ್ಬರು ಪ್ರಮುಖರನ್ನು ಸ್ಥಳಾಂತರಿಸಲು ನಿರ್ಣಯಿಸಿದ್ದರು.

ಆ ಇಬ್ಬರಲ್ಲಿ ಒಬ್ಬರು ಕೋಶಾಧಿಕಾರಿ ಕೊರ್ಡೆ, ಇನ್ನೊಬ್ಬಾತ ಅನಂತ.

ಈ ಸುದ್ದಿ ಕೇಳಿದಾಗ ಎಲ್ಲರಿಗಿಂತ ಹೆಚ್ಚು ಆಶ್ಚರ್ಯವಾದುದು ಅನಂತನಿಗೆ. ಆತ ಈ ರೀತಿಯ ಏಟು ಬರಬಹುದೆಂದು ನಿರೀಕ್ಷಿಸಿರಲಿಲ್ಲವೆಂದಲ್ಲ. ಆದರೆ ಪ್ರಥಮ ಬಾರಿ ದೊರೆತ ವಿಜಯದ ಹಿಗ್ಗಿನಲ್ಲಿ ಅಧಿಕಾರಿಗಳು ಈ ರೀತಿಯ ನಿಷ್ಠುರ ಧೋರಣೆಯನ್ನನುಸರಿಸಲಾರರು ಎಂದು ಭಾವಿಸಿದ್ದ.

ಆತನ ಭಾವನೆ ಸುಳ್ಳಾಗಿತ್ತು.

"ಒಬ್ಬರನ್ನು ಬರೋಡಾಕ್ಕೆ, ಇನ್ನೊಬ್ಬರನ್ನು ಕಲ್ಕತ್ತಾ ಆಫೀಸಿಗೆ ಕಳುಹಿಸುವ ಹಂಚಿಕೆಯಿದೆಯಂತೆ. ನಾಳೆ ನಾಡಿದ್ದರಲ್ಲೇ 'ಆರ್ಡರ್,'

ಹೊರಡಬಹುದಾಗಿ ನಿರೀಕ್ಷೆಯಿದೆ. ನೀವಿಬ್ಬರೂ ಹೊರಟು ಹೋದಿರೆಂದಾದರೆ ಮತ್ತುಳಿದವರನ್ನು ಚದುರಿಸುವುದು ಸುಲಭ ಎಂದು ಅವರು ಭಾವಿಸಿರುವಂತಿದೆ" ಎಂದು ಗೆಳೆಯರು ಹೇಳಿದರು.

ಅನಂತ ದಿಙ್ಮೂಢನಾಗಿ ಕುಳಿತಿದ್ದ. ತಾನು ಮುಂಬಯಿ ಬಿಡುವುದು ಸಾಧ್ಯವೇ ? ಈ ಪ್ರಶ್ನೆಯನ್ನು ಆತ ಹಿಂದೆಂದೂ ವಿವೇಚಿಸಿರಲಿಲ್ಲ. ಮುಂಬಯಿ ತನ್ನ ಜೀವನದ ಕಾರ್ಯಕ್ಷೇತ್ರವೆಂದು ನಿರ್ಧರಿಸಿಕೊಂಡಾಗಿತ್ತು. ಅದು ವಿಸ್ತರಿಸಿಯೂ ಬಿಟ್ಟಿತ್ತು.

ಇಷ್ಟಲ್ಲದೆ ಭಾರತಿ ಮತ್ತು 'ಕಹಳೆ!'

ಅನಂತನ ಹೃದಯದ ವಿಚಾರಮಥನ ಅಲ್ಲಿ ನೆರೆದಿದ್ದ ಯಾರಿಗೂ ತಿಳಿಯುವಂತಿರಲಿಲ್ಲ. ಆತನ ಇತರ ಚಟುವಟಿಕೆಗಳ ಅರಿವು ಅವರಿಗೆ ಇರಲಿಲ್ಲವೆಂದಲ್ಲ. ಆದರೆ ಅವುಗಳ ವ್ಯಾಪ್ತಿ ಅವರ ಊಹನೆಗಿಂತ ದೂರವಿತ್ತು.

ಒಮ್ಮಿಂದೊಮ್ಮೆಗೆ ಅನಂತನ ತಲೆಯಲ್ಲಿ ಒಂದು ಯೋಚನೆ ತುಳಿಯಿತು. 'ಕಾರ್ಯಕಾರಿ ಸಮಿತಿಯಿಂದ ತಾನು ಹೊರಬಿದ್ದರೆ ಈ ಸಮಸ್ಯೆಯ ಪರಿಹಾರವಾದೀತೇ ?' ಎಂದು.

ಆದರೆ ಮರುಕ್ಷಣದಲ್ಲಿ ಇಂಥ ಹೊಲಸು ವಿಚಾರ ತನ್ನ ತಲೆಯಲ್ಲಿ ಸುಳಿದುದಕ್ಕಾಗಿ ತನಗೇ ನಾಚಿಕೆಯಾಯಿತು. ಆ ರೀತಿ ಹಿಂದೇಟು ಹಾಕಿದರೆ ಯೂನಿಯನ್ ಕುಸಿದುಬೀಳುವುದಷ್ಟೇ ಅಲ್ಲ, ತಾನು ಇರಿಸಿಕೊಂಡಿದ್ದ ಧ್ಯೇಯ ಆದರ್ಶಗಳಿಗೆಲ್ಲ ತಿಲಾಂಜಲಿ ಕೊಟ್ಟಂತೆ.

ಅಥವಾ ಕೆಲಸ ಬಿಡಬೇಕು. ಹಾಗೆ ಮಾಡಿದರೂ ನಂಬಿದ ಸಹೋದ್ಯೋಗಿಗಳಿಗೆ ದ್ರೋಹ ಬಗೆದಂತೆ.

ಇನ್ನುಳಿದ ಒಂದೇ ಒಂದು ದಾರಿ—ಬಂದದ್ದನ್ನು ಒಪ್ಪಿಕೊಂಡು ಬಿಡುವುದು.

ಹಾಗೆ ಮಾಡಿದರೆ 'ಕಹಳೆ'ಯ ಸಂಪರ್ಕ ಮುಗಿದಂತೆ. ಅಭಿವ್ಯಕ್ತಿಗಾಗಿ ಹಾತೊರೆಯುತ್ತಿದ್ದ ಅಭಿಪ್ರಾಯಗಳ ಜ್ವಾಲಾಮುಖಿ ತನ್ನ ತಾನೆ ಆರಿ ಹೋದಂತೆ. ಎದೆಯನ್ನು ಕೊರೆಯುತ್ತಿದ್ದ ನೂರಾರು ಸಾಮಾಜಿಕ ಅಪರಾಧಗಳ ಹೊಣೆಗಾರಿಕೆಯನ್ನು ಮನಗಾಣಿಸಿಕೊಡುವ ಕೆಲಸಕ್ಕೆ ತನ್ನ ತಾನೆ ಚ್ಯುತಿ ಬಂದಂತೆ.

'ಕಹಳೆ'ಯ ಬಳಗದ ಗೆಳೆಯರ ನಿಕಟ ಸಾನ್ನಿಧ್ಯ ತಪ್ಪಿದಂತೆ.

ಆ ಪರಿಚಯದ ಆತ್ಮೀಯ ಬಳಗದಿಂದ ದೂರ ಹೋದಂತೆ.

ಹಾಗೆಯೆ....

ಇಂದಿರೆಯ ಪರಿಚಯ ಅಲ್ಲಿಗೆ ಮುಗಿದಂತೆ.

ಯಾಕೋ ಆ ಸಮಿತಿಯ ಸಭೆಯಲ್ಲಿ ಕುಳಿತ ಅನಂತನಿಗೆ ಒಂದು ಕ್ಷಣ ಭಾರತಿಯ ನೆನಪಾಗುತ್ತಿತ್ತು ; ಇನ್ನೊಂದು ಕ್ಷಣ ಇಂದಿರೆಯ ನೆನಪು ಬರುತ್ತಿತ್ತು. ಅವಳು ಈ ಪರಿಸ್ಥಿತಿಯಲ್ಲಿ ತನ್ನನ್ನು ನೋಡಿದ್ದರೆ ಏನು ಹೇಳುತ್ತಿದ್ದಳೋ !

ಸಮಾಜವಾದದ ಕುರಿತು ತಾಸುಗಟ್ಟಲೆ ತಂದೆಗೆ ಉಪನ್ಯಾಸ ಕೊಡು ವಾಕೆ, ತನಗೆ ಈ ಸಂದರ್ಭದಲ್ಲಿ ಬಿಡುಗಡೆಯ ದಾರಿ ತೋರಿಸಬಹುದಿತ್ತೇ?

ಒಂದು ಘಂಟೆಯ ತನಕ ಚರ್ಚೆ ನಡೆದಿತ್ತು. ನಿವೃತ್ತಿಯ ದಾರಿ ಯಾರಿಗೂ ತೋರಲಿಲ್ಲ. ಕೊನೆಗೆ ಅಧ್ಯಕ್ಷರೇ ಬಿಡುಗಡೆಯ ಒಂದು ಹಾದಿ ತೋರಿಸಿದರು ;

"ಅನಂತರಾಯರು ಮತ್ತು ಕೊರ್ಡೆ ನೀವಿಬ್ಬರೂ ಈ ಸಂಘದ ಆಧಾರ ಸ್ತಂಭಗಳಂತಿದ್ದಿರಿ. ಇಬ್ಬರಿಗೂ ಮುಂಬಯಿ ಬಿಡುವುದು ಸಾಧ್ಯವಿಲ್ಲ. ನಾಳೆಯೇ ಇಬ್ಬರೂ ಒಂದೊಂದು ತಿಂಗಳ 'ಮೆಡಿಕಲ್ ಲೀವ್' ಪಡೆಯ ಬೇಕು. ಕಂಪೆನಿಯ ಆಜ್ಞೆ ಬರುವುದರೊಳಗೆ ಹೀಗೆ ಮಾಡಿದರೆ ಮತ್ತೆ ನಮಗೆ ಅವರೊಡನೆ ಚರ್ಚಿಸಲು ಅವಕಾಶ ಸಿಗುತ್ತದೆ. ಆಮೇಲೆ ನಮ್ಮ ಚರ್ಚೆ ಪ್ರಯೋಜನಕಾರಿಯಾಗದಿದ್ದರೆ ಅವರು ತಮ್ಮ ಆಜ್ಞೆಯನ್ನು ಹಿಂದೆ ತೆಗೆದುಕೊಳ್ಳಲು ಸಿದ್ಧರಿಲ್ಲವಾದರೆ ಈ ದಿಸೆಯಲ್ಲಿ ಸರಕಾರ ನಮಗೆ ನೆರವು ನೀಡುವುದಿಲ್ಲವಾದರೆ ಸಂಪಿನ ನೋಟೀಸು ಕೊಡೋಣ. ಹೇಗೂ ಒಂದು ತಿಂಗಳ ಅವಕಾಶವಿದೆ. ಸಾಕಷ್ಟು ಯೋಚಿಸಬಹುದು."

ಸರ್ವಾನುಮತದಿಂದ ಈ ನಿರ್ಧಾರ ಸ್ವೀಕೃತವಾಯಿತು.

ಆದರೆ ಅನಂತನ ಯೋಚನೆ ಬೇರೆಯೇ ದಾರಿ ಹಿಡಿದು ಸಾಗಿತ್ತು. ಒಂದು ತಿಂಗಳ ಅನಾರೋಗ್ಯದ ರಜೆ. ಅದರಲ್ಲಿ ಆತ ಪೂರ್ತಿ ಸಂಬಳದ ಮೇಲೆ ಪಡೆಯಬಹುದಾದುದು ಹತ್ತೇ ದಿನಗಳ ರಜೆ. ಉಳಿದುದರ ಮೇಲೆ ಕಂಪೆನಿಯ ಕಟಾಕ್ಷ ಹೇಗಿದೆಯೋ. ಅವರ ಕಟಾಕ್ಷ ತನ್ನ ಮೇಲೆ ಯಾವ ರೀತಿಯಿದೆ ಎಂಬುದು ಸ್ವಯಂವ್ಯಕ್ತವಿರುವುದರಿಂದ ಆ ಉಳಿದ ಅವಧಿಗೆ ಅರ್ಧ ಸಂಬಳ ದೊರಕುವುದೂ ದುಸ್ತರ.

ಹಾಗಾದರೆ ದಿನ ಕಳೆಯುವ ಬಗೆ ಹೇಗೆ? ಮನೆಯ ಖರ್ಚು!

ಇನ್ನು ಡಿಸೆಂಬರ್ ಮಧ್ಯದಲ್ಲಿ ಭಾರತಿಯ ತಂಗಿ ಮತ್ತು ತಂಗಿಯ ಗಂಡ ಮುಂಬಯಿಗೆ ಬಂದರೆ....

ಅನಂತನಿಗೆ ನಿಷ್ಕಾರಣವಾಗಿ ಭಾರತಿಯ ಕುರಿತು ಎಲ್ಲಿಲ್ಲದ ಸಿಟ್ಟು ಬಂತು. ಆಕೆಯೇ ಸುನಂದೆಯನ್ನು ಬರಹೇಳಿದ್ದಾಳೆಂದು ಭಾವಿಸಿದ. ಬಂದರೆ ಯಾವುದಾದರೊಂದು ಹೋಟೆಲಿನಲ್ಲಿ ನಿಲ್ಲುವಂತೆ ಹೇಳಬೇಕಾಗಿ, ಉದ್ವೇಗದ ಒಂದು ಕ್ಷಣದಲ್ಲಿ ನಿಶ್ಚಯಿಸಿದ. ಆದರೆ ಮರುಕ್ಷಣ, ಅವರನ್ನು ಬರಬೇಕೆಂದು ಆಮಂತ್ರಿಸಿ ತಾನು ಔಪಚಾರಿಕವಾಗಿ ಬರೆದ ಕಾಗದದ ನೆನಪಾಯಿತು. ಮಾವ ಶ್ರೀಪತಿರಾಯರ ಮುಖ ಕಣ್ಣೆದುರು ಬಂತು;

ಸೌಜನ್ಯದ ಪ್ರತಿಮೂರ್ತಿ, ಅವರಿಗೆ ಎಂಥ ದ್ರೋಹ ಬಗೆಯುತ್ತಿದ್ದೇನೆ ಎಂದು ಅನಂತ ತನ್ನ ಚಿಂತನೆಯ ಕುರಿತು ಜಿಗುಪ್ಸೆಗೊಂಡ.

ಅಂಧೇರಿಯಲ್ಲಿ ಬೇರೆಲ್ಲ ಗೆಳೆಯರನ್ನು ಬೀಳ್ಕೊಟ್ಟು ಅನಂತ ಕುರ್ಲಾದ ಬಸ್ಸು ಹಿಡಿದಿದ್ದ. ಬೆಳಗಿನಿಂದ ಓಡಾಟದ ಆಯಾಸ—ಸರಿಯಾದ ಊಟ ಕೂಡ ಇದ್ದಿರಲಿಲ್ಲ—ತಲೆತುಂಬ ಯೋಚನೆ, ಹೀಗಾಗಿ ತಲೆ ಸಿಡಿದುಹೋಗುವುದೋ ಎಂಬಷ್ಟು ನೋವು ಕೊಡುತ್ತಿತ್ತು. ಕೆನ್ನೆಯ ಮೇಲಿನ ನರಗಳನ್ನು ಹೆಬ್ಬೆಟ್ಟಿನಿಂದ ಒತ್ತಿಹಿಡಿದುಕೊಂಡೇ ಅನಂತ ಮನೆಗೆ ಬಂದ.

ಮನೆಯ ಬಾಗಿಲಿಗೆ ಬೀಗ ಹಾಕಿತ್ತು.

ಕೀಲಿಗಾಗಿ ಅನಂತ ಕಿಸೆ ತುಂಬ ಹುಡುಕಾಡಿದ. ಅದು ಸಿಗಲಿಲ್ಲ. ಆತ ಕೀಲಿ ತೆಗೆದುಕೊಂಡು ಹೋಗುವ ಅಭ್ಯಾಸವನ್ನು ಇರಿಸಿಕೊಂಡಿರಲೂ ಇಲ್ಲ. ಭಾರತಿಯ ಇದಿರು ತನ್ನೆಲ್ಲ ದುಃಖವನ್ನು ತೋಡಿಕೊಂಡು ಆಕೆಯ ಸಾಂತ್ವನದ ಜೋಗುಳ ಕೇಳಿ ಒಂದರ್ಧ ತಾಸು ನಿದ್ರಿಸಬೇಕು, ಆಗಲಾದರೂ ಈ ತಲೆನೋವು ನಿಂತೀತು ಎಂದು ಭಾವಿಸಿ ಬಂದಿದ್ದವನಿಗೆ ಬೀಗ ಬಿದ್ದಿದ್ದ ಮನೆಯ ಬಾಗಿಲನ್ನು ಕಂಡು ಆದ ನೋವು ಅಷ್ಟಿಷ್ಟಲ್ಲ.

ಬಾಲ್ಕನಿಯ ಮುಂದೆ ಗೋಡೆಗೊರಗಿ ಅನಂತ ಹಾಗೆಯೇ ಅರ್ಧ ತಾಸು ನಿಂತಿದ್ದ. ಯಾರೋ ನೆರೆಯವರು ಬಂದು, “ನಿಮ್ಮ ಮನೆಯವರು ಗಿರಗಾಂಗೆ ಹೋಗಿರುವರೆಂದು ತೋರುತ್ತದೆ” ಎಂದು ಹೇಳಿದರು. ಅನಂತ ಈ ಮಾತನ್ನು ಕೇಳಿದರೂ ಕೇಳದವನಂತೆ ನಟಿಸಿ ನೇರ ಪ್ರೆಸ್ಸಿನ ದಾರಿ ಹಿಡಿದ.

ಭಾನುವಾರನೆಂದು ಪ್ರೆಸ್ಸಿನ ಕೆಲಸಗಾರರು ಎಂದಿಗಿಂತ ತುಸು ಬೇಗನೆ

ತೆರಳಿದ್ದರು. ಅಲ್ಲಿಯೂ ಬೀಗ ಮುದ್ರೆ. ಸೋಮಯಾಜಿಗಳಾದರೂ ಸಿಗಬಹುದೆಂದು ಅನಂತ ಅವರ ಮನೆಗೆ ಹೋದ. ಅವರೂ ಮನೆಯಲ್ಲಿರಲಿಲ್ಲ.

ಮೂರು ನಾಲ್ಕು 'ಆಸ್ಪ್ರೊ' ಮಾತ್ರೆಗಳನ್ನು ನುಂಗಿ, ಇರಾಣಿ ಹೋಟೆಲಿನ 'ಚಾ' ಎರಡು ಮೂರು ಬಾರಿ ಸವಿದರೂ ಅನಂತನ ತಲೆನೋವು ನಿಂತಿರಲಿಲ್ಲ. ಜೊತೆಗೆ ತನ್ನದೆಯ ದುಃಖವನ್ನು ಯಾರೊಡನೆಯೂ ತೋಡಿ ಕೊಳ್ಳಲು ಅವಕಾಶ ಸಿಗದ ಅವಸ್ಥೆಯಿಂದಾಗಿ ಉಂಟಾದ ನೋವು— ಕಾಲೆಳೆದತ್ತ ಹೋಗುವುದೆಂದುಕೊಂಡು ಅನಂತ ಮುಂದುವರಿದು ಹೋದ.

ಸಂಜೆ ಆರು ಘಂಟೆಯ ಸುಮಾರಿಗೆ ಆತ ತಲಪಾಡಿಯವರ ಮನೆಯ ಬಾಗಿಲಿಗೆ ಬಂದ.

ಬಾಗಿಲಲ್ಲಿ, ಕರೆಗಂಟೆ ಬಾರಿಸಿದಾಗ ತಲಪಾಡಿಯವರೇ ಬಂದು ಬಾಗಿಲು ತೆಗೆದರು. ಎಲ್ಲಿಗೋ ಹೊರಗೆ ಹೊರಡುವ ಸನ್ನಾಹದಲ್ಲಿರುವರೆಂದು ಅವರನು ನೋಡಿದೊಡನೆ ತಿಳಿಯುತ್ತಿತ್ತು. ಅನಂತನಿಗೆ ಏನು ಹೇಳುವುದೆಂದು ತಿಳಿಯ ಲಿಲ್ಲ. ಬೆಳಿಗ್ಗೆ ಮಾತ್ರ ಇಲ್ಲಿಗೆ ಬಂದಿದ್ದು ಈಗ ಪುನಃ ತಾನಾವ ಉದ್ದೇಶದಿಂದ ಇಲ್ಲಿಗೆ ಬಂದಿರುವೆನೆಂದು ತನಗೇ ತಿಳಿದಿರಲಿಲ್ಲ. ಆದರೆ ಏನಾದರೂ ಮಾತ ನಾಡಬೇಕಿತ್ತು. ಆ ಕಾರಣ ಪ್ರಸಂಗಾವಧಾನ ತಂದುಕೊಂಡು,

"ನಮಸ್ಕಾರ. ಹೊರಗೆ ಹೊರಟಿರೇನು ?" ಎಂದು ಕೇಳಿದ.

"ಹೌದು. ಹೋಗಬೇಕಿತ್ತು. ಕೆಲಸದ ಗಡಿಬಿಡಿ. ಪೂರ್ವ ಆಫ್ರಿಕ ದಿಂದ ಬರಬೇಕಾಗಿದ್ದ ಗೇರುಬೀಜಗಳ ಆಮದಿನ ವಿಚಾರ ಏನೋ ತೊಂದರೆ ಆಗಿದೆಯಂತೆ. ಆಫೀಸಿನ ತನಕ ಹೋಗಿ ಬರಬೇಕಿತ್ತು. ಬನ್ನಿ, ಒಳಗೆ ಬನ್ನಿ" ಎಂದು ಅನಂತನನ್ನು ಕರೆದರು.

ಅದೇ ಮೊದಲಿನ ಕೋಣೆ. ಇಂದಿರೆಯ ಕೋಣೆ.

"ನಾನು ಬೆಳಿಗ್ಗೆಯೇ ಕೇಳಬೇಕೆಂದು ಮಾಡಿದ್ದೆ. ಅವಸರದಲ್ಲಿ ಮರೆತು ಹೋಯಿತು. ಇಲ್ಲಿಂದ ಒಂದು ನಾಲ್ಕಾರು ಪುಸ್ತಕಗಳನ್ನು ನಾನು ಒಯ್ಯ ಬಹುದೆ? ಓದಿಯಾದೊಡನೆ ಹಿಂದಿರುಗಿಸುತ್ತೇನೆ. ನಿಮಗೂ ನಿಮ್ಮ ಮಗಳಿಗೂ ಏನೂ ಆಕ್ಷೇಪವಿಲ್ಲವಾದರೆ...."

"ಛೆ! ಛೆ! ಆಕ್ಷೇಪನೆಲ್ಲಿಂದ. ಬನ್ನಿ. ತೆಗೆಯಿರಿ. ಯಾವುದು ಬೇಕೋ ಅದು. ಒಂದು ಚೀಟಿ ಬರೆದು ಇಂದಿರೆಯ ಮೇಜಿನ ಮೇಲಿರಿಸಿಬಿಡಿ. ತನ್ನ

ಪುಸ್ತಕ ಭಂಡಾರದಿಂದ ನೀವು ಪ್ರಯೋಜನ ಪಡೆದಿರುವರೆಂದು ತಿಳಿದರೆ ತುಂಬ ಸಂತೋಷವಾಗಬಹುದು."

ಅನಂತ ಅವಸರದಲ್ಲಿ ನಾಲ್ಕಾರು ಪುಸ್ತಕಗಳನ್ನು ಆ ಕಪಾಟುಗಳಿಂದ ಹೊರತೆಗೆದು, ಅವುಗಳ ಹೆಸರು ಬರೆದು ಒಂದು ಚೀಟಿಯನ್ನು ಇಂದಿರೆಯ ಮೇಜಿನ ಮೇಲಿರಿಸಿದ. ಕೊನೆಗೆ ಏನೋ ಒಂದು ವಿಚಾರ ಹೊಳೆದು 'ನಿಮ್ಮ ಅನುಮತಿ ಪಡೆಯದೆ ತೆಗೆದಿದ್ದೇನೆ. ತುಂಬ ಧನ್ಯವಾದಗಳು' ಎಂದು ಬರೆದು ತನ್ನ ಸಹಿ ಮೂಡಿಸಿ, "ಮುಗಿಯಿತು" ಎಂದು ಸಂಜೀವರಾಯರನ್ನುದ್ದೇಶಿಸಿ ಹೇಳಿದ.

"ಒಂದರ್ಧ ತಾಸು ಮಾತನಾಡಬಹುದಿತ್ತು. ಅವಸರದಲ್ಲಿ ಹೊರಗೆ ಹೋಗಬೇಕಾಗಿದೆ, ಕ್ಷಮಿಸಿ" ಎಂದು ಸಂಜೀವರಾಯರು ಹೇಳಿದರು.

"ಚಿಂತಿಲ್ಲ. ಇನ್ನೊಮ್ಮೆ ಯಾವಾಗಲಾದರೂ ಬರುತ್ತೇನೆ" ಎಂದು ಅನಂತ ಉತ್ತರಿಸಿದ.

ಇಬ್ಬರೂ ಕೂಡಿಯೇ ಮನೆಯಿಂದ ಹೊರಬಿದ್ದರು. ಹೊರಬಾಗಿಲಲ್ಲಿ ಕಾರು ಸಿದ್ಧವಾಗಿ ನಿಂತಿತ್ತು. "ನೀವು ಯಾವ ಕಡೆ ಹೋಗುತ್ತೀರಿ? ಕಾರಿನಲ್ಲಿ ಬರುವಿರೇನು?" ಎಂದು ಸಂಜೀವರಾಯರು ಪ್ರಶ್ನಿಸಿದರು. ಅನಂತ, ನಾಗೇಶ ರಾಯರ ಮನೆಗೆ ಹೋಗಿ, ಭಾರತಿ ಅಲ್ಲಿದ್ದರೆ ಅವಳನ್ನು ಕೂಡಿಕೊಳ್ಳೋಣವೇ ಎಂದು ಮೊದಲು ಭಾವಿಸಿದ್ದ. ಈಗ ಮನಸ್ಸು ಬದಲಿಸಿ, "ನನಗೆ ವಿ. ಟಿ. ಗೆ ಹೋಗಬೇಕಾಗಿದೆ" ಎಂದ.

"ಹಾಗಾದರೆ ಬನ್ನಿ. ನಿಮ್ಮನ್ನು ವಿ. ಟಿ. ಯಲ್ಲಿ ಬಿಟ್ಟು ನಾನು ನಮ್ಮ ಆಫೀಸಿಗೆ ಹೋಗುತ್ತೇನೆ" ಎಂದು ಸಂಜೀವರಾಯರು ಕರೆದರು.

ಆದರೂ ಅನಂತ ಮನೆ ತಲಪಿದಾಗ ಎಂಟು ಘಂಟೆ ರಾತ್ರಿಯಾಗಿತ್ತು. ವಿ. ಟಿ. ಯಲ್ಲಿ ಸಂಜೀವರಾಯರನ್ನು ಬೀಳ್ಕೊಟ್ಟಮೇಲೆ ಅನಂತನಿಗೆ ಮನೆಗೆ ಹೋಗುವ ಮನಸ್ಸಾಗಲಿಲ್ಲ. ಸ್ಟೇಶನಿನ ಮುಂದಿನ ತೋಟದ ಬೆಂಚೊಂದರಲ್ಲಿ ಕುಳಿತು, ತಾನು ಯಾವಾಗಲೂ ಕಿಸೆಯಲ್ಲಿ ಒಯ್ಯುತ್ತಿದ್ದ ಖಾಲಿ ಹಾಳೆಗಳನ್ನು ತೆಗೆದು, ಕಾಶ್ಮೀರ ಸಮಸ್ಯೆಯ ಪೂರ್ವಾಪರಗಳನ್ನು ಚರ್ಚಿಸಿ ಒಂದು ಲೇಖನ ಸಿದ್ಧಪಡಿಸತೊಡಗಿದ.

ಮನಸ್ಸು ಸಮಸ್ಯೆಯಲ್ಲಿ ಕೇಂದ್ರೀಕೃತವಾದಂತೆ ತಲೆನೋವು ನಿಂತಿತು. ಲೇಖನಿ ಅವ್ಯಾಹತವಾಗಿ ಮುಂದುವರಿಯುತ್ತಿತ್ತು. ಬರೆದು ಮುಗಿಸಿದಾಗ

ಬೀದಿಯ ದೀಪಗಳೆಲ್ಲ ಹತ್ತಿಕೊಂಡಿದ್ದವು. ಅನಂತ ಎದ್ದು ಮನೆಯ ದಾರಿ ಹಿಡಿದ.

ಮನೆ ತಲಪಿದಾಗ ಬಾಗಿಲಲ್ಲೇ ಭಾರತಿಯ ಹಾಡು ಕೇಳಿಬಂತು. ತುಂಬ ಉತ್ಸಾಹದಿಂದ ಆಕೆ ಹಾಡಿಕೊಳ್ಳುತ್ತಿದ್ದಳು. ಅನಂತ ಒಂದು ಕ್ಷಣ ಹಾಗೆಯೇ ಹಾಡನ್ನು ಆಲಿಸಿ ಆಮೇಲೆ ಬಾಗಿಲು ಸದ್ದು ಮಾಡಿದ. ಭಾರತಿ ನಗುತ್ತಲೇ ಬಂದು ಬಾಗಿಲು ತೆರೆದಳು. ಆದರೆ ಅನಂತ ಪ್ರತಿ ನಗಲಿಲ್ಲ. ಈಗ ಕಾಶ್ಮೀರ ಸಮಸ್ಯೆ ಮನಸ್ಸಿನಿಂದ ಮರೆಯಾಗಿತ್ತು. ಮುಂಜಾವಿನ ಸಮಸ್ಯೆ ಮತ್ತೆ ತಲೆಯೆತ್ತಿತ್ತು.

"ಎಲ್ಲಿಗೆ ಹೋಗಿದ್ದಿ ಮಧ್ಯಾಹ್ನ ?"

ಭಾರತಿ ಗಂಡನ ಮುಖ ನೋಡಿದಳು. ತನ್ನ ಮೇಲೆ ಸಿಟ್ಟಾಗಿ ಆತ ಈ ರೀತಿ ಕೇಳುತ್ತಿದ್ದಾನೆ ಎಂದು ಆಕೆ ಭಾವಿಸಿದಳು. ಪ್ರತಿಭಟನೆ ಅವಳ ಮನಸ್ಸಿನಲ್ಲಿಯೂ ಮೂಡಿತು.

"ನೀವು ಬಂದಿದ್ದಿರೇನು ?"

"ನಾನು ಬರಬಾರದೆಂದಿಯೆ ?"

"ನಿಮ್ಮ ಮನೆಗೆ ಬರಹೇಳಲು ನಾನು ಯಾರು? ಆದರೆ ಹೊತ್ತಿಗೆ ಸರಿಯಾಗಿ ಬರದಿದ್ದರೆ ನಾನು ಏನಾದರೊಂದು ಕಾರಣವನ್ನು ಯೋಚಿಸುವ ಸ್ವಾತಂತ್ರ್ಯವನ್ನು ಪಡೆದಿಲ್ಲವೆ ?"

"ಎಲ್ಲಿಗೆ ಹೋಗಿತ್ತು, ಸವಾರಿ ?" ಅನಂತ ವಿರಸದ ಛಾಯೆ ಮಾತಿನಲ್ಲಿ ತಲೆದೋರುತ್ತಿರುವುದನ್ನು ತಡೆಹಾಕಲೆಂದು ಪ್ರಯತ್ನಪೂರ್ವಕ ನಗು ತಂದು ಕೊಂಡು ಕೇಳಿದ.

"ಗಾಂಧಾವಿ. ನಾಗೇಶರಾಯರಲ್ಲಿಗೆ."

"ದಾರಿ ತಿಳಿಯಿತೇನು ?"

"ತಿಳಿಯದಿದ್ದರೆ ಕೇಳಿಕೊಂಡು ಹೋಗುವಷ್ಟು ನಾಲಿಗೆಯೂ ಇಲ್ಲವೆ ? ನಾನೇನು ಬರೇ ಹಳ್ಳಿಯ ಮುಕ್ಕಳಲ್ಲ."

"ಅಷ್ಟಾದರೂ ಬುದ್ಧಿ ಬಂತಲ್ಲ. ಆರು ತಿಂಗಳಾದ ಮೇಲೆ" ಎಂದು ಅನಂತ ನಗುತ್ತಲೇ ಮಾತು ಮುಗಿಸಿದ.

ಗಂಡನು ಸಮಾಧಾನಗೊಂಡುದನ್ನು ನೋಡಿ ಭಾರತಿಗೂ ಮನಸ್ಸು ಹಗುರಾಯಿತು. ಊಟಕ್ಕೆ ಬಡಿಸುತ್ತಿದ್ದಂತೆ ನಗುತ್ತಲೇ ಹೇಳಿದಳು :

"ಸುಶೀಲಕ್ಕ ಬಸುರಿಯಂತೆ. ಕಾಗದ ಬಂದಿದೆಯಂತೆ. ಮೀನಾಕ್ಷಮ್ಮ ಹೇಳಿದಳು."

ಮೆಡಿಕಲ್ ಸರ್ಟಿಫಿಕೇಟಿಗಾಗಿ ಬೆಳಿಗ್ಗೆ ಯಾರ ಮುಖ ನೋಡಲಿ ಎಂದು ಅನಂತ ಚಿಂತಿಸುತ್ತಿದ್ದ. ಹೆಂಡತಿಯ ಮಾತು ಕೇಳಿ ಸಿಟ್ಟು ಬಂತು.

"ಅದಕ್ಕೆ ನಾನೇನು ಮಾಡಬೇಕಾಗಿದೆ?"

"ನೀವೇನೂ ಮಾಡಬೇಕೆಂದು ಹೇಳಿಲ್ಲ. ಅವರು ಇನ್ನು ಕೆಲವು ತಿಂಗಳಲ್ಲಿ ಪುನಃ ಮುಂಬಯಿಗೆ ಬರಬಹುದು. ಆ ಕಾರಣ ಅವರ ಒಡನಾಟ ನನಗೆ ಸಿಗುತ್ತದೆ—ಎಂಬ ಕಾರಣದಿಂದ ಹೇಳಿದೆ. ನನ್ನ ಪಾಲಿನ ಸಂತೋಷದ ಯಾವೊಂದು ಸುದ್ದಿಯನ್ನೂ ಕೇಳಲು ನಿಮಗೆ ಮನಸ್ಸಿಲ್ಲವಾದರೆ ಮಾತನಾಡುವುದೇ ಬೇಡವೆಂದು ಹೇಳಿಬಿಡಿಯಲ್ಲ."

ಭಾರತಿಯ ಕಣ್ಣಲ್ಲಿ ನೀರು ತುಂಬುತ್ತಿತ್ತು. ಅನಂತ ಗಲಿಬಿಲಿಗೊಂಡ.

"ಹಾಗಲ್ಲ, ಭಾರೀ. ನಿನಗೆ ಅರ್ಥವಾಗುವುದಿಲ್ಲ. ನಿನಗೆ ಅರ್ಥವಾಗುವುದಿಲ್ಲ" ಎಂದು ಎರಡು ಬಾರಿ ಹೇಳಿದ. ಮತ್ತೆ ಮಾತನಾಡದೆ ಊಟ ಮುಗಿಸಿ ಎದ್ದು ಹೋದ. ತಾನು ಸಿಲುಕಿಕೊಂಡಿರುವ ಪರಿಸ್ಥಿತಿಯನ್ನು ಭಾರತಿಗೆ ತಿಳಿಸಬೇಕು, ಆಕೆಯ ಸಲಹೆ ಕೇಳಬೇಕು ಎಂಬ ಆಸೆಗೆ ಅನಂತ ಕುಳಿತಲ್ಲೆ ತಿಲಾಂಜಲಿ ಕೊಟ್ಟ. ಊಟ ಮುಗಿಸಿ ಬಾಲ್ಕನಿಯಲ್ಲಿ ನಿಂತು ದಾರಿಯಲ್ಲಿ ಓಡಾಡುತ್ತಿದ್ದ ವಾಹನಗಳೆಡೆ ನೋಡಲಾರಂಭಿಸಿದ.

ಮರುದಿನ ಬೆಳಿಗ್ಗೆ ಅನಂತ ಎಂದಿಗಿಂತ ತುಸು ಬೇಗನೆ ಮನೆ ಬಿಟ್ಟಿದ್ದ. ಗುರುತಿನ ಡಾಕ್ಟರೊಬ್ಬರಿಂದ ಒಂದು ತಿಂಗಳ ವಿಶ್ರಾಂತಿ ಅತ್ಯಗತ್ಯವೆಂದು ಪ್ರಮಾಣಪತ್ರ ಬರೆಸಿಕೊಂಡು ಆಫೀಸಿನ ದಾರಿ ಹಿಡಿದ.

ಆಫೀಸಿನಲ್ಲಿ ಅನಂತನ ರಜೆಯ ಅರ್ಜಿ ಒಳಗೆ ಹೋದಾಗ ಅಧಿಕಾರಿಗಳು ತಬ್ಬಿಬ್ಬಾದರು. ಅವರು ಈ ರೀತಿಯ ಹಂಚಿಕೆಯನ್ನು ನಿರೀಕ್ಷಿಸಿರಲಿಲ್ಲ. ಅನಂತನಿಗೆ ಕರೆ ಬಂತು. ರಜೆ ಸಿಗುವುದು ಸಾಧ್ಯವಿಲ್ಲವೆಂಬ ಬೆದರಿಕೆ ಬಂತು. ವೈದ್ಯಕೀಯ ಅಭಿಪ್ರಾಯದಂತೆ ತನಗೆ ರಜೆ ಬೇಕೇಬೇಕೆಂದು ಅನಂತ ಹಟ ಹಿಡಿದ. "ಹಾಗಾದರೆ ನೀವು ನಮ್ಮ ಕಂಪೆನಿಯ ಡಾಕ್ಟರರನ್ನು ಕಾಣಬೇಕು" ಎಂದು ಆಜ್ಞೆ ಹೊರಟಿತು. ಅನಂತ ಸಿದ್ಧನಾಗಿದ್ದ.

ಕಂಪೆನಿಯ ವೈದ್ಯರು, ದಿನಕ್ಕೆ ಹದಿನೆರಡು ತಾಸು ಶ್ರಮಿಸುತ್ತಿದ್ದ ಅನಂತನನ್ನು ಪರೀಕ್ಷಿಸಿ, "ನೀನು ಒಂದಲ್ಲ, ಎರಡು ತಿಂಗಳ ರಜೆ ಬೇಕೆಂದು

ಬರೆದರೂ ನಾನು ಬೇಡವೆನ್ನುವುದಿಲ್ಲ" ಎಂದರು. ಅಧಿಕಾರಿಗಳು ಈಗ ಪುನಃ ಗೊಂದಲದಲ್ಲಿ ಬಿದ್ದರು. ರಜೆ ಕೊಡದೆ ನಿವೃತ್ತಿಯಿದ್ದಿರಲಿಲ್ಲ.

ಆಮೇಲೆ ಬಂತು ಸ್ಥಳಾಂತರ ಪ್ರಶ್ನೆ :

"ನೀವು ರಜೆ ಮುಗಿದ ಮೇಲೆ ಬರೋಡಾಕ್ಕೆ ಹೋಗಬೇಕಾಗಬಹುದು" ಎಂದರು.

"ಅದು ಸಾಧ್ಯವೇ ಇಲ್ಲ. ನಾನು ಮುಂಬಯಿ ಬಿಡುವಂತಿಲ್ಲ" ಎಂದು ಅನಂತ ಉತ್ತರಿಸಿದ.

"ನೀವು ಮುಂಬಯಿ ಬಿಡುವಂತಿಲ್ಲವಾದರೆ ನಮ್ಮ ಆಫೀಸಿನಲ್ಲಿ ನಿಮಗೆ ಸ್ಥಳವೂ ಇಲ್ಲ" ಎಂದು ಅವರು ಹೇಳಿದರು.

"ನೋಡೋಣ. ಈಗ ಮೊದಲು ನನಗೆ ರಜೆ ಬೇಕಾಗಿದೆ" ಎಂದು ಅನಂತ ಮರುಮಾತನಾಡದೆ ಅಲ್ಲಿಂದೆದ್ದು ಬಂದ.

ಆಫೀಸು ಬಿಟ್ಟವನು ಅನಂತ ನೇರ ಪ್ರೆಸ್ಸಿಗೆ ಬಂದ. ಸೋಮಯಾಜಿಗಳು ಪ್ರೂಫ್ ತಿದ್ದುತ್ತ ಕುಳಿತಿದ್ದರು. ಅನಂತನನ್ನು ಆ ಹೊತ್ತಿನಲ್ಲಿ ನೋಡಿ ಅವರಿಗೆ ಆಶ್ಚರ್ಯವಾಯಿತು.

"ಇದೇನು ! ಆಫೀಸು ಇಲ್ಲವೆ ?" ಎಂದು ಕೇಳಿದರು.

"ಬಹುಶಃ ಆಫೀಸು ಜೀವನ ಮುಗಿದಂತೆ ಎಂದು ತೋರುತ್ತದೆ" ಎಂದು ಅನಂತ ನಡೆದುದೆಲ್ಲವನ್ನೂ ವಿವರಿಸಿದ. ಸೋಮಯಾಜಿಗಳು ಕತೆಯನ್ನು ಕೇಳುತ್ತಿದ್ದಂತೆಯೇ ಮುಂದೇನು ಮಾಡುವುದೆಂದು ಚಿಂತಿಸತೊಡಗಿದರು.

"ಹಾಗಾದರೆ ಒಂದು ತಿಂಗಳ ವಿರಾಮ ನಿನಗೆ."

ಅನಂತ ಕೈಯ ಮೇಲೆ ತಲೆಯಿರಿಸಿ ಕುಳಿತಿದ್ದ. ಸೋಮಯಾಜಿಗಳ ಪ್ರಶ್ನೆ ಕೇಳಿ ಆತನಿಗೆ ನಗು ಬಂದು.

"ಹತ್ತು ದಿನಗಳ ರಜೆ, ಸೋಮಯಾಜಿಗಳೆ. ಉಳಿದುದೆಲ್ಲಕ್ಕೆ ಪಗಾರ ನಾಸ್ತಿ. 'ಟ್ರೇಡ್ ಯೂನಿಯನ್' ಕೆಲಸಗಾರರ ಸಾವು ಬದುಕಿನ ಪ್ರಶ್ನೆ— ಸಂಬಳವಿಲ್ಲದೆ, ಉಪವಾಸ."

ಸೋಮಯಾಜಿಗಳು ಅನಂತನನ್ನೆ ನೋಡುತ್ತಿದ್ದರು. ಆತನ ಹೃದಯದ ಕೋಲಾಹಲದ ಆವೇಗವನ್ನು ಊಹಿಸುವುದು ಅವರಿಗೆ ಸಾಧ್ಯವಿತ್ತು. ಆದರೆ ಮಾತು ಹೊರಡಲಿಲ್ಲ.

"ಅದು ಸಾಯಲಿ. ಸೋಮಯಾಜಿಗಳೆ. ಕಾಶ್ಮೀರ ಲೇಖನ ಅಚ್ಚಿಗೆ ಹೋಯಿತೇನು? ಓದಿ ನೋಡಿದಿರಾ? ಬೆಳಿಗ್ಗೆ ಬಿಸಾಡಿ ಹೋಗಿದ್ದೆ."

"ಎಲ್ಲಿ ಬರೆದಿ ಅದನ್ನು, ಅನಂತಾ?"

"ಇಲ್ಲೇ ವಿ. ಟಿ. ಸ್ಟೇಶನಿನ ಸಮೀಪ. ನಿನ್ನೆ ಸಂಜೆ, ಒಂದು ಘಂಟೆಯ ಅವಕಾಶವಿತ್ತು. ಮನಸ್ಸಿನಲ್ಲಿ ಬೇಡವಾದ ವಿಚಾರಗಳಿದ್ದವು. ಆ ಕಾರಣ ಮನಸ್ಸನ್ನು ಬೇರೆ ಕಡೆ ತಿರುಗಿಸಲು ಸುಲಭ ಸಾಧನ ಸಿಕ್ಕಿತು. ಬರೆದೆ. ಇನ್ನೊಂದು ತಿಂಗಳು 'ಕಹಳೆ'ಗಾಗಿ ಬೇಕಾದ್ದನ್ನು ಬರೆಯಬಹುದು. ಅವಕಾಶದ ಪ್ರಶ್ನೆಯಿಲ್ಲ."

"ಆದರೆ ಮುಂದಿನ ಮಾತು, ಅನಂತಾ?"

"ಮುಂದಿನ ಚಿಂತೆ ಪ್ರಸ್ತುತವೆ? ಹೋರಾಟದಲ್ಲಿ ಪ್ರತಿಯೊಂದು ಹೆಜ್ಜೆಯೂ ಗಂಡಾಂತರದ ಹಾದಿಯಲ್ಲೇ ಅಲ್ಲವೆ?"

"ಕೆಲಸ ಬಿಡಬೇಕಾಗಿ ಬರಬಹುದೇನು?"

"ಮುನ್ನೂರು ಜನ ಕಾರಕೂನರ ದೌರ್ಬಲ್ಯದ ಪ್ರಶ್ನೆಯಿದು, ಸೋಮಯಾಜಿಗಳೆ. ನನ್ನೊಬ್ಬನ ವೈಯಕ್ತಿಕ ಪ್ರಶ್ನೆಯಲ್ಲ. ಅವರು ಗೆದ್ದರೆ ನಾನು ಗೆಲ್ಲುತ್ತೇನೆ. ಅವರು ಸೋತರೆ ನಾನು ಸೋಲುತ್ತೇನೆ."

"ಅದು ಸರಿ, ಅನಂತಾ. ಹಾಗಾದರೆ ಬೇರೆ ಯಾವುದಾದರೂ ದಾರಿ ಹುಡುಕಬೇಕಾಯಿತಲ್ಲ."

"ದಾರಿ ಬೇರೆ ಯಾವುದೂ ಇಲ್ಲ, ಸೋಮಯಾಜಿಗಳೆ. ಕರ್ತವ್ಯ ವಿಮುಖತೆಯ ಒಂದು ದಾರಿಯಿದೆ. ನೀವು ಅದನ್ನು ನನಗೆ ಬೋಧಿಸುವುದಿಲ್ಲ."

"ನಿನ್ನ ಧೈರ್ಯದ ಪರಿಚಯ ನನಗಿದೆ, ಅನಂತಾ. ಆದರೆ ಮನೆ?"

ಅನಂತನ ತಲೆ ಪುನಃ ಸಿಡಿಯಲಾರಂಭಿಸಿತ್ತು. ಸೋಮಯಾಜಿಗಳ ಕಡೆಗೊಮ್ಮೆ ನೋಡಿ ಆತ ನಕ್ಕ.

"ಮನೆಗಿಂತ ಜನ ದೊಡ್ಡದು, ಸೋಮಯಾಜಿಗಳೆ. ಹೋರಾಟದ ಕೆಚ್ಚಿರುವ ಎದೆಗೆ ಪೂರಕವಾದ ಸ್ನೇಹದ ವಾತಾವರಣವನ್ನೊದವಿಸಿದರೆ ಮಾತ್ರ ಅದು ಮನೆ; ಇಲ್ಲವಾದರೆ ಮಸಣ."

"ಅನಂತ!"

ಸೋಮಯಾಜಿಗಳ ಎಚ್ಚರಿಕೆಯ ಮಾತು ಅದು. ಅನಂತ ಮುಖ ತಗ್ಗಿಸಿದ. ಮತ್ತೆ ಮಾತನಾಡದೆ ಅಲ್ಲಿಂದ ಮನೆಯ ದಾರಿ ಹಿಡಿದ.

ಮಧ್ಯಾಹ್ನ ಬಿಸಿಲಿಗೆ ಮನೆಗೆ ಬಂದ ಗಂಡನನ್ನು ನೋಡಿ ಭಾರತಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಗಂಡನ ಬಾಡಿದ ಮುಖವನ್ನು ನೋಡಿದಾಗಲೇ ಏನೋ ಪ್ರಮಾದವಾಗಿದೆಯೆಂದು ಆಕೆಗೆ ಅನಿಸಿತ್ತು.

"ಏನು, ಆಫೀಸು ಇಲ್ಲವೆ ?"

ಆಫೀಸು ಇಲ್ಲವೆ? ಮತ್ತೆ ಅದೇ ಪ್ರಶ್ನೆ. ಸಮಗ್ರ ಜಗತ್ತೇ ಅದೇ ರೀತಿ. ಒಂದು ವ್ಯವಸ್ಥಿತ ಜೀವನಕ್ರಮಕ್ಕೆ ಬದಲಾವಣೆಯೆಂಬುದೇ ಇಲ್ಲ. ಅದಕ್ಕೆ ಯಾವ ಅಡೆತಡೆಗಳೂ ಏರು ತಗ್ಗುಗಳೂ ಇಲ್ಲವೆಂಬ ಭಾವನೆ. ಆದರೆ ಅದು ಯಾವಾಗಲೂ ನಿಂತಿರುವುದು ಮಾತ್ರ ಒಂದು ಅಸಮಾಧಾನ ಆರ್ಥಿಕ ವ್ಯವಸ್ಥೆಯ ಜ್ವಾಲಾಮುಖಿಯ ಮೇಲೆ.

ಇನ್ನೂ ವ್ಯವಸ್ಥೆಯ ಕುರಿತಾದ ಕಳಕಳಿ.

"ಆಫೀಸು ಇಲ್ಲ. ಇನ್ನು ಒಂದು ತಿಂಗಳು ಇಲ್ಲ. ಮೆಡಿಕಲ್ ಲೀವ್. ಹತ್ತು ದಿನ ಸಂಬಳವಿದೆ. ಮತ್ತುಳಿದ ಅವಧಿಗೆ ಅದು ಕೂಡಾ ಇಲ್ಲ."

"ನಿಮಗೆ ಸೌಖ್ಯವಿಲ್ಲವೆ? ಹೇಳಬಾರದಿತ್ತೇ ?" ಭಾರತಿ ಕಳಕಳಿಯ ಪ್ರತಿಮೂರ್ತಿಯಾಗಿ ಕೇಳಿದಳು.

"ನನಗೇನೂ ಆಗಿಲ್ಲ ಧಾಡಿ. ರಜೆ ಪಡೆಯದಿದ್ದರೆ ನಾಳೆ ಬರೋಡಾಕ್ಕೆ ಗಂಟುಮೂಟೆ ಕಟ್ಟಿಕೊಂಡು ಹೊರಡಬೇಕಿತ್ತು. ಒಂದೇ ವರ್ಗ ಅಥವಾ ರಜೆ. ಇನ್ನು ರಜೆ ಮುಗಿದ ಮೇಲೆ ಮನೆಗೆ ಹೋಗುವ ಸರದಿಯೂ ಬರಲಿದೆಯೋ ಏನೆಂದು ನೋಡಬೇಕು."

"ಏನಾಯಿತು ಗಲಾಟೆ ?"

"ಗಲಾಟೆಯ ಪ್ರಶ್ನೆಯೆಲ್ಲಿ? ನಾನು ಯೂನಿಯನ್ ಕಾರ್ಯದರ್ಶಿ ಆದ ಕಾರಣ ಇಲ್ಲಿರುವುದು ನಮ್ಮ ಅಧಿಕಾರಿಗಳಿಗೆ ಸಹನೆಯಾಗುವುದಿಲ್ಲ. ಆ ಕಾರಣ ಉಚ್ಚಾಟನೆಯ ದಾರಿ ಹುಡುಕುತ್ತಲೇ ಇದ್ದಾರೆ."

"ಆ ಕಾರ್ಯದರ್ಶಿಯ ಕೆಲಸ ಬಿಟ್ಟುಬಿಡಬಾರದಿತ್ತೇ ?" ಭಾರತಿ ಆ ರೀತಿ ಮಾತನಾಡಬಾರದಾಗಿತ್ತು. ಆಡಿದ ಮೇಲೆ ಹಾಗೆ ಹೇಳಬಾರದಿತ್ತೇನೋ ಎಂದು ಆಕೆ ತುಟಿ ಕಡಿದುಕೊಂಡಳು. ಮುಂದಿನ ಆರ್ಥಿಕ ಪರಿಸ್ಥಿತಿಯ ಭೀತಿ ಅವಳಿಂದ ಆ ಮಾತು ಆಡಿಸಿತ್ತು.

"ಬಿಡಬಹುದಿತ್ತು. ಎಲ್ಲವನ್ನೂ ಬಿಟ್ಟುಬಿಟ್ಟು ನಿನ್ನಂಥ ರಾಣಿಯನ್ನು ಕಟ್ಟಿಕೊಂಡು ನಕ್ಕುನಲಿದು ಹುಳದಂತೆ ಜಗತ್ತಿನಲ್ಲಿ ಮರೆಯಬಹುದಿತ್ತು ! ನಾನು ಹಾಗೆ ಮಾಡಿಲ್ಲ."

ಅನಂತನ ಕಣ್ಣು ಕೆಂಪಾಗಿದ್ದುವು. ಸಾಲದುದಕ್ಕೆ ಭಯಂಕರ ತಲೆ ಸಿಡಿತ. ಇದಿರಿಗೆ ನಿಂತಿದ್ದ ಭಾರತಿಯನ್ನೊಮ್ಮೆ ದೂಡಿ, ಮುಂದೆ ಹೋಗಿ ನೆಲದಲ್ಲಿ ಬಿದ್ದುಕೊಳ್ಳೋಣವೇ ಎಂದು ಒಂದು ಕ್ಷಣ ತೋರಿತು. ಆದರೆ ಆತನ ಸಂಯಮ ಹಾಗೆ ಮಾಡದಂತೆ ತಡೆಯಿತು.

ಅನಂತನ ಹೃದಯದ ಉತ್ಪಾತ ಈ ರೀತಿಯದಾಗಿದ್ದರೆ ಭಾರತಿ ಬೇರೆಯೇ ಯೋಚಿಸುತ್ತಿದ್ದಳು: ಇನ್ನು 'ಮೂರು ವಾರಗಳಲ್ಲಿ ಸುನಂದೆ ಬರಲಿದ್ದಾಳೆ. ಅವಳು ಬರುವುದು ಬೇಡವೆ ? ಬಂದರೆ ಆಗ ನಮ್ಮ ಗತಿ ಏನು !'

"ಸುನಂದೆಗೆ ಬರುವುದು ಬೇಡವೆಂದು ಬರೆಯಲೇ ?" ಎಂದು ತನ್ನ ಹೃದಯದ ಕೋಲಾಹಲವನ್ನು ಮರೆಮಾಚಲು ಸಾಧ್ಯವಾಗದೆ ಭಾರತಿ ಕೇಳಿದಳು.

ಅನಂತನಿಗೆ ಈ ಪ್ರಶ್ನೆಯನ್ನು ತಡೆದುಕೊಳ್ಳುವುದು ಕಷ್ಟವಾಯಿತು.

"ಎಲ್ಲಾದರೂ ಬಾವಿಗೆ ಬೀಳಲು ಹೇಳಲ್ಲ. ಈಗ ಯಾಕೆ ಆ ಮಾತು ?" ಎಂದು ಸಿಟ್ಟಿನಿಂದಲೇ ಹೇಳಿದ.

ಭಾರತಿ ಭಯದಿಂದ ತತ್ತರಿಸಿಹೋದಳು. ಆಕೆಯ ಮುಖವೆಲ್ಲ ಕೆಂಪಾಯಿತು. ಕಣ್ಣು ತುಂಬಿಕೊಂಡು ನೀರಿಳಿಯಲಾರಂಭಿಸಿತು. ಏಕೋ ಓಕರಿಕೆ ಬಂದು ಭಾರತಿ ಮೋರಿಯ ಕಡೆ ಧಾವಿಸಿದಳು. ಬಾಯಿ ತೊಳೆದು ಬಂದವಳೇ ಮಂಚದ ಮೇಲೆ ಬಿದ್ದು ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು.

ಬಿದ್ದ ಭಾರತಿಯನ್ನು ಕಂಡಾಗ ಅನಂತ ಎಚ್ಚತ್ತ. ತನ್ನ ಸಿಟ್ಟಿನ ಅನುಚಿತ ಪ್ರದರ್ಶನದಿಂದ ಕಂಗಾಲಾದ. ಮಾವ ಶ್ರೀಪತಿರಾಯರು ಪುನಃ ಮನಸ್ಸಿನಿದಿರು ಬಂದರು.

'ಭಾರೀ, ಎಲ್ಲ ಪ್ರಲೋಭನಗಳಿಂದ ವಿಮುಕ್ತವಾದ ಹೋರಾಟದ ಜಗತ್ತಿನಲ್ಲಿ ಅರಳುವ ಹೂವಲ್ಲ, ಅನಂತಾ' ಎಂದು ಶ್ರೀಪತಿರಾಯರು ಹೇಳಿದ್ದರು.

ಅನಂತ ಓಡಿಹೋಗಿ ಭಾರತಿಯನ್ನು ತಬ್ಬಿಕೊಂಡ.

"ಅಳಬಾರದು, ಭಾರೀ. ತಪ್ಪಾಯಿತು. ಹಾಗೆ ನಾನು ಹೇಳಬಾರದಿತ್ತು. ನಿನಗೆ ಅರ್ಥವಾಗುವುದಿಲ್ಲ, ಭಾರೀ. ನಿನಗೆ ಅರ್ಥವಾಗುವುದಿಲ್ಲ."

ಎರಡು ದಿನಗಳ ಅನಂತನ ಮನಸ್ಸಿನ ಹೋರಾಟದ ಕೊನೆಯ ಘಟ್ಟ. ಅನಂತ ಕಣ್ಣೀರು ಸುರಿಸಿ ಬಹಳ ಸಮಯವಾಗಿತ್ತು.

ಈಗ ಅಳಲಾರಂಭಿಸಿದ. ಹಾಗೆ ಅಳುತ್ತಿರುವಾಗ ವಿಚಿತ್ರ ಸಮಾಧಾನ ವಾಗುತ್ತಿತ್ತು. ಭಾರತಿಯನ್ನು ನೋಡಿದಷ್ಟು ಆಕೆಯ ಮುಖದ ಹಿಂದೆ ಆತನಿಗೆ ಇನ್ನೊಂದು ಮುಖ ಕಾಣುತ್ತಿತ್ತು :

ಇಂದಿರೆ !

ಎರಡು ಜೀವಗಳ ನಡುವೆ ಒಂದು ಅಭೇದ್ಯ ಕೋಟೆಯ ಅಂತರ. ಆಕೆಯ ಸಾಮಿಪ್ಯವೂ ದಿಗಂತದಷ್ಟು ದೂರ.

ಅನಂತ ಯೋಚನೆಯಲ್ಲೇ ರಾತ್ರಿ ಕಳೆದ.

೨೧

ರಾತ್ರಿಯಿಡೀ ಯೋಚನೆಯಲ್ಲೇ ಕಳೆದಿದ್ದುದರಿಂದ ಬೆಳಗಿನ ಜಾವಕ್ಕೆ ಅನಂತನಿಗೆ ಚೆನ್ನಾಗಿ ನಿದ್ದೆ ಹತ್ತಿತ್ತು. ಮೊದಲು ಎದ್ದ ಭಾರತಿ ತಲೆಗೂದ ಲನ್ನು ಸವರಿ ಸರಿಪಡಿಸಿಕೊಳ್ಳುತ್ತಿದ್ದಂತೆಯೇ ಮಲಗಿದ್ದ ಗಂಡನ ಕಡೆಗೊಮ್ಮೆ ನೋಡಿದಳು.

ಅವಿರತ ಶ್ರಮದಿಂದ ಸೋತುಹೋದ ದೇಹ. ಕೃಶವಾದ ಮುಖ. ಮೂಳೆ ಕಾಣಿಸುವ ಎದೆ.

ಅನಂತನ ಉಸಿರು ತಡೆದು ತಡೆದು ಬರುತ್ತಿತ್ತು ; ನಿದ್ದೆಯಲ್ಲೂ ಯಾರಿಗಾಗಿಯೋ ಅಳುತ್ತಿದ್ದಾನೆ ಎನ್ನುವಂತೆ.

ಭಾರತಿಯ ಹೃದಯದಲ್ಲಿ ದುಃಖ ತುಂಬಿತು. ಜಗತ್ತಿನ ಅತ್ಯಂತ ಆತ್ಮೀಯ ಬಂಧನದಿಂದ ಬೆಸೆಯಲ್ಪಟ್ಟಿದ್ದ ಜೀವ ಬಳಿಯಲ್ಲೆ ಪವಡಿಸಿದೆ. ಆದರೆ ಅದನ್ನು ಅರ್ಥ ಮಾಡಿಕೊಳ್ಳುವುದು ಮಾತ್ರ ತನಗೆ ಅತೀವ ಕಷ್ಟ ವಾಗುತ್ತಿದೆ.

ಎಂಥ ಸುಂದರ ಭವಿಷ್ಯದ ಆಸೆಯ ಊರುಗೋಲೆಂದು ಭಾವಿಸಿದ್ದ ಗಂಡ —ಈಗ ಬಡವಾಗಿ, ಕೃಶನಾಗಿ ಮಲಗಿದ್ದಾನೆ.

ಭಾರತಿಯ ಹೃದಯದಲ್ಲಿ ಕರುಣೆಯುಕ್ಕುತ್ತಿದೆ. ಆದರೆ ಅನಂತನ ಹಣೆಯ ಮೇಲೆ ಕೈಯಿರಿಸಿ ಒಂದು ಕ್ಷಣ ಆ ಮುಖವನ್ನು ಹಾಗೆಯೇ ನೋಡುತ್ತಿರಬೇಕು ಎಂಬ ಮನಸ್ಸಿನ ಆಸೆಯನ್ನು ಕಾರ್ಯರೂಪಕ್ಕಿಳಿಸಲು ಧೈರ್ಯ ಮಾತ್ರ ಕಾಣೆ.

ಆ ಆತ್ಮೀಯತೆ, ಅನುಕಂಪದ ಮೇರೆ ದಾಟಲು ಸಮರ್ಥವಾಗಿದ್ದಿರಲಿಲ್ಲ, ಇದಿರಿಗೆ ತನಗರಿಯುವ ಬಲವಾದ ಗೋಡೆಯಿತ್ತು.

ತನ್ನ ಹೃದಯದ ತೊಳಲಾಟ ಇದೇ ರೀತಿ ಇದ್ದಂತೆಯೇ ಭಾರತಿ ಹಾಸಿಗೆ ಬಿಟ್ಟೆದ್ದು ಹೋದಳು. ಗಂಡನಿಗೆ ಇಂದು ಆಫೀಸಿಗೆ ಹೋಗಬೇಕಾದ ಅವಸರವಿಲ್ಲನೆಂದು ಗೊತ್ತು. ಕಾಫಿಗೆ ಎಸರಿಟ್ಟು, ರಂಗವಲ್ಲಿಯ ಸಲಕರಣೆಗಳನ್ನು ಹಿಡಿದುಕೊಂಡು ಭಾರತಿ ಮನೆಯ ಬಾಗಿಲು ತೆಗೆದಾಗ ಹೊರಗೊಂದು ವ್ಯಕ್ತಿ, ಬಾಲ್ಕನಿಯ ದಂಡೆಗೊರಗಿ ನಿಂತಿದ್ದುದು ಕಂಡುಬಂತು.

ಅನಂತನ ಜೊತೆಗೆ ಪ್ರೆಸ್ಸಿಗೆ ಹೋದಾಗ ಕಂಡ ಮುಖ. ಹೆಸರು ತಿಳಿಯದು, ಪರಿಚಯ ದೂರದ್ದು.

"ಅವರು ಇನ್ನೂ ಎದ್ದಿಲ್ಲ." ಭಾರತಿ ಅಂಜುತ್ತಂಜುತ್ತ ಹೇಳಿದಳು.

"ಚಿಂತಿಲ್ಲ. ನಾನು ಕಾದಿರುತ್ತೇನೆ." ನಗುತ್ತಲೇ ಆ ವ್ಯಕ್ತಿ ಹೇಳಿತು. ಭಾರತಿ ತನ್ನ ಕೆಲಸ ಮುಂದುವರಿಸಿದಳು.

ರಂಗವಲ್ಲಿಯ ವಿಧಿ ಮುಗಿಯುವವರೆಗೂ ಅನಂತ ಏಳಲಿಲ್ಲ. ಆ ವ್ಯಕ್ತಿ ನಿಂತೇ ಇತ್ತು.

"ಎಬ್ಬಿಸಬೇಕೇ ?" ತನ್ನ ಕೆಲಸ ಮುಗಿಸಿ ಭಾರತಿ ಪುನಃ ಕೇಳಿದಳು.

"ಬೇಡ. ನಾನು ಕಾದಿರುತ್ತೇನೆ. ನನಗೇನೂ ಅವಸರವಿಲ್ಲ" ಎಂದರು ನಿಂತಿದ್ದವರು.

"ಒಳಗೆ ಬನ್ನಿ. ಒಳಗೇ ಕುಳಿತುಕೊಳ್ಳಬಹುದು" ಎಂದು ಭಾರತಿ ಹೇಳಿದಾಗಲೂ ಆ ವ್ಯಕ್ತಿ ನಿಂತೇ ಇತ್ತು.

ಭಾರತಿ ಕಾಫಿ ಸರಿಪಡಿಸಿ ತಂದಾಗಲೂ ಅವರು ಹೊರಗೆ ನಿಂತಿದ್ದುದನ್ನು ಕಂಡು ಭಾರತಿ ಕಳವಳಗೊಂಡು,

"ಒಳಗೆ ಬನ್ನಿ, ಕಾಫಿ ತಂದಿರಿಸಿದ್ದೇನೆ. ಅವರು ಇನ್ನೇನು ಏಳಬಹುದು" ಎಂದು ಹೇಳಿದಾಗ ಆ ವ್ಯಕ್ತಿ ಒಳಗೆ ಬಂದಿತು.

ಅನಂತ ಎಂಟು ಘಂಟೆಯ ಹೊತ್ತಿಗೆ ಕಣ್ಣು ತೆರೆದ. ಮೊದಲು ಕಣ್ಣಿಗೆ ಬಿದ್ದುದು ರಾಜೀವ. ತನ್ನ ಮೇಜಿನ ಬಳಿ ಕುರ್ಚಿಯೊಂದರಲ್ಲಿ ಕುಳಿತು, ಮಲಗಿದ್ದ ತನ್ನನ್ನೇ ನೋಡುತ್ತಿದ್ದ.

"ರಜೆಯ ಆಲಸ್ಯ ಚೆನ್ನಾಗಿ ಅಂಟಿಕೊಂಡಂತಿದೆ" ಎಂದು ನಗುತ್ತ ಹೇಳಿದ ರಾಜೀವ.

ರಾಜೀವ ತನ್ನನ್ನು ಅಣಕಿಸುತ್ತಿದ್ದಾನೆಂದು ಅನಂತನಿಗೂ ತಿಳಿದಿತ್ತು. ಇದು ಆಲಸ್ಯದ ನಿದ್ರೆಯಲ್ಲವೆಂಬುದು ರಾಜೀವನಿಗೂ ತಿಳಿದಿತ್ತು. ಔಪಚಾರಿಕವಾದ ಮಾತು.

"ಕಾಫಿ ಕುಡಿದಿಯೇನು? ಇದೇನು, ಬೆಳಿಗ್ಗೆ ಈ ಹೊತ್ತಿನಲ್ಲಿ ಬಂದೆ? ಆಫೀಸು ಇಲ್ಲವೆ?"

ಕೊನೆಯ ಮಾತು ಹೇಳಿದಾಗ ಅನಂತನಿಗೆ ಹಿಂದಿನ ದಿನ ಅದೇ ಮಾತು ಭಾರತಿ ಆಡಿದಾಗ ತಾನು ನೊಂದುಕೊಂಡಿದ್ದ ಸನ್ನಿವೇಶ ನೆನಪಿಗೆ ಬಂದು ನಾಚಿಕೆಯಾಯಿತು. 'ಭಾರೀ! ಇವರಿಗೆ ಕಾಫಿ ಕೊಟ್ಟಿಯೇನು?" ಎಂದು ಮಲಗಿದಲ್ಲಿಂದಲೇ ಕರೆದ.

"ಕಾಫಿಯೂ ಆಗಿದೆ, ಎಲ್ಲವೂ ಆಗಿದೆ. ಆರು ಘಂಟೆಗೇ ಬಂದಿದ್ದೆ. ಅರ್ಧ ಘಂಟೆ ಹೊರಗೆ ಕಾದೆ. ಆಮೇಲೆ ಬಾಗಿಲು ತೆರೆಯಿತು. ಒಂದೂವರೆ ಘಂಟೆ ಒಳಗೆ ಕಾದೆ. ಎರಡು ಘಂಟೆಯ ದುರುಪಯೋಗಕ್ಕೆ ಒಂದು ಲೋಟ ಕಾಫಿಯೂ ದೊರಕದೆ ಹೋದೀತೇ?"

ಎಂದಿನಂತಾಗಿದ್ದರೆ ಅನಂತ ರಾಜೀವನ ಈ ರೀತಿಯ ಮಾತು ಕೇಳಿ ನಗುತ್ತಿದ್ದ. ಆದರೆ ಇಂದು ನಗು ಬರಲಿಲ್ಲ. ರಾತ್ರಿಯ ಯೋಚನೆ, ಯೋಚನೆಯ ಘಟ್ಟದಲ್ಲೇ ನಿಂತಿತ್ತು; ಯಾವುದೊಂದು ನಿರ್ಧಾರ ರೂಪುಗೊಂಡಿರಲಿಲ್ಲ. ಮಾಡಬೇಕಾಗಿದ್ದ ಕೆಲಸ ಬಹಳವಿತ್ತು.

"ಒಂದೇ ನಿಮಿಷ. ಮುಖ ತೊಳೆದುಕೊಂಡು ಬರುತ್ತೇನೆ" ಎಂದು ಅನಂತ ಒಳಗೆ ನಡೆದ.

ಭಾರತಿ ಅಡುಗೆಯ ಮನೆಯಲ್ಲಿರಲಿಲ್ಲ. ಮುಖ ತೊಳೆದು ಅನಂತ ಕಾಫಿಗಾಗಿ ಹುಡುಕಾಡಿದ. ಸಿಗಲಿಲ್ಲ. ಆಗ ಭಾರತಿ ಬಂದಳು. ಆಕೆ ಕೈಯಲ್ಲಿ ಹಿಡಿದಿದ್ದ ಸಣ್ಣ ತಟ್ಟೆಯಲ್ಲಿ ಕಾಫಿಯ ಹುಡಿಯಿತ್ತು. ಉಳಿದಿದ್ದ ಹುಡಿಯನ್ನೆಲ್ಲ ಕೆರೆದು ಗಂಡನಿಗೆಂದು ಮಾಡಿದ್ದ ಒಂದು ಲೋಟ ಕಾಫಿ ರಾಜೀವನಿಗೆ ಸಂದಿತು. 'ಕಾಫಿಯ ಹುಡಿ ಮುಗಿದುಹೋಗಿದೆಯೆಂದು ಬೆಳಿಗ್ಗೆಯೇ ಹೇಳುವುದು ಬೇಡ. ಹೇಗಾದರೂ ಸಂಜೆಯತನಕ ದೂಡೋಣ' ಎಂದುಕೊಂಡ ಭಾರತಿಗೆ ಅನಿರೀಕ್ಷಿತ ಅತಿಥಿಯ ಆಗಮನ ಸಮಸ್ಯೆಯಾಯಿತು.

"ಕಾಫಿ ಆಗಿಲ್ಲವೇನು?"

"ಒಮ್ಮೆ ಮಾಡಿದೆ. ಅವರಿಗೆ ಕೊಟ್ಟಿದ್ದೇನೆ. ನೀರು ಕುದಿದಿದೆ.

ಹುಡಿ ಮುಗಿದಿತ್ತು. ಸ್ವಲ್ಪ ಕೈಕಡ ತಂದೆ. ಈಗ ಕೊಡುತ್ತೇನೆ" ಎಂದು ಭಾರತಿ ಹೇಳಿದಾಗ ಅನಂತ ನಕ್ಕ. ಗಂಡ ನಕ್ಕುದನ್ನು ಕಂಡು ಭಾರತಿಗೆ ಧೈರ್ಯ ಬಂತು. ಆದರೆ ಇದ್ದಕ್ಕಿದ್ದಂತೆಯೇ ಹೊಟ್ಟೆಯಲ್ಲಿ ತಳಮಳ ವಾದಂತಾಗಿ ಭಾರತಿಗೆ ಓಕರಿಕೆ ಬಂತು. ಆಕೆ ವಾಂತಿ ಮಾಡಲೆಂದು ಮೋರಿಯ ಬಳಿ ಬಂದುದನ್ನು ನೋಡಿ ಅನಂತ ಗಾಬರಿಯಾದ.

"ಸೌಖ್ಯವಿಲ್ಲವೆ. ಭಾರೀ ?"

"ಏನಿಲ್ಲ. ಪಿತ್ಥದ ಉಪದ್ರವೆಂದು ಕಾಣುತ್ತದೆ. ರಾತ್ರಿ ನಿದ್ದೆ ಬಂದಿರ ಲಿಲ್ಲ. ಎಲ್ಲ ಸರಿಯಾಗುತ್ತದೆ" ಎಂದಿಷ್ಟೆ ಹೇಳಿದಳು.

ಆ ಮಾತಿನಿಂದ ಅನಂತನಿಗೆಷ್ಟು ಸಮಾಧಾನವಾಯಿತೊ! ಈ ದಿಸೆ ಯಲ್ಲೂ ದುಃಖವೆ? ಎಂದು ಕಳವಳದಿಂದಲೇ ಆತ ರಾಜೀವನ ಬಳಿಗೆ ಬಂದ.

"ಏನು ವಿಶೇಷ, ರಾಜೀವ? ಇಷ್ಟು ಬೆಳಗ್ಗೆ ಓಡಿಬರುವ ಅಗತ್ಯ?"

"ಅಂಜುಬುರುಕ ಹುಡುಗ, ಅಪಘಾತಕ್ಕೊಳಗಾದೀತು. ಹೇಗಿದೆ ಯೆಂದು ನೋಡಿಕೊಂಡು ಬಾ, ಎಂದು ಸೋಮಯಾಜಿಗಳು ಕಳಿಸಿದರು. ಬಂದೆ."

ಅನಂತನಿಗೆ ನಗು ಬರಲಿಲ್ಲ. ರಾಜೀವನ ಮಾತು ಕೇಳಿ ಅತೀವ ವೇದನೆಯಾಯಿತು. ಅನಂತನ ಮನಸ್ಸಿನ ಕೋಲಾಹಲವನ್ನು ಗುರುತಿಸಿಯೇ ರಾಜೀವ ಹೇಳಿದ :

"ಅಷ್ಟೇನು ನೊಂದುಕೊಳ್ಳಬೇಕಾಗಿಲ್ಲ. ನಾನು ಹೇಳಿದ್ದು ಸೋಮ ಯಾಜಿಗಳ ಮಾತನ್ನಲ್ಲ. ನನ್ನವೇ ಅವು. ಅವರು ನೋಡಿ ಬಾ, ಎಂದು ಕಳಿಸಿದ್ದು ನಿಜ. ಅವರ ಹೆದರಿಕೆಯೂ ಸರಿಯಾದುದೇ, ಎಂದು ತೋರುತ್ತದೆ. ನಿನ್ನೆ ನೀವೇಕೆ ಅಷ್ಟು ಸಿಟ್ಟುಗೊಂಡಿರಿ?"

"ಎಲ್ಲಿ ಸಿಟ್ಟಾದೆ, ರಾಜೂ. ಯಾರ ಮೇಲೆ? ಸುಮ್ಮಗೆ ಏನೇನೋ ಹೇಳುತ್ತಿದ್ದೀಯಲ್ಲ?"

"ಸಿಟ್ಟಾಗಿರದಿದ್ದರೆ ಚೆನ್ನಾಯಿತು. ಆಗಬಾರದು ಎಂದು ತಿಳಿಸಬೇಕೆಂದು ತೋರಿದ್ದರಿಂದ ಬಂದೆ. 'ಮಲಬಾರ್ ಹಿಲ್ಲಿ'ನಲ್ಲಿ ಮನೆ ಮಾಡುವ ಆಸೆಯಿಂದ ನಾವು ಈ ಉಪದ್ವ್ಯಾಪಗಳಿಗಿಳಿದಿಲ್ಲ, ಅನಂತರಾವ್."

ಪುನಃ ಅದೇ ರಾಜೀವ! ತಾರ್‌ದೇವ್ ಜಂಕ್ಷನಿನ ಆ ಜೀರ್ಣವಾದ

ಮನೆಯಲ್ಲಿ ಹೆಣಕ್ಕೆ ಬಟ್ಟೆ ಹೊದಿಸುತ್ತಿದ್ದ ರಾಜೀವ ಅನಂತನ ಕಣ್ಣೆದುರು ಬಂದ.

"ನಿಮ್ಮ ಕಂಪೆನಿ ನಿಮ್ಮನ್ನು ಬರೋಡಾಕ್ಕೆ ಹೋಗಬೇಕೆಂದು ಹೇಳಿದಾಕ್ಷಣ, ನೀವು ಹೋಗಬೇಕೆಂದೇನಿಲ್ಲ. ಅಥವಾ ಒಂದು ವೇಳೆ ನಿಮ್ಮ ಸದ್ಯದ ಕೆಲಸದಿಂದ ನಿಮಗೆ ವಿಮೋಚನೆ ದೊರಕಿದರೆ ಭಿಕ್ಷೆ ಬೇಡಬೇಕಾದ ಪ್ರಸಂಗ ನಿಮಗೆ ಬರುವುದೆಂದೂ ನಾನು ತಿಳಿದಿಲ್ಲ. ಟಾಡ್ ಎಂಡ್ ಕಂಪೆನಿಯ ಸಂಪಿನ ಹಿಂದಿದ್ದೀರಿ. ಪೆಟಿಟ್ ಇಂಜಿನಿಯರಿಂಗ್ ವರ್ಕ್ಸ್‌ನ ಮುಷ್ಕರದ ಸೂತ್ರಧಾರಿಯಾಗಿದ್ದೀರಿ. ಹತ್ತಾರು ಸಂಘಗಳ ಕೆಲಸಗಾರರನ್ನು ಹುರಿದುಂಬಿಸುತ್ತಿದ್ದೀರಿ. 'ಕಹಳೆ'ಯಲ್ಲಿ ದಿನಂಪ್ರತಿ ನಾಡಿಗೇ ಬುದ್ಧಿ ಹೇಳುತ್ತಿದ್ದೀರಿ. ಆದರೆ ಈಗ ನೀವು ನಿಮ್ಮ ಖಾಸಗಿ ಜೀವನದಲ್ಲಿ ಇಂದೇಕೆ ಇಷ್ಟು ದುರ್ಬಲರಾಗುತ್ತಿದ್ದೀರಿ?"

ಅನಂತ ತನ್ನನ್ನೇ ತಾನು ಪ್ರಶ್ನಿಸಿಕೊಂಡ: 'ನಿಜಕ್ಕೂ ನಾನು ದುರ್ಬಲನಾಗುತ್ತಿದ್ದೇನೆಯೆ?' ಎಂದು.

ಭಾರತಿ ಕಾಫಿಯ ತಟ್ಟೆ ಹಿಡಿದು ಬಳಿಯಲ್ಲೇ ನಿಂತಿದ್ದಳು. ಅನಂತ ಮುಖವೆತ್ತಿ ಅವಳ ಕಡೆಗೆ ನೋಡಿದ. ಅವಳ ಕಣ್ಣಂಚಿನಲ್ಲಿ ನಗು ಕುಣಿಯುತ್ತಿದ್ದಂತೆ ಆತನಿಗೆ ಭಾಸವಾಯಿತು. ರಾಜೀವನೂ ಭಾರತಿಯೂ ಜೊತೆ ಸೇರಿ ತನ್ನನ್ನು ಅಣಕಿಸುತ್ತಿರುವರೇ ಎಂದು ಒಂದು ಕ್ಷಣ ತೋರಿತು.

"'ಕಹಳೆ' ಸಾಯಬಹುದು, ಅನಂತರಾಯರೆ, ರಾಜೀವ ಸಾಯಬಹುದು. ನೀವು ಕೂಡ ಸಾಯಬಹುದು. ಆದರೆ ಮನುಷ್ಯ ಸಾಯುವುದಿಲ್ಲ. ಆತ ಪ್ರಗತಿಯೆಡೆ ಧಾವಿಸುತ್ತಲೇ ಇರುತ್ತಾನೆ."

ಈಗೇಕೆ ಈ ಉಪದೇಶವೆಂದು ಅನಂತನಿಗೆ ಹೊಳೆಯಲಿಲ್ಲ.

"ಎರಡು ದೋಣಿಗೆ ಕಾಲಿರಿಸಿದುದರಿಂದ ಈ ದೌರ್ಬಲ್ಯ ಬಂತೇ? ಅಥವಾ ಸಂಸಾರ ಹೂಡಿದ ಮೇಲೆ ಈ ರೀತಿಯ ದೌರ್ಬಲ್ಯವೆ? ನಿಮ್ಮ ಸಾಮಾಜಿಕ ಪ್ರಜ್ಞೆ ಜಾಗೃತವಾಗಿರುವುದು ನಿಜವಾದರೆ ಉತ್ತಮ ಬದುಕಿಗಾಗಿ ಮನುಷ್ಯ ಹೂಡಿರುವ ಹೋರಾಟ ನಿಮ್ಮ ಪ್ರೀತಿಯ ಸರ್ವಸ್ವವೆಂದು ನೀವು ನಂಬಿರುವುದು ನಿಜವಾದರೆ ಈ ಹಾದಿಯಲ್ಲಿ ಎಂಥ ತ್ಯಾಗವೂ ಕ್ಷುದ್ರವೇ ಎಂದು ನೀವು ನಂಬಿಕೊಳ್ಳಬೇಕು, ಅನಂತರಾವ್. ನಾನು ಮೊದಲೇ ಹೇಳಿದಂತೆ, ನಿಮ್ಮ ಸದ್ಯದ ಕೆಲಸ ಹೋದರೆ ನೀವು ಬೀದಿಗಿಳಿಯಬೇಕಾದ ಪ್ರಸಂಗ

ಬರುವುದಿಲ್ಲ. ನಿಮಗೆ ವಿದ್ವತ್ತಿನ ಲಾಭವಿದೆ. ಪ್ರತಿಷ್ಠೆಯಿದೆ. ಸಿರಿವಂತ ಬಂಧುಗಳ ನೆರವಿದೆ. ಆದರೆ ಅವು ಯಾವುವೂ ಇಲ್ಲದ ಕೋಟಿಗಟ್ಟಲೆ ನಿರುದ್ಯೋಗಿಗಳತ್ತ ನೀವು ಕಣ್ಣು ಹೊರಳಿಸಿದರೆ ನಿಮ್ಮ ಕಷ್ಟ ಕಷ್ಟವಲ್ಲ, ಸುಖವೆಂದು ನಿಮಗೇ ಮನವರಿಕೆಯಾದೀತು. ಇಂಥ ಉಪದೇಶವನ್ನು ನಾನು ನಿಮಗೆ ಮಾಡಬೇಕಾಗಿ ಬರುವುದೆಂದು ಎಣಿಸಿರಲಿಲ್ಲ. ಆದರೆ ನಿನ್ನೆ ಪ್ರೆಸ್ಸಿನಲ್ಲಿ ನೀವು ಏನೋ ಮಾತನಾಡಿದಿರಂತೆ. ಅನಂತನಿಗೆ ಮನಸ್ಸು ಸರಿಯಿಲ್ಲ, ಸ್ವಲ್ಪ ನೋಡಿ ಬಾ, ಎಂದು ಸೋಮಯಾಜಿಗಳು ಕಳಿಸಿದರು. ಹೀಗಾಗಿ ಬಂದೆ."

ಅನಂತ ರಾಜೀವನ ಮಾತುಗಳನ್ನೇ ಮತ್ತೆ ಮತ್ತೆ ಮೆಲುಕುಹಾಕುತ್ತಿದ್ದ. ತನ್ನ ದೌರ್ಬಲ್ಯವನ್ನು ಸುಲಭವಾಗಿ ಅನಂತ ಒಪ್ಪಿಕೊಳ್ಳುತ್ತಿರಲಿಲ್ಲ. ಆದರೆ ಈಗ ರಾಜೀವ ಬೊಟ್ಟು ತೋರಿಸಿ ಹೇಳಿದಾಗ ಅವನಿಗೆ ತನ್ನ ವರ್ತನೆಯನ್ನು ದೌರ್ಬಲ್ಯವೆಂದಲ್ಲದೆ ಬೇರೆ ಹೇಗೆ ಹೆಸರಿಸಬೇಕೋ ತಿಳಿಯದಾಯಿತು.

ಆದರೆ ಒಂದು ಸತ್ಯ ಮಾತ್ರ ಈಗ ಸ್ಪಷ್ಟವಾಗಿ ಗೋಚರಿಸತೊಡಗಿತು ; ತಾನು ಸ್ವತಂತ್ರನಲ್ಲ. ಹಲವಾರು ಶಕ್ತಿಗಳ ಒತ್ತಡದಲ್ಲಿ ಸಿಲುಕಿ ತಾನು ತಿರುಗುತ್ತಿದ್ದೇನೆ. ತನ್ನ ವ್ಯಕ್ತಿತ್ವ ನಷ್ಟವಾಗಿ ಹೋಗುವಂತೆ ಪ್ರಭಾವಿಸುತ್ತಿರುವ ಈ ಶಕ್ತಿಗಳು ಯಾವುವು, ಎಂದು ಈಗ ಯೋಚಿಸಬೇಕಿತ್ತು.

ಬಾರಿ ಬಾರಿಗೂ ಮನಸ್ಸು ಹೇಳತೊಡಗಿತು : 'ನೀನು ಸ್ವತಂತ್ರನಲ್ಲ ; ನೀನು ಸ್ವತಂತ್ರನಲ್ಲ' ಎಂದು.

"ಇವೊತ್ತು ಪ್ರೆಸ್ಸಿಗೆ ನೀವು ಬರುವುದು ಬೇಡ. ನಾನು ಎಲ್ಲ ನೋಡಿಕೊಳ್ಳುತ್ತೇನೆ. ಆರಾಮವಾಗಿ ಮನೆಯಲ್ಲೆ ಮಲಗಿ. ನಾಳೆ ಬರುವಾಗ ನಗುನಗುತ್ತ ಬನ್ನಿ. ಬರುವ ಶನಿವಾರ ನಿಮ್ಮ ಯೂನಿಯನ್ ಮಹಾಸಭೆ ಸೇರಲಿದೆಯಂತಲ್ಲ. ಅಷ್ಟರ ತನಕ ತುಂಬ ಅವಕಾಶವಿದೆ."

"ನಿನಗೆ ಆಫೀಸು ಇಲ್ಲವೆ, ರಾಜೂ. ಹೊತ್ತಾಗಿಹೋಗಿದೆ."

ರಾಜೀವ ನಗತೊಡಗಿದ.

"ಅದನ್ನೇ ನಂಬಿಕೊಂಡು ನಾನು ಭೂಮಿಗೆ ಬಂದಿಲ್ಲ. ನಾಳೆ ಮನೆಗೆ ನಡೆಯೆಂದು ಹೇಳಿದರೆ, ವಿ.ಟಿ.ಯಲ್ಲಿ ಬೂಟ್‌ಪಾಲಿಶ್ ಮಾಡಿ ಬದುಕಲೂ ನಾನು ಸಿದ್ಧನೇ. ಆ ಸ್ವಾತಂತ್ರ್ಯವಲ್ಲಿ ಹೆಚ್ಚು ಹುರುಪಿದೆ." ಹೀಗೆ ಹೇಳಿದವನೆ ರಾಜೀವ ಹೊರಟುನಿಂತ.

"ನಾನೂ ಬರುತ್ತೇನೆ, ರಾಜೂ. ಎರಡು ನಿಮಿಷ ನಿಲ್ಲು."

ರಾಜೀವ ಆಶ್ಚರ್ಯದಿಂದ ಅನಂತನೆಡೆ ನೋಡಿದ.

"ಯಾಕೆ?"

"ನನಗೆ ಮನೆಯಲ್ಲಿರುವುದು ಸಾಧ್ಯವಿಲ್ಲ." ಅನಂತ ರಾಜೀವನ ಕಣ್ಣುಗಳ ಪ್ರತಿಭಟನೆಯನ್ನು ಗಮನಿಸದೆ ಪೋಷಾಕು ಧರಿಸಿ ಹೊರಟ. "ಊಟಕ್ಕೆ ಬರುತ್ತೇನೆ, ಭಾರೀ. ಬರುವಾಗ ಕಾಫಿಯ ಹುಡಿ ತರುತ್ತೇನೆ" ಎಂದವನೇ ರಾಜೀವನ ಕೈಯೆಳೆದುಕೊಂಡು ಬಾಗಿಲು ದೂಡಿಕೊಂಡು ಮನೆಯಿಂದ ಹೊರಬಿದ್ದ.

"ಹುಚ್ಚು ಗಿಚ್ಚು ಹಿಡಿದಿದೆಯೇನು?" ರಾಜೀವನಿಗೆ ಇನ್ನೂ ಅನಂತನ ವರ್ತನೆ ಅರ್ಥವಾಗಲಿಲ್ಲ.

"ದಯವಿಟ್ಟು ಇಲ್ಲಿಂದ ಹೋಗೋಣ, ರಾಜೂ. ಪ್ಲೀಸ್." ಅನಂತ ರಾಜೀವನ ಕೈ ಹಿಡಿದೆಳೆದ.

"ನಿಮ್ಮ ದೌರ್ಬಲ್ಯ ಇಷ್ಟು ಆಳವಾಗಿದೆಯೆಂದು ನನಗೆ ತಿಳಿದಿರಲಿಲ್ಲ, ಅನಂತ." ಇನ್ನು ಹೆಚ್ಚು ಒತ್ತಾಯಿಸಿ ಪ್ರಯೋಜನವಿಲ್ಲವೆಂದು ರಾಜೀವ ಅನಂತನ ಜೊತೆಗೆ ಮುಂದುವರಿಯುತ್ತ ಹೇಳಿದ.

ಅನಂತನ ಕಿವಿಯಲ್ಲಿ ಆ ಮಾತು ಮತ್ತೆ ಮರುದನಿಗೊಡತೊಡಗಿತು: ದೌರ್ಬಲ್ಯ!

ಇದು ದೌರ್ಬಲ್ಯವೆ?

'ನಾನು ಸ್ವತಂತ್ರನಲ್ಲ. ನಾನು ಸ್ವತಂತ್ರನಲ್ಲ. ನನ್ನ ವರ್ತನೆಗಳಿಗೆ ನನ್ನ ಹೊಣೆಗಾರಿಕೆಯಿಲ್ಲ' ಎಂದು ಎದೆ ಮೊರೆಯಿಡುತ್ತಿತ್ತು.

'ಭಾರತಿಯಿಂದ ಏಕೆ ದೂರ ಓಡಿಹೋಗುತ್ತಿದ್ದೀ?' ಎಂದು ಅಂತರಾಳದಲ್ಲಿ ದನಿಯೊಂದು ಪ್ರಶ್ನಿಸಿತು.

ಅನಂತ ಅವಸರವಸರವಾಗಿ ಹೆಜ್ಜೆ ಹಾಕುತ್ತ ಮುಂದೆ ಮುಂದೆ ನಡೆದಿದ್ದ. ವ್ಯಗ್ರತೆಯ ವಕ್ರಬುದ್ಧಿ ಎಂದು ರಾಜೀವ ಅನಂತನ ಕೈ ಹಿಡಿದೇ ಮುಂದುವರಿದ.

ಮತ್ತೆ ಪ್ರೆಸ್ಸು ತಲಪುವ ತನಕ, ರಾಜೀವ ತನ್ನ ಆಫೀಸಿಗೆಂದು ಅನಂತನನ್ನ ಬೀಳ್ಕೊಳ್ಳುವ ತನಕ ಇಬ್ಬರೂ ಮಾತನಾಡಲಿಲ್ಲ.

ಅನಂತ ಯೂನಿಯನ್ ಕಾರ್ಯದರ್ಶಿಯಾಗಿ ಅಧ್ಯಕ್ಷರ ಜೊತೆಗೆ ಅಧಿಕಾರಿಗಳನ್ನು ಕಂಡ. ಅವನು ರಜೆ ಪಡೆದ ಎರಡು ದಿನಗಳಲ್ಲೇ ಕೈಸೇರಿದ

ಸ್ಥಳಾಂತರದ ಆಜ್ಞೆಯನ್ನು ಹಿಂದೆ ತೆಗೆದುಕೊಳ್ಳಬೇಕೆಂದು ಸಂಘದ ಬೇಡಿಕೆಯನ್ನು ಅಧಿಕಾರಿಗಳ ಮುಂದಿರಿಸಿದ. ಅವರು ಅಲ್ಲದ ಸಲ್ಲದ ಹಲವಾರು ಕಾರಣಗಳನ್ನು ಮುಂಡೆ ಮಾಡಿ ತಮ್ಮ ನಿರ್ಧಾರವನ್ನು ಬದಲಿಸುವುದು ಸಾಧ್ಯವಿಲ್ಲವೆಂದರು. ಮುಷ್ಕರದ ಬೆದರಿಕೆಯೂ ಪ್ರಯೋಜನಕಾರಿಯಾಗಲಿಲ್ಲ. ಸರಕಾರದ ಮಧ್ಯಸ್ಥಿಕೆಯ ಆಶ್ವಾಸನೆ ಬರುವುದರಲ್ಲೆ ಇತ್ತು. ಹೀಗಾಗಿ ಸಂಪಿನ ನಿರ್ಧಾರಕ್ಕಾಗಿ ಯೂನಿಯನ್ ಮಹಾಸಭೆ ಸೇರಿತು.

ಅನಂತ ಪುನಃ ಯೋಚನೆಗೊಳಗಾದ.

ಸಂಪಿನ ನಿರ್ಧಾರ ಕಾರ್ಯರೂಪದಲ್ಲಿ ಬರುವಂತಾದರೆ ಅದರ ಪರಿಣಾಮಗಳೇನಾಗಬಹುದೆಂದು ಆತ ಯೋಚಿಸಬೇಕಿತ್ತು. ಆ ತ್ಯಾಗದ, ಕಷ್ಟದ ಹಾದಿಯನ್ನು ತುಳಿಯಲು ಎಷ್ಟು ಜನ ಸಹೋದ್ಯೋಗಿಗಳು ಎಷ್ಟು ದಿನ ಸಿದ್ಧರಿರಬಹುದು ಎಂದು ತುಂಬ ಯೋಚಿಸಬೇಕಿತ್ತು. ಸಂಪು ಮುರಿದರೆ ಯೂನಿಯನ್ ಮುರಿದಂತೆ. ಅನಂತ ಆ ಆಫೀಸಿನಿಂದ ಹೊರಬಂದಂತೆ. ಮುನ್ನೂರಕ್ಕೂ ಮೀರಿದ ಒಂದು ಶ್ರಮಜೀವಿ ಸಂಘಟನೆ, ದೌರ್ಬಲ್ಯದ ಗಾಲಿಯಡಿ ಸಿಕ್ಕು ನುಚ್ಚುನೂರಾದಂತೆ.

ಮಹಾಸಭೆಯಲ್ಲಿ ಮುನ್ನೂರು ಜೊತೆ ಕಣ್ಣುಗಳು ಈತನೆಡೆ ನೋಡುತ್ತಿದ್ದವು. ಅನಂತನಿಗೆ ಆಶ್ಚರ್ಯ ಕೊಟ್ಟದ್ದು ಮಾತ್ರ ತನ್ನ ಸಹೋದ್ಯೋಗಿಗಳ ಭಯಗ್ರಸ್ತ ಮುಖಗಳಲ್ಲ; ಹಿಂದಿನ ಬೆಂಚೊಂದರಲ್ಲಿ ಕುಳಿತು ತನ್ನನ್ನೇ ನೋಡುತ್ತಿದ್ದ ರಾಜೀವ. ಒಂದು ಕ್ಷಣ ಅನಂತನಿಗೆ ನಗು ಬಂತು. ತನ್ನ ದೌರ್ಬಲ್ಯವನ್ನು ಹೊಡೆದೋಡಿಸುವ ಆಯುಧ ಸಭೆಯಲ್ಲಿ ಇದೆ ಎಂದುಕೊಂಡ.

ಅನಂತ ಭಾಷಣ ಮಾಡಿದಾಗ ಮಾತ್ರ ಆತನಿಗೆ ರಾಜೀವನ ಇರವು ಕೂಡ ಮರೆತುಹೋಗಿತ್ತು. ಆತ ತನ್ನ ಮಾತುಗಳಲ್ಲಿ ತನ್ಮಯನಾಗಿದ್ದ. ಮುಂಬಯಿಯ ಕಾರ್ಮಿಕರಂಗದ ವಿದ್ಯಮಾನಗಳನ್ನೆಲ್ಲ ವಿವೇಚಿಸಿ, ತಮ್ಮ ಮುಂದಿರುವ ಸಮಸ್ಯೆಗೆ ಇತಿಹಾಸದ ಆಧಾರಕೊಟ್ಟು, ಸಭಿಕರ ದೌರ್ಬಲ್ಯದ ಪ್ರಜ್ಞೆಗೆ ಮುಂಜಾಗ್ರತೆ ಕೊಡುವ ವಿಚಾರವನ್ನು ಅಸ್ಖಲಿತವಾಣಿಯಿಂದ ಅನಂತ ಒಂದು ತಾಸು ಮಾತನಾಡಿದಾಗ ಸಭೆ ಪಿಟ್ಟೆನ್ನದೆ ಆಲಿಸುತ್ತಿತ್ತು. ಅನಂತನಿಗೆ ತನ್ನ ದೌರ್ಬಲ್ಯ ನೆನಪಾಗಲಿಲ್ಲ.

ಸಭೆ ಮುಗಿದು ಸಂಪಿನ ನಿರ್ಧಾರದ ಮತಗಣನೆ ನಡೆದಾಗ ಒಂದೇ ಒಂದು ವಿರೋಧದ ದನಿಯಿರಲಿಲ್ಲ.

ಮತ್ತೆ ಎಂಟು ದಿನಗಳಲ್ಲಿ ಅಧಿಕಾರಿಗಳಿಗೆ ಸ್ಥಳಾಂತರದ ಆಜ್ಞೆಯನ್ನು ರದ್ದುಗೊಳಿಸದಿದ್ದರೆ ಹದಿನಾಲ್ಕು ದಿನಗಳಲ್ಲಿ ಸಂಪು ಆರಂಭವಾಗುವುದೆಂಬ ನೋಟೀಸು ತಲಪಿತು.

ಅಧಿಕಾರಿವರ್ಗ ಧಾಳಿಯ ಸಿದ್ಧತೆ ನಡೆಸಿತು.

ಇದೇ ಸಮಯದಲ್ಲಿ ರಾಧಾಕೃಷ್ಣ ಸುನಂದೆಯರು ಮುಂಬಯಿಗೆ ಬಂದರು.

ಮೊದಲೊಂದು ಕಾಗದ ಬಂತು. ಆಮೇಲೊಂದು ತಂತಿ. ಅನಂತ ಸಲ ನೊಂದುಕೊಳ್ಳಲಿಲ್ಲ. ಅನಿವಾರ್ಯದ ಆಪತ್ತು, ಬಂದವರು ಹೇಗಾದರೂ ಸಂತೋಷದಿಂದ ಹಿಂದಿರುಗಿ ಹೋದರೆ ಸಾಕು ಎಂದು ಭಾವಿಸಿದ್ದ. ಈ ಸಲ ಸುನಂದೆಯನ್ನು 'ಬಾವಿಗೆ ಬೀಳಲು' ಹೇಳಲಿಲ್ಲ. ಒಂದು ಐವತ್ತು ರೂಪಾಯಿ ಸಾಲ ತಂದು ಭಾರತಿಯ ಕೈಯಲ್ಲಿರಿಸಿ, "ನಿನ್ನಲ್ಲೇ ಇರಲಿ, ಭಾರೀ. ನನ್ನ ಕೈಲಿದ್ದರೆ ಖರ್ಚಾಗಿ ಹೋಗುತ್ತದೆ" ಎಂದ.

ಆಫೀಸಿನ ಕೆಲಸದಿಂದ ಬಿಡುಗಡೆ ದೊರಕಿದ್ದರೂ ಅನಂತನಿಗೆ ವ್ಯವಧಾನ ವಿರಲಿಲ್ಲ. ಸರಕಾರದೊಂದಿಗೆ ಮಾತುಕತೆ, ಸಹೋದ್ಯೋಗಿಗಳೊಡನೆ ವಿಚಾರ ವಿನಿಮಯ, ಸಂಪಿನ ಸಿದ್ಧತೆ, ಪತ್ರಿಕೆಯ ಕೆಲಸ, ಇವೆಲ್ಲವುಗಳ ಜೊತೆಗೆ, ಡಿಸೆಂಬರ್ ಅಂತ್ಯದಲ್ಲಿ ಸರಕಾರದ ವಿನಿಯಂತ್ರಣ ಧೋರಣೆಯ ಕುರಿತು ಔದ್ಯೋಗಿಕ ವಿವಾದಗಳ ಪಂಚಾಯಿತಿ ವ್ಯವಸ್ಥೆಯ ಕುರಿತು, ಅಸಮಾಧಾನ ತೋರಿಸುವ ಸಾರ್ವತ್ರಿಕ ಸಾಂಕೇತಿಕ ಸಂಪು ಶಹರದ ಪ್ರಮುಖ ಎಡಪಕ್ಷಗಳ ನೇತೃತ್ವದಲ್ಲಿ ಆಗಬೇಕೆಂದು ನಿರ್ಧಾರವಾಗಿತ್ತು. ಇಲ್ಲಿಯೂ ಅನಂತನ ಸಹಾಯವನ್ನು ಯಾಚಿಸಲಾಗಿತ್ತು. ಹೀಗೆ ಬಿಡುವಿಲ್ಲದೆ ದುಡಿಯುತ್ತಿದ್ದಾಗ ರಾಧಾಕೃಷ್ಣ ಸುನಂದೆಯರು ಬಂದರು.

ದಾದರ್ ನಿಲ್ದಾಣದಲ್ಲಿ ಎರಡನೆಯ ತರಗತಿಯ ಡಬ್ಬಿಯಿಂದ ದಂಪತಿ ಗಳು ಇಳಿದಾಗ, ಭಾರತಿ ಅನಂತರು ಪ್ಲಾಟ್‌ಫಾರ್ಮಿನಲ್ಲಿ ಕಾಯುತ್ತಿದ್ದರು. ಇಬ್ಬರಿಗೂ ಸುನಂದೆಯನ್ನು ಗುರುತಿಸುವುದು ಸಾಧ್ಯವಾಗಲಿಲ್ಲ.

"ಗುರುತು ಸಿಗೋಲ್ಲವೇನೇ, ಅಕ್ಕಾ?" ಎಂದು ಸುನಂದೆ ಕರೆದಾಗಲೇ ಭಾರತಿ, "ಸುನ್ನಾ" ಎಂದು ಆಕೆಯ ಬಳಿಗೋಡಿದುದು.

ಅನಂತ ರಾಧಾಕೃಷ್ಣನಿಗೆ ವಂದಿಸುತ್ತಿದ್ದ.

"ಏನೇ? ಎಷ್ಟು ಬೆಳೆದಿದ್ದೀಯೇ? ಆನೆಯ ಹಾಗೆ" ಎಂದು ಭಾರತಿ ತಂಗಿಯ ಕೆನ್ನೆಯನ್ನು ಚಿವುಟುತ್ತ ಕೇಳಿದಳು.

"ನಿನ್ನನ್ನು ನೋಡಿದರೆ ಮಾತ್ರ ಊಟವೇ ಮಾಡಿದವರ ಹಾಗೆ ತೋರುತ್ತೀಯ. ಮುಂಬಯಿಯಲ್ಲಿ ಎಲ್ಲರಿಗೂ ಉಪವಾಸವೆ?" ಸುನಂದೆ ಕೇಳದಳು.

ಭಾರತಿಗೆ ಉತ್ತರ ಹೇಳುವುದು ಸಾಧ್ಯವಾಗಲಿಲ್ಲ. ಅನಂತ ನಗುತ್ತಿದ್ದ—ಪ್ರಯತ್ನಪೂರ್ವಕವಾಗಿ, ಅಷ್ಟೆ.

ಖರ್ಚಿನ ವಿಚಾರವನ್ನು ಯೋಚಿಸದೆ ಅನಂತ ಇವರನ್ನು ಟ್ಯಾಕ್ಸಿಮಾಡಿ ಮನೆಗೆ ಕರೆದುಕೊಂಡು ಬಂದ.

ಮನೆ ನೋಡಿದಾಗ ರಾಧಾಕೃಷ್ಣನಿಗೆ ಆಶ್ಚರ್ಯವಾಯಿತು.

"ಇಷ್ಟು ಜಾಗದಲ್ಲಿ ವಾಸಮಾಡುವುದು ಸಾಧ್ಯವೆ?" ಎಂದು ಇದು ಜಗತ್ತಿನ ಅದ್ಭುತ ಆಶ್ಚರ್ಯಗಳಲ್ಲೊಂದೆಂಬಂತೆ ಆತ ಕೇಳಿದ.

"ನೀವು ಮದರಾಸಿನಲ್ಲಿಯೂ ನೋಡಿಲ್ಲವೆ?" ಎಂದು ಅನಂತ ಪ್ರಶ್ನಿಸಿದ.

"ಅಲ್ಲಿ ಹಾಸ್ಟೆಲ್ ಬಿಟ್ಟು ನಾವೆಲ್ಲಿ ಹೋಗಿದ್ದೇವೆ. ಹೋದರೂ ವಿಹಾರಕ್ಕೆ, ತಿರುಗಾಟಕ್ಕೆ, ಸಿನಿಮಾಕ್ಕೆ. ಇದ್ದ ಸ್ನೇಹಿತರೆಲ್ಲ ಕಾರಿರುವವರು, ಬಂಗಲೆಗಳಲ್ಲಿ ವಾಸಿಸುವವರು.

ಪ್ರಥಮ ಸಂದರ್ಶನದಲ್ಲಿಯೇ ರಾಧಾಕೃಷ್ಣನ ವೇಷಭೂಷಣಗಳನ್ನು ಗಮನಿಸಿ ಅನಂತ ನಿಶ್ಚಯಿಸಿದ್ದ: 'ಈ ವ್ಯಕ್ತಿಗೆ ನಮ್ಮ ಮನೆಯಲ್ಲಿ ಯಾವ ಸುಖವೂ ಸಿಗುವುದಿಲ್ಲ. ಪರಕೀಯ ಸಂಸ್ಕೃತಿಗೆ ಮಾರುಹೋದ ಅಪರಂಜಿ ಇದು. ಇದನ್ನು ಸುನಂದೆಗೆಂದು ಮಾವ ಹೇಗಾದರೂ ಆರಿಸಿದರೊ' ಎಂದು. ಈಗ ರಾಧಾಕೃಷ್ಣನ ಮಾತು ಕೇಳಿ ಆ ಭಾವನೆ ನಿಜವೆಂದು ಹೇಳುವಂತಾಯಿತು.

"ಇಲ್ಲಿಯೂ ಕಾರಿರುವವರು ತುಂಬ ಜನರಿದ್ದಾರೆ. ಬಂಗಲೆಗಳಿರುವವರೂ ಇದ್ದಾರೆ. ಆದರೆ ಅವರೆಲ್ಲ ನಮ್ಮ ವೈರಿಗಳು, ಸ್ನೇಹಿತರಲ್ಲ."

ಅನಂತನ ಮಾತಿನ ಹಿಂದಿದ್ದ ವ್ಯಂಗ್ಯ ರಾಧಾಕೃಷ್ಣನಿಗೆ ಅರ್ಥವಾಗಲಿಲ್ಲ. "ಹಾಗೇನು? ಹ್ಹ! ಹ್ಹ! ಹ್ಹ! ನೀವು ಮಾತಿನಲ್ಲಿ ತುಂಬ ಪರಿಣತರಿದ್ದೀರಿ" ಎಂದು ನಗುತ್ತ ಹೇಳಿದ.

ಬಂದ ಸಂಭ್ರಮದಲ್ಲಿ ಒಂದು ದಿನ ಕಳೆಯಿತು. ಮಾರನೆಯ ದಿನ ಅನಂತ ಹೊಸ ದಂಪತಿಗಳಿಗೆ ಮುಂಬಯಿಯ ಪ್ರಥಮ ಪರಿಚಯ ಮಾಡಿಸಿಕೊಟ್ಟ. ಸಂಘದ ಕಾರ್ಯಕಾರಿ ಸಮಿತಿಯ ಸಭೆ ಅದೇ ದಿನವಿತ್ತು. ಅದನ್ನು ಮರೆತುಬಿಟ್ಟು ಅನಂತ ಮುಂಬಯಿ ಸುತ್ತಿದ. ಶಹರ ಕಂಡಿದ್ದ ರಾಧಾಕೃಷ್ಣನಿಗೆ ಮುಂಬಯಿಯ ವೈಭವ ನೋಡಿ ಆಶ್ಚರ್ಯವಾದರೂ ಬಾಯಿಬಿಟ್ಟು ಆ ರೀತಿ

ಹೇಳಲಿಲ್ಲ. ಆದರೆ ಸುನಂದೆಗೆ ಮಾತ್ರ ಇದು ಕನಸೇ ಎನ್ನುವಷ್ಟು ಆಶ್ಚರ್ಯ ವಾಯಿತು. ದಾರಿಯಲ್ಲಿ ಮಾತುಮಾತಿಗೂ, "ಒಂದು ಸ್ವಂತ ಕಾರು ಇದ್ದಿದ್ದರೆ?" ಎಂದು ಹೇಳುತ್ತಿದ್ದ ರಾಧಾಕೃಷ್ಣನ ಮಾತಿನಿಂದ ಮಾತ್ರ ಇತರ ರಂತೆ ಈತನಿಗೂ ಮುಂಬಯಿ ಹುಚ್ಚು ಹಿಡಿಸಿದೆಯೆಂದು ಹೇಳಬಹುದಿತ್ತು.

ಮೂರನೆಯ ದಿನವೂ ಅನಂತ ಆಫೀಸಿಗೆ ಹೊರಡುವ ಯೋಚನೆಯಲ್ಲಿರ ದುದನ್ನು ಕಂಡು ರಾಧಾಕೃಷ್ಣ ಕೇಳಿದ :

"ನೀವೇನು, ನಾವು ಇರುವಷ್ಟು ದಿವಸ ರಜೆ ಪಡೆದಿರುವಿರೇನು?"

"ಇಲ್ಲ. ಮೆಡಿಕಲ್ ಲೀವ್‌ನಲ್ಲಿದ್ದೇನೆ." ಅನಂತನಿಗೆ ಸುಳ್ಳಾಡಲು ಮನಸ್ಸಾಗದೆ ಹಾಗೆ ಹೇಳಿದ.

"ಮೆಡಿಕಲ್! ಎಂದರೆ ನಿಮಗೆ ಸೌಖ್ಯವಿಲ್ಲವೆ?"

"ಸೌಖ್ಯವಿದೆ. ಆದರೆ ಹೀಗೆ ರಜೆ ಪಡೆಯಬೇಕಾದ ಪ್ರಸಂಗ ಬಂತು" ಎಂದು ಅನಂತ ತನ್ನ ಪರಿಸ್ಥಿತಿಯನ್ನು ವಿವರಿಸಬೇಕಾಗಿ ಬಂತು. ರಾಧಾ ಕೃಷ್ಣನ ಆಶ್ಚರ್ಯಕ್ಕೆ ಮೇರೆಯೇ ಇರಲಿಲ್ಲ.

"ನೀವು ಜರ್ನಲಿಸ್ಟ್ ಎಂದು ಮಾವ ಹೇಳುತ್ತಿದ್ದರು. ನೀವು ಕಮ್ಯೂ ನಿಸ್ಟ್ ಕೂಡ ಹೌದೆಂದು ತೋರುತ್ತದೆ." ರಾಧಾಕೃಷ್ಣ ನಗುವಿನಲ್ಲಿ ಈ ಮಾತನ್ನು ತೇಲಿಸಲು ಪ್ರಯತ್ನಿಸಿದನಾದರೂ ಆತನ ಹೃದಯದ ಜಿಗುಪ್ಸೆ ಯನ್ನು ಗುರುತಿಸುವುದು ಸಾಧ್ಯವಿತ್ತು.

"ನಾನು ಇಂಥದೇ 'ಇಸಂ'ಗೆ ಸಂಬಂಧಿಸಿದವನೆಂದು ನೀವು ವಿಚಾರಿಸದೆ ನಾಮಕರಣ ಮಾಡುವುದು ಸರಿಯಲ್ಲ. ಆದರೆ ನಮ್ಮಂಥವರ ಹೋರಾಟದ ಜೀವನಕ್ಕೆ ನೀವು ಹೇಗೆ ಹೆಸರಿಸಿದರೂ ನಮಗೆ ಬೇಸರವಿಲ್ಲ."

"ನೀವು ಕೆಲಸ ಹೋದರೇನು ಮಾಡುತ್ತೀರಿ?"

"ಈಗಂತೂ ಇದೆ. ಹೋದ ಮೇಲಲ್ಲವೆ, ಆ ಮಾತು" ಎಂದು ಬೇಸರ ದಿಂದ ಅನಂತ ಮರುನುಡಿದ.

"ಆಶ್ಚರ್ಯವಪ್ಪ. ನಿಮ್ಮಂಥವರ ಜೀವನ ಯಾವಾಗಲೂ ಜಾರು ಬಂಡೆಯ ಅಂಚಿನಲ್ಲಿ ನಿಂತಂತೆ."

"ಇಡೀ ಜಗತ್ತೇ ಹಾಗೆ ನಿಂತಿದೆ. ಆದರೆ ಮನುಷ್ಯ ತಾನೆಲ್ಲಿ ನಿಂತಿದ್ದೇನೆ ಎಂದು ತಿಳಿದುಕೊಳ್ಳುವುದರೊಳಗೆ ಆತನ ಆಯುಷ್ಯ ಮುಗಿದಿರುತ್ತದೆ."

ಸ್ವಾಭಿಮಾನ ಕೆದರಿ ಅನಂತ ಹೇಳಿದ ಮಾತಿದು. ಆದರೆ ರಾಧಾ

ಕೃಷ್ಣನಿಗೆ ಇದು ಸರಿಯಾಗಿ ಅರ್ಥವಾಗಲಿಲ್ಲವೆಂಬುದನ್ನು ಆತ ನಕ್ಕುದರಿಂದಲೇ ಹೇಳಬಹುದಿತ್ತು.

ಅದೇ ದಿನ ಸಂಜೆ ಪುನಃ ಮುಂಬಯಿ ಪರ್ಯಟನೆಗೆಂದು ಹೊರಡುವ ಅವಸರ ಮಾಡುತ್ತಿದ್ದಾಗ, ನಾಗೇಶರಾಯರು ಕಾರಿನಲ್ಲಿ ಬಂದಿಳಿದರು. ಅನಂತನ ಮನೆ ಒಕ್ಕಲು ಮುಗಿಸಿ ಹೋಗಿದ್ದ ಅವರು ಮತ್ತೆ ಬಂದುದು ಈಗಲೇ. ಶ್ರೀಪತಿರಾಯರ ಕಾಗದ ತಲಪಿದ್ದುದರಿಂದ, ಸುನಂದೆ ರಾಧಾಕೃಷ್ಣರನ್ನು ನೋಡಿ ಹೋಗಲೆಂದು ಪುನಃ ಅನಂತನ ಮನೆಯಲ್ಲಿ ಹಾಜರಾದರು.

ಅನಂತ ಅವರ ಪರಿಚಯ ಮಾಡಿಸಿಕೊಟ್ಟ. ಅವರ ಕಾರು ನೋಡಿಯೇ ಅವರ ಆಢ್ಯತೆಯನ್ನು ಗ್ರಹಿಸಿದ್ದ ರಾಧಾಕೃಷ್ಣ ನಮ್ರತೆಯ ಪ್ರತಿಮೂರ್ತಿಯಾಗಿ ಅವರೊಡನೆ ಮಾತನಾಡತೊಡಗಿದ.

"ನಾಲ್ಕು ದಿನ ನಮ್ಮಲ್ಲೇ ಇರಿ. ಜಾಗವೂ ಸಾಕಷ್ಟಿದೆ. ಇಲ್ಲಿ ಅದೂ ಇಕ್ಕಟ್ಟು. ಅನಂತರಾಯರಂಥ ಸಮಾಜಸೇವಕರಿಗೆ ಇದಕ್ಕಿಂತ ಹೆಚ್ಚಿನ ಸೌಕರ್ಯಗಳುಳ್ಳ ಮನೆ ಪ್ರಲೋಭನವೆಂದು ಕಂಡುಬಂತು. ನಮ್ಮಲ್ಲಿ ಕಾರೂ ಇದೆ. ಮುಂಬಯಿಯೆಲ್ಲ ನೋಡಬಹುದು : ಗಿರಗಾಂ ವಿಭಾಗ, ಶಹರದ ಮಧ್ಯ. ಇಲ್ಲಿ ಕುರ್ಲಾದಲ್ಲೇನಿದೆ ?"

ರಾಧಾಕೃಷ್ಣ ಆಗಲೇ ಗಂಟು ಮೂಟೆ ಕಟ್ಟಲು ಸಿದ್ಧನಿದ್ದ. ಕಾಫಿ ಹಿಡಿದುಕೊಂಡು ಬಂದ ಭಾರತಿ ಗಂಡನೆಡೆ ನೋಡಿ, 'ಬೇಡ ಎಂದು ಹೇಳಿ' ಎಂದು ಕಣ್ಣಸನ್ನೆಯಿಂದಲೇ ಸೂಚಿಸಿದಳು. ಅನಂತನಿಗೋ, ರಾಧಾಕೃಷ್ಣನ ಸಹವಾಸ ಸಾಕಾಗಿತ್ತು. ನಾಗೇಶರಾಯರ ಜೊತೆ ಬೇಕಾದಷ್ಟು ತಿರುಗಲಿ, ಮುಂಬಯಿಯ ಕುರಿತು ಒಳ್ಳೆಯ ಅಭಿಪ್ರಾಯವನ್ನೇ ಕಟ್ಟಿಕೊಂಡು ಆತ ಮರಳಲಿ ; ಮಾವನಿಗೂ ಸಂತೋಷವಾಗುತ್ತದೆ ಎಂದು ಭಾವಿಸಿ ಆತ ನಾಗೇಶರಾಯರ ಅಭಿಪ್ರಾಯಕ್ಕೆ ಸೈಗುಟ್ಟುವುದರಲ್ಲಿದ್ದ. ಆದರೆ ಭಾರತಿಯ ಕಣ್ಣಲ್ಲಿ ದೈನ್ಯ ಕುಣಿಯುತ್ತಿತ್ತು. ತಂಗಿಯ ಸಾಮೀಪ್ಯ ತಪ್ಪುವುದೆಂಬ ಭೀತಿಯಿಂದ ಆಕೆ ಕಸವಿಸಿಗೊಂಡಳು.

"ಶಹರದ ಮಧ್ಯೆ ನಿಲ್ಲುವುದು ವಾಸಿ. ಆದರೆ ನಮ್ಮ ಭಾರತಿ ಬಿಡಬೇಕಲ್ಲ." ರಾಧಾಕೃಷ್ಣ ತನ್ನ ಅಭಿಪ್ರಾಯವನ್ನು ಈ ರೀತಿ ಸೂಚಿಸಿದ.

"ಭಾರತಿಯೂ ಎರಡು ದಿನ ಅಲ್ಲಿ ಜೊತೆಗಿದ್ದರೆ ಸಮಸ್ಯೆ ಪರಿಹಾರ

ವಾದಂತಾಯಿತು. ಅಲ್ಲವೆ, ಭಾರತಿ?" ಎಂದು ನಾಗೇಶರಾಯರು ದಾರಿ ತೋರಿಸಿದರು.

"ಹೋಗಿ. ಒಂದೆರಡು ದಿನ ಇದ್ದು ಬನ್ನಿ. ಮಾವ ಬಂದಾಗಲೂ ಅಲ್ಲಿಯೇ ಇದ್ದರು, ಆರಂಭದಲ್ಲಿ. ಭಾರತಿ ಬಂದುದೇ ಅಲ್ಲಿಗೆ, ಮೊದಲು" ಎಂದು ಅನಂತ, ರಾಧಾಕೃಷ್ಣನ ಸಹವಾಸ ತೊಲಗಿದರೆ ಸಾಕೆಂದು ಹೇಳಿದ.

ರಾಧಾಕೃಷ್ಣ ಸುನಂದೆಯೊಡನೆ ಹೊರಡುವಂತೆ ಹೇಳಿದ. ಆಕೆಗೆ ಅಕ್ಕ ಬರುವಳೇ ಎಂಬ ಸಂದೇಹವಿತ್ತು. ಅಕ್ಕನ ಸಾಮಿಪ್ಯ ತಪ್ಪಿದರೂ ಕಾರಿನಲ್ಲಿ ಶಹರ ಸುತ್ತುವ ಸಂಭ್ರಮ ಸಿಗುವುದಲ್ಲ ಎಂಬ ಆಸೆಯಿತ್ತು. ಈ ಆಸೆಯದೇ ಮೇಲುಗೈಯಾಗಿ ಹೊರಟು ನಿಂತಳು.

ಭಾರತಿ ಮಾತ್ರ ಜೊತೆಗೆ ಹೊರಡಲು ಒಪ್ಪಲಿಲ್ಲ.

ತಂಗಿ ಮತ್ತು ಭಾವ ನಾಗೇಶರಾಯರೊಡನೆ ಹೊರಟುಹೋದಮೇಲೆ ಆಕೆ ಕಿಡಿ ಕಾರುವ ಕಣ್ಣುಗಳಿಂದ ಅನಂತನನ್ನು ನೋಡಿದಳು.

"ಈಗಲಾದರೂ ಸಮಾಧಾನವಾಯಿತೇ ನಿಮಗೆ?"

ಅನಂತ ಅವಾಕ್ಕಾದ.

"ಏನು, ಭಾರೀ. ಏನಿದು?"

"ಇಷ್ಟು ದೂರ ಬಂದ ತಂಗಿ ಹತ್ತಿರವಿರುವುದನ್ನು ಈ ಜೀವ ಎಷ್ಟು ಬಯಸುತ್ತಿದೆಯೆಂದು ನಿಮಗೆ ಹೇಗೆ ತಿಳಿಯಬೇಕು? ಸುನ್ನಾ ನಿಮಗೆ ತಂಗಿಯೆ? ಪಾರೂವನ್ನು ಹಾಗೆ ಕಳಿಸುತ್ತಿದ್ದಿರೇನು ನೀವು?"

ಹೆಂಡತಿಗೆ ಸಿಟ್ಟು ಬಂದಿದೆಯೆಂದು ಅನಂತನಿಗೆ ಖಚಿತವಾಯಿತು. ಪಾರ್ವತಿಯ ಹೆಸರು ಕೇಳಿದಾಗ ತಾನು ರಾಧಾಕೃಷ್ಣ ದಂಪತಿಗಳನ್ನು ಒತ್ತಾಯಿಸಬೇಕಾಗಿತ್ತು ಎಂದು ಪುನಃ ಯೋಚಿಸಿದ.

"ಹೊರಟು ನಿಂತವರನ್ನು, ಅಷ್ಟು ಸುಖ, ವೈಭವ ಬೇಕೆನ್ನುವವರನ್ನು ಈ ನರಕದಲ್ಲಿ ನಿಲ್ಲಿ ಎಂದು ಹೇಳುವುದರಲ್ಲಿ ಏನು ಪುರುಷಾರ್ಥವಿದೆ, ಭಾರೀ. ಈಗಲಾದರೂ ಅವರು ಸುಖವಾಗಿ ಮುಂಬಯಿ ನೋಡಿ ಹೋದರೆ ಅವರಿಗೂ ಸಂತೋಷ, ನನಗೂ ಸಂತೋಷ, ಮಾವನಿಗೂ ಸಂತೋಷ."

ಭಾರತಿಗೆ ಈ ಮಾತಿನಿಂದ ಎಷ್ಟು ಸಮಾಧಾನವಾಯಿತೋ. ಆದರೆ ಆಕೆ ಮತ್ತೆ ಮಾತನಾಡಲಿಲ್ಲ. ಮತ್ತೆ ಆಕೆ ಸುನಂದೆಯನ್ನು ಕಂಡುದೂ ಎರಡೇ ದಿನಗಳ ಮಾತಿಗೆ. ಮುಂಬಯಿಯಲ್ಲಿ ಸಾರ್ವತ್ರಿಕ ಸಾಂಕೇತಿಕ ಮುಷ್ಕರದ

ದಿನ ಅದು. ಅನಂತ ಮನೆಯಲ್ಲಿರಲೇ ಇಲ್ಲ. ಆ ದಿನ ರಾಧಾ–ಸುನಂದೆಯರು ಬಂದಿದ್ದರು. "ನಾವಿರುವುದು ಇನ್ನು ಎರಡೇ ದಿನ. ತಿರುಗುವುದೆಲ್ಲ ತಿರುಗಿ ಆಯಿತು. ನೋಡಬೇಕಾದುದೆಲ್ಲ ನೋಡಿಯಾಯಿತು. ಖರೀದಿಗಾಗಿ ಸೀರೆಯಂಗಡಿ ನೋಡುವುದೊಂದು ಬಾಕಿ" ಎಂದರು.

ಆ ರಾತ್ರೆ ಅವರು ಅಲ್ಲೇ ನಿಂತಿದ್ದರು. ಒಂಬತ್ತು ಘಂಟೆಗೆ ಅನಂತ ಬಂದ. ಮತ್ತೆ ನಾಲ್ಕು ದಿನಗಳಲ್ಲಿ ಅವರ ಆಫೀಸಿನ ಮುಷ್ಕರ ಆರಂಭವಾಗಬೇಕಿತ್ತು. ಇದೇ ಗಡಿಬಿಡಿಯಲ್ಲಿ ರಾಧಾಕೃಷ್ಣ ದಂಪತಿಗಳನ್ನು ಆತ ಬೀಳ್ಕೊಡಬೇಕಾಗಿ ಬಂತು. ಭಾರತಿಯ ಮಾತಿನಂತೆ ಸುನಂದೆಗೊಂದು 'ವ್ಯಾನಿಟಿ ಬ್ಯಾಗ್' ಮತ್ತು ಜರತಾರಿ ಖಣ ತಂದುಕೊಟ್ಟ. ಚರ್ಮದ ಹೊದಿಕೆಯ ಹೊಸ ವರ್ಷದ ಡೈರಿ ಒಂದನ್ನು ರಾಧಾಕೃಷ್ಣನಿಗೆ ನೆನಪಿಗೆಂದು ಕೊಟ್ಟ. ಆದರೆ ಇವಾವುವೂ ಆತನ ಮನಸ್ಸಿನಂತೆ ನಡೆದ ಕ್ರಿಯೆಗಳಲ್ಲ. ಆತನ ಚಿಂತೆಯೆಲ್ಲ ಮುಷ್ಕರದ ಕುರಿತಾಗಿತ್ತು. ಅದಕ್ಕಿಂತಲೂ ಹೆಚ್ಚಿಗೆ, ಮುಂದಿನ ತಿಂಗಳು ದಿನ ಕಳೆಯುವ ಬಗೆ ಹೇಗೆ ಎಂಬುದರ ಕುರಿತಾಗಿತ್ತು. ತಿಂಗಳ ಸಂಬಳ ಮಾಯವಾಗಿತ್ತು. ನೂರಕ್ಕೂ ಮಿಕ್ಕಿ ಸಾಲವಾಗಿತ್ತು. ಈ ತಿಂಗಳು ದೊರಕಬಹುದಾದ ಪಗಾರ ಹತ್ತು ದಿನಗಳದು. ಆ ಹಣದಲ್ಲಿ ಮನೆಗೇನು ಕಳಿಸುವುದು, ಹಾಲಿನವನನ್ನು ಹೇಗೆ ಸಮಾಧಾನಪಡಿಸುವುದು, ಮನೆ ಬಾಡಿಗೆ ಹೇಗೆ ತುಂಬುವುದು, ತಿಂಗಳ ಸಾಮಾನು ಹೇಗೆ ತರುವುದು ಎಂದು ಅನಂತ ಚಿಂತಿಸುತ್ತಿದ್ದ.

ಮತ್ತೊಂದು ದಿನ ಮನೆಯಲ್ಲಿದ್ದು ರಾಧಾಕೃಷ್ಣ ದಂಪತಿಗಳು ಹೊರಟಾಗ ಆತನಿಗೆ ಅವರ ಅಗಲುವಿಕೆಯ ಕುರಿತಾದ ಯಾವ ಬೇಸರವೂ ಇರಲಿಲ್ಲ. ಒಂದೊಮ್ಮೆ ಭಾರತಿಯನ್ನೂ ಅವರ ಜೊತೆಗೇ ಊರಿಗೆ ಕಳುಹಿಸಿಕೊಡಲೇ ಎಂದು ಯೋಚಿಸಿದ. ಹಾಗೆಯೇ ಭಾರತಿಯೊಡನೆ ಏಕಾಂತದಲ್ಲಿ ಕೇಳಿದ. ಆಕೆ ಮಾತ್ರ ನಿರ್ದಾಕ್ಷಿಣ್ಯವಾಗಿ "ಒಲ್ಲೆ" ಎಂದು ಹೇಳಿದಳು.

ಹೀಗಾಗಿ ಪುಣೆಯ ಗಾಡಿ ಹೊರಟಾಗ, ಕಣ್ಣೀರು ತುಂಬಿದ ಮೊಗದಿಂದ ಪ್ಲಾಟ್ ಫಾರ್ಮಿನಲ್ಲಿ ನಿಂತು ಕರವಸ್ತ್ರ ಆಡಿಸುತ್ತಿದ್ದ ಭಾರತಿಯನ್ನು ನೋಡಿದಾಗ ಅನಂತನಿಗೆ ಅವಳನ್ನು ಹೇಗೆ ಸಮಾಧಾನಪಡಿಸುವುದೆಂದು ತಿಳಿಯಲಿಲ್ಲ.

೨೨

ಜನವರಿ ಐದನೆಯ ತಾರೀಖಿಗೆ ಅನಂತನ ಒಂದು ತಿಂಗಳ ರಜೆಯ ಅವಧಿ ಮುಗಿದು ಆತ ಕೆಲಸಕ್ಕೆ ಮರಳಿ ಹಾಜರಾಗಬೇಕಿತ್ತು. ಜನವರಿ ಎರಡನೆಯ ತಾರೀಖಿಗೆ ಸಂಪಿನ ನೋಟೀಸಿನ ಅವಧಿ ಮುಗಿದು ಮುಷ್ಕರ ಆರಂಭವಾಯಿತು.

ಒಂದು ತಿಂಗಳ ತನಕ ಮುಷ್ಕರ ಯಾವ ರೀತಿ ನಡೆಯಬೇಕೆಂದು ಅನಂತ ಯೋಜನೆ ಹಾಕಿದ್ದ. ಒಂದು ತಿಂಗಳ ತನಕ ಮುನ್ನೂರು ಮಂದಿ ಒಗ್ಗಟ್ಟಿನಿಂದ ನಿಂತರೆ ಕಂಪೆನಿ ಬಗ್ಗುವುದು ಖಂಡಿತವೆಂಬ ಆತ್ಮವಿಶ್ವಾಸ ಆತನಿಗಿತ್ತು. ಆ ಕಾರಣ ಒಂದು ತಿಂಗಳ ಮಟ್ಟಿಗೆ ತನ್ನ ಸಹೋದ್ಯೋಗಿಗಳು ದುರ್ಬಲರಾಗಬಾರದು ಎಂಬ ಆಸೆಯಿರಿಸಿಕೊಂಡು ಕಾರ್ಯಪ್ರವೃತ್ತನಾಗಿದ್ದ.

ಆರಂಭದ ಎರಡು ಮೂರು ದಿನಗಳಲ್ಲಿ ಮುಷ್ಕರ ಶಾಂತ ರೀತಿಯಿಂದ ಜರಗಿತು. ನಾಲ್ಕನೆಯ ದಿನ, ಅನಂತ, ತನ್ನ ರಜೆಯ ಅವಧಿ ಮುಗಿದಿದೆ, ಕೆಲಸಕ್ಕೆ ಸಿದ್ಧನಿದ್ದರೂ ಸಂಪಿನಿಂದಾಗಿ ಹೊರ ನಿಲ್ಲುತ್ತಿದ್ದೇನೆ ಎಂದು ತಿಳಿಸಲು ಅಧಿಕಾರಿಗಳನ್ನು ಕಾಣಲು ಹೋದ.

ಅಲ್ಲಿ ಅವನಿಗೆ ದೊರಕಿದುದು ಕೆಲಸದಿಂದ ನಿವೃತ್ತಿಯ ಆಜ್ಞೆ.

'ಕಂಪೆನಿಯ ಕೆಲಸದ ಜೊತೆಗೆ ಒಂದು ಪತ್ರಿಕೆಯ ಸಂಪಾದನೆಯನ್ನೂ ನೀನು ಮಾಡುತ್ತಿರುವಿ. ಇದು ನಮ್ಮ ನಿಯಮಗಳಿಗೆ ವಿರುದ್ಧವಾದುದರಿಂದ, ನಿನ್ನನ್ನು ಈ ಕ್ಷಣದಿಂದ ಕೆಲಸದಿಂದ ನಿವೃತ್ತಿಗೊಳಿಸಲಾಗಿದೆ' ಎಂದು ಅದರಲ್ಲಿ ನಮೂದಿಸಲಾಗಿತ್ತು.

ಅನಂತನಿಗೆ ಕಂಪೆನಿಯ ವರ್ತನೆ ಆಶ್ಚರ್ಯವನ್ನುಂಟುಮಾಡಿತು. ಆತ ಈ ರೀತಿಯ ಏಟಿಗೆ ಸಿದ್ಧನಿರಲಿಲ್ಲ. ಏನಾದರೂ ಕಾರಣ ಹೊರಿಸಿ ತನ್ನನ್ನು ಹೊರದಬ್ಬುವುದು ಸಾಧ್ಯವಲ್ಲವೆಂದು ಆತನಿಗೆ ತಿಳಿದಿತ್ತು. ಆದರೆ ಅಧಿಕಾರಿಗಳು ಸೂಚಿಸಿದ ಕಾರಣವನ್ನು ಸರಕಾರವೂ ಉಪಯೋಗಿಸಿಕೊಳ್ಳುವ ಸಂಭವವಿದ್ದುದರಿಂದ ಆತನಿಗೆ ಮುಂದೇನು ಮಾಡುವುದೆಂದು ತಿಳಿಯಲಿಲ್ಲ.

ಭಾರವಾದ ಹೃದಯದಿಂದ ಅನಂತ ಹೊರಬಂದ. ಅವನನ್ನೆ ನಿರೀಕ್ಷಿಸುತ್ತಿದ್ದ ಸಹೋದ್ಯೋಗಿಗಳೆಲ್ಲ ಅನಂತ ಹೊರಬಂದೊಡನೆ ಆತನನ್ನು ಸುತ್ತುವರಿದರು. ಅನಂತ ಮಾತನಾಡದೆ ಕಿಸೆಯಿಂದ ಅಧಿಕಾರಿಗಳ ಆಜ್ಞೆಯನ್ನು ಹೊರದೆಗೆದು ಸಂಘದ ಅಧ್ಯಕ್ಷರ ಕೈಲಿರಿಸಿದ.

ಅನಂತನನ್ನು ‘ ಡಿಸ್‌ಮಿಸ್ ’ ಮಾಡಲಾಗಿದೆಯೆಂಬ ಸುದ್ದಿ ಕ್ಷಣಾರ್ಧದಲ್ಲಿ ಕಾಳ್ಗಿಚ್ಚಿನಂತೆ ಹರಡಿತು. ಎಲ್ಲ ನೌಕರರ ನಿರ್ಧಾರವನ್ನು ಇನ್ನಷ್ಟು ಬಲಗೊಳಿಸಲು ಕಾರಣವಾದ ಅಧಿಕಾರಿಗಳ ದುಡುಕಿನ ಏಟು. ಉದ್ರೇಕಿತರಾದ ನೌಕರರೆಲ್ಲ ಕಂಪೆನಿಯ ಕಾರ್ಯಾಲಯದ ಮುಂದೆ ಬೊಬ್ಬಿಡಲಾರಂಭಿಸಿದರು. ಕಂಪೆನಿಯ ಅಧಿಕಾರಿಗಳು ರಕ್ಷಣೆಗೆಂದು ಪೋಲೀಸು ಸಹಾಯ ಬೇಡಿದರು.

ಸಂಜೆ ಆಫೀಸು ಮುಗಿಯುವ ವೇಳೆಗೆ ಪರಿಸ್ಥಿತಿ ತುಸು ವಿಕೋಪಕ್ಕೆ ಹೋಯಿತು. ಅನಂತನಿಗೆ ನಿವೃತ್ತಿಯ ಆಜ್ಞೆಯನ್ನು ಕೈಗೆ ಕೊಟ್ಟ ಅಧಿಕಾರಿ ಹೊರಗೆ ಬಂದಾಗ ಯಾರೋ ಒಬ್ಬರು ಹಳೆಯ ಟೊಪ್ಪಿಯೊಂದನ್ನು ತೆಗೆದು ಆತನ ಮುಖದ ಮೇಲೆಸೆದರು. ಅದು ಗುರಿ ತಪ್ಪಿತಾದರೂ ಅದರ ಪರಿಣಾಮ ವಿಪರೀತವಾಯಿತು. ಮತ್ತೆ ಹದಿನೈದು ನಿಮಿಷಗಳೊಳಗಾಗಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ ಮತ್ತು ಕೋಶಾಧಿಕಾರಿ ಈ ನಾಲ್ಕು ಜನರನ್ನು ಪ್ರತಿಬಂಧಕ ಕಾಯಿದೆಯನ್ವಯ ಬಂಧಿಸಲಾಯಿತು.

ಇದೇ ಹೊತ್ತಿಗೆ ಸರಿಯಾಗಿ ಕಂಪೆನಿಯ ಕಾರ್ಯಾಲಯದ ಹೊರಬಾಗಿಲಲ್ಲಿ, ‘ ಮುಷ್ಕರ ಹೂಡಿರುವ ನೌಕರರೆಲ್ಲ ೪೮ ತಾಸುಗಳೊಳಗೆ ಮರಳದಿದ್ದರೆ ಅವರ ಸ್ಥಾನಕ್ಕೆ ಬೇರೆಯವರನ್ನು ನೇಮಿಸಲಾಗುವುದು ’ ಎಂದು ಕಂಪೆನಿಯ ನೋಟೀಸು ಪ್ರಕಟವಾಯಿತು.

ಮುಷ್ಕರ ಮುರಿಯಿತು.

ಬೆಳಿಗ್ಗೆ ಆರು ಘಂಟೆಗೆ ಮನೆ ಬಿಡುವಾಗಲೇ “ತುಂಬ ತಡವಾದೀತು, ಭಾರೀ” ಎಂದು ಅನಂತ ಹೇಳಿದ್ದ. ಭಾರತಿ ಉದಾಸೀನಳಾಗಿಯೇ ಈ ಮಾತು ಕೇಳಿದ್ದಳು. ಹಲವಾರು ದಿನಗಳಿಂದ ಆಕೆಗೆ ದೇಹಸೌಖ್ಯವೂ ಇರಲಿಲ್ಲ. ಸುನಂದೆ ಹೊರಟುಹೋದ ಮೇಲೆ ಆಕೆ ನಕ್ಕುದೆಂದಿಲ್ಲ. ಗಂಡನಿಗೆ ವೇಳೆಯೆಂದೇನಿರಲಿಲ್ಲ. ಭಾರತಿಯೂ ಅಂತೆಯೇ. ಮನಸ್ಸಾದರೆ ಒಂದು ಗಂಜಿ ಬೇಯಿಸಿಕೊಂಡು, ತಾಯಿ ಪ್ರೀತಿಯಿಂದ ಸುನಂದೆಯೊಡನೆ ಕಳಿಸಿದ್ದ ಉಪ್ಪಿನಕಾಯಿ ನಚ್ಚಿಕೊಂಡು ಊಟ ಮಾಡುವಳು. ಒಂದೊಂದು ಬಾರಿ ಊಟವೇ ಇರುತ್ತಿರಲಿಲ್ಲ. ಕಾಫಿಯಲ್ಲೇ ದಿನ ಮುಗಿಯುತ್ತಿತ್ತು. ಏನೇನನ್ನೋ ತಿನ್ನುವ ಆಸೆ. ಏನೇನನ್ನೋ ತಿನ್ನುವ ಚಪಲ. ಆದರೆ ಎಂದಾದರೊಂದು ವೇಳೆ ಮನಸ್ಸಿಟ್ಟು ತಯಾರಿಸಿದ ಒಂದು ತುತ್ತು ಅನ್ನವನ್ನು ನುಂಗುವುದು ಯಾಗ ಮಾಡಿದಷ್ಟು ಕಷ್ಟವೆನಿಸುತ್ತಿತ್ತು. ಭಾರತಿ ಒಂದೆರಡು ತಿಂಗಳ ಹಿಂದೆ

ಆರಂಭಿಸಿದ್ದ ನೆರೆಕರೆಯವರೊಡನೆ ಮಾತನಾಡುವ ಹವ್ಯಾಸವನ್ನೂ ಬಿಟ್ಟು ಬಿಟ್ಟಳು. ಓದುವ ಚಟ ಆಕೆಗೆ ಮುಂಚಿನಿಂದಲೂ ಇದ್ದಿರಲಿಲ್ಲ. ಈಗೀಗ ಕಸೂತಿಗೂ ಮನಸ್ಸೊಗ್ಗುತ್ತಿರಲಿಲ್ಲ.

ಮೈತುಂಬ ಆಲಸ್ಯ. ಹೀಗೆ ಆಲಸ್ಯ ಬಂದಾಗಲೆಲ್ಲ, ಹಾಸಿಗೆಯಲ್ಲಿ ಬಿದ್ದುಕೊಂಡಿರುವಂತೆ, ಬಾಲ್ಯದ ದಿನಗಳೆಲ್ಲ ಕಣ್ಣಮುಂದೆ ಬರುವುವು; ತಾಯಿಯ ಪ್ರೀತಿ ನೆನಪಾಗುವುದು. ಪಾರ್ವತಿಯೊಡನೆ ಮಾವನ ಮನೆಯ ಹಿಂದಿನ ತೋಟದಲ್ಲಿ ಆಡುತ್ತಿದ್ದ ಕಣ್ಣುಮುಚ್ಚಾಲೆ ಆಟದ ನೆನಪೂ ಪದೇ ಪದೇ ಬರುತ್ತಿತ್ತು. ಆ ನೆನಪಿನಲ್ಲೇ ಸುಖ. ಆ ಸ್ಮೃತಿಸಂಚಯ ಕಣ್ಣೀರು ತರಿಸಿದಾಗಲೇ ಆಕೆಗೆ ಸಮಾಧಾನ.

ರಾತ್ರಿ ಘಂಟೆ ಹತ್ತಾದರೂ ಅನಂತ ಮನೆಗೆ ಬರಲಿಲ್ಲ. ಕಷ್ಟದಿಂದ ಅಡಿಗೆ ತಯಾರಿಸಿಟ್ಟು ಭಾರತಿ ಕಾಯುತ್ತಿದ್ದಳು. ತಾನೂ ಊಟ ಮಾಡಿರಲಿಲ್ಲ. ಗಳಿಗೆಗೊಮ್ಮೆ ಬಾಲ್ಕನಿಗೆ ಬಂದು ಬೀದಿಯ ಕಡೆ ನೋಡುವಳು. ರಸ್ತೆಯಲ್ಲಿ ಹಾದುಹೋಗುತ್ತಿರುವ ಹಲವಾರು ಆಕೃತಿಗಳನ್ನು ನಿರೀಕ್ಷಿಸುವಳು. ನಿರಾಶಳಾಗಿ ಒಳಗೆ ಮರಳುವಳು.

ಎಲ್ಲ ಮನೆಗಳಲ್ಲಿ ಒಂದೊಂದಾಗಿ ದೀಪ ಆರುತ್ತಿತ್ತು. ಬಹಳ ತಡಮಾಡಿ ಮಲಗುವವರೂ ಅಗಳಿ ಹಾಕಿಕೊಂಡು ದೀಪ ನಂದಿಸಲಾರಂಭಿಸಿದ್ದರು. ಜಗಲಿಯಲ್ಲಿ ಭಾರತಿಯೊಬ್ಬಳೇ

ಹನ್ನೊಂದು ಘಂಟೆಯಾದರೂ ಅನಂತ ಬರಲಿಲ್ಲ.

ಈಗ ಮಾತ್ರ ಭಾರತಿಯ ಹೃದಯ ಭಯದಿಂದ ಕಂಪಿಸಲಾರಂಭಿಸಿತು. ಅಕ್ಕಪಕ್ಕದ ಮನೆಗಳಲ್ಲಿ ಎಲ್ಲ ಮಲಗಿಯಾಗಿತ್ತು. ರಾತ್ರಿಯ ನೀರವತೆಯಲ್ಲಿ ಯಾವ ಸದ್ದೂ ಕೇಳಿಸುತ್ತಿರಲಿಲ್ಲ. ಬೀದಿಯಲ್ಲಿ ಆಗೊಮ್ಮೆ ಈಗೊಮ್ಮೆ ತಿರುಗುತ್ತಿದ್ದ ಲಾರಿಗಳಷ್ಟೆ, ಮುಂಬಯಿ ರಾತ್ರೆಗೂ ನಿದ್ರಿಸುವುದಿಲ್ಲ ಎಂದು ಸಾರುತ್ತಿದ್ದವು. ಬಾಲ್ಕನಿಯಿಂದ ಹೊರಗೆ ಒಳಗೆ ಓಡಿ ಭಾರತಿ ದಣಿದಿದ್ದಳು. ನಾಲ್ಕಾರು ಬಾರಿ ವಾಂತಿಯಾಗಿತ್ತು. ಈಗ ದಂಡೆಗೊರಗಿ ನಿಂತುಕೊಳ್ಳುವಷ್ಟು ಶಕ್ತಿ ಕೂಡ ಅವಳಲ್ಲಿರಲಿಲ್ಲ. ಆದರೆ 'ಅವರಿಗೆ ಏನಾಗಿದೆಯೋ' ಎಂದು ಭಯದಿಂದ ತಲ್ಲಣಿಸಿದ್ದ ಹೃದಯ ಒಳಗೆ ಹೋಗಿ ಹಾಸಿಗೆಯಲ್ಲಿ ಉರುಳಿಕೊಳ್ಳಲೂ ಬಿಡುತ್ತಿರಲಿಲ್ಲ.

ನಿಂತು ನಿಂತು ಸೋತು ಭಾರತಿ ಬಾಲ್ಕನಿಯ ದಂಡೆಯ ಬಳಿಯೇ ಕುಳಿತು

ಕೊಂಡಳು. ಅಂದಕ್ಕೆಂದು ಕೆರೆದಿದ್ದ ಗೋಡೆಯ ನಡುವಿನ ಬಿರುಕಿಗೆ ಕಣ್ಣಿಟ್ಟು ಬೀದಿಯನ್ನು ನೋಡುತ್ತಿದ್ದಳು. ಬಿಕ್ಕಳಿಸಿ ಬಿಕ್ಕಳಿಸಿ ಅಳು ಬರುತ್ತಿತ್ತು. ಬೇರೆ ಯಾರಿಗಾದರೂ ಕೇಳಿ ಹೇಸಿಗೆಯಾಗಬಹುದೆಂದು ಸಾಧ್ಯವಿದ್ದಷ್ಟು ಪ್ರಯತ್ನಿಸಿ ಅಳುವನ್ನು ತಡೆದುಕೊಳ್ಳುತ್ತಿದ್ದರೂ ಅದು ಪ್ರಕಟವಾಗುತ್ತಿತ್ತು.

ಘಂಟೆ ಹನ್ನೆರಡು ಬಡಿಯಿತು. ಅನಂತನ ಸುಳಿವಿಲ್ಲ. ಭಾರತಿಗೆ ತಲೆ ತಿರುಗುತ್ತಿತ್ತು. ಹೆದರಿಕೆಯಿಂದ ಮೈಯೆಲ್ಲ ಗಡಗಡ ನಡುಗುತ್ತಿತ್ತು. ಬಾಯಿ ಒಣಗಿತ್ತು. ಈಗ ಅಳುವಷ್ಟು ಶಕ್ತಿಯೂ ಆಕೆಯಲ್ಲಿರಲಿಲ್ಲ.

'ಅವರಿಗೆ ಏನಾಗಿದೆಯೋ? ನಾನು ಯಾರೊಡನೆ ಹೇಳಲಿ?' ಎಂಬ ಹೃದಯದ ಕೂಗಿಗೆ ಯಾವ ಸಮಾಧಾನ ಹೇಳುವುದೂ ಸಾಧ್ಯವಾಗಲಿಲ್ಲ.

ಭಾರವಾದ ಕಾಲುಗಳನ್ನೆಳೆದುಕೊಂಡು ಬಂದು ಭಾರತಿ ಹಾಸಿಗೆಯಲ್ಲಿ ದೊಪ್ಪನೆ ಬಿದ್ದಳು. ಬಿದ್ದಾಕೆಗೆ ಪ್ರಜ್ಞೆಯಿರಲಿಲ್ಲ.

ಯಾವುದೋ ಶೀತಲ ಸ್ಪರ್ಶ ಭಾರತಿಯ ಕಣ್ಣು ತೆರೆಯಿಸಿತು. ಕಣ್ಣು ಮುಖಗಳ ಮೇಲೆಲ್ಲ ನೀರ ಪಸೆಯಿತ್ತು. ಅದಕ್ಕಿಂತಲೂ ಹಿತವಾದ ಕರ ಸ್ಪರ್ಶ. ಒಂದು ಒದ್ದೆಯಾದ ಕರವಸ್ತ್ರದಿಂದ ಯಾರೋ ತನ್ನ ಮುಖಕ್ಕೆ ನೀರು ಚಿಮುಕಿಸುತ್ತಿದ್ದಾರೆ ಎಂಬ ತಿಳಿವು ಬಂದ ಭಾರತಿ ಕಣ್ಣು ತೆರೆದು ನೋಡಿದಳು.

ಮೊದಲ ನೋಟಕ್ಕೆ ಪರಿಚಯವಾಗಲಿಲ್ಲ. ಆಮೇಲೆ ಗುರುತು ಸಿಕ್ಕಿತು: ಅದೇ ಕುಂಕುಮವಿರದ ಮುಖ.

"ಭಾರತೀ."

"ಇಂದಿರಕ್ಕ!"

"ಏನಾಯಿತು, ಭಾರತೀ?"

ಈಗ ಮಾತ್ರ ಭಾರತಿ ಅಳತೊಡಗಿದಳು. ಯಾವುದೊಂದು ಸಂಕೋಚವೂ ಇಲ್ಲದೆ ಅಳತೊಡಗಿದಳು. ತನ್ನ ತಲೆ ಇಂದಿರೆಯ ತೊಡೆಯ ಮೇಲೆ ಪವಡಿಸಿದೆಯೆಂದು ಗೊತ್ತು. ಮುಖ ತಿರುಗಿಸಿ ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು.

"ಏನಾಯಿತು, ಭಾರತೀ?"

"ಅವರು....ಅವರು, ಇನ್ನೂ ಬಂದೇ ಇಲ್ಲ."

"ಇಷ್ಟೆಯೇ? ಏಳು ನೋಡೋಣ. ಏಳಲು ಸಾಧ್ಯವಾಗುತ್ತಿದೆಯೆ?"

ಭಾರತಿ ಪ್ರಯತ್ನಪೂರ್ವಕ ಎದ್ದು ಕುಳಿತಳು.

"ನಿನಗೆ ಊಟವಾಗಿದೆಯೇ? ರಾತ್ರಿ ಘಂಟೆ ಒಂದಕ್ಕೆ ಸಮೀಪಿಸಿದೆ."

'ಇಲ್ಲ' ಎಂದು ಭಾರತಿ ಬಾಯಿಬಿಟ್ಟು ಹೇಳಲಿಲ್ಲ. ಆದರೆ ಇಂದಿರೆಗೆ ಅವಳ ಮುಖಭಾವದಿಂದಲೇ ಭಾರತಿ ಏನನ್ನೂ ತಿಂದಿಲ್ಲವೆಂಬುದು ಸ್ಪಷ್ಟ ತಿಳಿಯುವಂತಿತ್ತು.

ಒಂದು ದಿಂಬಿನ ಆಧಾರ ಕೊಟ್ಟು ಭಾರತಿಯನ್ನು ಕುಳಿತಿದ್ದಂತೆಯೇ ಒರಗಿಸಿ ಇಂದಿರೆ ಅಡುಗೆಯ ಮನೆಗೆ ನಡೆದಳು. ಅಲ್ಲಿ, ಸಂಜೆಯಿಂದ ಕಾಯುತ್ತಿದ್ದ ಅಡಿಗೆಯನ್ನು, ಕಲಸಿ ಸರಿಪಡಿಸಿ, ಒಂದು ಬಟ್ಟಲಿನಲ್ಲಿ ಹಾಕಿ ಅದನ್ನು ಭಾರತಿಯ ಬಳಿ ತಂದಳು.

"ನಾನು ಬರುತ್ತಿದ್ದೆ, ಅಕ್ಕಾ...." ಎಂದಾಗ ಇಂದಿರೆ ಭಾರತಿಯ ಬಾಯಿಗೆ ಕೈ ಹಿಡಿದಳು. ಮೊದಲು ಊಟಮಾಡು. ಮತ್ತೆ ಬೇರೆಲ್ಲ ವಿಚಾರ."

ಭಾರತಿಯ ಊಟ ಮುಗಿದೊಡನೆ ಇಂದಿರೆ ಅಡುಗೆಯ ಪಾತ್ರೆಗಳನ್ನೆಲ್ಲ ಮೋರಿಯಲ್ಲಿ ತುರುವಿ ಬಂದು "ನಿತ್ಯ ಉಡುವ ಒಂದೆರಡು ಸೀರೆ ಹಿಡಿದುಕೋ. ಹೊರಡು" ಎಂದು ಭಾರತಿಗೆ ಹೇಳಿದಳು.

"ಎಲ್ಲಿಗೆ?"

"ಯಾವ ಪ್ರಶ್ನೆಯೂ ಕೇಳಬೇಡ. ನನ್ನ ಮೇಲೆ ವಿಶ್ವಾಸವಿದೆಯಲ್ಲ. ಕೆಳಗೆ ಕಾರಿದೆ. ಹೊರಡು. ರಾತ್ರಿ ವಿಪರೀತವಾಗಿದೆ" ಎಂದಳು.

ಭಾರತಿ ಇನ್ನೂ ಅನುಮಾನಿಸುತ್ತಿದ್ದಳು.

"ಅವರು...."

"ಅವರಿಗೇನೂ ಆಗಿಲ್ಲ, ಭಾರತಿ. ಅವರಿಗೆ ಇವೊತ್ತು ಮನೆಗೆ ಬರಲಾಗುವುದಿಲ್ಲ. ನೀನು ನನ್ನ ಜತೆಗೆ ಬರಬಾರದೆ? ನಿನಗೆ ನಮ್ಮ ಮನೆಯಲ್ಲಿ ನಿಲ್ಲುವುದಕ್ಕೆ ಅಷ್ಟು ಸಂಕೋಚವಾಗುವುದಾದರೆ ನಾಗೇಶರಾಯ ರಲ್ಲಿ ಬಿಡುತ್ತೇನೆ...."

"ಸಂಕೋಚವಲ್ಲ, ಅಕ್ಕಾ. ಆದರೆ ಅವರು...."

"ಅವರು ಒಪ್ಪುತ್ತಾರೆ, ಭಾರತೀ. ಅವರ ದೆಸೆಯಿಂದಲೇ ಹೀಗೆ ಮಾಡಬೇಕಾಗಿ ಬಂದುದು."

ಭಾರತಿ ಎರಡು ಉಡುವ ಬಟ್ಟೆಗಳನ್ನು ತೆಗೆದುಕೊಂಡು ಹೊರಟಳು. ಇಂದಿರೆ ದೀಪವಾರಿಸಿ ಮನೆಗೆ ಬೀಗ ಹಾಕಿದಳು. ಭಾರತಿಯನ್ನು ಆದರಿಸಿ

ಹಿಡಿದುಕೊಂಡು ಬಂದು ಕಾರಿನಲ್ಲಿ ಕುಳ್ಳಿರಿಸಿ ಡ್ರೈವರನಿಗೆ ಹೊರಡುವಂತೆ ಹೇಳಿದಳು. ಕಾರು ಶಹರದೊಳಗೆ ಧಾವಿಸಿತು.

ಸುಮಾರು ದಾರಿ ಸಾಗುವ ವರೆಗೆ ಭಾರತಿ ಯಾವ ಮಾತೂ ಆಡಲಿಲ್ಲ. ಇಂದಿರೆಯೂ ಅವಳನ್ನು ಮಾತನಾಡಿಸುವ ಗೋಜಿಗೆ ಹೋಗಲಿಲ್ಲ ಆದರೆ ಕಾರಿನಲ್ಲಿ ಕುಳಿತ ಮೇಲೆ ಭಾರತಿಯ ಹೃದಯದಲ್ಲಿ ಒಂದು ವಿಚಿತ್ರ ರೀತಿಯ ಕೋಲಾಹಲನೆದ್ದಿತು : 'ನನ್ನ ಗಂಡನಿಗೆ ಏನಾಗಿದೆ ? ಮನೆಗೆ ಬರುವುದನ್ನು ಪ್ರತಿಬಂಧಿಸಿದ ವಿಚಾರ ಎಂಥದು ? ನನಗೆ ಸಂದೇಶ ಕಳಿಸುವ ಮೊದಲು ಅವರು ಇಂದಿರಕ್ಕನಿಗೇಕೆ ಹೇಳಿಕಳಿಸಿದರು ? ಅವರು ಈಗ ಎಲ್ಲಿದ್ದಾರೆ ?'

"ಅವರೆಲ್ಲಿದ್ದಾರೆ, ಇಂದಿರಕ್ಕ ?"

ಇಂದಿರೆಗೆ ನಗು ಬಂತು.

"ಇನ್ನೂ ಯೋಚನೆ ಬಿಟ್ಟಿಲ್ಲವೇನಮ್ಮ. ಆರ್ಥರ್ ರೋಡ್ ಎಲ್ಲಿದೆ ಎಂದು ಗೊತ್ತಿದೆಯೆ ? ಅಲ್ಲಿದ್ದಾರೆ. ಸರಕಾರದ ಅತಿಥಿಯಾಗಿ—ಜೇಲಿನಲ್ಲಿ. ಅವರ ಮುಷ್ಕರದ ಪ್ರತಿಕ್ರಿಯೆ. ಸಂಜೆ ಐದು ಘಂಟೆಗೆ ಅವರನ್ನು ಬಂಧಿಸಿದ ರಂತೆ. ಒಂಬತ್ತು ಘಂಟೆಗೆ ಸೋಮಯಾಜಿಗಳಿಗೆ ಸುದ್ದಿ ತಿಳಿಯಿತಂತೆ. ಅವರು ಬಂದು ನಮ್ಮ ಮನೆಯಲ್ಲಿ ತಿಳಿಸಿದಾಗ ರಾತ್ರಿ ಘಂಟೆ ಹತ್ತೂವರೆ ಯಾಗಿತ್ತು. ನಾನು ಇಪ್ಪೊತ್ತು ಬೇಗ್ಗೆ ದಿಲ್ಲಿಯಿಂದ ಬಂದಿದ್ದೆನಷ್ಟೆ. ಸುದ್ದಿ ತಿಳಿದ ಮೇಲೆ ನಿನ್ನನ್ನು ಕರೆಯಲೆಂದು ಬಂದೆ. ಆದರೆ ಡಾಕ್ಟರರನ್ನು ಕರೆಯದೆ ನಿನಗೆ ಎಚ್ಚರವಾದದ್ದು ನನ್ನ ಪುಣ್ಯವೆನ್ನಬೇಕು" ಎಂದು ಇಂದಿರೆ ನಕ್ಕಳು.

ಅನಂತ ಜೇಲ್ಲಿನಲ್ಲಿ !

ನೆಲ್ಲೋರಿನಿಂದ ಬಿಡುಗಡೆಯಾಗಿ ಬಂದಾಗ ಅಪ್ಪ ಮತ್ತು ಅವರು ಜೊತೆಯಾಗಿ ತೆಗೆಸಿದ್ದ ಭಾವಚಿತ್ರ ಭಾರತಿಯ ಕಣ್ಣಮುಂದೆ ಬಂತು. ಈಗ ಮತ್ತೆ ಜೇಲು. ದೂರದ ಮುಂಬಯಿಯಲ್ಲಿ. ಇನ್ನು ಆತ ಹೊರಗೆ ಬರುವುದು ಯಾವಾಗಲೋ ! ತನ್ನ ಗತಿಯೇನು ? ತಾನು ಯಾವ ರೀತಿ ಈ ಸಂದರ್ಭದಲ್ಲಿ ವರ್ತಿಸಬೇಕು ?

"ಎಷ್ಟು ಸಮಯ ಇಂದಿರಕ್ಕ, ಈ ಸಲ ?"

"ಹೆಚ್ಚು ದಿನವಿರಲಿಕ್ಕಿಲ್ಲ, ಭಾರತೀ. ನಾಲ್ಕಾರು ದಿನಗಳಿರಬಹುದು ಅಷ್ಟೆ. ಈ ಮುಷ್ಕರದ ಪರಿಸ್ಥಿತಿ ಶಾಂತವಾಗುವ ವರೆಗೆ. ಅಪ್ಪರ ತನಕ ಯಾವ ಚಿಂತೆಯೂ ಇಲ್ಲದೆ ನಮ್ಮ ಮನೆಯಲ್ಲಿದ್ದುಬಿಡು. ನಿನ್ನ ಗಂಡನ ಭೆಟ್ಟಿ ನಿನಗೆ

ಮಾಡಿಸುತ್ತೇನೆ. ನಿನ್ನ ತಂದೆಯವರಿಗೆ ನಾನು ಕಾಗದ ಬರೆಯುತ್ತೇನೆ."

ಇಂದಿರೆ ಭಾರತಿಯ ಎಡಗೈಯನ್ನು ತನ್ನ ಬಲಗೈಯೊಳಗಿರಿಸಿ ಮೃದುವಾಗಿ ಒತ್ತುತ್ತ ಹೇಳಿದಳು:

"ಇದಕ್ಕೆಲ್ಲ ಚಿಂತಿಸಬಾರದು, ಭಾರತೀ. ಸಮುದ್ರದಲ್ಲಿ ಏರಿಳಿತವಿರುವಂತೆ ನಮ್ಮ ಜೀವನದಲ್ಲೂ ಏರಿಳಿತವಿರುತ್ತದೆ."

ಇಂದಿರೆಯ ದನಿ ನಡುಗುತ್ತಿತ್ತು. ಆದರೆ ಭಾರತಿ ಅವನ್ನು ಗಮನಿಸುವಂತಿರಲಿಲ್ಲ. ಆ ಕತ್ತಲಲ್ಲಿ ಇಂದಿರೆಯ ಕಣ್ಣಂಚಿನಲ್ಲಿ ಹನಿಯಿದ್ದುದನ್ನು ಆಕೆ ಕಾಣುವಂತಿರಲಿಲ್ಲ.

ರಾತ್ರೆ ಒಂಬೂವರೆ ಘಂಟೆಗೆ ಭಾರತಿ ತಲಪಾಡಿಯವರ ಮನೆಯಲ್ಲಿ, ಇಂದಿರೆ ಹಾಸಿಕೊಟ್ಟಿದ್ದ ಮೆತ್ತನ್ನ ಹಾಸಿಗೆಯಲ್ಲಿ ಮಲಗಿಕೊಂಡಳು. ಐದೇ ನಿಮಿಷಗಳಲ್ಲಿ ಅವಳಿಗೆ ನಿದ್ದೆ ಬಂತು.

೨೩

ಹದಿನೆರಡು ದಿನಗಳ ಸೆರೆಮನೆಯ ವಾಸ ಮುಗಿದ ಮೇಲೆ ಅನಂತ ಮತ್ತು ಆತನ ಮೂವರು ಸಹೋದ್ಯೋಗಿಗಳ ಬಿಡುಗಡೆಯಾಯಿತು.

ಪೋಲೀಸು ವ್ಯಾನಿನಲ್ಲಿ ತಮ್ಮನ್ನು ಕೊಂಡೊಯ್ದಾಗಲೇ ಸಂಪಿನ ಭವಿಷ್ಯದ ಬಗ್ಗೆ ಶಂಕಾತುರನಾಗಿದ್ದ ಅನಂತನಿಗೆ ಸೆರೆಮನೆಯಲ್ಲಿ ಅದರ ಪ್ರಗತಿಯ ಬಗ್ಗೆ ಯಾವ ವರ್ತಮಾನವೂ ತಿಳಿಯಲಿಲ್ಲ. ಒಮ್ಮಿಂದೊಮ್ಮೆಗೆ ತಮ್ಮ ಬಿಡುಗಡೆಯೇಕಾಯಿತೆಂಬುದೂ ಆತನಿಗೆ ಸಮಸ್ಯೆಯಾಗಿತ್ತು.

ಜೇಲಿನ ಆ ದೊಡ್ಡ ಪ್ರಾಕಾರವನ್ನು, ಅದರ ಹೆಬ್ಬಾಗಿಲನ್ನು ದಾಟಿ ಹೊರಗೆ ಬಂದಾಗ ಅನಂತನಿಗೆ ನಿಜಸ್ಥಿತಿಯ ಅರಿವಾಯಿತು.

ಸಂಪು ಮುರಿದಿತ್ತು.

ಅಲ್ಲಿ ಬೇರೆಲ್ಲ ಗೆಳೆಯರಿದ್ದರು. ಹಲವಾರು ಯೂನಿಯನ್‌ಗಳ ಪ್ರಮುಖ ಕಾರ್ಯಕರ್ತರಿದ್ದರು; ವರ್ಷಕ್ಕೊಮ್ಮೆ ಸೇರುವ 'ಕಹಳೆ'ಯ ಬಳಗದ ಮಹಾಸಭೆಗೂ ಸೇರದ ಇಡೀ ಬಳಗವೇ ಅಲ್ಲಿ ಇದ್ದಿತ್ತು, ಅನಂತನ ಸ್ವಾಗತಕ್ಕಾಗಿ. ಯಾವುದೋ ನೆಪದಿಂದ ರಜೆ ದೊರಕಿಸಿಕೊಂಡು ಬಂದಿದ್ದ ಅನಂತನ ಆಫೀಸಿನ ಮೂರು ನಾಲ್ಕು ಮಂದಿ ಸಹೋದ್ಯೋಗಿಗಳೂ ಅಲ್ಲಿದ್ದರು. ಆದರೆ ಸಂಪು ಹೂಡಿದ್ದ ನೌಕರರೆಲ್ಲ ಎಲ್ಲಿ?

ಅಲ್ಲಿ ಯಾರೂ ಇರದಿರುವುದನ್ನು ಗಮನಿಸಿಯೇ ಅನಂತ ಸಂಘದ ಅಧ್ಯಕ್ಷರ ಮುಖ ನೋಡಿ ನಕ್ಕ. ಅವರೆಲ್ಲರ ಮೊಗಗಳೂ ಬಾಡಿದ್ದವು.

ಅನಂತನನ್ನು ಗುರುತಿಸುವುದೇ ಕಷ್ಟವಿತ್ತು. ಯೋಚನೆಯಲ್ಲಿ ಹಣ್ಣಾಗಿದ್ದ ಜೀವ, ನೊಂದ ಎದೆ, ಕಾತರ ತುಂಬಿದ ಮುಖಕ್ಕೆ, ಹುಲುಸಾಗಿ ಬೆಳೆದಿದ್ದ ಗಡ್ಡ ಅನಪೇಕ್ಷಿತ ಕಾಠಿಣ್ಯವನ್ನು ಕೊಟ್ಟಿತ್ತು.

ಸುದ್ದಿ ಹೇಳಿದುದು ರಾಜೀವ. ಅನಂತನ ಆಫೀಸಿನ ಮೂರು ನಾಲ್ಕು ಸಹೋದ್ಯೋಗಿಗಳ ಕಣ್ಣಲ್ಲಿ ನೀರಿತ್ತು. ಅವರವರಿಗೆ ಮಾತನಾಡುವುದು ಸಾಧ್ಯವಾಗಲಿಲ್ಲ.

"ಬಡ, ಬಡಕಲು ಮಧ್ಯಮವರ್ಗ. ಹಿಂದಾದುದನ್ನು ನೆನೆಸಿಕೊಳ್ಳುವುದಿಲ್ಲ. ಮುಂದಿನಲ್ಲಿ ಭರವಸೆಯಿಲ್ಲ. ಬಾವಲಿಗಳಂತೆ ತಮ್ಮ ಸ್ವಹಿತ ಸಾಧಿಸಿಕೊಳ್ಳುವ ದ್ರೋಹಿಗಳ ತಂಡ."

"ಯಾಕೆ ರಾಜೂ, ಬಡಬಡಿಸುತ್ತಿದ್ದೀಯ? ಇದು ಸರಿಯಾದ ಸಮಯವೆ?"

"ಯಾವುದಕ್ಕೆ ಸರಿಯಾದ ಸಮಯ ಹೇಳಿ? ಮುಷ್ಕರ ನಿಂತು ನಾಲ್ಕು ದಿನಗಳಾದರೂ ಬಿಡುಗಡೆಯ ಸಮಯ ಬರಲು ಇಷ್ಟು ತಡವಾಯಿತು. ಆದರೆ ನಿಮ್ಮ ಬಿಡುಗಡೆಗಾಗಿ ಮುಷ್ಕರ ನಿಲ್ಲಲಿಲ್ಲವೆನ್ನಿ. ಅದು ನಿಂತುದು ಕಂಪೆನಿಯ ನೋಟೀಸಿನ ಬೆದರಿಕೆಯಿಂದ. ನಾಲ್ಕು ಜನ ಹೊಸಬರು ಆಫೀಸಿನಲ್ಲಿ ಕಾಲಿರಿಸಿದೊಡನೆ, ನಿಮ್ಮ ಬೆವರಿಳಿಸುವ ಬಡ ನೌಕರರು ನೋಡಿದ್ದು ಮುಂದಿನ ತಿಂಗಳು ಎಷ್ಟು ಸಂಬಳ ಸಿಗಬಹುದೆಂದು; ಯೂನಿಯನ್ ಅಧಿಕಾರಿಗಳು ಜೇಲಿನಲ್ಲಿ ಇದ್ದಾರೆಂದಲ್ಲ. ಸರಿ, ಆಮೇಲೆ ತರ್ಕಕ್ಕೆ ಆರಂಭ: 'ಈ ಸಂಪಿನಿಂದೇನು ಪುರುಷಾರ್ಥ? ಆ ಕಾರಣ ನಾವು ವಾಪಸು ಹೋಗೋಣ'?"

ರಾಜೀವನಿಗೆ ಹೆಚ್ಚು ಮಾತನಾಡಲು ಅವಕಾಶವಿರದಂತೆ ಹಲವಾರು ಗೆಳೆಯರು ಬಂದು ಅನಂತನನ್ನು ಮುತ್ತಿದರು. ಅನಂತನಿಗೂ ಸಂಪಿನ ವಿಚಾರ ಮಾತನಾಡಲು ಮನಸ್ಸಾಗಲಿಲ್ಲ.

ಈ ಅಪಜಯದ ನೋವನ್ನು ಸದ್ದಿಲ್ಲದೆ ಅನುಭವಿಸುವುದೇ ಒಳ್ಳೆಯದೆಂದು ಬಗೆದು ಆತ ಸುಮ್ಮನಾದ.

ಸೋಮಯಾಜಿಗಳು, "ಟ್ಯಾಕ್ಸಿ ಮಾಡಲೇ?" ಎಂದು ಕೇಳಿದರು.

"ಎಲ್ಲಿಗೆ?"

"ತಲಪಾಡಿಯವರಲ್ಲಿಗೆ. ನಿನ್ನ ಶ್ರೀಮತಿ ಅಲ್ಲಿದ್ದಾಳೆ."

ಹೊರಗೆ ಬಂದಮೇಲೆ ಅನಂತನಿಗೆ ಭಾರತಿಯು ನೆನಪಾದುದು ಈಗಲೇ. ಹೇಗೆ ದಿನ ಕಳೆಯುತ್ತಿರುವಳೋ ಎಂದು ಜೇಲಿನಲ್ಲಿ ಕುಳಿತು ಯೋಚಿಸುತ್ತಿದ್ದಾತನಿಗೆ ಈಗ ಸೋಮಯಾಜಿಗಳ ಮಾತು ಕೇಳಿ ತುಂಬ ಸಮಾಧಾನವಾಯಿತು.

ಅನಂತ ಹೊರಡಲಿದ್ದುದನ್ನು ಕಂಡು ಯೂನಿಯನ್ ಅಧ್ಯಕ್ಷರು ಅವನ ಮುಖ ನೋಡಿದರು: "ಮುಂದೇನು ?" ಎಂದು.

ಅನಂತ ನಕ್ಕ.

"ಒಂದು ಆಭಾಸ ಮುಗಿಯಿತಲ್ಲ. ನನಗಂತೂ ವಿಮೋಚನೆಯಾಗಿದೆ. ನಿಮಗೆ ಇಪ್ಪೊತ್ತು ಹೋಗುವುದು ಸಾಧ್ಯವಿಲ್ಲ. ಆರಾಮವಾಗಿ ಮನೆಗೆ ಹೋಗಿ. ನಾಳೆ ನಮ್ಮ ಅಧಿಕಾರಿಗಳನ್ನು ನೋಡೋಣ. ಎಂಟು ದಿನಗಳ ಮುಷ್ಕರದಿಂದ ಎಷ್ಟು ಮೆತ್ತಗಾಗಿರುವರೆಂಬುದು ವ್ಯಕ್ತವಾಗುತ್ತದೆ. ಆಮೇಲೆ ಲೇಬರ್ ಡಿಪಾರ್ಟ್‌ಮೆಂಟನ್ನು ಕಾಣುವದಂತೂ ಇದೆಯಲ್ಲ. ಫಲವಿರಲಿ, ಇಲ್ಲದಿರಲಿ, ನಮ್ಮ ಮರ್ಯಾದಿತ ವರ್ತುಲದಲ್ಲಿ ಸಾಧ್ಯವಾದಷ್ಟು ಪ್ರಯೋಜನವನ್ನು ಗಿಟ್ಟಿಸಿಕೊಳ್ಳುವುದು ಕರ್ತವ್ಯವಲ್ಲವೆ ?"

"ನೀವೇನು ಮಾಡುತ್ತೀರಿ ?"

ಅನಂತನ ಮುಂದಿರುವ ಬೃಹತ್ ಪ್ರಶ್ನೆ.

ಆದರೆ ಈಗ ಆತ ಎದೆಗುಂದಲಿಲ್ಲ. ನಾಳಿನ ಆಲೋಚನೆ ಮನಸ್ಸಿನಲ್ಲಿ ಮೊಳೆಯುತ್ತಿರಲಿಲ್ಲ.

"ಆ ಬಗ್ಗೆ ಈಗ ಚಿಂತೆ ಅಗತ್ಯವೆ? ಈಗ ನೀವು ಯಾವ ಯೋಚನೆಯೂ ಮಾಡದೆ ಹೋಗಿ. ನಾಳೆ ಬೆಳಿಗ್ಗೆ ಏಳು ಘಂಟೆಗೆ ಸರಯಾಗಿ ನಮ್ಮ ಪ್ರೆಸ್ಸಿಗೆ ಬನ್ನಿ. ಮುಂದಿನ ದಾರಿ ಏನೆಂದು ಯೋಚಿಸಬಹುದು" ಎಂದು ಅನಂತ ಹೇಳಿದ.

ಎಲ್ಲ ಗೆಳೆಯರು ಚದರಿದ ಮೇಲೆ ಅನಂತ ಸೋಮಯಾಜಿಗಳ ಜೊತೆಗೆ ತಲಪಾಡಿಯವರ ಮನೆಯ ದಾರಿ ಹಿಡಿದ.

ಮನೆ ಸಮೀಪಿಸುತ್ತಿದ್ದಂತೆ ಅನಂತನ ಹೃದಯದ ಕಳವಳ ಹೆಚ್ಚಾಯಿತು. ಸೋಮಯಾಜಿಗಳು ಮಾತನಾಡದೆ ಕುಳಿತಿದ್ದರು. ಅನಂತನೂ ಮಾತನಾಡುವ ಸಾಹಸ ಮಾಡಲಿಲ್ಲವಾದರೂ ಮನಸ್ಸು ನೂರಾರು ಪ್ರಶ್ನೆ

ಗಳನ್ನು ಕೇಳುತ್ತಿತ್ತು. ಸೋಮಯಾಜಿಗಳ ನೆರವಿನಿಂದಾಗಿಯೇ ಭಾರತಿ ತಲಪಾಡಿಯವರಲ್ಲಿಗೆ ಬಂದಿರಬೇಕೆಂದು ಆತ ಊಹಿಸಿದ್ದನಾದರೂ ಈಗ ಆತ ಭಾರತಿಯ ಕುರಿತು ಚಿಂತಿಸುತ್ತಿರಲಿಲ್ಲ.

ಅಲ್ಲಿ ಇಂದಿರೆ ಇರಬಹುದು?

ಇಂದಿರೆ ದಿಲ್ಲಿಯಿಂದ ಮರಳಿರಬಹುದೆ?

ಮುಂಬಯಿಯಲ್ಲಿ ಬೇರಾವ ಬಂಧುಗಳೂ ಇರದೆ, ಗಂಡನ ಜೇಲು ವಾಸದ ಅವಧಿಯಲ್ಲಿ ಭಾರತಿ ಅಪರಿಚಿತರ ಮನೆಯಲ್ಲಿರಬೇಕಾಗಿ ಬಂತೆಂಬುದರ ಕುರಿತು ಅನಂತನಿಗೆ ಕಳವಳವಾಗುತ್ತಿರಬೇಕಿತ್ತು. ಬದಲು ಇಂದಿರೆಯನ್ನು ಕಾಣುವ ಆಸೆ ಹೆಚ್ಚುತ್ತಿತ್ತು.

ಏಕೆ ಹೀಗೆ? ಎಂದು ಅನಂತ ತನ್ನನ್ನೆ ತಾನು ಪ್ರಶ್ನಿಸಿದ. ಪುನಃ ಮನಸ್ಸಿನಲ್ಲಿ ಹೊಯ್ದಾಟ ಆರಂಭವಾಗಿತ್ತು. ಜೇಲಿನಲ್ಲಿರುವಾಗ, ಜೇಲು ಬಿಟ್ಟು ಹೊರಗೆ ಬಂದಾಗ ಇಲ್ಲದ ದೌರ್ಬಲ್ಯ ಈಗೇಕೆ ಪ್ರವೇಶಿಸಿತು, ಎಂದು ಚಿಂತಿಸುತ್ತ ಅನಂತ ಸದ್ದಿಲ್ಲದೆ ಕುಳಿತಿದ್ದ.

ತಲಪಾಡಿಯವರು ಮನೆಯಲ್ಲಿರಲಿಲ್ಲ. ಸೋಮಯಾಜಿಗಳು ಕರೆಗಂಟೆ ಬಾರಿಸಿದಾಗ ಅನಂತನ ಎದೆ ಹೊಡೆದುಕೊಳ್ಳುತ್ತಿತ್ತು—ಅಸಮರ್ಪಕ ಅಭ್ಯಾಸ ನಡೆಸಿದ್ದ ವಿದ್ಯಾರ್ಥಿ ಪರೀಕ್ಷಾಗೃಹವನ್ನು ಪ್ರವೇಶಿಸಿದಂತೆ.

ಬಾಗಿಲು ತೆಗೆದ ಅಡುಗೆಯ ಹುಡುಗ, "ಒಳಗೆ ಬನ್ನಿ. ರಾಯರಿಲ್ಲ. ಅಮ್ಮ ಒಳಗಿದ್ದಾರೆ" ಎಂದು ಹೇಳಿದ.

ಸೋಮಯಾಜಿಗಳು ಮರುಮಾತನಾಡದೆ ಪಕ್ಕದ ಇಂದಿರೆಯ ಕೋಣೆ ಯತ್ತ ನಡೆದರು. ಆಗಲೇ "ಯಾರೋ ಅದು ಬಂದದ್ದು?" ಎಂದು ಪ್ರಶ್ನಿಸಿದ ಇಂದಿರೆಯ ಸ್ವರ ಕೇಳಿಸಿತು.

"ಮಾಸ್ತರರು ಬಂದಿದ್ದಾರಮ್ಮ" ಎಂದು ಅಡುಗೆಯ ಹುಡುಗ ಅಲ್ಲಿಂದಲೆ ಕೂಗಿಕೊಂಡ.

ಇಂದಿರೆ ಬಾಗಿಲಿಗೆ ಬಂದಳು. ಕೈಯಲ್ಲಿ ಟವೆಲಿತ್ತು. ಆಗತಾನೆ ಮುಖ ತೊಳೆದುಕೊಂಡು ಒರೆಸಿಕೊಳ್ಳುವ ಕೆಲಸದಲ್ಲಿದ್ದಳು.

ಸೋಮಯಾಜಿಗಳ ಹಿಂದಿದ್ದ ಅನಂತ ಒಂದು ಕ್ಷಣ ನಿಂತ. ಒಂದು ಕ್ಷಣ ಚಲಿಸುತ್ತಿದ್ದ ವಿಶ್ವವೇ ನಿಂತಂತೆ ಆತನಿಗೆ ತೋರಿತು. ತೊಳೆದ ಮುಖ.

ಎದ್ದು ಕಾಣುತ್ತಿದ್ದ ಹಣೆ. ಸೊಂಪಾದ ಮೂಗು. ವಿಶ್ವವನ್ನೆ ಪ್ರತಿಭಟಿಸಿ ಯೇನು ಎಂದು ಕುಣಿಯುತ್ತ ಸಾರುವಂತಿದ್ದ ಹೊಳೆಯುವ ಕಣ್ಣುಗಳು.

ಕುಂಕುಮವಿಲ್ಲದ ಮುಖ !

ಅನಂತ ಮಂತ್ರಮುಗ್ಧನಂತೆ ಇಂದಿರೆಯನ್ನು ನೋಡುತ್ತಿದ್ದ. ಎದೆಯಲ್ಲಿ ಭಯಂಕರ ಅತೃಪ್ತಿಯೊಂದು ಸಾಗರದ ಅಲೆಗಳಂತೆ ಮೊರೆಯಿಡತೊಡಗಿತು. ಪುನಃ ಎದೆಯೊಳಗಿನ ಮರುಕದ ಆ ದನಿ: 'ನೀನು ಸ್ವತಂತ್ರನಲ್ಲ; ನೀನು ಸ್ವತಂತ್ರನಲ್ಲ' ಎಂದು. ಅನಂತನ ಧೈರ್ಯಗೆಡಹತ್ತಿತು. ಯಾವುದೋ ಒಂದು ಸೀಮಾತೀತ ದೌರ್ಬಲ್ಯದ ರಾಜ್ಯಕ್ಕೆ ತಾನು ತನ್ನ ಮನದಿಚ್ಛೆಯಂತೆ ಧಾವಿಸು ತ್ತಿರುವಂತೆ ಕಂಡಿತು.

ಆತನ ಕಣ್ಣೆದುರು ಇಂದಿರೆ ಕುಣಿಯುತ್ತಿದ್ದಳು.

"ಓ್ಹ ! ಮಾಸ್ತರರೆ ! ಬಂದುಬಿಟ್ಟಿರೇನು ? ಭಾರತೀ....ಭಾರತೀ...."

ಇಂದಿರೆಯ ಸಂತೋಷದ ಕರೆ; ಅದರ ದನಿಯಿಂದಲೇ ಅರ್ಥವನ್ನು ಗ್ರಹಿಸಿದ ಭಾರತಿ, ಒಳಗೆ ಅಡುಗೆಯ ಮನೆಯಿಂದ ಓಡಿಯೋಡಿ ಬಂದಳು. ಬಂದು ಇಂದಿರೆಯ ಹಿಂದೆ ನಿಂತಳು.

"ನೋಡು ! ಯಾರು ಬಂದಿದ್ದಾರೆಂದು."

ಅನಂತನಿಗೆ ಪ್ರಜ್ಞೆ ಬಂತು. ಇಂದಿರೆ ನಗುತ್ತಿದ್ದಳು. ಅವಳ ಜೊತೆಗೆ ಭಾರತಿ. ತಾನು ಹದಿನೆರಡು ದಿನಗಳ ಹಿಂದೆ ಕಂಡಿದ್ದ ಭಾರತಿ ! ಆಕೆ ತುಸುವೆ ಮೈ ತುಂಬಿಕೊಂಡಿದ್ದಂತೆ ಕಂಡಿತು. ಅನಂತನಿಗೆ ಒಂದು ಕ್ಷಣ 'ಶಾರದಾ ಭವನ'ದಲ್ಲಿ ಮೊದಲು ಭಾರತಿಯನ್ನು ಕಂಡಿದ್ದ ಸನ್ನಿವೇಶ ನೆನಪಿಗೆ ಬಂತು. ಗೆಳೆಯರ ಪರಿವೆಯೂ ಇಲ್ಲದೆ ಓಡಿಹೋಗಿ ಭಾರತಿಯನ್ನು ತಬ್ಬಿಕೊಂಡಿದ್ದ.

ಇಲ್ಲಿ ಮಾತ್ರ ಆತ ಒಂದು ಹೆಜ್ಜೆ ಮುಂದಿಡಲಿಲ್ಲ. ಇಂದಿರೆಯ ಇದಿರಿ ನಲ್ಲಿ ತಾನು ಭಾರತಿಯನ್ನು ಮಾತನಾಡಿಸುವುದೂ ಸಾಧ್ಯವಿಲ್ಲ, ಎಂಬಷ್ಟು ಸಂಕೋಚ ಉಕ್ಕಿಬಂತು. ಪ್ರಯತ್ನಪೂರ್ವಕ ನಗು ತಂದುಕೊಂಡು ಕೇಳಿದ :

"ಹೇಗಿದ್ದೀ, ಭಾರೀ.... ?"

ಭಾರತಿ ಮಾತನಾಡಲಿಲ್ಲ. ಗಂಡ ಇಂದಿರೆಯ ಕಡೆ ಏಕಾಗ್ರಚಿತ್ತನಾಗಿ ನೋಡುತ್ತಿದ್ದುದು ಆಕೆಯ ಗಮನಕ್ಕೆ ಬಂದಿತ್ತು. ಆದರೆ ಆ ನೋಟ ಆಕೆಗೆ ಅರ್ಥವಾಗಲಿಲ್ಲ. 'ಹೀಗೇಕೆ ನೋಡುತ್ತಿದ್ದಾರೆ ?' ಎಂದು ಅದು ವಿಚಿತ್ರವಾಗಿ ತೋರಿತಷ್ಟೆ. ಅದಕ್ಕಿಂತ ಹೆಚ್ಚು ಅನಂತನ ರೂಪು ಕಂಡು ಆಶ್ಚರ್ಯ

ವಾಗಿತ್ತು. ಅದೇ ಗಡ್ಡ ತುಂಬಿದ ಮುಖ. ಮನೆಯಲ್ಲಿದ್ದುದಕ್ಕಿಂತ ಇನ್ನಷ್ಟು ಕೃಶವಾದ ದೇಹ.

"ಮೊದಲು ಸ್ನಾನ ಮಾಡಿ. ಅವರಿಗೆ ಟವೆಲ್ ತಂದುಕೊಡು, ಭಾರತೀ. ಮತ್ತೆ ಊಟ ಮುಗಿಸಿದ ಮೇಲೆ ಮಾತನಾಡುವ ಇಚ್ಛೆಯಿದ್ದರೆ ಮಾತನಾಡ ಬಹುದು. ಇಲ್ಲವಾದರೆ ಆರಾಮವಾಗಿ ಮಲಗಬಹುದು. ನೀವೂ ಇವೊತ್ತು ಇಲ್ಲಿಯೇ ಮಾಸ್ತರರೆ! ಯಾವಾಗಲೂ ಏನಾದರೂ ನೆಪ ಹೇಳಿ ತಪ್ಪಿಸಿಕೊಳ್ಳು ತ್ತೀರಿ. ಅಪ್ಪನೂ ಬರಬಹುದು ಇನ್ನೊಂದು ಘಂಟೆಯಲ್ಲಿ."

ಸೋಮಯಾಜಿಗಳಿಂದ ಉತ್ತರವನ್ನು ನಿರೀಕ್ಷಿಸದೆ ಇಂದಿರೆ ಅಡುಗೆಯ ಕೋಣೆಯ ಕಡೆ ನಡೆದಳು.

ಸೋಮಯಾಜಿಗಳು ಅನಂತನ ಮುಖ ನೋಡಿದರು. ಆತ ನಗಲು ಪ್ರಯತ್ನಿಸಿದ. ಸಾಧ್ಯವಾಗಲಿಲ್ಲ. ಬಳಿಯಲ್ಲೇ ಇದ್ದ ಸೋಫಾದ ಮೇಲೆ ಕುಸಿದುಬಿದ್ದ.

ಇಂದಿರೆಯ ಕೋಣೆಯಲ್ಲಿ ಭಾರತಿ, ಗಂಡ ಬರುವನೆಂದು ಐದು ನಿಮಿಷ ಕಾದಳು. ಈ ಸಂದರ್ಭವನ್ನರಿತೇ ಇಂದಿರೆ ಅಡುಗೆಯ ಮನೆಗೆ ಹೋಗಿದ್ದಳು. ಸೋಮಯಾಜಿಗಳು ಹೊರಗೇ ಇದ್ದರು. ಆದರೆ ಅನಂತ ಒಳಗೆ ಬರಲಿಲ್ಲ. ಒಂದು ವಿಚಿತ್ರ ಪರಿಸ್ಥಿತಿಯಲ್ಲಿ ತನ್ನನ್ನು ಬಿಟ್ಟುಹೋದ ಗಂಡ ಈಗ ಮರಳಿ ಬಂದಾಗ ಒಂದೆರಡು ಪ್ರೀತಿಯ ಮಾತುಗಳನ್ನಾಡಲು ದೊರಕಿರುವ ಸಂದರ್ಭ ವನ್ನು ಉಪಯೋಗಿಸಿಕೊಳ್ಳಬಾರದೇ ಎಂದು ಭಾರತಿಯ ದುಃಖ ಉಮ್ಮಳಿಸಿ ಬಂತು. ಕೊನೆಗೆ ತನ್ನ ತಾನೇ 'ಜೇಲು ವಾಸ. ಸೋತುಹೋಗಿರಬಹುದು' ಎಂದು ಭಾವಿಸಿಕೊಂಡು ಟವೆಲ್ ಹಿಡಿದುಕೊಂಡು ಬಾಗಿಲ ಬಳಿ ಬಂದಳು.

ಅನಂತ ಮೊಣಕಾಲ ಮೇಲೆ ಆಧರಿಸಿದ ಎರಡೂ ಕೈಗಳ ಮೇಲೆ ತಲೆ ಇರಿಸಿ ಕುಳಿತಿದ್ದ. ಸೋಮಯಾಜಿಗಳು ಮೇಜಿನ ಮೇಲಿದ್ದ 'ಹರಿಜನ'ದ ಪ್ರತಿಯೊಂದನ್ನು ತೆಗೆದು ಓದುತ್ತಿದ್ದರು.

"ತಗೊಳ್ಳಿ, ಟವೆಲ್ !"

ಅನಂತ ಎಚ್ಚತ್ತ. ಹೆಂಡತಿಯನ್ನು ನೋಡಿ ನಕ್ಕ. ಆದರೆ ಬೇಗನೆ ಮುಖ ತಗ್ಗಿಸಿದ. ಭಾರತಿಯ ದೃಷ್ಟಿಯಲ್ಲಿ ತಾನು ಅಪರಾಧಿ ಎಂದು ಮನಸ್ಸು ಸಾರುತ್ತಿದ್ದುದರಿಂದ ಆಕೆಯನ್ನು ನೇರವಾಗಿ ಇದಿರಿಸುವುದು ಆತನಿಗೆ ಸಾಧ್ಯ

ನಾಗಲಿಲ್ಲ. "ಬನ್ನಿ" ಎಂದು ಭಾರತಿ ಬಚ್ಚಲುಮನೆಯ ದಾರಿ ತೋರಿಸಿದಾಗ ಅವಳ ನಿರ್ದೇಶನದಂತೆ ನಡೆದುಹೋದ.

ಹನ್ನೆರಡು ಘಂಟೆಗೆ ಸರಿಯಾಗಿ ತಲಪಾಡಿಯವರು ಬಂದರು.

ಅನಂತ ಮತ್ತು ಸೋಮಯಾಜಿಗಳು ಆಗಲೇ ಊಟ ತೀರಿಸಿಯಾಗಿತ್ತು. ತಲಪಾಡಿಯವರು ಬರುವ ತನಕ ಕಾದಿರುವೆವೆಂದು ಸೋಮಯಾಜಿಗಳು ಹೇಳಿದರೂ ಇಂದಿರೆ ಕೇಳಲಿಲ್ಲ. ಈ ಒತ್ತಾಯದಿಂದಾಗಿ ಅವರು ಊಟ ಮುಗಿಸಬೇಕಾಯಿತು. ಅನಂತನಿಗೆ ಮಾತ್ರ ಎರಡು ತುತ್ತು ಬಾಯಿಗಿರಿಸುವುದು ಸಾಧ್ಯವಾಗಲಿಲ್ಲ. ಭಾರತಿಯನ್ನೂ ಕುಳ್ಳಿರಿಸಿ, ಇಂದಿರೆ, ತಾನೇ ನಿಂತು ಅಡುಗೆಯ ಹುಡುಗನಿಗೆ ಊಟಕ್ಕೆ ಬಡಿಸಲು ನಿರ್ದೇಶನ ಕೊಡುತ್ತಿದ್ದಳು. ಅನಂತನಿಗೆ ಇಂದಿರೆ ಇದಿರು ನಿಂತಿದ್ದುದರಿಂದ ಸರಿಯಾಗಿ ಊಟ ಮಾಡುವುದು ಸಾಧ್ಯವಾಗಲಿಲ್ಲ.

ತಲಪಾಡಿಯವರಿಗೆ ಸೋಮಯಾಜಿಗಳನ್ನೂ ಅನಂತನನ್ನೂ ನೋಡಿ ತುಂಬ ಸಂತೋಷವಾಯಿತು. "ಇಷ್ಟೊತ್ತು ಬಿಡುಗಡೆಯಾಯಿತೇ? ಬಾಪುವಿನ ಉಪವಾಸ ಇಲ್ಲಿಯ ತನಕವೂ ಪರಿಣಾಮ ಮಾಡಿತೇನೋ" ಎಂದು ನಗುತ್ತ ಹೇಳಿದರು.

ಅನಂತನಿಗೆ ಈ ಮಾತು ಅರ್ಥವಾಗಲಿಲ್ಲ. ಸೋಮಯಾಜಿಗಳು ವಿವರಿಸಬೇಕಾಗಿಬಂತು.

"ಜೇಲಿನಲ್ಲಿ ಪತ್ರಿಕೆ ದೊರಕುವುದೇನು? ಕರಾಚಿಯ ಗಲಾಟೆಯಿಂದಾಗಿ ದಿಲ್ಲಿಯಲ್ಲಿ ಗಲಭೆಯಾಗದಂತೆ ಬಾಪೂ ಉಪವಾಸ ಆರಂಭಿಸಿದರು, ಅನಂತ. ದಿಲ್ಲಿ ಎಚ್ಚತ್ತು ಶಾಂತಿ ಪಾಲಿಸುವ ಭರವಸೆ ಕೊಟ್ಟ ಮೇಲೆ ಅವರು ಪಾರಣೆ ಮಾಡಿದರು.—ಮೊನ್ನೆ."

ತಲಪಾಡಿಯವರು ಊಟ ಮುಗಿಸಿ ಬಂದವರು ತುಂಬ ಹೊತ್ತು ಸೋಮಯಾಜಿಗಳೊಡನೆ ಮಾತನಾಡುತ್ತಿದ್ದರು. ಅನಂತ ಪಿಟ್ಟೆಂದು ತುಟಿಯಾಡಿಸುತ್ತಿರಲಿಲ್ಲ. ಅವರ ಮಾತುಗಳನ್ನು ಆಲಿಸುತ್ತಿದ್ದ. ಆದರೆ ಬೇರೆ ವಿಚಾರಗಳ ಕುರಿತು ಚಿಂತಿಸುತ್ತಿದ್ದ. ಗಂಡನ ಉದಾಸೀನ ಭಾವವನ್ನು ಗುರುತಿಸಿದ ಭಾರತಿ ಮತ್ತೆ ಆತನ ಇದಿರು ಬರಲಿಲ್ಲ. ಇಂದಿರೆ ಓದಿನಲ್ಲಿ ಮಗ್ನಳಾಗಿದ್ದಳು.

ಮಾತು ಮುಂದುವರಿದು ಅನಂತನೆಡೆ ಬಂತು.

"ಮುಂದೇನು ಮಾಡುತ್ತೀರಿ, ಅನಂತರಾವ್! ಸರಕಾರದಿಂದ ಏನು ಆಶ್ವಾಸನೆ ದೊರಕಿದೆ?"

ಯೋಚಿಸುತ್ತಿದ್ದ ಅನಂತ ಎಚ್ಚತ್ತ. ತಲಪಾಡಿಯವರ ಮಾತಿಗೆ ಉತ್ತರ ಕೊಟ್ಟುದು ಸೋಮಯಾಜಿಗಳು.

"ಸಂಪು ನಿಲ್ಲದೆ ಯಾವ ಆಶ್ವಾಸನೆಯೂ ಇಲ್ಲವೆಂದು ಖಡಾಖಂಡಿತ ನಿರ್ಧಾರ. ಅದು ಮುಗಿದು ನಾಲ್ಕು ದಿನಗಳ ಮೇಲೆ ಇವರೆಲ್ಲರ ಬಿಡುಗಡೆ ಆಯಿತು. ಅನಂತರಾಯರ ಕೆಲಸವೂ ಹೋಯಿತು. ಉಳಿದವರ ಪಾಡೇನು? ಆಗಬೇಕಾದ ನಿರ್ಧಾರವೆಲ್ಲ ಆಗಿದೆಯಲ್ಲ. ಇನ್ನು ಸರಕಾರ, 'ನಾವೇನು ಮಾಡಲಿಕ್ಕಿದೆ?' ಎಂದು ಕೇಳಿದರೆ ಒಂದು ಕತೆ ಮುಗಿದಂತೆ."

ಅನಂತ ನಿಟ್ಟುಸಿರೆಳೆದ. ತಲಪಾಡಿಯವರು ಮಾತನಾಡಲಿಲ್ಲ.

ಸೋಮಯಾಜಿಗಳು, "ಪ್ರೆಸ್ಸಿಗೆ ಹೋಗಬೇಕು" ಎಂದು ಎದ್ದಾಗ ಅನಂತನೂ ಹೊರಟು ನಿಂತ. ಆತನ ಜೀವನದ ಇನ್ನೊಂದು ಅಧ್ಯಾಯ ಮುಗಿದಿತ್ತು. ಈಗ ಪುನಃ ಕಡಿದ ತಂತಿಗಳನ್ನೆಲ್ಲ ಸರಿಪಡಿಸಬೇಕಿತ್ತು. ಮನೆಯ ಕಡೆ ಮುಖ ತೋರಿಸಬೇಕಿತ್ತು.

"ಹೊರಡೋಣವೆ, ಭಾರತೀ?" ಎಂದು ಅನಂತ ಹೆಂಡತಿಯನ್ನು ಕರೆದ. ಆಗ ಪಕ್ಕದ ಕೋಣೆಯಿಂದ ಬಾಗಿಲಿಗೆ ಬಂದುದು ಇಂದಿರೆ.

"ಇವೊತ್ತೇ ಹೋಗಬೇಕೇನು? ಭಾರತಿ ಇನ್ನೂ ಒಂದೆರಡು ದಿನ ಇಲ್ಲೇ ನಿಲ್ಲಬಾರದೆ?"

ಇಂದಿರೆಯ ಮಾತು ಬರೇ ಔಪಚಾರಿಕವಾದುದಾಗಿದ್ದರೂ ಅದು ಪ್ರಾಮಾಣಿಕ ಅಭಿಪ್ರಾಯವಾಗಿತ್ತು. ಆ ಕಾರಣ ಅನಂತನಿಗೆ ಸಿಟ್ಟು ಬಂತು. ತನ್ನ ಮನಸ್ಸಿನಲ್ಲಿ ಇಷ್ಟೆಲ್ಲ ಉತ್ಪಾತವಾಗುತ್ತಿರುವಾಗಲೂ ಈಕೆ ಯಾವ ರೀತಿ ಪ್ರಶಾಂತಳಾಗಿದ್ದಾಳೆಂದು ತೋರಿತು. ಇಂದಿರೆಯನ್ನು ಕೆಣಕುವ ಉದ್ದೇಶದಿಂದಲೇ ಹೇಳಿದ;

"ಇಲ್ಲ, ಹೋಗುತ್ತೇವೆ. ಮನೆಯ ಅವಸ್ಥೆ ಹೇಗಿದೆಯೆಂದು ಯಾರಿಗೆ ಗೊತ್ತು?"

ಭಾರತಿ ಆಗಲೇ ಸಿದ್ಧಳಾಗಿ ಬಂದಿದ್ದಳು. ಕೈಯಲ್ಲಿ ಪುಟ್ಟ ಬಟ್ಟೆಯ ಗಂಟಿತ್ತು. ಅನಂತ ತಲಪಾಡಿಯವರ ಕಡೆ ನೋಡಿ ಹೇಳಿದ:

"ನಿಮ್ಮ ಉಪಕಾರವನ್ನು ಮರೆಯುವಂತಿಲ್ಲ. ಭಾರತಿಯನ್ನು ನೋಡಿಕೊಂಡು...."

ತಲಪಾಡಿಯವರು ನಡುವೆಯೇ ಮಾತನಾಡಿದರು :

"ಛೆ! ಛೆ! ಹಾಗೆಲ್ಲ ತಿಳಿದುಕೊಳ್ಳಬಾರದು. ನೀವು ಹಾಗೆ ತಿಳಿದು ಕೊಂಡರೆ ಇಂದು ನೊಂದುಕೊಳ್ಳುತ್ತಾಳೆ. ಇಲ್ಲಿ ಉಪಕಾರದ ಮಾತೇ ಇಲ್ಲ. ಇದೆಲ್ಲ ಕರ್ತವ್ಯಕ್ಕೆ ಸಂಬಂಧಿಸಿದ್ದು."

ಇಂದು ನೊಂದುಕೊಳ್ಳುತ್ತಾಳೆ! ಪುನಃ ಇಂದಿರೆಗೇ ಪಟ್ಟ.

ಅನಂತ ಇಂದಿರೆಯ ಕಡೆ ನೋಡಿದ. ಆದರೆ ಈಗ ಆಕೆ ನಗುತ್ತಿರಲಿಲ್ಲ. ಆಮೇಲೆ ಬಂತು, ಚಾಟಿಯೇಟಿನಂತೆ, ಒಂದು ಮಾತು :

"ನೀವು ಇಷ್ಟೇಕೆ ಅಧೀರರಾಗುತ್ತಿದ್ದೀರಿ, ಅನಂತರಾಯರೆ! ಹನ್ನೆರಡು ದಿನಗಳ ಜೇಲುವಾಸ ನಿಮ್ಮನ್ನು ಅಷ್ಟು ಹಣ್ಣಾಗಿಸಿತೇನು ?"

ಅನಂತನಿಗೆ ಏನು ಉತ್ತರ ಹೇಳುವುದೆಂದು ತಿಳಿಯಲಿಲ್ಲ. 'ನನ್ನ ಧೈರ್ಯ ಕುಂದಿಲ್ಲ. ನಿನ್ನಿದಿರಿನಲ್ಲಿ ನಾನು ದುರ್ಬಲನಾಗುತ್ತಿದ್ದೇನೆ' ಎಂದು ಕೂಗಿ ಕೂಗಿ ಹೇಳಬೇಕು ಎಂದು ಮನಸ್ಸು ಬಯಸುತ್ತಿತ್ತು. ಆದರೆ ಬಾಯಿಗೆ ಸಂಯಮದ ಬೀಗ ಬಿದ್ದಿತ್ತು.

ತಲಪಾಡಿಯವರು ನಕ್ಕಾಗ ಅನಂತ ಉಸಿರೆಳೆದ. ತಾನೂ ನಕ್ಕ. "ಇಲ್ಲ. ನಮ್ಮಂಥವರಿಗೆ 'ನಾಳೆ' ಯಾವಾಗಲೂ ದೊಡ್ಡ ಪ್ರಶ್ನೆಯೆ. ಆ ಕಾರಣ ಯೋಚಿಸಲು ಅವಕಾಶ ಬೇಕೆಂದು ಮನೆಗೆ ಹೋಗುವ ಅವಸರ ಸೂಚಿಸಿದೆ, ಅಷ್ಟೆ" ಎಂದ.

ಈಗ ಇಂದಿರೆ ನಕ್ಕಳು.

"ಯಾವುದಾದರೂ ಪುಸ್ತಕ ಬೇಕಾಗಿದೆಯೇನು ?"

ಅನಂತನಿಗೆ ಬಹಳ ದಿನಗಳ ಹಿಂದಿನ ಸನ್ನಿವೇಶ ನೆನಪಿಗೆ ಬಂತು. ಇಂದಿರೆ ತನ್ನನ್ನು ಅಣಕಿಸುತ್ತಿರುವಳೇ ಎಂದು ಒಂದು ಕ್ಷಣ ಯೋಚಿಸಿದ. ಆಮೇಲೆ ನಗು ತಂದುಕೊಂಡು,

"ಬೇಡ. ಈಗ ಕೈಯಲ್ಲಿರುವುದನ್ನು ಓದಿಕೊಂಡು, ಬೇಕಾದಾಗ ಬರುತ್ತೇನೆ" ಎಂದ.

"ಬರುತ್ತಿರಿ. ಭಾರತಿಯನ್ನು ಬಿಟ್ಟು ಬರಬೇಡಿ, ಮತ್ತೆ" ಎಂದು ಇಂದಿರೆ ಭಾರತಿಯ ಬೆನ್ನು ತಟ್ಟಿ ನಗುತ್ತ ಸೂಚಿಸಿದಳು.

ಅನಂತ ಕಷ್ಟದಿಂದಲಾದರೂ, ನಗುತ್ತಲೇ, ಭಾರತಿಯ ಜೊತೆಗೆ, ಸೋಮಯಾಜಿಗಳ ಜೊತೆಗೆ ಅಲ್ಲಿಂದ ಹೊರಬಿದ್ದ.

ಅನಂತ ಪ್ರೆಸ್ಸಿಗೆ ಹೋಗುವ ಆಸೆ ತೋರಿಸಿದರೂ ಸೋಮಯಾಜಿಗಳು ಬೇಡವೆಂದು ಅನಂತನಿಗೆ ಮನೆಯ ದಾರಿ ತೋರಿಸಿದರು. "ನಾಳೆ ಹೇಗೂ ಬರುವಿಯಲ್ಲ. ಈಗ ಸುಮ್ಮನೆ ಹೋಗಿ ಮಲಗಿಕೋ" ಎಂದರು.

ಅನಂತ ಭಾರತಿಯ ಜೊತೆಗೆ ಮನೆಯ ದಾರಿ ಹಿಡಿದ. 'ನಾಳೆ'ಯ ಪ್ರಶ್ನೆ ಮುಂದಿತ್ತು. ಹೃದಯ ಭಾರವಾಗಿತ್ತು. ಹದಿನೆರಡು ದಿನಗಳ ಮಟ್ಟಿಗೆ ತುಂಡಾದ ಸಂಸಾರಜೀವನ ಮತ್ತೆ ಆರಂಭವಾಗಿತ್ತು.

ಹೃದಯದಲ್ಲಿ ಒಂದು ವಿಚಿತ್ರ ಕೋಲಾಹಲವೆದ್ದಿತ್ತು.

ಮನೆ ಸೇರುವ ವರೆಗೂ ಅನಂತ ಹೆಂಡತಿಯೊಡನೆ ಒಂದು ಮಾತನ್ನೂ ಆಡಲಿಲ್ಲ. ಗಂಡನ ಮೌನದ ಅಭ್ಯಾಸವಿದ್ದ ಭಾರತಿ, ತನ್ನ ವೈಯಕ್ತಿಕ ಭಾವನೆಗಳನ್ನೆಲ್ಲ ಹತ್ತಿಕ್ಕಿ, ಅವನಿಂದ ಮಾತನ್ನು ನಿರೀಕ್ಷಿಸಲೂ ಇಲ್ಲ.

೨೪

ಅನಂತ ಮನೆಗೆ ಬಂದಾಗ ತಾಪತ್ರಯಗಳ ಹೊರೆಯೇ ಆತನನ್ನು ಇದಿರು ನೋಡುತ್ತಿತ್ತು. 'ತಾರೀಖು ಹದಿನೆರಡಾದರೂ ನಿನ್ನಿಂದ ಹಣವೂ ಇಲ್ಲ; ಕಾಗದವೂ ಇಲ್ಲ. ನಾನು ಕಂಗಾಲಾಗಿದ್ದೇನೆ' ಎಂದು ಉಡುಪರು ಕಾಗದ ಬರೆದಿದ್ದರು. ಬಹಳ ದಿನಗಳಿಂದ ಬೀಗ ಬಿದ್ದಿದ್ದ ಮನೆಯ ಬಾಗಿಲು ತೆಗೆದಿದೆಯೆಂದು ಹಾಲಿನ ಭಯ್ಯಾ ಅನಂತನನ್ನು ಹುಡುಕಿಕೊಂಡು ಬಂದ.

ಕೈಲ್ಲಿದ್ದ ಇಪ್ಪತ್ತು ಮೂವತ್ತು ರೂಪಾಯಿಗಳ ಆಧಾರದಿಂದ ಒಂದು ಅಸ್ಪಷ್ಟ, ಅನಿರ್ದಿಷ್ಟ ಭವಿಷ್ಯವನ್ನು, ನಿರುದ್ಯೋಗದ ದಿನಗಳಲ್ಲಿ ಅನಂತ ಎದುರಿಸಬೇಕಿತ್ತು.

ಅಥವಾ ಸಾಲದ ಹೊರೆ ಹೊರಬೇಕಿತ್ತು.

ಅದೂ ಯಾವ ಆಧಾರದ ಮೇಲೆ? ಯಾವ ಭರವಸೆಯ ಮೇಲೆ?

"ಕೆಲಸ ಹೋಯಿತು, ಭಾರೀ." ಬಹಳ ಕಷ್ಟದಿಂದ ಅಷ್ಟರ ತನಕದ ಮೌನವನ್ನು ಕೊನೆಗೊಳಿಸಿ ಅನಂತ ಹೇಳಿದ. ಈ ವಿಚಾರ ಭಾರತಿಗೆ ತಿಳಿದಿತ್ತು—ಇಂದಿರೆಯಿಂದಾಗಿ. ಆ ಸುದ್ದಿಯಿಂದಲ್ಲವಾದರೂ ಗಂಡ ಮಾತ ನಾಡಿದನಲ್ಲ ಎಂಬ ಸಮಾಧಾನದಿಂದ ಭಾರತಿ ತುಸು ಹಿಗ್ಗಿದಳು.

"ನಿನ್ನನ್ನು ಕೆಲವು ದಿನಗಳ ಮಟ್ಟಿಗಾದರೂ ಊರಿಗೆ ಕಳುಹಿಸಿಕೊಡಲಿ?"

ಭಾರತಿ ಏನನ್ನೋ ಹೇಳಬಯಸಿದಳು. ಆದರೆ ಗಂಡನ ಕೃಶವಾದ

ದೇಹವನ್ನೂ ಬಾಡಿದ ಮುಖವನ್ನೂ ನೋಡಿದಾಗ ಆ ಮಾತು ಹೊರಡಲಿಲ್ಲ.

"ಸುಖವೋ, ಕಷ್ಟವೋ ಬಂದದ್ದು ಬರಲಿ. ನಾನು ಹೋಗುವುದಿಲ್ಲ" ಎಂದು ಖಂಡಿತವಾಗಿ ಹೇಳಿದಳು.

"ಹಾಗಾದರೆ ನಾಳೆಯ ಪಥ?"

"ಬೇರೆ ಎಲ್ಲಿಯಾದರೂ ಕೆಲಸ ಸಿಗಲಾರದೆ?"

"ಸಿಗಬಹುದು, ಭಾರತೀ. ಆದರೆ ಈ ಕೆಲಸ ಮುಗಿದ ಕಾರಣ ತಿಳಿದರೆ ನನ್ನಂಥವರನ್ನು ಯಾರೂ ಸೇರಿಸಿಕೊಳ್ಳುವುದು ಕಷ್ಟ."

ಭಾರತಿ ತುಸು ಯೋಚಿಸಿ ಹೇಳಿದಳು :

"ಎರಡು ಜತೆ ಬಳೆಯಿವೆ. ಒಂದು ಚಕ್ರಸರವಿದೆ. ಇನ್ನಾರು ತಿಂಗಳು ನೂಕುವುದು ಕಷ್ಟವಾದೀತೇ? ಅಷ್ಟರೊಳಗೆ ಕೆಲಸ ಸಿಗದೆ ಹೋದೀತೇ?"

ಅನಂತನಿಗೆ ಈಗ ಮಾತ್ರ ತುಂಬ ವೇದನೆಯಾಯಿತು. ಹಾಗೆ ಹೇಳುತ್ತಿದ್ದಾಗ ಭಾರತಿಯ ಕಣ್ಣಲ್ಲಿ ನೀರು ತುಂಬುತ್ತಿದ್ದುದನ್ನು ಆತ ಗಮನಿಸಿದ್ದ. ಭಾರತಿಯೂ ಬಳೆಗಳ ವಿಚಾರ ತಾನು ಮಾವನೊಂದಿಗೆ ಜಗಳಾಡಿದ ಸನ್ನಿವೇಶವನ್ನು ನೆನೆಸಿಕೊಳ್ಳುತ್ತಿದ್ದಳು. ಅಂದು ಮಾವನಿಗೆ ಕೊಡಲು ಹಿಂಜರಿದಿದ್ದ ಬಳೆಗಳನ್ನು ಈಗ ಯಾವ ಸಂಕೋಚವೂ ಇಲ್ಲದೆ ಗಂಡನಿಗೆ ಒಪ್ಪಿಸುವಾಗ, ಅದು ಕರ್ತವ್ಯವೆಂಬ ಭಾವ ಮಾತ್ರ ಮನಸ್ಸಿನಲ್ಲಿತ್ತು. ಆದರೆ ಆಸೆಯ, ಸಂಭ್ರಮದ, ಪ್ರೀತಿಯ ಚಿನ್ನದ ಅಗಲುವಿಕೆಯ ಕಲ್ಪನೆಯ ನೋವಿನಿಂದ ಎದೆಯ ಕೊರಗು ಅತಿಯಾಗಿ ಕಣ್ಣು ತುಂಬುತ್ತಿತ್ತು.

"ನೋಡೋಣ" ಎಂದಿಷ್ಟೇ ಹೇಳಿದ ಅನಂತ. ಅದಕ್ಕಿಂತ ಹೆಚ್ಚಿಗೆ ಹೆಂಡತಿಯನ್ನು ಸಂತಯಿಸುವುದು ಆತನಿಗೆ ಸಾಧ್ಯವಾಗಲಿಲ್ಲ.

ಮಾರನೆಯ ದಿನ ಅನಂತ ತನ್ನ ಸಹೋದ್ಯೋಗಿಗಳೊಡನೆ ಅಧಿಕಾರಿಗಳನ್ನು ಕಂಡ. ಮೊದಲು ಇವರೊಡನೆ ಮಾತು ಕೂಡ ಆಡಲು ಅವರು ನಿರಾಕರಿಸಿದರೂ, ಕೊನೆಗೆ ಮನಸ್ಸು ಬದಲಿಸಿ, ಕರೆದರು. ಆದರೆ ಈ ಮಾತುಕತೆಗಳಿಂದ ಅನಂತನಿಗೇನೂ ಪ್ರಯೋಜನವಾಗಲಿಲ್ಲ. ಕೋಶಾಧಿಕಾರಿ ಕೊರ್ಡೆಯ ಸ್ಥಳಾಂತರದ ಆಜ್ಞೆಯನ್ನು ತಮ್ಮ ಉದಾರ ಬುದ್ಧಿಯ ಕುರುಹು ಎಂದು ಹಿಂದೆಗೆದುಕೊಂಡರು. ಬೇರೆ ಯಾವ ಕಾರ್ಯಕರ್ತರ ಮೇಲೂ ಯಾವ ರೀತಿಯ ಕಾರ್ಯಕ್ರಮವನ್ನೂ ತೆಗೆದುಕೊಳ್ಳುವುದಿಲ್ಲವೆಂದು ಆಶ್ವಾಸನೆ ಕೊಟ್ಟರು.

ಆದರೆ ಅನಂತನ 'ನಿವೃತ್ತಿ'ಯ ಆಜ್ಞೆಯನ್ನು ಮನ್ನಾ ಮಾಡಲು ಮಾತ್ರ ಅವರು ಸಿದ್ಧರಿರಲಿಲ್ಲ.

ಅನಂತ ತನ್ನ ಸಹೋದ್ಯೋಗಿಗಳನ್ನು ಬೀಳ್ಕೊಟ್ಟು ಅಲ್ಲಿಂದ ಹೊರಬಿದ್ದ. ಪ್ರೆಸ್ಸಿಗೆ ಬಂದಾಗ ಸೋಮಯಾಜಿಗಳು ಇವನದೇ ದಾರಿ ಕಾಯುತ್ತ ಕುಳಿತಿದ್ದರು.

"ಏನಾಯಿತು ?"

"ನನಗೆ ವಿಮೋಚನೆಯಾಯಿತು. ಉಳಿದವರ ಮಟ್ಟಿಗೆ ತುಸು ರಿಯಾಯಿತಿ ತೋರಿಸಿದರು."

"ಹಾಗಾದರೆ ಪುನಃ ಕೆಲಸದ ಬೇಟೆಯೆ ?"

"ಬದುಕಿರಲು ಬೇರೆ ದಾರಿಯಿದೆಯೆ ?"

ಸೋಮಯಾಜಿಗಳು ತುಸು ಹೊತ್ತು ಮಾತನಾಡಲಿಲ್ಲ.

"ಪ್ರೆಸ್ಸಿನ ಸಾಲವೂ ತುಂಬ ಆಗಿದೆ, ಅನಂತಾ. ನಾಲ್ಕುಸಾವಿರದ ಮೇಲೆ. ಏನು ಮಾಡುವುದೆಂದು ತಿಳಿಯುವುದಿಲ್ಲ. ಕಾಗದದ ಬಿಲ್ ಮುನ್ನೂರು ರೂಪಾಯಿಗಳ ಮೇಲಿದೆ-ಇನ್ನೂ ಕೊಟ್ಟಿಲ್ಲ. ತಲಪಾಡಿಯವರಿಂದ ಎಷ್ಟೊಂದು ಸಹಾಯ ಯಾಚಿಸಬಹುದು ಹೇಳು ? ಹಾಗೇನು ಅವರು ಅಕ್ಷಯ ಪಾತ್ರೆಯೆ?"

ಅನಂತ ಮಾತನಾಡಲಿಲ್ಲ.

"ಆದರೂ ಹೇಗಾದರೂ ತಿಂಗಳಿಗೆ ನೂರು ರೂಪಾಯಿ ಕಲೆಹಾಕಿ ಕೊಡುತ್ತೇವೆ. ಅದನ್ನು ನೀನು ಉಪಯೋಗಿಸಿಕೊಳ್ಳಬೇಕು...."

"ಸೋಮಯಾಜಿಗಳೆ...."

"ಏನು, ಅನಂತ ?"

" 'ಕಹಳೆ'ಯ ರಕ್ತಹೀರಿ ನಾನು ಬದುಕಬೇಕಿಲ್ಲ. ನಾನು ನಿರುದ್ಯೋಗಿಯಾಗಿದ್ದೇನೆ. ಆದರೂ ರಾಜೀವ ಹೇಳಿದಂತೆ, ಬಹಳ ಜನರಿಗಿಂತ ಉತ್ತಮ ಸ್ಥಿತಿಯಲ್ಲಿದ್ದೇನೆ. ನಮ್ಮ ಹೋರಾಟದ ಹಾದಿಯಲ್ಲಿ ಬಡತನ ನಾನು ನೆಚ್ಚಿಕೊಂಡ ಬಂಧು. ಆ ಕಾರಣ ದಯಮಾಡಿ ನನ್ನ ವಿಚಾರ ಯೋಚಿಸಬೇಡಿ."

ಈ ಮಾತಿಗೆ ಸೋಮಯಾಜಿಗಳು ಉತ್ತರ ಹೇಳದಿದ್ದರೂ, ಅನಂತ ಅಂದು ಸಂಜೆ ಮನೆಗೆ ಬಂದಾಗ ಆತನಿಗೆ ದೊಡ್ಡದೊಂದು ಆಶ್ಚರ್ಯ ಕಾದಿತ್ತು.

ನಗುಮೊಗದಿಂದಲೇ ಗಂಡನನ್ನು ಸ್ವಾಗತಿಸಿದ ಭಾರತಿ,

"ಹಾಲಿನವನ ದುಡ್ಡು ಕೊಟ್ಟೆ. ಬಾಡಿಗೆಯ ಹಣವೂ ಕೊಟ್ಟೆ. ತಿಂಗಳ ಸಾಮಾನು ತರಿಸಿಟ್ಟಿದ್ದೇನೆ" ಎಂದು ಹೇಳಿದಳು.

"ಎಲ್ಲಿತ್ತೇ ಹಣ? ಚಿನ್ನ ನೀನೇ ಮಾರಿದೆಯೇನು?" ಎಂದು ಅನಂತ ಕೇಳಿದ.

"ನೀವು ರೂಪಾಯಿ ಕಳಿಸಿದ್ದಿರಲ್ಲ" ಎಂದು ತುಸು ಆಶ್ಚರ್ಯದಿಂದಲೇ ಭಾರತಿ ಕೇಳಿದಳು

"ನಾನೇ?"

"ಆ ದಿನ ಬೆಳಿಗ್ಗೆ ಬಂದಿದ್ದರಲ್ಲ—ರಾಜೀವ. ಅವರು ಬಂದು ನೂರು ರೂಪಾಯಿ ಕೊಟ್ಟು ಹೋದರು ಬೇಗ್ಗೆ. ನೀವು ಹೇಳಿದ್ದೀರಿ, ಎಂತ."

"ಅದನ್ನು ಯಾಕೆ ತೆಗೆದುಕೊಂಡಿ, ಭಾರತಿ?" ಎಂದು ಅನಂತ ಎರಡು ಸಲ ಬೇಸರದಿಂದಲೇ ಕೇಳಿದ. ಭಾರತಿಗೆ ಗಂಡನ ಮಾತೇ ಅರ್ಥವಾಗಲಿಲ್ಲ.

"ಮತ್ತೇನು ಮಾಡಬೇಕಿತ್ತು? ನೀವು ಕೊಟ್ಟಿರಲಿಲ್ಲವೇ?"

ಇದಕ್ಕೆ ಮಾತ್ರ ಅನಂತನ ಉತ್ತರವಿಲ್ಲ.

ಅನಂತನಿಗೆ ತಿಳಿದಿತ್ತು, ಈ ಹಣ ರಾಜೀವನ ಸಂಬಳದಿಂದಲೇ ಬಂದಿರಬೇಕೆಂದು. ಹಾಗೆಯೇ ಈ ಹಣವನ್ನು ಹಿಂದಿರುಗಿಸುವುದೂ ಪ್ರಯಾಸದ ಮಾತೆಂದು ಆತನಿಗೆ ತಿಳಿದಿತ್ತು. ಒಂದು ವೇಳೆ ಹಾಗೆ ಹಿಂದಿರುಗಿಸುವುದು ಸಾಧ್ಯವಿದ್ದರೂ ಈಗ ಆ ಹಣವನ್ನು ಪುನಃ ತರುವುದೆಲ್ಲಿಂದ?

ರಾಜೀವನ ಕಡೆಗೆ ಮನಸ್ಸು ಹರಿದಾಗಲೇ ಅನಂತ ತಾರ್‌ದೇವ್ ಜಂಕ್ಷನಿನ ಆ ಮನೆಯನ್ನು ಪುನಃ ನೆನೆಸಿಕೊಂಡ. ಹಾಗೆಯೇ ರಾಜೀವನ ಪರಿಚಯವಾದ ಸಂದರ್ಭವನ್ನು ಸ್ಮರಿಸಿಕೊಂಡ. ಆತನ ಕಠಿಣತೆಯಲ್ಲೂ ಮಾರ್ದವವಿತ್ತು. ಆತನ ನೈಷ್ಠುರ್ಯದಲ್ಲೂ ಮಾನವತೆಯಿತ್ತು.

ಎಲ್ಲಕ್ಕಿಂತ ಹೆಚ್ಚು ತನ್ನ ದೌರ್ಬಲ್ಯವನ್ನು ಬಾರಿಬಾರಿಗೂ ಬೊಟ್ಟಿಟ್ಟು ತೋರಿಸುವ ಕೆಚ್ಚಿತ್ತು.

ಮಾರನೆಯ ದಿನ ಅನಂತ ರಾಜೀವನನ್ನು ಗದರಿಸಿದ. ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಎಲ್ಲಿಂದಾದರೂ ಸಾಲ ಪಡೆದು ಆ ಹಣವನ್ನು ಹಿಂದಿರುಗಿಸುವೆನೆಂದು ಅನಂತ ಯೋಚಿಸಿದರೂ ಸಾಧ್ಯವಾಗಲಿಲ್ಲ. ಇವನ ಆಲೋಚನೆಯ ಗತಿಯನ್ನು ಗಮನಿಸಿಯೇ ರಾಜೀವ ಹೇಳಿದ:

"ಇನ್ನೆಲ್ಲಿಯಾದರೂ, ಕೆಲಸ ದೊರಕದೆ, ಆ ಹಣದ ನೆನಪು ಕಟ್ಟಿಕೊಂಡರೆ, ನಾನು ನಿಮ್ಮನ್ನು ಹೊಡೆಯಲು ಕೂಡ ಹಿಂಜರಿಯುವುದಿಲ್ಲ."

ಅನಂತ ಸುಮ್ಮನಾದ.

ರಾಜೀವ ಮಾತನಾಡುತ್ತಿದ್ದಾಗ ಆತ ನಿರುತ್ತರನಾಗುತ್ತಿದ್ದುದು ಇದೇ ಮೊದಲನೆಯ ಬಾರಿಯಾಗಿರಲಿಲ್ಲ.

ಮತ್ತೆ ಏಳೆಂಟು ದಿನ ಅನಂತ ಕೆಲಸದ ಬೇಟೆಯಾಡುವುದರ ಜೊತೆಗೆ, ತಾನಿರದ ಅವಧಿಯಲ್ಲಿ ಪತ್ರಿಕೆಯ ಕೆಲಸಗಳಲ್ಲಾದ ಅವ್ಯವಸ್ಥೆಯನ್ನು ಸರಿಪಡಿಸುವುದರಲ್ಲಿಯೂ ಬಿಡುವಿಲ್ಲದಂತೆ ದುಡಿಯಬೇಕಾಗಿ ಬಂತು. ಈ ದುಡಿಮೆಯೇ ಆತನ ಉದ್ವಿಗ್ನ ಮನಸ್ಸನ್ನು ಹತೋಟಿಯಲ್ಲಿಡುವ ಏಕಮಾತ್ರ ಸಾಧನವಾಗಿತ್ತು. ಈ ಅನಿಯಮಿತ, ಅವ್ಯವಸ್ಥಿತ ಜೀವನದ ತಾಪತ್ರಯಗಳಿಗಾಗಿ ಆತ ಹೆದರಿದ್ದಿಲ್ಲ. ಹೆದರುವಂತೆಯೂ ಇರಲಿಲ್ಲ. ಆದರೆ ಭಾರತಿಯ ನೆನಪು ಆದಾಗಲೆಲ್ಲ, ಆಕೆಯನ್ನು ಕಾಣುವಾಗಲೆಲ್ಲ, ಅವನಿಗೆ ತನ್ನ ಏಕಾಂತತೆಯ ಹೋರಾಟದಲ್ಲಿ ಇದೊಂದು ಹೂವು ಬಾಡುತ್ತಿದೆಯೇ ಎಂಬ ಅರಿವು ಬಂದು ಎದೆತುಂಬ ಬೇಗುದಿಯುಕ್ಕುತ್ತಿತ್ತು. ಈ ಪ್ರಜ್ಞೆಯನ್ನು ತೀಕ್ಷ್ಣಗೊಳಿಸಿ, ಮನಸ್ಸಿನ ಶಾಂತಿಯನ್ನು ಕದಡಿ, ತನ್ನ ಆಲೋಚನೆಯ ಕ್ಷೇತ್ರವನ್ನೇ ನಿಯಂತ್ರಿಸಿ, ಕಿಂಕರ್ತವ್ಯವಿಮೂಢನಾಗುವಂತೆ, ತನ್ನ ಮೇಲೆ ಪ್ರಭಾವವನ್ನು ಕೆಡುವುತ್ತಿರುವ ಇನ್ನೊಂದು ವ್ಯಕ್ತಿಯ ನೆನಪು ಕ್ಷಣ ಬಿಡದೆ ಆತನನ್ನು ಕಾಡುತ್ತಿತ್ತು.

ಇಂದಿರೆ !

ತಲಪಾಡಿಯವರ ಮನೆಗೆ ಇನ್ನು ಹೋಗುವುದೇ ಇಲ್ಲವೆಂದು ಅನಂತ ನಿಶ್ಚಯಿಸಿದ್ದ. ಆದರೆ ಈ ನಿಶ್ಚಯ ನೆನಪಿಗೆ ಬಂದಷ್ಟು ಬಾರಿ, ಬರೇ ಪುಸ್ತಕಗಳನ್ನು ತರುವ ನೆಪದಿಂದಲಾದರೂ ಒಂದೆರಡು ಬಾರಿ ಹೋಗಿ ಬರಬಾರದೇ ? ಎಂದು ದುರ್ಬಲ ಮನಸ್ಸು ಪ್ರಶ್ನಿಸುತ್ತಿತ್ತು. ಅದಕ್ಕೆ ಸರಿಯಾಗಿ 'ಬಾಪುವಿನ ಮೇಲೆ ಬಾಂಬು ಎಸೆಯುವ ಪ್ರಯತ್ನ'ದ ವರದಿಯೊಂದು ಪ್ರಕಟವಾದಾಗ ಅನಂತ, ಇಂದಿರೆಯ ಮನಸ್ಸಿನ ಕಳವಳವನ್ನು ತಿಳಿಯುವ ನೆಪದಿಂದಲಾದರೂ ಅಲ್ಲಿಗೊಮ್ಮೆ ಹೋಗೋಣವೇ ಎಂದು ಭಾವಿಸಿದ್ದ. ಬಾಪುವಿನ ಕುರಿತು ತನಗಿರುವ ಪ್ರೀತಿ ಆದರಗಳಿಗಿಂತಲೂ ನೂರು ಪಟ್ಟು ಹೆಚ್ಚಿನ ಭಕ್ತಿಯಿಂದ ಇಂದಿರೆ ಮಹಾತ್ಮನ ಕಡೆ ನೋಡುತ್ತಿರುವಳೆಂದು ಅನಂತನಿಗೆ ತಿಳಿದಿತ್ತು. ಇಂದಿರೆ ಈ ವಿಚಾರ ಯಾವ ಮಾತನ್ನೂ ಆಡಿರಲಿಲ್ಲವಾದರೂ ಆತನಿಗೆ ತನ್ನ ನಂಬಿಕೆ ಸರಿಯಾದುದೆಂಬ ಆತ್ಮವಿಶ್ವಾಸವಿತ್ತು.

ಆದರೆ ಬೇರೆ ಏನೋ ಕೆಲಸ ಬಂದು ಆತನಿಗೆ ತಲಪಾಡಿಯವರ ಮನೆಗೆ ಹೋಗಲಾಗಲಿಲ್ಲ. 'ಹೋಗಲಾಗಲಿಲ್ಲ'ವೆಂಬ ಸಮಾಧಾನ ಮನಸ್ಸಿಗೆ ದೊರಕಿದಾಗ, 'ನಾನು ಹೋಗುವುದು ಬೇಡವೆಂದು ನಿಶ್ಚಯಿಸಿಲ್ಲವೆ? ಸರಿಯಾದ ನೆಪ ದೊರಕಿತು. ನನ್ನ ದೌರ್ಬಲ್ಯವನ್ನು ಇನ್ನೊಮ್ಮೆ ಜಯಿಸಿದೆ' ಎಂದು ಮನಸ್ಸು ತನ್ನ ಬೆನ್ನು ತಟ್ಟಲಾರಂಭಿಸಿತು.

ಆದರೂ ಹತ್ತು ಹನ್ನೆರಡು ದಿವಸಗಳಿಗಿಂತ ಹೆಚ್ಚು ತನ್ನ ಮನಸ್ಸಿನ ಚಾಪಲ್ಯವನ್ನು ತಡೆಹಿಡಿಯಲು ಅನಂತ ಸಮರ್ಥನಾಗಲಿಲ್ಲ. 'ದಿಲ್ಲಿಯ ಪ್ರವಾಸ ಮುಗಿಸಿ ಬಂದ ಇಂದಿರೆ, ಬಾಪುವನ್ನು ಕಂಡಿದ್ದಳೆ? ಅಲ್ಲಿಯ ಅನುಭವಗಳನ್ನೆಲ್ಲ ತನ್ನೊಡನೆ ವಿವರಿಸಬಹುದೆ?'

ಒಂದು ದಿನ ಹೀಗೆಯೇ ಯೋಚಿಸುತ್ತಿದ್ದವನು ಬಳಿಯಲ್ಲೇ ಇದ್ದ ಸೋಮಯಾಜಿಗಳೊಡನೆ "ತಲಪಾಡಿಯವರಲ್ಲಿಗೆ ಹೋಗೋಣವೆ?" ಎಂದು ಕೇಳಿದ.

"ಯಾಕೆ?"

"ದಿಲ್ಲಿಯ ಅಕ್ಕಪಕ್ಕದ ನಿರಾಶ್ರಿತ ಶಿಬಿರಗಳಲ್ಲಿ ದುಡಿದು ಬಂದಿರುವ ಅವರ ಮಗಳ ಅನುಭವವನ್ನು ಸಂಗ್ರಹಿಸಿದರೆ ಒಂದೆರಡು ಲೇಖನಗಳಿಗೆ ವಸ್ತುವಾಗಬಹುದೆಂದು ತೋರುತ್ತದೆ."

"ನೀನೇ ಹೋಗಬಹುದಲ್ಲ."

"ನೀವೂ ಬಂದಿದ್ದರೆ ಚೆನ್ನಾಗುತ್ತಿತ್ತು." ಅನಂತನ ಅತ್ಯಂತ ಪ್ರಾಮಾಣಿಕ ಮಾತು ಅದು. ಸೋಮಯಾಜಿಗಳು ಜೊತೆಗಿದ್ದರೆ ಇಂದಿರೆಯನ್ನು ಕಂಡಂತಾಗುತ್ತದೆ, ಆಕೆಯೊಡನೆ ಮಾತನಾಡಿದಂತಾಗುತ್ತದೆ, ಈ ಸುಖದ ಅನುಭವದಲ್ಲಿ ಯಾವ ಪ್ರಮಾದವೂ ಆಗದಂತೆ ಎಚ್ಚರಿಕೆಯಿಂದಿದ್ದು ಮರಳಿದಂತಾಗುತ್ತದೆ.

'ನಾನು ಏಕಾಂತದಲ್ಲಿ ಇಂದಿರೆಯನ್ನು ಸಂಧಿಸಲಾರೆ' ಎಂದು ಅನಂತನ ಮನಸ್ಸು ಕೂಗಿ ಕೂಗಿ ಹೇಳುತ್ತಿತ್ತು. ತನ್ನ ದೌರ್ಬಲ್ಯವನ್ನು ಹೊಡೆದೋಡಿಸಲು ಸೋಮಯಾಜಿಗಳನ್ನು ಕರೆದಿದ್ದ.

"ಇಲ್ಲ, ಅನಂತ. ನಾನು ಬರುವುದಿಲ್ಲ. ಬೇರೆ ಕೆಲಸವಿದೆ. ನಿನ್ನ ವಿಚಾರ ಒಳ್ಳೆಯದೆ. ಹೇಗೂ ಶುಕ್ರವಾರ. ಮುಂದಿನ ವಾರದ ಸಂಚಿಕೆಗೆ ಏನಾದರೂ ಆಗಬೇಕಲ್ಲ. ಹೋಗಿ ಬಾ. ಸಂಜೀವರಾಯರಿಗೆ ನಮಸ್ಕಾರ ತಿಳಿಸು" ಎಂದರು.

ಅನಂತ ಮತ್ತೂ ಒಂದೆರಡು ಘಂಟೆ ಹೊರಡಲು ತಡವರಿಸಿದ. ಸಂಜೆಯಾಗಿತ್ತು. ಆರು ಘಂಟೆಗೆ ಸೋಮಯಾಜಿಗಳು ಪ್ರೆಸ್ಸಿನಿಂದ ಹೊರಟು ಹೋದರು.

ಅನಂತ ಮನಸ್ಸಿದ್ದೂ ಮನಸ್ಸಿಲ್ಲದೆ ತಲಪಾಡಿಯವರ ಮನೆಯ ದಾರಿ ಹಿಡಿದ.

ದಾರಿ ತುಂಬ ಅನಂತನಿಗೆ ಇಂದಿರೆಯ ಯೋಚನೆಯೆ. ಯೋಚನೆಯಿಂದಾಗಿ ಎದೆತುಂಬ ಕಳವಳವೆ. ಏನೆಂದು ಮಾತನಾಡಬೇಕು, ಹೇಗೆ ಸಂಭಾಷಣೆ ಆರಂಭಿಸಬೇಕು, ಪುಸ್ತಕಗಳಿಗಾಗಿ ಬಂದಿಲ್ಲವೆಂದು ಹೇಗೆ ಹೇಳಬೇಕು, ತಲಪಾಡಿಯವರಿದ್ದರೆ, ಅವರು ತನ್ನ ಗೊಂದಲದ ಮನಃಸ್ಥಿತಿಯನ್ನು ಊಹಿಸಿದರೆ ಅವರಿಗೆ ಯಾವ ರೀತಿಯ ಸಮಾಧಾನ ಹೇಳಬೇಕು, ಎಂದೆಲ್ಲ ಯೋಚಿಸಿಕೊಂಡು ಅನಂತ ತಲಪಾಡಿಯವರ ಮನೆಯ ಬಾಗಿಲ ಬಳಿ ಬಂದ.

ದಾರಿಯಲ್ಲಿ ನಡೆಯುತ್ತಿದ್ದ ಯಾವ ಗಲಭೆ ಗೊಂದಲಗಳೂ ಇವನ ಮನಸ್ಸನ್ನು ಪ್ರವೇಶಿಸಲು ಸಮರ್ಥವಾಗಲಿಲ್ಲ. 'ಸಂಜೆಯಾಗುತ್ತಿದೆಯಷ್ಟೆ. ಇಷ್ಟು ಬೇಗ ಏಕೆ ಅಂಗಡಿಯ ಬಾಗಿಲುಗಳೆಲ್ಲ ಮುಚ್ಚಿಕೊಳ್ಳುತ್ತಿವೆ' ಎಂಬ ಯೋಚನೆ ಒಂದು ಕ್ಷಣ ಮನಸ್ಸಿನಲ್ಲಿ ಸುಳಿಯಿತಾದರೂ ಅದಕ್ಕೆ ಹೆಚ್ಚಿನ ಮಹತ್ವವನ್ನೇನೂ ಕೊಡಲಿಲ್ಲ.

ಪುನಃ ಇಂದಿರೆಯ ಮನೆಯ ಬಾಗಿಲಲ್ಲಿ ನಿಂತು ಗಂಟೆ ಬಾರಿಸಿದಾಗ ಬಾಗಿಲು ತೆಗೆದುದು ಅಡುಗೆಯ ಹುಡುಗ.

"ರಾಯರು ಮನೆಯಲ್ಲಿಲ್ಲವೆ ?"

ಹುಡುಗ ತುಂಬ ಹೆದರಿಕೊಂಡಂತಿತ್ತು. ಏನೋ ಗಲಿಬಿಲಿಯಿಂದ ಹೆದರಿದ ಮಗುವಿನಂತೆ ತನ್ನನ್ನೆ ನೋಡುತ್ತಿದ್ದ ಅಡುಗೆಯ ಹುಡುಗನನ್ನು ಕಂಡು ಅನಂತನಿಗೆ ಆಶ್ಚರ್ಯವಾಯಿತು.

"ರಾಯರು ಮನೆಯಲ್ಲಿಲ್ಲವೇನೋ ?"

"ಇಲ್ಲ. ಈಗ ಹೊರಗೆ ಹೋದರು." ಹುಡುಗನ ಉತ್ತರ ತಡೆದು ತಡೆದು ಬರುತ್ತಿತ್ತು.

"ಏನಾಗಿದೆ ನಿನಗೆ. ಇಂದಿರಮ್ಮ ಇದ್ದಾರೆಯೆ ?"

"ಇದ್ದಾರೆ. ಒಳಗೆ ಅಳುತ್ತಿದ್ದಾರೆ" ಎಂದು ಹುಡುಗ ಹೇಳಿದ.

'ಇಂದಿರೆ ಅಳುತ್ತಿದ್ದಾಳೆ' ಎಂಬ ಎರಡು ಶಬ್ದ ಕಿವಿಗೆ ಬಿದ್ದೊಡನೆ ಅನಂತ ಹುಡುಗನನ್ನು ಬದಿಗೆ ಸರಿಸಿ ಒಳಗೆ ಧಾವಿಸಿದ.

ಇಂದಿರೆಯ ಕೋಣೆಯ ಬಾಗಿಲಲ್ಲಿ ನಿಂತ.

ಬರೀ ನೆಲದ ಮೇಲೆ ಬಿದ್ದು ಇಂದಿರೆ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಯಾವ ವ್ಯಕ್ತಿ ಅಳುವುದು ಸಾಧ್ಯವೇ ಇಲ್ಲವೆಂದು ಬಗೆದಿದ್ದನೋ, ಯಾವ ವ್ಯಕ್ತಿಯ ವರ್ಚಸ್ಸಿನಡಿ ತಾನು ಅಸಹಾಯನಾಗುತ್ತಿದ್ದೇನೆ, ದುರ್ಬಲನಾಗುತ್ತಿದ್ದೇನೆ ಎಂದು ಅನಂತ ಭಾವಿಸಿದ್ದನೋ ಅದೇ ವ್ಯಕ್ತಿ ಈಗ ಬಿಕ್ಕಿ ಬಿಕ್ಕಿ ಮಕ್ಕಳಂತೆ ಅಳುತ್ತಿತ್ತು.

"ಇಂದಿರಾ...." ಎಲ್ಲ ಸಂಪ್ರದಾಯದ ಎಲ್ಲೆ ಮೀರಿದ ಒಂದು ಮಹಾ ಪ್ರಪಾತದೊಳಕ್ಕೆ ಧುಮುಕಿದಂತೆ, ಜಗತ್ತಿನ ಇರವನ್ನೇ ಮರೆತು ಅನಂತ 'ಇಂದಿರಾ....' ಎಂದು ಕರೆದ.

ಅಳುತ್ತಿದ್ದ ಇಂದಿರೆ ತಲೆಯೆತ್ತಿದಳು. ಕರೆದ ಮುಖದ ಪರಿಚಯವಾಯಿತು. ಕರೆದ ದನಿಯ ಪರಿಚಯವೂ ಆಯಿತು. ಆದರೆ ಕಣ್ಣೀರು ನಿಲ್ಲಲಿಲ್ಲ. ಬಿಕ್ಕಳಿಕೆ ಕಡಿಮೆಯಾಯಿತು.

"ಏನಾಯಿತು, ಇಂದಿರಾ ?"

ಅನಂತ ತನ್ನ ಅನುಚಿತ ಸಂಬೋಧನೆಯ ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ತಾನು ಪ್ರೀತಿಸುವ ಜೀವ ದುಃಖಿಸುತ್ತಿದೆಯೆಂಬ ಎದೆಯ ಕಳವಳದ ಹೊರತು ಬೇರಾವ ಭಾವಕ್ಕೂ ಆತನ ಹೃದಯದಲ್ಲಿ ಆಗ ಸ್ಥಾನವೇ ಇರಲಿಲ್ಲ.

ಇಂದಿರೆ ಬೆಚ್ಚಿಬಿದ್ದಳು. ಒಂದು ಕ್ಷಣ ಆಕೆಯ ಶರೀರವಿಡೀ ಕಂಪಿಸಿತು. 'ಇದು ಯಾರು ತನ್ನನ್ನು ಕರೆಯುತ್ತಿರುವವರು ?' ಎಂದು ತಿಳಿಯದೆ ಹೋಯಿತು. ಆಮೇಲೆ ಮೆಲ್ಲಮೆಲ್ಲನೆ ತಿಳಿವು ಬರುತ್ತ, ಭಾರತಿಯ ಗಂಡ ತನ್ನ ಮುಂದಿದ್ದಾರೆ, 'ಕಹಳೆ'ಯ ಸಂಪಾದಕರು ತನ್ನ ಮುಂದಿದ್ದಾರೆ, ಎನ್ನುವ ಯೋಚನೆ ಬರುತ್ತ, ಇಂದಿರೆ ಎದ್ದು ಕುಳಿತಳು.

ಆಕೆಯ ಹೃದಯದ ದುಃಖಸಾಗರದ ಕತ್ತಲೆಯಲ್ಲಿ ಅನಂತನ ಕಾತರ ತುಂಬಿದ ಕರೆಯ ಹಿಂದಿನ ವೇದನೆ ತೋರುವಂತಿರಲಿಲ್ಲ.

"ನಿಮಗೆ ತಿಳಿದಿಲ್ಲವೆ ?"

ಈಗ ಮಾತ್ರ ಅನಂತ ಕಂಗಾಲಾದ. ತನಗರಿಯದ ಯಾವುದೋ

ಒಂದು ಪ್ರಮಾದ ಸಂಭವಿಸಿದೆಯೆಂಬ ತಿಳಿವು ಬಂದಾಗ ಅನಂತನ ಮನಸ್ಸು ತಿಳಿಯಾಯಿತು.

"ಏನು ? ಏನಾಯಿತು ?"

"ಬಾಪುವನ್ನು ಗುಂಡಿಕ್ಕಿ ಕೊಂದಿದ್ದಾರಂತೆ—ಇನ್ನೊತ್ತು ಸಂಜೆ, ಐದೂವರೆಗೆ."

ಬಹಳ ಪ್ರಯಾಸದಿಂದ ಇಂದಿರೆ ಆ ಮಾತನ್ನು ಹೇಳಿದಳು. ಆದರೆ ಪುನಃ ದುಃಖವುಕ್ಕಿಬಂದು ಆಕೆಗೆ ಮಾತನಾಡುವುದು ಕಷ್ಟವಾಯಿತು.

ಅನಂತ ನಿಂತಲ್ಲಿಯೇ ಕುಸಿದುಬಿಟ್ಟ.

ಬಾಪೂ ಇನ್ನಿಲ್ಲ! ಬಾಪುವಿನ ಕೊಲೆ!!

ಗ್ರಾಮರಾಜ್ಯದ, ಸ್ವತಂತ್ರ ಭಾರತದ, ಸಮಾನಾವಕಾಶದ ಸುಂದರ ಭಾರತದ ಕನಸು ಕಾಣುತ್ತಿದ್ದ ಸ್ವಾತಂತ್ರ್ಯಮಂದಿರದ ಮಹಾನ್ ಶಿಲ್ಪಿ.

ಇನ್ನಿಲ್ಲ!

ಐದು ನಿಮಿಷ ಅನಂತ ಹಾಗೆಯೇ ಕುಳಿತಿದ್ದ. ತೆರೆ ತೆರೆಯಾಗಿ ಆತನ ಕಾಲೇಜು ಜೀವನದ ಬಾಳು ಆತನ ಮನಸ್ಸಿನೆದಿರು ಹಾದುಹೋಗುತ್ತಿತ್ತು. ಒಂದು ಮಹಾನ್ ವ್ಯಕ್ತಿಯಿಂದ ಪ್ರಭಾವಿತವಾದ ಜೀವನದ ನೂರಾರು ಸಣ್ಣ ಪುಟ್ಟ ಸನ್ನಿವೇಶಗಳು ಅನಂತನ ಕಣ್ಣೆದುರು ತಿರುಗುತ್ತಿದ್ದವು.

ಬಾಪೂ ಇನ್ನಿಲ್ಲ!

ಈ ದುಃಖರಾತ್ರಿಯಲ್ಲಿ, ಇಂದಿರೆಯ ಕುರಿತು ತಾನೇನೆಲ್ಲ ಯೋಚಿಸುತ್ತಿದ್ದೆ ?

ಅನಂತನಿಗೆ ತನ್ನ ದೌರ್ಬಲ್ಯದ ನೆನಪಾಗಿ ಕಣ್ಣೀರು ಬಂತು.

ಇಂದಿರಾದೇವಿ ?

"ನನಗೆ ಈ ವಿಚಾರ ತಿಳಿದಿರಲಿಲ್ಲ ನಿಮ್ಮ ದಿಲ್ಲಿ ಪ್ರವಾಸದ ಅನುಭವಗಳನ್ನು ಸಂಗ್ರಹಿಸೋಣವೆಂದು ಬಂದೆ. ನಿಮ್ಮ ದುಃಖದ ಆಳ ಎಷ್ಟಿದೆಯೆಂದು ನನಗೆ...."

ಇಂದಿರೆ ನಡುವೆಯೇ ತಡೆದು ಹೇಳಿದಳು :

"ಇಡೀ ಭಾರತಕ್ಕೆ ದುಃಖದ ರಾತ್ರಿ, ಅನಂತರಾಯರೆ. ನನಗೊಬ್ಬಳಿಗೇ ಅಲ್ಲ."

"ಹೌದು. ಆದರೆ ಬಾಪುವಿನ ಆತ್ಮೀಯ ಒಡನಾಟದಲ್ಲಿ ಕೆಲವು ದಿನಗಳ

ನ್ನಾದರೂ ಕಳೆದಿರುವ ನಿಮಗೆ ಈ ದುಃಖ ದುಃಖಸಾಗರವೆ. ಆಗಬಾರದುದು ಆಗಿಹೋಯಿತು. ನಾನು ಬರುತ್ತೇನೆ” ಎಂದು ಅನಂತ ಎದ್ದುನಿಂತ.

ಇಂದಿರೆ ಅವನನ್ನು ತಡೆಯಲಿಲ್ಲ.

ಅನಂತನ ಹೃದಯವನ್ನು ದುಃಖ ವ್ಯಾಪಿಸಿತ್ತು. ಒಂದು ಕ್ಷಣ ಇಂದಿರೆಯ ಬಳಿ ಹೋಗಿ, ಅವಳನ್ನು ಮೈದಡವಿ ಸಂತಯಿಸೋಣವೇ ಎಂಬುದೊಂದು ಆಲೋಚನೆ ಮಿಂಚಿ ಮಾಯವಾಯಿತು. ಮರುಕ್ಷಣವೇ ತನ್ನ ದೌರ್ಬಲ್ಯದ ಅಪರಾಧದ ತಿಳಿವು ಬಂದು ಅತೀವ ಸಂಕಟವಾಯಿತು.

ಅನಂತ ಭಾರವಾದ ಕಾಲುಗಳನ್ನೆಳೆದುಕೊಂಡು ಅಲ್ಲಿಂದ ಹೊರಬಿದ್ದ.

ಏನು ಮಾಡಬೇಕೆಂದು ತನಗೆ ತೋಚುತ್ತಿರಲಿಲ್ಲ. ಸೋಮಯಾಜಿಗಳನ್ನು ನೋಡಬೇಕು, ರಾಜೀವನನ್ನು ಕಾಣಬೇಕು, ಎಂದು ಮನಸ್ಸಿಗೆ ಅನಿಸುತ್ತಿತ್ತು. ಯಾವುದಕ್ಕೂ ಭಾರತಿಗೆ ಸುದ್ದಿ ತಿಳಿಸಿ ಬರುವುದು ಅಗತ್ಯ. ರಾತ್ರಿ ವಿಪರೀತವಾದರೆ ಅವಳು ಹೆದರಿಕೊಳ್ಳಬಹುದು ಎಂದುಕೊಂಡು, ಅನಂತ ಮೊದಲು ಮನೆಗೆ ಹೋಗಿಬರಲು ಕುರ್ಲಾಕ್ಕೆ ಧಾವಿಸಿದ.

ಅನಂತ ಮನೆಯ ಬಾಗಿಲು ತಟ್ಟಿದಾಗ ಭಾರತಿ ನಗುನಗುತ್ತ ಬಾಗಿಲು ತೆಗೆದಳು. ಅನಂತನಿಗೆ ಆ ನಗು ಅರ್ಥವಾಗಲಿಲ್ಲ. ಅವನ ಬಾಡಿದ ಮುಖವನ್ನು ಆಕೆ ಗಮನಿಸಲಿಲ್ಲ.

“ಇಷ್ಟು ಬೇಗ ಬರುವಿರೆಂದು ನಾನು ನಂಬಿರಲಿಲ್ಲ. ಬನ್ನಿ. ಕಾಫಿ ಮಾಡಿದ್ದಿದೆ. ಈಗ ತಂದೆ” ಎಂದವಳೇ ಒಳಗೆ ನಡೆದಳು.

ಅನಂತ ತನ್ನ ಕುರ್ಚಿಯ ಮೇಲೆ ಕುಳಿತು ತಲೆಯನ್ನು ಕೈಗಳಿಂದ ಆಧರಿಸಿ ಯೋಚಿಸತೊಡಗಿದ.

ಕಾಫಿ ತಂದ ಭಾರತಿ,

“ಒಂದು ಸಂತೋಷದ ಸುದ್ದಿಯಿದೆ, ನಿಮಗೆ ತಿಳಿಸುವುದಕ್ಕೆ” ಎಂದು ಹೇಳಿದಾಗ ಅನಂತ ಅರ್ಥವಾಗದೆ ಹೆಂಡತಿಯ ಮುಖ ನೋಡಿದ. ಗಂಡ ತನ್ನನ್ನೆ ಪರೀಕ್ಷಿಸುತ್ತಿದ್ದಾನೆ ಎಂಬ ತಿಳಿವು ಮೂಡಿದೊಡನೆ ಭಾರತಿ ತಂದ, ಕಾಫಿಯ ತಟ್ಟೆಯನ್ನು ಅಲ್ಲಿಯೆ ಕೆಳಗಿಟ್ಟು, ಓಡಿಬಂದು ತನ್ನೆರಡು ತೋಳುಗಳಿಂದ ಅನಂತನನ್ನು ಸುತ್ತುವರಿದು, ಆತನ ಎದೆಯಲ್ಲಿ ಮುಖವಡಗಿಸಿಕೊಂಡಳು.

ಅನಂತನ ಎದೆಯ ಬಡಿತ ಆಕೆಗೆ ಸರಿಯಾಗಿ ಕೇಳುತ್ತಿತ್ತು.

ಅನಂತನಿಗೆ ಹೆಂಡತಿಯ ವರ್ತನೆ ಅರ್ಥವಾಗಲಿಲ್ಲ. 'ಹೀಗೇಕೆ ಮಾಡು ತ್ತಿದ್ದಾಳೆ?' ಎಂದು ಕ್ಷಣಕಾಲ ಯೋಚಿಸಿದ. 'ಹಾಗಾದರೆ ಇವಳಿಗೆ ಇಂದಿನ ದುರಂತದ ಕತೆಯೇ ತಿಳಿದಿಲ್ಲ' ಎಂದು ಯೋಚಿಸಿದ.

"ಎಂಥದೇ?"

ಭಾರತಿ ಮೆಲ್ಲಮೆಲ್ಲನೆ ತಲೆಯೆತ್ತಿ ಗಂಡನ ಮುಖವನ್ನೇ ನೋಡುತ್ತ ಹೇಳಿದಳು:

"ನಾನು........ನಾನು........ಬಸುರಿಯೆಂದು ತೋರುತ್ತದೆ. ನಾಲ್ಕು ತಿಂಗಳಾಯಿತು........"

ಒಂದೆಡೆ ದುಃಖ, ಇನ್ನೊಂದೆಡೆ ಮರುಕ, ಮಗುದೊಂದೆಡೆ ಇಂದಿರೆ ಯಿಂದ ಪ್ರಭಾವಿತವಾದ ಮಾನಸಿಕ ಹೋರಾಟ, ಇವೆಲ್ಲವುಗಳ ಒಟ್ಟು ಮೊತ್ತ ವಾಗಿ ಅನಂತನ ಬಾಯಿಂದ ಹೊರಟ ಮಾತು:

"ಇಷ್ಟೆಯೇ?"

ಭಾರತಿಯ ಕೈ ಸಡಲಿತು. ಗಂಡನ ಎದೆಯ ಆಶ್ರಯವನ್ನು ಬಿಟ್ಟು ಮೆಲ್ಲಮೆಲ್ಲನೆ ಹಿಂದೆ ಸರಿದಳು. ಅನಂತ ಅವಳ ಮುಖವನ್ನು ನೋಡುತ್ತಿರಲಿಲ್ಲ.

"ಗಾಂಧೀಜಿಯವರನ್ನು ಗುಂಡಿಕ್ಕಿ ಕೊಂದರಂತೆ, ಭಾರೀ........ಈಗ ನನಗೆ ಹೋಗಬೇಕಾಗಿದೆ. ರಾತ್ರಿ ಬರುವಾಗ ತಡವಾಗಬಹುದು. ನೀನು ಬಾಗಿಲು ಹಾಕಿ ಮಲಗಿಕೋ. ಹೇಳಿ ಹೋಗಲು ಬಂದೆ" ಎಂದವನೇ ಅನಂತ ಅಲ್ಲಿಂದೆದ್ದು ಹೊರಬಿದ್ದ.

ಒಂದು ಕ್ಷಣ ಭಾರತಿ ಆರಿದ್ದ ಕಾಫಿಯ ತಟ್ಟೆಯ ಕಡೆ ನೋಡಿದಳು. ಮತ್ತೊಂದು ಕ್ಷಣ ಗಂಡ ಮರೆಯಾದ ದಾರಿಯ ಕಡೆ ನೋಡಿದಳು.

'ಇಷ್ಟೆಯೇ?' ಗಂಡನ ಮಾತು ಇನ್ನೂ ಮರುದನಿ ಕೊಡುತ್ತಿತ್ತು: 'ಇಷ್ಟೆಯೇ?'

ತನ್ನ ಮೇಲಲ್ಲದೆ, ತಮ್ಮ ದಾಂಪತ್ಯದ ಕುರುಹಾಗಿ ಬೆಳೆಯುವ ಹೊಸ ಜೀವದ ಮೇಲೂ ದ್ವೇಷ.

ಭಾರತಿಯ ತಲೆ ತಿರುಗಲಾರಂಭಿಸಿತು. ಮಂಚದ ಮೇಲೆ ಬಿದ್ದು ಆಕೆ ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು.

ಹೇಮಂತಗಾನ

ಭಾಗ ೨

ಇಂದಿರೆ

೨೫

ಆಚೆಯ ಕೋಣೆಯಲ್ಲಿ ರಾಟೆ ಸದ್ದು ಮಾಡುತ್ತಿದೆ: ಕಿರಿ, ಕಿರಿ, ಕಿರಿ, ಕಿರಿ....ಕಿರಿ, ಕಿರಿ, ಕಿರಿ, ಕಿರಿ....

ಫೆಬ್ರುವರಿಯ ಆದಿಯ ಬೆಳಗು. ತುಂಬ ಆಹ್ಲಾದಕಾರಕ ಹವೆ. ಶೀತಲ ಗಾಳಿ ಬೀಸುತ್ತಲೇ ಇವೆ. ಮಬ್ಬು ಇಬ್ಬನಿಯಾಗಿ ಉರುಳುತ್ತಲೇ ಇದೆ. ವಸಂತದ ಆಗಮನ ದೂರವಿಲ್ಲವೆಂದು ಸಾರುವ ಫಲಗಾಳಿಯ ಸುಳಿವನ್ನು ಗುರುತಿಸುವುದು ಸಾಧ್ಯವೂ ಇದೆ.

ನಾಗರಿಕತೆಯ ಸೌಧವನ್ನು ರಚಿಸುವ ಬಿಡುವಿಲ್ಲದ ಕೆಲಸದಲ್ಲಿ ಬಿಡುವು ಮಾಡಿಕೊಂಡು ಮಲಗಿದಂತಿದ್ದ ಶಹರ ಮೆಲ್ಲನೆಲ್ಲನೆ ಎಚ್ಚರಾಗುತ್ತಿದೆ. ಈ ಎಚ್ಚರವ ಪ್ರಜ್ಞೆಯಲ್ಲೂ ಅವಸರದ ಕಾತರತೆ—ದುಡಿಮೆಗೆ ಹೊರಟಿರುವ ಮನೆಯೊಡೆಯ, ತನಗಿಂತ ಮೊದಲೇ ಎದ್ದಾಗಿದೆಯಲ್ಲಾ ಎನ್ನುವ ಗೃಹಿಣಿಯ ಮನಸ್ಸಿನಂತೆ, ಹೊತ್ತಾಗಿ ತರಗತಿ ಸೇರುತ್ತಿರುವಾಗ ತನಗಿಂತ ಮೊದಲೇ ಅಧ್ಯಾಪಕರು ಆಗಮಿಸಿರಬೇಕಲ್ಲಾ ಎಂದು ಚಿಂತಿಸುತ್ತ ಹೆಜ್ಜೆಯಿಡುತ್ತಿರುವ ಹಸುಳೆಯ ಮನಸ್ಸಿನಂತೆ.

ನೇಸರು ಮೆಲ್ಲಮೆಲ್ಲನೆ ಮೇಲೇರುತ್ತಿರುವಂತೆ ಆ ಮುಂಜಾವಿನ ಶೀತಲ ಕಿರಣಗಳು ಜುಗುಪ್ಸೆ, ಉದಾಸೀನತೆಗಳ ಮೇಲೆ ಧಾಳಿಯಿಡುತ್ತ, ಮನೆ ಮನೆಗಳಲ್ಲಿ, ಸಂದುಗೊಂದುಗಳಲ್ಲಿ ಲಾಸ್ಯವಾಡುತ್ತ ಶೋಭಿಸುತ್ತಿದ್ದಂತೆ ಮುಂಬಯಿ ಎಚ್ಚರಾಗುತ್ತಿತ್ತು. ತನ್ನ ಸಚೇತನ ವ್ಯಕ್ತಿತ್ವವನ್ನೆಲ್ಲ ಕಳಚಿ ಕೊಂಡು ಯಂತ್ರವಾಗಲು ಸಿದ್ಧತೆ ನಡೆಸುತ್ತಿತ್ತು.

ದಿನ, ವಾರ, ಮಾಸ, ಋತುಗಳ ಪರವೆಯೇ ಇಲ್ಲದೆ, ಶಹರ ಎಚ್ಚ ರಾಗುತ್ತಿದೆ, ನಗುತ್ತಿದೆ, ಮತ್ತೆ ಮುದುಡಿಕೊಂಡು ದುಡಿಯತೊಡಗುತ್ತದೆ.

ಮಧ್ಯರಾತ್ರಿಯ ಹೊತ್ತಿಗೆ ಸೋತು ಸುಣ್ಣವಾದ ಒಂದು ವಿರಾಟ್ ಯಂತ್ರ, ಕತ್ತಲೆಯ ಮಡಿಲಲ್ಲಿ ಒಂದಾರು ತಾಸು ವಿಶ್ರಾಂತಿ ದೊರಕಬಹುದು ಎಂಬಾಸೆಯಿಂದ ಬಾಡಿಕೊಳ್ಳುತ್ತದೆ.

ಇನ್ನೊಂದು ಬೆಳಗು, ಮತ್ತೊಂದು ಮಧ್ಯಾಹ್ನ, ಮಗುದೊಂದು ಸಂಜೆ.
ಈ ವ್ಯವಸ್ಥಿತ ಅವ್ಯವಸ್ಥೆಯ ಯಾಂತ್ರಿಕ ನಡೆಗೆ ಚ್ಯುತಿಯಿರಲಿಲ್ಲ.
ತಂದೆಯ ರಾಟೆ ಸದ್ದು ಮಾಡುವಂತೆ, ಅದು ತಿರುಗುತ್ತಲೇ ಇದೆ.
ಒಂದು ಬೆಳಗು, ಮತ್ತೊಂದು ಮಧ್ಯಾಹ್ನ, ಮಗುದೊಂದು ಸಂಜೆ.

ಮತ್ತೊಂದು ದಿನ ಸಾಗರದಂತೆ ಭೋರ್ಗರೆಯುವ ಈ ಯಂತ್ರ ಕೂಡ ಕೂಗಿಕೊಂಡಿತು. ಎಂಥ ಉನ್ಮತ್ತ ಆರ್ತನಾದ!

ಮಿಲಿಯಗಟ್ಟಲೆ ಜನರ ವ್ಯಕ್ತಿತ್ವವನ್ನೆಲ್ಲ ನುಂಗಿ ನೀರು ಕುಡಿದ ವಿರಾಟ್ ಯಂತ್ರ, ಸಣ್ಣ ಮಗುವಿನಂತೆ ಬಿಕ್ಕಿ ಬಿಕ್ಕಿ ಅಳುತ್ತಿತ್ತು.

ಒಂದು ಮಾನವ ಹೃದಯದ, ಮಾನವತೆಯ ಪ್ರತಿಮೂರ್ತಿಯನ್ನು ಕಳೆದುಕೊಂಡ ನಷ್ಟದ ನೋವು—

ಯಂತ್ರಕ್ಕೆ ಕೂಡ ವ್ಯಾಪಿಸಿತ್ತು.

ರಾಷ್ಟ್ರೀಯ ಬಿಡುಗಡೆಯ ಹೋರಾಟದಲ್ಲಿ ಪ್ರಧಾನಪಾತ್ರ ವಹಿಸಿದ್ದ ಮಹಾಶಹರ ಮುಂಬಯಿ—ರಾಷ್ಟ್ರಪಿತ ಕಣ್ಮರೆಯಾದಾಗ ಕೂಗಿಕೊಳ್ಳದೆ ಇದ್ದೀತೇ?

ಮರಣವಿಲ್ಲದ ಅಮರಚೇತನದ ಕಳೇಬರದ ಕೊನೆಯ ಸಂಸ್ಕಾರದ ವಿಧಿ.

ಅನಾಥ ದೇಶ ಅಳುತ್ತಿದ್ದಂತೆ, ದಿಲ್ಲಿಯ ಮಿಲಿಯಗಟ್ಟಲೆ ಜನತೆ ಬಾಪು ವಿನ ಅಂತಿಮಯಾತ್ರೆಗೆ ಭಾರತದ ಸಾಂಕೇತಿಕ ಪ್ರತಿನಿಧಿಗಳಾಗಿ, ಅಶ್ರುಧಾರೆ ಹರಿಯಿಸುತ್ತಿದ್ದಂತೆ, ದಿಲ್ಲಿಯ ಚಿತ್ರವನ್ನು ಕಣ್ಣಮುಂದೆ ತಂದು, ರೇಡಿಯೋ ಕೂಡ ತನ್ನ ಮುಂದೆಯೇ ಮರುಗುತ್ತಿದ್ದಂತೆ—

ಒದ್ದೆ ಬಟ್ಟೆಯಲ್ಲೇ ಇಂದಿರೆ ತಲೆ ತಗ್ಗಿಸಿ ಕಣ್ಣೀರು ಸುರಿಸುತ್ತ ತಾಸುಗಟ್ಟಲೆ ಹಾಗೆಯೇ ಕುಳಿತಿದ್ದುದಿತ್ತು.

ಒಂದು, ಎರಡು, ಮೂರು....

ದಿನಗಳ ಗಣನೆ ತಂದುಕೊಳ್ಳುವಷ್ಟು ಮನಸ್ಸಿಗೆ ವ್ಯವಧಾನವಿದ್ದಿರಲಿಲ್ಲ. ಹೃದಯದ ದುಃಖ ಅಷ್ಟು ವ್ಯಾಪಕವಾದುದಾಗಿತ್ತು.

ತ್ರಿವೇಣೀ ಸಂಗಮದಲ್ಲಿ ಭಸ್ಮಸಂಸ್ಕಾರ. ನಾಡಿನ ವಿವಿಧ ಭಾಗಗಳಲ್ಲಿ ಬಾಪುವಿಗೆ ಭಕ್ತಿಯ ಶ್ರದ್ಧಾಂಜಲಿ.

ಅಂತಿಮ ಸೇವೆಯ, ಅಂತಿಮ ಗೌರವದ ದುಃಖದ ದಿನಗಳು ಮುಗಿದಿದ್ದುವು. ನಾಡಿಗೆ ಆಗಿದ್ದ ನಷ್ಟವನ್ನು ತುಂಬುವಂತಿರಲಿಲ್ಲವಾದರೂ ಶೋಕದ ನೋವು ಕಾಲನ ಓಟದ ಮುಂದೆ ಮೆಲ್ಲಮೆಲ್ಲನೆ ಕರಗುತ್ತಿತ್ತು.

ಅಳುತ್ತಿದ್ದ ಮುಂಬಯಿ ಮತ್ತೆ ಚೇತರಿಸಿಕೊಳ್ಳುತ್ತಿತ್ತು. ಎಂಥ ದುಃಖಕ್ಕೂ ಕೊನೆಯಿದೆಯೆಂಬ ಸಾಂಕೇತಿಕ ಅರ್ಥದಲ್ಲಿ, ಆ ಮಹಾಯಂತ್ರ ಮತ್ತೆ ದುಡಿಮೆಗೆ ಆರಂಭಿಸಿತ್ತು.

ಕಿಟಕಿಯ ಸರಳುಗಳೆಡೆಯಲ್ಲಿ ಮುಖವಿರಿಸಿ ಇಂದಿರೆ ಬೀದಿಯ ಕಡೆ ನೋಡುತ್ತಿದ್ದಳು.

ಕಣ್ಣಿಗೆ ಕಾಣಿಸುವಷ್ಟು ದೂರದಲ್ಲೆ ಇದ್ದ ತರಕಾರಿಯಂಗಡಿಗಳಲ್ಲಿ ಆಗಲೆ ಮಾರಾಟದ ಬೊಬ್ಬಾಟ ಆರಂಭವಾಗಿತ್ತು. ಮನೆಯ ಪಕ್ಕದಲ್ಲೆ ಇದ್ದ ಹೂವು ಮಾರುವಾತ ನಗುತ್ತ, ಹಾಡುತ್ತ, ಹಸುರೆಲೆಗಳ ರಾಶಿಯ ನಡುವೆ ತನ್ನ 'ವೇಣಿ'ಗಳನ್ನು ಪೋಣಿಸಲು ಆರಂಭಿಸಿದ್ದ. ಹಾಳೆಯ ಟೊಪ್ಪಿಗಳಂಥ ಚಕ್ರಾಕಾರದ ಪುಟ್ಟ ಟೊಪ್ಪಿಗಳನ್ನು ಧರಿಸಿದ್ದ ಸಣ್ಣ ಪುಟ್ಟ ಪಾರ್ಸಿ ಹುಡುಗರು ತಮ್ಮ ಮೈಯುದ್ದ ಇಳಿದು ಬರುತ್ತಿದ್ದ ಪುಸ್ತಕಗಳ ಥೈಲಿಗಳನ್ನು ಸಿಕ್ಕಿಸಿ ಕೊಂಡು ಅವಸರವಸರವಾಗಿ ಶಾಲೆಗೆ ಓಡುತ್ತಿದ್ದರು. ತಿಂಡಿಗಾಗಿ ಬೆಳಗಿನ ಹೊತ್ತಿನಲ್ಲಿ ಅಪಸ್ವರದಿಂದ ಕೂಗಿಕೊಳ್ಳುವ ಎಮ್ಮೆಯ ಸದ್ದಿನಂತೆ, ಶಹರಿನ ಗೊಂದಲಕ್ಕೆ ಟ್ರಾಂ ಬಂಡಿಗಳ ಸದ್ದು ಶ್ರುತಿಹಿಡಿದಿತ್ತು.

ವಾಹನಗಳ ಚಲಾವಣೆ ಹೆಚ್ಚತೊಡಗಿತ್ತು. ಬಿಸಿಲಿನ ಪ್ರಖರತೆಯೂ ಮೆಲ್ಲಮೆಲ್ಲನೆ ಏರುತ್ತಿತ್ತು.

ಅಡುಗೆಯ ಹುಡುಗ ಬಂದು ಐದು ನಿಮಿಷ ಇಂದಿರೆಯೊಡನೆ ಮಾತ ನಾಡಲು ಧೈರ್ಯ ಸಾಲದೆ ಹಾಗೇ ನಿಂತಿದ್ದ. ಆದರೂ ಈ ಮುಗಿಯದ ಮೌನದಿಂದ ಸಹನೆಗೆಟ್ಟು ಇಲ್ಲದ ಧೈರ್ಯ ತಂದುಕೊಂಡು ಹೇಳಿದ :

"ಅಮ್ಮಾ, ಕಾಫಿ...."

ಇಂದಿರೆ ತಲೆ ತಿರುಗಿಸಿ ನೋಡಿದಳು.

"ಬೇಡ, ಹೋಗೋ."

ಬಾಯಿಂದ ತನ್ನ ತಾನೇ ಬಂದ ಮಾತಿದು. ಆದರೆ ಅವನ ಮುಖ ನೋಡಿದೊಡನೆ ಇಂದಿರೆಯ ಮನಸ್ಸು ಬದಲಿತು. ಹನ್ನೆರಡು ವರ್ಷಗಳ ಹಸುಳೆ—ಶಾಲೆ ಕಲಿಯುತ್ತಿರಬೇಕಾದ ಸಂದರ್ಭದಲ್ಲಿ ಬಂದಿದ್ದುದು ಅಡುಗೆಯ ಕೆಲಸಕ್ಕೆ.

ಆದರೆ ಇಂದಿರೆಯ ದೃಷ್ಟಿಯಲ್ಲಿ ಆತ ಅಡಿಗೆಯ ಆಳಾಗಿರಲಿಲ್ಲ. ಮನೆಯ ಮಗುವಾಗಿದ್ದ. ಬದುಕುವ ದಾರಿ ಇದೆಂದು, ತಂದೆ, ಆಡುವ ವಯಸ್ಸಿನಲ್ಲಿ ಕಲಿಸಿಕೊಟ್ಟಿದ್ದ ಅಡಿಗೆಯ ವೃತ್ತಿಯನ್ನು ಆತ ಪರಿಣತರಂತೆ ಕೈಗೊಂಡಿದ್ದ ನಾದರೂ ಇಂದಿರೆ ಮನೆಗೆ ಬಂದ ಹಸುಳೆಯನ್ನು ತಿದ್ದುವ ಹಾದಿಯಲ್ಲಿ

ಮುಂದುವರಿದಿದ್ದಳು. ರಾತ್ರಿಶಾಲೆಯಲ್ಲಿ ಹುಡುಗನನ್ನು ಓದಿಸುತ್ತಿದ್ದಳು. ಆದರೆ ಬಟ್ಟೆಬರೆಗಳ ಕಡೆ, ಆರೋಗ್ಯದ ಕಡೆ ಗಮನ ಕೊಡುತ್ತಿದ್ದಳು.

ಮಗುವಿಗೆ ತಾನಿಲ್ಲಿ ಪರಕೀಯ, ಒಂದು ದುಡಿಮೆಯ ಆಳು ಎಂಬ ಭಾವನೆ ಮನಸ್ಸಿನಲ್ಲಿ ತಲೆದೋರದಂತೆ, ತುಂಬು ಪ್ರೀತಿಯಿಂದ ಆತನ ಆರೈಕೆ-ಯನ್ನು ನೋಡಿಕೊಳ್ಳುತ್ತಿದ್ದಳು.

'ಬೇಡ ಹೋಗೋ' ಎಂದಾಗ ಇನ್ನು ಮಾತನಾಡಿ ಪ್ರಯೋಜನವಿಲ್ಲ ವೆಂದು ಹಿಂದೆ ಹೊರಟಿದ್ದ ಹುಡುಗ "ಲಕ್ಷ್ಮಣಾ" ಎಂದು ಮತ್ತೆ ಇಂದಿರೆ ಕರೆದಾಗ ತಿರುಗಿ ನೋಡಿದ.

"ನೀನು ಹಾಲು ಕುಡಿದಿಯೇನು ?"

"ಇಲ್ಲ, ನೀವು...."

"ಅಪ್ಪನಿಗೆ ಹಾಲು ಕೊಟ್ಟ ಕೂಡಲೇ ನೀನು ಹಾಲು ಕುಡಿಯಬೇಕೆಂದು ಎಷ್ಟು ಸಲ ಹೇಳಿಲ್ಲ ನಾನು ? ಹೋಗು, ನಡಿ...."

ಇಂದಿರೆಯ ಹುಸಿ ಮುನಿಸು ಹುಡುಗನ ಹೃದಯದಲ್ಲಿ ಕೃತಜ್ಞತೆಯು ತೆರೆಯುಕ್ಕಿಸಿತ್ತು. ಬಹಳ ದಿನಗಳ ಮೇಲೆ ಮೌನ ಮುರಿದು ಇಂದಿರೆ ಆ ರೀತಿ ಪ್ರೀತಿಯಿಂದ ಮಾತನಾಡಿದ್ದಳು.

"ನಿಮಗೆ ?"

"ತಾ ಇಲ್ಲಿ" ಎಂದು ಮುಂದುವರಿದು ಹೋಗಿ ಇಂದಿರೆ ಲಕ್ಷ್ಮಣನ ಕೈಯಿಂದ ಲೋಟಿಯನ್ನು ಕಸಿದುಕೊಂಡಳು. ಹುಡುಗ ನಡುತ್ತಲೇ ಅಡುಗೆ ಮನೆಗೆ ಓಡಿದ.

ಇಂದಿರೆ ಕಾಫಿ ಮುಗಿಸುತ್ತಿದ್ದಂತೆ ತಂದೆಯ ಕರೆ ಕೇಳಿ ಬಂತು :

"ಇಂದೂ."

"ಓ" ಎಂದವಳೇ ಇಂದಿರೆ ತಂದೆಯಿದ್ದಲ್ಲಿಗೆ ನಡೆದಳು.

ರಾಟೆ ತಿರುಗುತ್ತಲೇ ಇತ್ತು. ಆದರೆ ಎಂದಿನಂತೆ ಸರಾಗವಾಗಿ ನೂಲು ಬರುತ್ತಿದ್ದಿಲ್ಲ. ತಂದೆಯ ಬಾಡಿದ ಮುಖವನ್ನು ಇಂದಿರೆ ಗುರುತಿಸಿದುದು ಇಂದಲ್ಲ. ಹತ್ತು ಹದಿನೈದು ದಿನಗಳಲ್ಲೇ ಸಂಜೀವರಾಯರು ತಮ್ಮ ಮುಪ್ಪಿಗೆ ಹತ್ತು ಹದಿನೈದು ವರ್ಷಗಳನ್ನು ಸೇರಿಸಿಕೊಂಡಿದ್ದರು. ತಂದೆಯ ಎದೆಯಾಳ ದಲ್ಲಿ ಹುದುಗಿದ್ದ ಅಪಾರ ದುಃಖದ ಅರಿವು ಇಂದಿರೆಗೆ ಚೆನ್ನಾಗಿ ಇತ್ತು. ಎಂತಲೇ ಬಂದವಳು ತಾನಾಗಿ ಯಾವ ಮಾತನ್ನೂ ಆರಂಭಿಸಲಿಲ್ಲ.

"ಕೈಯೂ ನಡುಗುತ್ತಿದೆ. ನೂಲು ಕೂಡ ಸರಿಯಾಗಿ ಬರುವುದಿಲ್ಲ. ಆ ಮಹಾತ್ಮ ಕೊಟ್ಟ ವರ ಅವನ ಹಿಂದೆಯೇ ಹೋದಂತೆ ಕಾಣುತ್ತಿದೆ."

ಈಗಲೂ ಇಂದಿರೆ ಮಾತನಾಡಲಿಲ್ಲ. ಕರೆದುದೇಕೆಂದು ಕೇಳಲಿಲ್ಲ. ತಂದೆಯ ಬಳಿ ಸದ್ದಿಲ್ಲದೆ ಕುಳಿತಳು.

ತನ್ನ ಕರೆಗೆ ಓಗೊಟ್ಟು ಬಂದ ಮಗಳನ್ನು ನೋಡಿದರೂ ಸಂಜೀವರಾಯರು ಹೆಚ್ಚು ಮಾತನಾಡಲಿಲ್ಲ. ಮಾತನಾಡುವ ಇಚ್ಛೆಯಿದ್ದರೂ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ.

ಸಾವಿರ ನೆನಹುಗಳು, ಬಾಲ್ಯದ ಸ್ಮೃತಿಗಳು ಮನಸ್ಸಿನ ಮುಂದೆ ಬರುತ್ತಿದ್ದವು.

ಅವೆಲ್ಲ ನೆನಹುಗಳಿಗೆ ಮುಖ್ಯ ಸೂತ್ರವಾದ ವ್ಯಕ್ತಿಯೊಂದೇ—ಬಾಪು.

ತಮ್ಮ ಮುಂಬಯಿ ಜೀವನದ ಬಾಲ್ಯದ ದಿನಗಳು. ಅನಾಥರಾಗಿ ಬಂದು ಆರಂಭಿಸಿದ ಉದ್ಯಮ ಜೀವನ, ಅದರಲ್ಲಿ ಪ್ರಗತಿಯ ಹಂತ. ಈ ಮಧ್ಯೆ ತಮ್ಮ ಮೇಲೆ ಬಿದ್ದ ಬಾಪುವಿನ ವರ್ಚಸ್ಸು, ಅಸಹಕಾರದ ಮೊದಲ ದಿನಗಳು, ಉತ್ಸಾಹೀ ಕಾಂಗ್ರೆಸ್ ಕಾರ್ಯಕರ್ತರಾಗಿ ಮೆರೆಯುತ್ತಿದ್ದ ದಿನಗಳು, 'ದುಂಡು ಮೇಜು ಪರಿಷತ್ತಿ'ನ ಗೊಂದಲದ ದಿನಗಳ ಸಂದರ್ಭದಲ್ಲಿ 'ಮಣಿ ಭುವನ'ದಲ್ಲಿ ತಂಗಿದ್ದ ಬಾಪುವನ್ನು ಒಂದು ದಿನ ಮನೆಗೆ ಕರೆದು ತರುವುದು ಸಾಧ್ಯವಾದ ಪ್ರಸಂಗ, ಪುನಃ ಆಂದೋಲನದ ದಿನಗಳು, ಇಂದಿರೆಯ ಹುಟ್ಟು, ಇಂದಿರೆಯ ತಾಯಿಯ ಮರಣ, ಸತ್ಯಾಗ್ರಹ, ಮರಣ....ದುಃಖ....

ಒಂದು ವ್ಯವಸ್ಥಿತ ಕತೆಯಂತೆ ಹೆಣೆದುಕೊಂಡು ಬರುತ್ತಿರಲಿಲ್ಲ, ಈ ಎಲ್ಲ ಘಟನೆಗಳು. ಕಾರ್ಗತ್ತಲು ತುಂಬಿದ ಆಗಸದಲ್ಲಿ ಸೆಳೆಮಿಂಚು ಹರಡಿ ಪಥಿಕನಿಗೆ ದಾರಿ ಮಾಡಿಕೊಡುತ್ತಿದ್ದಂತೆ, ಯಾವು ಯಾವುವೋ ಭಾಗಗಳಿಂದ, ಯಾವು ಯಾವುವೋ ದಿಕ್ಕುಗಳಿಂದ ಅವರ ಜೀವನದ ಇತಿಹಾಸದ ಒಂದೊಂದೇ ಅಧ್ಯಾಯ ತೆರೆದು ತೋರಿಕೊಳ್ಳುತ್ತಿತ್ತು.

"ಒಂದು ಹಾಡು ಹಾಡು, ಇಂದೂ." ಇಂದಿರೆ ಹಾಡಿದರೆ ತಮ್ಮ ಮನಸ್ಸಿನ ಕೋಲಾಹಲ ಒಮ್ಮೆಗೇ ಕೊನೆಗೊಳ್ಳಬಹುದು ಎಂಬಷ್ಟು ಆಸಕ್ತಿಯಿಂದ ಸಂಜೀವರಾಯರು ಮಗಳೊಡನೆ ಹಾಡುವಂತೆ ಕೇಳಿಕೊಂಡರು.

ಇಂದಿರೆಗೆ ಹಾಡುವುದು ಬೇಕಿರಲಿಲ್ಲ. ತಂದೆಯ ಪ್ರೀತಿಯ ಹಾಡು ಯಾವುದೆಂದು ಆಕೆಗೆ ಗೊತ್ತು. ಬಾಪುವಿನ ನೆನಪೇ ಅವರಿಂದ ಹಾಡುವಂತೆ ತನ್ನನ್ನು ಒತ್ತಾಯಿಸುತ್ತಿವೆಯೆಂಬುದೂ ಆಕೆಗೆ ಗೊತ್ತು. ತಂದೆಯ ಮಾತನ್ನು

ಒಪ್ಪಿಕೊಂಡು ಹಾಡತೊಡಗಿದರೆ ಆ ಹಾಡಿನ ಹಿಂದೆ ಬರುವ ಸ್ಮೃತಿ ಸಂಚಯ ಕೊನರಿಸುವ ದುಃಖ ಎಷ್ಟು ವ್ಯಾಪಕವಾದುದೆಂದೂ ಆಕೆಗೆ ಗೊತ್ತು.

"ಹಾಡಮ್ಮ, ಇಂದೂ."

ಇಂದಿರೆಗೆ ತಂದೆಯ ಆಜ್ಞೆಯನ್ನು ಉಲ್ಲಂಘಿಸುವುದು ಸಾಧ್ಯವಾಗಲಿಲ್ಲ:

ದುಃಖ ತುಂಬಿದ್ದ ಆ ಮನೆಯ ನೀರವತೆಯಲ್ಲಿ ಮತ್ತಷ್ಟು ದುಃಖದ ತರಂಗಗಳನ್ನೆಬ್ಬಿಸುವ ಇಂದಿರೆಯ ಮೋಹಕ ದನಿಯಲ್ಲಿ ಬಾಪುವಿನ ಪ್ರೀತಿಯ ಹಾಡು ಬಂತು :

'ವೈಷ್ಣವ ಜನತೋಽ ತೇನೇ ಕಹಿಯೇಽ,
ಜೇ ಪೀಡಪರಾಯೀ ಜಾಣೇರೇಽ
ಪರದುಃಖೇ ಉಪಕಾರ ಕರೇತೂಯೇ,
ಮನ ಅಭಿಮಾನ ನ ಆಣೇರೇಽ'

ಸಂಜೀವರಾಯರು ನೂಲುವ ಕೆಲಸವನ್ನು ನಿಲ್ಲಿಸಿದರು. ತಲೆ ತಗ್ಗಿಸಿ ಎರಡೂ ಕೈಗಳನ್ನು ಜೋಡಿಸಿ, ಮಗಳ ಹಾಡು ಸೃಷ್ಟಿಸಿದ ಭಾವನೆಯ ರಾಜ್ಯದಲ್ಲಿ ತನ್ಮಯರಾಗಿ ಕುಳಿತಿದ್ದರು.

'ಸಕಲ ಲೋಕಮಾ ಸಹುನೇ ವಂದೇಽ,
ನಿಂದಾ ನಕರೇಽ'

ಹಾಡಿನ ಪ್ರತಿಯೊಂದು ಚರಣವೂ ಇಂದಿರೆಗೆ ಒಂದೊಂದು ಭಾವ ಸಾಗರದಲ್ಲಿ ಸ್ನಾನ.

ಇನ್ನೂ ಎಳೆಯ ವಯಸ್ಸಿನಲ್ಲಿ, ಚಿಕ್ಕ ಹಸುಳೆಯಾಗಿದ್ದಾಗ, ತಪ್ಪಿ ತಪ್ಪಿ ಇದೇ ಕೋಣೆಯಲ್ಲಿ ಬಾಪುವಿನ ಮುಂದೆ ಹಾಡಿದ್ದ ಹಾಡು.

ನಗುತ್ತ ಮೈದಡವಿ ಹರಸಿದ್ದ ಮಹಾತ್ಮ—ಆ ಹಾಡಿಗೆ ಪ್ರಾಣ ತುಂಬಿದ್ದರು. ಇಂದಿರೆಗೆ ಅದು ಹೃದಯದ ಸರ್ವಸ್ವವಾಗಿತ್ತು.

ಸರ್ವಸ್ವ?

'ಸೆಂಟಿಮೆಂಟಲ್ ನಾನ್ಸೆನ್ಸ್. ಬಾಪುವಿನ ಉತೋಪಿಯಾ ಸಾಧ್ಯವೇ ಇಲ್ಲ, ಚಿನ್ನಾ, ಸಾಧ್ಯವೇ ಇಲ್ಲ. ಪ್ರೀತಿಯಿಂದ ಹುಲಿಯನ್ನು ಗೆಲ್ಲುವಂತಿಲ್ಲ. ಹಾವಿಗೆ ಹಾಲೆರೆದರೂ ಪ್ರಯೋಜನವಿಲ್ಲ. ಹುಲಿಗೆ ಕೋವಿ, ಹಾವಿಗೆ ದೊಣ್ಣೆ

ಬೇಕೇ ಬೇಕು. ಬ್ರಿಟಿಷರು ನಮ್ಮನ್ನು ಸುಲಿಯುತ್ತಿರುವಂತೆ, ನಮ್ಮವರನ್ನೇ ಸುಲಿಯುತ್ತಿರುವ ನಮ್ಮವರೆಷ್ಟು ಮಂದಿ ಬೇಕು ನಿನಗೆ, ಇಂದೂ.

ಪ್ರೀತಿಯಿಂದ ಕೆನ್ನೆಯನ್ನು ಚಿವುಟಿ ಕೇಳಿದ ಪ್ರಶ್ನೆಯೊಂದು ಕಾಲದ ಗರ್ಭದಿಂದ ಏಡಿಯೋಡಿ ಬರುತ್ತಿದೆ.

'ಹಾಗಾದರೆ ನಿಮಗೆ ಗಾಂಧೀಜಿಯಲ್ಲಿ ವಿಶ್ವಾಸವಿಲ್ಲವೆ ?'

'ನಾ. ಸಿಲ್ಲಿ. ನನಗೆ ವಿಶ್ವಾಸವಿಲ್ಲವೆಂದು ಹೇಳಿದೆನೇ ? ಅವರ ರಾಮ ರಾಜ್ಯ ಉತೋಪಿಯಾ ಎಂದೆ. ಎಲ್ಲಿಯ ತನಕ ನಮ್ಮ ಆರ್ಥಿಕ ಅಸಮಾನತೆ ಬುಡಸಹಿತ ಕಿತ್ತುಹೋಗುವುದಿಲ್ಲವೋ ಅಲ್ಲಿಯ ವರೆಗೆ ಯಾರ ಒಳ್ಳೆಯ ಹೃದಯದ ಕುರಿತೂ ನಂಬಿಕೆಯಿರಿಸಿ ಮುಂದುವರಿಯುವುದು ಮೂರ್ಖತನ. ಬಾಪು ಒಂದು ರಾಜಕೀಯ ಕ್ರಾಂತಿಯ ಪರಿಣಾಮಕಾರಿ ಸಾಧನ. ಆ ಕಾರಣ ನನಗೆ ಅವರಲ್ಲಿ ಗೌರವ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ವಿಚಾರ ಕ್ರಾಂತಿಗೆ ಬಾಪೂ ಕಾರಣರಾದರು—ಹಾಗಾಗಿ ರಾಜಕೀಯ ಕ್ರಾಂತಿಯ ಮೂಲಪುರುಷರಾದರು. ಆದರೆ ಮುಂದಿನ ಆರ್ಥಿಕ ಕ್ರಾಂತಿಯ ಅವತಾರ ಪುರುಷ, ನಮ್ಮ ಬಡ ಜನತೆಯ ನಡುವಿನಿಂದ ಎದ್ದು ಬರಬೇಕಷ್ಟೆ.'

'ಅಥವಾ ನೀವೇಯೇನೋ, ಅಹಂಕಾರದ ಮುಷ್ಟಿ.'

'ನನ್ನನ್ನು ಮೂದಲಿಸಲು ಅಷ್ಟು ಧೈರ್ಯವೆ ನಿನಗೆ ? ಬಾ, ಇಲ್ಲಿ. ನನ್ನ ಅಹಂಕಾರದ ರುಚಿ ತೋರಿಸಿಬಿಡುತ್ತೇನೆ.'

ಎಷ್ಟೋ ವರ್ಷಗಳ ಹಿಂದೆ.

ಇಂದಿರೆಯ ಹಣೆಯೆಲ್ಲ ಬೆವರಿತು. ಹಾಡು ನಿಂತಿತು.

ಸಂಜೀವರಾಯರು ಮಗಳ ಮುಖವನ್ನೆ ನೋಡಿದರು. ಆ ಮುಖ ವನ್ನೆದುರಿಸುವುದು ಇಂದಿರೆಗೆ ಸಾಧ್ಯವಾಗಲಿಲ್ಲ. ಪುನಃ ತಲೆ ತಗ್ಗಿಸಿ ಹಾಡ ತೊಡಗಿದಳು :

'ಸಮದೃಷ್ಟೀನೇ ತೃಷ್ಣಾ ತ್ಯಾಗೀಽ
ಪರಸ್ತ್ರೀ ಜೇನೇ ಮಾತರೇಽ
ಜಿಹ್ವಾತಕೀ ಅಸತ್ಯ ನ ಬೋಲೇಽ
..........................'

'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ. ಸೇಕಡಾ

ತೊಂಬತ್ತೊಂಬತ್ತು ಜನ ಯಾವ ನೈತಿಕ ನಿಯಮವನ್ನನುಸರಿಸುತ್ತಾರೆ, ಇಂದೂ....ದುಡಿಯುವ ಕೂಲಿಕಾರವರ್ಗದ ಬೆವರು ಕದಿಯುವವರು ಕಳ್ಳರಲ್ಲವೇನು? ಲಾಭದ ಬಹ್ವಂಶವನ್ನು ತಮ್ಮ ಹೆಂಡಿರು ಮಕ್ಕಳ ಸೌಕರ್ಯಗಳಿಗಾಗಿ ಉಪಯೋಗಿಸುವವರು ವಂಚಕರಲ್ಲವೇನು? ಬಡತನದಲ್ಲಿ ಬೆಂದು ಸಾಯುತ್ತಿರುವ ಬಡಪಾಯಿಗಳ ಮರಣಕ್ಕೆ ಅಪ್ರತ್ಯಕ್ಷವಾಗಿ ಕಾರಣರಾದವರೆಲ್ಲ ಕೊಲೆಗಡುಕರಲ್ಲವೇನು?'

'ಯೂ! ಡರ್ಟಿ ಕಮ್ಯೂನಿಸ್ಟ್.'

'ಹಾ! ನೋಡು ಬಂತು ಆಗಲೇ ಸಿಟ್ಟು. ಮಹಾಕಾಳಿಯ ಅವತಾರ. ಅಸಹನೆಯ ಪ್ರತಿಮೂರ್ತಿ—ನನಗೆ ಇಲ್ಲದ ಪಾರ್ಟಿ ಲೇಬಲ್ ಬೇರೆ.'

'ನೋವಾಯಿತೆ, ನಾನು ಹಾಗೆ ಹೇಳಿದೆನೆಂದು?'

'ಹೂವಿನಿಂದ ಹೊಡೆದರೆ ನೋವಾಗುವುದೇನು, ನನ್ನ ಪ್ರೀತಿಯ ಸರ್ವಸ್ವ.'

ನನ್ನ ಪ್ರೀತಿಯ ಸರ್ವಸ್ವ!

ಇಂದಿರೆಯ ಕಣ್ಣು ತುಂಬಿಕೊಂಡಿತು. ಮತ್ತೆ ಹಾಡುವುದು ಸಾಧ್ಯವಾಗಲಿಲ್ಲ.

ಈಗ ಮಾತ್ರ ಸಂಜೀವರಾಯರು ಗಾಬರಿಗೊಂಡು ಕೇಳಿದರು:

"ಏನಾಯಿತು, ಇಂದೂಃ?"

ಏನಾಯಿತು, ಇಂದಿರಾ?

ಮದುವೆಯಾದ ಹೊಸತಿನಲ್ಲಿ ಕರೆಯುತ್ತಿದ್ದ ರೀತಿ. 'ಇಂದೂ' ಎಂದು ಕರೆಯುವಷ್ಟು ಸಲಿಗೆ ಬೆಳೆದಿರಲಿಲ್ಲವೆಂದಲ್ಲ. ಆ ಹೆಸರಿನ ಸೌಂದರ್ಯ, ಪೂರ್ತಿ ಹೆಸರಿನಲ್ಲೆ ಇದೆ ಎಂದು ನಂಬಿ ಕರೆಯುತ್ತಿದ್ದ ಆ ಆತ್ಮೀಯ ದನಿ.

ಏನಾಯಿತು ಇಂದಿರಾ?

ಅದೇ ದನಿಯನ್ನು ಪುನಃ ಒಮ್ಮೆ ಕೇಳಿದ ನೆನಪು. ಅತಿಪರಿಚಯವಿರುವ ಕಂಠದಿಂದ ಬಂದ ಆತ್ಮೀಯ ಕರೆ. ಎಲ್ಲಿ, ಯಾವಾಗ ಎಂಬುದು ಇಂದಿರೆಗೆ ಅರಿವಿರಲಿಲ್ಲ.

"ಏನಾಯಿತು, ಇಂದೂಃ?"

ತನ್ನ ದುಃಖವನ್ನು ಇನ್ನೂ ತಡೆದುಕೊಳ್ಳುವುದು ಸಾಧ್ಯವಾಗದೆ ಇಂದಿರೆ ತಂದೆಯ ಕಾಲುಗಳ ಮೇಲೆ ತಲೆಯಿರಿಸಿ ಅಳತೊಡಗಿದಳು.

ಸಂಜೀವರಾಯರಿಗೆ ಮಗಳ ಈ ರೀತಿಯ ದುಃಖಪ್ರದರ್ಶನದ ಅರಿವಿರ

ಲಿಲ್ಲ. ಇಂದಿರೆಯದು ಗಂಡೆದೆಯೆಂದು ಅವರಿಗೆ ಅಭಿಮಾನವಿತ್ತು. ಇದೇ ಹಾಡನ್ನು ಹಿಂದೆ ಎಷ್ಟೋ ಬಾರಿ, ತನ್ನ ಇಚ್ಛೆಯಂತೆ ಹಾಡಿದ್ದಾಗ ಆಕೆ ಅತ್ತಿರಲಿಲ್ಲ.

ಇಂದು ಮಹಾತ್ಮನ ಮರಣದ ದುಃಖದ ಸನ್ನಿವೇಶದಲ್ಲಿ ಆ ಎದೆ ಕೂಡ ಕರಗಿತು.

ಅಥವಾ ಕೇಶವನ ನೆನಪಾಯಿತೇನು?

"ಕೇಶವನ ನೆನಪಾಯಿತೇನಮ್ಮ, ಹುಚ್ಚಿ. ನೀನೇ ಧೈರ್ಯಗೆಟ್ಟರೆ ಹೇಗೆ?"

ಕೇಶವ ತೀರಿಕೊಂಡಾಗಲೂ ಇಂದಿರೆ ಕಣ್ಣೀರು ಸುರಿಸಿರಲಿಲ್ಲ. ಪ್ರಾಣ ಹೋಗಿ ಎಷ್ಟೋ ಗಂಟೆಗಳ ಮೇಲೆ ಶವ ದೊರಕಿತ್ತು.

ಬೆಳಿಗ್ಗೆ ಗೋವಾಲಿಯಾ ಮೈದಾನದಲ್ಲಿ ಗೊಂದಲದ ಧ್ವಜವಂದನೆಗೆಂದು ಹೋಗಿದ್ದ ಇಂದಿರಾ, ಸಂಜೆ ಗಂಡನ ಮೃತದೇಹವನ್ನು ನೋಡುತ್ತ ಶಿಲಾಪ್ರತಿಮೆಯಂತೆ ನಿಂತುಬಿಟ್ಟಿದ್ದಳು.

ರಕ್ತಮಯವಾದ ಗುಂಡು ತಾಗಿದ ಎದೆ—ಕೊನೆಯ ಗಳಿಗೆಯ ನೋವಿನಿಂದ ಮುರುಟಿಕೊಂಡಿದ್ದ ಮುಖ.

ಇಂದಿರೆ ಕೇಶವನಿಗಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದ ಆತನ ಗುಂಗುರು ಗುಂಗುರಾದ ಕೂದಲು.

'ಆರ್ಥಿಕ ಕ್ರಾಂತಿಯ ಮಹಾಪ್ರವಾದಿ ನೀವೇಯೇನೋ....ಅಹಂಕಾರದ ಮುದ್ದೆ.'

ಇಂದಿರೆ ಯೋಚಿಸುತ್ತಿದ್ದುದೂ ಕೇಶವನ ಕೊನೆಯ ದಿನವನ್ನೆ.

೧೯೪೨ರ ಆಗಸ್ಟ್ ಒಂಬತ್ತು!

'ನಿಮಗೆ ಈ ಚಳವಳದ ಪರಿಣಾಮದ ಕುರಿತು ಶಂಕೆಯಿದೆಯಾದರೆ ಈಗೇಕೆ ಗಡಿಬಿಡಿಗೆ ಸಿಲುಕಿಕೊಳ್ಳುತ್ತಿದ್ದೀರಿ?'

'ಈ ಸಂಧಿಯನ್ನು ಬಿಡುವುದು ಸಾಧ್ಯವಿಲ್ಲ, ಇಂದೂ. ಒಳ್ಳೆಯದಿರಲಿ, ಕೆಟ್ಟದಿರಲಿ, ನನ್ನ ರಾಷ್ಟ್ರ ನನಗೆ ಸರ್ವಸ್ವ. ಬ್ರಿಟಿಷರಿಗೆ ಈ ಸಂಧಿಯಲ್ಲಿ ಬಗ್ಗುಬಡಿಯುವಿದ್ದರೆ ಅವರಿಗೆ ಬುದ್ಧಿ ಬಂದು ನಾವು ಸ್ವರಾಜ್ಯ ಪಡೆಯುವಂತೆಯೇ ಇಲ್ಲ. ರಾಜಕೀಯ ಸ್ವಾತಂತ್ರ್ಯ ಸಿಗದೆ ನಮ್ಮ ಆಸೆಯ ಸಮಾಜ ರೂಪುಗೊಳ್ಳುವುದು ಸಾಧ್ಯವೇ ಇಲ್ಲ.'

ಕೇಶವ ಹೋರಾಡಿ ಕೊನೆಯುಸಿರೆಳೆದ.

ಇಂದಿರೆಯು ಅಳು ನಿಂತಿತ್ತು. ಆದರೂ ಮನಸ್ಸಿನ ಅಳು ನಿಂತಿರಲಿಲ್ಲ ವೆಂಬಂತೆ ದೀರ್ಘವಾದ ನಿಟ್ಟುಸಿರು ಬಿಟ್ಟಳು.

ಮಗಳು ಶಾಂತಳಾಗಿದ್ದಾಳೆಂದು ತಿಳಿದೊಡನೆ ಸಂಜೀವರಾಯರು ಹೊರಗೆ ಹೊರಡುವ ಅವಸರವನ್ನು ಸೂಚಿಸಿದರು. ಹಾಗೆಯೇ,

"ನಿನ್ನ ಪತ್ರಿಕೆ ಬಂದಿದೆ ನೋಡು. ಅನಂತರಾಯರು ಬಂದಿದ್ದರು— ಕೊಟ್ಟುಹೋದರು."

"ಆಂ! ಅನಂತರಾಯರೆ? ಒಳಗೇಕೆ ಬರಲಿಲ್ಲ?"

"ಏನೋ ಬೇರೆ ಕೆಲಸವಿದೆ ಎಂದು ಹೇಳಿ ಹೊರಟುಹೋದರು. ಬಾಗಿ ಲಲ್ಲೇ ಕೊಟ್ಟು ಹೋದರು."

ತಂದೆ ಕುಳಿತಲ್ಲೇ ಆಚೆಯ ಬದಿಯಲ್ಲಿ ಎರಡು ಪ್ರತಿ 'ಕಹಳೆ' ಬಿದ್ದಿದ್ದವು.

ಇಂದಿರೆ ಎದ್ದವಳು, ಅವುಗಳನ್ನು ತೆಗೆದುಕೊಂಡು ತನ್ನ ಕೋಣೆಗೆ ನಡೆದಳು.

ಮತ್ತೊಂದು ಘಂಟೆಯ ತನಕ ಇಂದಿರೆ 'ಕಹಳೆ'ಯ 'ಬಾಪೂ ಸ್ಮಾರಕ ಸಂಚಿಕೆ'ಯ ಪುಟಗಳನ್ನು ಒಂದಕ್ಷರ ತಪ್ಪಿಹೋಗದಂತೆ ಓದಿ ನೋಡಿದಳು.

ಬಾಪುವಿನ ನೆನಪಿಗೆ ಮುಡಿಪಾಗಿ ಬಂದ ವಿಶೇಷ ಸಂಚಿಕೆಯ ತುಂಬೆಲ್ಲ ಬಾಪುವೆ.

ಆದರೆ ಅನಂತ ಅದರಲ್ಲಿ ಬೇರೆಬೇರೆ ಹೆಸರಿನಡಿ ಬರೆದಿದ್ದ ಎರಡು ಮೂರು ಲೇಖನಗಳನ್ನು ನೋಡಿದಾಗ—ಅನಂತನ ಶೈಲಿಯ ಪರಿಚಯ ಇಂದಿರೆಗೆ ಚೆನ್ನಾಗಿ ಇದ್ದುದರಿಂದ, ಅವನ ಲೇಖನಗಳನ್ನು ಗುರುತಿಸುವುದು ಕಷ್ಟವಿರಲಿಲ್ಲ —ಅವಳಿಗಾದ ಆಶ್ಚರ್ಯ ಮಾತ್ರ ಅಷ್ಟಿಷ್ಟಲ್ಲ.

'ಕಹಳೆ'ಯ ಸಂಪಾದಕರಲ್ಲಿ ಏಕೆ ಈ ರೀತಿಯ ಬದಲಾವಣೆಯಾಗಿದೆ ಎಂಬುದು ಆಕೆಗೆ ಸಮಸ್ಯೆಯಾಯಿತು.

ನಿತ್ಯದ ಆಶಾವಾದಿ ಅನಂತ, ದುಃಖದ ಪ್ರವಾದಿಯಾಗಿದ್ದ. ಕೇಶವ ನಂತೆ ಮನುಷ್ಯನ ಭವಿಷ್ಯದಲ್ಲಿ ಅಪರಿಮಿತ ನಂಬುಗೆಯಿದೆಯೆಂದು ಆಕೆ ತಿಳಿದಿದ್ದ ಅನಂತ, ಇಂದು ಶಂಕೆಯ ಪ್ರತಿಮೂರ್ತಿಯಾಗಿದ್ದ.

ಅನಂತನ ಬರವಣಿಗೆಯ ಮೇಲೆ ನಿರಾಶೆಯ ದಿಗ್ಬಂಧನ ಹಾಕಿದಂತಿತ್ತು.

ಅನಂತರಾಯರೇ ಇದನ್ನು ಬರೆದಿರುವರೇನು ? ಎಂದು ಇಂದಿರೆ ತನ್ನನ್ನೇ ತಾನು ಎರಡು ಬಾರಿ ಕೇಳಿಕೊಂಡಳು. ಯಾರ ಪತ್ರಿಕೆಯ ಕುರಿತು ತನಗೆ ಅಪರಿಮಿತ ವಿಶ್ವಾಸವಿದೆಯೋ ಯಾವ ಪತ್ರಿಕೆಯಲ್ಲಿ ತಾನು ತನ್ನ ಗಂಡನ ಆದರ್ಶವನ್ನೆಲ್ಲ ಗುರುತಿಸಿ, ಅದು ಪ್ರಿಯವಾದುದೆಂದು ಬಗೆದು ನೆಚ್ಚಿಕೊಂಡಿದ್ದೆನೋ, ಆ ಪತ್ರಿಕೆಯ ಹಿಂದಿನ ಪ್ರಮುಖ ವ್ಯಕ್ತಿ ಈ ರೀತಿಯ ಅಭಿಪ್ರಾಯಗಳನ್ನು ಪ್ರಕಟಿಸಬಹುದೇ ಎಂದು ಇಂದಿರೆಗೆ ಆಶ್ಚರ್ಯವಾಯಿತು.

ಅನಂತರಾಯರು ಹೀಗೇಕೆ ಬದಲಾಗಿದ್ದಾರೆ ?

ಬಾಪುವಿನ ಮರಣದ ಆ ದುಃಖರಾತ್ರಿಯಂದು ಬಾಗಿಲ ಬಳಿ ಬಂದು ನಿಂತಿದ್ದ ಅನಂತರಾಯರ ನೆನಪಾಯಿತು. ಆಮೇಲೆ ಆಕೆ ಅವರನ್ನು ಕಂಡಿರಲಿಲ್ಲ.

'ಏನಾಯಿತು, ಇಂದಿರಾ ?' ಯೋಚಿಸುತ್ತಿದ್ದಂತೆಯೇ ಹೃದಯದ ಅಂತರಾಳದಿಂದ ದನಿಯೊಂದು ಹೊರಟಿತು.

ಪರಿಚಿತ ಕಂಠದ ಅಪರಿಚಿತ ದನಿ. ಅಂದು ಅನಂತರಾಯರು ತನ್ನನ್ನು ಆ ರೀತಿ ಕರೆದರೆ ?

ಛೆ! ಎಂಥ ಕ್ಷುದ್ರ ವಿಚಾರ. 'ಬರೇ ಭ್ರಮೆ' ಎಂದುಕೊಂಡು ಇಂದಿರೆ 'ಕಹಳೆ'ಯನ್ನು ಮೇಜಿನ ಮೇಲೆ ಬಿಸುಟು ಹೊರಕೋಣೆಗೆ ಬಂದಳು.

ಆಗ ಒಮ್ಮಿಂದೊಮ್ಮೆಗೆ ಆಕೆಗೆ ಭಾರತಿಯ ನೆನಪಾಯಿತು. ಒಂದು ತಿಂಗಳ ಹಿಂದೆ ಇಲ್ಲಿಂದ ಹೋಗಿದ್ದ ಮುಗ್ಧೆ.

"ಲಕ್ಷ್ಮಣಾ ?" ಎಂದು ಇಂದಿರೆ ಅಡುಗೆಯವನನ್ನು ಕರೆದಳು.

"ಏನಮ್ಮಾ ?"

"ಮಧ್ಯಾಹ್ನ ಅಪ್ಪನನ್ನು ಆಫೀಸಿನಲ್ಲಿ ಬಿಟ್ಟ ಮೇಲೆ ಕಾರು ಹಿಡಿದುಕೊಂಡು ವಾಪಸು ಬರುವಂತೆ ಗುಣಾಜಿಗೆ ಹೇಳು. ನನಗೆ ಕುರ್ಲಾಕ್ಕೆ ಹೋಗಬೇಕು, ಮೂರು ಘಂಟೆಗೆ."

ಲಕ್ಷ್ಮಣ "ಆದೀತಮ್ಮ" ಎಂದ.

೨೬

"೬೮ ಪೈಂಟ್‌ನಲ್ಲಿ ೨೨ ಅಕ್ಷರ ಬರುವುದಿಲ್ಲ, ಸಾರ್. ಸಣ್ಣದು ಮಾಡಿಕೊಡಿ."

"ಬರುತ್ತದೆಯೋ, ಹೋಗು."

"ಪೇಜ್ ನೀವು ಕಟ್ಟುತ್ತೀರೇನು?"

"ಬರುತ್ತದೆ ಎಂದು ನಾನು ಹೇಳಿದರೆ ಮತ್ತೂ ಅಧಿಕಪ್ರಸಂಗ ಮಾತನಾಡುತ್ತಾನೆ."

"ನಿಮಗೇನಾಗಿದೆ ಇವೊತ್ತು?"

"ನನಗೆ?" ಮತ್ತೆ ತುಸು ತಡೆದು,

"ನನಗೇನಾಗಿದೆ ಇವೊತ್ತು?"

ಅನಂತ ಇನ್ನೂ ಕಂಪೋಸಿಟರನ ಸಮಸ್ಯೆಯನ್ನು ಬಗೆಹರಿಸುವ ಕಡೆಗೆ ಗಮನಕೊಟ್ಟಿರಲಿಲ್ಲ. ಕೈ, ಹಿಡಿದಿದ್ದ ಪೆನ್ಸಿಲಿನೊಂದಿಗೆ ಆಡುತ್ತಿತ್ತು. ದೃಷ್ಟಿ, ಒಂದು ಕೈಯಲ್ಲಿ ಹಿತ್ತಾಳೆಯ ಸ್ಟಿಕ್ ಹಿಡಿದು, ಇನ್ನೊಂದು ಕೈಯಲ್ಲಿ ಅನಂತ ತಿದ್ದಿಕೊಟ್ಟಿದ್ದ 'ಗ್ಯಾಲಿ ಪ್ರೂಫ್'ನ್ನು ಹಿಡಿದುಕೊಂಡು, ತಲೆಬರಹದ ಸಮಸ್ಯೆಗಾಗಿ ಸಲಹೆ ಕೇಳಿದ ಕಂಪೋಸಿಟರನೆಡೆ ಹರಿದಿತ್ತು. ಆದರೆ ಮನಸ್ಸು ಮಾತ್ರ ಬೇರೆಲ್ಲಿಯೋ.

ಪರೀಕ್ಷೆ ಸಮೀಪಿಸುತ್ತಿದೆಯೆಂದು, ಒಂದು ದಿನ ರಜೆ ಪಡೆದು, ತಿಳಿಯದ ತ್ರೈರಾಶಿಕಗಳ ಬಂಧನದಿಂದ ತನ್ನನ್ನು ಬಿಡುಗಡೆ ಮಾಡಬೇಕೆಂದು ಬೇಡಿಕೊಂಡು ಬಂದಿದ್ದ ಒಬ್ಬ ರಾತ್ರಿಶಾಲೆಯ ವಿದ್ಯಾರ್ಥಿಗೆ ಸೋಮಯಾಜಿಗಳು ಪ್ರೆಸಿನಲ್ಲೆ ಪಾಠ ಹೇಳುತ್ತಿದ್ದರು.

ಅನಂತನ ಲಕ್ಷ್ಯ ಬೇರೆಲ್ಲಿಯೋ ಇದೆ ಎಂದು ಕಂಪೋಸಿಟರನ ಬೊಬ್ಬೆಯಿಂದಲೇ ತಿಳಿದವರು, "ಇಲ್ಲಿ ತಾ" ಎಂದು ಆತನನ್ನು ತನ್ನೆಡೆ ಕರೆದರು.

ಅನಂತನಿಗೆ ಸೋಮಯಾಜಿಗಳು ಕರೆದುದರ ಕಡೆಗೂ ಗಮನವಿರಲಿಲ್ಲ. ತನ್ನ ಕೆಲಸ ಪೂರ್ತಿ ಮುಗಿದಿದೆಯೋ ಎಂದೂ ಆತ ಯೋಚಿಸಲಿಲ್ಲ. "ಬೇಗ ಪೇಜ್ ಕಟ್ಟಿಕೊಡು. 'ಮೆಶಿನಿ'ಗೆ ಹಾಕುವ ಮೊದಲೊಮ್ಮೆ ನೋಡಿ ಹೋಗುತ್ತೇನೆ" ಎಂದು ಒಂದು ಘಂಟೆಯ ಹಿಂದೆ ತಾನು ಕೊಟ್ಟಿದ್ದ ನಿರ್ದೇಶನ ಕೂಡ ಮರೆತುಹೋಗಿತ್ತು.

ಎಲ್ಲರ ಇರವನ್ನೂ ಮರೆತು ಅನಂತ ಕೋಟು ಸಿಕ್ಕಿಸಿಕೊಂಡು ಹೊರಬಿದ್ದ.

ಬೆಳಗಿನಿಂದ ಒಂದು ಕಪ್ ಚಾ ಕೂಡ ಕುಡಿದಿರಲಿಲ್ಲ. ಭಾರತಿ ಏಳುವ ಮುನ್ನ ಮನೆಯಿಂದ ಹೊರಬಿದ್ದಿದ್ದ. ಈಗ ಘಂಟೆ ಹನ್ನೆರಡಾಗಿತ್ತು. ವಿ. ಟಿ. ಸ್ಟೇಶನಿನತ್ತ ಧಾವಿಸುತ್ತಿದ್ದಂತೆ, ಎಲ್ಲಾದರೂ ಇರಾಣಿ ಅಂಗಡಿಗೆ

ಮುಖ ತೋರಿಸಿ, ಒಣಗಿದ ಗಂಟಲಿಗೆ ಒಂದಿಷ್ಟು ಬಿಸಿ ಚಾ ಸುರುವಿಕೊಂಡು ಹೋಗೋಣವೇ ಎಂದು ತೋರಿತು. ಕಿಸೆಯಲ್ಲಿ ಎಲ್ಲಾದರೂ ಅಡಗಿಕೊಂಡ ದುಡ್ಡು ದುಗ್ಗಾಣಿ ಸಿಗಬಹುದೇ, ಅವುಗಳನ್ನು ಕೂಡಿಸಿ ಒಂದಾಣೆಯನ್ನು ರೂಪಿಸುವುದು ಸಾಧ್ಯವೇ ಎಂದು, ತನ್ನ ಬಳಿ ಏನೂ ಹಣವಿರಲಿಲ್ಲವೆಂದು ತಿಳಿದಿದ್ದರೂ, ಅಭ್ಯಾಸಬಲದಿಂದ ಅನಂತ ಕಿಸೆಗೆ ಕೈಹಾಕಿದ. ಯಾವುದೋ ಕಾಗದದ ಚೂರು ಕೈಗೆ ಸಿಕ್ಕಿತು. ಅದನ್ನು ಹೊರಗೆ ತೆಗೆಯದೆ ಅನಂತ ನಿಟ್ಟುಸಿರಿಟ್ಟು ವಿ.ಟಿ. ತಲಪಿದ.

ಕುರ್ಲಾ ಬಂಡಿ ಸಿದ್ಧವಾಗಿ ನಿಂತಿತ್ತು.

ಮುಂದಿನ ಬೆಂಚಿನ ಮೇಲೆ, ಎಲ್ಲ ಶಿಷ್ಟಾಚಾರದ ನಿಯಮಗಳನ್ನು ಮರೆತು, ಕಾಲು ಹರವಿ ಕುಳಿತ ಅನಂತನ ತಲೆತುಂಬ ಯೋಚನೆ :

ಹಣಕ್ಕೇನು ಮಾಡುವುದು ?

'ಎಲ್ಲ ಲೆಕ್ಕಾಚಾರ ಮುಗಿಯಿತು' ಎಂದು ಕಂಪೆನಿ ಇವನಿಗೆ ಕೊಟ್ಟಿದ್ದ ಹಣ ಬರೇ ನೂರ ಎಂಬತ್ತು ರೂಪಾಯಿಗಳು. 'ಇನ್ನಾರು ತಿಂಗಳು ದಯ ವಿಟ್ಟು ನನಗೆ ಉಪದ್ರ ಕೊಡಬೇಡಿ' ಎಂದು ಆ ಹಣದಲ್ಲಿ ನೂರು ರೂಪಾಯಿ ಗಳನ್ನು ಮನೆಗೆ ಕಳಿಸಿದ್ದ—ಉಡುಪರು ಅಂಚೆಗೆ ಖರ್ಚು ಮಾಡಿದ ಹಣವೇ ಹತ್ತು ಹದಿನೈದು ರೂಪಾಯಿಗಳಷ್ಟಾಗಬಹುದೆಂದು ತಿಳಿದಮೇಲೆ. ಮತ್ತುಳಿದ ಹಣದಲ್ಲಿ ಹೇಗೋ ದಿನ ಕಳೆದಿತ್ತು, ಇಷ್ಟರ ತನಕ.

ಆದರೆ ಇನ್ನು ಮುಂದೆ ?

ಶಹರದ ಹಲವಾರು ಟ್ರೇಡ್ ಯೂನಿಯನ್ ಬಂಧುಗಳು ಅಲ್ಪಸ್ವಲ್ಪ ಸಹಾಯದ ಭರವಸೆ ತೋರಿಸಿದ್ದರು ಆದರೆ ಅವೆಲ್ಲ ಭರವಸೆಗಳೆ. ವ್ಯವಸ್ಥಿತ ಸಂಘ ಸಂಸ್ಥೆಗಳಲ್ಲಿ, ಸಂಬಂಧಿಸಿದ ಸಮಿತಿ, ಸಲಹೆಗಾರರ ಅಂಗೀಕಾರದ ಮುದ್ರೆ ಬಿದ್ದು ಆ ಹಣ ಕೈಸೇರುವಾಗ ಇನ್ನೊಂದು ಯುಗ ಬೆಳಗಾಗ ಬಹುದಿತ್ತು.

ಅಷ್ಟರ ತನಕ ಜೀವನಪಥ ?

ಕೆಲಸದ ಬೇಟೆ ನಡೆದೇ ಇತ್ತು. ಆದರೆ ಯುದ್ಧಕಾಲದ ಮುಂಬಯಿ ತುಂಬ ಬದಲಿತ್ತು. ನಿರುದ್ಯೋಗದ ಪೆಡಂಭೂತ ಮತ್ತೆ ತಲೆಯೆತ್ತಿತ್ತು. ಅಲ್ಲದೆ ಅನಂತನ ವ್ಯಕ್ತಿತ್ವ ಮುಂಬಯಿಯಲ್ಲಿ ಸಾಕಷ್ಟು ಪ್ರಸಿದ್ಧಿ ಪಡೆದ ವ್ಯಕ್ತಿತ್ವವಾಗಿದ್ದಿತಾದಕಾರಣ, ಕೆಲಸ ಸಿಗುವುದು ಇನ್ನಷ್ಟು ದುಸ್ತರವಾಗಿತ್ತು.

ಭಾರತಿಯ ಚಿನ್ನ!

ಅವಳಿಂದ ಅಂಥ ಮಾತುಗಳನ್ನು ಕೇಳಿದಮೇಲೆ ಇನ್ನದರ ಗೊಡವೆಗೆ ಹೋಗುವುದು ಸಾಧ್ಯವೇ ಇಲ್ಲ.

ಭಾರತಿ ಹೀಗೇಕೆ ಬದಲಾಗಿಹೋಗಿದ್ದಾಳೆ? ತನ್ನಿಂದ ಎಂಥ ಅಪರಾಧ ಘಟಿಸಿತು ಎಂದೆ? ಅಥವಾ ತನ್ನ ಹೃದಯದ ದ್ರೋಹದ ಪರಿಚಯ ಆಕೆಗೆ ಆಗಿದೆಯೆ? ಅದು ಆದ ಬಗೆಯಾದರೂ ಹೇಗೆ?

'ಚಿನ್ನ ಮಾರೋಣವೇ, ಭಾರೀ. ಒಂದು ಜತೆ ಬಳೆಗಳನ್ನಾದರೂ ಅಡವಿಗೆ ಹಾಕೋಣವೆ?' ಎಂದು ಕೇಳಿದ್ದ ಮಾತಿಗೆ ಬಂದ ಉತ್ತರ ಎಂಥದು!

'ಮತ್ತೆ ನನ್ನನ್ನು ಬೀದಿಗೆ ಕಳಿಸುವ ಆಲೋಚನೆಯೇನು? ಹೊಟ್ಟೆಯಲ್ಲಿ ಬೆಳೆಯುತ್ತಿರುವ ಕೂಸಿಗೆ ತಿರುಪೆಯ ದಾರಿ ತೋರಿಸುವ ಆಲೋಚನೆಯೇನು?'

ಒಂದು ತಿಂಗಳ ಹಿಂದೆ 'ನನ್ನ ಚಿನ್ನ ಮಾರಿದರೆ ಆರು ತಿಂಗಳು ಹೇಗೂ ಕಳೆಯಬಹುದಲ್ಲ' ಎಂದು ಹೇಳಿದ್ದ ಭಾರತಿಯ ಬಾಯಿಂದ ಈ ಮಾತು!

'ನಿನ್ನನ್ನು ತಿರುಪೆಗೆ ಹೋಗುವಂತೆ ಯಾರೂ ಹೇಳಿಲ್ಲ, ಭಾರೀ.'

'ಇನ್ನು ಹೇಳುವುದೊಂದು ಬಾಕಿ. ಇಲ್ಲವಾದರೆ ಬದುಕಲು ಯಾವುದಾದರೊಂದು ದಾರಿ ಬೇಕಲ್ಲ. ಅಪ್ಪ ಇಷ್ಟು ಸಹಾಯ ಮಾಡಿಯೂ, ಮನೆ ಬೇರೆ ತೆಗೆಸಿಕೊಟ್ಟು, ನನ್ನನ್ನು ನಿಮ್ಮ ವಶ ಒಪ್ಪಿಸಿ ಹೋದದ್ದಕ್ಕೆ, ಈಗ ನೀವು ಮಾಡುತ್ತಿರುವ ಉಪಕಾರ ಸಾಕು.'

ಕೂರಸಿಯ ಇರಿತದಂತೆ, ಮಾರ್ದವದ ಪ್ರತಿಮೂರ್ತಿಯೆಂದು ಭಾವಿಸಿದ್ದ ಭಾರತಿಯ ಬಾಯಿಂದ ಇಂಥ ಮಾತು:

ಅಪ್ಪನ ಸಹಾಯ!

ಪ್ರಾಯಶಃ ತನ್ನ ವಿದ್ಯಾಭ್ಯಾಸಕ್ಕೆ ಶ್ರೀಪತಿರಾಯರು ಸಹಾಯ ಮಾಡಿದ್ದ ವಿಚಾರ ಭಾರತಿಗೆ ತಿಳಿದಿರಲಿಲ್ಲ; ಇಲ್ಲವಾದರೆ ಆ ಮಾತನ್ನೂ ಎತ್ತಿ ಹಂಗಿಸುತ್ತಿದ್ದಳೋ ಏನೋ.

ಭಾರತಿಯಲ್ಲಿ ಈ ರೀತಿಯ ಬದಲಾವಣೆ ಏಕೆ ಬಂತು? ಸಹನೆಯ ಪ್ರತೀಕವಾಗಿದ್ದ ಭಾರಿ ಈಗ ಹೆಡೆಯರಳಿದ ನಾಗರವೇಕಾಗಿದ್ದಾಳೆ?

ನಿರುದ್ಯೋಗಿ ಅನಂತನನ್ನು ಇಡೀ ವಿಶ್ವವೇ ಅಣಕಿಸುವಂತಿತ್ತು. ತಾನೇಕೆ ಇಷ್ಟು ಧೃತಿಗುಂದಿದ್ದೇನೆ ಎಂದು ಅನಂತನಿಗೆ ತಿಳಿದಿತ್ತು.

ಆದರೆ ಇದಕ್ಕೆ ಕಾರಣವಾದ ವ್ಯಕ್ತಿಯ ಕುರಿತು ಚಿಂತಿಸುವಾಗಲೆಲ್ಲ, ಹೃದಯದಲ್ಲಿ ದೊಡ್ಡದೊಂದು ವಿಪ್ಲವವೇ ಉಂಟಾಗುತ್ತಿತ್ತು.

ಎಷ್ಟೆಲ್ಲ ಜನರಿಗೆ ದ್ರೋಹ?

ಭಾರತಿ ತನ್ನ ನಡತೆಯ ವಿಚಾರ ತಂದೆಗೆ ಕಾಗದ ಬರೆದಿರಲೇಬೇಕು.

ಚಿನ್ನದ ಪ್ರಸಂಗ ನಡೆದ ಎಂಟು ಹತ್ತು ದಿನಗಳಲ್ಲೇ ಅನಂತನ ಹೆಸರಿಗೆ ರಿಜಿಷ್ಟರ್ಡ್ ಲಕೋಟೆಯೊಂದು ಬಂದಿತ್ತು. ಅನಂತ ಅದನ್ನು ಪಡೆಯದೆ ಹಿಂದಿರುಗಿಸಿದ್ದ.

ಅಪ್ಪನ ಸಹಾಯ!

ಭಾರತಿಯ ಮಾತು ಬೇರೇನನ್ನು ಮಾಡದಿದ್ದರೂ ಆತನ ಒಂದು ನಿರ್ಧಾರವನ್ನು ಕೆಣಕಿ ಬಲಗೊಳಿಸಿತ್ತು: 'ಇನ್ನು ಹೋರಾಡುತ್ತ ಸತ್ತರೂ ಚಿಂತಿಲ್ಲ. ಮಾವನ ಸಹಾಯದಿಂದ ಜೀವನ ಮುಂದುವರಿಸುವುದಿಲ್ಲ' ಎಂದು ಅನಂತ ನಿಶ್ಚಯಿಸಿದ್ದ.

ತನಗೆ ವಿದ್ಯೆಯುಣಿಸಿ, ಮನುಷ್ಯನನ್ನಾಗಿ ಮಾಡಿದ್ದ ಒಂದು ವ್ಯಕ್ತಿಯ ಸ್ನೇಹಕ್ಕೆ ಎರವಾಗುತ್ತಿದ್ದೇನೆ, ಮಾವನ ನಿಷ್ಠುರವನ್ನು ಕಟ್ಟಿಕೊಳ್ಳುತ್ತೇನೆ ಎಂದು ಅನಂತನ ಹೃದಯ ಕೊರಗುತ್ತಿದ್ದರೂ ಅನಂತ ತನ್ನ ನಿರ್ಧಾರವನ್ನು ಬದಲಿಸಲಿಲ್ಲ.

'ಹಾಗಾದರೆ ನೀನು ಹೆರಿಗೆಗೆ ಊರಿಗೆ ಹೋಗುವ ಆಲೋಚನೆಯನ್ನು ಇಟ್ಟುಕೊಂಡಿಲ್ಲನೆಂದು ಕಾಣುತ್ತದೆ. ಇಲ್ಲಿಯ ಕಷ್ಟದಲ್ಲಿಯೇ ನರಳಿ ಆ ಸಂಭ್ರಮವನ್ನು ತೀರಿಸುವ ಆಸೆಯೋ ನಿನಗೆ?'

'ಆಸೆ ತೀರದಿದ್ದರೆ ತೀರಿಕೊಳ್ಳುತ್ತೇನೆ. ಬದುಕಿ ಇದ್ದು ಆಗಬೇಕಾದ ಸೌಭಾಗ್ಯವಾದರೂ ಏನಿದೆ? ಅಥವಾ ಯಾವ ಮುಖ ಹಿಡಿದುಕೊಂಡು ನಾನು ಊರಿಗೆ ಹೋಗಬೇಕು?'

ಸಾವನ್ನು ಸ್ವಾಗತಿಸಿ ಹೇಳಿದ್ದ ಭಾರತಿಯ ನಿಷ್ಠುರ ಪ್ರಮಾಣವಚನ. ತುಂಬು ತಾರುಣ್ಯದಲ್ಲಿ ತುಂಬಿ ಬಂದ ನಿರಾಶೆಯ ಅಂಧಕಾರ.

ಅನಂತ ಉತ್ತರ ಹೇಳಿರಲಿಲ್ಲವಾದರೂ ಭಾರತಿಯ ಮಾತು ಕ್ಷಣ ಬಿಡದೆ ಆತನನ್ನು ಕಾಡುತ್ತಿತ್ತು.

'ಭಾರತಿಯನ್ನೇನು ಮಾಡಲಿ?'

"ಹೇ! ಮಿಸ್ಟರ್! ಪಾವ್ ನೀಚೇ ರಕ್ಖೊ" ಎಂದು ಕನ್ನಡಕವನ್ನು ಮೂಗಿನ ತುದಿಯ ತನಕ ಇಳಿಸಿದ್ದ ಮರಾಟಿ ಸದ್ಗೃಹಸ್ಥನೊಬ್ಬ ಅನಂತನನ್ನು ಎಚ್ಚರಿಸಿದ. ಅನಂತ ಅವಸರದಿಂದ ಕಾಲು ಕೆಳಗಿಳಿಸಿದರೂ ಇವನ ವರ್ತನೆಯು ಹೊಲೆ ಹೋಗಿಲ್ಲವೆಂಬಂತೆ ಎರಡು ಮೂರು ನಿಮಿಷಕಾಲ ಆ ಗೃಹಸ್ಥ ಅನಂತ ಕಾಲಿಟ್ಟಿದ್ದ ಜಾಗವನ್ನು ಕರವಸ್ತ್ರದಿಂದ ಹೊಡೆದು ಒರೆಸುತ್ತಲೇ ಇದ್ದ. ಅನಂತರ ಕುಳಿತುಕೊಂಡು ಗಟ್ಟಿಯಾಗಿಯಾದರೂ ತನ್ನಷ್ಟಕ್ಕೆ ತಾನೆ ಎಂಬಂತೆ ಹೇಳಿಕೊಂಡ:

"ಕಲಿತವರಿಗೆ ಕೂಡ ಬುದ್ಧಿಯಿಲ್ಲ."

ಅನಂತ ನಗಲಿಲ್ಲ. ಆತ ನಕ್ಕು ಬಹಳ ಸಮಯವಾಗಿತ್ತು.

ಗಾಡಿ ಮುಂದುವರಿಯುತ್ತಿದ್ದಂತೆ ಅನಂತನ ಯೋಚನೆ ಇನ್ನೊಂದು ದಾರಿ ಹಿಡಿದು ಸಾಗಿತ್ತು—ಇಂದಿರೆಯಿದ್ದಲ್ಲಿಗೆ. ಆಕೆಯನ್ನು ಕಾಣುವ ಉದ್ದೇಶ ದಿಂದ 'ಸ್ಮಾರಕ ಸಂಚಿಕೆ'ಯನ್ನು ಕೊಡುವ ನೆಪ ಮಾಡಿಕೊಂಡು ಮನೆಯ ತನಕ ಹೋಗಿ, ಧೈರ್ಯ ಸಾಲದೆ ಹೊರಗಿನ ಬಾಗಿಲಿಂದಲೇ ಹಿಂದಿರುಗಿದ್ದ.

ತನ್ನ ಜೀವನದಲ್ಲಿ ಈತನಕ ಇದ್ದಿರದ ಒಂದು ಉತ್ಪಾತದ ಬಿರುಗಾಳಿ ಯನ್ನು ತಂದ ಮನಮೋಹಕ ಮೂರ್ತಿ—

ಇಂದಿರೆ!

ಅನಂತನಿಗೆ ಮತ್ತೆ ಯೋಚಿಸುವುದು ಸಾಧ್ಯವಾಗಲಿಲ್ಲ. ಈ ವಿಚಾರ ಗಳಿಗೆಲ್ಲ ಬಿಡುಗಡೆಯ ಹಾದಿ ಬೇಕೆಂದು, ಮುಂದಿನ ವಾರದ ಸಂಚಿಕೆಗಾಗಿ ಏನಾದರೂ ವಸ್ತು ಸಿದ್ಧಪಡಿಸೋಣವೆಂದು ಅನಂತ, ಚಾ ಕುಡಿಯುವ ಆಸೆಯಿಂದ ದುಡ್ಡಿಗಾಗಿ ಹುಡುಕುವಾಗ ಮುಟ್ಟಿಬಿಟ್ಟಿದ್ದ ಕಾಗದದ ತುಂಡು ಗಳನ್ನು ಕಿಸೆಯಿಂದ ಹೊರತೆಗೆದ.

ಹತ್ತು ರೂಪಾಯಿಯ ಎರಡು ನೋಟುಗಳು!

ಈ ನೋಟುಗಳು ಎಲ್ಲಿಂದ ಬಂದುವು? ಅನಂತನಿಗೆ ತನ್ನ ಕಣ್ಣುಗಳನ್ನೆ ನಂಬಲಾಗಲಿಲ್ಲ. ಬೆಳಿಗ್ಗೆ ಹೊರಡುವಾಗ ಆತ ತನ್ನ ಕಿಸೆಗಳನ್ನೆಲ್ಲ ಒಮ್ಮೆ ಶೋಧಿಸಿಯಾಗಿತ್ತು. ಆಗ ಖಂಡಿತವಾಗಿಯೂ ಈ ಹಣ ಇದ್ದಿರಲಿಲ್ಲ. ಈಗ ಇದೆಲ್ಲಿಂದ ಬಂತು?

ಪ್ರೆಸ್ಸಿನಲ್ಲಿ ಕೋಟು ಕಳಚಿರಿಸಿದ್ದಾಗ ಸೋಮಯಾಜಿಗಳು ತುರುಕಿದ್ದಿರ ಬೇಕು—ತನಗೆ ತಿಳಿಯದಂತೆ.

ಅವರು ಎಷ್ಟು ಕಷ್ಟದಿಂದ ಜೀವನ ಸಾಗಿಸುತ್ತಿರುವರೆಂಬುದು ಅನಂತನಿಗೆ ತಿಳಿದಿತ್ತು. ಜೊತೆಗೆ ಪತ್ರಿಕೆಯು ತಲೆಶೂಲೆ ಬೇರೆ. ಹೀಗಿದ್ದೂ ಅನಂತನ ಕಷ್ಟ ಹೆಚ್ಚಿನದೆಂದು ಬಗೆದು ಅವರು ಪುನಃ ಈ ದಾನದ ಕೈ ಮುಂದುವರಿಸಿದರೆ ?

ಪುನಃ ಸಹಾಯ.

ಟ್ರೈನು ಧಾವಿಸುತ್ತಿತ್ತು. ಅನಂತ ಒಮ್ಮೆಗೆ, ಮುಂದಿನ ಸ್ಟೇಶನಿನಲ್ಲಿಳಿದು ಹಿಂದಿರುಗಿ ಪ್ರೆಸ್ಸಿಗೆ ಹೋಗೋಣವೇ ಎಂದು ಯೋಚಿಸಿದ ಆದರೆ ಹೊಟ್ಟೆ ವಿಪರೀತ ಹಸಿದಿತ್ತು ಅಷ್ಟೇ ಅಲ್ಲದೆ, ಹಿಂದಿರುಗಿ ಪ್ರಯೋಜನವೇನೂ ಇಲ್ಲವೆಂಬುದು ಆತನಿಗೆ ತಿಳಿದಿತ್ತು. ತನ್ನ ಮನಸ್ಸಿಗೆ ಈಗ ಮುತ್ತಿರುವ ದೌರ್ಬಲ್ಯದ ಅಂಧಕಾರದಲ್ಲಿ, ತಾನು ಸೋಮಯಾಜಿಗಳನ್ನಲ್ಲ, ಯಾರನ್ನೂ ಇದಿರಿಸಲಾರೆ ಎಂದು ಮನಸ್ಸು ಹೇಳುತ್ತಿತ್ತು.

ನೋಟುಗಳನ್ನು ಹಾಗೆಯೇ ಕಿಸೆಯೊಳಗಿರಿಸಿ, ಗಾಡಿಯ ಕಂಡಿಯ ಸರಳುಗಳ ಮೇಲೆ ತಲೆಯಿರಿಸಿ ಅನಂತ ಕುರ್ಲಾ ತಲಪುವ ತನಕ ನಿದ್ರಿಸುವುದು ಸಾಧ್ಯವೇ ಎಂದು ಪ್ರಯತ್ನಿಸಿದ.

ಭಾರತಿ ಗಂಡನಿಗಾಗಿ ಕಾದಿರಲಿಲ್ಲ. ಆ ಪರಿಪಾಟ ನಿಂತು ಬಹಳ ಸಮಯವಾಗಿತ್ತು. ಹಾಗೆ ನಿಲ್ಲುವುದರಲ್ಲಿ ಯಾವ ಪ್ರಯೋಜನವೂ ಇರುತ್ತಿರಲಿಲ್ಲ. ಅನಂತನ ಜೀವನವೇ ಈಗ ಒಂದು ಅನಿಯಮಿತ ಅವಸ್ಥೆಯಾಗಿತ್ತು. ಅಂಥ ಪ್ರಕ್ಷುಬ್ಧ ವಾತಾವರಣದಲ್ಲಿ ಕಾದ ಭಾರತಿಗೆ ದೊರಕುತ್ತಿದ್ದುದು ಒಂದೋ ಬಾಡಿದ ಮುಖದ ನೋವಿನ ಸಂಭ್ರಮ; ಇಲ್ಲವೆ ಹಸಿದಿದ್ದರೂ 'ಹಸಿವಿಲ್ಲ, ನೀನು ಊಟಮಾಡು' ಎಂಬ ನಿರುತ್ಸಾಹದ ಸಲಹೆ.

ಇಷ್ಟು ಸಾಲದು ಎಂಬುದಕ್ಕೆ ಮನೆಯಲ್ಲಿ ಮೌನದ ಬ್ರಹ್ಮಾಂಡ ವ್ಯಾಪಿಸಿತ್ತು.

ಗಂಡ ಬಂದೊಡನೆ ಭಾರತಿ ಮಣೆಯಿಟ್ಟು ಬಡಿಸಿದಳು. ಅನಂತ ಯಾವ ಮಾತನ್ನೂ ಆಡದೆ ಊಟ ಮುಗಿಸಿದ. ಊಟದ ಪಾತ್ರೆಗಳನ್ನೆಲ್ಲ ತೊಳೆದಿರಿಸಿದ ಮೇಲೆ ಭಾರತಿ ತಲೆ ಬಾಚಿಕೊಂಡು, ಪತ್ತಲ ಬದಲಿಸಿದಳು. ಅನಂತ ಸುಮ್ಮನೆ ಮಲಗಿ ನೋಡುತ್ತಿದ್ದ. ಭಾರತಿ ಎಲ್ಲಿಗೋ ಹೊರಟಿರುವಳೆಂದು ಗೊತ್ತು. ಆದರೆ ಎಲ್ಲಿಗೆ ಎಂದು ಆತ ಕೇಳಲಿಲ್ಲ.

ಎಲ್ಲ ಸಿದ್ಧತೆ ಮುಗಿಸಿದಮೇಲೆ ಹೊರಡುವ ಮುನ್ನ ಭಾರತಿ ಹೇಳಿದಳು :

"ನಾನು ಗಾಂದೇವಿಯ ತನಕ ಹೋಗಿಬರುತ್ತೇನೆ. ನೀವು ಹೊರಗೆ ಹೋಗುವುದಿದ್ದರೆ ಬೀಗದಕೈ ಆಚೆಯ ಮನೆಯಲ್ಲಿ ಕೊಟ್ಟುಹೋಗಿ."

ಅನಂತ ಮಾತನಾಡದೆ ಮಲಗುವಾತ. ಆದರೆ ಭಾರತಿಯ ತಿರಸ್ಕಾರದ ದೃಷ್ಟಿ ಹೃದಯದ ಯಾವುದೋ ಒಂದು ಭಾವನೆಯನ್ನು ಕೆಣಕಿದುದರಿಂದ ಆತ ಹೇಳಿದ :

"ನಾಗೇಶರಾಯರ ಮನೆ ಇಷ್ಟು ಹತ್ತಿರದ ಆಪ್ತರ ಮನೆಯಾದದ್ದು ಯಾವಾಗಿನಿಂದ ?"

ಗಂಡ ಮೌನವಾಗಿಯೇ ಇರಬಹುದು, ಆ ಕಾರಣ ಉತ್ತರ ನಿರೀಕ್ಷಿಸದೆ ಹೊರಟುಹೋಗಬಹುದು ಎಂದು ನಂಬಿದ್ದ ಭಾರತಿಗೆ ಅನಂತನ ಮಾತು ಕೇಳಿ ಆಶ್ಚರ್ಯವಾಯಿತು. ಜೊತೆಗೇ ಸಿಟ್ಟು ಬಂತು.

"ಹೇಳದೆ ಕೇಳದೆ ಇನ್ನೊಮ್ಮೆ ಜೇಲಿಗೆ ಹೋಗುವ ಪ್ರಸಂಗ ಬಂದರೆ ಊರಿನ ಗಾಡಿ ತೋರಿಸಲಾದರೂ ಯಾರದಾದರೂ ಗುರುತು ಬೇಕಲ್ಲ ?"

"ಕಳೆದ ಸಲ ಊರಿಗೆ ಹೋಗಿಲ್ಲ, ಭಾರೀ."

"ಕಳೆದ ಸಲ ಹದಿನೈದು ದಿನಗಳಲ್ಲಿ ಬಂದಿರಿ. ಇನ್ನೊಂದು ಸಲವೂ ಹಾಗೆಯೇ ಆಗಬಹುದೆಂದು ನಿಯಮವಿದೆಯೇನು ?"

"ಜೇಲಿಗೆ ಹೋಗುವ ಎಂಥ ಅಸಹ್ಯ ವ್ಯಕ್ತಿಯನ್ನು ನಿನ್ನ ಗಂಡನನ್ನಾಗಿ ಆರಿಸಿದೆಯಲ್ಲ, ಭಾರೀ ?

ಈ ಮಾತಿಗೆ ಏನು ಉತ್ತರ ಹೇಳುವುದೆಂದು ಭಾರತಿಗೆ ಹೊಳೆಯಲಿಲ್ಲ. ಆಕೆಯ ಕಣ್ಣು ತುಂಬಿಕೊಳ್ಳುತ್ತಿದ್ದವು. ಒಂದು ಕ್ಷಣ ಗಂಡನ ಮುಖವನ್ನೇ ನೋಡಿದಳು. ಅನಂತನೂ ಭಾರತಿಯನ್ನೇ ನೋಡುತ್ತಿದ್ದ.

ಜಡೆ ಇದಿರು ಬಿದ್ದಿತ್ತು. ಜೊಚ್ಚಲ ಸಂಭ್ರಮದಿಂದಾಗಿ, ಈ ವಾತಾವರಣದಲ್ಲೂ ಭಾರತಿಯ ದೇಹ ತುಂಬಿಕೊಳ್ಳುತ್ತಿತ್ತು. ಅನಂತ, ಬಾಪೂ ತೀರಿದ ಸನ್ನಿವೇಶದಲ್ಲಿ ಭಾರತಿಯಾಡಿದ ಮಾತನ್ನು ಯೋಚಿಸಿಕೊಳ್ಳುತ್ತಿದ್ದ :

'ನನಗೆ ನಾಲ್ಕು ತಿಂಗಳು.'

ಬರಲಿರುವ ತಾಯ್ತನದ ಹಿಗ್ಗಿನ ಮಾತು. ಆ ದುರ್ದಿನದ ಅಂಧಕಾರದಲ್ಲಿ ಆತನ ಉದಾಸೀನತೆ ಭಾರತಿಗೆ ಎಷ್ಟು ನೋವು ಕೊಟ್ಟಿತೋ !

ಆ ನೋವೇ ಆಕೆಯ ಪರಿವರ್ತನೆಗೆ ಕಾರಣವೇ ? ಅಥವಾ ಭಾರತಿ ಹೃತನ್ನ ದಯದ ಒಳಗಿನ ದ್ರೋಹವನ್ನು ಗುರುತಿಸಿರುವಳೇ ?

ಭಾರತಿಯ ಯಾವ ಅಪರಾಧಕ್ಕೆ ತಾನು ಆಕೆಗೆ ಇಂಥ ಶಿಕ್ಷೆ ವಿಧಿಸುತ್ತಿದ್ದೇನೆ?

ಗಂಡನಿಂದ ಮತ್ತೇನೂ ಮಾತು ಬಾರದುದನ್ನು ನೋಡಿ ಭಾರತಿ ಹೊರಗೆ ನಡೆದಳು. ಅನಂತ ಆ ಬಿಸಿಲಲ್ಲಿ ಹೊರಗೆ ಹೊರಟ ಹೆಂಡತಿಯ ಕೈಯಲ್ಲಿ ದಾರಿಯ ಖರ್ಚಿಗಾದರೂ ಒಂದು ರೂಪಾಯಿ ಇದೆಯೋ ಎಂದು ವಿಚಾರಿಸುವ ಗೋಜಿಗೆ ಹೋಗಲಿಲ್ಲ.

ಆತನ ಬುದ್ಧಿಗೆ ಮಂಕು ಕವಿದಿತ್ತು. ಆ ಮಂಕು ಭಾರತಿಯ ಕುರಿತ್ತು ಉಪೇಕ್ಷೆಯಲ್ಲಿ ರೂಪಾಂತರ ತಾಳುತ್ತಿದ್ದಿತು.

ಯೋಚಿಸುತ್ತಿದ್ದ ಅನಂತನಿಗೆ ಹಾಗೆಯೇ ಜೊಂಪು ಹಿಡಿಯಿತು. ನಾಲ್ಕು ಘಂಟೆಯ ಹೊತ್ತಿಗೆ ಬಾಗಿಲು ಸದ್ದಾದಾಗಲೇ ಎಚ್ಚರ. ಆ ಸದ್ದಿನ ಹಿಂದೆಯೇ ಅತಿ ಪರಿಚಿತ ದನಿ :

"ಭಾರತೀಽ...."

ಅನಂತ ಲಗುಬಗೆಯಿಂದೆದ್ದು ಬಾಗಿಲು ತೆರೆದ.

ಅವನ ಎಲ್ಲ ಯೋಚನೆಗಳನ್ನು ನಿಯಂತ್ರಿಸುತ್ತಿದ್ದ, ಅವನ ಜೀವನಾಕಾಶದಲ್ಲಿ ಕಾಣಿಸಿಕೊಂಡ ಧೂಮಕೇತು ಕಣ್ಣೆದುರು ನಿಂತಿತ್ತು.

ಇಂದಿರೆ!

ಇಂದಿರೆ ಬಿಳಿಯ ಖಾದಿ ಪತ್ತಲವುಟ್ಟಿದ್ದಳು. ತೊಟ್ಟಿದ್ದುದು ಕರಿಯ ಖಾದಿ ಸಿಲ್ಕಿನ ಕುಪ್ಪಸ. ಕೈಯಲ್ಲಿ ಹಿಡಿದಿದ್ದ ಚೀಲದ ದಾರವನ್ನು ಕೈಬೆರಳಿಗೆ ಸುತ್ತುತ್ತ ಇಂದಿರೆ ಭಾರತಿಯನ್ನು ಕೂಗುತ್ತಿದ್ದಳು.

ಅನಂತ ಎವೆಯಿಕ್ಕದೆ ಆಕೆಯನ್ನೇ ನೋಡುತ್ತಿದ್ದ.

ಪ್ರಚಂಡ ಬಿರುಗಾಳಿಗೆ ಸಿಕ್ಕಿದ ತರಗೆಲೆಯಂತೆ ಆತನ ಹೃದಯ ತತ್ತರಿಸಿ ಹೋಯಿತು. ಒಂದು ಕ್ಷಣ ತನ್ನ ಪರಿಮಿತ ವರ್ತುಲದಲ್ಲಿದ್ದ ಎಲ್ಲ ವ್ಯಕ್ತಿ, ಶಕ್ತಿ, ಸಂಘ ಸಂಸ್ಥೆಗಳೆಲ್ಲ ಮರೆಯಾಗಿ, ಅಪರಿಮಿತ ಅನಂತದಲ್ಲಿ ತಾವಿಬ್ಬರೇ ಇರುವಂತೆ ಕಂಡಿತು.

ಧರ್ಮ, ಸಮಾಜ, ಸಂಪ್ರದಾಯ, ರೀತಿ, ನೀತಿಗಳ ಎಲ್ಲ ಎಲ್ಲೆ ಮೀರಿದ ವಿಶ್ವದಲ್ಲಿ ಆತ ಇಂದಿರೆಯನ್ನು ಕಾಣುತ್ತಿದ್ದ.

ತನ್ನ ಆದರ್ಶದ ಪ್ರತಿಮೂರ್ತಿ, ಆರಾಧ್ಯದೇವತೆ.

ಇಂದಿರೆಯನ್ನು ಬರಸೆಳೆದು ಎದೆಗವುಚಿಕೊಳ್ಳಬೇಕು, ಆ ಸಾಮಿಪ್ಯ

ಸುಖದಲ್ಲಿ ತನ್ನೆಲ್ಲ ದುಃಖವನ್ನು ಮರೆಯಬೇಕು, ತನ್ನ ಎದೆಯಾಳದ ನೋವನ್ನೆಲ್ಲ ಮರೆತು, ತನ್ನ ಕರ್ತವ್ಯದ, ಹೋರಾಟದ ಕ್ಷೇತ್ರಕ್ಕೆ, ಆತ್ಮೀಯ ಸಂಗಾತಿಯ ಭುಜಕ್ಕೆ ಭುಜ ತಾಗಿಸಿ ಧುಮುಕಬೇಕು, ಎನ್ನುವ ಪ್ರಬಲ ಆಕಾಂಕ್ಷೆಯೊಂದರ ಒತ್ತಾಸೆಯಿಂದ ಅನಂತ ತನ್ನನ್ನೆ ತಾನು ಪ್ರಯತ್ನಪೂರ್ವಕ ಸೆಳೆದು ತರುತ್ತಿದ್ದ. ಬಾಗಿಲನ್ನು ಹಿಡಿದಿದ್ದ ಕೈಬೆರಳುಗಳು ಕೈಯ ರಕ್ತಗತಿಯನ್ನು ನಿಯಂತ್ರಿಸುವಷ್ಟು ಬಲವಾಗಿ ಹಲಗೆಗೆ ಒತ್ತಿಕೊಂಡಿದ್ದವು.

"ಭಾರತಿ ಎಲ್ಲಿದ್ದಾಳೆ ?"

ಭಾರತಿಯ ಹೆಸರು ಅನಂತನನ್ನು ಬದುಕಿಸಿತು. ಕೈ ಸಡಲಿತು. ಇಂದಿರೆ ಅನಂತನ ಹುಚ್ಚು ನೋಟಕ್ಕೆ ಅರ್ಥ ಕಲ್ಪಿಸಲು ಸಾಧ್ಯವಾಗದೆ ತನ್ನ ಕೈಚೀಲದೊಂದಿಗೆ ಆಡುತ್ತಿದ್ದಂತೆಯೇ ಹೇಳಿದ ಮಾತು, ಅನಂತನನ್ನು ಬಲವಂತದಿಂದ ವಾಸ್ತವ ಪ್ರಪಂಚಕ್ಕೆ ಎಳೆದು ತಂದಿತು. ಬಹಳ ದಿನಗಳು ಕಳೆದ ಮೇಲೆ ಅನಂತನ ಮುಖದಲ್ಲಿ ಮೊದಲ ಬಾರಿಗೆ ನಗುವರಳಿತು.

"ಬನ್ನಿ. ಒಳಗೆ ಬನ್ನಿ."

ಇಂದಿರೆ ಇನ್ನೂ ಅನುಮಾನಿಸುತ್ತಿದ್ದಳು. ಅನಂತ ಇದಿರಿಗೆ ನಿಂತೇ ಇದ್ದ. ಒಳಗೆ ಬರುವಂತೆ ಹೇಳಿದ ವ್ಯಕ್ತಿ, ಹೋಗಲು ಎಡೆಯಾದರೂ ಬಿಡುವುದು ಬೇಡವೇ ಎಂದು ಯೋಚಿಸಿದ ಇಂದಿರೆ ಪುನಃ ಕೇಳಿದಳು :

"ಭಾರತಿ ಮನೆಯಲ್ಲಿಲ್ಲವೆ ?"

ಪುನಃ ಭಾರತಿ ! ಅನಂತನ ಮನಸ್ಸಿನಲ್ಲಿ ವಿಷಾದದ, ನೋವಿನ ತೆರೆಯೆದ್ದು ಕುಣಿಯುತ್ತಿತ್ತು. ಆದರೆ ಸಮಯ ಪ್ರಜ್ಞೆಯನ್ನೂ ತಂದುಕೊಟ್ಟಿತ್ತು. ದಾರಿ ಬಿಟ್ಟು ಬದಿಗೆ ಸರಿದು ಅನಂತ ಹೇಳಿದ :

"ಒಳಗೆ ಬನ್ನಿ. ಅವಳು ಗಾಂದೇವಿಗೆ ಹೋಗಿದ್ದಾಳೆ."

ಇಂದಿರೆ ಒಳಗೆ ಬಂದು ಒಂದು ಕುರ್ಚಿಯಲ್ಲಿ ಕುಳಿತಳು.

"ಅನ್ಯಾಯವಾಯಿತು. ನಾನು ಅವಳು ಮನೆಯಲ್ಲಿರಬಹುದೆಂದು ನೆನೆಸಿ ಬಂದೆ."

"ಬಂದೇನು ಅನ್ಯಾಯವಾಗಿಲ್ಲ ಬಿಡಿ. ಅವಳನ್ನು ಕಾಣುವ ಉದ್ದೇಶ ಸಾಧಿಸದೆ ಅನ್ಯಾಯವಾಯಿತು, ಅಷ್ಟೆ."

ಇಂದಿರೆ ನಗತೊಡಗಿದಳು

ಆಕೆ ನಗುತ್ತಿದ್ದಾಗ ಅನಂತ ಸ್ವರ್ಗಸುಖವನ್ನನುಭವಿಸುತ್ತಿದ್ದ. ಎಷ್ಟು

ದಿನಗಳಿಂದ ಬಯಸಿದ ಹೃದಯದ ಆಸೆ—ಇಂದಿರೆಯೊಡನೆ ಏಕಾಂತದಲ್ಲಿ ಮಾತನಾಡಬೇಕು, ಆಕೆಯ ನಗುವನ್ನು ಕಂಡು ಹಿಗ್ಗಬೇಕು, ಆ ಹಿಗ್ಗಿನಲ್ಲಿ ತನ್ನ ನೋವನ್ನೆಲ್ಲ ಮರೆಯಬೇಕು, ಎಂದು ಬಯಸಿದ ಆಸೆ ನಿಜವಾಗಿ ಬಂದಿತ್ತು. ಇಂದಿರೆ ನಗುತ್ತಿದ್ದಳು. ಆದರೆ ಅನಂತನಿಗೆ ಮಾತು ಮುಂದು ವರಿಸುವುದು ಹೇಗೆಂದು ತಿಳಿಯಲಿಲ್ಲ. ಇಂದಿರೆಯನ್ನು ಕಾಣುವ ಉದ್ದೇಶ ದಿಂದಲೇ ಮುಂಜಾನೆ ಅವರ ಮನೆಯ ತನಕ ಹೋಗಿ ಹಿಂದಿರುಗಿದ್ದ. ಈಗ ಆಕೆಯೇ ಮನೆಗೆ ಬಂದಿದ್ದಾಳೆ. ಆದರೆ ಮಾತು ಮಾತ್ರ ಕಾಣೆ.

"ನಾಗೇಶರಾಯರಲ್ಲಿಗೆ ಹೋಗಿರುವಳೇನು ?"

"ಪ್ರಾಯಶಃ ಹೌದು."

"ಅದೇನು ಪ್ರಾಯಶಃ ? ನಿಮಗೆ ತಿಳಿದಿಲ್ಲವೇ ?"

"ತಿಳಿದಿದ್ದರೆ ನಾನು ಆ ರೀತಿ ಹೇಳುತ್ತಿದ್ದೆನೆ ?" ಅನಂತ ಈ ಸುಳ್ಳು ಮಾತು ಆಡುವಾಗ ನಗುತ್ತಿದ್ದಿಲ್ಲ. ಆದರೆ ಇಂದಿರೆ ಅದನ್ನು ನಗೆಯಲ್ಲಿ ತೇಲಿಸಿದಳು :

"ಗಾಂದೇವಿಯ ಸಮೀಪ ಬೇರೆ ಯಾರ ಮನೆಯಿದೆ? ಹಾಗಾದರೆ ನಮ್ಮ ಮನೆಯ ತನಕ ಬರಬಹುದೆಂದು ಕಾಣುತ್ತದೆ. ನಾನು ಹೊರಡುತ್ತೇನೆ."

"ಇಲ್ಲ. ನಿಮ್ಮಲ್ಲಿಗಲ್ಲ ಆಕೆ ಹೋದದ್ದು."

"ಮತ್ತೆಲ್ಲಿಗೆ? ನಿಮಗೆ ತಿಳಿದಿದೆ ಹಾಗಾದರೆ."

ಈಗ ಅನಂತ ಸಿಕ್ಕಿಬಿದ್ದಿದ್ದ. ನಗುತ್ತಲೇ ಹೇಳಿದ :

"ಹೌದು. ಆಕೆ ಹೋದದ್ದು ನಾಗೇಶರಾಯರಲ್ಲಿಗೆ."

"ಎಷ್ಟು ಸುಲಭವಾಗಿ ಸಿಕ್ಕಿಬಿದ್ದಿರಿ. ನೀವು ಲಾ ಕಲಿತಿದ್ದರೆ ಪ್ರಯೋಜನವಾಗುತ್ತಿದ್ದಿಲ್ಲ. ಪಾಸಾಗುವುದೇ ಕಷ್ಟವಿತ್ತು."

ಸಹಜವಾಗಿಯೇ ಇಂದಿರೆ ಈ ಮಾತು ಹೇಳಿದರೂ 'ಲಾ'ದ ನೆನಪು ಒಮ್ಮಿಂದೊಮ್ಮೆಗೆ ಆಕೆಯ ಮುಖಚರ್ಯೆಯನ್ನು ಬದಲಿಸಿತು. ಆಕೆಯ ಕಣ್ಣೆದುರಿಗೆ ಕೇಶವ ಕುಣಿಯುತ್ತಿದ್ದ.

ಇಂದಿರೆಯ ಮೌನ ಕಂಡು ಅನಂತನಿಗೂ ಆಶ್ಚರ್ಯವಾಯಿತು. ಆದರೆ ಆತ ಅದಕ್ಕೆ ಯಾವ ಕಾರಣವನ್ನೂ ಸೃಷ್ಟಿಸುವ ಗೋಡವೆಗೆ ಹೋಗಲಿಲ್ಲ. ವಿಷಯವನ್ನೇ ಬದಲಿಸಬೇಂದು ಸಂಪ್ರದಾಯದ ಒಂದು ಮಾತು ಹೇಳಿದ :

"ಏನು, ಅಪರೂಪವಾಗಿ ಬಂದಿರಿ ?"

"ನಿಮಗೆ ನಮ್ಮ ನೆನಪಾಗದಿದ್ದರೂ ನಮಗೆ ನೆನಪಾಗದಿರುತ್ತದೆಯೆ? ಹತ್ತು ದಿನ ಜೊತೆಗಿದ್ದು ಹೊರಟುಹೋದ ಭಾರತಿ ಹೇಗಿದ್ದಾಳೆಂದು ನೋಡೋಣ ಎಂದು ಬಂದೆ."

ಒಂದು ಕ್ಷಣ ಅನಂತನಿಗೆ ಅತೀವ ವೇದನೆಯಾಯಿತು. ತಾನು ಪ್ರೀತಿಸುವ ಈ ಸುಂದರ ವ್ಯಕ್ತಿಯಲ್ಲಿ ತನ್ನ ವಿಚಾರ ಯಾವೊಂದು ಮಧುರ ಭಾವನೆಯೂ ಇಲ್ಲ. ತನ್ನ ಕುರಿತು ಇರಬಹುದಾದ ಆದರ ಕೂಡ, ಭಾರತಿಯ ಗಂಡನೆಂದಾಗಿ, ಅನಂತನೆಂದಲ್ಲ.

ಆದರೆ ಒಂದೇ ಕ್ಷಣ.

ಪ್ರೀತಿಪಾತ್ರ ವ್ಯಕ್ತಿಯಲ್ಲಿ ತಪ್ಪು ಎಷ್ಟೇ ದೊಡ್ಡದಾದರೂ ಅದು ಯಾವಾಗಲೂ ಕ್ಷುಲ್ಲಕವೆ.

"ಅವಳಿಲ್ಲವಲ್ಲ ನಿಮ್ಮ ಕೆಲಸ ಮುಗಿಯಿತೆ?"

"ಮನೆಯ ತನಕ ಬಂದು ಮಾತನಾಡದೆ ಹೋದಿರಲ್ಲ. ನಿಮ್ಮನ್ನು ಕಂಡು ಮಾತನಾಡಿದಂತಾಯಿತು."

ಈಗಲಾದರೂ ಒಂದು ಅಭಿಮಾನದ ಎಳೆ ದೊರಕಿತೇ ಎಂದು ಅನಂತ ಹಿಗ್ಗಿದ.

"ಅಂದು ನೀವು ಅನಂತದುಃಖದ ಸೆರೆಯಲ್ಲಿದ್ದಾಗ ಬಂದಿದ್ದೆ" ಎಂದು ಅನಂತ ಹೀಗೆ ಹೇಳಿ ಇಂದಿರೆಯ ಮುಖಭಾವವನ್ನೇ ಪರೀಕ್ಷಿಸುತ್ತಿದ್ದ. ತಾನು ಪ್ರಮಾದವಶಾತ್, ಸಂಯಮದ ಗಡಿಮೀರಿ, 'ಇಂದಿರಾ?' ಎಂದು ಕರೆದುದು ಆಕೆಗೆ ತಿಳಿದಿದೆಯೆ ಎಂದು ಪರೀಕ್ಷಿಸುವ ಆತುರ. ಆದರೆ ಇಂದಿರೆಯ ಮುಖ ಭಾವದಿಂದ ಏನನ್ನೂ ಹೇಳುವಂತಿರಲಿಲ್ಲ.

"ಹೌದು." ಇಂದಿರೆ ಇಷ್ಟೇ ಹೇಳಿದಳು. ಆಮೇಲೆ ತುಸು ತಡೆದು,

"ಅಂಥ ಮಹಾತ್ಮನಿಗೆ ಬೇರಾವ ರೀತಿಯ ಸಾಮಾನ್ಯ ಸಾವು ಬರುವುದು ಶಕ್ಯವಿತ್ತೇ?"

"ಅದೂ ಹೌದು." ಅನಂತ ದನಿಗೂಡಿಸಿದ.

"ಆದರೆ ಅದು ಅನಿರೀಕ್ಷಿತ ನಷ್ಟದ, ಏಟಿನ ದುಃಖ. ಆದರೆ ನಾನು ನಿಮ್ಮಷ್ಟು ನಿರಾಶಾವಾದಿಯಾಗಿಲ್ಲ."

ಈಗ ಮಾತ್ರ ಅನಂತನಿಗೆ ಆಶ್ಚರ್ಯವಾಯಿತು. ತಾನು ಇಂದಿರೆಯನ್ನು ಕಂಡಂದಿನಿಂದ, ತನ್ನ ರಾಜಕೀಯ ಅಭಿಪ್ರಾಯಗಳ ಕುರಿತು ಯಾವುದೊಂದು

ಮಾತನಾಡಲು ಇಚ್ಛಿಸದ ಈ ವ್ಯಕ್ತಿ ಈಗೇಕೆ ಹೀಗೆ ಹೇಳುತ್ತಿದೆಯೆಂದು ಯೋಚಿಸಿದ.

"ಒಳ್ಳೆಯ ನಾಮಕರಣ ಮಾಡಿದಿರಿ ನನಗೆ, ಯಾವ ಆಧಾರವೂ ಇಲ್ಲದೆ."

"ಆಧಾರವಿಲ್ಲವೇನು ? ನಿಮ್ಮ ಪತ್ರಿಕೆಯ ಪುಟ ಪುಟಗಳಲ್ಲಿ ತುಂಬಿರುವ ನಿರಾಶಾವಾದವನ್ನು ಉದಾಹರಣೆ ಸಹಿತ ಎತ್ತಿ ಹೇಳಬೇಕೇನು ?"

"ಎಂದರೆ ?"

"ರಾಜಕೀಯ ಸ್ವಾತಂತ್ರ್ಯದ ಸಾಧನವಾಗಿ ಬಾಪೂ ಬಂದರು. ತಮ್ಮ ಉದ್ದೇಶ ಸಾಧಿಸಿ, ಅವಕ್ಕಿಂತಲೂ ಪವಿತ್ರವಾದ ಕೋಮುವಾರು ಶಾಂತಿಯ ಇನ್ನೊಂದು ಉದ್ದೇಶದ ಕಾರ್ಯಕ್ಷೇತ್ರದಲ್ಲಿ ಮಡಿದರು. ಆದರೆ ಇದರಿಂದಾಗಿ ದೇಶ, ಸ್ವಾತಂತ್ರ್ಯ, ಕಾಂಗ್ರೆಸ್—ಇನೆಲ್ಲ ಒಡೆಯಬಹುದು ಎಂಬರ್ಥದ ಮಾತುಗಳನ್ನು ಬರೆದು, ನಿರಾಶೆಯ ಅಂಧಕಾರವನ್ನು ಓದುಗರ ಮುಂದಿಡು ವುದು 'ಕಹಳೆ'ಯ ಕರ್ತವ್ಯವೆಂದು ನಾನು ತಿಳಿದಿಲ್ಲ."

ಅನಂತ ಯೋಚಿಸುತ್ತಿದ್ದ: 'ಇದು ನಿನ್ನ ವರ್ಚಸ್ಸು' ಎಂದು ಹೇಳ ಬೇಕು, ಎಂದು ಮನಸ್ಸು ಬಯಸುತ್ತಿತ್ತು. 'ನಾನೀಗ ದೌರ್ಬಲ್ಯದ ಸೀಮೆ ಯಲ್ಲಿದ್ದೇನೆ. ನಿನ್ನಿಂದಾಗಿ ನಾನಿಷ್ಟು ದುರ್ಬಲನಾಗಿದ್ದೇನೆ. ನನ್ನ ಬರ ವಣಿಗೆಯ ಮೇಲೆ ನನ್ನ ಹಿಡಿತವಿಲ್ಲ' ಎಂದು ಸಾರಬೇಕೆಂದು ಮನಸ್ಸು ಬಯಸುತ್ತಿತ್ತು.

"ನನ್ನ ಬುದ್ಧಿಗೆ ಯಾವುದೋ ಒಂದು ರೀತಿಯ ಮಂಕು ಕವಿದಿದೆ ಎಂದು ನನಗೂ ಅನಿಸುತ್ತಿದೆ" ಎಂದು ಹೇಳಿ ಅನಂತ ತನ್ನ ಮಾತಿನ ಪರಿಣಾಮವನ್ನು ನಿರೀಕ್ಷಿಸತೊಡಗಿದ.

ಇಂದಿರೆ ಬೇರೆಯೇ ಯೋಚಿಸಿದಳು.

"ನಿಮ್ಮ ಕೆಲಸವೇನಾಯಿತು ?"

ಅನಂತನಿಗೆ ಇನ್ನಷ್ಟು ಸಂಕಟವಾಯಿತು. ಆರ್ಥಿಕ ದೌರ್ಬಲ್ಯವನ್ನು, ಬಡತನದ ದೌರ್ಬಲ್ಯವನ್ನು ತನಗೆ ತನ್ನ ಪ್ರೀತಿಯ ಜೀವ ಆರೋಪಿಸುತ್ತಿದೆ ಯಲ್ಲ ಎನ್ನುವ ನೋವು ಕೊರೆಯತೊಡಗಿತು. 'ನಿನ್ನ ಪ್ರೀತಿಯೊಂದಿದ್ದರೆ ಎಂಥ ಬಡತನವನ್ನೂ ಎದುರಿಸಬಲ್ಲೆ ಎಂಬ ಆತ್ಮವಿಶ್ವಾಸ ನನಗಿಲ್ಲವೆ ?' ಎಂದು ಅನಂತ ತನ್ನಲ್ಲೆ ತಾನು ಯೋಚಿಸಿದ.

"ಆ ಕೆಲಸ ಹೋಯಿತು. ಬೇರೆ ಸಿಗಲಿಲ್ಲ."

"ಮುಂದೆ ?"

"ಹುಡುಕುತ್ತಿದ್ದೇನೆ. ಪತ್ರಿಕೆಯು ತನ್ನ ಕಾಲ ಮೇಲೆ ತಾನು ನಿಲ್ಲುವ ತನಕ ಹೊಟ್ಟೆಯ ಪಾಡು ಸಾಗಬೇಕಲ್ಲ."

"ಆ ದಿನ ಬರುವುದು ಯಾವಾಗಲೋ ? ಅದಕ್ಕೇ ಭವಿಷ್ಯದ ಕುರಿತು ಅಪನಂಬುಗೆ ತಂದುಕೊಂಡು ನೀವು ಏನೇನೋ ಬರೆಯುತ್ತಿರುವುದು ?"

ಇಂದಿರೆ ನಗುತ್ತಿದ್ದಳು. ಆದರೆ ಅನಂತನಿಗೆ ನಗು ಬರಲಿಲ್ಲ. ಇಂದಿರೆ ತನ್ನನ್ನು ಮೆಚ್ಚಿಲ್ಲವೆಂಬುದು ಆತನಿಗೆ ತಿಳಿದಿತ್ತು. ತನ್ನ ಬರವಣಿಗೆಯನ್ನಾದರೂ ಆಕೆ ಪ್ರೀತಿಸುತ್ತಿರುವಳೆಂದು ಆತನಿಗೆ ವಿಶ್ವಾಸವಿತ್ತು.

ಅದೂ ಸುಳ್ಳೇ ?

'ಏನೇನೋ ಬರೆಯುತ್ತಿರುವುದು ?'

"ಸರಿ. ಬರುತ್ತೇನೆ, ಹಾಗಾದರೆ. ಭಾರತಿಯನ್ನೊಮ್ಮೆ ಕಳಿಸಿಕೊಡಿ. ನೀವೂ ಬನ್ನಿ ಯಾವಾಗಾದರೊಮ್ಮೆ. ಅಪ್ಪ ನಿಮ್ಮನ್ನು ಕೇಳುತ್ತಿರುತ್ತಾರೆ."

ಇಂದಿರೆ ಹೊರಡುವಳೆಂದು ಖಚಿತವಾದೊಡನೆ ಅನಂತ ಗಲಿಬಿಲಿಗೊಂಡ. ಆದರೆ ಆಕೆಯನ್ನು ನಿಲ್ಲಿಸಿಕೊಳ್ಳುವ ಬಗೆ ಹೇಗೆಂದು ಹೊಳೆಯಲಿಲ್ಲ. "ನಿಲ್ಲಿ. ಇಷ್ಟೇನು ಅವಸರ ? ಸ್ವಲ್ಪ ಕಾಫಿ ಮಾಡಲೆ ?" ಎಂದೇನೆಲ್ಲ ಕೇಳಿದ.

ಆದರೆ ಇಂದಿರೆ ಆಗಲೇ ಬಾಗಿಲು ದಾಟಿಯಾಗಿತ್ತು. ನಗುತ್ತಲೇ,

"ಬೇಡ, ಬೇಡ. ಆದಷ್ಟು ಬೇಗ ಮನೆ ಸೇರಿ, ಭಾರತಿ ಸಿಗುವಳೋ ನೋಡುತ್ತೇನೆ" ಎಂದು ಹೇಳಿದಳು.

ಮತ್ತೆರಡು ನಿಮಿಷದಲ್ಲಿ ಕಾರು ಹೊರಟಿತು. ಅನಂತ ಬಾಲ್ಕನಿಯಲ್ಲಿ ನಿಂತು ಕಾರು ಮರೆಯಾದ ದಿಕ್ಕನ್ನೇ ನೋಡುತ್ತಿದ್ದ.

೨೭

ತುಂಬಿದ ಮನದಿಂದ, ಭಾರವಾದ ಕಾಲುಗಳನ್ನೆಳೆದುಕೊಂಡು ಭಾರತಿ ಮುಂದುವರಿಯುತ್ತಿದ್ದಳು.

ಗಂಡನನ್ನು ನೋಯಿಸಿ ಮನೆಯಿಂದ ಹೊರಟುಬಂದೆ ಎಂದು ಮನಸ್ಸು ಹಳಿಯುತ್ತಿತ್ತು. ಆದರೆ ನಾಗೇಶರಾಯರ ಮನೆಗೆ ಹೋಗಬೇಕೆಂದು ಮಾಡಿದ್ದ ನಿರ್ಧಾರವನ್ನು ಆಕೆ ಬದಲಿಸುವಂತಿರಲಿಲ್ಲ. ಏಳೆಂಟು ದಿನಗಳ ಹಿಂದೆಯೇ ಸುಶೀಲೆಯ ಪತ್ರ ನೋಡಿ ಮಾಡಿದ ನಿರ್ಧಾರವದು.

ಗಂಡನ ಉಪೇಕ್ಷೆ, ಔದಾಸೀನ್ಯಗಳನ್ನೆಲ್ಲ ಕಡೆಗಣಿಸಿ ಮುಂದುವರಿಯು ವಷ್ಟು ಪ್ರಬಲವಾದ ತಾಯ್ತನದ ಹಂಬಲದಿಂದ ಪ್ರಚೋದಿತವಾದ ಆಸೆ. ಅದನ್ನು ಭಾರತಿ ಕಡೆಗಣಿಸುವಂತಿರಲಿಲ್ಲ.

ಅನಂತ ಬೇಸರದಿಂದ 'ಇಷ್ಟೆಯೇ?' ಎಂದು ಮೂದಲಿಸಿ ನುಡಿದಿದ್ದ ತನ್ನ ಸೌಭಾಗ್ಯದ ಸರ್ವಸ್ವ.

'ಗಂಡ ದಾರಿಗೆ ಬರುತ್ತಾರೆ' ಎಂದು ಭಾರತಿ ಕಾದು ಕಾದು ಆಕೆಗೆ ದೊರಕಿದ್ದು, ಆತನ ಜೇಲುವಾಸದ ಕಾಲದ ಅಗಲಿಕೆ, ಮತ್ತೆ ನಿರುದ್ಯೋಗದ ಅಸಹ್ಯ ಜೀವನ—ದಿನವೂ ತಾಪತ್ರಯಗಳ ಬ್ರಹ್ಮಾಂಡ.

ಮುಂಬಯಿ ಜೀವನದ ವೈಭವದ ಕನಸು ಕಾಣುತ್ತಿದ್ದ ಭಾರತಿಗೆ ದೊರಕಿದ ಸೌಭಾಗ್ಯ—ಬಿಡಿಕಾಸುಗಳಿಗಾಗಿಯೂ ನಾಗೊಂದಿಗೆಯ ಮೇಲೆ ಕೈಯಾಡಿಸುವ ಕೆಲಸ.

ಪತ್ರ ಬರೆಯುವುದರಲ್ಲಿ ತಾನೇನು ನಿಪುಣೆಯಲ್ಲವಾದರೂ ತನ್ನ ಪರಿಸ್ಥಿತಿಯ ಗೋಳನ್ನೆಲ್ಲ ಸಾಧ್ಯವಾದ ರೀತಿಯಲ್ಲಿ ಪತ್ರದಲ್ಲಿ ಮೂಡಿಸಿ ಅಪ್ಪನಿಗೆ ತಿಳಿಸಿದ್ದಳು. ಕಂಗಾಲಾದ ಶ್ರೀಪತಿರಾಯರಿಂದ ಬಂದ ಉತ್ತರ: 'ಇನ್ನೂರು ರೂಪಾಯಿಗಳ ರಿಜಿಸ್ಟರ್ಡ್ ಲಕೋಟೆ.'

ಭಾರತಿಯ ಕಣ್ಣೆದುರಿಗೇ ಅನಂತ ಅದನ್ನು ಹಿಂದಿರುಗಿಸಿದ್ದ. ನೋವಿನಿಂದ ನಿಂತು ನೋಡುತ್ತಿದ್ದ ಹೆಂಡತಿಯ ಹೃದಯದ ವಿಪ್ಲವವನ್ನು ಅನಂತ ಗುರುತಿಸಲಿಲ್ಲ. ಗುರುತಿಸುವ ಇಚ್ಛೆಯೂ ಆಗ ಆತನಿಗೆ ಇರಲಿಲ್ಲ.

'ನನ್ನ ವಿಳಾಸಕ್ಕೆ ಕಳಿಸುವಂತೆ ಅಪ್ಪನನ್ನು ಕೇಳಿಕೊಳ್ಳದೆ ತಪ್ಪು ಮಾಡಿದೆ' ಎಂದು ಭಾರತಿ ತನ್ನನ್ನೆ ತಾನು ಹಳಿದುಕೊಳ್ಳುವಂತಾಗಿತ್ತು. ಆದರೆ ಆಕೆ ಅಪ್ಪನಿಗೇನು ಹಣ ಕಳುಹಿಸೆಂದು ಬರೆದಿರಲಿಲ್ಲ. ಈಗ ಈ ಹಣ ಹಿಂದಿರುಗಿದ ಮೇಲೆ, ಪುನಃ ಅದನ್ನು ತನ್ನ ವಿಳಾಸಕ್ಕೆ ಕಳಿಸೆಂದು ಬರೆದರೆ, ತಂದೆ ತನ್ನ ವರ್ತನೆಗೆ ಯಾವ ರೀತಿಯ ಅಪಾರ್ಥ ಕಲ್ಪಿಸಬಹುದೆಂದು ಕೂಡ ಭಾರತಿ ಚಿಂತಿಸಬೇಕಿತ್ತು.

ಕೆರಳಿದ ಸ್ವಾಭಿಮಾನ, ಗಂಡನ ಉದಾಸೀನ ವೃತ್ತಿ, ಮನೆಯಲ್ಲಿ ತುಂಬಿದ್ದ ದುಃಖ, ಹಣದ ಕೊರತೆ—ಇವೆಲ್ಲ ಕದಡಿದ ಕುಟುಂಬಜೀವನದಲ್ಲಿ ವೈಷಮ್ಯದ ಹೊಗೆಯಾಡಿಸುತ್ತಿದ್ದವು.

ಭಾರತಿಗೆ ತನ್ನ ದುಃಖವನ್ನು ಯಾರೊಡನೆ ಹೇಳಿಕೊಳ್ಳಬೇಕೆಂದು

ಯೋಚನೆಯಾಗುತ್ತಿತ್ತು. ಹತ್ತು ಹನ್ನೆರಡು ದಿನಗಳ ಒಡನಾಟದಿಂದ ಹತ್ತಿರದ ಬಂಧುವಾಗಿದ್ದ ಇಂದಿರೆಯೊಡನೆ ತನ್ನ ದುಃಖವನ್ನೆಲ್ಲ ತೋಡಿಕೊಳ್ಳ ಬಾರದೇ ಎಂದು ಆಕೆ ಯೋಚಿಸಿದುದಿದೆ. ಆದರೆ ಇಂದಿರೆಯನ್ನು ಕಾಣುವಾಗ ಲೆಲ್ಲ ಯಾವುದೋ ಒಂದು ಕೀಳರಿಮೆ ಆಕೆಯನ್ನು ಕಾಡುತ್ತಿತ್ತು. ತನ್ನ ಗಂಡನ ವಿಚಾರ, ರೀತಿ, ತರ್ಕ ಇವೆಲ್ಲವುಗಳಿಗೆ ಮನ್ನಣೆ ಕೊಡುವಂತ ವ್ಯಕ್ತಿ ಯಿಂದ ತನ್ನ ಅಭಿಪ್ರಾಯಗಳಿಗೆ ಪುರಸ್ಕಾರ ದೊರಕಬಹುದೇ ಎಂಬ ಶಂಕೆ ಒಂದೆಡೆ, ವಿದ್ಯೆ, ಸಂಪತ್ತು, ತಿಳುವಳಿಕೆ ಇವೆಲ್ಲವುಗಳಲ್ಲಿ ತನಗಿಂತ ಎಷ್ಟೋ ಮುಂದುವರಿದಾಕೆ, ಎಂದು ತಾನು ತಿಳಿದ ವ್ಯಕ್ತಿ ತನ್ನ ಮನಸ್ಸಿನ ಕಳವಳದ ಕುರಿತು ನಕ್ಕುಬಿಟ್ಟರೆ, ಅದರಿಂದ ತನಗೆ ನೋವಾಗದೇ ಎಂಬ ಸಂದೇಹ ಇನ್ನೊಂದೆಡೆ. ಇವೆರಡಕ್ಕೂ ಒಂದು ರೀತಿಯಲ್ಲಿ ಕಾರಣವಾಗಿದ್ದ ಒಂದು ಪುಟ್ಟ ಘಟನೆ.

ಅನಂತ ಜೇಲಿನಲ್ಲಿದ್ದಾಗ, ಬೇರೆ ಯಾವುದೋ ಒಂದು ಕೆಲಸದ ನಿಮಿತ್ತ ಇಂದಿರೆಗೆ ಭಾರತಿಯನ್ನಗಲಿ ಹೋಗಬೇಕಾದ ಸಂದರ್ಭ ಬಂದಾಗ ಭಾರತಿಯು ಕೈಗೆ ಒಂದು ಪುಸ್ತಕ ತುರುಕಿ, 'ನಾನು ಬರುವವರೆಗೆ ಓದುತ್ತಿರು' ಎಂದು ಹೇಳಿ ಹೋಗಿದ್ದಳು. ಬೇಡವಾದ ಮನಸ್ಸಿನಿಂದ ಆ ಪುಸ್ತಕದ ಹಾಳೆಗಳನ್ನು ತಿರುಗಿಸಿದಾಗ ಭಾರತಿಗೆ ಕಂಡುದು ತನ್ನ ಗಂಡನ ಅಕ್ಷರಗಳ ಒಂದು ಚೀಟಿ: 'ಅನುಮತಿಯಿಲ್ಲದೆ ಕೆಲವು ಪುಸ್ತಕಗಳನ್ನು ನಾನು ಓದಲು ಪಡೆದಿದ್ದೇನೆ. ತುಂಬ ಧನ್ಯವಾದಗಳು.'

ಅದರ ಕೆಳಗೆ—ಹಿಂದೆ ತನ್ನನ್ನು ಕಲ್ಪನೆಯ ಸಂಭ್ರಮದ ಸಾಮ್ರಾಜ್ಯಕ್ಕೆ ಒಯ್ಯುತ್ತಿದ್ದ ಅನಂತನ ಸಹಿ.

ಈ ಚೀಟಿಯಿಂದ ಭಾರತಿಯ ಮನಸ್ಸಿನಲ್ಲಿ ಮತ್ತೇನು ಪರಿಣಾಮಕಾರಿ ಪ್ರತಿಕ್ರಿಯೆಯಾಗದಿದ್ದರೂ ತನ್ನ ಗಂಡ ಇಂದಿರೆಯನ್ನು ಗೌರವಿಸುತ್ತಾನೆ, ತನಗಿರದಂಥ: ಅವಳ ವಿದ್ವತ್ತಿಗೆ ಮರ್ಯಾದೆ ಕೊಡುತ್ತಿದ್ದಾನೆ ಎಂಬ ಭಾವನೆ ಹೃದಯದಲ್ಲಿ ಮೊಳೆತಿತು.

ಈಗ ಮನೆಯಲ್ಲಿ ಹೊಗೆಯಾಡುತ್ತಿದ್ದ ಮೌನದ, ವಿರಸದ ಜೀವನ ದಲ್ಲಿ, ತನಗೆ ಅಪ್ರಿಯವಾದುದನ್ನೆಲ್ಲ ತನ್ನ ಗಂಡ ತನ್ನನ್ನು ನೋಯಿಸಲೆಂದೆ, ಪ್ರಿಯವಾದುದೆಂದು ಬಗೆದು ನೆಚ್ಚಿಕೊಳ್ಳುತ್ತಿದ್ದಾನೆ, ಎನಿಸಲು ಈ ಕ್ಷುದ್ರ ಘಟನೆ ಕಾರಣವೂ ಆಗಿತ್ತು.

ಅಂಥ ಇಂದಿರೆಗೆ ತನ್ನ ಹೃದಯದ ಆರ್ತನಾದ ಕೇಳೀತೇ?

ಮತ್ತುಳಿದುದು, ದೂರದ ದಿಲ್ಲಿಯಲ್ಲಿರುವ ಸುಶೀಲೆ. ಮುಂಬಯಿಯಲ್ಲಾಗಿದ್ದರೆ ಭಾರತಿ ಓಡಿಹೋಗಿ ಸುಶೀಲೆಯೊಡನೆ ತನ್ನ ಹೃದಯದ ಅಳಲನ್ನು ತಿಳಿಸುತ್ತಿದ್ದಳು. ಆದರೆ ಪತ್ರದಲ್ಲಿ ಕುಟುಂಬದ ದುಃಖವನ್ನು ಅಷ್ಟು ದೂರ ತಲುಪಿಸುವುದು ಸರಿಯೇ ಎಂಬ ಶಂಕೆಯಿಂದಾಗಿ ಭಾರತಿ ಆ ಯೋಚನೆಯನ್ನು ಬಿಡಬೇಕಾಯಿತು.

ತಾನು ಅಸೂಯೆಯಿಂದ ನೋಡುತ್ತಿದ್ದ ಸುನಂದೆಯ ದಾಂಪತ್ಯದ ಸಂಭ್ರಮದ ಮುಂದೆ, ತನ್ನ ದುಃಖವನ್ನು ಆಕೆಯಿದಿರು ಬಣ್ಣಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಉಳಿದುದು ಅಪ್ಪ.

ಆ ಕೆಲಸವನ್ನು ಭಾರತಿ ಮಾಡಿದ್ದಳು. ಆದರೆ ಅದರ ಪ್ರತಿಫಲ?

ಈ ಎಲ್ಲ ದುಃಖದ ನಡುವೆ ಭಾರತಿಯ ಹೃದಯದಲ್ಲಿದ್ದ ಒಂದೇ ಒಂದು ಆಶಾಕಿರಣವೆಂದರೆ ಆಕೆಯ ಚೊಚ್ಚಲು ಸಂಭ್ರಮ.

ಹೊಟ್ಟೆಯಲ್ಲಿ ಬೆಳೆಯುತ್ತಿದ್ದ ಗರ್ಭಪಿಂಡ. ದಿನ ಕಳೆಯುತ್ತಿದ್ದಂತೆಯೇ ಮೈತುಂಬಿಕೊಳ್ಳುತ್ತಿದ್ದ ಕಂದನ ಕೂಸಿನ ಸಂಭ್ರಮ ಭಾರತಿಯ ಹೃದಯದಲ್ಲಿ ಇಂಥ ದುಃಖದ ದಿನಗಳಲ್ಲೂ ಹಿಗ್ಗಿನ ಹಾಡು ಮರುದನಿ ಕೊಡುವಂತೆ ಮಾಡಿತ್ತು. ತನ್ನ ಸಂಶಯ ಪರಿಹಾರವಾಗುವ ತನಕ ಸಂದೇಹ ನಿಜವಾಗುವ ತನಕ ಮೂರು ತಿಂಗಳ ಕಾಲ ಗಂಡನಿಂದಲೂ ಆ ಸತ್ಯವನ್ನು ಮರೆಮಾಚಿದ್ದಳು. ಕೊನೆಗೊಂದು ದಿನ, ಹೃದಯದ ಹಿಗ್ಗನ್ನು ಹಂಚಿಕೊಳ್ಳುವ ಆತುರದಿಂದ ಅನಂತನ ಬಳಿಗೋಡಿದಾಗ, ಆತನಿಂದ ಬಂದ ಜಿಗುಪ್ಸೆಯ ಉತ್ತರ :

'ಇಷ್ಟೆಯೇ !'

ಒಂದು ಕ್ಷಣ, ಭಾರತಿಯ ಮನಸ್ಸಿನ ಗೋಪುರ, ತರಗೆಲೆಯ ಅರಮನೆಯಂತೆ, ಗಾಳಿಯ ಸುಳಿಗೆ ಸಿಕ್ಕು ಕಳಚಿಬಿದ್ದಿತ್ತು. ಪುಟ್ಟ ಕೂಸುಗಳನ್ನು ನೋಡುವಾಗಲೆಲ್ಲ ಎದೆ ಹೊಡೆದುಕೊಳ್ಳುತ್ತಿದ್ದ ಜೀವ. ಆ ತೊದಲಿನಲ್ಲಿ, ಲಾಲಿತ್ಯದಲ್ಲಿ, ಲಾಸ್ಯದಲ್ಲಿ ಭಾರತಿಗೆ ಕಾಣುತ್ತಿದ್ದುದು ಸ್ವರ್ಗ. ತಮ್ಮ ಸದಾ ಹುಟ್ಟಿಕೊಂಡಾಗ, ಇದು ಸಂಭ್ರಮವಾಗಿತ್ತು. ಅತ್ತೆಯ ಮನೆಯಲ್ಲಿಯೂ ಮಗುವನ್ನು ಆಡಿಸುವುದು ಅತ್ಯಂತ ಪ್ರಿಯವಾದ ಕೆಲಸವಾಗಿತ್ತು. ತನ್ನ ಜೀವದ ಗೆಳತಿ ಅತ್ತಿಗೆ ಪಾರ್ವತಿ ತಾಯಿಯಾಗಲಿದ್ದಾಳೆಂದು ತಿಳಿದಾಗ,

ಮೊದಲ ಬಾರಿಗೆ ಹೃದಯದಲ್ಲಿ ಗಂಡನ ವಿರಹದ ಹಿನ್ನೆಲೆಯಲ್ಲಿ ಅಸೂಯೆ ಪ್ರಕಟವಾಗಿತ್ತು. ಮುಂಬಯಿಗೆ ಬಂದಂದಿನಿಂದಲೂ ಆಕೆಯ ಹೃದಯ ದಾಳದಲ್ಲಿ ಹುದುಗಿದ್ದ ಆಸೆ. ಸುಭದ್ರೆಯೊಡನೆ ಆಡುತ್ತ ತಾಸುಗಟ್ಟಲೆ ಕುಳಿತಿರುವುದೂ ಸುಖವೇ ಎಂದು ಆಕೆ ಭಾವಿಸುವಂತೆ ಮಾಡಿದ ಆಸೆ.

ಅಂಥ ಆಸೆಯನ್ನು ಅನಂತ ಹೀಗೆ ಹೀಯಾಳಿಸಿದ್ದ!

ತನ್ನ ದಾಂಪತ್ಯ ಜೀವನದ ಸುಖದ ಅಧ್ಯಾಯವೇ ಅಂದಿಗೆ ಕೊನೆಗೊಂಡಂತೆ ಭಾರತಿಗೆ ತೋರಿತ್ತು. 'ಮನೆ, ಮಡದಿ, ಮಗು, ಯಾವುದೂ ಬೇಕಿರದ, ಓದಿನ ಹುಚ್ಚು ತಲೆಗೇರಿಕೊಂಡ ಒಬ್ಬ ಸನ್ಯಾಸಿಯನ್ನು ನಾನು ಮದುವೆಯಾಗಿದ್ದೇನೆಯೇ?' ಎಂದು ಭಾರತಿ ಮೊದಲ ಬಾರಿಗೆ ತನ್ನನ್ನೇ ತಾನು ಕೇಳಿಕೊಂಡಳು.

ಅಥವಾ ಅನಂತ ತನ್ನನ್ನು ಉಪೇಕ್ಷಿಸುತ್ತಿದ್ದಾನೆಯೆ?

ಇಷ್ಟು ದಿನಗಳ ತಾಳ್ಮೆಯ ಗಡಿ ದಾಟಿ, ಇನ್ನೂ ರೂಪುಗೊಳ್ಳುತ್ತಿದ್ದ ಪಿಂಡದ ಭವಿಷ್ಯವನ್ನು ಸುಗಮವಾಗಿಸಲು ಹೆಣಗುತ್ತೇನೆ, ಎಂದು ಭಾರತಿ ನಿರ್ಧರಿಸಿದಳು. ಆಕೆ ಅನಂತನನ್ನು ನೋಡುವ ರೀತಿಯಲ್ಲಿಯೇ ಗಮನಾರ್ಹ ಬದಲಾವಣೆಯಾಯಿತು. ಹೃದಯದ ಕಳಕಳಿ, ತಾರುಣ್ಯದ ಬಿಸಿ ರಕ್ತ, ವೈಭವದ ಬದುಕಿನ ಆಸೆ, ತಾಯ್ತನದ ಕೆಚ್ಚು ಇವು ಅನಂತನ ಔದಾಸೀನ್ಯವನ್ನು ತಿರಸ್ಕಾರ ದೃಷ್ಟಿಯಿಂದ ನೋಡುವಂತೆ ಮಾಡಿದವು.

ಭಾರತಿ ಗಂಡನಿಗೆ ಇದಿರಾಡತೊಡಗಿದಳು.

ಆದರೂ ಹೃದಯಗರ್ಭದಲ್ಲಿ ಆಸೆಯೊಂದಿತ್ತು: ತನ್ನ ಮಗುವಿನ ಕುಲುಕುಲು ನಗೆ ಈ ಮನೆಯ ವಾತಾವರಣದಲ್ಲಿ ಪ್ರತಿಧ್ವನಿಸುವಾಗ ದುಃಖವೂ ಸುಖವಾಗುತ್ತದೆ; ತನ್ನ ಗಂಡನೂ ಬದಲಾಗುತ್ತಾರೆ, ಎಂದು. ಈಗ ಬರಿದೆಂದು ತೋರುವ ಮನೆ ಮತ್ತೆಯಾದರೂ ತುಂಬಿಕೊಳ್ಳುವುದು ಎಂದು ಭಾರತಿಯ ಅಂತರಾತ್ಮ ಹೇಳುತ್ತಿತ್ತು.

ಆ ಕಾರಣ ಈ ಆಸೆಗೆ ಕಾರಣವಾದ ಮಗು ಆಕೆಗೆ ಇನ್ನಷ್ಟು ಪ್ರಿಯವಾದುದು.

ಭಾರತಿ ತಂದೆಗೆ ಕಾಗದ ಬರೆವಾಗ ಬೇರೆಲ್ಲ ವಿಚಾರಗಳನ್ನು ತಿಳಿಸಿದ್ದರೂ ತಾನು ತಾಯಿಯಾಗಲಿರುವ ಒಂದು ವಿಚಾರವನ್ನು ಮಾತ್ರ ತಿಳಿಸಿರಲಿಲ್ಲ. ಅದಕ್ಕೂ ಕಾರಣವಿತ್ತು: ಮಗಳ ಚೊಚ್ಚಲು ಸಂಭ್ರಮದ ಸುದ್ದಿ ಕೇಳಿದರೆ

ತಾಯಿಯಂತೂ ತನ್ನನ್ನು ಆ ಕೂಡಲೆ ಕರೆಸಿಕೊಳ್ಳದೆ ಇರುವುದಿಲ್ಲ. ಹಾಗೆ ಕೂಡಲೇ ಊರಿಗೆ ಹೋಗುವಂಥ ಪ್ರಸಂಗ ಬಂದೊದಗಿದರೆ ತನ್ನ ಗಂಡನ ಇಂದಿನ ನಿರುದ್ಯೋಗಕ್ಕೆ, ಆತನ ಜೇಲುವಾಸಕ್ಕೆ, ಒಟ್ಟಿನ ದುಃಖದ ಅವಸ್ಥೆಗೆ ಸಾವಿರ ಕಾರಣಗಳನ್ನು ಎಲ್ಲಿಂದ ಸೃಷ್ಟಿಸಿ ಕಂಡವರ ಮುಂದೆ ಹೇಗೆ ಹೇಳಲಿ, ಆಗ ದೊರಕಬಹುದಾದ ಅವಹೇಳನವನ್ನು ಹೇಗೆ ಸಹಿಸಲಿ, ಎಂದು ಆಕೆ ಯೋಚಿಸಬೇಕಿತ್ತು. ಇದೇ ಕಾರಣದಿಂದಾಗಿ, ಗಂಡ ಪುನಃ ಕೆಲಸ ಹಿಡಿಯುವ ವರೆಗೆ ಈ ಸುದ್ದಿಯನ್ನು ಊರಿಗೆ ತಿಳಿಸುವುದಿಲ್ಲವೆಂದು ಆಕೆ ನಿರ್ಧರಿಸಿದ್ದಳು.

ಆದರೂ ಪುಳಕಿಸುವ ಹಿಗ್ಗನ್ನು ಹಂಚಿಕೊಳ್ಳಲು ಗಂಡ ನಿರಾಕರಿಸಿದರೂ ಭಾರತಿ ಸುಮ್ಮನೆ ಕುಳಿತಿರುವುದು ಸಾಧ್ಯವಿತ್ತೇ? ಈ ಹಿಗ್ಗಿಗೆ ಈಗ ಪಾಲು ಗಾರ್ತಿಯಾಗಿ ದೊರಕಿದುದು ಆಕೆಗೆ ಸುಶೀಲೆ.

ಸುಶೀಲೆಗೆ ವರ್ತಮಾನ ದೊರಕಿದೊಡನೆ ಒಂದರ ಹಿಂದೊಂದು ಎರಡು ಮೂರು ಪತ್ರಗಳು ಭಾರತಿಗೆ ಬಂದುವು. ಹತ್ತಾರು ಎಚ್ಚರಿಕೆಯ ಮಾತುಗಳು. ಸ್ನೇಹದ ಸಾವಿರ ಸಲಹೆಗಳು. ಸುಶೀಲೆಯ ಪತ್ರಗಳಲ್ಲಿ ಭಾರತಿಗೆ ಕಂಡುದು ಪ್ರೀತಿಯ ಮಹಾಪೂರ: 'ಜಾಗ್ರತೆ, ಭಾರತೀ. ಹತ್ತಿರ ದೊಡ್ಡವರಾರೂ ಇಲ್ಲವೆಂದು ಉದಾಸೀನ ಮಾಡಬೇಡ. ನಮ್ಮತ್ತೆಯ ಮನೆಗಾದರೂ ಆಗಾಗ ಹೋಗಿ ಬರುತ್ತಿರು. ಒಳ್ಳೆಯ ಡಾಕ್ಟರನ್ನು ನೋಡು. ಸುಭದ್ರೆಯ ಹೆರಿಗೆಯ ಸಮಯ, ತಾಯಿಗಿಂತ ಹೆಚ್ಚಾಗಿ ಅತ್ತೆ ನನ್ನ ಆರೈಕೆ ನೋಡಿದ್ದಾರೆ....'

ತನ್ನ ಗಂಡನ ಜೇಲುವಾಸದ ಸಮಯ, ತಮ್ಮಲ್ಲಿಗೆ ಬಾರದೆ, ಸಂಜೀವ ರಾಯರಲ್ಲಿ ಉಳಿದೆನೆಂದು ಬೇಸರವಿರಬಹುದೆಂದು ತಿಳಿದಿದ್ದರೂ ಸುಶೀಲೆಯ ಪತ್ರದ ಆಧಾರದಿಂದ ಭಾರತಿ ನಾಗೇಶರಾಯರಲ್ಲಿಗೆ ಹೋದಳು.

ಒಮ್ಮಿಂದೊಮ್ಮೆಗೆ ತಿಳಿಸದೆ ಬಂದ ಭಾರತಿಯನ್ನು ಕಂಡು ಮೀನಾಕ್ಷಮ್ಮ ನಿಗೆ ತುಂಬ ಆಶ್ಚರ್ಯವಾಯಿತು. ಆದರೂ ಅವರು ಅದನ್ನು ತೋರಿಸಲಿಲ್ಲ.

"ಏನು, ಭಾರತೀ? ಇಷ್ಟು ದಿನ ಕಳೆದ ಮೇಲಾದರೂ ನೆನಪಾಯಿತೆ?" ಎಂದು ಕೇಳಿದರು.

ಈ ಪ್ರಶ್ನೆಗೆ ಭಾರತಿಯ ಉತ್ತರ ಬರೇ ನಗು. ಆದರೆ ನಗುತ್ತ ನಿಂತಿದ್ದ ಭಾರತಿಯನ್ನು ನೋಡುತ್ತಿದ್ದಂತೆ ಮೀನಾಕ್ಷಮ್ಮನಿಗೆ ಭಾರತಿ ಮೊದಲಿನ ಭಾರತಿಯಲ್ಲ ಎಂದು ತಿಳಿಯಿತು. ಭಾರತಿಯ ತುಂಬಿಕೊಳ್ಳುತ್ತಿದ್ದ ಮೈಯನ್ನು ಗಮನಿಸಿ 'ಈಕೆ ತಾಯಿಯಾಗಲಿದ್ದಾಳೆ' ಎಂದು ಯಾರೂ ಈಗ

ಹೇಳುವಂತಿರಲಿಲ್ಲವಾದರೂ ಮೀನಾಕ್ಷಮ್ಮನ ದೃಷ್ಟಿಗೆ ಮಾತ್ರ ಈ ಸತ್ಯ ಹೊಳೆಯಲು ಹೆಚ್ಚು ಅವಕಾಶ ಬೇಕಾಗಿರಲಿಲ್ಲ.

"ಊರಿಗೆ ಹೋಗುವ ನಿಶ್ಚಯ ಮಾಡಿರುವಿಯೇನು ? ಹೇಳಿ ಹೋಗಲು ಬಂದೆಯಾ ?" ಎಂದು ನಗುತ್ತಲೇ ಕೇಳಿದರು.

ತಾನು ಹೇಗೆ ಈ ವಿಚಾರ ಪ್ರಸ್ತಾಪಿಸಲಿ, ಮಾತು ಹೇಗೆ ಆರಂಭಿಸಲಿ ಎಂದು ಹೆದರಿಕೊಂಡಿದ್ದ ಭಾರತಿಗೆ ಮೀನಾಕ್ಷಮ್ಮನ ಮಾತು ಕೇಳಿ ಆಶ್ಚರ್ಯದ ಜೊತೆಗೆ ಸಮಾಧಾನವೂ ಆಯಿತು.

"ಇಲ್ಲವಪ್ಪ. ಇಷ್ಟು ಬೇಗನೆ? ನಾನಿನ್ನೂ ಮನೆಗೆ ಕೂಡ ತಿಳಿಸಿಲ್ಲ."

"ಯಾಕೆ, ನಾಚಿಕೆಯಾಗುವುದೇನು ? ನಿನ್ನ ಗಂಡನಾದರೂ ಬರೆಯ ಬಾರದೆ ?"

ಗಂಡನಾದರೂ ಬರೆಯಬಾರದೆ? ಭಾರತಿ ಮನಸ್ಸಿನಲ್ಲೆ ಯೋಚಿಸಿದಳು. 'ಇಲ್ಲಿಯೇ ಈ ಸಂಭ್ರಮ ತೀರಬೇಕೇನು ?' ಎಂದು ಆತ ಕೇಳಿದ್ದ ಪ್ರಶ್ನೆಗೆ, 'ತೀರದಿದ್ದರೆ, ನಾನಾದರೂ ತೀರಿಕೊಳ್ಳುತ್ತೇನೆ' ಎಂದು ಸಿಡುಕಿನ ಉತ್ತರ ಕೊಟ್ಟಿದ್ದಳು.

ಅನಂತ ಮನೆಗೆ ಏನಾದರೂ ಬರೆದಿರಬಹುದೆ? ತಾನು ಕೇಳುವ ಹವ್ಯಾಸಕ್ಕೆ ಮನಗೊಟ್ಟಿರಲಿಲ್ಲ. ಆ ಆತ್ಮೀಯತೆ ಸದ್ಯಕ್ಕಾದರೂ ಇರಲಿಲ್ಲ.

"ನಾಚಿಕೆಯೇನು ! ಇಷ್ಟು ಬೇಗ ಬರೆದೇನು ಮಾಡುವುದು ?"

"ಬೇಗ ! ಎಷ್ಟು ತಿಂಗಳಾಯಿತು ?"

"ನಾಲ್ಕು."

"ಮೊದಲ ಬಸುರಿ. ಸಾಧ್ಯವಾದಷ್ಟು ಬೇಗ ಊರು ಸೇರಿಕೊಳ್ಳುವುದು ಒಳ್ಳೆಯದಲ್ಲವೇನಮ್ಮ ? ಅದೂ ನಿಮ್ಮ ಊರೋ ! ಬಸ್ಸಿನ ಹಾದಿ."

"ಹೌದು. ಸುಶೀಲಕ್ಕನ ಕಾಗದವೂ ಬಂದಿತ್ತು. ಅತ್ತೆಯನ್ನು ನೋಡು. ಇಲ್ಲಿ, ಮುಂಬಯಿಯಲ್ಲಿ ದೊಡ್ಡವರು ಯಾರೂ ಹತ್ತಿರವಿಲ್ಲವೆಂದು ಅಲಕ್ಷ್ಯ ಮಾಡಬೇಡ, ಎಂದು ಬರೆದಿದ್ದಾರೆ."

"ಹೌದೆ ? ಸುಶೀಲ ಕಾಗದ ಬರೆದಿದ್ದಾಳೆಯೆ ? ಆ ನೆಪದಿಂದಲಾದರೂ ನೀನು ಬಂದಿಯಲ್ಲ ?"

ಭಾರತಿ ಮುಖವೆತ್ತಿ ಮೀನಾಕ್ಷಮ್ಮನೆಡೆ ನೋಡಿದಳು. ಅವರ ಕೊನೆಯ ಮಾತಿನ ಹಿಂದಿನ ವ್ಯಂಗ್ಯವನ್ನು ಆಕೆ ಗಮನಿಸದಿರುವಂತಿರಲಿಲ್ಲ.

"ಯಾಕೆ? ನಾನು ಈ ಹಿಂದೆ ಬಂದಿಲ್ಲವೆ?"

"ಬಂದಿದ್ದಿಯಪ್ಪ. ಬರಲಿಲ್ಲವೆಂದು ಹೇಳಿದೆನೆ? ಆದರೆ ಕಷ್ಟಕಾಲದಲ್ಲಿ ನಿನಗೆ ನಮ್ಮ ನೆನಪೆಲ್ಲಿ ಆಗುತ್ತದೆ. ಬೇಡವಾದ ಉಪದ್ವ್ಯಾಪ ಕಟ್ಟಿಕೊಂಡು ಗಂಡ ಏನೇನು ಅವಸ್ಥೆ ಪಟ್ಟರೆ ಆಗ ನಿನಗೆ ನಮ್ಮ ಮನೆಯು ನೆನಪಾಗಲಿಲ್ಲ. ಕಂಡವರ ಮನೆಯೇ ಬೇಕಾಯಿತು."

ಮೀನಾಕ್ಷಮ್ಮನ ಮಾತಿನಲ್ಲಿ, ಸಂಜೀವರಾಯರ ಮನೆಯ ಕುರಿತಾದ ತಿರಸ್ಕಾರ ಸ್ಪಷ್ಟವಾಗಿ ಪ್ರಕಟವಾಗಿತ್ತು. ಈ ಎರಡು ಮನೆಗಳಲ್ಲಿ ಆತ್ಮೀಯ ಬಂಧುತ್ವವಿದೆ, ಆ ಕಾರಣ, ತಾನು ಮೊದಲ ಪರಿಚಯದ ಮನೆಯನ್ನು ಕಷ್ಟ ಕಾಲದಲ್ಲಿ ಆರಿಸಲಿಲ್ಲವೆಂದಷ್ಟೆ ಅಸಮಾಧಾನವಿರಬಹುದೆಂದು ಬಗೆದಿದ್ದ ಭಾರತಿಗೆ, ಇಂದಿರೆಯ ಮನೆ 'ಕಂಡವರ ಮನೆ'ಯೆಂದು ಮೀನಾಕ್ಷಮ್ಮ ಬಣ್ಣಿಸಿದಾಗ ಆದ ಆಶ್ಚರ್ಯ ಅಷ್ಟಿಷ್ಟಲ್ಲ. ಈ ಗಲಿಬಿಲಿಯಿಂದಾಗಿ ಆಕೆಗೆ ಯಾವ ರೀತಿಯ ಉತ್ತರ ಕೊಡಬೇಕೆಂದು ಮೊದಲು ತಿಳಿಯಲಿಲ್ಲ.

"ಇಂದಿರಕ್ಕ ಮಧ್ಯರಾತ್ರಿಗೆ ಬಂದು ಕರೆದರು...."

"ಹೌದು. ನಿನ್ನ ಗಂಡ ಜೇಲಿಗೆ ಹೋಗುವರೆಂದು ನಮಗೇನು ಕನಸ್ಸು ಬಿದ್ದಿತ್ತೇ? ತಿಳಿದಿದ್ದರೆ ನಾವು ಬರುತ್ತಿರಲಿಲ್ಲವೆ? ಆದರೆ ನಿನ್ನ ಗಂಡನಿಗೆ ನಮ್ಮ ಮನೆಯವರ ಗುರುತು ಹೇಗಿರಬೇಕು?

"ಅವರಿಗೆ ತಿಳಿಸಲಿಕ್ಕಾಗಲಿಲ್ಲ. ಯಾರೋ ಅವರ ಸ್ನೇಹಿತರು ಬಂದು ಇಂದಿರಕ್ಕನ ಮನೆಯಲ್ಲಿ ತಿಳಿಸಿದರಂತೆ. ಹಾಗಾಗಿ ಅವರು ಓಡಿಬಂದರು."

"ಹೌದು. ಹಾಗೆ ತಿಳಿಸುವವರಿಗೆ ನಮ್ಮಲ್ಲಿಯೂ ತಿಳಿಸಬಹುದಾಗಿತ್ತು. ಏನೋ, ಬೇಡವಾದ ವೇಷ ಕಟ್ಟಿಕೊಂಡು ಕುಣಿಯುವ ಹುಚ್ಚು ಬಿಟ್ಟಿದ್ದರೆ ಜೇಲಿನ ತನಕವೂ ಹೋಗಬೇಕಾದ ಪ್ರಸಂಗ ಬರುತ್ತಿರಲಿಲ್ಲವಂತೆ. ಆದರೆ ಈಗ ಹೇಳಿದೆನಲ್ಲ, ನಮ್ಮ ಪರಿಚಯವಿದ್ದರಲ್ಲವೆ? ಪರಿಚಯವಿದ್ದ ಮನೆಗಿಂತ, ಯಾರದೋ...."

ಈಗ ಮೀನಾಕ್ಷಮ್ಮನನ್ನು ತಡೆಯುವುದು ಭಾರತಿಯ ಸರದಿಯಾಯಿತು.

"ಇಂದಿರಕ್ಕ ಹೇಳಿದರು: ಸಂಕೋಚವಾದರೆ ನಾಗೇಶರಾಯರಲ್ಲಿಗೆ ಕರೆದುಕೊಂಡು ಹೋಗಿ ಬಿಡುತ್ತೇನೆ, ಎಂದು. ಆದರೆ ನಿಮಗೆಲ್ಲ ಅಷ್ಟು ಅನ್ಯೋನ್ಯವಿರುವಾಗ ಎಲ್ಲಿದ್ದರೇನು ಎಂದು ಅಲ್ಲಿಯೇ ನಿಂತೆ."

"ಅನ್ಯೋನ್ಯ!" ಮೀನಾಕ್ಷಮ್ಮನ ಆ ಒಂದು ಶಬ್ದದಲ್ಲಿ ತಿರಸ್ಕಾರದ ಒಂದು ವಿಶ್ವವೇ ಅಡಗಿದಂತಿತ್ತು.

"ಅವರಲ್ಲಿ ಅನ್ಯೋನ್ಯ! ಅವ್ರೊತ್ತು ಜೊತೆಗೆ ಬಂದದ್ದು ಕೂಡ ಸುಶೀಲೆಯ ಒತ್ತಾಯಕ್ಕಾಗಿ ಅಷ್ಟು ಅನ್ಯೋನ್ಯವಿದ್ದವಳಾದರೆ ಇಷ್ಟು ಸಮೀಪವಿರುವಾಗ ಒಂದು ದಿನವಾದರೂ ನಿನ್ನನ್ನು ಇಲ್ಲಿಯತನಕ ಕರೆದು ಕೊಂಡು ಬರಬಾರದಿತ್ತೆ, ಆ ಜಂಬದ ಕೋಳಿಗೆ?"

ಇಂದಿರೆ—ಜಂಬದ ಕೋಳಿ!

ಭಾರತಿ ಮೀನಾಕ್ಷಮ್ಮನ ಮಾತುಗಳನ್ನೆ ಮತ್ತೆ ಮತ್ತೆ ಮೆಲಕು ಹಾಕು ತ್ತಿದ್ದಳು. ಇಂದಿರೆಗೆ ತನ್ನನ್ನು ಒಂದು ದಿನವಾದರೂ ನಾಗೇಶರಾಯರಲ್ಲಿಗೆ ಕರೆದುಕೊಂಡು ಬರಬಹುದಿತ್ತು. ಆದರೆ ಅವಳು ಹಾಗೆ ಮಾಡಲಿಲ್ಲ. ಯಾಕೆ?

ತಾನೊಬ್ಬಳೇ ಆದರೂ ಬರಬಾರದಿತ್ತೇ, ಎಂದು ಭಾರತಿ ಯೋಚಿಸಲಿಲ್ಲ.

ಹಾಗಾದರೆ ಸ್ನೇಹಮಯೀ ಮೂರ್ತಿಯೆಂದು ತಾನು ಭಾವಿಸಿದ್ದ ಇಂದಿರೆಯ ಹೃದಯವೂ ಒಂದು ದ್ವೇಷದ ಸಾಗರವೆ?

ತನ್ನ ಗಂಡನಿಂದ ತನಗೆ ದೊರಕಿದ್ದ ನೋವಿನ ಹಿನ್ನೆಲೆಯಲ್ಲಿ, ಆತನಿಗೆ ಪ್ರಿಯವಾದ ಪಾಂಡಿತ್ಯದ ಕುರಿತು ಅಭಿಮಾನವಿರುವ ಇಂದಿರೆಯ ಯಾವುದೇ ದೋಷವನ್ನು ಹಿಗ್ಗಿಸಿ ಹಿರಿದಾಗಿಸುವುದರಲ್ಲಿ ತಾನೊಂದು ವಿಚಿತ್ರ ಸಮಾಧಾನ ವನ್ನು ಪಡೆಯುತ್ತಿರುವೆನೇ ಎಂದು ಭಾರತಿ ಯೋಚಿಸಲಿಲ್ಲ.

"ನನಗೆ ತಿಳಿದಿರಲಿಲ್ಲ, ಮೀನಾಕ್ಷಮ್ಮ" ಎಂದು ತಲೆತಗ್ಗಿಸಿ ಹೇಳಿದಳು.

ಭಾರತಿಗೆಂದು ತಯಾರಿಸಿದ ಕಾಫಿಯ ಲೋಟವನ್ನು ಆಕೆಯ ಮುಂದಿರಿಸಿ, ಭಾರತಿಯ ಬೆನ್ನು ಸವರುತ್ತ ಮೀನಾಕ್ಷಮ್ಮ, ಭಾರತಿ ತನ್ನ ಅಭಿಪ್ರಾಯದ ಸಮರ್ಥನೆಯ ಹಾದಿಗೆ ಬರುತ್ತಿರುವಳೆಂದು ತಿಳಿದು ಹೇಳಿದರು:

"ನಿನಗೆ ಹೇಗೆ ತಿಳಿದೀತಮ್ಮ? ಅದೆಲ್ಲ ಹಳೆಯ ಕತೆ. ತನ್ನ ಗುಣ ಅಷ್ಟು ಒಳ್ಳೆಯದಾದುದರಿಂದಲ್ಲವೆ, ಆ ಗಂಡುಬೀರಿ, ಈ ವಯಸ್ಸಿನಲ್ಲೆ ತನ್ನ ಗಂಡನನ್ನು ಕಳೆದುಕೊಂಡದ್ದು?"

ಭಾರತಿ ಭೂಗರ್ಭದೊಳಗಣ ಜ್ವಾಲಾಮುಖಿಯ ಶೋಧನೆಗೆ ತೊಡ ಗಿದ್ದಳು. ಆಕೆಯ ಮನೆಗೆ ಕೆಲವು ತಿಂಗಳುಗಳ ಹಿಂದೆ ಬಂದು ಒಂದು ದಿನ ಸಂತೋಷದಲ್ಲಿ ಕಳೆದ ಅತಿಥಿಗಳು. ಆಕೆ ಅವರೊಳಗಿದೆಯೆಂದು ಬಗೆದ ಐಕ್ಯ ಹಾಗೂ ಸ್ನೇಹ!

ಈಗ ಮೀನಾಕ್ಷಮ್ಮನ ಮಾತುಗಳ ಹಿಂದಿರಬಹುದಾದ ಎರಡು ಕುಟುಂಬಗಳ ದ್ವೇಷದ ಕತೆ.

'ನಿನಗೆ ತಿಳಿದಿಲ್ಲ, ಭಾರತೀ' ಎಂದು ಹೇಳಿದ ಮೀನಾಕ್ಷಮ್ಮ ತನಗೆ ತಿಳಿದುದನ್ನು ಚಿಂತಿಸಿಕೊಳ್ಳುತ್ತಿದ್ದರು. ಆ ಚಿಂತನೆಯಂತೆ ಇಂದಿರೆ ವಿಶ್ವನಾಥ ನನ್ನು ಮದುವೆಯಾಗಲು ನಿರಾಕರಿಸಿ ನಾಗೇಶರಾಯರ ಮನೆತನವನ್ನೇ ಅವಮಾನಗೊಳಿಸಿದಾಕೆ. ತಾನು ಜೀವಕ್ಕಿಂತ ಹೆಚ್ಚು ಪ್ರೀತಿಸುವ ತನ್ನ ಮಗು 'ವಿಶ್ವ,' 'ನಾನು ಮದುವೆಯಾಗುವುದಾದರೆ ಇಂದುವನ್ನು ಮಾತ್ರ, ಅಮ್ಮ' ಎಂದು ಕೂಗಿಕೊಂಡುದನ್ನು ನೆನೆಸಿಕೊಂಡು, ಇಂದಿರೆಯ ಮನಸ್ಸನ್ನು ತಿರುಗಿಸಲು ಪ್ರಯತ್ನಿಸಿ ವಿಫಲರಾದಾಗ, ತನ್ನ ಮಗುವಿಗಾದ ನೋವು ತನ್ನ ನೋವೆಂದು ತಿಳಿದು ಇಂಥ ನೋವಿಗೆ ಕಾರಣಳಾದ ಹುಡುಗಿಯನ್ನು ದ್ವೇಷಿಸತೊಡಗಿ ಜಗತ್ತಿನಲ್ಲಿ ಅತ್ಯಂತ ಸ್ವಾಭಾವಿಕವಾದ ಕೆಲಸವನ್ನೆ ಮಾಡಿದೆ ಎಂದು ಭಾವಿಸಿಕೊಂಡಿದ್ದ ಮೀನಾಕ್ಷಮ್ಮನ ದೃಷ್ಟಿಯಲ್ಲಿ ಇಂದಿರೆ ಎಂದೆಂದಿಗೂ ಮಹಾಪರಾಧಿ. ಅಂಥ ಇಂದಿರೆಯ ತಂದೆ ಸಂಜೀವರಾಯರು. ವ್ಯಾಪಾರ ವಹಿವಾಟುಗಳಲ್ಲಲ್ಲದೆ, ರಾಜಕಾರಣದಲ್ಲೂ ಮೊನ್ನೆ ಮೊನ್ನೆಯ ತನಕ, ಹುಡುಗಿಯ ಹುಚ್ಚಿಗೆ ಸರಿಯಾಗಿ ದೊರಕಿದ ಗಂಡ ಗುಂಡು ತಾಗಿ ಸಾಯುವ ತನಕ, ತನ್ನ ಗಂಡನಿಗೆ ಪ್ರತಿಸ್ಪರ್ಧಿಯಾಗಿದ್ದವರು.

ಅಂಥವರ ಕುರಿತು ಅಭಿಮಾನವೆಲ್ಲಿಂದ ಬಂತು ?

"ನೋಡಲಿಕ್ಕೆ ಮಹಾ ಸಾಧ್ವಿ. ಉಡುವುದು ಖಾದಿಯೆ. ಆದರೆ ಕಾಶಿಯಿಂದ ರಾಮೇಶ್ವರದ ತನಕ ಬೇಕಾದರೂ ಒಬ್ಬಳೇ ತಿರುಗಿ ಬರುತ್ತಾಳೆ. ಗಂಡ ಸತ್ತ ಹುಡುಗಿಗೆ ಇದೆಲ್ಲ ಚಂದವೇನಮ್ಮ?"

ಭಾರತಿ, ಇದೆಲ್ಲ ಚಂದವೇನು ? ಎಂದು ಚಿಂತಿಸುತ್ತಿರಲಿಲ್ಲ. ಇಂದಿರೆಯ ಮನಸ್ಸು ತಿಳಿಯಾದುದು, ಕಾಪಟ್ಯರಹಿತವಾದುದು ಎಂದಾಕೆ ಭಾವಿಸಿದ್ದಳು. ಆ ಭಾವನೆ ಸುಳ್ಳೆ? ಎಂದು ಆಕೆ ಈಗ ಚಿಂತಿಸಬೇಕಾಗಿ ಬಂತು.

"ಸಣ್ಣವಳಿದ್ದಾಗ ಎಷ್ಟು ಚೆನ್ನಾಗಿ ಆಡಿಕೊಂಡಿದ್ದ ಮಗು. ಆದರೆ ಬೆಳೆದು ದೊಡ್ಡವಳಾದಾಗ ಈ ರೀತಿಯಾಗುವಳೆಂದು ಯಾರಾದರೂ ಯೋಚಿಸಿದ್ದರೆ? ಒಮ್ಮೆ ನಮ್ಮ ವಿಶ್ವನಿಗೆ ಅವಳನ್ನೇ ತರುವ ಯೋಚನೆಯಿತ್ತು. ಪುಣ್ಯಕ್ಕೆ ತರಲಿಲ್ಲ."

ಈಗ ಭಾರತಿಯ ಆಸಕ್ತಿ ಚಿಗುರಲು ಆರಂಭ.

"ಹಾಗೇನು ?"

"ವಿಶ್ವನಿಗೂ ಆ ಮನೆತನದ ಸಂಬಂಧ ಬೆಳೆಸಬೇಕೆಂಬ ಆಸೆಯಿತ್ತು. ಆದರೆ ನಮಗೆ ಮನಸ್ಸಿರಲಿಲ್ಲ. ಹೀಗಾಗಿ ಅವನೂ ಆ ಯೋಚನೆ ಬಿಟ್ಟ. ಅವನಿಗೆ ಮತ್ತೆ ಚಿನ್ನದಂಥ ಹುಡುಗಿ ಸಿಕ್ಕಿದಳು, ಬಿಡು. ಈಗ ನೋಡುವಾಗ, ಆ ಅವಲಕ್ಷಣ ನಮ್ಮ ಮನೆಗೆ ಕಾಲಿಡದಿದ್ದುದೇ ಒಳ್ಳೆಯದಾಯಿತೆಂದು ತೋರುತ್ತದೆ."

ಭಾರತಿ ತದೇಕಚಿತ್ತಳಾಗಿ ಮೀನಾಕ್ಷಮ್ಮನ ಮಾತುಗಳನ್ನು ಕೇಳು ತ್ತಿದ್ದಳು. ತನ್ನ ಮಾತುಗಳು ಭಾರತಿಯ ಮೇಲೆ ತುಂಬ ಪರಿಣಾಮ ಮಾಡು ತ್ತಿವೆಯೆಂದು ತಿಳಿದು ಮೀನಾಕ್ಷಮ್ಮನಿಗಾದ ಸಂತೋಷ ಅಷ್ಟಿಷ್ಟಲ್ಲ.

"ಆ ಹುಡುಗಿಯ ಮದುವೆಯ ಹಿಂದೆಯೂ ಏನೇನೋ ಕತೆಯಿದೆಯಂತೆ. ಅವನ್ನೆಲ್ಲ ಕಟ್ಟಿಕೊಂಡು ನಮಗೇನು ಮಾಡಬೇಕಾಗಿದೆ? ಗಂಡ ತೀರಿದ ಮೇಲೂ ಆ ಹುಡುಗಿ ನಡೆದುಕೊಳ್ಳುವ ರೀತಿಯನ್ನು ನೋಡಿದಾಗ ಅವಳ ಯೋಗ್ಯತೆ ತಿಳಿಯುವುದಿಲ್ಲವೆ ? ಇನ್ನು ಯಾರ ಮೇಲೆ ತನ್ನ ಸಂಭಾವಿತತನದ ಮಂಕುಬೂದಿ ಎರಚಬೇಕಾಗಿದೆಯೊ ?"

ಭಾರತಿ ಮತ್ತು ಆಕೆಯ ಗಂಡ ತಮ್ಮನ್ನು ಆಶ್ರಯಿಸಲಿಲ್ಲವಲ್ಲ, ಅನಂತ ರಾಯರು ತನ್ನ ಗಂಡನ ಮುಂದೆ 'ದೇಹಿ' ಎನ್ನಲಿಲ್ಲವಲ್ಲ, ಎಂಬ ಅತೃಪ್ತಿ ಯಿಂದ ಸಿಡಿದೆದ್ದು, ಇಂದಿರೆಯ ಕುರಿತು ಸ್ವಾಭಾವಿಕವಾಗಿ ವಿಶ್ವನಾಥನ ಮದುವೆಯ ಪ್ರಸಂಗದಿಂದಾಗಿ ಬಂದ ತಿರಸ್ಕಾರವನ್ನು ಭಾರತಿಗೆ 'ನಿನ್ನ ಗಂಡ ಹಿಡಿದಿರುವ ದಾರಿ ತಪ್ಪು. ನೀವು ಆಶ್ರಯಿಸಿರುವ ಜನ ಸಂಭಾವಿತರಲ್ಲ' ಎಂದು ಬೋಧಿಸಲು ಮೀನಾಕ್ಷಮ್ಮ ಸರಿಯಾಗಿ ಉಪಯೋಗಿಸಿಕೊಂಡರು.

ಅವರ ಮಾತು ಮುಗಿದರೂ ಭಾರತಿ ಯೋಚಿಸುವುದು ನಿಂತಿರಲಿಲ್ಲ: 'ಇಂದಿರೆ ಅಂಥ ಹುಡುಗಿಯೇ ?'

ಇಂದಿರೆಯ ಪುಸ್ತಕ ಭಂಡಾರದಲ್ಲಿ ದೊರಕಿದ ಚಿಕ್ಕದೊಂದು ಕಾಗದ, ಈಗ ದೊಡ್ಡ ಸ್ವರೂಪ ತಳೆದು ಕಣ್ಣಮುಂದೆ ನಿಂತಿತ್ತು :

'ಇನ್ನು ಯಾರ ಮೇಲೆ ತನ್ನ ಸಂಭಾವಿತತನದ ಮಂಕುಬೂದಿ ಎರಚ ಬೇಕಾಗಿದೆಯೊ ?'

ತನ್ನ ಗಂಡನ ಬಂಧನದ ವಿಚಾರ ತನಗಿಂತ ಮೊದಲು ಇಂದಿರೆಗೇಕೆ ವರ್ತಮಾನ ತಲುಪಿತು ? ಆಕೆಯೇಕೆ ನಡುರಾತ್ರಿಗೆ ಮನೆಗೆ ಬಂದು ತನ್ನನ್ನು ಕರೆದಳು ?

ಬಿಡುಗಡೆಯ ದಿನ, ಇಂದಿರೆಯ ಮನೆಯ ಹೊಸ್ತಿಲಲ್ಲಿ ನಿಂತು ಎವೆಯಿಕ್ಕದೆ ಆಕೆಯನ್ನು ನೋಡುತ್ತಿದ್ದ ಅನಂತ ಒಂದು ಕ್ಷಣ ಭಾರತಿಯ ಸ್ಮೃತಿ ಪಥದಿದಿರು ಬಂದ.

ತನ್ನ ಮೇಲಿನ ಉದಾಸೀನತೆಗೆ ಅನಂತನಿಗೆ ಬೇರೆ ಯಾವುದಾದರೂ ಕಾರಣವಿದೆಯೆ? ಹೆಂಡತಿಯ ಕುರಿತು ಉದಾಸೀನನಾಗಿ ಹೊರಗಿನ ಸ್ನೇಹಕ್ಕೆ ಅನಂತ ಬೆಲೆ ಕೊಟ್ಟಿದ್ದಾನೆಯೆ?

ಇಲ್ಲವಾದರೆ ತನ್ನ ಗಂಡನಿಗೆ, ತನ್ನ ಕುರಿತು, ತನ್ನ ಮಗುವಿನ ಕುರಿತು ಏಕಿಷ್ಟು ತಿರಸ್ಕಾರ?

ಯಾಕೆ? ಯಾಕೆ!! ಯಾಕೆ!!!

ಭಾರತಿ ಬೆವರಲಾರಂಭಿಸಿದ್ದಳು. "ಸೆಕೆಯಾಗುತ್ತದೆ, ಮೀನಾಕ್ಷಮ್ಮ" ಎಂದು ನಡುಗುವ ದನಿಯಲ್ಲಿ ಹೇಳಿದಳು. ಭಾರತಿಯನ್ನು ಮುಸುಕಿದ ವಿಚಿತ್ರ ಮೌನಕ್ಕೆ ಯಾವ ಸ್ಪಷ್ಟ ಅರ್ಥವನ್ನೂ ಮೀನಾಕ್ಷಮ್ಮ ಕಲ್ಪಿಸಲು ಅಸಮರ್ಥರಾದರೂ ತಮ್ಮ ಕತೆ ಏನೋ ಪರಿಣಾಮ ಮಾಡಿದೆಯೆಂದು ಅವರಿಗೆ ತಿಳಿಯಿತು. ಅದರಿಂದಲೆ ಅವರಿಗೆ ತೃಪ್ತಿ.

ಮತ್ತರ್ಧ ಘಂಟೆಯಲ್ಲಿ ನಾಗೇಶರಾಯರು ಬಂದರು. ಅವರಿಗೂ ಭಾರತಿಯನ್ನು ಕಂಡು ಎಲ್ಲಿಲ್ಲದ ಆಶ್ಚರ್ಯ. ಮತ್ತೆ ಅವರು ಮಾತನಾಡು ವಾಗಲೂ ಅನಂತನ ವರ್ತನೆಯ ಕುರಿತಾದ ತಿರಸ್ಕಾರ. ಅವನು ಅನುಸರಿಸಿರುವ ದಾರಿಯ ಕುರಿತು ಅಪನಂಬಿಕೆ. ಪುಣ್ಯಕ್ಕೆ ಅವರು ಸಂಜೀವರಾಯರ ಮನೆತನದ ಕುರಿತು ಯಾವ ಮಾತೂ ಆಡಲಿಲ್ಲ. ಅನಂತನ ಜೇಲುವಾಸದ ಅವಧಿಯಲ್ಲಿ, ಸಂಜೀವರಾಯರಲ್ಲಿ ನಿಲ್ಲುವುದರ ಬದಲು ತಮ್ಮಲ್ಲಿಗೆ ಬರಬಹುದಿತ್ತು ಎಂದಷ್ಟೆ ಸೂಚಿಸಿ, ಮಾತನ್ನು ಬೇರೆ ಕಡೆ ತಿರುಗಿಸಿದ್ದರು.

ಭಾರತಿ ಹೊರಡುವ ಹೊತ್ತು ಬಂದಾಗ, ಗರ್ಭಿಣಿ ಅನುಸರಿಸಬೇಕಾದ ಅನ್ನಪಾನಾದಿಗಳ ನಿಯಮದ ಬಗೆಗೆ ಮೀನಾಕ್ಷಮ್ಮ ಹತ್ತೆಂಟು ಸಲಹೆ ಹೇಳಿದರು. ಆದರೆ ಭಾರತಿಗೆ ಅವು ಯಾವುವೂ ಕೇಳಿಸಲಿಲ್ಲ. ಅವುಗಳನ್ನು ಕೇಳುವ ಇಚ್ಛೆಯೂ ಆಕೆಗಿರಲಿಲ್ಲ. ಆಕೆಯ ತಲೆಯಲ್ಲಿ ಸುಳಿಯುತ್ತಿದ್ದ ವಿಚಾರ ಒಂದೇ.

ಅನಂತ ತನ್ನನ್ನು ಉಪೇಕ್ಷಿಸಲು ಬೇರೆ ಏನಾದರೂ ಕಾರಣವಿದೆಯೆ?

ಅನಂತ ತನ್ನ ಮಗುವಿನ ಕುರಿತು ಅಂಥ ತಾತ್ಸಾರ ಮನೋಭಾವವನ್ನು ತಳೆಯಲು ಬೇರೆ ಯಾರಾದರೂ ಕಾರಣರೆ ?

ಇಂದಿರೆ !

ಮನೆಯಿಂದ ಹೊರಡುವಾಗಲೂ ಮನಸ್ಸು ಭಾರವಾಗಿತ್ತು. ಮನೆಗೆ ಮರಳುವಾಗ ಹೃದಯದ ತುಂಬ ಇದ್ದುದು ಕಾರ್ಗತ್ತಲೆ.

ಚೇತರಿಸಿಕೊಳ್ಳಲು ಸಿದ್ಧತೆ ನಡೆಸುತ್ತಿದ್ದ ಹೊಟ್ಟೆಯೊಳಗಿನ ಪುಟ್ಟ ಕೂಸು ಕೂಡ ಆಕೆಗೆ ಒಂದು ಆಸೆಯ ಕಿರಣವನ್ನು ತೋರಿಸಲು ಈಗ ಸಮರ್ಥನಾಗಲಿಲ್ಲ.

೨೮

ಮುಂಬಯಿಯಲ್ಲಿ ಚಳಿಯ ಕಳೆ ಮುಗಿದಿದೆ. ಮತ್ತೆ ಸೆಕೆಯ ದಿನಗಳು ಆರಂಭವಾಗಿವೆ. ಕುದಿಯುವ ಸಮುದ್ರದಿಂದ ಬೀಸುವ ಉರಿಗಾಳಿ. ಪರಿಮಿತಿಯಿಲ್ಲದ ಜನಸಾಂದ್ರತೆಯಿಂದಾಗಿ ಬೆವರಿನ ಮಹಾಪೂರವೇ ಹರಿದು ಹೊಲೆಗೆಟ್ಟಿದ್ದ ಶಹರ ; ಉರಿಯ ದಿನಗಳಲ್ಲಿ ನರಕ.

ಅನಂತ ತುಂಬ ದಣಿದಿದ್ದ. ಮೂರು ಘಂಟೆಗಳ ಕಾಲ ಈ ಉರಿಯಲ್ಲೇ ಶಹರ ಸುತ್ತಿ ಬಂದಿದ್ದ. ಕಳೆದ ಎರಡು ತಿಂಗಳುಗಳಿಂದ ಯಾವ ತಡೆಯೂ ಇಲ್ಲದೆ ಸರಾಗವಾಗಿ ಮುಂದುವರಿದಿದ್ದ ನಿತ್ಯ ನಿಯಮ. 'ನಿಮ್ಮಲ್ಲಿ ಕೆಲಸ ಖಾಲಿಯಿದೆಯೆಂದು ತಿಳಿದೆ, ನಿಮ್ಮಲ್ಲಿ ಜನಗಳ ಅಗತ್ಯವಿದೆಯೆಂದು ತಿಳಿದೆ, ನಿಮಗೆ ಕಾರಕೂನರು ಬೇಕಾಗಿದ್ದರೆಂದು ತಿಳಿದೆ.' ಒಂದೇ ಪಲ್ಲವಿ ; ಹಾಡುವ ರೀತಿ ಮಾತ್ರ ಆವರಣಕ್ಕೆ ತಕ್ಕಂತೆ.

ಆದರೆ ಈ ಸಂಗೀತ ಪ್ರಯೋಜನಕಾರಿಯಾಗಲಿಲ್ಲ. ಬಹಳ ಕಡೆಗಳಲ್ಲಿ, 'ಇಲ್ಲ. ನಮ್ಮಲ್ಲಿ ಏನೂ ಇಲ್ಲ' ಉತ್ತರವೇ ದೊಡ್ಡ ಅಕ್ಷರಗಳ ಹಲಗೆಗಳ ಮೂಲಕ ಸಿದ್ಧವಾಗಿರುತ್ತದೆ. ಉಳಿದೆಡೆ 'ಟೈಮ್ಸ್' ಜಾಹೀರಾತು ಏನಾದರೂ ಪರಿಣಾಮ ಮಾಡಿ, ಅಧಿಕಾರಿಗಳ ಸಂದರ್ಶನದ ಸೌಭಾಗ್ಯ ಅನಂತನಿಗೆ ದೊರಕಿದರೆ, 'ನೀವು 'ಎವರೆಸ್ಟ್' ಗ್ರೂಪ್ ಯೂನಿಯನ್‌ನ ಅನಂತ ಉಡುಪರೆ? ನಮ್ಮಲ್ಲಿ ಏನೂ ಇಲ್ಲ. ಕ್ಷಮಿಸಿ.' ಇದು ಮಾಮೂಲಿನ ಉತ್ತರ. ಮತ್ತೆ ಕೆಲವೆಡೆ, ಅದನ್ನು ನಯವೆನ್ನಿ, ಅವಿನಯವೆನ್ನಿ, ಔದಾರ್ಯವೆನ್ನಿ, ಅಣಕವೆನ್ನಿ, 'ನಿಮ್ಮ ವಿದ್ವತ್ತಿಗೆ ತಕ್ಕ ಕೆಲಸ ನಮ್ಮಲ್ಲಿಲ್ಲ. ಕ್ಷಮಿಸಿ.' ಇದು ಅಸಾಮಾನ್ಯ ಉತ್ತರ.

ಆದರೆ ಅನಂತನ ನಿತ್ಯನಿಯಮಕ್ಕೆ ಇದರಿಂದಾಗಿ ಚ್ಯುತಿ ಬಂದಿರಲಿಲ್ಲ. ಮಧ್ಯಾಹ್ನದ ತನಕ ಹುಡುಕಾಟ. ಆಮೇಲೆ ಎಲ್ಲಾದರೂ ಹೋಟೆಲೊಂದರಲ್ಲಿ ಒಂದಿಷ್ಟು ಉಪಾಹಾರ—ಕೈಯಲ್ಲಿ ಕಾಸಿದ್ದರೆ. ಇಲ್ಲವಾದರೆ ಉಪವಾಸವೆ. ಆಮೇಲೆ ಒಂದೆರಡು ಘಂಟೆಯ ಕಾಲ ಒಂದು ಗುಜರಾತಿ ಅಂಗಡಿಯಲ್ಲಿ ಲೆಕ್ಕಪತ್ರಗಳನ್ನಷ್ಟು ನೋಡುವಿಕೆ. ಇದರಿಂದಾಗಿ ತಿಂಗಳಿಗೆ ದೊರಕುವ ಮೂವತ್ತು ರೂಪಾಯಿಗಳ ಆಸೆಗಾಗಿ ಕೈಗೊಂಡ ಅನಿರ್ವಾಹ ಸಂದರ್ಭದ ಉದ್ಯೋಗ. ಅದು ಮುಗಿದ ಮೇಲೆ ಮತ್ತೆ ಪ್ರೆಸ್. ಅಲ್ಲಿಗೆ ಹೋದಮೇಲೆ ಅವಕಾಶ ದೊರಕುತ್ತಿದ್ದುದೇ ಇಲ್ಲ. ಹಾಗೆಲ್ಲಾದರೂ ಒಂದೆರಡು ತಾಸು ಅವಕಾಶ ದೊರಕಿದರೆ, ಒಂದೆರಡು ಘಂಟೆಗಳ ಕಾಲ ಎಲ್ಲಾದರೂ ಯೂನಿಯನ್ ಕಚೇರಿಗಳಲ್ಲಿ ಕಳೆದು ಮತ್ತೆ ಮನೆ ಸೇರುವಾಗ ರಾತ್ರೆ ಘಂಟೆ ಹತ್ತು.

ಇದು ಸುಖವೇ, ದುಃಖವೇ ಎಂದು ಅನಂತ ಯೋಚಿಸುತ್ತಿರಲಿಲ್ಲ. ಮನಸ್ಸಿಗೆ ಬಿಡುವು ಕೊಡದಂತಿರಲು ದುಡಿಮೆ ಬೇಕಾಗಿತ್ತು. ಪ್ರತಿಫಲವಿಲ್ಲವಾದರೂ ಆ ರೀತಿಯ ದುಡಿಮೆಯನ್ನು ಅವಿರತ ಪರಿಶ್ರಮ ಪಡುವ ಆದರ್ಶವಾದಿ ಜೀವ ಆಯಾಸಕ್ಕೆ ಮಣಿಯುತ್ತಿರಲಿಲ್ಲ. ಆದರೂ ಈಗೀಗ ಬೇಕೆಂದೇ ಬರಿಸಿಕೊಳ್ಳುತ್ತಿದ್ದ ಆಯಾಸ ಒಮ್ಮೊಮ್ಮೆ ನಡುಹಾದಿಯಲ್ಲೇ 'ಇಲ್ಲೇ ಮಲಗಿ ಬಿಡೋಣವೇ' ಎಂದು ಯೋಚಿಸುವಂತೆ ಮಾಡುತ್ತಿತ್ತು. ಆ ಯೋಚನೆ ಕಾರ್ಯರೂಪಕ್ಕೆ ಬಾರದಂತೆ ಮಾಡಲು ಅನಂತ ವಿಶ್ವಪ್ರಯತ್ನವನ್ನೇ ಮಾಡಬೇಕಾಗುತ್ತಿತ್ತು.

ಮತ್ತೆ, ಕಾಲು ಮುಂದುವರಿಯುವುದೇ ಇಲ್ಲ ಎಂದಾದರೆ, ಎಲ್ಲಾದರೂ ಒಂದು ಜಗಲಿಯ ಬದಿಯನ್ನಾಶ್ರಯಿಸಿ, ಒಂದು ಹತ್ತು ನಿಮಿಷ ದಣಿವಾರಿಸಿಕೊಳ್ಳಲೆಂದು ಕುಳಿತರೆ, ಅವು ಅತ್ಯಂತ ಸುಖವನ್ನು ಕೊಡುವ ಹತ್ತು ನಿಮಿಷಗಳು. ನಡೆದು ನಡೆದು ಸೆಳೆದುಕೊಂಡಿದ್ದ ನರಗಳು ಮತ್ತೆ ವಿಶ್ರಾಂತಿಯ ಸುಖವನ್ನನುಭವಿಸುವಾಗ ಉಂಟಾಗುವ ಪರಮಾನಂದ.

ಆದರೆ....

ಇಂಥ ಆನಂದದವಧಿಯಲ್ಲಿ ಅನಂತನ ಮನಸ್ಸು ಮತ್ತೆ ತನ್ನ ದುಡಿಮೆಗೆ ತೊಡಗುತ್ತಿತ್ತು. ತನ್ನ ಜೀವನ, ತನ್ನ ಮಡದಿ, ತನ್ನ ಆದರ್ಶ ಆವರಣಗಳೆಲ್ಲ ಮರೆತುಹೋಗಿ ಮನಸ್ಸಿನಿದಿರು ಕಾಣಿಸಿಕೊಳ್ಳುತ್ತಿದ್ದುದು ಮಾಟಗಾತಿ ಇಂದಿರೆ.

ಆಕೆಯು ನಗುವೊಗ.

ತನ್ನ ಎಂಥ ಆಯಾಸವನ್ನೂ ಪರಿಹರಿಸುವ ಯೋಗ್ಯತೆಯಿರುವ ಏಕಮಾತ್ರ ವ್ಯಕ್ತಿ.

ಅಂಥ ಯೋಚನೆಯ ಸುಖ ಹೆಚ್ಚು ಹೊತ್ತು ಬಾಳುತ್ತಿರಲಿಲ್ಲ. ಆ ಮುಖದ ಹಿಂದೆಯೇ ಬಾಡಿದ, ಸೊರಗಿದ, ಸೊರಗುತ್ತಿರುವ ಇನ್ನೊಂದು ಮುಖ ತೋರಿಕೊಳ್ಳುತ್ತಿತ್ತು—ಭಾರತಿಯದು. ಅನಂತನಿಗೆ ತನ್ನ ಅಪರಾಧದ ಪ್ರಜ್ಞೆ ಬಂದು, ಮತ್ತೆ ಮನವೆಲ್ಲ ಕೋಲಾಹಲದ ಸಾಗರವಾಗಿ, ಕುಳಿತು ಕೊಳ್ಳಲು ಮನಸ್ಸಾಗದೆ ಹೆಜ್ಜೆ ಹಾಕುತ್ತಿದ್ದ.

ವಿಶ್ರಾಂತಿಯ ಅವಧಿ ಸಾಕಾಗಲಿಲ್ಲವೆಂದು ಕಾಲಿನ ನರಗಳು ಮತ್ತೆ ಸೆಳೆದುಕೊಳ್ಳುತ್ತಿದ್ದುವು. ಆದರೆ ನಡೆಯದೆ ಗತ್ಯಂತರವಿಲ್ಲ. ಕೈಯಲ್ಲಿ ಕಾಸಿಲ್ಲ ದಾಗ ಬಸ್ಸು, ಟ್ರೈನುಗಳ ಯೋಚನೆಯನ್ನು ಮಾಡುವಂತೆಯೇ ಇರಲಿಲ್ಲ.

ಇಂದು ಕೂಡ ಅಂತೆಯೇ. ಹೊತ್ತು ನೆತ್ತಿಗೇರಿತ್ತು. ದಣಿವಿನ ಜೊತೆಗೆ ಹೊಟ್ಟೆಯೂ ಹಸಿದಿತ್ತು. ಎಂದಿಗಿಂತ ತುಸು ಬೇಗನೆ ಅನಂತ ಮನೆಯಿಂದ ಹೊರಬಿದ್ದಿದ್ದ. ಗುರುವಾರವಾದ ಕಾರಣ ಆ ವಾರದ ಸಂಚಿಕೆ ಅಂದು ಹೊರ ಬರಬೇಕಾಗಿತ್ತು. ಬೇಗ್ಗೆ ಮೊದಲು ಪ್ರೆಸ್ಸಿಗೆ ಹೋಗಿ ಮುದ್ರಣದ ಏರ್ಪಾಡು ಎಷ್ಟು ಆಗಿದೆಯೆಂದು ನೋಡಿಕೊಂಡು ಅನಂತ ತನ್ನ ನಿತ್ಯದ ತಿರುಗಾಟ ಆರಂಭಿಸಿದ್ದ. ಕೋಟೆಯಿಂದ ವರ್ಲಿಗೆ, ಅಲ್ಲಿಂದ ಮತ್ತೆ ಲೆಮಿಂಗ್ಟನ್ ರಸ್ತೆ, ಅಲ್ಲಿಂದ ಪುನಃ ಚರ್ಚ್‌ಗೇಟ್, ಮತ್ತೆ ಕಾಲಬಾದೇವಿ.

ನಡೆದು ನಡೆದು ದಣಿದಿದ್ದ. ಎದೆ ವೇಗವಾಗಿ ಹೊಡೆದುಕೊಳ್ಳುತ್ತಿತ್ತು. ಬಸ್ಸಿಗಾದರೂ ಕೈಯಲ್ಲಿ ನಾಲ್ಕಾರಾಣೆ ಕಾಸು ಇರಬಾರದಿತ್ತೆ ಎಂದು ಅನಂತ ತನ್ನನ್ನೆ ತಾನು ಕೇಳಿಕೊಂಡ. ಮನೆ ಬಿಡುವಾಗಲೇ 'ಸಾಮಾನು ಮುಗಿದಿದೆ' ಎಂದು ಭಾರತಿ ಹೇಳಿದ್ದಳು. ಅನಂತ ಅದನ್ನು ಮನಸ್ಸಿಗೆ ತೆಗೆದುಕೊಂಡಿರಲೇ ಇಲ್ಲ. ಈಗ ಹೊಟ್ಟೆಯೂ ಹಸಿದಿತ್ತು.

ಇನ್ನೊಂದು ಘಂಟೆಯೊಳಗೆ ಕಾಲಬಾದೇವಿಯ ಅಂಗಡಿಯಲ್ಲಿ ಇರಬೇ ಕಾಗುತ್ತದೆ. ಮೂವತ್ತು ರೂಪಾಯಿ ಸಂಬಳದ ಚಿಲ್ಲರೆ ಉದ್ಯೋಗ. ಆದರೆ ಈಗ ಅದೇ ಬದುಕಿನ ಆಧಾರಸ್ತಂಭವಾಗಿತ್ತು. ಕಳೆದ ತಿಂಗಳು ಹೇಗೋ ಮಾಡಿ ಸೋಮಯಾಜಿಗಳು ನೂರು ರೂಪಾಯಿ ಒದಗಿಸಿಕೊಟ್ಟಿದ್ದರು. ಆದರೆ ಈ ತಿಂಗಳಲ್ಲಿ ಅವರ ಪ್ರಯತ್ನ ಮುಂದುವರಿದಿದ್ದರೂ ತಾವೇ ಆರ್ಥಿಕ ತಾಪ

ತ್ರಯದ ಗಂಡಾಂತರದಲ್ಲಿರುತ್ತ ತನಗೆ ಹೇಗೆ ಸಹಾಯ ಮಾಡಿಯಾರು ಎಂದು ಅನಂತನಿಗೆ ಸಂದೇಹವಿತ್ತು.

ಮೂವತ್ತು ರೂಪಾಯಿ ಸಂಬಳದ ಉದ್ಯೋಗದಲ್ಲಿ ಅರ್ಧ ಸಂಬಳಕ್ಕಿಂತ ಹೆಚ್ಚು ಆಗಲೇ ಮುಂಗಡವಾಗಿ ಆತ ಪಡೆದಾಗಿತ್ತು. ಇನ್ನೊಂದೈದು ರೂಪಾಯಿ ಗಿಟ್ಟಿಸೋಣನೆಂದು ಹಿಂದಿನ ದಿನ ಆ ರೀತಿ ಕೇಳಿದಾಗ ತಿರಸ್ಕಾರದ ಉತ್ತರ ಬಂದಿತ್ತು: 'ಹದಿನೈದು ದಿನ ಕೆಲಸಮಾಡಿ ನೀವು ಇಪ್ಪತ್ತು ರೂಪಾಯಿ ಪಡೆದಾಗಿದೆ. ಇನ್ನು ತಿಂಗಳ ಅಂತ್ಯಕ್ಕೆ ಕೊಡಲು ಏನಾದರೂ ಉಳಿಯಬೇಕೇ? ಅಥವಾ ಹೇಳದೆ ಬಾರದೆ ಉಳಿಯುವಿರೋ?'

ಅನಂತನ ಸ್ವಾಭಿಮಾನ ನೊಂದುಕೊಂಡರೂ ಆತ ಮಾತನಾಡುವಂತೆ ಇರಲಿಲ್ಲ. ಆದರೂ ಅಂಗಲಾಚಿ ಕೇಳಿಕೊಂಡ. ಚಪ್ಪಲಿ ಹರಿದಿದೆ; ಅದಕ್ಕೊಂದು ಆಣಿ ಬಡಿಸೋಣವೆಂದರೆ ಕೈಯಲ್ಲಿ ಕಾಸಿಲ್ಲವೆಂದು ಅನಂತನಿಗೆ ಗೊತ್ತು. ಆ ಕಾರಣ ಇಂಥ ಆರ್ತನಾದ. ಆದರೆ ವ್ಯಾಪಾರಕ್ಕಾಗಿ ಲಾಭಕ್ಕಾಗಿ ಬಂದ ಮಾರವಾಡಿ ಹೃದಯ ಭಾವನೆಗೆ ಬೆಲೆ ಕೊಡುವಷ್ಟು ಮೃದುವಿರಲಿಲ್ಲ. ಎಂತಲೇ ಖಂಡಿತ ಉತ್ತರ ಬಂತು: 'ನಿಮಗೆ ಕೆಲಸ ಬೇಡವಾದರೆ ಹೋಗಿ. ಬೇರೆ ಯಾರಾದರೂ ಬರುತ್ತಾರೆ.'

ಹೊಟ್ಟೆಯಲ್ಲಿ ವಿಚಿತ್ರ ಸಂಕಟವಾಗುತ್ತಿತ್ತು. ಭಾರತಿ ಕೊಟ್ಟಿದ್ದ ಎರಡು ಗುಟುಕು ಕಾಫಿ ಯಾವಾಗಲೋ ಕರಗಿತ್ತು. ಈಗ ಕ್ವೀನ್ಸ್ ರೋಡಿನ ಕಾಲುದಾರಿಯ ಗುಂಟ ನಡೆಯುವಾಗ ಹಸಿದ ಹೊಟ್ಟೆ ಚುರು ಚುರು ಎಂದು ಕೂಗಿಕೊಳ್ಳುತ್ತಿದೆ.

ಅನಂತ ಮೆರೀನ್ ಲೈನ್ಸ್ ನಿಲ್ದಾಣದ ಸಮೀಪ ಪ್ರಿನ್ಸೆಸ್ ರಸ್ತೆ ಹಿಡಿದು ಮುಂದುವರಿದ.

ದಾರಿಯ ಹೋಟೆಲುಗಳು ಅನಂತನನ್ನು ಅಣಕಿಸುತ್ತಿದ್ದವು. ಭಾರವಾದ ಕಾಲುಗಳನ್ನೆಳೆದುಕೊಂಡು ಅನಂತ ಮುಂದುವರಿಯುತ್ತಿದ್ದ. ಅಂದು ಸೋಮಯಾಜಿಗಳು ತುರುಕಿದ್ದಂತೆ ಇಂದು ಏನಾದರೂ ನೋಟು ಗೀಟು ಅಲ್ಲವಾದರೂ ಚಿಲ್ಲರೆ ನಾಣ್ಯವಾದರೂ ದೊರಕೀತೇ ಎಂದು ಅನಂತ ಕಿಸೆಯೆಲ್ಲ ಶೋಧಿಸಿದ. ಆದರೆ ಆ ಶೋಧನೆ ಫಲ ಕೊಡಲಿಲ್ಲ. ಅನಂತನಿಗೆ ಸೋಮಯಾಜಿಗಳ ಭೆಟ್ಟಿಯೇ ಎರಡು ದಿನಗಳಿಂದ ಆಗಿರಲಿಲ್ಲ.

ತಿಂಡಿಯ ರಾಶಿಯನ್ನೇ ಇದಿರಿಗೆ ಸುರುವಿಕೊಂಡಿದ್ದ ಒಂದು ಗುಜರಾತಿ

ತಿಂಡಿಯಂಗಡಿಯನ್ನು ನೋಡಿದಾಗ ಅನಂತನಿಗೆ ವಿಚಿತ್ರ ಸಂಕಟವಾಯಿತು. ನೈರ್ಮಲ್ಯದ ಪ್ರಜ್ಞೆಯಿಂದ, ಹಿಂದೆ ಆತ ನೋಡಲು ಕೂಡ ಹೇಸುತ್ತಿದ್ದ, ಅಂಗಡಿಗಳಿವು. ಇಂದು ಅವುಗಳಲ್ಲಿ ಹಸಿವು ಹಿಂಗಿಸುವ ಸೌಭಾಗ್ಯಸರ್ವಸ್ವವಿತ್ತು.

ಈ ದಣಿವಿನ, ಹಸಿವಿನ ನಡುವೆಯೂ ಅನಂತನ ತಲೆಯಲ್ಲಿ ಒಂದು ಆಲೋಚನೆ: ಇಂದಿರೆಯ ಮನೆಗೆ ಹೋಗಿ ಬರಬಾರದೆ? ಆಕೆಯನ್ನು ನೋಡುತ್ತಾ, ಆಕೆ ಕೊಡುವ ಒಂದು ಲೋಟಿ ಕಾಫಿಯಲ್ಲಿ ತಾನು ತನ್ನ ಆಯುಷ್ಯದ ಹಸಿವನ್ನೆಲ್ಲ ಹಿಂಗಿಸಿಕೊಳ್ಳಲು ಸಮರ್ಥನಾಗೆನೇ ಎಂದು ತೋರಿತು. ಆದರೆ ಮರುಕ್ಷಣ ತನ್ನ ಆಸೆಗಾಗಿ ನಾಚಿಕೆಯಾಯಿತು. ಯೋಚನೆ ರಾಜೀವ ನೆಡೆ ಹರಿಯಿತು. ಆತನನ್ನು ಕಾಣುವಂತಾಗಿದ್ದರೆ ಒಂದೆರಡು ರೂಪಾಯಿ ಗಳನ್ನು ಹೇಗಾದರೂ ದೊರಕಿಸಿಕೊಳ್ಳಬಹುದಿತ್ತು. ಆದರೆ ಆತನನ್ನು ಕಾಣಲು ಕೊಲಾಬಾ ತುದಿಯ ತನಕ ಹೋಗಬೇಕು. ಅದು ಸಾಧ್ಯವೇ ಎಂದು ಅನಂತನಿಗೆ ಸಂದೇಹ ಬಂತು.

ರಾಜೀವನ ಯೋಚನೆಯಾದಾಗ ಹಿಂದೊಮ್ಮೆ ಇದೇ ರೀತಿ ಹಸಿದಿದ್ದ ಘಟನೆಯೊಂದು ನೆನಪಿಗೆ ಬಂತು: ಯಾವುದೋ ಒಂದು ಹಿಂದೂ ಹೋಟೆಲಿ ನಲ್ಲಿ ಅನಂತ ತನ್ನ ಕಿಸೆಯ ಹಣ ಮುಟ್ಟಿ ನೋಡಿಕೊಂಡು, 'ಒಂದೆರಡಾಣೆ ವಡೆ, ಒಂದು ಲೋಟಿ ಚಾ ತಾ' ಎಂದು ಬಡಿಸುವ ಹುಡುಗನೊಡನೆ ಹೇಳಿದ್ದ. ನಗುತ್ತ ಹುಡುಗ ತಂದಿದ್ದುದು ಒಂದು ಮಸಾಲೆ ದೋಸೆ, ಮತ್ತೊಂದು ಸಿಹಿ ತಿಂಡಿ, ನಾಲ್ಕು ವಡೆ, ಮತ್ತೊಂದು ಕಪ್ ಚಾ. 'ನಾನು ಇವನ್ನೆಲ್ಲ ಹೇಳಿಲ್ಲ' ಎಂದು ಅನಂತ ಹೇಳಿದಾಗಲೂ ಆ ಹುಡುಗ, 'ತಿನ್ನಿ, ಸಾರ್. ಯಾಕಿಷ್ಟು ಯೋಚನೆ' ಎಂದಿದ್ದ. ಅಂದು ಕೂಡ ಅನಂತ ತುಂಬ ಹಸಿದಿದ್ದ, ಕೈಯಲ್ಲಿದ್ದ ರೂಪಾಯಿಯನ್ನು ಹೊಟ್ಟೆಗೆ ಕರಗಿಸಿಬಿಟ್ಟರೆ, ಮನೆಗೆ ತೆಗೆದುಕೊಂಡು ಹೋಗ ಬೇಕಿದ್ದ ಕಾಲು ಪೌಂಡು ಕಾಫಿ ಪುಡಿಗೇನು ಮಾಡಬೇಕೆಂದು ಅನಂತ ಯೋಚಿಸಬೇಕಿತ್ತು, ಆದರೆ ಹಸಿದ ಹೊಟ್ಟೆಗೆ ಇದಿರಿದ್ದ ತಿಂಡಿಯ ಪ್ರಲೋಭನವನ್ನು ಬಿಟ್ಟುಕೊಡುವುದಾಗಲಿಲ್ಲ. 'ಮನೆಯ ಕಾಫಿ ಬಿಟ್ಟರೂ ಚಿಂತಿಲ್ಲ' ಎಂದು ಅನಂತ ಉಪಾಹಾರ ತೀರಿಸಿ ಹಣ ಕೊಡಲು ಹೋದಾಗ 'ನಿಮ್ಮ ಹಣ ಬಂದಿದೆ' ಎಂದು ಉತ್ತರ ಬಂತು. 'ಯಾರು ಕೊಟ್ಟದ್ದು?' ಎಂದು ಅನಂತ ಕೇಳಿದಾಗ, ಹೋಟೆಲಿನ ವ್ಯವಸ್ಥಾಪಕ ತಿಂಡಿ ಕೊಟ್ಟ ಆ ಹುಡುಗನ ಕಡೆ ತೋರಿಸಿದ. ಅನಂತ ಗಲಿಬಿಲಿಗೊಂಡು ಪುನಃ ಹುಡುಗನ

ಬಳಿ ಹೋಗಿ ವಿಚಾರಿಸಿದಾಗ, ಆ ಹಸುಳೆಯ ನಗುಮೊಗದಿಂದ ಸತ್ಯ ಸ್ಥಿತಿ ಹೊರಬಿತ್ತು :

'ನೀವು ರಾಜೀವ ಮಾಷ್ಟ್ರ ಸ್ನೇಹಿತರಲ್ಲವೇ, ಸಾರ್. ಆವೊತ್ತು ಶಾಲೆಗೆ ಬಂದಿದ್ದಿರಿ, ಅವರ ಜೊತೆಗೆ. ಒಂದು ಘಂಟೆ ನಮ್ಮ ಕ್ಲಾಸಿನಲ್ಲಿ ಕುಳಿತಿದ್ದಿರಿ ?'

ಅನಂತನಿಗೆ ಮತ್ತೇನು ಮಾಡುವುದೆಂದು ತಿಳಿಯಲಿಲ್ಲ. ಹೃದಯ ತುಂಬಿ ಬಂದಿತ್ತು. ಆದರೆ ಮತ್ತೊಮ್ಮೆ ಆತ ಆ ಹೋಟೆಲಿಗೆ ಕಾಲಿರಿಸಲಿಲ್ಲ.

ಇಂದು ಅದೇ ಘಟನೆಯನ್ನು ಯೋಚಿಸುತ್ತ ಅನಂತ ಮುಂದುವರಿದಿದ್ದ. ಇಂದು ಯಾರಾದರೂ ಅಂಥ ಹುಡುಗರು ಸಿಗಬಹುದೇ ಎಂದು ಮನಸ್ಸು ಯೋಚಿಸುತ್ತಿತ್ತು.

ಕಾಲು ಮುಂದಿಡುವುದೇ ಕಷ್ಟವಾಗುತ್ತಿತ್ತು. ಪುನಃ ವಿಪರೀತ ತಲೆ ಸಿಡಿತ. ಜೊತೆಗೆ ಹರಿದು ಹಾಳಾಗಿದ್ದ ಚಪ್ಪಲಿಯನ್ನೆಳೆದುಕೊಂಡು ಮುಂದು ವರಿಯುವ ವೇದನೆ ಬೇರೆ. ಅನಂತನ ಮನಸ್ಸು ಸುಳಿಗೆ ಸಿಕ್ಕ ಒಣ ಎಲೆಯಂತೆ ಹಾರುತ್ತಿತ್ತು. 'ಇಂಥ ಬದುಕಿಗೆ ಏನು ಅರ್ಥವಿದೆ ?' ಎಂದು ಮನಸ್ಸು ಪದೇ ಪದೇ ಕೇಳುತ್ತಿತ್ತು. ಆದರೆ ಈ ವೇದಾಂತದ ಅವಾಂತರ ಹೆಚ್ಚದಂತೆ ತಡೆಯಲು ಹಸಿವಿನ ಕುರುಳು ಕೂಗಿಕೊಳ್ಳುತ್ತಿತ್ತು.

ಅನಂತ ಪಕ್ಕದಲ್ಲಿದ್ದ ಇರಾಣಿ ಅಂಗಡಿಯ ಕಡೆ ನೋಡಿದ. ಒಣಗಿದ ಗಂಟಲಿಗೆ ಒಂದಿಷ್ಟು ನೀರನ್ನಾದರೂ ಬೇಡಿ ಸುರುವಿಕೊಳ್ಳುತ್ತೇನೆ, ಇಲ್ಲ ವಾದರೆ ಕಾಲಬಾದೇವಿಯಲ್ಲಿ ಹೇಗೆ ಕೆಲಸ ಮಾಡುವುದು, ಎಂದುಕೊಂಡು ಅನಂತ ಆ ಇರಾಣಿ ಅಂಗಡಿಯ ಒಳಹೊಕ್ಕ.

ಬದಿಯಲ್ಲಿದ್ದ ಒಂದು ಮೇಜಿನ ಬಳಿ ಕುರ್ಚಿಯೆಳೆದುಕೊಂಡು ಕುಳಿತು, "ಒಂದು ಗ್ಲಾಸು ನೀರು" ಎಂದಾಗ ಹುಡುಗ, "ಮತ್ತೇನು ಬೇಕು ?" ಎಂದು ಕೇಳಿದ. ಅನಂತ ಏನೂ ಬೇಡವೆಂದು ತಲೆಯಲ್ಲಾಡಿಸಿದ. ಮಧ್ಯಾಹ್ನದ ಉಪಾಹಾರದ ಬಿಡುವಿನ ಸಮಯವಾದುದರಿಂದ ಗಲಾಟೆ ವಿಪರೀತವಿತ್ತು. ಹುಡುಗ ನಿಧಾನಿಸಿ ನೀರು ತಂದ. ನೀರು ಕುಡಿದು ಹೊರಗೆ ಬರುತ್ತಿದ್ದಾಗ, ಅನಂತ 'ಒಂದು ಕಪ್ ಚಾ ಕೂಡ ಕುಡಿಯದೆ ಹೋಗುವಷ್ಟು ಕಷ್ಟದ ಪರಿಸ್ಥಿತಿ ಬಂತೆ ?' ಎಂದು ತನ್ನನ್ನೆ ತಾನು ಕೇಳಿಕೊಳ್ಳುತ್ತ ಮೆಟ್ಟಲಿಳಿಯುತ್ತಿದ್ದಾಗ ಯಾರೋ ಅವನ ಭುಜ ಹಿಡಿದೆಳೆದರು. "ಏ ಮಿಸ್ಟರ್ ! ಪೈಸಾ."

ಅನಂತನಿಗೆ ಒಂದು ಕ್ಷಣ ಗಾಬರಿಯಾಯಿತು. ನೀರು ಕುಡಿಯುವು

ದಕ್ಕೊ ಈ ವಜ್ರಕಾಯದ ಮನುಷ್ಯ ದುಡ್ಡು ಕೇಳುತ್ತಾನೆಯೋ ಎಂದು ಯೋಚಿಸಿದ.

"ನಾನು ಬರೇ ನೀರು ಕುಡಿದಿದ್ದೇನೆ. ಅದಕ್ಕೂ ಕಾಸು ಕೊಡಬೇಕಾಗಿದೆಯೇನು ?" ಎಂದು ಹೇಳುವಾಗ ಅನಂತನ ಮುಖದಲ್ಲಿ ಅಪಮಾನದ ಯಾತನೆ ಸ್ಪಷ್ಟವಾಗಿ ಪ್ರಕಟವಾಗಿತ್ತು. ಆದರೂ ವ್ಯವಸ್ಥಾಪಕನ ಹಿಡಿತ ಸಡಲಿರಲಿಲ್ಲ. ಆತ ಅನಂತನ ಮಾತಿನ ಸಮರ್ಥನೆಗೆಂದು ಹುಡುಗನ ಸಾಕ್ಷಿ ಕೇಳಿದ. ಒಳಗಿದ್ದ ಹುಡುಗ ಬಂದು ಅನಂತ ಬರೇ ನೀರು ಕುಡಿದುದೆಂದು ಹೇಳುವವರೆಗೂ ಅನಂತ ಹಾಗೆಯೇ ನಿಂತಿರಬೇಕಾಗಿ ಬಂತು.

ಇಡೀ ಜಗತ್ತಿನ ಕುರಿತು ತನಗಿರುವ ತಿರಸ್ಕಾರಕ್ಕೆ ತನ್ನನ್ನು ಹಿಡಿದಿರುವ ವ್ಯಕ್ತಿಯೇ ಕಾರಣವೆಂದೆನ್ನುವಷ್ಟು ರೋಷ ಅನಂತನಿಗೆ ಉಕ್ಕಿ ಬಂದಿತ್ತು. ಆದರೆ ಆ ಅಸಹಾಯಪರಿಸ್ಥಿತಿಯಲ್ಲಿ ಆತನ ಮುಖದಲ್ಲಿದ್ದುದು ಅನಂತವೇದನೆ.

ಹುಡುಗ ಅನಂತನನ್ನು ಸಮರ್ಥಿಸಿದೊಡನೆ ಆ ವ್ಯವಸ್ಥಾಪಕನ ಮುಖಚರ್ಯೆ ಒಮ್ಮಿಂದೊಮ್ಮೆಗೆ ಬದಲಾಯಿತು. ಮುಖತುಂಬ ನಗು ವ್ಯಾಪಿಸಿ, 'ಮಾಫ್ ಕರೋ' ಎಂದಾಗ, ಅನಂತ 'ಒಮ್ಮೆ ಪಾರಾದೆ' ಎಂದುಕೊಂಡು ಮೆಟ್ಟಿಲಿಳಿಯಲು ತೊಡಗಿದ. ಆದರೆ ಹೋಟೆಲಿನ ಮಾಲಕ ಪುನಃ ಅನಂತನನ್ನು ಕರೆದು ತನ್ನ ಬಳಿಯೇ ಇದ್ದ ಒಂದು ಸ್ಟೂಲಿನಲ್ಲಿ ಕುಳ್ಳಿರಿಸಿಕೊಂಡ. ಇನ್ನೇನು ಕಾದಿದೆಯೋ ಎಂದು ಅನಂತ ಆ ವ್ಯವಸ್ಥಾಪಕನ ಮುಖ ನೋಡುತ್ತಿದ್ದಂತೆ, ಆತ ಎರಡು ಕಪ್ ಚಾ ತರುವಂತೆ ಅದೇ ಹುಡುಗನಿಗೆ ಆಜ್ಞಾಪಿಸಿದ. ಮಾಲಕನ ಆಜ್ಞೆಯಂತೆ ಕ್ಷಣಾರ್ಧದಲ್ಲಿ ಚಾ ಬಂತು. ಅನಂತನಿಗೆ ಚಾ ಕುಡಿಸಿ ಒಂದು ಪ್ಯಾಕೆಟ್ ಸಿಗರೇಟು ಒಡೆದು ಒಂದನ್ನು ತನ್ನ ತುಟಿಗಿಟ್ಟುಕೊಂಡು ಮತ್ತೊಂದನ್ನು ಅನಂತನಿಗೆ ಕೊಟ್ಟು, ಅದನ್ನು ಹೊತ್ತಿಸಿದ ಮೇಲೆ ಆತ ನಗುತ್ತ "ಇನ್ನು ನೀವು ಹೋಗಬಹುದು" ಎಂದ. ಅನಂತನಿಗೆ ಆಶ್ಚರ್ಯದ ಮೇಲೆ ಆಶ್ಚರ್ಯ. ತನ್ನನ್ನು ಹಿಡಿದಿಟ್ಟುದು ಇದೇ ವ್ಯಕ್ತಿಯೇ ಎಂದು ಆತ ಶಂಕಿಸುವಂತಾಗಿತ್ತು.

ಅನಂತ ಮೊದಲ ಬಾರಿಗೆ ಸಿಗರೇಟಿನ ಸವಿ ನೋಡಿದ, ವ್ಯವಹಾರ ನಿಪುಣನಾದರೂ ಮಾನವಹೃದಯದ ಒಂದು ಇರಾಣಿ ಹೋಟೆಲು ಮಾಲಕನ ಕೃಪೆಯಿಂದಾಗಿ.

ಚಾ ಕುಡಿದ ಮೇಲೆ ಉಡುಗಿಹೋಗಿದ್ದ ಚೈತನ್ಯ ಮತ್ತೆ ಕಾಣಿಸಿಕೊಂಡಿತು.

ಆ ಹೋಟೆಲಿನಿಂದ ಹೊರಬಂದ ಅನಂತನ ಹೃದಯ ಒಂದು ಕ್ಷಣ ಹೂವಿಗಿಂತ ಹಗುರಾಗಿತ್ತು.

ಇದೇ ಕಾರಣದಿಂದಾಗಿ ಆತ ನೇರ ಕಾಲಬಾದೇವಿಗೆ ಹೋಗಲಿಲ್ಲ. 'ಹೇಗೂ ಇನ್ನೂ ಒಂದು ಘಂಟೆಯ ಅವಕಾಶವಿದೆ. ಪ್ರೆಸ್ಸಿನ ತನಕ ಹೋಗಿ ಸೋಮಯಾಜಿಗಳು ಇರುವರೆ? ಎಂದು ನೋಡಿಕೊಂಡು ಬರುತ್ತೇನೆ' ಎಂದು ಅನಂತ ಪ್ರೆಸ್ಸಿನ ದಾರಿ ಹಿಡಿದ.

ಅನಂತ ಪ್ರೆಸ್ಸು ತಲಪಿದಾಗ ಘಂಟೆ ಒಂದಾಗಿತ್ತು. ಆದರೆ ಆತ ನಿರೀಕ್ಷಿಸಿದ ಬೇರೊಂದು ಬೇಸರ ಅಲ್ಲಿ ಕಾದಿತ್ತು.

ಅನಂತನ ನಿರೀಕ್ಷೆಯಂತೆ ಸೋಮಯಾಜಿಗಳು ಅಲ್ಲಿದ್ದರು. ಅನಂತ ಪ್ರೆಸ್ಸಿನ ಬಾಗಿಲಿಗೆ ಬಂದಾಗಲೇ ಒಳಗಿನ ವಾಗ್ಯುದ್ಧ ಕೇಳಿಬರುತ್ತಿತ್ತು. ಸೋಮಯಾಜಿಗಳು ಎಷ್ಟೇ ಸಣ್ಣ ದನಿಯಲ್ಲಿ ಮಾತನಾಡಬೇಕೆಂದು ಪ್ರಯತ್ನಿಸುತ್ತಿದ್ದರೂ ಅವರ ಪ್ರಯತ್ನ ವಿಫಲವಾಗುವಂತೆ ಮಾಡಲು ಪ್ರೆಸ್ಸಿನ ವ್ಯವಸ್ಥಾಪಕ ಒದರಿಕೊಳ್ಳುತ್ತಿದ್ದ.

"ಕೇಳಿ ಕೇಳಿ ಸೋತುಹೋದೆ ನಾನು. ಪ್ರೆಸ್ಸಿನ ಕೆಲಸಗಾರರಿಗೆ ಸಂಬಳ ಕೊಡಲು ನೀವೇನು ಬರುವುದಿಲ್ಲ. ನಿಮ್ಮ ಲಾಭ-ನಷ್ಟದ ಲೆಕ್ಕಾಚಾರ ನನಗೆ ಬೇಡ. ಬೇವಾರ್ಸಿಗಳನ್ನು ಗಿರಾಕಿಗಳಾಗಿ ಕಟ್ಟಿಕೊಂಡರೆ ನಮಗಾಗುವ ಉಪಕಾರ ಇದೇ. ಈ ವಾರದ ಸಂಚಿಕೆ ಬೇಕಾದರೆ ಒಂದು ಮುನ್ನೂರು ರೂಪಾಯಿಗಳನ್ನಾದರೂ ಈಗಿಂದೀಗಲೆ ತುಂಬಲೇಬೇಕು. ಇಲ್ಲವಾದರೆ ಪ್ರತಿಗಳನ್ನು ಕೊಡುವುದಿಲ್ಲ."

"ಒಂದೆರಡು ದಿನಗಳ ಅವಕಾಶ ಕೊಡಿ. ನಾವು ಪ್ರಯತ್ನ ಮಾಡುತ್ತಿದ್ದೇವೆ. ಕಷ್ಟ ಎಲ್ಲರಿಗೂ ಇರುವುದೇ" ಎಂದು ಸೋಮಯಾಜಿಗಳು ಹೇಳಿದರೂ ಅದು ಪರಿಣಾಮಕಾರಿಯಾಗಲಿಲ್ಲ.

"ಈ ಸಲ ಏನಾದರೂ, ನಾನು 'ಸಂಚಿಕೆ' ಬಿಡುವುದಿಲ್ಲ. ನಿಮಗೆ ಪತ್ರಿಕೆ ಬೇಕಿದ್ದರೆ ಹಣ ಕೊಡಿ."

ಪತ್ರಿಕೆ ಹೊರಡುವುದು ಒಂದು ದಿನ ತಡವಾದರೆ ಏಜಂಟರಿಂದ ಮರಳಿ ಬರುವ ಪ್ರತಿಗಳ ಸಂಖ್ಯೆ ಇಮ್ಮಡಿಯಾಗುತ್ತದೆಂದು 'ಕಹಳೆ'ಯ ಬಳಗಕ್ಕೆಲ್ಲ

ತಿಳಿದಿತ್ತು. ಪತ್ರಿಕೆಯ ಮಟ್ಟವೊಂದರಿಂದಲೆ ಯಾರೂ ಸಮಾಧಾನ ಪಡೆಯು ವುದು ಸಾಧ್ಯವಿದ್ದಿಲ್ಲ. ಜೊತೆಗೆ ವ್ಯವಸಾಯದಲ್ಲಿದ್ದ ಸ್ಪರ್ಧೆಯನ್ನೂ ಗಮನಿಸ ಬೇಕಿತ್ತು.

ಅನಂತ ಒಳಗೆ ಬಂದೊಡನೆ, ಮಾತನಾಡುತ್ತಿದ್ದ ಇಬ್ಬರೂ ಅನಂತನ ಮುಖ ನೋಡಿದರು. ಅನಂತನ ಬಾಡಿದ ಮುಖ, ವೇಷಭೂಷಣಗಳು ಇವನ್ನೆಲ್ಲ ನೋಡಿಯೇ ವ್ಯವಸ್ಥಾಪಕ ಜಿಗುಪ್ಸೆಯ ಕುತ್ಸಿತ ನಗೆಯೊಂದನ್ನು ನಕ್ಕ.

"ಇಂಥವರಿಗೆ ಯಾಕೆ ಪತ್ರಿಕೆ ಹೊರಡಿಸುವ ವಿಚಾರ ?"

ಸೋಮಯಾಜಿಗಳು ಆತನ ಮಾತಿಗೆ ಉತ್ತರ ಕೊಡಲು ಬಯಸಲಿಲ್ಲ. ವ್ಯವಸ್ಥಾಪಕ ತನ್ನ ನಿರ್ಧಾರವನ್ನು ಬದಲಿಸುವಂತಿಲ್ಲವೆಂದು ಅವರಿಗೆ ತಿಳಿದಿತ್ತು. ಆ ಕಾರಣ ಇನ್ನು ವ್ಯರ್ಥ ಬೇಡುವಿಕೆಯಿಂದ ಪ್ರಯೋಜನವಿಲ್ಲ ವೆಂದು ತಿಳಿದು ಅನಂತನ ಮುಖ ನೋಡಿದರು.

"ತಲಪಾಡಿಯವರಲ್ಲಿಗೆ ಹೋಗಿ ಬರೋಣವೇ, ಅನಂತ ?"

ಸೋಮಯಾಜಿಗಳಿಗೆ ಸದ್ಯ ಉಳಿದಿದ್ದುದು ಅದೊಂದೇ ದಾರಿ. ಅನಂತ ನಿಗೆ ಆ ಮಾತೇ ಸ್ವರ್ಗ. ಆ ಬಾಡಿದ ಮುಖದಲ್ಲೂ ಇಂದಿರೆಯ ಮನೆಯ ಹೆಸರು ಕೇಳಿಯೇ ನಗುವರಳಿತು. ತಾನು ಕಾಲಬಾದೇವಿಗೆ ಎರಡು ಘಂಟೆಗೆ ಹೋಗಬೇಕಾಗಿದೆಯೆಂಬುದೂ ಮರೆತುಹೋಯಿತು.

"ಹೊರಡಿ" ಎಂದ.

ದಾರಿಯಲ್ಲಿ ಸೋಮಯಾಜಿಗಳು ಹೆಚ್ಚು ಮಾತನಾಡಲಿಲ್ಲ. ಟ್ರಾಂ ಹತ್ತಿ ಹೋಗುತ್ತಿದ್ದಾಗ ಟಿಕೇಟಿನ ಹಣಕ್ಕೆ ಔಪಚಾರಿಕವಾಗಿಯಾದರೂ ಕೈಹಾಕುತ್ತಿದ್ದ ಅನಂತ ಇವೊತ್ತು ಸುಮ್ಮಗೆ ಕುಳಿತಿದ್ದ. ಟಿಕೇಟು ಪಡೆದು ಕೊಂಡ ಸೋಮಯಾಜಿಗಳು ಮೆಲ್ಲಗೆ ನಕ್ಕರು. ಅನಂತನಿಗೆ ಈ ನಗು ಅರ್ಥವಾಗಲಿಲ್ಲ. ಆತ ಯೋಚಿಸುತ್ತಿದ್ದುದು ಬೇರೆ ವಿಚಾರದ ಕುರಿತಾಗಿ— ಇಂದಿರೆಯ ಕುರಿತಾಗಿ.

"ಈ ಹೊತ್ತಿನಲ್ಲಿ ಇನ್ನು ಅವರು ಇರುತ್ತಾರೋ ಇಲ್ಲವೋ, ಯಾರಿಗೆ ಗೊತ್ತು ?" ಸೋಮಯಾಜಿಗಳು ತಮ್ಮಷ್ಟಕ್ಕೆ ತಾವು ಎಂಬಂತೆ ಕೇಳಿ ಕೊಂಡರು.

ಅನಂತ ಉತ್ತರ ಕೊಟ್ಟ :

“ಇಲ್ಲದೆ ಬೇರೆಲ್ಲಿಗೆ ಹೋಗುತ್ತಾಳೆ, ಈ ಹೊತ್ತಿನಲ್ಲಿ?” ಮಾತು ಅಂತರಾಳದಿಂದ ಬಂದುದು. ಸೋಮಯಾಜಿಗಳಿಗೆ ಮಾತ್ರ ತುಂಬ ಆಶ್ಚರ್ಯ ನಾಯಿತು.

“ನಾನು ಹೇಳಿದ್ದು ಸಂಜೀವರಾಯರ ಕುರಿತು, ಅವರ ಮಗಳ ಕುರಿತಾಗಿ ಅಲ್ಲ.”

ಅನಂತ ದಿಗಿಲುಗೊಂಡು ನಗಲು ಪ್ರಯತ್ನಿಸಿ ಹೇಳಿದ:

“ಹೌದು, ಹೌದು. ನಾನು ಆ ಲೇಖನದ ವಿಚಾರ ಯೋಚಿಸುತ್ತಿದ್ದೆ.”

ಸೋಮಯಾಜಿಗಳಿಗೆ ಇದರಿಂದ ಎಷ್ಟು ಸಮಾಧಾನವಾಯಿತೋ.

“ಲೇಖನಕ್ಕಿಂತ ಮೊದಲು ಈಗ ಈ ವಾರದ ಸಂಚಿಕೆ ಹೊರಬರಬೇಕಲ್ಲ. ಪುಣ್ಯಾತ್ಮ ನಮ್ಮನ್ನು ಮುಷ್ಟಿಯೊಳಗಿರಿಸಿ ಕುಣಿಸುತ್ತಿದ್ದಾನೆ.”

ಅನಂತ ತುಸು ಹೊತ್ತು ಯೋಚಿಸುತ್ತಿದ್ದು ಮತ್ತೆ ಉತ್ತರ ಕೊಟ್ಟ:

“ಒಂದು ವರ್ಷದ ಹೋರಾಟ ನೋಡಿಯಾಯಿತಲ್ಲ. ‘ಕಹಳೆ’ಯನ್ನು ನಿಲ್ಲಿಸಿಬಿಡೋಣವೆ?”

“ನಿಲ್ಲಿಸುವುದು?”

ಸೋಮಯಾಜಿಗಳು ಅನಂತನನ್ನೇ ನೋಡುತ್ತಿದ್ದರು. ಈ ಮಾತು ಅನಂತನಿಂದ ಬಂತೇ ಎಂದು ಅವರಿಗೆ ಆಶ್ಚರ್ಯ. ಬರೇ ಸಂಶಯವಿರಬಹುದು, ಎಂದು ಪುನಃ ಕೇಳಿದರು:

“ನಿಲ್ಲಿಸುವುದು?”

ಈಗ ಮಾತ್ರ ಅನಂತನಿಗೆ ತನ್ನ ನಿರಾಶಾವಾದದ ಪ್ರಜ್ಞೆ ಬಂತು. ಹಾಗೆಯೇ ಸದ್ದಿಲ್ಲದೆ, ತಾನು ನಿರ್ಮಿಸಿಕೊಂಡ ಕರ್ತವ್ಯಕ್ಷೇತ್ರದಲ್ಲಿ, ಫಲಾಪೇಕ್ಷೆ ಇಲ್ಲದೆ ನಿರ್ವ್ಯಾಜ ಅಂತಃಕರಣದಿಂದ ದುಡಿಯುತ್ತಿದ್ದ ಸೋಮಯಾಜಿಗಳ ಮುಖ ಕಣ್ಣೆದುರು ಬಂತು. ‘ನಾನು ದುರ್ಬಲನಾಗುತ್ತಿದ್ದೇನೆ’ ಎಂದು ಅನಂತನ ಮನಸ್ಸು ಕೂಗಿಕೊಳ್ಳುತ್ತಿತ್ತು.

“ಕ್ಷಮಿಸಿ, ಸೋಮಯಾಜಿಗಳೇ. ಅವಿವೇಕದ ಮಾತನಾಡಿದೆ. ನನ್ನ ದೌರ್ಬಲ್ಯ ದಿನಹೋದಂತೆ ಹೆಚ್ಚುತ್ತಿದೆ” ಎಂದು ಹೇಳಿದ.

“ಈ ಸಲ ಇನ್ನೂ ನೂರು ರೂಪಾಯಿ ನಿನಗೆ ಕೊಟ್ಟಿಲ್ಲ, ಅನಂತ” ಎಂದು ಸೋಮಯಾಜಿಗಳು ಮೃದುವಾಗಿಯೇ ಹೇಳಿದರು.

ಆದರೆ ಆ ಮಾತಿನ ಹಿಂದಿದ್ದ ಪ್ರಾಮಾಣಿಕತೆಗೆ ಕರುಳು ಕೊರೆಯುವ

ಶಕ್ತಿಯಿತ್ತು. ತನ್ನೆಲ್ಲ ದುಃಖವನ್ನು ಮರೆತು ಅನಂತ ಹೇಳಿದ: "ಚಿಂತಿಲ್ಲ, ಸೋಮಯಾಜಿಗಳೆ. ಆ ವಿಚಾರ ಯೋಚಿಸಬೇಡಿ. ನಿಮಗಾದರೂ 'ಕಹಳೆ' ಸಂಬಳ ಕೊಡುತ್ತಿದೆಯೇನು?" ಎಂದು.

ಸೋಮಯಾಜಿಗಳ ಸಂದೇಹ ಸುಳ್ಳಾಗಿತ್ತು. ತಲಪಾಡಿಯುವರು ಮನೆಯಲ್ಲೇ ಇದ್ದರು. ಆದರೆ ಊಟ ತೀರಿಸಿ ಹೊರಡುವ ಅವಸರದಲ್ಲಿದ್ದರು. ಆಕಸ್ಮಿಕವಾಗಿ ಬಂದ ಅತಿಥಿಗಳನ್ನು ನೋಡಿದೊಡನೆ ಅವರಿಗೆ ಆಗಮನದ ಉದ್ದೇಶ ಸ್ಪಷ್ಟವಾಗಿತ್ತು. ಆದರೂ ಉಪಚಾರದ ನಿತ್ಯದ ಮಾತನ್ನೇ ಹೇಳಿದರು.

"ಏನು, ಮಾಸ್ತರರೇ! ಅಪರೂಪವಾಗಿ ಬಂದಿರಿ?"

ಅನಂತನ ಕಣ್ಣು ಕೋಣೆಯಿಡೀ ಹುಡುಕುತ್ತಿತ್ತು. 'ಇಂದಿರೆ ಮನೆಯಲ್ಲಿಲ್ಲವೆ?' ಆದರೆ ಈ ಸಂದರ್ಭದಲ್ಲಿ ಆ ಪ್ರಶ್ನೆ ಕೇಳುವುದು ತೀರ ಅನುಚಿತವಾದ ಕೆಲಸವಾಗುತ್ತಿತ್ತು.

ಸೋಮಯಾಜಿಗಳು ತಲಪಾಡಿಯುವರ ಪ್ರಶ್ನೆಗೆ ಉತ್ತರ ಹೇಳುತ್ತಿದ್ದರು.

"ಅಪರೂಪವಾಗಿ ಬರುವ ಕಾರಣ ನಿಮಗೆ ತಿಳಿದೇ ಇದೆ. ಪುನಃ ತೊಂದರೆಯಲ್ಲಿ ಸಿಕ್ಕಿಬಿದ್ದಿದ್ದೇವೆ. ಏನು ಮಾಡುವುದೆಂದು ತಿಳಿಯುವುದಿಲ್ಲ."

"ಎಷ್ಟು, ಈ ಸಲ?" ಯಾವಾಗಲೂ ಬರುತ್ತಿದ್ದ ಪ್ರಶ್ನೆ: 'ಎಷ್ಟು ಬೇಕಿತ್ತು?' ಎಂದು. ಈ ಬಾರಿ, 'ಎಷ್ಟು ಈ ಸಲ' ಎಂದು ಕೇಳಿದಾಗ, ಸೋಮಯಾಜಿಗಳಿಗೆ ತಾವು ಸಂಜೀವರಾಯರಿಗೂ ಭಾರವಾಗುತ್ತಿದ್ದೇವೆಯೋ ಎಂದು ತೋರಿತು.

"ಸಾಧ್ಯವಿದ್ದರೆ ಒಂದು ಮುನ್ನೂರು ರೂಪಾಯಿ ಬೇಕಿತ್ತು, ನೋಡಿ." ಪ್ರಾಮಾಣಿಕ ದೈನ್ಯದ ಪ್ರತಿಮೂರ್ತಿಯಾಗಿ ಸೋಮಯಾಜಿಗಳು ಹೀಗೆ ಹೇಳಿದರು.

"ನಿಮ್ಮ ಎಲ್ಲ ನಷ್ಟವನ್ನು ಹೊರುವ ಶಕ್ತಿಯನ್ನು ದೇವರು ನನಗೆ ಕೊಡಬಾರದೆ ಎಂದು ಒಮ್ಮೊಮ್ಮೆ ತೋರುತ್ತಿದೆ, ಮಾಸ್ತರರೆ" ಎಂದು ತಲಪಾಡಿಯುವರು ನಗುತ್ತಲೇ ಹೇಳಿದರು. ಆ ಮಾತಿನಲ್ಲಿ ನಯವಿತ್ತು. ಆದರೆ ತಮ್ಮ ಶಕ್ತಿಗೂ ಒಂದು ಮಿತಿಯಿದೆಯೆಂಬ ಸೂಚ್ಯಾರ್ಥವಿದೆಯೇ ಎಂಬ ಶಂಕೆ ಸೋಮಯಾಜಿಗಳಿಗೆ ಬಂತು.

"ಇಷ್ಟರ ತನಕ ಉಳಿಸಿದ್ದು ನೀವೆ. ಆದರೆ ನಿಮಗೆ ತೊಂದರೆಯಾಗು

ವಂತಿದ್ದರೆ ಬೇರೆಲ್ಲಿಯಾದರೂ ಸಾಲ ಸಿಗುವುದೇ ಎಂದು ನೋಡುತ್ತೇವೆ" ಎಂದು ಹೇಳಿದರು.

"ಛೆ! ತೊಂದರೆಯ ಮಾತು ನಾನು ಹೇಳಿದೆನೆ? ಇವತ್ತು ಸಂಜೆಗೆ ಸಿಕ್ಕಿದರೆ ಸಾಕೆ? ಏಳು ಘಂಟೆಯ ಹೊತ್ತಿಗೆ ನಮ್ಮ ಆಫೀಸಿಗೆ ಬನ್ನಿ" ಎಂದರು.

ಅಷ್ಟರಲ್ಲಿ ಇಂದಿರೆಯ ದನಿ ಕೇಳಬಂತು :

"ಅರೆ! ಮಾಸ್ತರರು, ಅನಂತರಾಯರು. ಈ ಮಧ್ಯಾಹ್ನ ಬಿಸಿಲಿಗೆ." ನಗುತ್ತ ಒಳಗೆ ಬಂದ ಇಂದಿರೆಯ ಸ್ವಾಗತ. ಅನಂತನ ಎದೆಯ ಬಡಿತದ ವೇಗ ಹೆಚ್ಚುತ್ತಿತ್ತು.

"ನಿಮಗೆಲ್ಲಿಯಾದರೂ ಕೆಲಸ ಸಿಕ್ಕಿತೇ?" ಸಂಜೀವರಾಯರು ಅನಂತ ನನ್ನುದ್ದೇಶಿಸಿ ಕೇಳಿದರು. ಇಂದಿರೆ ಇದಿರಿಗೆ ಬಂದೊಡನೆ ಬೇರೆಲ್ಲ ವಿಚಾರ ಗಳನ್ನು ಮರೆತಿದ್ದ ಅನಂತ ಬೆಚ್ಚಿಬಿದ್ದು ಉತ್ತರ ಹೇಳಿದ :

"ಇಲ್ಲ. ಪ್ರಯತ್ನಿಸುತ್ತಿದ್ದೇನೆ."

ಈ ಉತ್ತರ ಬಂದಮೇಲೆ ಇಬ್ಬರೂ ಒಂದು ನಿಮಿಷ ಮೌನ. 'ಸಂಜೀವ ರಾಯರು ಮನಸ್ಸು ಮಾಡಿದರೆ ತಮ್ಮ ಆಫೀಸಿನಲ್ಲೇ ನನಗೊಂದು ಉದ್ಯೋಗದ ಹಾದಿ ತೋರಿಸಿಕೊಡಬಲ್ಲರು. ಆದರೆ ನಾನು ಇಂದಿರೆಯ ತಂದೆಯ ದುಡಿ ಮೆಯ ಆಳಾಗಿ ನಿಲ್ಲಲಾರೆ' ಎಂದು ಅನಂತ ಚಿಂತಿಸುತ್ತಿದ್ದ. ಅನಂತನಂಥ ಪ್ರತಿಭಾವಂತ ವ್ಯಕ್ತಿಯನ್ನು ತಮ್ಮ ಆಫೀಸಿನಲ್ಲಿ ಕಾರಕೂನರ ಸಾಲಿನಲ್ಲಿ ಇರಿಸಿ ಕೊಳ್ಳಲಾರೆ, ಎಂದು ಸಂಜೀವರಾಯರು ಚಿಂತಿಸುತ್ತಿದ್ದರು.

ಸೋಮಯಾಜಿಗಳು ಇಂದಿರೆಯ ಪ್ರಶ್ನೆಗೆ ಉತ್ತರ ಹೇಳುತ್ತಿದ್ದರು :

"ಬಿಸಿಲಿಗೆ ಬರಬೇಕಾಗಿ ಬಂತು ನೋಡು, ಇಂದಿರಾ. ಇಲ್ಲವಾದರೆ ಈ ವಾರ ಪತ್ರಿಕೆ ಹೊರಡುವಂತಿಲ್ಲ."

ಸಂಜೀವರಾಯರು ಮಗಳ ಕಡೆ ನೋಡಿ ನಕ್ಕರು. ಆ ನಗುವೇ ಆಕೆಯ ಕುತೂಹಲವನ್ನು ಸಮಾಧಾನಪಡಿಸಬೇಕಿತ್ತು. ಅವಳು ಆ ವಿಷಯ ಮಾತು ಮುಂದುವರಿಸಲಿಲ್ಲ.

ಸಂಜೀವರಾಯರು ಹೊರಡಲೆದ್ದರು. ಜೊತೆಗೆ ಸೋಮಯಾಜಿಗಳೂ ಹೊರಟು ನಿಂತರು. ಅನಂತನಿಗೆ ಹೊರಡಲು ಮನಸ್ಸಿದ್ದಿಲ್ಲವಾದರೂ ಹೊರಡದೆ ನಿವೃತ್ತಿಯಿದ್ದಿಲ್ಲ.

"ಭಾರತಿ ಹೇಗಿದ್ದಾಳೆ ? ಆ ದಿವಸ ನಮ್ಮಲ್ಲಿಗೆ ಬಂದಿರಲಿಲ್ಲ, ಅವಳು."

ಅನಂತನಿಗೆ ಏನು ಉತ್ತರ ಹೇಳುವುದೆಂದು ತಿಳಿಯದೆ ಬರೇ "ಚೆನ್ನಾಗಿ ಇದ್ದಾಳೆ" ಎಂದ.

ಒಮ್ಮೆಗೇ ಇಂದಿರೆಗೆ ಏನು ನೆನಪಾಯಿತೋ,

"ನಿನಗೆ ಈಗ ಪ್ರೆಸ್ಸಿಗೆ ಹೋಗಲೇಬೇಕೇ ? ಒಂದೆರಡು ಮೂರು ತಾಸು ಅವಕಾಶವಿದೆಯೆ ? ನನ್ನ ಗೆಳತಿ ಪಾರ್ವತಿ ಬಂಧುವೊಬ್ಬಳು ಊನಗೊಂಡ ಮಕ್ಕಳ ಶುಶ್ರೂಷಾಗೃಹ ಒಂದು ತೆರೆದಿದ್ದಾಳೆ. ಅದನ್ನು ಒಂದಿಷ್ಟು ನೋಡಿ ಕೊಂಡು, ಒಂದೆರಡು ಲೇಖನ ಬರೆಯುವುದು ಸಾಧ್ಯವೇ 'ಕಹಳೆ'ಯಲ್ಲಿ ? ಆ ಸಂಸ್ಥೆಗೆ ಸಾರ್ವಜನಿಕ ಸಹಾಯ ಬೇಕಾಗಿದೆ."

ಬೇರೇನು ಕೆಲಸವಿದ್ದರೂ ಅದನ್ನು ಬಿಟ್ಟು ಅನಂತ ಒಪ್ಪಿಕೊಳ್ಳುವಾತ. ಆದರೆ ಉಪಚಾರಕ್ಕಾಗಿ ಸೋಮಯಾಜಿಗಳ ಮುಖ ನೋಡಿದ. ಅವರು, "ನೀನು ಪ್ರೆಸ್ಸಿಗೆ ಬಂದು ಏನಾಗಬೇಕಾಗಿದೆ, ಅನಂತಾ. ಹೋಗಿ ಬಾ. ಸಂಜೆ ಬಿಡುವಿದ್ದರೆ ಬಾ. ನಾನು ಪ್ರೆಸ್ಸಿನಲ್ಲಿಯೇ ಇರುತ್ತೇನೆ" ಎಂದರು.

ಸಂಜೀವರಾಯರು ಮತ್ತು ಸೋಮಯಾಜಿಗಳು ಹೊರಟುಹೋದರು. ಅನಂತ ತನ್ನ ಆರಾಧ್ಯದೇವತೆಯ ಮಂದಿರದಲ್ಲಿ ಆರಾಧ್ಯದೇವತೆಯ ಸಾನ್ನಿಧ್ಯದ ಸ್ವರ್ಗದಲ್ಲಿ ಉಳಿದ.

ಮಧ್ಯಾಹ್ನದ ಹೊತ್ತಿಗೆ ಕರುಳು ಕೊರೆದು ಕಣ್ಣೀರು ಬರುವಷ್ಟು ಹಸಿವು ಆಗಿತ್ತು. ಆಮೇಲೆ ಆತ ಕುಡಿದುದು ಬರೇ ಒಂದು ಕಪ್ ಚಾ. ಆದರೆ ಈಗ ಹಸಿವು ಅನಂತನಿಂದ ಎಷ್ಟೋ ಗಾವುದ ದೂರ.

ತಂದೆಯ ಕಾರು ಮರಳಿ ಬರುವ ತನಕ ಅನಂತ ಮನೆಯಲ್ಲೇ ಉಳಿಯ ಬೇಕಾಯಿತು. ಇಂದಿರೆ ಆತನನ್ನು ತನ್ನ ಕೋಣೆಯಲ್ಲಿ ಕುಳ್ಳಿರಿಸಿ ನಾಲ್ಕಾರು ಪುಸ್ತಕಗಳನ್ನು ಅನಂತನ ಇದಿರಿಗೆ ಹಾಕಿ ಹೇಳಿದಳು : "ಒಂದು ಲೋಟಿ ಕಾಫಿ ಮಾಡಿ ತರುತ್ತೇನೆ. ಹುಡುಗ ಎಲ್ಲಿಯೋ ಆಡಲು ಹೋಗಿದ್ದಾನೆ. ಅಷ್ಟರ ತನಕ ಓದುತ್ತಿರಿ" ಎಂದು.

ಅನಂತ ಉಪಚಾರಕ್ಕಾಗಿ, "ಬೇಡ" ಎಂದ. ಆದರೆ ಇಂದಿರೆ ಅವನ ಮಾತನ್ನು ಲಕ್ಷಿಸಲಿಲ್ಲ. ಕಾಫಿಗೆ ನೀರಿಡಲು ಅಡಿಗೆಯ ಮನೆಯ ಕಡೆ ನಡೆದಳು.

ಅನಂತನ ಇದಿರು ಪುಸ್ತಕಗಳಿದ್ದವು. ಮನಸ್ಸು ಹಿಗ್ಗಿ ಹಾಡುತ್ತಿತ್ತು. 'ಇದು ಇಂದಿರೆಯ ಮನೆ. ನಿನ್ನ ಪ್ರೀತಿಯ ದೇವತೆಯ ಪವಿತ್ರ ಮಂದಿರ'

ಎಂದು. ಎಷ್ಟು ದಿನಗಳ ಮೇಲೆ, ಜೇಲುವಾಸದ, ಕಷ್ಟ, ನಿಷ್ಠುರ, ನಿರುದ್ಯೋಗದ ನರಕ, ಇವೆಲ್ಲವುಗಳಿಂದ ಬಿಡುಗಡೆ ದೊರಕಿದ ಬಂಧಮುಕ್ತ ಸಾಮ್ರಾಜ್ಯ—ಪ್ರೇಮದ, ಪ್ರೀತಿಯ, ಸ್ನೇಹದ ಸಂಜೀವಿನಿಯಾಗಿ ತನ್ನ ಜೀವನಪಥದಲ್ಲಿ ಬಂದ ಇಂದಿರೆಯ ಸಾಮಿಪ್ಯಸುಖ.

ಅನಂತನಿಗೆ ಹೃದಯದ ಹಿಗ್ಗಿನಿಂದಾಗಿಯೆ ಕಣ್ಣೀರು ಬರುವುದರಲ್ಲಿತ್ತು.

ಇಂದಿರೆ ಕಾಫಿ ತಯಾರಿಸಿಕೊಂಡು ಬಂದು ಅನಂತನ ಮುಂದಿರಿಸಿದಳು. ತಾನೂ ಬಳಿಯೇ ಇದ್ದ ಒಂದು ಕುರ್ಚಿಯಲ್ಲಿ ಕುಳಿತು ಅವನು ಕುಡಿಯುವುದನ್ನೇ ನೋಡುತ್ತಿದ್ದಳು.

ಇಂದಿರೆಯೂ ಮಾತನಾಡಲಿಲ್ಲ. ಆದರೆ ಅನಂತನಿಗೆ ಮಾತು ಬೇಕಿರಲಿಲ್ಲ. ಆ ಮೌನವೇ ಸ್ವರ್ಗವಾಗಿತ್ತು.

ಕಾರು ಮರಳಿ ಬಂದೊಡನೆ ಇಂದಿರೆ ಹೊರಟಳು. ಅಡುಗೆಯ ಹುಡುಗ ಆಗಲೇ ಮನೆಗೆ ಮರಳಿದ್ದ. ಕಾರು ಹೋಗುವ ತನಕವೂ ಅನಂತ ತಾನು ಹೋಗಲಿರುವ ಶುಶ್ರೂಷಾಗೃಹದ ವಿಚಾರ ಏನೊಂದೂ ಪ್ರಶ್ನೆ ಕೇಳಲಿಲ್ಲ. ಕಾರಿನಲ್ಲಿ ಕುಳಿತಮೇಲೆ "ಅದು ಎಲ್ಲಿದೆ?" ಎಂದು ಬಳಿಯಲ್ಲೇ ಇದ್ದ ಇಂದಿರೆಯೊಡನೆ ಕೇಳಿದ.

"ವರ್ಲಿ."

ಭಿಕಾರಿಯಂತೆ ತಾನು ಭಾರವಾದ ಕಾಲುಗಳನ್ನೆತ್ತಿಕೊಂಡು ಅಂದು ಮುಂಜಾನೆ ನಡೆದಿದ್ದ ರಸ್ತೆಗಳಲ್ಲೇ ಈಗ ಕಾರು ಓಡುತ್ತಿತ್ತು. ಇದು ಸಿರಿವಂತಿಕೆಯ ಪ್ರಯಾಣ. ಟ್ರಾಮಿಗಾಗಿ ಕೊಡಲು ಕಾಸಿಲ್ಲದೆ ಕಾಲಿಗೆ ಶ್ರಮ ಕೊಟ್ಟಿದ್ದ ಅನಂತ ಕಾರಿನಲ್ಲಿ ಹೋಗುತ್ತಿದ್ದ. ಬಳಿಯಲ್ಲಿ ಇಂದಿರೆ.

ಚಿಕಿತ್ಸಾಗೃಹದಲ್ಲಿ ಇಂದಿರೆಯ ಗೆಳತಿ ಶ್ರೀಮತಿ ಬಾಟ್ಲಿವಾಲಾ ಇವರಿಬ್ಬರನ್ನೂ ಸಂಭ್ರಮದಿಂದ ಸ್ವಾಗತಿಸಿದಳು. ಇಂದಿರೆ ಅನಂತನ ಪರಿಚಯ ಮಾಡಿಕೊಟ್ಟಮೇಲಂತೂ ಅವಳ ಸಂಭ್ರಮಕ್ಕೆ ಮೇರೆಯೇ ಇರಲಿಲ್ಲ. ಅವಳು ಆ ತನಕ ಕೇಳಿರದಿದ್ದ 'ಕಹಳೆ'ಯಿಂದ ಲೋಕೋದ್ಧಾರವೇ ಆಗಬಹುದೆಂದು ಬಗೆದು ತನಗಾದ ಸಂಭ್ರಮವನ್ನು ತನ್ನ ಮಾತುಗಳಲ್ಲಿ ಚೆನ್ನಾಗಿ ಬಣ್ಣಿಸಿದಳು. ಪ್ರಚಾರ ಬೇಕು, ಅದರಿಂದಾಗಿ ಸಂಸ್ಥೆಗೆ ಸಹಾಯ ಬೇಕು ಎಂಬ ಪ್ರಾಮಾಣಿಕ ಉದ್ದೇಶದಿಂದ ಪ್ರಚೋದಿತವಾದ ಈ ಹೊಗಳುವಿಕೆ ಕೇಳಿ ಅನಂತನ ಕರುಳು ಕಿವುಚಿ ಬಂತು.

ಆ ಸಂಸ್ಥೆಗೆ ನಿಜಕ್ಕೂ ಸಹಾಯ ಬೇಕಿತ್ತು. ಸೊಟ್ಟ, ವಿಕಾರರೂಪಿ, ಊನಗೊಂಡ ಶಿಶುಗಳು, ಜೀವ ಹಿಡಿದು ಭೂಮಿಗೆ ಬಂದು, ನಿತ್ಯ ನರಕದ ಭವಿಷ್ಯವನ್ನು ಕಟ್ಟಿಕೊಂಡ ಕಂಗಾಲ ಶಿಶುಗಳು. ಅವುಗಳ ದುರವಸ್ಥೆಗೆ ಹೊಣೆಯನ್ನು ಆರೋಪಿಸುವುದರಲ್ಲಿ ಅರ್ಥವಿಲ್ಲ. ಆದರೆ ಅವುಗಳಿಗೆ ಸಹಾಯ ದೊರಕಿ, ಇರುವ ಆಯುಷ್ಯ, ನಿಯಂತ್ರಿತಕ್ಷೇತ್ರದಲ್ಲಿಯಾದರೂ ತೃಪ್ತಿಕರವಾಗಿ ಸಂದಾಯವಾಗಬೇಕಾದುದು ಅಗತ್ಯವೆಂದು ಯಾರಿಗೂ ತಿಳಿಯುವಂತಿತ್ತು. ಇದೇ ಚಿಕಿತ್ಸಾಗೃಹಕ್ಕೆ ಸರಕಾರದ ಸಹಾಯ ಸ್ವಲ್ಪ ದೊರಕುತ್ತಿತ್ತು. ಆದರೆ ಇಂಥ ಉದ್ದೇಶಸಾಧನೆಗೆ ಎಷ್ಟು ಸಹಾಯವೂ ಅಲ್ಪವೇ ಎಂದು ತಿಳಿದಿದ್ದ ಅನಂತ, ಸಾಕಷ್ಟು ಪ್ರಸಿದ್ಧಿ ಕೊಡುವುದಾಗಿ ಭರವಸೆಯಿತ್ತ—ತಮ್ಮ ಆ ವಾರದ ಸಂಚಿಕೆ ಪ್ರೆಸ್ಸಿನಿಂದ ಹೊರಬೀಳುವುದು ನಿಜವೆ ಎಂಬ ವಿಚಾರವನ್ನೂ ಮರೆತು ಶ್ರೀಮತಿ ಬಾಟ್ಲಿವಾಲಾ ಕೊಟ್ಟ ಚಿಕಿತ್ಸಾಲಯದ ಭಾವಚಿತ್ರಗಳನ್ನೆಲ್ಲ ಸಂಗ್ರಹಿಸಿದ—ಅವುಗಳ ಪಡಿಯಚ್ಚು ತಯಾರಿಸಲು ತಮ್ಮಲ್ಲಿ ಹಣವಿದೆಯೋ ಎಂಬ ವಿಚಾರವನ್ನು ಮರೆತು.

ಎರಡು ಘಂಟೆ ಅಲ್ಲಿ ಇಂದಿರೆಯ ಜೊತೆಯಲ್ಲಿ ಕಳೆದು, ಶ್ರೀಮತಿ ಬಾಟ್ಲಿವಾಲಾಳ ಕೃತಜ್ಞತೆಯ ಅಭಿವಂದನೆಗಳನ್ನು ಸ್ವೀಕರಿಸಿ ಅನಂತ ಮರಳಿ ಬಂದ.

ಚಿಕಿತ್ಸಾಗೃಹದಲ್ಲಿ ಮೌನವಾಗಿಯೇ ಇದ್ದ ಇಂದಿರೆ ಕಾರಿನಲ್ಲಿ ಮಾತನಾಡಿದಳು:

"ನೋಡಿದರೇನು? ದುಃಖ ನಿಮ್ಮೊಬ್ಬರ ವೈಯಕ್ತಿಕ ಆಸ್ತಿಯಲ್ಲ."

ಅನಂತ ಅತ್ಯಂತ ಸುಖಿ. ನಗುತ್ತಲೇ ಉತ್ತರ ಹೇಳಿದ:

"ಖಂಡಿತವಾಗಿಯೂ ಅಲ್ಲ,"

"ಆದರೆ ಶ್ರೀಮತಿ ಬಾಟ್ಲಿವಾಲಾ ನಿಮ್ಮಂತೆ ಧೈರ್ಯಗೆಡುವುದಿಲ್ಲ."

"ನಾನು ಧೈರ್ಯಗೆಟ್ಟಿದ್ದೇನೆಯೆ?"

"ನಿಮ್ಮ ಬರವಣಿಗೆಯನ್ನಷ್ಟು ಪರೀಕ್ಷಿಸಿ ನೋಡಿ."

'ಅದಕ್ಕೆ ನೀನು ಎಷ್ಟರಮಟ್ಟಿಗೆ ಕಾರಣ?' ಎಂದು ಅನಂತ ಚಿಂತಿಸುತ್ತಿದ್ದ.

"ನನ್ನ ಬರವಣಿಗೆಗೇನಾಗಿದೆ?"

"ಏನಾದರೂ ಆಗಿರಲೇಬೇಕು. ಇಲ್ಲವೇ ನನಗೆ ದೃಷ್ಟಿದೋಷವಿರಬೇಕು.

ಒಂದು ಕಾಲದಲ್ಲಿ ನಾನು ಹೆಮ್ಮೆಪಡುತ್ತಿದ್ದ ನಿಮ್ಮ ಸಂಪಾದಕೀಯಗಳನ್ನು ಈಗ ಓದಲು ಬೇಸರವಾಗುತ್ತಿದೆ. ಆ ಕಾವು, ಆ ಕೆಚ್ಚು ಈಗೆಲ್ಲಿವೆ?"

"ಕಾವಿದ್ದರೇನೇ ಬರವಣಿಗೆ ಪರಿಣಾಮಕಾರಿಯಾಗುವುದೆ?"

"ಒಂದು ಆದರ್ಶದ ವಿಚಾರ ಕಳಕಳಿಯಿರುವವರು, ಬರೇ ತಾರ್ಕಿಕ ಸಂಪ್ರದಾಯವನ್ನನುಸರಿಸಿದರೇನು ಭೂಷಣ? ಕೆಚ್ಚು ತೋರಿಸಿ ಭವಿಷ್ಯದಲ್ಲಿ ಭರವಸೆಯಿರಿಸಿದರೇನೇ ಅದು ಆದರ್ಶ. ನಿಮಗೆ ನಿಮ್ಮಲ್ಲಿಯೇ ನಂಬಿಕೆ ಕಡಿಮೆಯಾದಂತಿದೆ."

ಅನಂತ ಯೋಚಿಸುತ್ತಿದ್ದ: 'ಈ ಸಂದರ್ಭದಲ್ಲಿ 'ಹೌದು' ಎಂದು ಒಪ್ಪಿಕೊಳ್ಳುವುದು ಎಷ್ಟು ಉಚಿತವಾದುದು?' ಎಂದು.

"ಆದರೆ ಪತ್ರಿಕೆಯ ಗಂಡಾಂತರದ ಜೀವನದ ಕಲ್ಪನೆಯೇ ನಿಮಗೆ ಇದ್ದಂತಿಲ್ಲ."

"ಗಂಡಾಂತರ!" ಇಂದಿರೆಯ ದನಿಯಲ್ಲಿ ತಿರಸ್ಕಾರವಿರಲಿಲ್ಲವಾದರೂ ಬೇಸರವಿತ್ತು.

'ನಾಡಿನ ಬಂಧವಿಮೋಚನೆಯ ಹೋರಾಟದ ಹಾದಿಯಲ್ಲಿ ಎಂಥ ಗಂಡಾಂತರವೂ ಕ್ಷುದ್ರವೆ, ಚಿನ್ನಾ' ಎಂದು ಹೇಳಿದ್ದ ಕೇಶವ ಇಂದಿರೆಯ ಕಣ್ಣೆದುರು ಕುಣಿಯುತ್ತಿದ್ದ.

"ನೋಡಿ. ಈಗ ತಂದಿರುವ ಭಾವಚಿತ್ರಗಳ ಪಡಿಯಚ್ಚು ತೆಗೆಯಿಸಲು ಕೊಡಬೇಕಾದ ಹಣವನ್ನೆಲ್ಲಿಂದ ತರುವುದೆಂಬ ಯೋಚನೆ ನಮಗೆ, ಇಂದಿರಾ. ಇದರ ಕಲ್ಪನೆ ನಿಮಗಿಲ್ಲ."—'ನಿನಗೆ' ಎಂಬ ಶಬ್ದ ನಾಲಿಗೆಯ ತುದಿಯತನಕ ಬಂದಿತ್ತು. ಆದರೆ ಸಂಯಮ ತಡೆಯಿತು.

'ನಮ್ಮ ಸಮಾಜ ಬುಡಮೇಲಾಗದೆ, ಆರ್ಥಿಕ ಸಮಾನತೆ ನೆಲೆಗೊಳ್ಳದೆ ಬರೇ ಸ್ವಾತಂತ್ರ್ಯದಿಂದ ಏನು ಪ್ರಯೋಜನ?' ಎಂದು ಕೇಶವ ಕೇಳಿದ್ದ.

ಅನಂತನ ನಿಲುಮೆಗೂ ಒಂದು ಕಾರಣವಿರುವುದು ಸಾಧ್ಯವೇ ಎಂದು ಹಲವು ವಾರಗಳ ಮೇಲೆ ಮೊದಲ ಬಾರಿಗೆ ಇಂದಿರೆಗೆ ತೋರಿತು.

"ಅದು ನಿಜವೆನ್ನಿ. ಆದರೂ ನಿಮಗೇಕೋ ಹಿಂದಿನ ವಿಶ್ವಾಸ ಈಗ ಇದ್ದಂತಿಲ್ಲ—ನಿಮ್ಮ ಬರವಣಿಗೆಯ ಆಧಾರದಿಂದ ಹೇಳುವುದಾದರೆ."

'ಅದು ನಿಜ, ಇಂದಿರಾ' ಎಂದು ಹೇಳಬೇಕೆಂದು ಅನಂತ ಬಯಸುತ್ತಿದ್ದ. ಹಾಗೆ ಹೇಳಿ ಬಳಿಯಲ್ಲೇ ಕುಳಿತಿರುವ ಇಂದಿರೆಯನ್ನು ಎದೆಗೆ ಸೆಳೆದುಕೊಂಡು,

ಆ ಆಲಿಂಗನಸುಖದಲ್ಲಿ 'ನನ್ನ ದೌರ್ಬಲ್ಯವನ್ನೆಲ್ಲ ಜಯಿಸುತ್ತೇನೆ' ಎಂದು ಪ್ರಮಾಣ ಮಾಡಬೇಕೆಂದು ಮನಸ್ಸು ಬಯಸುತ್ತಿತ್ತು. ಆದರೆ ಆ ಬಯಕೆಯ ಹಾದಿಯಲ್ಲಿ ಭಾರತಿಯ ಚಿತ್ರವಿತ್ತು.

ವೈಭವದ ಕನಸಿನ ಅರಮನೆಯಿಂದಿಳಿದು ಬಂದು, ಇಂದಿರೆಯನ್ನು ಬೀಳ್ಕೊಟ್ಟು, ಅನಂತ ಪ್ರೆಸ್ಸಿನ ದಾರಿ ಹಿಡಿದು ಹೋದ. ರಾತ್ರೆ ಎಂಟು ಘಂಟೆಯ ಸುಮಾರಿಗೆ ಪ್ರೆಸ್ಸು ತಲುಪಿದ. ದೀಪದ ಬೆಳಕಿನಲ್ಲಿ ಸೋಮಯಾಜಿಗಳು ಒಬ್ಬರೇ ಪ್ರತಿಗಳಿಗೆ ಹೊದಿಕೆ ಹೊಸೆದು ವಿಳಾಸ ಬರೆಯುತ್ತಿದ್ದರು.

ಅನಂತ ಬಂದುದನ್ನು ನೋಡಿ ಒಮ್ಮೆ ತಲೆಯೆತ್ತಿದವರು ಹಾಗೆಯೇ ತಲೆ ತಗ್ಗಿಸಿ ತಮ್ಮ ಕೆಲಸ ಮುಂದುವರಿಸಿದರು. ಅನಂತ ಕುಳಿತು, ತಾನೂ ಅವರ ಜೊತೆಗೆ ಅದೇ ಕೆಲಸ ಮುಂದುವರಿಸಿ ಕೇಳಿದ:

"ರಾಜೀವ ಬರಲಿಲ್ಲವೆ?"

"ಅವನಿಗೆ ಮೂರು ದಿನಗಳಿಂದ ಜ್ವರವಂತೆ."

೨೯

ರಾತ್ರಿಯ ಅಡುಗೆ ತೀರಿಸಿದ ಭಾರತಿಗೆ ತಾಯಿಯ ನೆನಪು ಪದೇ ಪದೇ ಬರುತ್ತಿತ್ತು. ನಿಮಿತ್ತಮಾತ್ರದ ಅಡುಗೆ. ಅನ್ನ ಬಸಿದು ಇಳಿಸಿದ ಮೇಲೆ ಒಂದಿಷ್ಟು ಮಜ್ಜಿಗೆ ಸುರುವಿ, ಒಂದು ಒಗ್ಗರಣೆ ಕೊಟ್ಟು, ಭಾರತಿ ಸಾರಿನ ಸ್ವರೂಪ ತೋರಿಸಿದ್ದಳು. ತಾನು ಮನೆಯಲ್ಲಿ ಅಂಥ ಮೇಲೋಗರವನ್ನು ಕಂಡುದೇ ಇಲ್ಲ. ಮಾವನ ಮನೆಯಲ್ಲಿ ಅನ್ನ ಬಡಿಸಿಕೊಳ್ಳುತ್ತಿದ್ದುದು ಅತ್ತೆ ನಾಗಮ್ಮನ ಪ್ರೀತಿಯ ಒತ್ತಾಯಕ್ಕಾಗಿ. 'ದೇಹಕ್ಕೆ ಒಳ್ಳೆಯದು, ಭಾರತೀ' ಎಂದು ಅವರು ಪ್ರೀತಿಯಿಂದ ಹೇಳುವಾಗ ಅವರ ಮನಸ್ಸು ನೋಯಿಸಬಾರದೆಂದು ಹಾಕಿಸಿಕೊಳ್ಳುತ್ತಿದ್ದ ಹಿಂದಿನ ಸೌಭಾಗ್ಯ

ಇಂದು ಮುಂಬಯಿಯಲ್ಲಿ ಹಸಿವು ಅಡಗಿಸಿಕೊಳ್ಳಲು ಬೇರೆ ದಾರಿಯೇ ಇದ್ದಿಲ್ಲ.

ಮಧ್ಯಾಹ್ನದ ಊಟಕ್ಕೂ ಇದೇ ಏರ್ಪಾಡು. ಸಂಜೆಗೂ ಇದೇ. ವಾರದ ಅಕ್ಕಿ ಸಾಲುತ್ತಿರಲಿಲ್ಲ. ಆದರೆ ಚಪಾತಿ ಮಾಡಲು ಶ್ರಮಿಸುವ ಶಕ್ತಿ ಭಾರತಿಯಲ್ಲುಳಿದಿರಲಿಲ್ಲ. ಒಂದು ವೇಳೆ ಮಾಡಿದರೂ ನೆಚ್ಚಿಸಿಕೊಳ್ಳಲು ಮತ್ತೆ ಬೇರಾವ ಮೇಲೋಗರ ಸಾಧ್ಯ?

ಏಳು ತಿಂಗಳು ತುಂಬುತ್ತಿದ್ದ ಈ ದಿನಗಳಲ್ಲಿ ಬಡತನ ಬಹಳ ನಿಷ್ಠುರ ಎಂದನಿಸುತ್ತಿತ್ತು. ಈ ನೈಷ್ಠುರ್ಯದ ಜೊತೆಗೆ ಮನಸ್ಸಿನಲ್ಲಿ ತುಂಬಿರುವ ಕತ್ತಲು. ಮೊದಲು ನಂಬಿ ನೆಚ್ಚಿಕೊಂಡಿದ್ದ ತಾಯ್ತನದ ಸುಖದ ಕಲ್ಪನೆಯೂ ಈ ಕತ್ತಲನ್ನು ಹೊಡೆದೋಡಿಸಲು ಸಮರ್ಥವಾಗಲಿಲ್ಲ. ಬೆಳೆಯುತ್ತಿದ್ದ ಪಿಂಡದ ಚಲನವಲನ, ಅದು ಅತ್ತಿತ್ತ ಹೊರಳುವುದೆಂದು ಭಾವಿಸುವಂತಾಗು ವಾಗ ದೊರೆಯುತ್ತಿದ್ದ ಹಿಗ್ಗು, ಈಗೀಗ ವೇದನೆಗೆ ಪರಿವರ್ತನೆ ಹೊಂದುತ್ತಿತ್ತು.

ಅನಂತನ ಮೌನ ಸೃಷ್ಟಿಸಿದ ಸ್ಮಶಾನ ಶಾಂತತೆಯಲ್ಲಿ ಭಾರತಿಗೆ ಏನು ಮಾಡುವುದೆಂದು ತಿಳಿಯುತ್ತಿದ್ದಿಲ್ಲ. ಆತ ಮಾತನಾಡಿ ತನ್ನ ತಿರಸ್ಕಾರವನ್ನು ಪ್ರಕಟಿಸಿದ್ದರಾದರೂ, ತನ್ನೆದೆಯ ಆಳವನ್ನೆಲ್ಲ ತೋಡಿಕೊಂಡು ಒಮ್ಮೆ ಸಮಾಧಾನದ ನಿಟ್ಟುಸಿರು ಬಿಡುತ್ತಿದ್ದೆ, ಎಂದೆನ್ನುವಂತಾಗಿತ್ತು. ಆದರೆ ಅನಂತ ಇದಕ್ಕೆ ಅವಕಾಶ ಕೊಡುತ್ತಿದ್ದಿಲ್ಲ. ಮೀನಾಕ್ಷಮ್ಮನ ಮಾತಿನಲ್ಲಿ ತಾನು ವಿಶ್ವಾಸವಿರಿಸುವುದು ಸರಿಯೋ ಎಂದು ಭಾರತಿ ಚಿಂತಿಸುವಾಗ ಆಕೆಗೆ ಯಾವ ಸಮಾಧಾನವೂ ದೊರಕುತ್ತಿದ್ದಿಲ್ಲ.

ತನ್ನ ಗಂಡನ ಮೇಲೆ ಇಂದಿರೆಯ ವರ್ಚಸ್ಸು ಬಿದ್ದುದರಿಂದಲೇ ಅವರು ತನ್ನನ್ನು ಈ ರೀತಿಯ ತಾತ್ಸಾರ ದೃಷ್ಟಿಯಿಂದ ನೋಡುತ್ತಿರುವರೇ? ಅಥವಾ ನಿರುದ್ಯೋಗದ ನೋವಿನಿಂದಾಗಿ ಈ ರೀತಿಯ ಮೌನವೇ?

ಈ ಸಂದರ್ಭದಲ್ಲಿ ತಾನೇನು ಮಾಡಬೇಕು? ಎಂದು ಭಾರತಿ ಹಲವು ಬಾರಿ ತನ್ನನ್ನೇ ತಾನು ಕೇಳಿಕೊಂಡುದುಂಟು. ಮನಸ್ಸಿನಲ್ಲಿ ಸುಳಿದಿದ್ದ ಸಂಶಯದ ವಿಷಗಾಳಿ ತನ್ನ ಕೆಲಸ ತಾನು ಮಾಡಿತ್ತು. 'ಇಂದಿರೆ ನಾನಿಲ್ಲದ ವೇಳೆ ಸಾಧಿಸಿ ನಮ್ಮಲ್ಲಿಗೆ ಬಂದದ್ದು ಯಾಕೆ?'—ಯಾರೋ ನೆರೆಯವರು, ಭಾರತಿ ಇಲ್ಲದ ವೇಳೆಯಲ್ಲಿ ಮನೆಗೆ ಕಾರಿನಲ್ಲಿ ಹೆಂಗಸರೊಬ್ಬರು ಬಂದಿದ್ದರೆಂದು ತಿಳಿಸಿದ್ದರು.

ಆದರೆ ಅನಂತನ ಮುಖಭಾವದಿಂದ ಏನನ್ನೂ ನಿರ್ಧರಿಸುವುದು ಸಾಧ್ಯ ವಿದ್ದಿಲ್ಲ. ಸಾಗರದ ಆಳವನ್ನು ಅಳೆಯಬಹುದಿತ್ತು; ಆದರೆ ಅನಂತನ ಮುಖ ಚರ್ಯೆಯಿಂದ, ತನ್ನ ಸಂಶಯದ ನಿವಾರಣೆ ಸಾಧ್ಯವಿಲ್ಲವೆಂಬುದು ಭಾರತಿಗೆ ಚೆನ್ನಾಗಿ ಮನದಟ್ಟಾಗಿತ್ತು.

ಈ ಸಂದರ್ಭದಲ್ಲಿ ಏನು ಮಾಡಬೇಕು?

ತಿಂಗಳು ತುಂಬಿಕೊಳ್ಳುತ್ತಿದ್ದ ಭಾರತಿಯ ಹೃದಯದಲ್ಲಿ ಈಗ ಭಯವೂ

ವ್ಯಾಪಿಸಿತ್ತು. ತನ್ನ ದೇಹಸ್ಥಿತಿಯನ್ನು ಇನ್ನೂ ಮನೆಗೆ ತಿಳಿಸದೆ ಉಳಿಯು ವುದು ಒಳ್ಳೆಯದಲ್ಲ; ಗಂಡನ ಔದಾಸೀನ್ಯದಿಂದಾಗಿ ತನ್ನ ಜೀವನದ ಅತ್ಯಂತ ಮಹತ್ವದ ಸಂದರ್ಭದಲ್ಲಿ ಅನಾಹುತವಾಗಬಾರದು ಎಂದು ಭಾರತಿ ತಂದೆಗೆ ಕಾಗದ ಬರೆದಿದ್ದಳು.

ಈ ಕಾಗದ ಮಾಡಬಹುದಾಗಿದ್ದ ಪರಿಣಾಮ ಭಾರತಿಗೆ ತಿಳಿದಿತ್ತು. ಆದರೆ ಗಂಡನನ್ನು ಬಿಟ್ಟು ಈಗ ಊರಿಗೆ ತೆರಳಲು ಮನಸ್ಸು ಕೇಳುತ್ತಿರಲಿಲ್ಲ. ತಾನು ಈಗ, ಈ ಸಂದರ್ಭದಲ್ಲಿ ಅವರನ್ನು ಬಿಟ್ಟು ಹೋದರೆ, ಅವರು ಎಂದೆಂದಿಗೂ ತನ್ನಿಂದ ದೂರ ಹೋಗಿಬಿಡಬಹುದೇ ಎಂಬ ಸಂದೇಹ ಸದಾ ಭಾರತಿಯನ್ನು ಕಾಡುತ್ತಿತ್ತು. ಒಂದು ಸಂಶಯದ ತಳಹದಿಯಲ್ಲಿ ಬೆಳೆದು ನಿಂತ ಭಯ. ತನ್ನ ಕೈಯೊಳಗಿಂದ ನುಸುಳಿಕೊಳ್ಳುತ್ತಿದ್ದ ಪ್ರೀತಿಯ ವಸ್ತು, ಕಣ್ಣಂಚಿನಿಂದ ಮರೆಯಾದರೆ, ಮತ್ತೆ ಮರಳುವುದಿಲ್ಲವೆಂಬ ಸುಲಭ ತರ್ಕ.

ಅನಂತ ಬರುವ ತನಕ ಈಗೀಗ ಭಾರತಿ ಕಾಯುತ್ತಿರಲಿಲ್ಲವಾದರೂ ಇಂದು ಭಾರತಿ ಊಟ ತೀರಿಸಿರಲಿಲ್ಲ. ಆಯಾಸದಿಂದ ಬಂದು ಮಂಚದ ಮೇಲೆ ಬಿದ್ದವಳು ಯೋಚಿಸುತ್ತ ಯೋಚಿಸುತ್ತ ನಿದ್ದೆಹೋಗಿದ್ದಳು. ಸಂಜೆ ಹತ್ತಿಸಿದ್ದ ದೀಪ ಕೂಡ ಹಾಗೇ ಉರಿಯುತ್ತಿತ್ತು. ರಾತ್ರೆ ಹನ್ನೊಂದರ ಸುಮಾರಿಗೆ ಅನಂತ ಬಂದು ಬಾಗಿಲ ಶಬ್ದ ಮಾಡಿದ.

ಕಣ್ಣು ತೆರೆದ ಭಾರತಿ ತುಸು ವೇಳೆ ಮಲಗಿಯೇ ಇದ್ದಳು. ಬರೇ ಬಾಗಿಲ ಶಬ್ದ. ಹೆಸರು ಹಿಡಿದು ಕೂಗುವ ಅಭ್ಯಾಸ ಕೂಡ ಅನಂತನಿಗೆ ಮರೆತು ಹೋಗಿದೆಯೆಂದು ಭಾರತಿ ತಿಳಿಯುವಂತಿತ್ತು. ಆ ಕಾರಣ ಆತ ಕರೆಯದೆ ತಾನು ಏಳುವುದೇ ಇಲ್ಲವೆಂದು ನಿರ್ಧರಿಸಿ ಭಾರತಿ ಬಿದ್ದುಕೊಂಡಳು. ತುಸು ಹೊತ್ತು ಬಾಗಿಲು ಶಬ್ದಮಾಡಿ ಅದು ಫಲಕಾರಿಯಾಗದಿದ್ದುದರಿಂದ ಅನಂತ ಭಾರತಿಯನ್ನು ಕರೆದ:

"ಭಾರತೀ...."

ಎಷ್ಟೋ ದಿನಗಳ ಮೇಲೆ ಮೊದಲ ಬಾರಿಗೆ ಭಾರತಿಯ ಕಳೆಗುಂದಿದ ಮುಖದಲ್ಲೂ ಒಂದು ನಗುವಿನ ರೂಪರೇಷೆ ಮೂಡಿತು. 'ನೆನಪಿದೆ; ಹೆಸರು ಮರೆತಿಲ್ಲ' ಎಂದುಕೊಂಡು ಹೋಗಿ ಬಾಗಿಲು ತೆರೆದಳು.

ಅನಂತ ಒಳಗೆ ಬಂದು ಕದವಿಕ್ಕಿಕೊಂಡ.

"ದೀಪ ಕೂಡ ಆರಿಸದೆ ಮಲಗಿಕೊಳ್ಳುವುದೇ? ಅನವಶ್ಯಕ ದಂಡ."

ಭಾರತಿಯು ನಗು ಹೇಳಹೆಸರಿಲ್ಲದಂತೆ ಓಡಿಹೋಯಿತು, ಎಂಥ ಮೊನಚಾದ ಸ್ವಾಗತ. ಮತ್ತೆ ಅದೇ ಸಂಶಯ, ಅದೇ ಹೆದರಿಕೆ, ಎಲ್ಲ ಭಾವನೆಗಳ ಗೊಂದಲ ಉದ್ರೇಕಿಸುತ್ತಿದ್ದ ಸಿಟ್ಟು.

"ಊಟಕ್ಕೆ ಗತಿಯಿಲ್ಲದಾಗ ದೀಪದಿಂದಲಾದರೂ ಹೊಟ್ಟೆ ತುಂಬಿಸಿ ಕೊಳ್ಳುವುದು ಸಾಧ್ಯವೇ ಎಂದು ನೋಡುತ್ತಿದ್ದೇನೆ."

ಭಾರತಿಯ ಮಾತು ನಾಟಿತು. ಅನಂತ ತಣ್ಣಗಾದ. ಹಸಿದಿದ್ದ ಹೊಟ್ಟೆ, ದಣಿದಿದ್ದ ದೇಹ, ಸಂಜೆಯ ಇಂದಿರೆಯ ಸಾಮಿಪ್ಯಸುಖ ಕೊಟ್ಟ ಸಂತೋಷವೂ ಈಗ ಭಾರತಿಯ ಇದಿರು ಮರೆಯಾಗಿತ್ತು.

"ತೆಗೋ. ಇನ್ನು ನಾಳೆಯೂ ಹಾಗೆ ಅಣಕಿಸಬೇಡ" ಎಂದು ಅನಂತ ಭಾರತಿಯ ಕೈಯಲ್ಲಿ ನಲವತ್ತು ರೂಪಾಯಿಗಳನ್ನು ಹಾಕಿದ.

ಸೋಮಯಾಜಿಗಳು ತಲಪಾಡಿಯವರಿಂದ ಮುನ್ನೂರು ರೂಪಾಯಿ ಪಡೆದಿದ್ದರು. ಅದರಲ್ಲಿ ಐವತ್ತನು ಅನಂತನ ಕೈಲಿರಿಸಿದ್ದರು. ಅನಂತ ತೆಗೆದುಕೊಳ್ಳಲು ಮೊದಲು ನಿರಾಕರಿಸಿದ. ಆದರೆ ಕೊನೆಗೆ ಸೋಮಯಾಜಿಗಳ ತರ್ಕದ ಮುಂದೆ, ಹಣದ ಪ್ರಲೋಭನವೂ ಮಹತ್ವದ ರೂಪ ತಾಳಿ ಕಣ್ಣ ಮುಂದೆ ನಿಂತುದರಿಂದ ಅದನ್ನು ಪಡೆದುಕೊಂಡ.

ಹಣ ಕೈಗೆ ಬಿದ್ದಾಗ ಭಾರತಿಯ ಧೈರ್ಯ, ಸಿಟ್ಟುಗೊಂಡು ಗಂಡನನ್ನು ಅಣಕಿಸುವಂತೆ ಮಾಡಿದ ಧೈರ್ಯ, ಕುಂದಿತು. ಅಂಜುತ್ತಂಜುತ್ತ ಕೇಳಿದಳು:

"ಕೆಲಸ ಸಿಕ್ಕಿತೇ?"

"ಕೆಲಸ?" ಅನಂತ ನಕ್ಕುಬಿಟ್ಟ. "ಹೌದು. ಇಡೀ ದಿನ ಕೆಲಸ ಇಲ್ಲದೆ ಅಲೆಯುತ್ತೇನೆಯೇ? ಹತ್ತು ಮೈಲು ತಿರುಗಿದೆ. ಇರಾಣಿ ಅಂಗಡಿ ಯಲ್ಲಿ ಬೈಸಿಕೊಂಡೆ. ಬಿಟ್ಟಿ ಸಿಗರೇಟು ಗಿಟ್ಟಿಸಿದೆ. ಪ್ರೆಸ್ಸಿಗೆ ಹೋದೆ. ಇಂದಿರೆಯ ಮನೆಗೆ ಹೋದೆ; ಎರಡು ಘಂಟೆ ಕಾರಿನಲ್ಲಿ ತಿರುಗಾಡಿದೆ. ಪುನಃ ಪ್ರೆಸ್ಸಿಗೆ ಬಂದೆ...."

ಯಾವುದೋ ಒಂದು ಉನ್ಮತ್ತ ಭಾವನೆಗೆ ಪುರಸ್ಕಾರ ಕೊಡುವಂತೆ ಅನಂತ ದಿನದ ವರದಿ ಒಪ್ಪಿಸುತ್ತಿದ್ದ. ಇಷ್ಟು ದಿನ ಮಾಡಿರದ ಕೆಲಸ. ಆದರೆ ಅದನ್ನು ಕೇಳುತ್ತಿದ್ದಂತೆ ಭಾರತಿಯ ಮುಖ ಬೆವರುತ್ತಿತ್ತು. ಆಕೆಗೆ ಸರಿಯಾಗಿ ಕೇಳಿದುದು ಎರಡೇ ವಾಕ್ಯಗಳು: 'ಇಂದಿರೆಯ ಮನೆಗೆ ಹೋದೆ. ಕಾರಿನಲ್ಲಿ ಎರಡು ಘಂಟೆ ತಿರುಗಾಡಿದೆ.' ಈ ಉದಾಸೀನತೆಗೆ, ಈ ನೈಷ್ಕುರ್ಯಕ್ಕೆ, ಈ ಮೌನಕ್ಕೆ ಅರ್ಥ ಹೇಳುವ ಮುಖ್ಯ ಸೂತ್ರ—ಇಂದಿರೆ!

'ಯಾರಿಗೆ ಮಂಕುಬೂದಿ ಎರಚಬೇಕಾಗಿದೆಯೋ.' ಮೀನಾಕ್ಷಮ್ಮ ಹೇಳಿದ್ದ ಮಾತು ಭಾರತಿಗೆ ಮತ್ತೆ ಮತ್ತೆ ಕೇಳಿಸುವಂತಿತ್ತು.

ಪುನಃ ತಾನು ತಡೆಯಲಾಶಿಸುತ್ತಿದ್ದ ಸಿಟ್ಟು ಉಕ್ಕುತ್ತಿತ್ತು. ಬರೇ ಭ್ರಮೆಯಿರಬಹುದೆಂದು ಭಾವಿಸಿದ್ದ ವಿಚಾರ ಬೃಹದಾಕಾರ ತಾಳಿ, 'ನಾನೇ ಸತ್ಯ' ಎಂದು ಭಾರತಿಯನ್ನು ಅಣಕಿಸುತ್ತಿತ್ತು.

"ಕಂಡವರ ಕಾರಿನಲ್ಲಿ ತಿರುಗುವಾಗ ಮನೆಯವರು ಉಪವಾಸ ಸತ್ತರೆ ಆ ಯೋಚನೆ ನಿಮಗಿದೆಯೆ? ಅಷ್ಟು ಸುಖ ಹತ್ತಿರವಿದ್ದ ಮೇಲೆ ಮತ್ತೆ ಕೆಲಸದ ಯೋಚನೆ ಯಾಕೆ?"

ಅನಂತ ಭಾರತಿಯನ್ನು ನೋಡುತ್ತಿದ್ದ. ಭಾರತಿ ತುಂಬಾ ಸೊರಗಿದ್ದಳು. ಗರ್ಭಿಣಿ ಹೆಂಡತಿ, ಪ್ರೀತಿ ಮನ ತುಂಬಿಕೊಂಡು ಕುಣಿಯುತ್ತಿದ್ದಿರಬೇಕಾದ ಸಮಯ. ಭಾರತಿಯ ಗುಳಿಬಿದ್ದ ಕಣ್ಣುಗಳು ಅನಂತನನ್ನು ಅಣಕಿಸುತ್ತಿದ್ದವು.

ಅನಂತ ಯೋಚಿಸುತ್ತಿದ್ದ. ಭಾರತಿ ಹೇಳಿದುದು ಅಕ್ಷರಶಃ ನಿಜವಿತ್ತು. ಹಾಗಾದರೆ ಆಕೆಗೆ ತನ್ನ ಅಪರಾಧ ತಿಳಿದಿದೆಯೆ? ಛೆ! ಅದು ಸಾಧ್ಯವೇ ಇಲ್ಲ. ಇಂದಿರೆಗೇ ತಿಳಿಯದಿದ್ದ ಮೇಲೆ ಭಾರತಿಗೆ ತಿಳಿಯುವ ಬಗೆ ಹೇಗೆ? ಹಾಗಾದರೆ ಏಕೆ ಈ ರೀತಿಯ ವ್ಯಂಗ್ಯ?

"ಒಂದು ಆಸ್ಪತ್ರೆ ನೋಡಲು ಹೋಗಿದ್ದೆ, ಭಾರೀ. ಬೇಗ್ಗೆ ನಡೆದು ಹೋಗಿದ್ದ ದಾರಿಯಲ್ಲಿ ಸಂಜೆ ತಲಪಾಡಿಯವರ ಕಾರಿನಲ್ಲಿ ಹೋದೆ. ಅದಕ್ಕೆ ಈ ರೀತಿಯ ರಂಪ ಅಗತ್ಯವಿದೆಯೇ?"

ಗಂಡ ತನ್ನ ಮಾತಿಗೆ ಮಣಿದಿದ್ದಾನೆ ಎಂಬುವದರಿಂದಲೇ ಇನ್ನಷ್ಟು ಉತ್ತೇಜಿತಳಾದ ಭಾರತಿ ಹೇಳಿದಳು:

"ಆಸ್ಪತ್ರೆ ನೋಡಲು ಹೋಗಿದ್ದಿರಿ? ಬಿ.ಎ. ಮುಗಿಸದವರಿಗೆ ಡಾಕ್ಟರ್ ಕೆಲಸ ಸಿಗುವುದೇನು? ಅಥವಾ ಯಾರ ಉಪಚಾರ ಮಾಡುವ ನೆಪದಿಂದ ಹಾಗೆ ಹೋಗಿದ್ದಿರಿ? ಕಟ್ಟಿಕೊಂಡ ಹೆಂಡತಿ ಆಸ್ಪತ್ರೆಯ ದಾರಿ ಹಿಡಿಯುತ್ತಿದ್ದಾಳೆಂಬ ಯೋಚನೆಯೂ ಇಲ್ಲ ನಿಮಗೆ. ಆಸ್ಪತ್ರೆ ನೋಡಲು ಹೋಗಿದ್ದರಂತೆ, ಆಸ್ಪತ್ರೆ...."

"ಭಾರೀऽ...."

ಅನಂತ ಜೋರಾಗಿ ಒದರಿಕೊಂಡ. ಅವನ ಮಾತಿನ ಅಬ್ಬರದಿಂದಾಗಿ ಭಾರತಿ ಮಾತು ನಿಲ್ಲಿಸಿದಳು. ಅನಂತನ ಮುಖ ನೋಡಿದೊಡನೆ ಮುಂದೆ

ಮಾತನಾಡುವ ಸಾಹಸವಾಗಲಿಲ್ಲ. ಆ ಮುಖದಲ್ಲಿ ಆಯಾಸವಿತ್ತು, ಹಸಿವಿತ್ತು, ವೇದನೆಯಿತ್ತು.

ಅದು ಭಾರತಿಯನ್ನು ಕಂಗೆಡಿಸಿತು. ಆಕೆ ಮುಖ ತಿರುಗಿಸಿ ಮಂಚದ ಮೇಲೆ ಬಿದ್ದು ದಿಂಬಿನಲ್ಲಿ ಮುಖ ಹುದುಗಿಸಿಕೊಂಡು ಅಳಲಾರಂಭಿಸಿದಳು.

ಅನಂತ ಕ್ಷಣಕಾಲ ಸುಮ್ಮನಿದ್ದ. ಆತ ಭಾರತಿಯನ್ನು ಸಮಾಧಾನ ಪಡಿಸುವ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಬಟ್ಟೆ ಬದಲಿಸಿ ನೇರ ಅಡುಗೆಯ ಮನೆಗೆ ನಡೆದ. ಇದ್ದ ಅನ್ನವನ್ನೆಲ್ಲ ಬಡಿಸಿಕೊಂಡು ಊಟ ಮಾಡಿದ. ಭಾರತಿ ಉಂಡಿದ್ದಾಳೆಯೋ ಎಂದು ಕೇಳುವ ಗೋಜಿಗೂ ಹೋಗಲಿಲ್ಲ. ಕೈ ತೊಳೆದು ಬಂದವನೇ ಒಂದು ಚಾಪೆ ಬಿಡಿಸಿಕೊಂಡು, ದೀಪವಾರಿಸಿ ಮಲಗಿಕೊಂಡ. ಕ್ಷಣಾರ್ಧದಲ್ಲಿ ಅನಂತನಿಗೆ ನಿದ್ರೆ ಬಂತು.

ಭಾರತಿಯ ಅಳು ಆ ರಾತ್ರಿಯ ನೀರವತೆಯಲ್ಲೂ ವ್ಯಕ್ತವಾಗುತ್ತಿದ್ದುದು ಆಕೆ ಮುಖವಿದಿರು ಅದುಮಿ ಹಿಡಿದುಕೊಂಡಿದ್ದ ದಿಂಬಿಗೆ ಮಾತ್ರ.

ಮರುದಿನ ಬೆಳಗ್ಗೆ ಅನಂತ ನಸುಕಿನಲ್ಲೆ ಎದ್ದು ಮನೆಯಿಂದ ಹೊರಬಿದ್ದ. ಭಾರತಿ ಇನ್ನೂ ಎದ್ದಿರಲಿಲ್ಲ. ರಾತ್ರೆ ಇಡೀ ನಿದ್ದೆಗೆಟ್ಟುದರಿಂದ ಮುಂಜಾವಿನ ಹೊತ್ತಿಗೆ ಬೀಸಿದ ಶೀತಲ ಗಾಳಿಯಿಂದಾಗಿ ಆಕೆಗೆ ಚೆನ್ನಾಗಿ ನಿದ್ದೆಬಂದಿತ್ತು. ಅನಂತ ಆಕೆಯನ್ನು ಎಬ್ಬಿಸಲಿಲ್ಲ. ಕಾಫಿ ಮಾಡಿಕೊಳ್ಳಲೆಂದು ಮನೆ ತುಂಬ ಹುಡುಕಾಡಿದ. ಕಾಫಿಯ ಹುಡಿಯೂ ಸಿಗಲಿಲ್ಲ. ಸಕ್ಕರೆಯ ಡಬ್ಬಿಯೂ ಕಾಣಲಿಲ್ಲ. ಕಾಯಿಸಿದ ಹಾಲನ್ನು ಹಾಗೆಯೇ ಬಿಟ್ಟು, ಅನಂತ ತನ್ನ ನಿತ್ಯದ ಪೋಷಾಕು ಧರಿಸಿ ಮನೆಯಿಂದ ಹೊರಟ.

ಕೈಯಲ್ಲಿ ಹತ್ತು ರೂಪಾಯಿಗಳ ಒಂದು ನೋಟು ಇತ್ತು. ಆ ಕಾರಣ ಸಂಪತ್ತಿನ ಸೌಭಾಗ್ಯವಿತ್ತು. ಸೆಳೆಯುವ ಕಾಲುಗಳನ್ನೆಳೆದುಕೊಂಡು ಹೋಗುವ ಅಗತ್ಯವಿರಲಿಲ್ಲ. ಬಸ್ಸಿನ ದಾರಿ ನೋಡಬಹುದಿತ್ತು. ಇರಾಣಿ ಅಂಗಡಿಯಲ್ಲಿ ಬರೇ ನೀರು ಕುಡಿಯಬೇಕಾಗಿದ್ದಿಲ್ಲ. ಹಸಿದ ಹೊಟ್ಟೆ ಬಯಸಿದುದೆಲ್ಲವನ್ನು ಎರಡು ದಿನಗಳ ಮಟ್ಟಿಗಾದರೂ ಕೊಂಡುಕೊಳ್ಳಬಹುದಿತ್ತು.

ಮನೆಯಿಂದ ಹೊರಟ ಅನಂತ ಬಸ್ಸು ಹಿಡಿದು ನೇರವಾಗಿ ಅಂಧೇರಿ ತಲಪಿದ. ಆತನಿಗೆ ರಾಜೀವನನ್ನು ಕಾಣಬೇಕಿತ್ತು. ಎಳೆಂಟು ದಿನಗಳಿಂದ ಕಂಡಿರದ ರಾಜೀವನಿಗೆ ಆರೋಗ್ಯ ಚೆನ್ನಾಗಿಲ್ಲವೆಂದು ಆತ ತಿಳಿದುದು ಹಿಂದಿನ

ದಿನ ಸೋಮಯಾಜಿಗಳ ಬಾಯಿಂದಲೆ. ಅವರಿಗೂ ಆ ಸುದ್ದಿ ತಿಳಿಸಿದ್ದುದು ಅಂಧೇರಿಯಿಂದ ಶಾಲೆಗೆ ಬರುತ್ತಿದ್ದ ಒಬ್ಬ ವಿದ್ಯಾರ್ಥಿ.

ರಾಜೀವನ ಮನೆ ಹುಡುಕುವುದು ತುಸು ಕಷ್ಟವಾಯಿತು. ರಾಜೀವ ಅನಂತನನ್ನು ಈ ತನಕವೂ ತನ್ನ ಮನೆಗೆ ಕರೆದಿರಲಿಲ್ಲ. ಒಂದೆರಡು ಬಾರಿ ಅನಂತ ಅಲ್ಲಿಗೆ ಹೋಗುವ ತನ್ನ ಬಯಕೆಯನ್ನು ಸೂಚಿಸಿದ್ದರೂ ರಾಜೀವ ನಗೆಯಲ್ಲಿ ಮಾತು ತೇಲಿಸಿ ಆ ಯೋಚನೆಯನ್ನು ಮರೆಸಿದ್ದ. ಅವರೆಲ್ಲರ ಸಂಯುಕ್ತ ಕಾರ್ಯಕ್ಷೇತ್ರ ದೂರದ ಕೋಟೆಯಲ್ಲಿದ್ದುದರಿಂದ, ಆ ವಿಚಾರ ಹೆಚ್ಚು ಆಸಕ್ತಿವಹಿಸುವುದು ಅವಶ್ಯವೆಂದು ಅನಂತನಿಗನಿಸಿರಲಿಲ್ಲ.

ಆದರೆ ಈಗ ಅತ್ಯಂತ ಸಮೀಪದ ಬಂಧುವೊಬ್ಬ ಅನಾರೋಗ್ಯದಿಂದ ಇದ್ದಾನೆ ಎಂದು ಕೇಳಿದಾಗ ಅನಂತನಿಗೆ ಸುಮ್ಮನಿರುವುದು ಸಾಧ್ಯವಾಗಲಿಲ್ಲ. ಎಂತಲೇ ಸೋಮಯಾಜಿಗಳಿಂದ ವಿಳಾಸ ಪಡೆದು ಅಂಧೇರಿ ತಲಪಿದ.

ಕೊನೆಗೆ ರಾಜೀವನ ಕೊಟಡಿ ಸಿಕ್ಕಿತು. ನಿಲ್ದಾಣೆಯಿಂದ ಅನತಿದೂರದಲ್ಲೇ ಗೋಡ್ ಬಂದರ್ ರಸ್ತೆಗೆ ತಾಗಿಕೊಂಡೇ ಒಂದು ಜೀರ್ಣವಾದ ಕಟ್ಟಡದ ಉಪ್ಪರಿಗೆಯ ಮೂಲೆಯ ಕೋಣೆ. ಸಾಧಾರಣ ಗಳಂ ಚದರ ಅಡಿ ವಿಸ್ತೀರ್ಣದ ಕೊಟಡಿ ಒಂದರಲ್ಲಿ ರಾಜೀವನ ಸಂಸಾರ. ಸಂಸಾರವಾಗಿ ಅಲ್ಲಿದ್ದುದು ರಾಜೀವ, ರಾಜೀವನ ಮುದಿ ತಂದೆ ತಾಯಿ ಮಾತ್ರ. ಇನ್ನೊಬ್ಬ ತಮ್ಮ ಪೂಣೆಯಲ್ಲಿ ದುಡಿಯುತ್ತಿದ್ದ.

ಆ ಕೋಣೆಯ ತುಂಬ ಪುಸ್ತಕಗಳ ರಾಶಿ. ಎಲ್ಲ ಹಳೆಯ ಪುಸ್ತಕಗಳ ಅಂಗಡಿಗಳಿಂದ ಕೊಂಡುಕೊಂಡು ಬಂದಿದ್ದ ಪುಸ್ತಕಗಳು. 'ಚಾರ್ ಪಾಯ್' ಯಂತಿದ್ದ ಒಂದು ಮಂಚ, ಒಂದು ಕುರ್ಚಿ, ನಾಲ್ಕು ರೀಪುಗಳ ಮೇಲೆ ಹಲಗೆ ಕೂಡಿಸಿ ಮಾಡಿಕೊಂಡಿದ್ದ ಒಂದು ಮೇಜು, ಆ ಮನೆಯ ವೈಭವವನ್ನು ಸೂಚಿಸುತ್ತಿದ್ದವು. ಮತ್ತೆ ಮನೆಗೆ ಅಗತ್ಯವಿರುವ ಪಾತ್ರೆ ಪರಡಿ.

ರಾಜೀವ ಇನ್ನೂ ಎದ್ದಂತಿರಲಿಲ್ಲ. ಮಂಚದ ಮೇಲೆ ಮಲಗಿದ್ದ. ಮುದಿ ತಂದೆ ಮಗನ ಹಣೆಯ ಉಷ್ಣ ಕಡಿಮೆಯಾಗಲೆಂದು ವಸ್ತ್ರದ ಮಡಿಕೆ ಮಾಡಿ ಅದನ್ನು ತಣ್ಣೀರಲ್ಲಿ ಅದ್ದಿ ರಾಜೀವನ ಹಣೆಗೆ ಒತ್ತಿ ಒರೆಸುತ್ತಿದ್ದರು. ಈ ತನಕ ಕಂಡಿರದ ಅನಂತ ಬಂದೊಡನೆ ಅವರು ಆಶ್ಚರ್ಯದಿಂದ ಕೇಳಿದರು:

"ಏನು?"

"ರಾಜೀವ ಹೇಗಿದ್ದಾನೆ?"

ಮಗುವನ್ನು ಏಕವಚನದಲ್ಲಿ ಸಂಬೋಧಿಸುವ ವ್ಯಕ್ತಿ ಆತ್ಮೀಯವಾದುದೇ ಇರಬೇಕೆಂದು ಬಗೆದು ಅವರು ಅನಂತನನ್ನು ಒಳಗೆ ಕರೆದರು : "ಬನ್ನಿ. ಜ್ವರ ನಾಲ್ಕಾರು ದಿನಗಳಿಂದ ಇದೆ. ಅವನು ಹೇಳಿ ಮೂರು ದಿನವಾಯಿತು. ಆ ಮೊದಲು ತಲೆನೋವೆಂದು ನೆಪ ಮಾಡಿ ಎರಡು ದಿನ ಮಲಗಿದ್ದ."

"ಔಷಧಿ ?"

"ಇಲ್ಲಿಯೇ ಹತ್ತಿರದ ಡಾಕ್ಟರರೊಬ್ಬರಿಂದ ತರುತ್ತಿದ್ದೇವೆ. ಮಲೇರಿಯಾ ಎಂದು ಹೇಳಿದರು."

ಮಾತು ಕೇಳಿ ರಾಜೀವ ಕಣ್ಣು ತೆರೆದ. ಅನಂತನನ್ನು ನೋಡಿ ಮೆಲ್ಲನೆ ನಗಲು ಯತ್ನಿಸಿದ.

"ನೀವು ಯಾಕೆ ಬಂದಿರಿ ?"

"ನೀನು ಹೇಗಿರುವಿಯೆಂದು ನೋಡುವುದು ಬೇಡವೆ ?"

"ನೀವು ಹೇಗಿರುವಿರೆಂದು ಮೊದಲು ನೋಡಿಕೊಂಡಿರುವಿರೇನು ? ಆ ಜ್ವರದ ನಡುವೆಯೂ ರಾಜೀವನ ತರ್ಕಬುದ್ಧಿಗೆ ವಿರಾಮವಿರಲಿಲ್ಲ. ದನಿ ಮಾತ್ರ ತುಸು ಇಳಿದಿತ್ತು.

"ನನ್ನ ವಿಚಾರ ನೀನು ಈಗ ಯೋಚನೆ ಮಾಡುವುದು ಬೇಡ, ರಾಜೂ. ನಿನಗೇನಾಯಿತಿದು ?"

ಹಾಗೆ ಹೇಳಿದ ಅನಂತ ಬಳಿಯಿದ್ದ ಕುರ್ಚಿಯೆಳೆದುಕೊಂಡು ರಾಜೀವನ ಸಮೀಪ ಕುಳಿತು, ಅವನ ಹಣೆ ಮುಟ್ಟಿ ನೋಡಿದ. ಕಾದ ಕೆಂಡದಂತಿತ್ತು ಅದು.

"ಎಷ್ಟಿದೆ ಜ್ವರ ?"

"ಯಾರು ನೋಡಿದ್ದಾರೆ ?"

"ಎಂದರೆ ! ಡಾಕ್ಟರು ಬಂದೇ ಇಲ್ಲವೇ ?"

ರಾಜೀವ ನಕ್ಕ. ಆಮೇಲೆ ತನ್ನ ಹಣೆಯನ್ನು ತಾನೇ ಪರೀಕ್ಷಿಸಿಕೊಂಡು ಅನಂತನ ಮಾತಿಗೆ ಉತ್ತರ ಹೇಳಿದ :

"ಒಂದು 'ವಿಸಿಟ್'ಗೆ ಐದು ರೂಪಾಯಿ. ಅವರು ಬಂದ ಕರ್ಮಕ್ಕೆ ಇನ್ನೊಂದು ಇಂಜೆಕ್ಷನ್ ಚುಚ್ಚಿದರೆ ಅದಕ್ಕೆ ಮೂರು ರೂಪಾಯಿ ಬೇರೆ. ಒಮ್ಮೆ ಬರುವ ಅಭ್ಯಾಸವಾಯಿತೆಂದರೆ ಎರಡು ದಿನಕ್ಕೊಮ್ಮೆ ಅವರು ಬರುತ್ತಲೇ ಇರುತ್ತಾರೆ."

"ನಿನ್ನ ಮಾತಿಗೊಂದೂ ಅರ್ಥವಿಲ್ಲ, ರಾಜೂ. ರೋಗ ಪರೀಕ್ಷೆಯಾಗದೆ ಕೊಡುವ ಔಷಧಿ ನಾಟುವುದೇ? ಒಮ್ಮೆ ಕರೆಸಿದ್ದರೇನಾಗುತ್ತಿತ್ತು?"

ರಾಜೀವ ವಿಷಯ ಮರೆಸುವ ಇಚ್ಛೆಯಿಂದ,

"ನಿಮಗೆಲ್ಲಾದರೂ ಕೆಲಸ ಸಿಕ್ಕಿತೇ?" ಎಂದು ಕೇಳಿದ.

"ಇಲ್ಲ. ಆದರೆ ಅದನ್ನು ಕಟ್ಟಿಕೊಂಡು ಈಗ ಏನಾಗಬೇಕಾಗಿದೆ?"

"ಸೋಮಯಾಜಿಗಳು ಏನಾದರೂ ಕೊಟ್ಟರೆ?"

"ನಿನ್ನೆ ಪ್ರೆಸ್ಸಿನಲ್ಲಿ ಪುನಃ ಗಲಾಟೆಯಾಯಿತು. ತಲಪಾಡಿಯವರಿಂದ ಮುನ್ನೂರು ರೂಪಾಯಿ ತಂದು ಅವರ ಪ್ರೆಸ್ಸಿಗೆ ಕೊಟ್ಟರು; ನನಗೊಂದೈವತ್ತು ಕೊಟ್ಟರು."

"ಹಾ! ಹಣ ಕೊಡುತ್ತಿದ್ದುದು ತಲಪಾಡಿಯವರೆ?"

ಅನಂತ ಸತ್ಯಸ್ಥಿತಿಯನ್ನೆ ಹೇಳಿದ್ದ. ಆದರೆ ಸೋಮಯಾಜಿಗಳು ಇಷ್ಟು ದಿನ ರಾಜೀವನಿಂದಲೂ ಈ ಸಹಾಯದ ವಿಷಯವನ್ನು ಮರೆಮಾಚಿದ್ದರು ಎಂಬುದು ತಿಳಿದುದು ಈಗಲೇ.

"ಯಾಕೆ, ನಿನಗೆ ತಿಳಿದಿರಲಿಲ್ಲವೇನು?"

"ನಮ್ಮ ಮಾಸ್ತರರ ಸ್ವಭಾವವೇ ಹಾಗೆ. ಈ ವಿಚಾರ ತಿಳಿದಿದ್ದರೆ ನನ್ನಿಂದ ಯಾವ ಉತ್ತರ ನಿರೀಕ್ಷಿಸಬಹುದೆಂದು ಅವರಿಗೆ ಗೊತ್ತಿತ್ತು. ಆ ಕಾರಣ ಅವರು ಹೇಳಲೇ ಇಲ್ಲ."

ಈ ಸಂದರ್ಭದಲ್ಲೂ ಅನಂತನ ಕುತೂಹಲ ಚಿಗುರಲಾರಂಭಿಸಿತು.

"ಹಾಗೆಂದರೇನು, ರಾಜೂ. ಅವರು ನನ್ನೊಡನೆ ಹೇಳಿಲ್ಲವೆ?"

"ಹೌದು, ನಿಮ್ಮ ಹೃದಯದ ಮಿದುತನ ಅವರಿಗೆ ತಿಳಿದಿದೆ. ನನ್ನ ಎದೆಯ ಕಾಠಿಣ್ಯದ ಪರಿಚಯವೂ ಚೆನ್ನಾಗಿಯೇ ಇರಬೇಕು. ತಲಪಾಡಿಯವರ ಸಹಾಯವನ್ನು ನಾನು ನಿರಾಕರಿಸುವುದಿಲ್ಲ. ಆದರೆ ಆ ಸಹಾಯದ ಹಿಂದೆ ಯಾವುದೇ ಉದ್ದೇಶವಿದೆಯಾದರೆ ಅದನ್ನು ಖಂಡಿತ ನಿರಾಕರಿಸುತ್ತೇನೆ."

ತಲಪಾಡಿಯವರಿಗೆ ಈ ರೀತಿಯ ಸಹಾಯ ಮಾಡಲು ಏನಾದರೂ ಉದ್ದೇಶವಿರಬಹುದೆ?

ಅನಂತ ಎರಡು ಬಾರಿ ತನ್ನನ್ನೇ ತಾನು ಕೇಳಿಕೊಂಡ. ಆದರೆ ಯಾವ ಸಮಾಧಾನವೂ ದೊರಕಲಿಲ್ಲ.

"ವ್ಯಾಪಾರಜೀವನದಲ್ಲಿ ಸುಲಿಯುವ ಜನ. ನೆಪಮಾತ್ರಕ್ಕೆ ಗಾಂಧಿ,

ದೇವರು. ಕೂಡಿಸಿರುವ ಸಂಪತ್ತಿನ ಹಿಂದಿರುವುದು ಬೆವರು, ರಕ್ತ. ಕೇಶವ ಆ ಹುಡುಗಿಯಲ್ಲಿ ಮೋಹಗೊಂಡು, ಬಂದದ್ದೆಲ್ಲ ಬರಲಿ, ಎಂದ. ಆದರೆ ಆಷ್ಟರಲ್ಲೇ ಅವನ ಆಯುಷ್ಯ ಮುಗಿಯಿತು."

"ನಿನಗೆ ತಲಪಾಡಿಯವರ ಅಳಿಯನ ಪರಿಚಯವಿದ್ದಿತೆ, ರಾಜೂ?"

"ಕೇಶವನ ಪರಿಚಯವೆ? ಬರೀ ಪರಿಚಯವೆ?"

ರಾಜೀವನ ಈ ಮಾತಿನ ಹಿಂದೆಯೇ ನೆನಪು ಕೂಡ ಬಹಳ ಓಡುತ್ತಿತ್ತು. ಅಂದಿನ ಯುವಕವರ್ಗದ ಮುಂದಾಳು; ತನ್ನ ಸ್ನೇಹಿತ. ಒಂದೇ ಆದರ್ಶದ ಆವರಣದಲ್ಲಿ ದುಡಿಯುತ್ತಿದ್ದ ಎರಡು ವ್ಯಕ್ತಿಗಳು. ಅವರು ನಡೆಸಿದ್ದ ತರ್ಕ, ವಿಚಾರವಿನಿಮಯ, ಸಿಟ್ಟು, ಜಗಳ, ಮತಭೇದ, ಮತ್ತೆ ಪುನಃ ಐಕ್ಯ, ಸ್ನೇಹ.

"ಜೀವನದ ಮಾಧುರ್ಯ ಹೆಚ್ಚಾಗಿ ಪ್ರಕಟವಾಗುವುದು ಸ್ಮೃತಿಯಲ್ಲಿ, ಅನಂತರಾಯರೆ."

ರಾಜೀವ ಯಾವುದೋ ಒಂದು ವಿಚಿತ್ರ ಸುಖವನ್ನನುಭವಿಸುತ್ತಿದ್ದ. ಪುನಃ ಮನಸ್ಸು ಹಿಂದೋಡುತ್ತಿತ್ತು.

ಕೇಶವನ ಕೊನೆಯ ದಿನಗಳಲ್ಲಿ ಆತ ತುಂಬ ದೂರವಿದ್ದ. ಪ್ರಾಯಶಃ ತಲಪಾಡಿಯವರ ಮಗಳ ಮದುವೆಯಾದಮೇಲೆ ಅವರು ಹೆಚ್ಚಾಗಿ ಬೆರೆಯುವ ಸಂದರ್ಭ ಬಂದೇ ಇರಲಿಲ್ಲ. ಆಷ್ಟರ ಹೋರಾಟದ ಅವಧಿಯಲ್ಲಿ ಅವರಿಬ್ಬರಲ್ಲಿ ಮತಭೇದದಿಂದಾಗಿ ವೈಷಮ್ಯವಿತ್ತು.

ಆ ಮತಭೇದವನ್ನು ರಾಜೀವ ಮರೆತುದು ಆಗಸ್ಟ್ ಒಂಬತ್ತು, ನಲವತ್ತೆರಡರ ಸಂಜೆ—ಕೇಶವ ಗುಂಡು ತಾಗಿ ದಾದರಿನಲ್ಲಿ ತೀರಿಕೊಂಡ ಸುದ್ದಿ ತಿಳಿದಾಗ.

ರಾಜೀವನ ಮನಸ್ಸು ಆ ಜ್ವರದ ಕಾವಿನಲ್ಲೂ ಈ ರೀತಿ ಓಡುತ್ತಿದ್ದಿತಾದರೆ ಅನಂತನ ವಿಚಾರಗತಿ ಇನ್ನೊಂದು ದಾರಿ ಹಿಡಿದು ಸಾಗಿತ್ತು. ರಾಜೀವ—ಕೇಶವರು ಗೆಳೆಯರಾಗಿದ್ದಿರಬಹುದೆ? ಆದರೆ ರಾಜೀವ ಇಂದಿರೆಯ ವಿಶೇಷ ಪರಿಚಯವಿದೆಯೆಂದು ಯಾವಾಗಲೂ ತೋರಿಸಿಕೊಂಡಂತಿರಲಿಲ್ಲ. ಹಾಗಾದರೆ ಬರೀ ಕೇಶವನ ಪರಿಚಯವೆ? ಈ ಕೇಶವ ಯಾರಂತಿದ್ದಿರಬಹುದು? ಇಂದಿರೆಯ ಸೌಭಾಗ್ಯ ಸರ್ವಸ್ವವಾಗಿದ್ದ ಆ ಅದೃಷ್ಟವಂತ ವ್ಯಕ್ತಿಯ ನಿಲುವು ಜೀವನದಲ್ಲಿ ಯಾವ ರೀತಿಯದಾಗಿದ್ದಿರಬಹುದು?

"ಬ್ಲಡಿ ಸ್ಪೈನ್ಸ್, ಡರ್ಟಿ ಸ್ಪೈನ್ಸ್. ಸ್ಟೂಜಸ್ ಎಂಡ್ ಸ್ಲೇವ್ಸ್ ಆಫ್ ದಿ ಬ್ರಿಟಿಷ್. ದಿ ರಿನೌನ್ಡ್ ರಾಸ್ಕಲ್ಸ್ !"

ರಾಜೀವ ಬಡಬಡಿಸುತ್ತಿದ್ದ. ಅನಂತನ ಯೋಚನೆ ಒಮ್ಮೆಗೇ ನಿಂತಿತು.

"ರಾಜೂ, ರಾಜೂ" ಎಂದು ಎರಡು ಬಾರಿ ಕರೆದ. ಎರಡು ಬಾರಿಯೂ ರಾಜೀವ ಮಾತನಾಡಲಿಲ್ಲ. ನೆಟ್ಟ ನೋಟದಿಂದ ಅನಂತನನ್ನೆ ನೋಡುತ್ತಿದ್ದ.

"ಇನಾಕ್ಯುಲೇಶನ್ ಮಾಡಿಸಿಕೊಂಡಿರುವಿರೇನು. ಇನಾಕ್ಯುಲೇಶನ್ ? ಹೇಳಿದರೆ ತಿಳಿಯುವುದಿಲ್ಲವೆ, ನಿಮಗೆ ? ಇಲ್ಲಿಗೇಕೆ ಬಂದಿರಿ ?"

ಅನಂತನ ಕೈ ಪುನಃ ರಾಜೀವನ ಹಣೆಯ ಮೇಲೇರಿತು ? ಜ್ವರದ ಅಮಲಿನಲ್ಲಿ ರಾಜೀವ ಏನೇನೊ ಮಾತನಾಡುತ್ತಿದ್ದಾನೆಂದು ಆತನಿಗೆ ತಿಳಿದಿತ್ತು. ಆ ಕಾರಣ ಉತ್ತರಿಸುವ ಪ್ರಶ್ನೆಯೇ ಇರಲಿಲ್ಲ.

ಒಮ್ಮಿಂದೊಮ್ಮೆಗೆ ರಾಜೀವನ ಪ್ರಶ್ನೆ ಬಂತು :

"ಸಂಕುವಿನ ನೆನಪಿದೆಯೆ, ಅನಂತರಾಯರೆ ?"

ನೆನಪು ! ಅನಂತನ ಮುಂಬಯಿ ಜೀವನದ ಇತಿಹಾಸದ ಗತಿಯನ್ನೆ ಬದಲಿಸಿದ ಒಂದು ರುದ್ರ ರಾತ್ರಿ.

"ಏನೂ ಮಾತನಾಡಬೇಡ, ರಾಜೂ—ಜ್ವರ ಹೆಚ್ಚಿದೆ. ಆಯಾಸ ಮಾಡಿಕೊಳ್ಳಬಾರದು. ನಾನು ಹೋಗಿ ಡಾಕ್ಟರರನ್ನು ಕರೆದು ತರುತ್ತೇನೆ."

"ಆ ಹುಡುಗರಿಗೆ ಎಷ್ಟು ಹೇಳಿದರೂ ತಿಳಿಯುವುದಿಲ್ಲ. ಇನಾಕ್ಯುಲೇಶನ್ ಮಾಡಿಸಿಕೊಳ್ಳಿ ಎಂದು...."

"ರಾಜೂ, ಮಾತನಾಡಬಾರದೆಂದು ಹೇಳಿಲ್ಲವೆ ?"

"ನಿಮಗೆ ಶೆಲ್ಲಿಯ ಪರಿಚಯ ಚೆನ್ನಾಗಿ ಇರಬೇಕಲ್ಲ, ಅನಂತರಾಯರೆ ?"

"ರಾಜೂ, ಮಾತನಾಡಬಾರದೆಂದು ಎಷ್ಟು ಸಲ ಹೇಳಬೇಕು ?" ಅನಂತ ಏಳುವುದರಲ್ಲಿದ್ದ.

"ಅವನ 'Ode to the west wind' ಕವಿತೆಯ ಕೊನೆ ಸಾಲುಗಳು ನೆನಪಿವೆಯೇನು ?

'The trumphet of a prophecy ! O, wind,
If winter comes, can spring be far behind ?' "

ಅನಂತನಿಗೆ ಏನು ಮಾಡುವುದೆಂದು ತಿಳಿಯಲಿಲ್ಲ. ವಿಪರೀತ ಜ್ವರದ

ಅಮಲಿನಲ್ಲಿ ರಾಜೀವ ಯಾವುದೋ ಭ್ರಾಂತಿಯ ವಿಶ್ವದ ಕನಸು ಕಾಣುತ್ತಿದ್ದ. ದುಡಿಮೆಯ ನೋವಿನ ಜೀವ ನರಳುವಾಗ ಅಲೆ ಅಲೆಯಾಗಿ ಬರುವ ಆದರ್ಶದ ಕಲ್ಪನೆಯ ಕನಸಿನ ವೈಭವ—ದುಸ್ಸಹ ಯಾತನೆಯ, ತೀವ್ರ ಅತೃಪ್ತಿಯ ಕಳಕಳಿಯ ಹಿನ್ನೆಲೆಯಲ್ಲಿ ನಿಂತ ಸೃಷ್ಟಿ.

" 'ಕಹಳೆ'ಯನ್ನು ಯಾಕೆ ನಿಲ್ಲಿಸಬಾರದು, ಅನಂತರಾಯರೆ ?"

ಪುನಃ ಮಾತು.

ಅನಂತ ಕೆಲವು ದಿನಗಳ ಹಿಂದೆ ಸೋಮಯಾಜಿಗಳೊಡನೆ ಕೇಳಿದ ಪ್ರಶ್ನೆ ಈಗ ರಾಜೀವನ ಬಾಯಿಂದ ಹೊರಬಂದಿದೆ—ತನ್ನನ್ನು ಉದ್ದೇಶಿಸಿ.

"ನಿಲ್ಲಿಸುವುದು ?"

"ನಮಗೆ ಸಾಧ್ಯವಿಲ್ಲ. ಬರೇ ಒಂದು ಲಕ್ಷ ಜನಕ್ಕೆ ಒಂದು ವೇದಿಕೆ ಕಟ್ಟಿ ಬೆಳಕಿನ ಹೊಸ ದಿನವನ್ನು ತರುವ ಸೋಮಯಾಜಿಗಳ ಕನಸು ಬರೇ ಕನಸು. ಈ ಕುರಿಜನಗಳಿಗೆ ಆದರ್ಶವೇನು ಗೊತ್ತು? ನಮಗೆ ಬೇಕಾಗಿರುವುದು ಕ್ರಾಂತಿ. ಸಮಗ್ರ ಭಾರತವನ್ನು ನಡುಗಿಸುವ, ಇಂದಿನ ಅಸ್ತವ್ಯಸ್ತ ಅವಸ್ಥೆಯನ್ನು ಬುಡಮೇಲು ಮಾಡಿ, ಹೊಸ ಬಾಳಿನ ಯುಗಾದಿಗೆ ಕೊಂಡೊಯ್ಯುವ ಮಹಾಕ್ರಾಂತಿ...."

ಅನಂತ ತಾನು ಅಲ್ಲಿ ಕುಳಿತುದರಿಂದಲೇ ರಾಜೀವ ಬಡಬಡಿಸುತ್ತಿದ್ದಾನೆಂದು ಎದ್ದು ಹೊರಗೆ ಬಂದ. ಅವನನ್ನನುಸರಿಸಿಯೇ ರಾಜೀವನ ತಂದೆಯೂ ಹೊರಬಂದರು.

"ಆರು ವರ್ಷಗಳಾದವು, ಒಂದು ದಿನ ಕಾಯಿಲೆಯೆಂದು ಮಲಗಿದ್ದಿಲ್ಲ, ರಾಜು. ಇದು ಎಲ್ಲಿಂದ ಬಂದಿತೋ. ರಾತ್ರೆಯಿಡೀ ನಿದ್ದೆಯಿಲ್ಲ. ಇದೇ ಒದರಾಟ. ಕೇಳಿ ಕೇಳಿ ಸಾಕಾಗಿ ಹೋಯಿತು."

'ನಿಮಗೆ ಸಾಕಾಗಿ ಹೋಯಿತೇ ?' ಎಂದು ಕೇಳಬೇಕೆಂದು ಅನಂತನಿಗೆ ಎನಿಸಿತು. ಆದರೆ ಆ ಮುದುಕರ ಮುಂದೆ ಹಾಗೆ ಮಾತನಾಡಬಾರದು ಎಂದು,

"ಯಾವ ಡಾಕ್ಟರರು ಮದ್ದು ಕೊಟ್ಟಿದ್ದಾರೆ, ನನಗೆ ಸ್ವಲ್ಪ ಡಿಸ್ಪೆನ್ಸರಿ ತೋರಿಸಿ" ಎಂದು ಕೇಳಿದ.

"ಅದು ತೆರೆಯುವುದು ಒಂಭತ್ತು ಘಂಟೆಗೆ. ಅವರ ಮನೆ ಎಲ್ಲಿದೆಯೋ ನನಗೆ ಗೊತ್ತಿಲ್ಲ" ಎಂದು ಉತ್ತರ ಬಂತು.

ಅನಂತ ಒಂಬತ್ತು ಘಂಟೆಯಾಗುವ ತನಕ ಅಲ್ಲಿಯೇ ಉಳಿದಿದ್ದು

ಆಮೇಲೆ ರಾಜೀವನ ತಂದೆಯ ಜೊತೆಗೆ ವೈದ್ಯರಲ್ಲಿಗೆ ಹೋದ. ಹತ್ತು ಘಂಟೆಯ ಹೊತ್ತಿಗೆ ಇವರ ಸರದಿ ಬಂತು. ಡಾಕ್ಟರ ಇಚ್ಛೆಯಂತೆ ಮತ್ತೂ ಸ್ವಲ್ಪ ಹೊತ್ತು ಕಾದಿದ್ದು, ಡಾಕ್ಟರರ ಜೊತೆಗೆ ಪುನಃ ರಾಜೀವನ ಮನೆಗೆ ಬಂದ. ಅವರು ರೋಗಿಯನ್ನು ಪರೀಕ್ಷಿಸಿ, ರೋಗದ ಲಕ್ಷಣಗಳನ್ನೆಲ್ಲ ಕೇಳಿ ಯಾದ ಮೇಲೆ "ಇನ್ಫ್ಲುಯೆಂಜಾ ಇರಬಹುದು" ಎಂದರು. ಔಷಧಿಗಾಗಿ ಬರುವಂತೆ ಹೇಳಿದರು. ಅನಂತ ಪುನಃ ಅವರಲ್ಲಿಗೆ ಹೋಗಿ ಔಷಧಿ ಪಡೆದು, ಸಂದರ್ಶನದ ಹಾಗೂ ಎರಡು ದಿನಗಳ ಔಷಧಿಯದೆಂದು ಆರೂವರೆ ರೂಪಾಯಿ ಗಳನ್ನು ತೆತ್ತು, ಮರಳಿ ರಾಜೀವನ ಮನೆಗೆ ಬಂದ. ಪಥ್ಯಪಾನಾದಿಗಳ ವಿವರಗಳನ್ನೆಲ್ಲ ರಾಜೀವನ ತಂದೆಗೆ ತಿಳಿಸಿ, ಅವನು ಸೋಮಯಾಜಿಗಳನ್ನು ಕಾಣಲೆಂದು ಕೋಟೆಯ ಕಡೆ ಹೊರಟಾಗ ಕಿಸೆಯಲ್ಲಿ ಬರೆ ಮೂರು ರೂಪಾಯಿ ಉಳಿದ್ದವು.

ಆದರೆ ಅನಂತನಿಗೆ ಅದರಿಂದಾಗಿ ತುಸುವಾದರೂ ಬೇಸರವೆನಿಸಲಿಲ್ಲ.

೩೦

ಅನಂತ ಪ್ರೆಸ್ಸು ತಲಪಿದಾಗ ಹಿಂದಿನ ದಿನದಂತೆಯೇ ಹೊತ್ತು ನೆತ್ತಿಗೆ ಏರಿತ್ತು. ಸೋಮಯಾಜಿಗಳು ಪ್ರೆಸ್ಸಿನಲ್ಲಿರಲಿಲ್ಲ. ಆ ವಾರದ ಸಂಚಿಕೆಯ ಬಟವಾಡೆಯ ವ್ಯವಸ್ಥೆಯನ್ನು ಬೇಗ್ಗೆ ಬಂದಿದ್ದ ಬಳಗದ ಹುಡುಗರ ಮೂಲಕ ಮಾಡಿ ಅವರು ಮನೆಗೆ ಮರಳಿದ್ದರು. ಕೆಲಸದ ಮಟ್ಟಿಗೆ ಮುಂದಿನ ವಾರದ ಸಂಚಿಕೆಯ ಪ್ರಥಮ ದಿನವಾದುದರಿಂದ ಸ್ವಾಭಾವಿಕವಾಗಿ ಎಲ್ಲರೂ ವಿಶ್ರಾಂತಿ ಪಡೆಯುವ ದಿನವೇ ಆಗಿದ್ದಿತು. ಅನಂತನಿಗೂ ಸೋಮಯಾಜಿಗಳು ಇರಬಹುದೆಂದು ಪೂರ್ಣ ಭರವಸೆಯೇನೂ ಇರಲಿಲ್ಲ. ಆದರೆ ರಾಜೀವನ ದೇಹಸ್ಥಿತಿಯ ಬಗೆಗೆ ಅವರಿಗೆ ವರದಿಯೊಪ್ಪಿಸಬೇಕಿತ್ತು. ಹೀಗಾಗಿ ಹುಡುಕಿ ಕೊಂಡು ಮೊದಲು ಪ್ರೆಸ್ಸಿಗೆ ಬಂದ.

ಕಂಪೋಸಿಟರ್, "ಅವರು ಬೇಗ್ಗೆಯೇ ಮನೆಗೆ ಹೋಗಿದ್ದಾರೆ" ಎಂದಾಗ ಅನಂತನೂ ಅವರ ಮನೆಯ ದಾರಿಯನ್ನನುಸರಿಸುವುದೆಂದು ನಿಶ್ಚಯಿಸಿದಾಗ ಇನ್ನೊಂದು ಸುದ್ದಿ ಬಂತು:

"ನಿಮ್ಮನ್ನು ಕೇಳಿಕೊಂಡು ಆಫೀಸಲ್ಲಿ ಒಬ್ಬ ಹೆಂಗಸು ಬಂದಿದ್ದರು."

"ನನ್ನನ್ನೇ?"

"ಹೌದು. ನಿಮ್ಮನ್ನೇ."

"ಏನಾದರೂ ಹೇಳಿದಳೆ?"

"ಇಲ್ಲ."

ಇಂದಿರೆ ಇಲ್ಲಿಗೇಕೆ ಬಂದಳು? ತನ್ನನ್ನು ಹುಡುಕಿಕೊಂಡು ಬರುವಂಥ ಕೆಲಸವೇನಿತ್ತು? ಬರೀ ಮಾತನಾಡಲೆಂದೆ?

ಈ ತನಕ ಪ್ರೆಸ್ಸು ನೋಡದಾಕೆ, ಇಲ್ಲಿಗೆ ಹುಡುಕಿಕೊಂಡು ಬರುವಷ್ಟು ಆಸಕ್ತಿ ವಹಿಸಲು ಕಾರಣ?

ಮನಸ್ಸು ಮೂಕ ಸಂಭಾಷಣೆ ನಡೆಸಿತ್ತು. ಹಿಂದಿನ ದಿನದ ನೆನಪು ಮರುಕಳಿಸುತ್ತಿತ್ತು. ವರ್ಲಿಯ ಹಾದಿಯಲ್ಲಿ ಎಂಥ ಸುಂದರ ಪ್ರವಾಸ!

'ಇಂದಿರೆ! ನನ್ನ ಪ್ರೀತಿಯ ಇಂದಿರೆ!' ಎಂದು ಅನಂತ ಮನಸ್ಸಿನಲ್ಲೆ ಹಾಡುತ್ತ ಸೋಮಯಾಜಿಗಳ ಮನೆಯ ಕಡೆ ನಡೆದ.

ಸೋಮಯಾಜಿಗಳು ಊಟ ತೀರಿಸಿ ತುಸು ವಿರಮಿಸಿಕೊಂಡಿದ್ದರು. ಅವರ ಮುಂದೆ ನೋಡಿ ಬಿಡಿಸಿರಿಸಿದ್ದ 'ಕಹಳೆ'ಯ ಲೆಕ್ಕಪತ್ರಗಳೆಲ್ಲ ಹಾಗೆಯೇ ಇದ್ದುವು.

ಅನಂತ ಬಾಗಿಲು ದೂಡಿಕೊಂಡು ಒಳಗೆ ಬರುತ್ತಿದ್ದಂತೆ ಅವರ ಮೊದಲನೆಯ ಪ್ರಶ್ನೆ ಬಂತು:

"ರಾಜೀವ ಹೇಗಿದ್ದಾನೆ, ಅನಂತಾ?"

"ಬೆಳಗ್ಗೆ ೧೦೪ ಜ್ವರವಿತ್ತು. ಡಾಕ್ಟರರನ್ನು ಕರೆದುಕೊಂಡು ಬಂದೆ. ಇನ್‌ಫ್ಲುಯೆಂಜಾ ಎಂದು ಹೇಳಿದರು. ಹಾಗಿದ್ದರೆ ಇಷ್ಟೊತ್ತು ಬಿಡಬೇಕು. ಆದರೆ ನನಗೇಕೋ ಟೈಫೈಡ್ ಇರಬಹುದೇ ಎಂದು ಸಂದೇಹ."

"ಯಾಕೆ?"

"ಡೆಲೀರಿಯಮ್ ಇತ್ತು. ಏನೇನೋ ಬಡಬಡಿಸುತ್ತಿದ್ದ. ನಾನು ಯಾಕೆ ಇನಾಕ್ಯುಲೇಶನ್ ಮಾಡಿಸಿಕೊಳ್ಳಲಿಲ್ಲವೆಂದು ಕೇಳುತ್ತಿದ್ದ. ಹಿಂದಿನ ನೆನಪೆಲ್ಲ ಬರುತ್ತಿತ್ತು. ಎಲ್ಲಾದರೂ ಇತ್ತೀಚೆಗೆ ಟೈಫೈಡ್ ರೋಗಿಗಳ ಆರೈಕೆ ಮಾಡಿದ್ದನೇ ಎಂದು ಸಂದೇಹ."

"ಇದ್ದರೂ ಇರಬಹುದು. ನೊನ್ನೆ ನೊನ್ನೆ ಒಬ್ಬ ಹುಡುಗ ತೀರಿಹೋದ."

"ಹಾಗೇನು!" ಅನಂತನನ್ನು ಬಾಧಿಸುತ್ತಿದ್ದ ಸಂಶಯಕ್ಕೆ ಪರಿಹಾರ ದೊರಕಿತು.

ಅದೇ ಕಾರಣ ರಾಜೀವನಿಗೆ ಸಂಕುವಿನ ನೆನಪು.

"ಹಾಗಾದರೆ ಏನು ಮಾಡೋಣ ? ಆ ಮುದಿ ತಂದೆತಾಯಿಗಳು ಏನೂ ಮಾಡುವಂತಿಲ್ಲ."

"ಇನ್ನೊಂದೆರಡು ದಿನ ನೋಡೋಣ. ಆಮೇಲೂ ಜ್ವರ ಇಳಿಯ ದಿದ್ದರೆ ಆಸ್ಪತ್ರೆಗೆ ಸೇರಿಸುವ ವಿಚಾರ ಮಾಡಬೇಕು."

"ಹೌದು."

ಅನಂತ ಮೌನವಾಗಿಯೇ ತುಸು ಹೊತ್ತು ಯೋಚಿಸುತ್ತ ಅತ್ತಿಂದಿತ್ತ ತಿರುಗುತ್ತಿದ್ದ. ತಾನು ತಲಪಾಡಿಯವರಲ್ಲಿಗೆ ಈಗ ಹೋಗಬೇಕೆಂದಿರುವ ವಿಚಾರವನ್ನು ಸೋಮಯಾಜಿಗಳಿಗೆ ತಿಳಿಸಬೇಕೇ, ಬಾರದೇ ಎಂದು ಮನಸ್ಸು ಪ್ರಶ್ನಿಸುತ್ತಿತ್ತು. ಕೊನೆಗೆ ತಿಳಿಸುವುದರಿಂದೇನು ಕೇಡು, ತನ್ನ ಹೊಯ್ದಾಡುವ ಮನಸ್ಸಿಗೆ, ಸೋಮಯಾಜಿಗಳು ತಾನು ಹೋಗಲಿರುವ ವಿಚಾರ ತಿಳಿದಿರುವ ರೆಂಬ ಸಮಾಧಾನವಾದರೂ ಇರಲಿ ಎಂದು ಯೋಚಿಸಿ,

"ನಾನು ತಲಪಾಡಿಯವರಲ್ಲಿಗೆ ಹೋಗಿಬರುತ್ತೇನೆ" ಎಂದ.

"ಯಾಕೆ ?"

"ಅವರ ಮಗಳು ಬೆಳಿಗ್ಗೆ ಪ್ರೆಸ್ಸಿಗೆ ಬಂದಿದ್ದಳಂತೆ, ನಮ್ಮನ್ನು ಕೇಳಿ ಕೊಂಡು." 'ನನ್ನನ್ನು' ಎಂದು ಹೇಳಲು ನಾಲಿಗೆಗೆ ಏಕೋ ಎಲ್ಲಿಲ್ಲದ ಸಂಕೋಚ.

"ನಾನಿದ್ದೆನಲ್ಲ ಪ್ರೆಸ್ಸಿನಲ್ಲಿ, ಹತ್ತು ಘಂಟೆಯ ತನಕ."

"ಆಮೇಲೆ ಬಂದಿರಬೇಕು."

"ಹೋಗು. ಊಟವಾಗಿದೆಯೇ ?" ಎಂದು ಸೋಮಯಾಜಿಗಳು ಕೇಳಿದರು.

ತಾನು 'ಇಲ್ಲ' ಎಂದು ಹೇಳಿದರೆ ಈಗ ತನಗೋಸ್ಕರ ಸೋಮಯಾಜಿ ಗಳು ಅನ್ನ ಬೇಯಿಸುವರೆಂದು ಅನಂತನಿಗೆ ಗೊತ್ತು. ಇಂದಿರೆಯ ಮನೆಗೆ ಧಾವಿಸಲು ಹಾತೊರೆಯುತ್ತಿದ್ದ ಮನಸ್ಸಿಗೆ ಅಲ್ಲಿ ಹೆಚ್ಚು ಹೊತ್ತು ನಿಲ್ಲುವುದು ಬೇಕಿರಲಿಲ್ಲ.

"ಆಗಿದೆ. ಬರುವಾಗ ಹೋಟೆಲಿನಲ್ಲಿ ತೀರಿಸಿದೆ" ಎಂದು ಅನಂತ ಸುಳ್ಳು ಹೇಳಿದ.

ಆಮೇಲೆ ಆತ ಅಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ. ಮಧ್ಯಾಹ್ನ ಬಿಸಿಲಿಗೆ

ಇಂದಿರೆಯ ಮನೆಗೆ ಹೋಗುವುದು ಉಚಿತವೇ ಎಂದೂ ಯೋಚಿಸಲಿಲ್ಲ. ಈಗ ಅನಗೆ ಬೇಕಾಗಿದ್ದುದು ಆಕೆಯ ಸಾಮಿಪ್ಯಸುಖ. ಆ ನಗುವ ಬೊಗಸೆ ಗಣ್ಣುಗಳನ್ನು ಮನದಣಿಯೆ ನೋಡುವ ಸುಖ.

ಸೋಮಯಾಜಿಗಳ ಮನೆಯಿಂದ ಹೊರಬಿದ್ದ ಅನಂತ ಮೊದಲು ಕುಸು ಉಪಾಹಾರ ಎಲ್ಲಿಯಾದರೂ ತೀರಿಸುತ್ತೇನೆ ಎಂದು ನಿರ್ಧರಿಸಿದ. ಹಾಗೆ ನಿರ್ಧರಿಸಿದಾಗ, ಹಿಂದಿನ ದಿನದ ಮಧ್ಯಾಹ್ನ ನೀರು ಕುಡಿದ ಇರಾಣಿ ಅಂಗಡಿಯು ನೆನಪಾಯಿತು. ಅನಂತ ಟ್ರಾಂ ಹತ್ತಿಕೊಂಡು, ಬರೇ ಒಂದು ಕುತೂಹಲ ಪ್ರೇರಿತನಾಗಿ ಅಲ್ಲಿಗೇ ಬಂದ. ಅಲ್ಲಿ ಬೆಣ್ಣೆ ಹಚ್ಚಿದ್ದ ಬ್ರೆಡ್ಡು, ಹಾಗೆಯೇ ಒಂದು ಕಪ್ ಕಾಫಿ ತರಿಸಿಕೊಂಡು ಕುಡಿಯುವ ವರೆಗೂ ಮಾಲಕನ ಗಮನ ಇವನ ಕಡೆ ಇರಲಿಲ್ಲ. ಅದು ಮುಗಿಸಿ ಹಣ ಕೊಡಲೆಂದು ಆತ ಕುಳಿತಿದ್ದಲ್ಲಿಗೆ ಬಂದಾಗ, ಬಡಿಸಿದ ಹುಡುಗ "ಏಕ್ ಇಸಂ, ಪಾಂಚ್ ಆಣಾ" ಎಂದು ಕೂಗಿ ಕೊಂಡಾಗ ಮಾಲಕ ಮುಖವೆತ್ತಿ ಇವನೆಡೆ ನೋಡಿದ. ಗುರುತು ಸಿಗಲು ಕಷ್ಟವಾಗಲಿಲ್ಲ. ಆತನ ಮುಖದಲ್ಲಿ ನಗುವರಳಿತು.

"ಹೇಗಿದ್ದೀರಿ ?"

"ಚೆನ್ನಾಗಿದ್ದೇನೆ."

"ನಿನ್ನೆ ನಿಮ್ಮ ಕೈಯಲ್ಲಿ ದುಡ್ಡಿರಲಿಲ್ಲ, ಅಲ್ಲವೆ ?"

"ಹೌದು."

"ಒಂದು ಕಾಸು ಕೂಡ ಇರಲಿಲ್ಲ."

"ಹೌದು."

"ನನಗೆ ತಿಳಿದಿತ್ತು, ಮಿಸ್ಟರ್. ಅದಕ್ಕೇ ನೀರು ಕುಡಿದು ಹೊರಟಿರಿ."

"ಹೌದು."

"ಕೆಲಸ ಸಿಕ್ಕಿತೇ ?"

ತಾನು ನಿರುದ್ಯೋಗಿಯೆಂಬುದು ಈತ ಹೇಗೆ ಗ್ರಹಿಸಿದನೆಂಬುದು ಅನಂತನಿಗೆ ಸಮಸ್ಯೆಯೆ.

"ಇಲ್ಲ, ಸಿಗಬಹುದು. ಆದರೆ ಹಣ ಸಿಕ್ಕಿತು."

"ಸಿಗುತ್ತದೆ. ಪ್ರಯತ್ನಿಸಿ" ಎಂದು ಭವಿಷ್ಯ ಹೇಳುವವನಂತೆ ನುಡಿದು ಮಾಲಕ ಅನಂತನ ಹಣ ಪಡೆದುಕೊಂಡ. ಅನಂತ ನಗುತ್ತಲೇ ಅಲ್ಲಿಂದ ಹೊರಬಿದ್ದ.

ತಲಪಾಡಿಯವರ ಮನೆಯಲ್ಲಿ ಬಾಗಿಲು ತೆರೆದುದು ಇಂದಿರೆಯೆ. ಅವ
ಕೈಯಲ್ಲಿ ಓದುತ್ತಿದ್ದ ಪುಸ್ತಕವೊಂದಿತ್ತು. ಮುಖದಲ್ಲಿ ನಗು.

“ಬಂದಿರಾ? ನೀವು ಬರಬಹುದೆಂದು ಎಣಿಸಿದ್ದೆ.”

‘ಹೌದೇ?’ ಎಂದು ಅನಂತನ ಅಂತರಾತ್ಮ ಕೂಗಿಕೊಳ್ಳುತ್ತಿತ್ತು.

“ಹಾಗೆ ಯೋಚಿಸಲು ಕಾರಣ?” ಅನಂತ ನಗುತ್ತಲೇ ಮರುಸವಾಲು
ಹಾಕಿದ.

“ಶ್ರೀಮತಿ ಬಾಟ್ಲಿವಾಲಾ ಅಷ್ಟು ಬೇಗ ನಿಮ್ಮ ಮನಸ್ಸಿನಿಂದ ಮರೆ
ಯಾಗಲಾರಳು ಎಂದು ನಾನು ದೃಢವಾಗಿ ನಂಬಿದ್ದೆ.”

ಅನಂತನಿಗೆ ಶ್ರೀಮತಿ ಬಾಟ್ಲಿವಾಲಾಳ ನೆನಪು ಬಂದುದು ಆಗಲೇ.
ಆಕೆಯು ಚಿಕಿತ್ಸಾಲಯದಿಂದ ಹೊರಬಿದ್ದಮೇಲೆ ಅವನು ಆ ವಿಚಾರ ಹೆಚ್ಚು
ಯೋಚಿಸಿರಲೇ ಇಲ್ಲ. ಇಂಥವರಲ್ಲಿ ಇಂದಿರೆಯ ಪ್ರಾಮಾಣಿಕ ನಂಬಿಕೆ
ಅನಂತನನ್ನು ಗಲಿಬಿಲಿಯಲ್ಲಿ ಕೆಡವಿತು. ಆದರೆ ಸುಳ್ಳಾಡದೆ ನಿವೃತ್ತಿಯಿದ್ದಿಲ್ಲ.

“ಅದಕ್ಕಾಗಿಯೇ ನೀವು ಪ್ರೆಸ್ಸಿಗೆ ಬಂದಿರೇನು?” ಉತ್ತರ ಹೇಳುವ
ಹೊಣೆ ತಪ್ಪಿಸಿಕೊಂಡು ಅನಂತ ಪ್ರಶ್ನಿಸಿದ.

“ಅದಕ್ಕಾಗಿಯೇ ಏನು? ಆ ದಾರಿಯಲ್ಲಿ ಬರುವಾಗ ಕಾರು ನಿಲ್ಲಿಸಿ
ವಿಚಾರಿಸಿದೆ. ನಿನ್ನೆ ಕೇಳಲು ಮರೆತುಹೋಗಿತ್ತು. ಆ ಚಿತ್ರದ ಪಡಿಯಚ್ಚು
ಗಳಿಗೆ ಎಷ್ಟು ಹಣ ಬೇಕಾಗಿದೆ?”

ಅನಂತನಿಗೆ ನಗು ಬಂತು. ಹಿಂದಿನ ದಿನ ಪತ್ರಿಕೆಯ ದಾರಿದ್ರ್ಯವನ್ನು
ಸೂಚಿಸಿ ಮಾತು ಬೆಳೆಸಿದ್ದ. ಇಂದಿರೆ ಅದನ್ನೇ ಆಧಾರವಾಗಿಟ್ಟುಕೊಂಡು
ಚಿಕಿತ್ಸಾಲಯದ ಪ್ರಚಾರದ ಕುರಿತು ಇಷ್ಟು ಆಸಕ್ತಿ ಏಕೆ ವಹಿಸುತ್ತಿರುವಳೆಂದು
ಕುತೂಹಲ ಚಿಗುರಿತು.

“ಪ್ರೆಸ್ಸಿಗೆ ಟೆಲಿಫೋನ್ ಮಾಡಿದ್ದರೆ ನಾನು ಬರುತ್ತಿದ್ದೆ. ನೀವು
ಅದಕ್ಕಾಗಿ ಅಲ್ಲಿಯ ತನಕ ಬರುವ ಅಗತ್ಯವಿದ್ದಿಲ್ಲ.”

“ಅದಕ್ಕಾಗಿಯೇ ನಾನು ಬರಲಿಲ್ಲವೆಂದು ಒಮ್ಮೆ ಹೇಳಿದೆ. ನಾನು
ನಿಮ್ಮನ್ನು ನೋಡಲಪೇಕ್ಷಿಸಿದುದು ಎರಡು ಉದ್ದೇಶಗಳಿಗಾಗಿ.”

“ಅರೆ! ಇನ್ನು ಬೇರೊಂದು ಉದ್ದೇಶವಿದೆಯೆ?”

“ಹೌದು. ಒಳಗೆ ಬನ್ನಿ. ಹೇಳುತ್ತೇನೆ. ಬಾಗಿಲಲ್ಲೇ ನಿಂತು ಸಂಭಾಷ

ಪೂರ ಮುಗಿಸುವುದು ಬೇಡ. ಆಮೇಲೆ ನೀನು ಬಾಗಿಲಿನಿಂದಲೇ ಹೊರಟು ಹೋಗಬಹುದು."

ಇಂದಿರೆಯ ಮಾತು ನಗುವಿನ ಹಿನ್ನೆಲೆಯಲ್ಲಿ ಪ್ರಕಟವಾಗಿತ್ತು. 'ನಿನ್ನನ್ನು ಸದಾಕಾಲ ನೋಡುತ್ತಲೇ ಇರಬೇಕೆಂದು ಬಯಸುವ ಈ ಜೀವ ಬಾಗಿಲಿನಿಂದಲೆ ಹೊರಟು ಹೋದೀತೇ?' ಎಂದು ಅನಂತ ತನ್ನನ್ನೆ ಕೇಳಿಕೊಂಡ.

"ರಾಯರು ಏನು ಮಾಡುತ್ತಿದ್ದಾರೆ?"

"ಅವರು ಈಗ ಹೊರಟುಹೋದವರಷ್ಟೆ. ಒಂದರ್ಧ ಘಂಟೆ ಮುಂಚೆ ಬಂದಿದ್ದರೆ ಸಿಗುತ್ತಿದ್ದರು. ಏನು, ಅವರೊಡನೆ ಏನಾದರೂ ಕೆಲಸವಿದೆಯೆ?"

"ಇಲ್ಲ. ಹಾಗೇನೂ ಇಲ್ಲ. ನಿನ್ನೆ ಇದೇ ಹೊತ್ತಿಗೆ ಮನೆಯಲ್ಲಿದ್ದರು. ಅದರಿಂದಾಗಿ ಕೇಳಿದೆ."

"ಅವರು ಇಂಥದೇ ಹೊತ್ತಿಗೆ ಹೊರಡುವುದೆಂದು ನಿಯಮವೇನಿಲ್ಲ. ಸಂಜೆಯೂ ಅಷ್ಟೆ. ಒಮ್ಮೊಮ್ಮೆ ಬೇಗ ಬರುತ್ತಾರೆ. ಒಮ್ಮೊಮ್ಮೆ ರಾತ್ರಿ ಎಂಟು ಘಂಟೆಯ ತನಕವೂ ಆಫೀಸಿನಲ್ಲೇ ಇರುತ್ತದಿದೆ."

ಇಂದಿರೆ ಅನಂತನನ್ನು ತನ್ನ ಕೋಣೆಗೆ ಕರೆದೊಯ್ದು ಕುಳ್ಳಿರಿಸಿದಳು.

"ಬಿಸಿಲಿಗೆ ಬಂದಿರಿ. ಏನಾದರೂ ತರಿಸುವಂತೆ ಹುಡುಗನಿಗೆ ಹೇಳಲೇ?........ಲಕ್ಷ್ಮಣಾ" ಎಂದು ಇಂದಿರೆ ಅಡುಗೆಯ ಹುಡುಗನನ್ನು ಕರೆದಳು.

ಅನಂತ ಉಪಚಾರಕ್ಕಾಗಿ "ಬೇಡ" ಎನ್ನುತ್ತಿದ್ದಂತೆಯೇ ಹುಡುಗ "ಓ" ಎಂದುಕೊಂಡು ಓಡಿಬಂದ.

"ಎರಡು ಗ್ಲಾಸ್ ಶರಬತ್ ಮಾಡಿ ತಾ. ನೋಡು, ಲಿಂಬೆಯ ಹುಳಿ ಇದೆಯೋ?"

"ಹೌದಮ್ಮ" ಎಂದು ಲಕ್ಷ್ಮಣ ಒಪ್ಪಿಕೊಂಡು ಒಳಗೆ ನಡೆದ.

ಅನಂತ ಕುಳಿತಿದ್ದ, ಇಂದಿರೆಯ ಓದಿನ ಮೇಜಿನ ಬಳಿ ಇಂದಿರೆ ನಿಂತೇ ಇದ್ದಳು.

"ನೀವೇಕೆ ನಿಂತುಕೊಂಡೇ ಇದ್ದೀರಿ?"

"ಇಷ್ಟು ದೊಡ್ಡ ಸಂಪಾದಕರ ಮುಂದೆ ಕುಳಿತುಕೊಳ್ಳುವ ಧೈರ್ಯ ಹೇಗೆ ಬಂದೀತು?"

"ಸಂಪಾದನೆಯಿರದ ಈ ಸಂಪಾದಕರಿಗಾಗಿ ಅಷ್ಟು ಹೆದರಬೇಕೇ?"

"ಇನ್ನಷ್ಟು ಹೆದರಬೇಕು; ಯಾರ ಹಂಗು ಹೆದರಿಕೆಗಳೂ ವಾದಾಗ."

ಅನಂತ ಈಗ ನಕ್ಕ.

"ನನ್ನ ಯೋಗ್ಯತೆಯ ಬಗ್ಗೆ ಹಾಗಾದರೆ ಬೇರೆ ಪ್ರಮಾಣಪತ್ರ ಬೇ ನಿನ್ನೆ ತಾನೆ ನೀವೇ ಹೇಳಿದಿರಿ: 'ನಿಮ್ಮ ಯೋಗ್ಯತೆಯ ಕುರಿತು ನನಗಿರ ಭರವಸೆ ಕಡಿಮೆಯಾಗುತ್ತಿದೆ' ಎಂದು. ಆದರೆ ಇವೊತ್ತು ಪುನಃ ವಿಶ್ವಾಸ ಎನ್ನುತ್ತೀರಿ."

"ನಿಮ್ಮ ಯೋಗ್ಯತೆಯನ್ನು ಶಂಕಿಸಿ ನಾನು ಮಾತನಾಡಿಯೇ ಇ ನೀವು ಧೈರ್ಯಗೆಡುವಂತಿದೆಯೆಂದಷ್ಟೆ ಹೇಳಿದೆ. ಗೃಹಕೃತ್ಯಕ್ಕೆ ಸಂಬಂಧಿ ವಿಚಾರಗಳಲ್ಲೂ ಹೀಗೆಯೇ?"

"ಎಂದರೆ?"

"ನಿಮ್ಮನ್ನು ನೋಡುವ ಉದ್ದೇಶವಿದ್ದುದು ಎರಡು ಕಾರಣಗಳಿಗ ಎಂದು ಹೇಳಿದುದು ನೆನಪಿದೆಯೆ?"

"ಹೌದು."

"ಒಂದು ಕಾರಣ ನಿಮ್ಮ ಗೃಹಕೃತ್ಯಕ್ಕೆ ಸಂಬಂಧಿಸಿದ್ದು; ನೀವು ಇ ದಿನ ಮರೆಮಾಚಿರುವ ಸತ್ಯ. ದಿನ ಬಂದಾಗ ತನ್ನತಾನೆ ಪ್ರಕಟವಾಗುವುದೆ ಅರಿವಿದ್ದೂ ನೀವು ಮರೆಮಾಚಿರುವ ಒಂದು ವಿಷಯ."

ವಿಷಯ ತಿಳಿಯದೆ ಅನಂತ ಕಂಗೆಟ್ಟ. ಉದ್ವಿಗ್ನ ಮನಸ್ಸು, ಇಂ ಏನನ್ನು ಯೋಚಿಸುತ್ತಿದ್ದಾಳೆ, ಎಂದು ಆಲೋಚಿಸುತ್ತಿತ್ತು. ಇಂದಿರೆಗೆ ತ ಮನಸ್ಸಿನ ಒಳಹೊರಗೆಲ್ಲ ತಿಳಿದಿದೆಯೆ? ತನ್ನ ಅಂತರ್ಯವನ್ನು ಹೊರಗೆಡ ವಷ್ಟು ತನ್ನ ವರ್ತನೆ ಅರ್ಥಪೂರ್ಣವಾಗಿತ್ತೇ?

ತಾನು ಆಕೆಯನ್ನು ಪ್ರೀತಿಸುತ್ತಿರುವೆನೆಂದು ಇಂದಿರೆ ತಿಳಿದಿರುವಳೆ?

"ಅದಕ್ಕೇ ನೀವು ಭಾರತಿಯನ್ನು ಇಲ್ಲಿಗೆ ಕರೆದುಕೊಂಡು ಬಾ ಉಳಿದದ್ದು?"

ಇಂದಿರೆಯ ಮುಖದಲ್ಲಿ ನಗು ಲಾಸ್ಯವಾಡುತ್ತಿತ್ತು. ಆದರೆ ಅನಂತ ಇಂದಿರೆಯನ್ನು ನೋಡುವುದು ಸಾಧ್ಯವಾಗಲಿಲ್ಲ.

"ಇಷ್ಟೇಕೆ ಹೆದರಿಕೊಂಡಿರಿ? ಭಾರತಿಗೆ ಎಷ್ಟು ತಿಂಗಳು? ನೀವು ತಿ

ದಿದ್ದರೂ ಭಾರತಿ ಇಲ್ಲಿಗೆ ಬರದಿದ್ದರೂ ಸುಶೀ ದಿಲ್ಲಿಯಿಂದ ಕಾಗದ ಬರೆದಿದ್ದಾಳೆ. ಮುಂಬಯಿಯ ಸಮಾಚಾರ ನನಗೆ ದಿಲ್ಲಿಯಿಂದ ದೊರಕಿದೆ; ನಿಮ್ಮ ಸಂಪಾದಕತ್ವದ ಯೋಗ್ಯತೆ."

ಅನಂತ ಒಮ್ಮೆ ದೀರ್ಘವಾಗಿ ಉಸಿರು ಬಿಟ್ಟ. ಇಂದಿರೆಯ ಪ್ರಶ್ನೆ ಬಂದಾಗ ತನ್ನ ಮುಂದಿದ್ದುದು ಪ್ರಣಯದೇವತೆಯ ಚಿತ್ರ. ಆದರೆ ಇಂದಿರೆ ಯೋಚಿಸುತ್ತಿದ್ದುದು ತನ್ನ ಗೃಹಸೌಖ್ಯದ ಕುರಿತು—ಭಾರತಿಯ ಕುರಿತು.

ತನ್ನ ಹೃದಯದ ಒಲವು ಇಂದಿರೆಗೆ ತಿಳಿದಿಲ್ಲವೆಂದು ಸಮಾಧಾನವಾದರೂ ಈ ಸಮಾಧಾನದ ಜೊತೆಗೆ ಬೇಸರವೂ ಆಯಿತು. 'ಇಲ್ಲಿ ಭಾರತಿಗೆ ದೊರೆಯುವ ಗೌರವ ನನಗೆ ದೊರಕದೇ' ಎಂದು ಅನಂತ ಯೋಚಿಸಿದ.

"ತಿಂಗಳೆಷ್ಟು ?" ಪುನಃ ಇಂದಿರೆಯ ಪ್ರಶ್ನೆ.

"ಏಳೆಂದು ತೋರುತ್ತದೆ."

"ಇಲ್ಲಿಗೇಕೆ ಕರೆದುಕೊಂಡು ಬಂದಿಲ್ಲ ?"

"ಅವಳು ಬಂದರಲ್ಲವೇ ಕರೆದುಕೊಂಡು ಬರುವುದು ?"

"ನೀವು 'ಬಾ' ಎಂದರೆ ಬಾರದಿರುತ್ತಾಳೆಯೆ ?

ಅಷ್ಟರಲ್ಲಿ ಲಕ್ಷ್ಮಣ ಪಾನಕ ತಯಾರಿಸಿ ತಂದ. ಅನಂತ ಅದನ್ನು ಕುಡಿಯುತ್ತಿದ್ದಂತೆ ಇಂದಿರೆ ಕೇಳಿದಳು :

"ಈಗ ಇನ್ನೊಂದು ವಿಚಾರ. ಬಾಟ್ಲಿವಾಲಾ ಲೇಖನ ಸಿದ್ಧವಾಯಿತೆ ?"

ಅನಂತ ಗಲಿಬಿಲಿಗೊಂಡು ಉತ್ತರ ಕೊಟ್ಟ :

"ಇಷ್ಟು ಬೇಗ! ಅದೂ ಮನಸ್ಸಿನಲ್ಲಿ ವ್ಯಗ್ರತೆ, ಜೊತೆಗೆ ನಿರುದ್ಯೋಗ ಇವೆಲ್ಲ ಸೇರಿರುವಾಗ ? ಒಂದೆರಡು ವಾರಗಳ ಅವಕಾಶ ಕೊಡಿ."

"ಒಂದೆರಡು ವಾರ! ಸಾಧ್ಯವೇ ಇಲ್ಲ. ನೀವು ಈಗಿಂದೀಗಲೆ ಬರೆಯಬೇಕು. ಇಲ್ಲಿಯೇ ಬರೆಯಿರಿ ಬೇಕಾದರೆ. ಯಾರೂ ನಿಮಗೆ ತೊಂದರೆ ಕೊಡುವುದಿಲ್ಲ. ಇಲ್ಲಿ ಬರೆಯಲು ಸಾಧ್ಯವಾಗುವುದಿಲ್ಲವೇನು ?"

'ನಿನ್ನ ಸಮೀಪ ಕುಳಿತು ಜಗತ್ತಿನ ವಸ್ತುಕೋಶವನ್ನೇ ತಯಾರಿಸಿಯೇನು, ಚಿನ್ನಾ' ಎಂದು ಹೇಳಬೇಕೆಂದು ಅನಂತನಿಗನಿಸುತ್ತಿತ್ತು. ಆದರೆ ಇಲ್ಲೂ ಸಂಯಮದ ಬೇಲಿ.

"ಸಾಧ್ಯವಾಗದೆ ಏನು ? ಆದರೆ ಅಷ್ಟೇಕೆ ಅವಸರ ?"

"ಅದಕ್ಕೂ ಒಂದು ಉದ್ದೇಶವಿದೆ. ನೀವು ಲೇಖನ ಸಿದ್ಧಪಡಿಸಿ.

ಪಡಿಯಚ್ಚುಗಳಿಗೆ ತಗಲುವ ವೆಚ್ಚ ನಾನು ಕೊಡುತ್ತೇನೆ. ಮುಂದಿನ ವಾರದ 'ಕಹಳೆ'ಯಲ್ಲಿ ಆ ಲೇಖನ ಬರಬೇಕು."

ಇಂದಿರೆಯ ಒತ್ತಾಯವಲ್ಲೂ ಎಂಥ ಹಿತವಾದ ಸುಖ!

"ನೀವು ಕಾರಣ ತಿಳಿಸಿ. ನಾನು ಬರೆಯುತ್ತೇನೆ. ಶ್ರೀಮತಿ ಬಾಟ್ಲಿವಾಲಾಳ ಆದರ್ಶ ತುಂಬ ಒಳ್ಳೆಯದೆಂದು ನನಗೆ ತಿಳಿದಿರುವುದಾದರೂ, 'ಕಹಳೆ'ಯಲ್ಲಿ ಒಂದು ಲೇಖನ ಬಂದ ಮಾತ್ರಕ್ಕೆ ಆ ಸಂಸ್ಥೆಗೆ ಸಾರ್ವಜನಿಕ ಸಹಾಯ ದೊರಕುವುದೆಂದು ನಾನು ನಂಬಿಲ್ಲ. 'ಕಹಳೆ'ಯನ್ನು ಓದುವ ಕನ್ನಡಿಗರಲ್ಲಿ ಸಾರ್ವಜನಿಕ ಕೆಲಸಗಳಿಗೆ ಸಹಾಯ ಮಾಡುವಷ್ಟು ಶಕ್ತಿಯಿದೆ ಎಂದು ನನಗನಿಸುವುದಿಲ್ಲ."

"ಅದು ನನಗೂ ತಿಳಿದಿದೆ."

"ಮತ್ತೇಕೆ ಈ ಒತ್ತಾಯ?"

"ನೀವು ಲೇಖನ ತಯಾರು ಮಾಡುವೆನೆಂದು ಮಾತು ಕೊಡಿ. ನಾನು ಕಾರಣ ತಿಳಿಸುತ್ತೇನೆ."

"ಈಗಿಂದೀಗಲೇ?"

"ಹೌದು. ಈಗಿಂದೀಗಲೇ. ಸಂಜೆ ಏಳು ಘಂಟೆಯ ವರೆಗೆ ನಿಮಗೆ ಸಮಯ ಕೊಡುತ್ತೇನೆ. ಎಂಥ ದಡ್ಡ ವಿದ್ಯಾರ್ಥಿಯೂ ಅಷ್ಟು ಸಮಯದೊಳಗೆ ಬರೆಯಬಹುದು."

ಅನಂತ ನಗುತ್ತ, "ಆಗಬಹುದು" ಎಂದು ಒಪ್ಪಿಕೊಂಡ.

"ಕಾರಣ ಇದೇ ನೋಡಿ: ಆ ಲೇಖನ ಪ್ರಕಟವಾದೊಡನೆ ಪತ್ರಿಕೆಯ ಒಂದು ಪ್ರತಿ ಶ್ರೀಮತಿ ಬಾಟ್ಲಿವಾಲಾಳಿಗೆ ಹೋಗುತ್ತದೆ. ಒಂದು ನಾಲ್ಕು ದಿನ ತಡೆದು ಒಂದು ನೂರು ರೂಪಾಯಿಗಳ ಹಣ ಅನಾಮಧೇಯರೊಬ್ಬರಿಂದ ಆ ಸಂಸ್ಥೆಗೆ ತಲಪುತ್ತದೆ. ಅವರು ಹಾಗೆ ಕಳಿಸಲು ಕಾರಣ 'ಕಹಳೆ'ಯ ಲೇಖನವೆಂದು ತಿಳಿಸಲಾಗುತ್ತದೆ...."

"ಸರಿ, ಮುಂದೆ."

"ಮುಂದೆ ಶ್ರೀಮತಿ ಬಾಟ್ಲಿವಾಲಾ ನಿಮ್ಮ ಪತ್ರಿಕೆಯನ್ನು ಎಷ್ಟು ಆದರದಿಂದ ನೋಡುವಳೆಂದು ಹೇಳಬೇಕೆ? ಅವಳಿಗೆ ಸಹಾಯ ಮಾಡುವ ಧನಿಕರ ವರ್ಗದಲ್ಲಿ ತುಂಬ ಹೆಸರುವಾಸಿ ಸಂಸ್ಥೆಗಳ ಜನರಿದ್ದಾರೆ. ಅವರಲ್ಲಿ ಕೆಲವರ 'ಜಾಹೀರಾತು'ಗಳ ನೆರವಾದರೂ 'ಕಹಳೆ'ಗೆ ದೊರಕಿದರೆ?"

ಅನಂತನಿಗೆ ಆನಂದದ ಜೊತೆಗೆ ಆಶ್ಚರ್ಯವೂ ಆಯಿತು. ಇಂದಿರೆಯ ದೂರದೃಷ್ಟಿ ಇಷ್ಟು ವ್ಯಾಪಕವಾದುದೆಂದು ಆತ ತಿಳಿದಿರಲಿಲ್ಲ.

"ನೀವು ಇಂಟೆಲಿಜೆನ್ಸ್ ಖಾತೆ ಸೇರಬೇಕಿತ್ತು" ಎಂದು ಹೇಳಿದ.

ಆ ಹೆಸರು ಕೇಳಿದಾಗ ಇಂದಿರೆ ನಗುವ ಸಾಹಸ ಮಾಡಿದಳು. ವಿಷಯವನ್ನು ಅಲ್ಲಿಗೇ ಮುಗಿಸಿ, "ಇನ್ನು ಬರೆಯಿರಿ" ಎಂದು ಕಾಗದವನ್ನೂ ಲೇಖನಿಯನ್ನೂ ತಂದು ಅನಂತನ ಮುಂದಿರಿಸಿದಳು.

"ನಾನು ಕುಳಿತಿದ್ದರೆ ನಿಮಗೆ ತೊಂದರೆಯಾಗುವುದೇ ?"

'ತೊಂದರೆಯೇ, ನನ್ನ ಜೀವನ ಜೀವ !' ಎಂದು ಹೇಳಬೇಕೆಂದು ಬಯಸಿದ ಅನಂತನ ಬಾಯಿಂದ, "ಛೆ! ಛೆ ! ಖಂಡಿತ ಇಲ್ಲ" ಎಂದಿಷ್ಟೇ ಮಾತು ಹೊರಬಂತು.

ಇಂದಿರೆ ತನ್ನ ಓದು ಮುಂದುವರಿಸಿದಳು. ಅನಂತ ಹಿಂದಿನ ದಿನದ ಸಂದರ್ಶನದ ವರದಿ ಬರೆಯಲು ಆರಂಭಿಸಿದ. ಆದರೆ ಕಣ್ಣು ಇಂದಿರೆಯ ಕಡೆ ಹಾಯುತ್ತಿತ್ತು. ಮನಸ್ಸು ಅವಳನ್ನು ಬಿಟ್ಟು ಕದಲುತ್ತಿರಲಿಲ್ಲ. ತನ್ನ ಮುಂದಿದ್ದ ಕಾಗದದ ತುಂಬೆಲ್ಲ ಇಂದಿರೆಯೇ ಕುಣಿಯುತ್ತಿರುವಂತೆ ಕಂಡಿತು.

ಒಮ್ಮಿಂದೊಮ್ಮೆಗೆ ತನ್ನ ಜೀವನದಲ್ಲಿ ಬಿರುಗಾಳಿಯಂತೆ ಪ್ರವೇಶಿಸಿದ ಇಂದಿರೆ ಕಣ್ಣ ಮುಂದೆ ಕುಳಿತು 'ಬರೆ' ಎಂದು ಒತ್ತಾಯಿಸುತ್ತಿದ್ದಳು. ಅದೇ ದುಂಡನ್ನ ಮುಖ. ಕುಂಕುಮ ಮಾತ್ರವಿರದ ಸೌಂದರ್ಯ ಸರ್ವಸ್ವ. ಕಡು ಹಸರು ಖಾದಿ ಸಿಲ್ಕಿನ ಸೀರೆ ಉಟ್ಟು ಬಿಳಿಯ ಕುಪ್ಪಸ ತೊಟ್ಟಿದ್ದಳು. ಅನಂತ ಇಂದಿರೆಯನ್ನು ನೋಡುತ್ತಿದ್ದ. ಇವನ ನೋಟವನ್ನು ಗಮನಿಸಿಯೋ ಎಂಬಂತೆ ಇಂದಿರೆ ಓದು ನಿಲ್ಲಿಸಿ ಮುಖ ತಿರುಗಿಸಿ ಕೇಳಿದಳು :

"ಏನು, ಯೋಚನೆ ಮುಗಿದಿಲ್ಲವೇ ? ಬರೆಯಿರಿ."

ಅನಂತ ನಗುವ ಆ ಕಣ್ಣುಗಳನ್ನೇ ನೋಡುತ್ತಿದ್ದ. ಆ ಮೋಹಕ ದನಿ ಹೊರಡುವ ಕೊರಳನ್ನೇ ನಿರುಕಿಸುತ್ತಿದ್ದ. ದೃಷ್ಟಿ ಇನ್ನೂ ಕೆಳಗಿಳಿದು ಇಂದಿರೆಯ ತುಂಬು ತಾರುಣ್ಯವನ್ನು ಅವಲೋಕಿಸುತ್ತಿತ್ತು. ಯೌವನದ ಹೊಸ್ತಿಲಲ್ಲೇ ಜೀವನದ ಮಾಧುರ್ಯದಿಂದ ವಿವಂಚಿತಳಾದ ಅಪ್ಸರೆ !

ಅನಂತ ಕಾಗದದಲ್ಲಿ ಬರೆದುದು ಎರಡೇ ಶಬ್ದಗಳು :
'ಮುಪ್ಪು ಇಂದಿರಾ.'

"ಬರೆಯಲು ಆರಂಭಿಸಿದಿರೇನು ?" ಎಂದು ಪುನಃ ಇಂದಿರೆ ಕೇಳಿದಾಗ

ಅನಂತನಿಗೆ ಪ್ರಜ್ಞೆ ಬಂತು. ತಾನು ಬರೆದುದನ್ನು ಚೆನ್ನಾಗಿ ಹೊಡೆದು, ಅದರ ತುಂಬ ಶಾಯಿಯ ಗುರುತು ಮಾಡಿ, ಅನಂತ ಪ್ರಯತ್ನಪೂರ್ವಕವಾಗಿ ತನ್ನ ಆಲೋಚನೆಯನ್ನು ಬೇರೆ ಕಡೆ ಹರಿಸಲೆತ್ನಿಸಿದ.

ಅವನ ದೃಷ್ಟಿಪಥದಲ್ಲಿ ರಾಜೀವ ಬಂದ. ನೋವಿನ ಗರ್ಭದಲ್ಲಿ ಜಗತ್ತಿನ ನೋವು ಹೋಗಲೆಂದು ಸದ್ದಿಲ್ಲದೆ ದುಡಿಯುತ್ತ ಇಂದು ನರಳುತ್ತ ಮಲಗಿದ್ದ ರಾಜೀವ.

ಮತ್ತೆ ಅನಂತನಿಗೆ ಬರೆಯುವುದು ಕಷ್ಟವಾಗಲಿಲ್ಲ. ಲೇಖನಿ ಸರಾಗವಾಗಿ ಓಡಹತ್ತಿತು. ಸಂಜೆಯಾಗುವಷ್ಟಕ್ಕೆ ಲೇಖನವೂ ಮುಗಿಯಿತು.

ಅನಂತ ಬರೆದು ಮುಗಿಸುವ ವರೆಗೂ ಇಂದಿರೆ ಅಲ್ಲೇ ಕುಳಿತಿದ್ದಳು. ಅನಂತ ಲೇಖನ ಮುಗಿಸಿ ಪೆನ್ ಕೆಳಗಿರಿಸಿದಾಗ ಎದ್ದು ಬಂದು. "ಮುಗಿಯಿತೇನು, ಕೊಡಿ" ಎಂದಳು.

ಇಂದಿರೆ ಹಸ್ತಪ್ರತಿ ಓದುವ ತನಕ ಅನಂತ ತನ್ನ ಕಣ್ಣುಗಳ ಹಸಿವೆಲ್ಲ ಹಿಂಗುವಂತೆ ಅವಳನ್ನು ನೋಡುತ್ತ ಕುಳಿತಿದ್ದ. ಓದಿ ಮುಗಿಸಿ ಇಂದಿರೆ, "ಚೆನ್ನಾಗಿದೆ. ನನ್ನ ಶ್ರಮ ಸಾರ್ಥಕವಾಯಿತು. ನಾಳೆಯೇ ಪ್ರೆಸ್ಸಿಗೆ ಕೊಡಿ. ಪಡಿಯಚ್ಚಿಗೆಷ್ಟು ಹಣ ಬೇಕು ?" ಎಂದು ಕೇಳಿದಳು

ಅನಂತನಿಗೆ ಅವಳಿಂದ ಹಣ ಪಡೆಯುವ ಇಚ್ಛೆಯಿರಲಿಲ್ಲ. ಆದರೆ ಪಡಿಯಚ್ಚುಗಳಿರದೆ ಆ ಲೇಖನ ಪರಿಪೂರ್ಣವಾಗುವುದಿಲ್ಲ ಎಂದೂ ಆತನಿಗೆ ತಿಳಿದಿತ್ತು.

"ಹದಿನೈದು ರೂಪಾಯಿ ಬೇಕಾಗಬಹುದು. ಆದರೆ ನಿಮಗೇಕೆ ತೊಂದರೆ. ನಾವು ಏನಾದರೂ ಮಾಡಿಕೊಳ್ಳುತ್ತೇವೆ" ಎಂದು ಆತ ಹೇಳಿದರೂ ಆಕೆ ಹತ್ತು ರೂಪಾಯಿಗಳ ಎರಡು ನೋಟು ತಂದುಕೊಟ್ಟಳು, "ಪತ್ರಿಕೆ ತುಂಬ ಹಣ ಸಂಪಾದಿಸಿದಾಗ ವಾಪಸು ಕೊಡಿ" ಎನ್ನುತ್ತ.

ನೋಟು ಕೊಡುವಾಗ ಇಂದಿರೆಯ ಕೈ ಅನಂತನ ಕೈಗೆ ಸೋಂಕಿತು. ಒಂದು ಕ್ಷಣ ಆ ಕೈಯನ್ನೆ ಮೃದುವಾಗಿ ಹಿಡಿದು ಒಂದೆರಡು ನಿಮಿಷ ಹಾಗೆಯೇ ನಿಲ್ಲಬಾರದೆ ಎಂದು ಅನಂತನಿಗೆ ತೋರಿತು. ಆದರೆ ಪುಣ್ಯವಶಾತ್ ಆ ಯೋಚನೆ ಕಾರ್ಯರೂಪಕ್ಕೆ ಬರುವುದರೊಳಗೆ ಇಂದಿರೆ ತನ್ನ ಕೈಯನ್ನು ಹಿಂದೆಗೆದುಕೊಂಡಿದ್ದಳು.

"ನಿಲ್ಲಿ. ಹೋಗಬೇಡಿ" ಎಂದು ಇಂದಿರೆ ಕಾಫಿ ತಯಾರಿಸಿಕೊಂಡು

ಬಂದಳು. ಅನಂತ ಅದನ್ನು ಕುಡಿದಾದಮೇಲೆ, "ಇನ್ನು ಬೇಕಾದರೆ ನೀವು ಹೋಗಬಹುದು" ಎಂದಳು.

ಅನಂತ ಮನಸ್ಸಿಲ್ಲದ ಮನಸ್ಸಿನಿಂದ ಅಲ್ಲಿಂದ ಹೊರಟ. ಆತ ಹೊರಟಾಗ ಇಂದಿರೆ ಪುನಃ ಎಚ್ಚರಿಸಿ,

"ಭಾರತಿಯನ್ನು ಯಾವಾಗ ಕರೆದುಕೊಂಡು ಬರುತ್ತೀರಿ?" ಎಂದು ಕೇಳಿದಳು. ಅನಂತ ಈ ಮಾತಿಗೆ ಕೂಡಲೆ ಉತ್ತರ ಹೇಳಲಿಲ್ಲ. "ಕೇಳಿ ನೋಡುತ್ತೇನೆ" ಎಂದು ಹೇಳಿದ.

ಅನಂತ ಮನೆಯ ಮೆಟ್ಟಿಲಿಳಿಯುವಾಗ ಬಾಗಿಲಿಗೆ ಬಂದಿದ್ದ ಇಂದಿರೆ ಇನ್ನೊಂದು ಮಾತು ಹೇಳಿದಳು:

"ಎಷ್ಟು ಬೇಗ ಬರೆದು ಮುಗಿಸಿದಿರಿ? ಪ್ರೆಸ್ಸಿನಲ್ಲಿ ಬರೆಯುವುದಕ್ಕಿಂತ ಇಲ್ಲಿ ಹೆಚ್ಚು ಶಾಂತ ವಾತಾವರಣ ದೊರಕುವುದೆಂಬ ನಂಬಿಕೆಯಿದ್ದರೆ ನೀವು ಯಾವಾಗಲೂ ಇಲ್ಲಿ ಬಂದು ಬರೆಯಬಹುದು."

ಅನಂತನ ಹೃದಯ ಸದಾ ಬಯಸುವ ಸಾಮ್ರಾಜ್ಯ. ಕೃತಜ್ಞತೆಯುಕ್ಕಿ ಬಂದು, "ಥ್ಯಾಂಕ್ಸ್" ಎಂದಿಷ್ಟೇ ಹೇಳಿದ.

ಗಿರಗಾಂ ಬಿಟ್ಟ ಅನಂತ ಪ್ರೆಸ್ಸಿಗೆ ಹೋಗಲಿಲ್ಲ. ಸಂಜೆ ಯಾರೂ ಸಿಗುವಂತಿಲ್ಲವೆಂದು ಗೊತ್ತು. ಕಾಲಬಾದೇವಿಯ ಕೆಲಸಕ್ಕೆ ಪ್ರಾಯಶಃ ನಿನ್ನೆಯಿಂದಲೇ ಶರಣು ಎಂದು ತೋರುತ್ತದೆ ಎಂದು ಭಾವಿಸಿಕೊಂಡು ಅನಂತ ತುಸು ಹೊತ್ತು ಅಲ್ಲಿ ಇಲ್ಲಿ ಅಡ್ಡಾಡುತ್ತಿದ್ದು ಮನೆಯ ದಾರಿ ಹಿಡಿದ.

ಎಂದಿಗಿಂತ ತುಸು ಬೇಗನೆ ಮನೆ ಸೇರಿದ. ಮನೆಯ ಬಾಗಿಲ ಬಳಿ ಬಂದಾಗ ಮಾತ್ರ ಆತನಿಗೆ ತನ್ನ ಕಿವಿಗಳನ್ನು ನಂಬಲಾಗಲಿಲ್ಲ. ಒಳಗಿನಿಂದ ಭಾರತಿ ನಗುತ್ತಿದ್ದಳು. ಬಹಳ ದಿನಗಳ ಮೇಲೆ ನಗು. ಇನ್ನಾರಿದ್ದಾರೆ? ಎಂಥ ಸಂಭ್ರಮ, ಎಂದು ಕುತೂಹಲದಿಂದ ಅನಂತ ಕದ ತಟ್ಟಿದ.

ಬಾಗಿಲು ತೆಗೆದುದು ಶ್ರೀಪತಿರಾಯರು.

೩೧

"ಮಾವಯ್ಯಾ!"

ಒಮ್ಮಿಂದೊಮ್ಮೆಗೆ ಮಾವ ಶ್ರೀಪತಿರಾಯರನ್ನು ತನ್ನ ಮನೆಯಲ್ಲಿ ಕಂಡಾಗ ಅನಂತನ ಹೃದಯ ವಿಚಿತ್ರ ಭಾವನೆಗಳ ಕೋಲಾಹಲದ ಕುರುಕ್ಷೇತ್ರ

ವಾಯಿತು. ಇವರೇಕೆ ಹೀಗೆ ತಿಳಿಸದೆ ಬಂದಿದ್ದಾರೆ? ತಮ್ಮ ಮಗಳ ಇಂದಿನ ಬದುಕಿನ ದುರವಸ್ಥೆಯನ್ನು ನೋಡಲೆಂದೇ? ಅಥವಾ ತಾವು ಸಲಹಿ, ಪ್ರೀತಿಯಿಂದ ಮಗಳನ್ನು ಧಾರೆಯೆರೆದುಕೊಟ್ಟು, ಜೀವನದ ಹಾದಿ ಸುಗಮವಾಗುವಂತೆ ಹರಸಿದ ವ್ಯಕ್ತಿಯ ಎದೆಯಲ್ಲಿ ತಲೆದೋರಿರುವ ಕೃತಘ್ನತೆಯ ಪರಿಚಯ ತಮಗಾಗಿದೆಯೆಂದು ತೋರಿಸಲೆಂದೇ? ತಾವು ಕಳಿಸಿದ ಆರ್ಥಿಕ ಸಹಾಯವನ್ನು ನಿರಾಕರಿಸುವ ಎದೆಗಾರಿಕೆ ಹುಡುಗನಿಗೇಕೆ ಬಂತು? ಎಂದು ಪರೀಕ್ಷಿಸಲು ಬಂದಿದ್ದಾರೆಯೆ?

"ಒಳಗೆ ಬಾ, ಅನಂತಾ" ಎಂದು ಹೇಳಿದ ಶ್ರೀಪತಿರಾಯರು ಅನಂತನನ್ನೆ ನೋಡುತ್ತಿದ್ದರು. ಅನಂತ ಮುಂದುವರಿದು ಹೋಗಿ ಮಾವನಿಗೆ ಉದ್ದಂಡ ನಮಸ್ಕಾರ ಮಾಡಿದ.

ಹಿಂದೆ ನಿಂತಿದ್ದ ಭಾರತಿಯ ಹೃದಯ ಒಂದು ಕ್ಷಣ ಹಕ್ಕಿಗಿಂತ ಹಗುರಾಯಿತು. ಎಲ್ಲ ನೋವುಗಳಿಂದ ವಿಮುಕ್ತವಾದ ಸಂಭ್ರಮ ಒಂದು ಕ್ಷಣ ಮನಸ್ಸಿಗೆ.

ಶ್ರೀಪತಿರಾಯರ ಕಣ್ಣು ತುಂಬಿ ಬಂದಿತಾದರೂ ಅವರ ನೋಟ ಅನಂತನನ್ನು ಬಿಟ್ಟು ಚಲಿಸಲಿಲ್ಲ. ಅಂದು, ಯುಗಯುಗಗಳ ಹಿಂದೆ, ಹರಕು ಅಂಗಿಯಲ್ಲಿ ಮೊದಲ ಬಾರಿ ಕಂಡ ವಿದ್ಯಾರ್ಥಿಯಂತೆಯೇ ಅನಂತನಿದ್ದ— ಪೋಷಾಕಿನ ಮಟ್ಟಿಗೆ. ಉಳಿದೆಲ್ಲ ವಿಚಾರಗಳಲ್ಲಿ ಅನಂತನನ್ನು ಅಕಾಲ ಮುಪ್ಪು ಆವರಿಸಿತ್ತು. ಆ ಬಿಳಿಚಿಕೊಂಡ ಕಣ್ಣುಗಳೋ, ಹೂತುಹೋಗಿ ಎಲುಬು ತೋರಿಸುವ ಕೆನ್ನೆಗಳೋ; ತೋಳನ್ನು ದೃಷ್ಟಿಯಿಂದ ಮರೆಸುವಷ್ಟು ತೀಕ್ಷ್ಣವಾಗಿ ಎದ್ದುನಿಂತ ಎಲುಬುಗಳೋ. ಅನಂತ ಕೃಶನಾಗಿದ್ದ. ಅವಿರತ ಪರಿಶ್ರಮ ಆತನ ದೇಹದ ಮೇಲೆ ಸಾಕಷ್ಟು ಪರಿಣಾಮ ಮಾಡಿತ್ತು.

"ಇದೇನಿದು, ಅನಂತಾ ?"

ಎದ್ದುನಿಂತ ಅನಂತ ಮಾವನ ದೃಷ್ಟಿಯಿಂದಲೇ ಅವರ ಮಾತಿನ ಅರ್ಥವನ್ನು ಗ್ರಹಿಸಿ, "ನನಗೇನಾಗಿದೆ ?" ಎಂದ. ಶ್ರೀಪತಿರಾಯರು ಉತ್ತರ ಹೇಳಲಿಲ್ಲ. ಒಂದು ಕ್ಷಣ ಅನಂತನ ಈ ದುರವಸ್ಥೆಗೆ ಭಾರತಿಯೇ ಕಾರಣಳೇ ಎಂದು ಪ್ರಶ್ನಿಸುವಂತೆ ಮಗಳನ್ನು ನೋಡಿದರು. ಆದರೆ ಮಗಳ ಸೊರಗಿನ ದೇಹವನ್ನು ನೋಡಿದಾಗ ತನ್ನ ವಿಚಾರಕ್ಕಾಗಿ ತಮಗೇ ನಾಚಿಕೆಯಾಯಿತು.

ಬಟ್ಟೆ ಬದಲಿಸಿದ ಅನಂತ ಮಾವನೊಡನೆ ಕೇಳಿದ :

"ತಿಳಿಸದೆ ಎರಡನೆಯ ಸಲ ಬಂದಿರಿ, ಮಾವಯ್ಯಾ. ಈ ಸಲ ಏನು ವಿಶೇಷ?"

"ತಿಳಿಸದೆ ಬರಬೇಕಾದ ಅಗತ್ಯ ಬಂದರೆ ಹಾಗೆ ಮಾಡದಿರಲಾಗುವುದೆ, ಅನಂತಾ. ನೀನು ನಿನ್ನ ಪಾಲಿನ ತಿಳಿಸುವ ಕೆಲಸ ಎಷ್ಟು ಮಾಡಿರುವೆ?"

"ಏನನ್ನು ತಿಳಿಸಿಲ್ಲ, ಮಾವಯ್ಯಾ?"

ಶ್ರೀಪತಿರಾಯರು ಭಾರತಿಯ ಕಡೆ ನೋಡಿದರು. ಅವರ ನೋಟ ದಿಂದಲೇ ಅನಂತನಿಗೆ ತನ್ನ ತಪ್ಪಿನ ಅರಿವಾಯಿತು.

"ಅವಳಿಗೆ ಊರಿಗೆ ಹೋಗುವ ಮನಸ್ಸಿಲ್ಲವಾದ ಕಾರಣ ತಿಳಿಸಿ ಏನು ಉಪಯೋಗ ಎಂದು ಯೋಚಿಸುತ್ತಿದ್ದೆ."

ಈ ಮಾತು ಶ್ರೀಪತಿರಾಯರನ್ನು ಗೊಂದಲದಲ್ಲಿ ಕೆಡವಿತು. ಭಾರತಿಗೆ ಅನಂತನ ಸಾನ್ನಿಧ್ಯವನ್ನು ಬಿಟ್ಟು ಬರುವುದು ಮನಸ್ಸಿಲ್ಲವೆ? ತಮ್ಮ ಮಗಳ ದಾಂಪತ್ಯಜೀವನದಲ್ಲಿ ಅಪೇಕ್ಷಿಯ ಸಮರಸತೆ ಜರೆತಿರುವುದಾದರೆ ಅಳಿಯನ ದಾರಿದ್ರ್ಯದುಃಖದ ಕುರಿತು ತಾವು ಚಿಂತಿಸಬೇಕಿಲ್ಲವೆಂದು ತೋರಿತೇನೋ. ತಮ್ಮ ಯೋಚನೆಯ ಸಮರ್ಥನೆಗೆಂಬಂತೆ ಭಾರತಿಯೊಡನೆ ಕೇಳಿದರು:

"ಹೌದೇನೇ, ಭಾರೀ. ಚೊಚ್ಚಲು ಸಂಭ್ರಮಕ್ಕೂ ತಾಯಿಯ ಮನೆ ಬೇಡವಾಯಿತೇನಮ್ಮ. ಗಂಡನ ಸಹವಾಸ ಅಷ್ಟು ಪಥ್ಯವಾಗಿದೆಯೆ?"

ಅನಂತನ ಹೃದಯದಲ್ಲಿ ದೊಡ್ಡ ಬಿರುಗಾಳಿಯೇ ಎದ್ದಿತು. ಎಂಥ ನಿಷ್ಕಲ್ಮಷ ಆಲೋಚನೆಯ ಆಶ್ರಯದಲ್ಲಿ ಮಾವ ಆಡುವ ಮಾತು ತನಗೆಂಥ ನೋವು ಕೊಡುತ್ತಿದೆ! ಎಂದು ಅನಂತ ಚಿಂತಿಸತೊಡಗಿದ. ಭಾರತಿ ಏನನ್ನೂ ಹೇಳಲಿಲ್ಲ. ಅವಳ ಹೃದಯದಲ್ಲೂ ತುಮುಲ ನಡೆದಿತ್ತು. ತಾನು ಯಾಕೆ ಗಂಡನನ್ನು ಬಿಟ್ಟು ಹೋಗಲು ಸಿದ್ಧಳಿಲ್ಲವೆಂದು ತಂದೆಯೊಡನೆ ಮನಸ್ಸಿನ ಸಂಶಯವನ್ನೆಲ್ಲ ಬಿಡಿಸಿ ಹೇಳಬೇಕೇ? ಒಂದು ವೇಳೆ ಆ ಸಂಶಯ ಬರೇ ಸಂಶಯವಾದರೆ ತನ್ನ ವರ್ತನೆಯ ಕುರಿತು ತಂದೆ ಯಾವ ರೀತಿಯ ಜಿಗುಪ್ಸೆ ತಳೆಯಬಹುದು?

ಇಬ್ಬರೂ ಮಾತಿಲ್ಲದೆ ಉಳಿದುದರಿಂದ ಶ್ರೀಪತಿರಾಯರು ತಮ್ಮ ಸಮಾಧಾನವನ್ನು ಸರಿಯೆಂದು ಭಾವಿಸಿ ಹೇಳಿದರು:

"ಹಾಗಿದ್ದರೂ ತಿಳಿಸುವುದರಲ್ಲಿ ಹಾನಿಯೇನಿತ್ತು, ಅನಂತಾ. ಬರುವುದು, ಬಿಡುವುದು ಅವಳ ಇಷ್ಟ. ಆದರೆ ಈ ಸಂಗತಿಯನ್ನು ತಿಳಿಸದೆಯೇ ಉಳಿಯಲು,

ನಿಮ್ಮ ಕಷ್ಟಕಾಲದಲ್ಲಿ ನಾನು ಮಾಡಿದ ಸಹಾಯವನ್ನು ನಿರಾಕರಿಸಲು, ನಾನು ಎಂಥ ಅಪರಾಧ ಮಾಡಿದ್ದೇನೆ?"

ಅನಂತನ ಎದೆ ಚುಚ್ಚಿದ ಮಾತು.

'ನನ್ನ ಹೃದಯ ಭಾರತಿಗೂ ಆ ಮೂಲಕ ನಿಮಗೂ ಬಗೆದಿರುವ ಅಪರಾಧದ ಕಲ್ಪನೆಯೇ ನಿಮಗಿಲ್ಲ, ಮಾವಯ್ಯಾ' ಎಂದು ಮನಸ್ಸು ಹೇಳುತ್ತಿತ್ತು. ಆದರೆ ಆ ರೀತಿ ಮಾತು ಹೊರಟೀತೇ?

"ಏನು ಅವಸರ, ಎಂದು ತಿಳಿಸಿಲ್ಲ, ಮಾವಯ್ಯಾ."

"ಏಳು ತಿಂಗಳಾದಮೇಲೂ ಅವಸರವಿಲ್ಲವೆ? ಈ ಸಮಯ ದುಡಿಯಲು ದೇಹಕ್ಕೆ ವಿಪರೀತ ಶ್ರಮ ಕೊಡುವ ಶಕ್ತಿ ಅವಳಿಗಿದೆಯೇ, ಅನಂತಾ. ಯಾರಾದರೂ ವಯಸ್ಸಾದ ಹೆಂಗಸು ಜೊತೆಗಿದ್ದರೆ, ಕೆಲಸ ಬೊಗಸೆಗಳಿಗೆ ಆಳುಗಳಿದ್ದರೆ ಸರಿ. ಆದರೆ ಹಾಗೇನೂ ಇರದೆ, ಅದೂ ನಿನಗೆ ಕೆಲಸವೂ ಇಲ್ಲದಂಥ ಸಂದರ್ಭದಲ್ಲಿ...."

ಅನಂತ ಸದ್ದಿಲ್ಲದೆ ಕುಳಿತಿದ್ದ.

"ನೀನು ಯೋಚಿಸಬೇಕಿತ್ತು" ಎಂದರು.

ಅನಂತ ಈಗಲೂ ಯೋಚಿಸುತ್ತಿದ್ದ. ಘಂಟೆಗಟ್ಟಲೆ ಕಾಲ ಮಾವನೊಡನೆ ಹೂಡಿದ್ದ ವಾದ, ತರ್ಕ. ಆಗ ಅವರು ಮಾವನಾಗಿರಲಿಲ್ಲ. ಆದರೂ ಎಂಥ ಸಲಿಗೆಯಿಂದ ಸಂಪ್ರದಾಯದ ನೆಲೆಯಲ್ಲಿ ಅರಳುತ್ತಿದ್ದ ಅವರ ಆದರ್ಶವಾದವನ್ನು, ಅದರ ಹುಳುಕುಗಳನ್ನು ಎಷ್ಟು ಸುಲಭವಾಗಿ ಖಂಡಿಸುತ್ತಿದ್ದ. ಆಗ 'ನೀನು ಯೋಚಿಸಬೇಕಿತ್ತು' ಎಂದು ಅವರು ಒಂದು ಬಾರಿಯೂ ಹೇಳಿದ ನೆನಪು ಅನಂತನಿಗಿದ್ದಿರಲಿಲ್ಲ. 'ನೀನು ಸರಿಯಿರಬಹುದು, ಅನಂತಾ' ಎಂದೇ ಅವರ ಪಲ್ಲವಿಯಾಗಿತ್ತು.

ಆದರೆ ಇಂದು !

"ಮನೆಯಲ್ಲೆಲ್ಲ ಹೇಗಿದ್ದಾರೆ, ಮಾವಯ್ಯಾ?" ವಿಷಯ ಬದಲಿಸುವ ಆಸೆಯಿಂದ ಅನಂತ ಕೇಳಿದ.

"ಇದ್ದಾರೆ. ಮೊನ್ನೆ ಹೋಗಿದ್ದೆ ನಿಮ್ಮಲ್ಲಿಗೆ" ಎಂದು ಹೇಳಿದ ಶ್ರೀಪತಿರಾಯರು, ಹಾಗೆ ಹೋದಾಗ ಉಪಾಪರು ಮಗನನ್ನು ಬೈದ ರೀತಿಯನ್ನು ಅನಂತನ ಮುಂದೆ ವಿವರಿಸುವುದು ಸರಿಯೇ ಎಂದು ಚಿಂತಿಸುತ್ತಿದ್ದರು

"ಪಾರ್ವತಿ ಪುನಃ ಬಸುರಿಯೆಂದು ತೋರುತ್ತದೆ. ಆದರೆ ಅವಳು ಕೂಡ

ಮುಂಚಿನ ಹಾಗಿಲ್ಲ. ತುಂಬ ಬಡವಾಗಿದ್ದಾಳೆ. ಮೊನ್ನೆ ನಿಮ್ಮಲ್ಲೇ ಇದ್ದಳು. ಮುಂಚಿನ ಮಾತುಗಾರಿಕೆಯೂ ಕಡಿಮೆಯಾಗಿದೆ.” ಹೀಗೆ ಹೇಳಿದ ಶ್ರೀಪತಿ ರಾಯರು ಪಾರ್ವತಿ, ತಾವು ಹೊರಡುವ ಸುದ್ದಿ ತಿಳಿದಾಗ ಹೇಳಿದ್ದ ಮಾತನ್ನೇ ನೆನೆಸಿಕೊಳ್ಳುತ್ತಿದ್ದರು :

‘ಬಡತನ ಉಡುಪಿಯಲ್ಲೂ ಇದೆ ಎಂದು ಅಣ್ಣನೊಡನೆ ಹೇಳಿ, ಮಾವ. ಅದು ಬರೇ ಮುಂಬಯಿಯ ವೈಶಿಷ್ಟ್ಯವಲ್ಲ. ಇಬ್ಬರಿಗೂ ಮನೆ ಮರೆತು ಹೋಗಿದೆ, ಕಾಗದ ಬರೆಯುವುದು ಕಷ್ಟವಾಗಿದೆ, ಎಂದಾದರೆ ಹಾಗೆ ಸ್ಪಷ್ಟವಾಗಿ ತಿಳಿಸಬಾರದೆ? ಯಾವುದಕ್ಕೂ ಅತ್ತಿಗೆ ಬರುತ್ತಾಳಲ್ಲ. ಆಗ ಕಿವಿ ಹಿಂಡುತ್ತೇನೆ.’

“ನೀನು ಕಾಗದ ಬರೆಯುವ ಅಭ್ಯಾಸವನ್ನೆ ಬಿಟ್ಟಿದ್ದೀ. ಉಡುಪರು ನೊಂದುಕೊಳ್ಳದೆ ಇರುತ್ತಾರೆಯೆ? ಪುನಃ ಸಾವಿರಕ್ಕೆ ಮಿಕ್ಕಿ ಸಾಲವಾಗಿದೆ ಯೆಂದು ತೋರುತ್ತದೆ. ನನ್ನಿಂದಲೇ ಮುನ್ನೂರು ರೂಪಾಯಿ ಪಡೆದಿದ್ದಾರೆ. ಕಾಂಗ್ರೆಸ್ ಸರಕಾರ ಬಂದಮೇಲೂ ನೀನು ಜೇಲು ಕಂಡಿಯೆಂದು ಅವರಿಗೆ ಬಂದಿರುವ ಸಿಟ್ಟು ಇಷ್ಟೇ ಎಂದು ಹೇಳುವಂತಿಲ್ಲ. ನೀನು ಹುಟ್ಟಿದ್ದೇ ಜೇಲು ವಾಸಕ್ಕಾಗಿ ಎಂದು ಅವರು ತಿಳಿದಂತಿದೆ. ಅದೂ ಈಗ ಕೆಲಸವೂ ಇಲ್ಲ. ನಿನ್ನಿಂದ ಸಹಾಯವೂ ನಿಂತಿದೆ. ಅವರನ್ನು ಬೈದೇನು ಪ್ರಯೋಜನ? ವಯಸ್ಸಾಗಿದೆ. ಸಂಸಾರ ದೊಡ್ಡದು. ದಾರಿದ್ರ್ಯ ದುಃಖ ಮನುಷ್ಯನಿಂದ ಆಡಬಾರದ ಮಾತು ಆಡಿಸುತ್ತದೆ. ಮಾಡಬಾರದ ಕೆಲಸ ಮಾಡಿಸುತ್ತದೆ.”

ಒಂದು ಕ್ಷಣ ಅನಂತ ಬೇರೆಲ್ಲವನ್ನೂ ಮರೆತು ಮನೆಯ ಕುರಿತು ಚಿಂತಿಸುತ್ತಿದ್ದ. ಮುಂಬಯಿಯ ಜೀವನದಲ್ಲಿ ಮನೆಯ ವಿಚಾರ ಚಿಂತಿಸಲು ಅವಕಾಶ ದೊರಕುತ್ತಿದ್ದುದು ಕಡಿಮೆ. ಈಗ ಮಾವ ಮನೆಯ ದುಃಸ್ಥಿತಿಯನ್ನು ಬಣ್ಣಿಸುವಾಗ, ಉತ್ತಮ ಬದುಕಿಗಾಗಿ ಇಂದು ನಡೆಯುತ್ತಿರುವ ಸಾರ್ವತ್ರಿಕ ಹೋರಾಟವನ್ನೇ ಇನ್ನೊಂದು ರೀತಿಯಲ್ಲಿ ಮಾಡುತ್ತಿದ್ದ ತನ್ನ ಸಂಸಾರದ ಚಿತ್ರ ಕಣ್ಣ ಮುಂದೆ ಬಂತು.

ಪಾರ್ವತಿ! ತಾನು ಚಿಕ್ಕಂದಿನಲ್ಲಿ ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ತಂಗಿ. ಈಗ ತನ್ನ ಜೀವನದಲ್ಲಿ ಕಾಣಿಸಿಕೊಂಡ ಇಂದಿರೆಯ ಇತಿಹಾಸವನ್ನು, ಅವಳು ತನ್ನ ಮೇಲೆ ಮಾಡಿರುವ ಪರಿಣಾಮವನ್ನು ಆಕೆಗೆ ತಿಳಿಸಿದರೆ ಯಾವ ರೀತಿಯ ಉತ್ತರ ದೊರಕಬಹುದು?

"ಊಟಕ್ಕೆ ಬಾ, ಅಪ್ಪ" ಎಂದು ಭಾರತಿ ತಂದೆಯನ್ನು ಕರೆದಳು. ಮನೆಯ ಕುರಿತಾದ ಮಾತು ಅಲ್ಲಿಗೆ ನಿಂತಿತು.

ಊಟ ಮಾಡುತ್ತಿದ್ದ ಅನಂತನಿಗೆ ಸೋಮಯಾಜಿಗಳ ಉಪಕಾರಕ್ಕೆ ಎಷ್ಟು ಕೃತಜ್ಞತೆಯನ್ನರ್ಪಿಸಿದರೂ ಅದು ಕಡಿಮೆಯೇ ಎಂದು ತೋರಿತು. ಹಿಂದಿನ ದಿನ ಐವತ್ತು ರೂಪಾಯಿ ಸಿಕ್ಕಿರದಿದ್ದರೆ ಇಂದು ಕೂಡ ತಿಳಿ ಸಾರೇ ಗತಿಯಾಗಬಹುದಿತ್ತು. ಅನುಕೂಲವಂತ ಮನೆತನದ ಮಾವಯ್ಯ ಅಳಿಯನ ದಾರಿದ್ರ್ಯವನ್ನು ಕಣ್ಣಾರೆ ನೋಡಬಹುದಿತ್ತು. ಆದರೆ ಭಾರತಿ ಅನಂತ ಕೊಟ್ಟಿದ್ದ ನಲವತ್ತು ರೂಪಾಯಿಗಳನ್ನು ಚೆನ್ನಾಗಿ ಉಪಯೋಗಿಸಿಕೊಂಡಿದ್ದಳು.

ಸೋಮಯಾಜಿಗಳು ಕೊಟ್ಟ ಸಹಾಯ. ತಲಪಾಡಿಯವರ ಹಣ. ಇಂದಿರೆಯ ತಂದೆಯ ಹಣ.

"ಭಾರೀ, ಊರಿಗೆ ಬರುವುದಿಲ್ಲವೇನು ಹಾಗಾದರೆ?" ಶ್ರೀಪತಿ ರಾಯರು ನಗುತ್ತ ಮಗಳೊಡನೆ ಕೇಳಿದರು.

ಭಾರತಿಗೆ ಏನು ಉತ್ತರ ಹೇಳುವುದೆಂದು ತಿಳಿಯಲಿಲ್ಲ. ತಂದೆ ಬಂದಾಗ, ತನ್ನ ಬದುಕಿಗೂ ಒಂದು ಸ್ವರೂಪವಿದೆಯೆನ್ನುವಷ್ಟು ಸಮಾಧಾನ ಆಕೆಗೆ ಆಗಿದ್ದಿತು. ನಡುನೀರಿನಲ್ಲಿ ಮುಳುಗುತ್ತಿರುವ ವ್ಯಕ್ತಿ ದಡ ಕಂಡಂತೆ. ತನ್ನೆಲ್ಲ ದುಃಖ ತಂದೆಯಿಂದಾಗಿ ದೂರವಾಗುತ್ತದೆನ್ನುವಷ್ಟು ಸಮಾಧಾನ ಆಕೆಗೆ ದೊರಕಿತ್ತು. ಅನಂತ ತಂದೆಗೆ ನಮಸ್ಕರಿಸಿದಾಗ 'ನನ್ನ ಗಂಡ ಮತ್ತೆ ನನಗೆ ದೊರಕಿದ್ದಾರೆ' ಎಂದು ಭಾರತಿ ಭಾವಿಸಿದ್ದಳು.

ಈಗ ತಂದೆಯ ಜೊತೆಗೆ ಊರಿಗೆ ಮರಳುವುದು ಸರಿಯೆ?

ತಾನಿಲ್ಲದ ವೇಳೆ ಮತ್ತೇನು ಅನಾಹುತವಾಗುವುದೋ? ಮತ್ತೆ ಈ ಮೊದಲು ಉಡುಪಿಯಲ್ಲಿ, ಮಾವನ ಮನೆಯಲ್ಲಿ ಅನುಭವಿಸಿದಂತೆ ಅಗಲಿಕೆಯ ನೋವೇ ತನಗೆ ಗತಿಯೆ?

ಆದರೆ ಇಲ್ಲಿ ಉಳಿದರೆ ಮತ್ತೆ ಕಣ್ಣೀರಿನ ಜೀವನ. ತಂದೆ ಇಲ್ಲಿ ಎಷ್ಟು ದಿನ ಉಳಿಯುತ್ತಾರೆ? ಅವರು ಹೋದಮೇಲೆ ಮತ್ತೇನು ಗತಿ?

"ಆಲೋಚನೆ ಮಾಡಲು ಬೇಕಾದಷ್ಟು ಅವಕಾಶವಿದೆ. ಈಗೇಕೆ ಅವಸರ? ಬಂದ ಕೂಡಲೇ ಓಡಿಯೋಗುವಿರೇನು?" ಅನಂತನೇ ಅನಿರೀಕ್ಷಿತವಾಗಿ ಭಾರತಿಯ ಸಹಾಯಕ್ಕೆ ಬಂದ.

"ಓಡಿಯೇ ಹೋಗಬೇಕು. ನನಗಿರುವುದು ಮೂರು ದಿನಗಳ ಅವಕಾಶ.

ಬರುವ ವಾರ ದೊಡ್ಡದೊಂದು ಕೇಸಿದೆ. ಏಳು ತಿಂಗಳಿಂದು ಕೇಳಿ ಓಡಿಬಂದೆ. ಆ ಬಸ್ಸಿನ ದಾರಿ ಎಷ್ಟು ಕಷ್ಟವೆಂದು ನಿನಗೆ ತಿಳಿದಿಲ್ಲವೆ? ಇಲ್ಲವಾದರೆ ಕೋರ್ಟಿಗೆ ರಜೆ ಆರಂಭವಾದಮೇಲೆ ಬರುತ್ತಿದ್ದೆ. ನಾನೇನು ಎ.ಐ.ಸಿ.ಸಿ. ಅಧಿವೇಶನ ನೋಡಲು ಬಂದಿದ್ದೇನೆಂದು ತಿಳಿದಿಯೇನು ?"

"ಮೂರೇ ದಿನ ?"

"ಹೌದು ಸೋಮವಾರ ಹೊರಡಲೇಬೇಕು."

"ಹಾಗಾದರೆ ಭಾರತಿಯನ್ನು ಕರೆದುಕೊಂಡು ಹೋಗುತ್ತೀರೇನು ?"

"ಹೋಗದೆ ಬೇರೆ ದಾರಿಯಿದೆಯೆ ? ಇಲ್ಲಿ ಯಾರನ್ನು ನಂಬಿ ಬಿಟ್ಟು ಹೋಗಲಿ ?"

ಶ್ರೀಪತಿರಾಯರು ಪ್ರಾಮಾಣಿಕವಾಗಿ, ಯಾವ ಹಿರಿಯ ವ್ಯಕ್ತಿಯನ್ನು ನಂಬಿ ಬಿಟ್ಟುಹೋಗಲಿ ಎಂಬರ್ಥ ಬರುವಂತೆ ಪ್ರಶ್ನೆ ಕೇಳಿದ್ದರು. ಆದರೆ ಅನಂತನಿಗೆ ಅದು ತನ್ನನ್ನುದ್ದೇಶಿಸಿ ಹೇಳಿದ ಮಾತಿನಂತೆ ತೋರಿತು.

"ಅದು ಹೌದು, ಮಾವಯ್ಯ. ನನಗೊಂದು ಕೆಲಸವೂ ಇರದೆ ಈ ದುಃಖದ ದಿನಗಳಲ್ಲಿ ಭಾರಿ ಇಲ್ಲಿರುವುದು ಸರಿಯಲ್ಲ. ಕರೆದುಕೊಂಡು ಹೋಗಿ. ನಾನೇ ಕರೆದುಕೊಂಡು ಬರಬೇಕಿತ್ತು. ಆದರೆ ನನ್ನ ಕೆಲಸದ ಬೇಟೆ ಬಿಟ್ಟು, ಪತ್ರಿಕೆ ಬಿಟ್ಟು ಈಗ ಹೇಗೆ ಬರಲಿ ?" ಎಂದು ಅನಂತ ಹೇಳಿದ.

ಭಾರತಿ ಮಾತ್ರ ಗಂಡನ ಮಾತಿಗೆ ವಿಪರೀತ ಅರ್ಥವನ್ನೇ ಕಲ್ಪಿಸಿದಳು. ಗಂಡ ಬೇಕೆಂದೇ ತನ್ನನ್ನು ಓಡಿಸುತ್ತಿದ್ದಾರೆ; ತಾನಿರುವುದು ಅವರಿಗೆ ಬೇಡವಾಗಿದೆ, ಎಂದು ಬಗೆದು ಉಭಯಸಂಕಟದಲ್ಲಿ ಬಿದ್ದಳು. ಇಷ್ಟು ದಿನ ಹೊಗೆಯಾಡುತ್ತಿದ್ದ ವಿರಸ ಈಗ ಮತ್ತೆ ತಲೆದೋರಿತು. ಆದರೆ ತಂದೆಯ ಇದಿರಿನಲ್ಲಿ ಮಾತು ಇನ್ನೊಂದು ರೂಪದಿಂದ ಹೊರಬಂತು :

"ನಾನೂ ಬಂದರೆ ಅವರನ್ನು ಯಾರು ನೋಡಿಕೊಳ್ಳುತ್ತಾರೆ, ಅಪ್ಪ. ಅವರಿಗೆ ಹೋಟೆಲು ಊಟ ಹಿಡಿಸುವುದೇ, ಅದೂ ಆರೋಗ್ಯ ಕೆಟ್ಟಿರುವಾಗ ?"

ಭಾರತಿ ತನ್ನ ಕುರಿತು ಇಷ್ಟೇಕೆ ಆಸಕ್ತಿ ವಹಿಸುತ್ತಿರುವಳೆಂದು ಅನಂತನಿಗೆ ಅರ್ಥವಾಗಲಿಲ್ಲ. ತನ್ನನ್ನು ಬಿಟ್ಟುಹೋಗುವುದು ಇಷ್ಟವಿಲ್ಲವೆ ? ತನ್ನ ಕುರಿತು ಅಷ್ಟು ಕಳಕಳಿಯಿರುವ, ಕೈಹಿಡಿದ ಹೆಂಡತಿಗೆ ತನ್ನಿಂದ ಇಂಥ ದ್ರೋಹವೆ ?

"ಅದು ಸರಿ, ಭಾರೀ. ಆದರೆ ನಿನ್ನನ್ನು ಒಬ್ಬಳನ್ನೇ ಹೇಗೆ ಬಿಟ್ಟರು

ವುದು ? ಮೊದಲ ಸಲ, ಹೆರಿಗೆ ಕಷ್ಟವಾಗಬಾರದಲ್ಲ. ಎರಡು ಜೀವಗಳ ಹೊಣೆ."

"ಹೌದು, ಮಾವಯ್ಯ. ನೀವು ಅವಳನ್ನು ಕರೆದುಕೊಂಡು ಹೋಗಿ. ನನ್ನ ವಿಚಾರ ನೀವೇನೂ ಚಿಂತಿಸುವುದು ಬೇಡ. ನನಗೇನು ಧಾಡಿ ಬಂದಿಲ್ಲ" ಎಂದು ಅನಂತ ಹೇಳಿದಾಗ ಭಾರತಿಗೆ ಆಶ್ಚರ್ಯವಾಗಲಿಲ್ಲ.

ಗಂಡ ತನ್ನನ್ನು ದೂರ ಕಳಿಸಲು ಪ್ರಯತ್ನಿಸುತ್ತಿದ್ದಾರೆ ಎಂಬ ಆಲೋಚನೆ ಮಾತ್ರ ಬಲಿತು ಆಕೆಯ ಎದೆಯನ್ನು ಕೊರೆಯತೊಡಗಿತು.

ಶ್ರೀಪತಿರಾಯರಿಗೆ ಅನಂತನ ಕೊನೆಯ ಮಾತು ಉಳಿದ ಒಂದೇ ಒಂದು ಉಪಾಯ.

ಮಾರನೆ ದಿನ ಬೆಳಿಗ್ಗೆ ಅನಂತ ರಾಜೀವನನ್ನು ಕಾಣಲೆಂದು ಅಂಧೇರಿಗೆ ಹೋಗಲು ಹೊರಟು ನಿಂತಾಗ ಶ್ರೀಪತಿರಾಯರು,

"ಎಲ್ಲಿಗೆ, ಅನಂತಾ ?" ಎಂದು ಕೇಳಿದರು.

"ನನ್ನ ಗೆಳೆಯರೊಬ್ಬರಿಗೆ ಸೌಖ್ಯವಿಲ್ಲ. ಅಂಧೇರಿಯ ತನಕ ಹೋಗಬೇಕಾಗಿದೆ" ಎಂದು ಹೇಳಿದ.

"ಬರುವುದು ಎಷ್ಟು ಹೊತ್ತಾಗಬಹುದು ?"

ಅನಂತ ತುಸು ಯೋಚಿಸಿ ಉತ್ತರ ಕೊಟ್ಟ:

"ಯಾಕೆ ಕೇಳಿದಿರಿ ?"

"ನಾಗೇಶರಾಯರನ್ನು ಒಮ್ಮೆ ನೋಡಿಬರಬೇಕು. ಹೋಗದಿದ್ದರೆ ಅವರು ತಪ್ಪು ತಿಳಿದುಕೊಳ್ಳಬಹುದು ಸುನಂದ ಕೂಡ ನಾಲ್ಕು ದಿನ ಅಲ್ಲಿದ್ದು ಬಂದಿದ್ದಾಳೆ. ನಿನಗೆ ಬರಲು ಅನುಕೂಲವಾಗುವುದೇ ಎಂದು ಕೇಳಿದೆ."

"ಅವರಿಗೀಗ ಎ.ಐ.ಸಿ.ಸಿ. ಅಧಿವೇಶನದ ಗಡಿಬಿಡಿ. ನಾನು ಸಾಧ್ಯವಾದರೆ ಬೇಗ ಬರುತ್ತೇನೆ. ಪ್ರೆಸ್ಸಿನ ತನಕವೂ ಹೋಗಿಬರಬೇಕು. ಭಾರತಿಗೆ ಹಾದಿ ತಿಳಿದಿದೆ. ಅವಳೂ ನೋಡಿಬಂದಹಾಗೆ ಆಗುತ್ತದೆ. ಕರೆದುಕೊಂಡು ಹೋಗಿ" ಎಂದ.

ಶ್ರೀಪತಿರಾಯರು, "ಹಾಗಾದರೆ ಸರಿ" ಎಂದರು.

ಅನಂತ ಅಲ್ಲಿಂದ ನೇರವಾಗಿ ಅಂಧೇರಿಗೆ ಹೋದ. ಮನೆ ತಲುಪಿದಾಗ, ರಾಜೀವ ಮಲಗಿದ್ದ. ಜೊಂಪ ಜೊಂಪು ಹಿಡಿದಂತಿತ್ತು. ಆ ಕಾರಣ ಅನಂತ ಅವನನ್ನು ಎಬ್ಬಿಸುವ ಗೊಡವೆಗೆ ಹೋಗಲಿಲ್ಲ. ಜ್ವರ ತುಸು ಇಳಿದಂತಿದೆಯೆಂದು

ರಾಜೀವನ ಮುದಿ ತಂದೆಯಿಂದ ತಿಳಿದಾಗ ಸ್ವಲ್ಪ ಸಮಾಧಾನವಾದರೂ ಹಿಂದಿನ ದಿನ ವೈದ್ಯರು 'ಇನ್‌ಫ್ಲುಯೆಂಜಾ' ಎಂದು ಹೇಳಿದ್ದುದರಿಂದ, ಅವರ ಪರೀಕ್ಷೆ, ಚಿಕಿತ್ಸೆ ಸರಿಯಾದುದೇ ಎಂದು ಸಂದೇಹವಿತ್ತು. ಹೀಗಾಗಿ ಡಿಸ್ಪೆನ್ಸರಿ ತೆರೆಯುವ ತನಕ ಕಾದಿದ್ದು, ಹೋಗಿ ವೈದ್ಯರನ್ನು ಕಂಡು ತನ್ನ ಸಂದೇಹವನ್ನು ತಿಳಿಸಿದ. ಅವರು "ಪುನಃ ಬಂದು ನೋಡಬೇಕೇ?" ಎಂದು ಕೇಳಿದರು. ಅನಂತ ಈಗ ಯೋಚಿಸಬೇಕಿತ್ತು. "ಜ್ವರ ಸ್ವಲ್ಪ ಇಳಿದಿದೆಯಂತೆ" ಎಂದು ಹೇಳಿದ. ಅವರು "ಹಾಗಾದರೆ ನನ್ನ ಔಷಧಿ ಮುಂದುವರಿಸಿ. ನಾಳೆ ಬಂದು ಹೇಳಿ" ಎಂದರು.

ಅನಂತ ಅವರು ತೋರಿಸಿದ ದಾರಿಯನ್ನೇ ಅನುಸರಿಸಬೇಕಾಯಿತು.

ಅಲ್ಲಿಂದ ಪ್ರೆಸ್ಸಿಗೆ ಹೋಗಿ, ತನ್ನ ಕೆಲಸ ಮುಗಿಸಿ, ಬಾಟ್ಲಿವಾಲಾಳ ಕುರಿತಾದ ಲೇಖನ ಅಚ್ಚಿಗೆ ಕೊಟ್ಟು, ಅದರ ಪಡಿಯಚ್ಚುಗಳ ತಯಾರಿಕೆಯ ಕುರಿತು ನಿರ್ದೇಶನ ಕೊಟ್ಟು ಅನಂತ ಮನೆಯ ದಾರಿ ಹಿಡಿಯುವಾಗ ಘಂಟೆ ಎರಡಾಗಿತ್ತು.

ಮನೆಯಲ್ಲಿ ಮಾವನೂ ಇರಲಿಲ್ಲ; ಭಾರತಿಯೂ ಇರಲಿಲ್ಲ. ನೆರೆಮನೆಯಲ್ಲಿ ಬೀಗದ ಕೈಯಿತ್ತು.

ಊಟ ತೀರಿಸಿ ಬಿದ್ದುಕೊಂಡ ಅನಂತನ ಯೋಚನೆ ಭವಿಷ್ಯದ ಕುರಿತು ವಿಾಸಲು.

'ಭಾರತಿ ಊರಿಗೆ ಹೋದರೆ, ಮುಂದೇನು?'

'ಭಾರತಿ ತಾಯಿಯಾಗಿ ಮುಂಬಯಿಗೆ ಮರಳುತ್ತಾಳೆ. ಇನ್ನೊಂದು ಜೀವ ಈ ದುಃಖದ ಸಂಸಾರದಲ್ಲಿ ನುಸುಳಿಕೊಳ್ಳುವುದು. ನಾನು ಆಮೇಲೆ ಯಾವ ರೀತಿ ವರ್ತಿಸಬೇಕಾಗಿ ಬರಬಹುದು? ನನ್ನ ಜೀವನದಲ್ಲಿ ಇಂದಿರೆಗೆ ಯಾವ ಸ್ಥಾನ?'

ಇಂದಿರೆಯ ಸ್ನೇಹಕ್ಕಾಗಿ ಎದೆ ಮಮ್ಮಲ ಮರುಗುತ್ತಿತ್ತು. ಇಂದಿರೆಯ ಸ್ನೇಹವಿಲ್ಲದೆ ಹೋದರೆ, ನಾನಿನ್ನು ಜೀವಿಸುವುದು ಸಾಧ್ಯವೇ? ಎಂದು ಮನಸ್ಸು ಪ್ರಶ್ನಿಸುತ್ತಿತ್ತು.

'ನನ್ನ ಹೋರಾಟದ ಕಾವು, ಆದರ್ಶದ ಗಾಂಭೀರ್ಯ, ನಡವಳಿಕೆಯ ರೀತಿ, ಇವೆಲ್ಲವುಗಳನ್ನು ನಿಯಂತ್ರಿಸುವಷ್ಟು ಪ್ರಭಾವವಿರುವ ಇಂದಿರೆಯ ಪರಿಚಯ ನನಗೇಕಾಯಿತು? ಇಂದಿರೆಯ ಸ್ನೇಹವಿರದೆ ಹೋದರೆ ನನ್ನ

ಜೀವನ ಅರ್ಥಶೂನ್ಯವಾದುದೆಂಬ ಭಾವನೆ ನನ್ನಲ್ಲಿ ಉದಯಿಸುವಂತಾದುದು ಏಕೆ?'

'ಈ ಅನುರಕ್ತಿಯ ಪರಿಣಾಮ ಎಂಥದಾಗಬಹುದು? ನನ್ನನ್ನು ನಾನೇ ಎಷ್ಟರ ತನಕ ನಂಬಬಹುದು?'

ಈ ಯೋಚನೆಗೆ ಬಿಡುವಿರಲಿಲ್ಲ. ಆದಿ ಅಂತ್ಯಗಳೂ ಇರಲಿಲ್ಲ. ಅನಂತ ಓದಲು ಮಾಡಿದ ಪ್ರಯತ್ನ ವಿಫಲವಾಯಿತು. ಎದೆಯಾಳದಲ್ಲಿ ಒಳದನಿ ಒಂದೇ ಸಮನೆ ಕಿರಿಚಿಕೊಳ್ಳುತ್ತಿತ್ತು: 'ಭಾರತಿಯ ಸಾಮೀಪ್ಯ ನಿನಗೆ ಸ್ವಲ್ಪ ಸಮಯವಾದರೂ ತಪ್ಪುವುದು. ಆಗ ನಿನ್ನ ಪ್ರಿಯತಮೆಯ ಸಾಮೀಪ್ಯ ಸುಖ ದ್ವಿಗುಣಿತವಾಗುವುದು. ಇಂದಿರೆಯ ಸಾನ್ನಿಧ್ಯದಲ್ಲಿ ನೀನು ಸುಖಿ' ಎಂದು.

ಸಂಜೆ ಆರು ಘಂಟೆಯ ಹೊತ್ತಿಗೆ ಶ್ರೀಪತಿರಾಯರು ಮಗಳೊಡನೆ ಮರಳಿ ಬಂದರು.

"ನೋಡಬೇಕಾದವರನ್ನು ನೋಡಿಯಾಯಿತು, ಅನಂತಾ. ಇನ್ನು ನಾಳೆ ಒಂದು ದಿನವಿದೆ. ನಾಡಿದ್ದು ಬೆಳಿಗ್ಗೆ ಹೊರಟರೆ ಸರಿ."

"ನಾಗೇಶರಾಯರು ಮನೆಯಲ್ಲಿ ಇದ್ದರೇನು?"

"ಹೌದು. ನಿನ್ನನ್ನು ಬಹಳ ಹೊಗಳಿದರು."

ತಂದೆಯ ಮಾತು ಅರ್ಥವಾಗದೆ ಭಾರತಿ ಅವರ ಮುಖ ನೋಡಿದಳು. ನಾಗೇಶರಾಯರು ಅನಂತನನ್ನು ತೆಗಳಿದ್ದು ಅವಳಿಗೆ ತಿಳಿದಿತ್ತು. ಅದನ್ನೇ ಹೊಗಳಿಕೆಯೆಂದು ತಂದೆ ಏಕೆ ವ್ಯಂಗ್ಯವಾಗಿ ಹೇಳುತ್ತಿದ್ದಾರೆಂದು ಅವಳಿಗೆ ಅರ್ಥವಾಗಲಿಲ್ಲ.

ಆದರೆ ಅನಂತನಿಗೆ ಮಾವನ ಮಾತು ಅರ್ಥವಾಯಿತು. ಆತ ನಕ್ಕ.

"ಅವರಿಂದ ಹೊಗಳಿಸಿಕೊಳ್ಳಲೂ ವಿಶಿಷ್ಟ ಯೋಗ್ಯತೆ ಬೇಕು" ಎಂದು ಸುಮ್ಮನಾದ. ಮತ್ತೆ ತುಸು ತಡೆದು,

"ಇಂದಿರೆಗೆ ನಿನ್ನನ್ನು ನೋಡಬೇಕಂತೆ, ಭಾರೀ. ನಾಳೆ ಹೋಗಿ ಬರೋಣವೇ?" ಎಂದು ಕೇಳಿದ.

ಇಂದಿರೆಯ ಹೆಸರು ಕೇಳಿಯೇ ಭಾರತಿಯ ಮುಖ ಕಪ್ಪಿಟ್ಟಿತು. ಪುನಃ ಅದೇ ಸಂಶಯ. ತನ್ನನ್ನು ನೋಡುವ ಆಸೆಯಿದ್ದಿದ್ದರೆ ತನ್ನ ಗಂಡನೊಡನೆ ಹೇಳಿ ಹಾಗೇ ಉಳಿಯಬೇಕೇ? ತಾನಿಲ್ಲದ ವೇಳೆ ನೋಡಿಕೊಂಡು ಮನೆಗೆ

ಬರಬೇಕೇ? ಹಾಗೆ ಹೇಳಿರಬಹುದಾದ ವಿಚಾರವನ್ನು ತನ್ನ ಗಂಡ ತಾನು ಹೊರಡುವ ಗಳಿಗೆಯ ತನಕ ತಿಳಿಸದಿರುವುದರಲ್ಲಿ ಏನಾದರೂ ಅರ್ಥವಿದೆಯೆ?

"ನನಗೆ ಇವೊತ್ತು ತಿರುಗಿ ಬಂದೇ ಸಾಕಾಗಿದೆ" ಎಂದಳು.

ಆದರೂ ಅನಂತ ಮಾವನನ್ನೂ ಭಾರತಿಯನ್ನೂ ಭಾನುವಾರ ತಲಪಾಡಿಯವರಲ್ಲಿಗೆ ಕರೆದೊಯ್ದ. ಭಾರತಿಯನ್ನು ಇಂದಿರೆಯ ಕರೆಯಂತೆ, ಅಲ್ಲಿಗೆ ಕರೆದುಕೊಂಡು ಹೋಗುವುದಕ್ಕಿಂತಲೂ ಮಾವನಿಗೆ ಸಂಜೀವರಾಯರ ಪರಿಚಯ ಮಾಡಿಸಿಕೊಡುವ ಆತುರ ಅವನಿಗೆ.

ಸಂಜೀವರಾಯರು ಭಾನುವಾರವಾದುದರಿಂದ ಮನೆಯಲ್ಲೇ ಇದ್ದರು. ಅನಂತ ಮತ್ತು ಶ್ರೀಪತಿರಾಯರನ್ನು ನೋಡಿ ತುಂಬ ಸಂತೋಷಪಟ್ಟರು. ಇಂದಿರೆಗೂ ಭಾರತಿಯನ್ನು ನೋಡಿ ಆದ ಸಂತೋಷ ಇಷ್ಟೇ ಎಂದು ಹೇಳುವಂತಿಲ್ಲ. ಆದರೆ ಭಾರತಿ ಮಾತ್ರ ಉದಾಸೀನಳಾಗಿಯೇ ಇದ್ದಳು. 'ಯಾರಿಂಗೆ ಮಂಕುಬೂದಿ ಎರಚಬೇಕಾಗಿದೆಯೋ' ಎಂಬ ಮೀನಾಕ್ಷಮ್ಮನ ಮಾತನ್ನು ಆಕೆ ಮರೆಯುವಂತಿರಲಿಲ್ಲ. ಇಂದಿರೆಯ ಉತ್ಸಾಹ ಆ ಮಾತಿಗೆ ಪುಷ್ಟಿ ಕೊಡುತ್ತಿದೆಯೆಂದೇ ಆಕೆಯ ಭಾವನೆಯಿತ್ತು.

ಗಂಡಸರು ಮಾತನಾಡುತ್ತಿದ್ದಾಗ ಇಂದಿರೆ ಭಾರತಿಯನ್ನು ಒಳಗೆ ಕರೆದೊಯ್ದಳು.

"ನೀನು ಬರುವಿಯೆಂದು, ಅದೂ ಅನಿರೀಕ್ಷಿತವಾಗಿ ಬರುವಿಯೆಂದು ನನಗೆ ತಿಳಿದಿತ್ತು. ಇನ್ನು ನಿನ್ನನ್ನು ಕಾಣುವುದು ಗಂಡು ಮಗುವನ್ನು ಹಿಡಿದುಕೊಂಡು ವಾಪಸು ಬಂದಾಗ" ಎಂದು ನಗುತ್ತಲೇ ಇಂದಿರೆ ಹೇಳಿದರೂ, ಭಾರತಿಯ ಮುಖದಲ್ಲಿ ಬರೇ ನಗುವಿನ ರೂಪರೇಷೆಯೊಂದು ಮೂಡಿತಷ್ಟೆ.

"ಏಕೆ, ಮೈ ಚೆನ್ನಾಗಿಲ್ಲವೆ?"

ತಪ್ಪಿಸಿಕೊಳ್ಳಲು ಇಂದಿರೆಯೇ ದಾರಿ ತೋರಿಸಿದಳೆಂದು ತಿಳಿದು,

"ಹೌದು. ತಲೆನೋವು" ಎಂದು ಭಾರತಿ ತನ್ನ ಅಸಹಜವೆಂದು ಕಾಣಬಹುದಾದ ವರ್ತನೆಯನ್ನು ಮರೆಮಾಚಲು ಪ್ರಯತ್ನಿಸಿದಳು.

ಹೊರಗೆ ಕುಳಿತಿದ್ದ ಅನಂತನ ಮನಸ್ಸೆಲ್ಲ ಒಳಗಿದ್ದ ಇಂದಿರೆಯೆಡೆ. ಹಿರಿಯರಿಬ್ಬರನ್ನು ಮಾತನಾಡಬಿಟ್ಟು ಆತ, ಉತ್ಸಾಹದ ಪ್ರತಿಮೂರ್ತಿಯಾಗಿ, ತನಗಿಲ್ಲದ ಸೌಭಾಗ್ಯವನ್ನು ಪಡೆದು ಬಂದ ಭಾರತಿಯನ್ನು ಸತ್ಕರಿಸುವ ಇಂದಿರೆಯ ಸಡಗರವನ್ನು ನೆನೆಸಿಕೊಂಡು ಚಿಂತಿಸುತ್ತಿದ್ದ.

'ಇಂದಿರೆಗೆ ಆಕೆಯ ಹೃದಯದ ಏಕಾಂತತೆಯ ಕಲ್ಪನೆಯೇ ಇಲ್ಲವೆ?'

ಹೊರಡುವ ಹೊತ್ತು ಬಂದಾಗ ಭಾರತಿಗೆ ದೊಡ್ಡದೊಂದು ಆಶ್ಚರ್ಯ ಕಾದಿತ್ತು. ರಟ್ಟಿನ ಪೆಟ್ಟಿಗೆಯೊಂದನ್ನು ತಂದು ಇಂದಿರೆ ಭಾರತಿಯ ಮುಂದೆ ಹಿಡಿದು,

"ತೆಗೊ" ಎಂದಾಗ ಭಾರತಿಗೆ ಆಶ್ಚರ್ಯವಾಯಿತು. ಕುತೂಹಲದಿಂದ ಅದನ್ನು ತೆರೆದು ನೋಡಿದಾಗ ಅದರಲ್ಲಿದ್ದುದು ಪುಟ್ಟ ಮಗುವಿಗಾಗಿ ಉಣ್ಣೆಯ ಎರಡು ಜತೆ ಕಾಲುಚೀಲ, ಒಂದು ಟೊಪ್ಪಿಗೆ, ಒಂದು ಜತೆ ಅಂಗಿ, ಹಾಲು ಕುಡಿಸಲು ಪುಟ್ಟದೊಂದು ಬೆಳ್ಳಿಯ ಲೋಟೆ, ಅದಕ್ಕೆ ಸರಿಯಾದ ಚಮಚ.

"ಸುಶೀಲೆಯ ಕಾಗದ ಬಂದ ದಿನವೇ ತಂದಿರಿಸಿದ್ದೆ, ಭಾರತೀ. ನೀನು ಬರಲು ತಡ ಮಾಡಿದಿ, ಅಷ್ಟೆ."

ಭಾರತಿಗೆ ಏನು ಹೇಳುವುದೆಂದು ತಿಳಿಯಲಿಲ್ಲ. ಬರೇ "ಬರುತ್ತೇನೆ" ಎಂದು ಹೇಳಿ ಅಲ್ಲಿಂದ ಹೊರಬಿದ್ದಳು.

ಅನಂತ ಯಾವ ಭಾವವನ್ನೂ ವ್ಯಕ್ತಪಡಿಸಲಿಲ್ಲ. ಮೌನಿಯಾಗಿಯೇ ನಡೆದ. ಮೆಟ್ಟಲಿಳಿದು ನಡೆದ ಅತಿಥಿಗಳು ಮರೆಯಾದಾಗ, ಇಂದಿರೆಯ ಕಣ್ಣಂಚಿನಲ್ಲಿ ನಿಂತ ಹನಿಯನ್ನು ಸಂಜೀವರಾಯರೂ ಕಾಣಲಿಲ್ಲ.

ಮಾರನೆಯ ದಿನ ಬೆಳಿಗ್ಗೆ ಶ್ರೀಪತಿರಾಯರು ಮಗಳೊಡನೆ ಊರಿಗೆ ಹೊರಟರು. ಅನಂತ ಜೊತೆಗೆ ಬಂದರೂ, ಅವನ ಬಳಿ ಹಣವಿಲ್ಲವೆಂದು ತಿಳಿದಿದ್ದುದರಿಂದ ಮಾತನಾಡದೆ ತಾವೇ ಎರಡು, ಎರಡನೆಯ ತರಗತಿಯ ಟಿಕೀಟು ಪಡೆದರು. ಅನಂತ ಮಾವನ ಮುಖ ನೋಡಿ ನಕ್ಕ.

ಸಾಮಾನೆಲ್ಲ ಸಾಗಿಸಿ ಪ್ಲಾಟ್‌ಫಾರ್ಮಿಗೆ ಬಂದಾಗ ಭಾರತಿಯ ಹೃದಯ ಭಯದಿಂದ ಕಂಪಿಸುತ್ತಿತ್ತು. ಹಿಂದಿನ ದಿನದ ಇಂದಿರೆಯ ವರ್ತನೆಯೂ ಆಕೆಯ ಹೃದಯಕ್ಕೆ ಸಮಾಧಾನ ಕೊಟ್ಟಿರಲಿಲ್ಲ. ಗಂಡನೊಡನೆ ಏಕಾಂತದಲ್ಲಿ ಮಾತನಾಡಬೇಕೆಂದು ಪ್ರಯತ್ನಿಸಿದರೂ ಅದು ಸಾಧ್ಯವಾಗಲಿಲ್ಲ. ತಂದೆಯ ಇದಿರಿಗೆ ಮನಸ್ಸಿನ ಅಳಲನ್ನು ಹೇಳುವಂತಿರಲಿಲ್ಲ. ಈ ಸಲದ ಅಗಲಿಕೆಯ ಕಾಲದಲ್ಲಿ ಏನು ಅನಾಹುತವಾಗುವುದೋ ಎಂಬ ಶಂಕೆಯೇಕೆ ತನ್ನನ್ನು ಬಾಧಿಸುತ್ತಿದೆಯೆಂದು ಆಕೆಗೆ ತಿಳಿದಿರಲಿಲ್ಲ.

ಗಾಡಿ ಹೊರಡುವ ಹೊತ್ತು ಸಮಾಪಿಸಿದಾಗ ಶ್ರೀಪತಿರಾಯರು ನೂರು ರೂಪಾಯಿಯ ಒಂದು ನೋಟು ತೆಗೆದು ಅನಂತನಿಗೆ ಕೊಡಹೋದರು.

"ತೆಗೆದುಕೋ. ಬೇಡ ಎಂದು ಹೇಳಬಾರದು. ಆದಷ್ಟು ಬೇಗ ಕೆಲಸ ದೊರಕಿಸಿ ಕೊಳ್ಳು. ನನ್ನ ಸಹಾಯದಲ್ಲಿ ಯಾವ ವಂಚನೆಯೂ ದುರುದ್ದೇಶವೂ ಇಲ್ಲ" ಎಂದಾಗ ಅನಂತ ಮಾವನ ಮಾತನ್ನು ಅರ್ಥಕ್ಕೇ ತಡೆಯಲೆಂದು, "ಮಾವಯ್ಯಾ" ಎಂದ. ಆ ಹಣವನ್ನು ನಿರಾಕರಿಸಲು ಅವನು ಸಮರ್ಥ ನಾಗಲಿಲ್ಲ.

ಗಾಡಿ ಹೊರಡಲಿದೆಯೆಂದಾಗ ಭಾರತಿ ಕುಳಿತಲ್ಲಿಂದ ಇಳಿದು ಬಂದಳು. ಪ್ಲಾಟ್‌ಫಾರ್ಮಿನ ಜನಸ್ತೋಮವನ್ನೂ ಗಮನಿಸದೆ ಕಂಡಿಯ ಬಳಿ ನಿಂತಿದ್ದ ಗಂಡನ ಕಾಲು ಮುಟ್ಟಿ ಬಗ್ಗಿ ನಮಸ್ಕರಿಸಿದಳು. ಎದ್ದು ಮರಳಿ ತನ್ನ ಜಾಗಕ್ಕೆ ಹೋಗುವಾಗ ಆಕೆಯ ಕಣ್ಣು ತುಂಬಿ ಬಂದಿದ್ದವು.

"ಗಂಡು ಮಗುವನ್ನು ಹಿಡಿದುಕೊಂಡು ಬರಬೇಕು, ಭಾರತೀ. ಕರೆಯಲು ನಾನೇ ಬರುತ್ತೇನೆ" ಎಂದು ಅನಂತ ಹೇಳಿದ. ಹೃದಯ ತುಂಬಿ ಬಂದು ಹೇಳಿದ ಮಾತು. ಆದರೆ ದನಿ ಅಪ್ರಾಮಾಣಿಕವಾಗಿತ್ತು. ಮನಸ್ಸು,

'ಎಂಥ ಕೃತಘ್ನ! ನೀನು ದ್ರೋಹಿ' ಎನ್ನುತ್ತಿತ್ತು.

೩೨

ಗಾಡಿ ಭಾರತಿಯನ್ನು ಮರಳಿ ಊರಿಗೆ ಕೊಂಡೊಯ್ದಿತು. ಕರೆದು ಕೊಂಡು ಬಂದ ಮಾವಯ್ಯ ಮಗಳನ್ನು ವಾಪಸು ಕರೆದುಕೊಂಡುಹೋದರು. ಆದರೆ ಈ ಹತ್ತು ತಿಂಗಳ ಅವಧಿಯಲ್ಲಿ ಏನೆಲ್ಲ ಉತ್ಪಾತ ನಡೆದಿದೆ? ಎಂದು ಚಿಂತಿಸುತ್ತ ಅನಂತ ಬೋರಿಬಂದರ ನಿಲ್ದಾಣ ಬಿಟ್ಟು ಪ್ರೆಸ್ಸಿನ ದಾರಿ ಹಿಡಿದ.

ಉದ್ವೇಗದ ಒಂದು ನಿಮಿಷದಲ್ಲಿ, ಅಂಜಿಯವನು ತಂದ ಮಾವನ ಸಹಾಯವನ್ನು ನಿರಾಕರಿಸಿದ್ದ. ಆದರೆ ಪ್ರತ್ಯಕ್ಷವಾಗಿ ಮಾವ ಸಹಾಯ ಮಾಡಿದಾಗ, 'ಒಲ್ಲೆ' ಎನ್ನುವುದು ಅನಂತನಿಗೆ ಸಾಧ್ಯವಾಗಲಿಲ್ಲ.

ಇನ್ನೂರು ರೂಪಾಯಿಗಳ ಕಿರುಕುಳ ಸಾಲ ಹಾಗೇ ನಿಂತಿದೆ. ಸಾಧ್ಯ ವಾದಷ್ಟು ತೀರಿಸುತ್ತೇನೆ; ಏನಾದರೂ ಉದ್ಯೋಗ ದೊರಕಿಸಿಕೊಳ್ಳುವ ತನಕ ದಿನ ದೂಡುತ್ತೇನೆ ಎಂದು ಯೋಚಿಸಿಕೊಂಡು ಅನಂತ ಪ್ರೆಸ್ಸಿನ ದಾರಿ ಹಿಡಿದ.

ಯಾವಾಗಲೂ ಆ ಹೊತ್ತಿನಲ್ಲಿ ಪ್ರೆಸ್ಸಿನಲ್ಲಿ ಕಾಣಬಹುದಾಗಿದ್ದ ಸೋಮ ಯಾಜಿಗಳು ಇಂದು ಸಿಗಲಿಲ್ಲ. ಪ್ರೆಸ್ಸಿನ ಕೆಲಸಗಾರರು ಹಾಯಾಗಿ ಕುಳಿತಿದ್ದರು.

"ಏನು, ಕೆಲಸವಿಲ್ಲವೆ?" ಎಂದು ಅನಂತ ಕೇಳಿದಾಗ ಕುತ್ಸಿ
ನಗೆಯೊಂದು ಬಂತು, ಒಬ್ಬ ಕಂಪೋಸಿಟರ್‌ನಿಂದ.

"ಕೆಲಸವಿದೆ, ಕಾಗದವಿಲ್ಲ."

"ಎಂದರೆ?"

"ನಾಲ್ಕು ಪುಟ ಕಟ್ಟಿ ತಯಾರಾಗಿ ನಿಂತಿವೆ. 'ಮೆಶಿನ್'ನ ಮೇಲ
ಹಾಕುವ ಎಂದರೆ, ಕಾಗದವಿಲ್ಲ."

"ಕಾಗದವಿಲ್ಲ? ಸೋಮಯಾಜಿಗಳು ತಂದು ಹಾಕಲಿಲ್ಲವೆ?"

"ತಂದು ಹಾಕಿದ್ದು ಖರ್ಚಾಗಿ ಹೋಗಿದೆ. ಬೇರೆ ತಂದಿಲ್ಲವೆಂದೇ ಕೆಲಸ
ನಿಂತಿರುವುದು."

"ಬೇರೆ ಯಾವುದಾದರೂ ಪುಟ 'ಕಂಪೋಸ್' ಮಾಡಬಾರದೆ?".

"ಕಾಗದ ತರಲಿಕ್ಕೇ ಗತಿಯಿಲ್ಲ. ಬೇರೆ 'ಟೈಪ್ಸ್' ತಂದು ಕೊಡುವಿ
ರೇನು?"

ಯಾವ ವರ್ಗದ ಹಿತವನ್ನು ಬಯಸಿ, ಹೊಸದೊಂದು ಸಮಾಜವ್ಯವಸ್ಥೆ
ಗಾಗಿ ಮಾಡುತ್ತಿದ್ದ ಹೋರಾಟಕ್ಕೆ ಸಂಬಂಧಿಸಿದ ಪತ್ರಿಕೆಗಾಗಿ ದುಡಿಯುತ್ತಿದ್ದ
ವೆಯೋ, ಅದೇ ವರ್ಗದ ಕೆಲಸಗಾರರು ಈ ರೀತಿ ಮಾತನಾಡಬಹುದೇ ಎಂದು
ಅನಂತನಿಗೆ ತೋರಿತು. 'ಕಹಳೆ'ಯ ಆರ್ಥಿಕ ಸ್ಥಿತಿಯನ್ನು ಕಂಡು ಮರುಗ
ಬೇಕಾಗಿದ್ದ ಜನಕ್ಕೆ ಈ ರೀತಿಯ ತಾತ್ಸಾರಭಾವ ಯಾಕೆ ಬಂತು?

ಆದರೆ ಹೆಚ್ಚು ಯೋಚಿಸಲು ಬಿಡುವಿದ್ದಿಲ್ಲ. ಕೆಲಸ ನಿಂತರೆ ಮುಂದಿನ
ವಾರದ ಸಂಚಿಕೆಯು ಹೊರಬರಲು ತಡವಾಗುತ್ತದೆಂದು ತಿಳಿದಿದ್ದ ಅನಂತ
ಸೋಮಯಾಜಿಗಳನ್ನು ಹುಡುಕಿಕೊಂಡು ಹೊರಟ.

ಸೋಮಯಾಜಿಗಳು ದಾರಿಯಲ್ಲೆ ಸಿಕ್ಕಿದರು.

"ಕಾಗದವಿಲ್ಲವಂತೆ?"

"ಹೌದು. ಅದಕ್ಕಾಗಿಯೇ ಹೊರಟಿದ್ದೇನೆ."

"ಎಲ್ಲಿಗೆ?"

"ಎಲ್ಲಿಯಾದರೂ ಸಾಲ ಸಿಗುವುದೇ ನೋಡಲು."

"ಯಾಕೆ?"

"ಶಂಕರ 'ಲೋಕಲ್ ಸೇಲ್ಸ್'ನ ಹಣ ತಂದು ಕೊಡುತ್ತೇನೆಂದ
ಹೇಳಿದ್ದ. ಅವನಿಗೆ ಸಾಧ್ಯವಾಗಲಿಲ್ಲ. ನಮಗೆ ಸಾಲವಾಗಿ ಕಾಗದ ಕೊ

ವೆುಹ ಕಪಾಡಿಯಾ ಮಾತ್ರ. ಅವನ ಬಾಕಿ ಇನ್ನೂರಕ್ಕೆ ಏರಿಕ್ಕಿದೆ. ಸ್ವಲ್ಪವಾದರೂ ಹಣ ಕೊಡದಿದ್ದರೆ ಕಾಗದ ಕೊಡುವುದಿಲ್ಲ ಎಂದು ಅವನೂ ನಿಷ್ಠುರವಾಗಿಯೇ ಹೇಳಿದ್ದಾನೆ. ಹೀಗಾಗಿ ಪುನಃ ಗಡಿಬಿಡಿ, ಅನಂತಾ."

"ಪುನಃ ತಲಪಾಡಿಯವರಲ್ಲಿಗೆ ಹೊರಟಿರೇನು?"

"ಛೆ! ಛೆ! ಅದು ಹೇಗೆ ಸಾಧ್ಯ? ಮೊನ್ನೆಯಷ್ಟೆ ಅವರಿಂದ ಸಾಲ ಪಡೆದದ್ದು."

ಅನಂತ ಕಿಸೆಗೆ ಕೈಹಾಕಿ ಮಾವ ಕೊಟ್ಟಿದ್ದ ನೂರು ರೂಪಾಯಿಗಳ ನೋಟು ಹೊರ ತೆಗೆದ. "ಇದನ್ನು ಕೊಟ್ಟು ಕಾಗದ ತರಿಸಿ ಹಾಕಿ" ಎಂದ.

"ಎಲ್ಲಿಂದ ಬಂತು?" ಎಂದು ಆಶ್ಚರ್ಯದಿಂದ ಸೋಮಯಾಜಿಗಳು ಕೇಳಿದರು.

"ನನ್ನ ಮಾವ ಬಂದಿದ್ದರು. ನನ್ನ ಹೆಂಡತಿಯನ್ನು ಅವರ ಜೊತೆಗೆ ಊರಿಗೆ ಕಳಿಸಿದೆ. ಅವರು ಹೋಗುವಾಗ ಈ ಮಗುವಿಗೆ ಆಟದ ಸಾಮಾನಿಗೆಂದು ಕೊಟ್ಟ ಹಣ."

ಸೋಮಯಾಜಿಗಳು ಮರುಮಾತನಾಡದೆ ಅನಂತನ ಹಣವನ್ನು ಸ್ವೀಕರಿಸಿದರು. ಅವನ ಮಾತಿನ ಹಿಂದಿದ್ದ ಕೃತ್ರಿಮ ಹಾಸ್ಯದಲ್ಲಿ ವೇದನೆಯ ಅಂಶ ಎಷ್ಟೆಂದು ಅವರಿಗೆ ತಿಳಿದಿತ್ತು. ಆದರೆ ಮಾತನಾಡಲಿಲ್ಲ.

"ಕಾಗದ ತರಿಸಿ ಹಾಕಿ ನೀವು ರಾಜೀವನನ್ನು ನೋಡಲು ಬರುವಿರೇನು? ನಾನು ಹೊರಟೆ."

"ನಾನೂ ಬರುತ್ತೇನೆ. ನಿನ್ನೆ ಹೋಗಲು ಪ್ರಯತ್ನಿಸಿದೆ. ಸಾಧ್ಯವಾಗಲಿಲ್ಲ—ಈ ಕಾಗದದ ಗಲಾಟೆ" ಎಂದು ಸೋಮಯಾಜಿಗಳು ಹೇಳಿದರು.

"ನನಗೂ ಸಾಧ್ಯವಾಗಲಿಲ್ಲ" ಎಂದು ಅನಂತ ದನಿಗೂಡಿಸಿದ.

ಇಬ್ಬರೂ ಪ್ರೆಸ್ಸಿಗೆ ಕಾಗದ ತಲಪಿಸಿ, ಅಂಧೇರಿ ಸೇರುವಾಗ ಘಂಟೆ ಹತ್ತಾಗಿತ್ತು.

ಅನಂತ, ಸೋಮಯಾಜಿಗಳನ್ನು ಕಂಡು ರಾಜೀವನ ತಂದೆಗೆ ಜೀವ ಬಂದಂತಾಯಿತು. ಸೋಮಯಾಜಿಗಳ ಪರಿಚಯ ಈ ಮೊದಲೇ ಇದ್ದಿತ್ತು. ಹಿಂದಿನ ದಿನ ಅನಂತ ಬಾರದಿದ್ದುದರಿಂದಲೇ ಕಂಗೆಟ್ಟಿದ್ದ ಅವರು ಈ ದಿನವೂ ಇಷ್ಟು ಹೊತ್ತಾದರೂ ಯಾರೂ ಬರಲಿಲ್ಲವೆಂದು ಕಾದು ಹೆದರಿದ್ದರು.

"ಯಾಕೆ? ಏನಾಯಿತು?" ಅವರ ಕಳವಳ ತುಂಬಿದ ಮುಖ ನೋಡಿ ಅನಂತ ಕೇಳಿದ.

"ಶನಿವಾರ ಸಂಜೆಯಿಂದ ಮಾತೇ ಇಲ್ಲ. ಜ್ವರ ಒಂದೇ ಸಮನೆ ಕುದಿಯುತ್ತಿದೆ. ಇವೊತ್ತು ಬೆಳಿಗ್ಗೆ ಪುನಃ ಬಡಬಡಿಸತೊಡಗಿದ. ಕಣ್ಣು ಕೂಡ ತೆರೆಯುವುದಿಲ್ಲ."

ಅನಂತ ರಾಜೀವನ ಬಳಿ ಸರಿದ. ನಾಲ್ಕಾರು ದಿನಗಳ ಜ್ವರ ಮಾಡಿದ ವಿಪರೀತ ಪರಿಣಾಮವನ್ನು ಚೆನ್ನಾಗಿ ಗುರುತಿಸುವುದು ಸಾಧ್ಯವಿತ್ತು. ರಾಜೀವ ಗುರುತು ಸಿಗದಷ್ಟು ಬಸಲಿದ್ದ. ತೆರೆಯುದ ಕಣ್ಣು, ಜ್ವರದ ಅಮಲು ಸೃಷ್ಟಿಸುವ ಭ್ರಾಂತಿಯ ಕಲ್ಪನೆ, ಅಲುಗಿಸುವ ತುಟಿ, ದೇಹದಾದ್ಯಂತ ವ್ಯಾಪಿಸಿರುವ ಚಡಪಡಿಕೆ, ಕ್ಷಣ ಬಿಡದೆ ಅತ್ತಿತ್ತ ಹೊರಳಿಸುವ ತಲೆ. ರಾಜೀವ ನೋವಿನಿಂದ ನರಳುತ್ತಿದ್ದ.

ಹತ್ತಿರ ಬಂದ ಸೋಮಯಾಜಿಗಳು ರಾಜೀವನ ಹಣೆಯ ಮೇಲೆ ಕೈ ಇರಿಸಿದಾಗ ಆತ ಕಣ್ಣು ತೆರೆಯಲು ಯತ್ನಿಸಿದ. ಬಹಳ ಕಷ್ಟದಿಂದ ಪರಿಚಯವಾಗುತ್ತಿತ್ತು.

"ನೀವು ?" ಎನ್ನುವಂತೆ ತುಟಿ ಅಲುಗುತ್ತಿದ್ದುವು.

"ಮಾತನಾಡಬೇಡ, ರಾಜೂ" ಎಂದ ಸೋಮಯಾಜಿಗಳ ದನಿಯಲ್ಲಿ ಮಮತೆಯ ಮಹಾಪೂರವಿತ್ತು.

"ಹೊಟ್ಟೆನೋವು" ಎಂದು, ಮೆಲ್ಲಗೆ ಕ್ಷೀಣಸ್ವರದಿಂದ ರಾಜೀವ ಹೇಳಿದ. ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಪಾಠ ಹೇಳುವಾಗಲೂ, ಹೊಸ ಭವಿತವ್ಯದ ಭರವಸೆ ಕೊಡುವಂತೆ ಎತ್ತಿಯೇ ಇರುತ್ತಿದ್ದ ರಾಜೀವನ ಕೈ, ಇಂದು ನೋವು ತುಂಬಿದ ಹೊಟ್ಟೆಯನ್ನು ಮುಟ್ಟಿ ತೋರಿಸಲು, ಮಲಗಿದಲ್ಲಿಂದ ತುಸು ಮೇಲೇರಲು ಅಶಕ್ತವಾಗಿದ್ದಿತು.

"ಮಾತನಾಡಬೇಡ. ಎಲ್ಲ ಸರಿಯಾಗುತ್ತದೆ" ಎಂದಿಷ್ಟೇ ಹೇಳಿ ಸೋಮಯಾಜಿಗಳು ಆ ಕೋಣೆಯಿಂದ ಹೊರಗೆ ಬಂದರು ಜೊತೆಗೆ ಬಂದ ಅನಂತನಿಗೂ ತಿಳಿದಿತ್ತು : 'ಇದು ಸನ್ನಿಪಾತ ಜ್ವರ' ಎಂದು.

"ಆಸ್ಪತ್ರೆಗೆ ಸಾಗಿಸೋಣವೆ ?" ಅನಂತ ಕೇಳಿದ.

"ಐಸೊಲೇಶನ್ ? ಬೇರೆ ಯಾವ ಆಸ್ಪತ್ರೆಯಲ್ಲಿ ನಮಗೆ ಸ್ಥಳ ದೊರಕೀತು. ಇನ್ನು ಅಂಥ ಗುರುತು, ಪರಿಚಯ, ಸಲಿಗೆಗಳಿರುವ ಡಾಕ್ಟರರ ನೆರವಿದ್ದರೆ ಎಲ್ಲಿಗಾದರೂ ಸಾಗಿಸಬಹುದು. ನಮಗೆಲ್ಲಿ, ಆ ಭಾಗ್ಯ ?"

"ಯಾವುದಕ್ಕೂ ಮೊದಲು ಔಷಧಿ ಕೊಟ್ಟ ಡಾಕ್ಟರರನ್ನು ಕರೆತರೋಣ" ಎಂದು ಅನಂತ ಹೇಳಿದ.

ಮತ್ತೊಂದು ಘಂಟೆ ಕಳೆದಮೇಲೆ ಆ ಡಾಕ್ಟರರ ಆಗಮನವಾಯಿತು. ಅವರು ಪರೀಕ್ಷೆಯ ವಿಧಿ ಮುಗಿಸಿ ಅನಂತನ ಮುಖ ನೋಡಿದರು.

ಅನಂತ, ಸೋಮಯಾಜಿಗಳು ಹೊರಗೆ ಬಂದರು. ಅವರನ್ನನುಸರಿಸಿ ಬಂದ ಡಾಕ್ಟರರು,

"ಎಂಟೆರಿಕ್" ಎಂದರು.

"ಹಾಗಾದರೆ ?" ಎಂದ ಅನಂತ.

"ಟೈಫೈಡ್ ರೋಗಿಯನ್ನು ಆ ಹಗ್ಗದ ಮಂಚದಲ್ಲಿ ಮಲಗಿಸುವುದೆ? ಬರೇ ನೆಲದ ಮೇಲಾದರೂ ಮಲಗಿಸಬಹುದಿತ್ತಲ್ಲ. ಮೈ ಒಂದಿಷ್ಟು ಅಲುಗಬಾರದು. ಅದೂ ಈ 'ಡರ್ಟಿ ಹೋಲ್.' ಯಾವುದಾದರೂ ನರ್ಸಿಂಗ್ ಹೋಮಿಗೆ ಸಾಗಿಸಿ."

ಈ ವೈದ್ಯರಿಗೆ ಪಿತ್ಥದ ಉಪದ್ರವವಿದೆಯೋ ಎಂದು ಅನಂತ ಭಾವಿಸಿದ.

"ನೀವು ಟೈಫೈಡ್ ಎಂದು ಹೇಳಿರಲಿಲ್ಲ. ಇನ್‌ಫ್ಲುಯೆಂಜಾ ಎಂದು ಹೇಳಿದ್ದಿರಿ" ಎಂದುತ್ತರಿಸಿದ.

"ನೀವು ಹೇಳಿದ ರೋಗಲಕ್ಷಣದಿಂದ ಮತ್ತೇನನ್ನು ಹೇಳಬೇಕಿತ್ತು ?" ಸಿಟ್ಟೇರುತ್ತಿದ್ದಂತೆಯೇ ಡಾಕ್ಟರರು ಒದರಿಕೊಂಡರು.

"ಸ್ವಲ್ಪ ಬುದ್ಧಿ ಸರಿಯಾಗಿದೆಯೋ ಎಂದು ನೋಡಿಕೊಂಡು ಮಾತನಾಡಬೇಕು. ನಿಮ್ಮ ಈ 'ಡರ್ಟಿ ಹೋಲ್'ನಲ್ಲಿರುವವರು ನರ್ಸಿಂಗ್ ಹೋಮಿಗೆ ಹೋಗುವಷ್ಟು ಶಕ್ತರಲ್ಲವೆಂಬುದನ್ನು ನಿಮಗೆ ಯಾರೂ ಕಲಿಸಿಲ್ಲವೇನೋ ?"

"ಅನಂತಾ ?" ಎಂದು ಸೋಮಯಾಜಿಗಳು ಅನಂತನನ್ನು ಗದರಿಸಿದರು. ಸಿಟ್ಟೇರುತ್ತಿದ್ದ ಡಾಕ್ಟರರು,

"ಡಿಸ್ಪೆನ್ಸರಿಗೆ ಬಂದು ನನ್ನ ಲೆಕ್ಕಾಚಾರ ಮುಗಿಸಿ. ನಿಮಗೆ ನನ್ನ ಮೇಲೆ ಅಪನಂಬಿಕೆಯಿದೆಯಾದರೆ, ಆರ್ಥರ್ ರೋಡಿನ 'ಐಸೊಲೇಶನ್ ಹಾಸ್ಪಿಟಲ್' ಇದೆಯಲ್ಲ" ಎಂದರು.

ಅನಂತ ನಿರುತ್ತರನಾದ.

ಡಾಕ್ಟರರು ಹೊರಟುಹೋದಮೇಲೆ ಅನಂತ ಮುಂದೇನು ಮಾಡುವುದೆಂದು ಸೋಮಯಾಜಿಗಳೊಡನೆ ಯೋಚಿಸಿದ. 'ಐಸೊಲೇಶನ್' ಎಂದರೆ

ಕಿಡಿಕಾರುತ್ತಿದ್ದ ರಾಜೀವನನ್ನು ಅದೇ ಆಸ್ಪತ್ರೆಗೆ ಕರೆದೊಯ್ಯಬೇಕಾದ ಪ್ರಸಂಗ ಬಂದೀತೇ? ಮತ್ತೆ ಬೇರಾವ ದಾರಿಯಿದೆ? ಯಾವ ಪ್ರತಿಷ್ಠಿತ ಡಾಕ್ಟರರ ಮುಖಾಂತರ ರಾಜೀವನನ್ನು ಯಾವುದಾದರೊಂದು ಉತ್ತಮ ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ದೊರಕುವ ಸ್ಥಾನದಲ್ಲಿರಿಸಲು ಸಾಧ್ಯ?

ಪ್ರತಿಷ್ಠಿತ ವ್ಯಕ್ತಿಗಳ ನೆನಪು ಮೂಡಿದಾಗ ಅನಂತನಿಗೆ ಶ್ರೀಮತಿ ಬಾಟ್ಲಿವಾಲಾ ಹಾಗೂ ಇಂದಿರೆಯ ನೆನಪು ಬಂತು. ತಲಪಾಡಿಯವರಿಂದ ಏನಾದರೂ ಸಹಾಯವಾಗಬಹುದೆ?

"ತಲಪಾಡಿಯವರಲ್ಲಿಗೆ ಹೋಗೋಣವೆ?" ಎಂದು ಅನಂತ ಸೋಮಯಾಜಿಗಳನ್ನು ಕೇಳಿದ. ಸೋಮಯಾಜಿಗಳು ಆಶ್ಚರ್ಯದಿಂದ ಅನಂತನ ಮುಖ ನೋಡಿದರು.

"ತಲಪಾಡಿ, ತಲಪಾಡಿ, ತಲಪಾಡಿ. ಪ್ರತಿಯೊಂದು ವಿಷಯಕ್ಕೂ ತಲಪಾಡಿಯವರ ಸಹಾಯ ಅಗತ್ಯ ಎಂದು ನಿನಗೆ ತೋರತೊಡಗಿದುದು ಯಾವಾಗಿನಿಂದ, ಅನಂತಾ?" ಎಂದು ಕೇಳಿದರು.

ಅನಂತನಿಗೆ ಆಶ್ಚರ್ಯದ ಜೊತೆಗೆ ನಾಚಿಕೆಯೂ ಆಯಿತು. ಸೋಮಯಾಜಿಗಳು ತನ್ನ ಹೃದಯಶೋಧನೆಗೆ ತೊಡಗಿದ್ದಾರೆಯೆ? ಎಂದು ಪರೀಕ್ಷಿಸುವಂತೆ ಅವರ ಮುಖವನ್ನು ನೋಡಿದ. ಆದರೆ ಅವರು ಆ ರೀತಿ ಮಾತನಾಡಿದ್ದುದು ಒಂದು ಪ್ರಾಮಾಣಿಕ ಅಭಿಪ್ರಾಯಕ್ಕೆ ತಿಳಿಹಾಸ್ಯವನ್ನು ಬೆರೆಸುವ ಉದ್ದೇಶದಿಂದ.

"ತಲಪಾಡಿಯವರಿಗೆ ಡಾಕ್ಟರ್ ವರ್ಗದಲ್ಲಿ ತುಂಬ ಸ್ನೇಹಿತರಿದ್ದಾರೆ, ಸೋಮಯಾಜಿಗಳೇ. ಹಾಗಾಗಿ ನಮ್ಮ ಕೆಲಸ ಸುಲಭವಾಗಬಹುದೆಂದು ಹೇಳಿದೆ."

ಈಗ ಸೋಮಯಾಜಿಗಳಿಗೂ ಅನಂತನ ಮಾತು ಸರಿಯೆಂದು ತೋರಿತು. "ಹೌದು, ಒಮ್ಮೆ ಹೋಗಿ ನೋಡೋಣ" ಎಂದರು.

ರಾಜೀವನನ್ನು ಆಸ್ಪತ್ರೆಗೆ ಸಾಗಿಸುವ ವಿಚಾರ ಆತನ ಮುದಿ ತಂದೆಗೆ ತಿಳಿಸಿದಾಗ ಅವರು ಹೌಹಾರಿದರು. ಅವರನ್ನು ಸಮಾಧಾನಪಡಿಸಿ, ಅದು ರೋಗಿಯ ಒಳ್ಳೆಯದಕ್ಕೆ ಎಂದು ತಿಳಿಸಲು ಸೋಮಯಾಜಿಗಳಿಗೆ ತುಂಬ ಕಷ್ಟವಾಯಿತು.

ಅಲ್ಲಿಂದ ಹೊರಟು ಅನಂತ ಸೋಮಯಾಜಿಗಳಿಬ್ಬರೂ ನೇರವಾಗಿ

ತಲಪಾಡಿಯವರ ಆಫೀಸಿಗೆ ನಡೆದರು. ಆ ಹೊತ್ತಿನಲ್ಲಿ ಅವರು ಮನೆಯಲ್ಲಿರ ಬಹುದೇ ಎಂಬ ಸಂದೇಹವಿದ್ದುದರಿಂದ ಮೊದಲು ಆಫೀಸಿಗೆ ಹೋಗೋಣ ಎಂದು ಸೂಚಿಸಿದುದು ಸೋಮಯಾಜಿಗಳೆ. ಅವರ ನಂಬಿಕೆಯಂತೆ ತಲಪಾಡಿ ಯವರು ಆಫೀಸಿನಲ್ಲೆ ಇದ್ದರು. ಆಕಸ್ಮಿಕವಾಗಿ ಆಗಮಿಸಿದ ಗೆಳೆಯರನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು. ಆದರೆ ಕಾರಣ ತಿಳಿದಮೇಲೆ ತುಂಬ ಕಳಕಳಿಯಿಂದ, "ನೀವು ಸೀದಾ ಮನೆಗೆ ಹೋಗಿ. ನನಗೆ ಎರಡು ಘಂಟೆಯ ತನಕ ಅವಸರದ ಕೆಲಸವಿದೆ. ಆದರೆ ಈ ಕೆಲಸಕ್ಕೆ ನಾನು ಬರಬೇಕಾದ ಆಗತ್ಯವೇ ಇಲ್ಲ. ಕಾರು ಕೂಡ ಮನೆಯಲ್ಲೆ ಇದೆ. ಇಂದಿರೆಗೆ ನನಗೆ ಪರಿಚಯವಿರುವ ಡಾಕ್ಟರರೆಲ್ಲರ ಪರಿಚಯವಿದೆ. ಅವಳು ಈ ಕೆಲಸ ಖಂಡಿತ ಮಾಡುತ್ತಾಳೆ" ಎಂದರು.

ಸಂಜೀವರಾಯರನ್ನು ವಂದಿಸಿ ಬೀಳ್ಕೊಟ್ಟು, ಅವರ ಮನೆಯ ಕಡೆ ತೆರಳುವಾಗ ಈ ವಿಷಮುಷ್ಣದ ಸನ್ನಿವೇಶದಲ್ಲೂ ಅನಂತ ಅತ್ಯಂತ ಸುಖಿ.

ಜೊತೆಗೇ ಬಂದ ಬಂಧುಗಳಿಬ್ಬರನ್ನು ನೋಡಿದಾಗ ತಂದೆಗಾದಷ್ಟೆ ಆಶ್ಚರ್ಯ ಇಂದಿರೆಗೂ ಆಯಿತು.

"ಏನು ಮಾಸ್ತರರೆ? ಅಪರೂಪವಾಗಿ ಬಂದಿರಿ?"

"ನಿನ್ನಿಂದ ಸ್ವಲ್ಪ ಸಹಾಯವಾಗಬೇಕಮ್ಮ. ಸಂಜೀವರಾಯರನ್ನು ನೋಡಿಬಂದೆ. ನಿನ್ನನ್ನು ಕರೆದುಕೊಂಡು ಹೋಗುವಂತೆ ಹೇಳಿದರು. ನಮ್ಮ ಹುಡುಗನೊಬ್ಬನಿಗೆ ಟೈಫೈಡ್. ಅವನನ್ನು ಯಾವುದಾದರೂ ಒಳ್ಳೆಯ ಆಸ್ಪತ್ರೆಗೆ ಸೇರಿಸಬೇಕಾಗಿದೆ. ನಾಯರ್ ಆಸ್ಪತ್ರೆಯಲ್ಲಿ ಯಾರ ಪರಿಚಯ ವಾದರೂ ಇದೆಯೆ?"

"ಯಾರದು ಹುಡುಗ?"

"ರಾಜೀವ, ಎಂದು. ನಮ್ಮ ಅನಂತನ ಬಲಗೈ. ಇಲ್ಲಿಗೆ ಯಾವಾಗಲೂ **'ಕಹಳೆ'** ತಂದುಕೊಡುತ್ತಾನಲ್ಲ, ಅವನೇ."

"ರಾಜೀವ! ನಾನೆಲ್ಲಿ ಕೇಳಿದ್ದೇನೆ, ಆ ಹೆಸರನ್ನ?"

"ನಿನ್ನ ಗಂಡನ ಬಾಯಿಂದಲೇ ಕೇಳಿದ್ದರೂ ಇರಬಹುದು. ಕೇಶವನಿಗೂ ಅವನಿಗೂ ತುಂಬ ಸ್ನೇಹವಿತ್ತು, ಒಂದಾನೊಂದು ಕಾಲದಲ್ಲಿ."

ಅನಂತ ಬೆದರಿ ಇಂದಿರೆಯ ಮುಖ ನೋಡುತ್ತಿದ್ದ. ಸೋಮಯಾಜಿ ಗಳು ಹೀಗೆ ನೇರವಾಗಿ ಇಂದಿರೆಯ ಹಳೆಯ ನೆನಹುಗಳನ್ನು ಕೆದಕಬಾರದಿತ್ತು,

ಎಂದು ಅವನಿಗನಿಸಿತು. ಆದರೆ ಇಂದಿರೆಯ ಮುಖಭಾವದಲ್ಲಿ ಗಮನಾರ್ಹ ಬದಲಾವಣೆಯೇನೂ ಆಗಲಿಲ್ಲ.

"ಓ್ಹ್ ! ಹಾಗೇನು ?" ಎಂದಿಷ್ಟೆ ಹೇಳಿದಳು. ಆಮೇಲೆ ತುಸು ತಡೆದು,

"ಟೈಫೈಡ್ ಎಂದಾದರೆ ಯಾವ ಆಸ್ಪತ್ರೆಗೆ ಸೇರಿಸುತ್ತಾರೆ ? ಯಾವುದಾದರೂ ನರ್ಸಿಂಗ್ ಹೋಮ್‌ನಲ್ಲಿಡಬಾರದೆ ?"

"ನಮ್ಮ ಸ್ಥಿತಿಗತಿ ತಿಳಿದಿದ್ದೂ ಈ ರೀತಿ ಹೇಳುವುದೇನಮ್ಮಾ ?" ಅನಂತ ನೊಂದುಕೊಂಡು ಡಾಕ್ಟರರೊಡನೆ ಮಾತನಾಡಿದಂತೆ ಇಂದಿರೆಯೊಡನೆಯೂ ಮಾತನಾಡಬಹುದೇ ಎಂದು ಹೆದರಿಕೊಂಡು ಸೋಮಯಾಜಿಗಳು ಈ ರೀತಿ ಕೇಳಿದರು. ಆದರೆ ಇಂದಿರೆ ಕೇಳಿದ ಪ್ರಶ್ನೆ ಅನುಚಿತವಾಗಿದ್ದುದಾದರೂ ಅನಂತನ ಮಟ್ಟಿಗೆ ಇಂದಿರೆ ಇಂದಿರೆಯೆ ; ಡಾಕ್ಟರು ಡಾಕ್ಟರರೆ.

"ಎಲ್ಲಿರುವುದು, ಈ ರಾಜೀವ ?"

"ಅಂಧೇರಿಯಲ್ಲಿ."

"ದಾದರಿನಲ್ಲೇ ನಮಗೆ ಪರಿಚಯದ ಡಾಕ್ಟರ್ ಖಾನೋಳ್ಕರರ ನರ್ಸಿಂಗ್ ಹೋಮ್ ಇದೆ. ಅಲ್ಲಿಗೆ ಸಾಗಿಸೋಣ. ಅನಂತರಾಯರು 'ಆಂಬುಲೆನ್ಸ್' ಹಿಡಿದುಕೊಂಡು ಅಲ್ಲಿಗೆ ಬರಲಿ ನಾವು ಕಾರಿನಲ್ಲಿ ದಾದರಿಗಾಗಿ ಅಂಧೇರಿಗೆ ಹೋಗೋಣ."

ಇಂದಿರೆಯ ವರ್ತನೆ ಸೋಮಯಾಜಿಗಳಿಗೆ ಅರ್ಥವಾಗಲಿಲ್ಲ. ಅವರು ಇನ್ನೂ ನಿಧಾನಿಸುತ್ತಿದ್ದರು.

"ನೀವು 'ಆಂಬುಲೆನ್ಸ್' ಹಿಡಿದುಕೊಂಡು ಬನ್ನಿ, ಅನಂತರಾಯರೆ. ನಾವು ಈ ಹಾದಿಯಾಗಿ ಹೋಗುತ್ತೇವೆ." ಇಂದಿರೆ ಅನಂತನನ್ನುದ್ದೇಶಿಸಿ ಹೇಳಿದಳು.

"ಆದರೆ ಅದಕ್ಕೆಲ್ಲ ಹಣವನ್ನೆಲ್ಲಿಂದ ತರುವುದು, ಇಂದಿರಾ ?"

"ಇಷ್ಟಕ್ಕೇ ಹೆದರಿಕೊಂಡದ್ದು, ಒಂದು ಜೀವ ಉಳಿಸುವ ಸಂದರ್ಭದಲ್ಲಿ ಇದು ಎಂಥ ಪ್ರಶ್ನೆ ಮಾಸ್ತರರೆ ? ಆ ಜವಾಬ್ದಾರಿ ನನಗಿರಲಿ. ಅಥವಾ ನಿಮ್ಮ ಮಗಳಂತಿರುವ ಈ ಹುಡುಗಿಯ ಹೊಣೆಗಾರಿಕೆಯ ಪ್ರಜ್ಞೆಯಲ್ಲಿ ನಿಮಗೆ ವಿಶ್ವಾಸವಿಲ್ಲವೇ ?"

ಈಗ ಸೋಮಯಾಜಿಗಳಿಗೆ ನಗು ಬಂತು. "ನೀನು ಹೋಗು, ಅನಂತಾ. ಬಾಯಿಖಳಕ್ಕೆ ಟೆಲಿಫೋನ್ ಮಾಡು. ಅಥವಾ ನೀನೇ ಹೋಗಿ ಆಂಬುಲೆನ್ಸ್ ತೆಗೆದುಕೊಂಡು ಬಾ."

ಅನಂತ "ಸರಿ" ಎಂದು ಅಲ್ಲಿಂದ ಹೊರಟ. ಅವನ ಹಿಂದೆಯೇ ಸೋಮಯಾಜಿಗಳು ಮತ್ತು ಇಂದಿರೆ ಕಾರಿನಲ್ಲಿ ಡಾಕ್ಟರ್ ಖಾನೋಲ್ಕರರ 'ನರ್ಸಿಂಗ್ ಹೋಮ್'ನ ಹಾದಿ ಹಿಡಿದರು.

ಅಂದು ಸಂಜೆ ರಾಜೀವ ದಾನರಿನ ಶುಶ್ರೂಷಾಗೃಹ ಸೇರಿದ. ದಿನಕ್ಕೆ ಹದಿನೈದು ರೂಪಾಯಿ ವೆಚ್ಚ ತಗಲುವ ಶ್ರೀಮಂತರ ಆರೋಗ್ಯಸುಧಾರಣೆಯ ಕೃಪಾಕೇಂದ್ರ. ಮನೆಯ ಬಾಗಿಲಿಗೆ ಬಂದ ಕಾರು, ಅದರಿಂದಿಳಿದು ಬಂದ ಇಂದಿರೆ, ಮತ್ತೆ 'ಆಂಬುಲೆನ್ಸ್' ಇವನ್ನೆಲ್ಲ ನೋಡಿದ ರಾಜೀವನ ತಂದೆ ತಾಯಿಗಳಿಗೆ ಭಯಕ್ಕಿಂತ ಹೆಚ್ಚು ಆಶ್ಚರ್ಯವಾಯಿತು. ಈ ಆಶ್ಚರ್ಯದ ಹಿನ್ನೆಲೆಯಲ್ಲೇ ಇಷ್ಟೆಲ್ಲ ಜನ, ಇಷ್ಟೆಲ್ಲ ವೈಭವ ಬೆಂಬಲಿಗಿರುವಾಗ ರಾಜೀವ ಸುಧಾರಿಸುತ್ತಾನೆ, ಬೇಗ ಗುಣಮುಖನಾಗುತ್ತಾನೆಂಬ ಆಸೆಯೂ ಮೊಳೆತಿತು.

'ನರ್ಸಿಂಗ್ ಹೋಮ್'ನ ವ್ಯವಸ್ಥಾಪಕರೊಡನೆ ಇಂದಿರೆ, ಅತಿ ಪರಿಚಯವಿರುವ ಬಂಧುವಿನೊಡನೆಂಬಂತೆ ಮಾತನಾಡಿದಳು. "ಏನೂ ತೊಂದರೆ ಇಲ್ಲ. ಶಕ್ತಿಮೀರಿ ಪ್ರಯತ್ನಿಸುತ್ತೇನೆ" ಎಂದು ಹೇಳಿದ ಡಾಕ್ಟರಿಗೆ, ರಾಜೀವನ ಪರೀಕ್ಷೆ ಮುಗಿಸಿದಮೇಲೆ ಮಾತ್ರ ಅದೇ ಧೈರ್ಯ ಉಳಿಯಲಿಲ್ಲ.

"ಪರ್ಫೊರೇಶನ್‌ನ ಸಂಭವ. ಸೀರಿಯಸ್ ಇದೆ. ಒಂದು ದಿನ ಪರೀಕ್ಷಿಸಿ ನೋಡೋಣ. ಈಗ ಹೊಸದೊಂದು ಔಷಧಿ ಬಂದಿದೆ—ಕ್ಲೋರೊಮೈಸೆಟಿನ್" ಎಂದಾಗ ಅನಂತನಿಗೇಕೋ ಮನಸ್ಸು ಅಳುಕಿತು.

ಪರೀಕ್ಷೆ ಒಂದಲ್ಲ ಏಳು ದಿನಗಳ ತನಕ ನಡೆಯಿತು. ಅತ್ಯಂತ ಆಸಕ್ತಿಯ ಆರೈಕೆಯಿತ್ತು. ತಜ್ಞ ವೈದ್ಯಕೀಯ ಸಹಾಯವಿತ್ತು. ಅನಂತ ಪ್ರೆಸ್ಸಿನ ಕೆಲಸಕ್ಕಾಗಿ ಎರಡು ಮೂರು ತಾಸು ವಿನಿಯೋಗಿಸುವುದನ್ನು ಬಿಟ್ಟರೆ ದಿನದ ಉಳಿದೆಲ್ಲ ಭಾಗವನ್ನು ರಾಜೀವನ ಬಳಿಯಲ್ಲಿಯೇ ಕಳೆಯುತ್ತಿದ್ದ.

ಇಂದಿರೆ ದಿನಕ್ಕೆರಡು ಬಾರಿ ಬಂದು, ಮೂರು ನಾಲ್ಕು ತಾಸು ಸಮಯ ಅನಂತನ ಜೊತೆಯಲ್ಲಿ ಕಳೆದು, ರೋಗಿಯ ದೇಹಸ್ಥಿತಿ ನೋಡಿಕೊಂಡು ಹೋಗುತ್ತಿದ್ದಳು. ಎಲ್ಲ ವೆಚ್ಚದ ಹೊಣೆಗಾರಿಕೆಯನ್ನು ಯಾವ ಸಂಕೋಚವೂ ಇಲ್ಲದೆ ವಹಿಸಿದ್ದಳು.

ಆ ತೊಳೆದ ಶುಭ್ರವಾದ ವಸ್ತ್ರಸಲಕರಣೆಗಳ ಪರಿಮಳದ, ಮದ್ದು ಮಡಿ ಬಟ್ಟೆಗಳು ಬೀರುತ್ತಿದ್ದ ಕಂಪಿನ, ನಿರ್ಮಲ ಆವರಣದಲ್ಲಿ, ರೋಗಿಯ ಸಾನ್ನಿಧ್ಯ ದಲ್ಲೂ ಅನಂತ ಆತನ ಜೀವಮಾನದಲ್ಲೇ ಮೊದಲ ಬಾರಿಗೆ ಎಂಬಷ್ಟು,

ಅತ್ಯಂತ ಸುಖಿ. ಎರಡು ಬೇರೆ ಬೇರೆ ಉದ್ದೇಶಗಳಿಂದ, ಪ್ರಿಯವಾಗಿದ್ದ ಒಂದು ಜೀವವನ್ನುಳಿಸಲು ಮಾಡುವ ಹೋರಾಟದಲ್ಲಿ ಅನಂತ ಇಂದಿರೆಯರು ಅತ್ಯಂತ ಸಮೀಪ ಬಂದಿದ್ದರು. ಮೊದಲು ಬಹುವಚನದ ಸಂಬೋಧನೆ, ಅನಂತನ ಮಟ್ಟಿಗೆ, ಏಕವಚನದ ಸಲಿಗೆಯ 'ಇಂದಿರಾ'ಗೆ ಇಳಿದಿತ್ತು. ಆದರೆ ಇಂದಿರೆಗೆ ಇದರಿಂದ ಬೇಸರವೇನೂ ಆಗಿರಲಿಲ್ಲ. ಪರಿಚಯದ ಮುಖವಾಡ ಕಳಚಿಹೋಗಿ ನೆಲೆಸಿದ ಆತ್ಮೀಯ ಬಂಧುತ್ವದಲ್ಲಿ, ವಯಸ್ಸಿನ ಹಿರಿತನ ಅನಂತನಿಗೆ ಈ ಅಧಿಕಾರ ಕೊಟ್ಟಿದೆಯೆಂದು ಆಕೆ ಸ್ವಾಭಾವಿಕವಾಗಿಯೇ ತಿಳಿದಳು.

ಆದರೆ ಏಳು ದಿನಗಳ ಹೋರಾಟವೂ ರಾಜೀವನ ಪ್ರಕೃತಿಯ ಮೇಲೆ ಪರಿಣಾಮ ಮಾಡಲಿಲ್ಲ. ಮೇಲೇರಿದ ಜ್ವರ ಕೆಳಗೆ ಇಳಿಯಲೇ ಇಲ್ಲ. ಖಾನೋಳ್ಕರರ ಹೊರತಾಗಿ ಇತರ ಪ್ರಸಿದ್ಧ ವೈದ್ಯರು ಬಂದು ಜೊತೆಗೂಡಿ ರಾಜೀವನನ್ನು ಪರೀಕ್ಷಿಸಿದರೂ ಯಾವ ಪರಿಣಾಮವೂ ಆಗಲಿಲ್ಲ. ಹೊಸ ಔಷಧಿ, ಆಪರೇಶನ್, ಆಕ್ಸಿಜನ್, ಇವು ಯಾವುವೂ ರಾಜೀವನ ಸನ್ನಿಪಾತ ವನ್ನು, ಅವನ ಕರುಳಿನ ಹುಣ್ಣನ್ನು ಗುಣಪಡಿಸಲು ಸಮರ್ಥವಾಗಲಿಲ್ಲ.

ಜ್ವರವೆಂದು ಮನೆಯಲ್ಲಿ ಮಲಗಿದಂದಿನಿಂದ ಹದಿನೆರಡನೆಯ ರಾತ್ರಿ ರಾಜೀವ ತೀರಿಕೊಂಡ.

ಕೊನೆಯ ಗಳಿಗೆಯಲ್ಲಿ ರಾಜೀವನ ತಮ್ಮ ಓಡಿ ಬಂದಿದ್ದ. ಅಳುತ್ತಿದ್ದ ಮುದಿ ತಂದೆತಾಯಿಗಳು ಬಳಿಯಲ್ಲಿ ಇದ್ದರು. ಭಯದಿಂದ ತತ್ತರಿಸಿ ಹೋಗಿ, ಬರೇ ಇಂದಿರೆಯ ಸ್ನೇಹ ಸಾಮೀಪ್ಯಗಳಿರುವುದರಿಂದ ಈ ಆಘಾತವನ್ನು ಸಹಿಸಿ ಕೊಳ್ಳಬಲ್ಲೆ ಎನ್ನುವ ಅನಂತ ಗಂಭೀರನಾಗಿಯೇ ನಿಂತಿದ್ದ. ಸೋಮಯಾಜಿಗಳ ಜೊತೆಗೆ 'ಕಹಳೆ'ಯ ಬಳಗದ ಗೆಳೆಯರಿದ್ದರು. ರಾಜೀವನ ಅಸ್ವಸ್ಥತೆ ಗಂಭೀರವಾದುದೆಂದು ತಿಳಿದೊಡನೆ ದಿನವೂ ನರ್ಸಿಂಗ್ ಹೋಮಿಗೆ ಸಾಲುಗಟ್ಟಿ ಬರುತ್ತಿದ್ದ ಶಾಲೆಯ ವಿದ್ಯಾರ್ಥಿಗಳಲ್ಲಿ ರಾಜೀವನಿಗೆ ಪ್ರಿಯರಾದ ಹಲವರು ಆತನ ಕೊನೆಯ ಗಳಿಗೆಯಲ್ಲಿ ಆತನ ಬಳಿಯಲ್ಲೆ ನಿಂತಿದ್ದರು.

ಆದರೆ ರಾಜೀವ ಎಲ್ಲರನ್ನೂ ಬಿಟ್ಟು ಹೋದ.

ಮಧ್ಯರಾತ್ರಿಗೆ, ಕೊನೆಯ ಕೊಳ್ಳಿ ಆರಿಕೊಂಡು, ರಾಜೀವನ ಶವ ಭಸ್ಮ ವಾದಮೇಲೆ, ಅನಂತ ಯಾವ ಕಡೆಗೆ ಹೊರಡುವುದೆಂದು ಭಾರವಾದ ಕಾಲು ಗಳನ್ನೆಳೆದುಕೊಂಡು ಮುಂದುವರಿಯುತ್ತಿದ್ದಾಗ, ತಂದೆಯ ಜೊತೆಗೆ ಮನೆಗೆ ಹೊರಟಿದ್ದ ಇಂದಿರೆ ಹೇಳಿದಳು :

“ನೀವು ಧೈರ್ಯಗೆಡಬಾರದು, ಅನಂತರಾಯರೆ.”

೩೩

ರಾಜೀವನ ಮರಣ ಇಂದಿರೆಯನ್ನು ಕಾಡುತ್ತಿತ್ತು.

ಒಂದು ಕಾಲದಲ್ಲಿ ತನ್ನ ಗಂಡನ ಒಡನಾಟದಲ್ಲಿ, ಆತನ ಸ್ನೇಹಕ್ಕೆ ಪಾತ್ರನಾಗಿದ್ದ ವ್ಯಕ್ತಿ. ಆ ಕಾರಣ ಆತ್ಮೀಯ ಜೀವ.

ಮೊದಲ ಬಾರಿ ರಾಜೀವನ ಮನೆ ಕಂಡಾಗ, ಆ ಮನೆಯೊಳಹೊಕ್ಕಾಗ ಇಂದಿರೆಗೆ ಕಂಡುದು ರಾಜೀವನಲ್ಲ. ಕಳೆಗುಂದಿ ಮಂಚದ ಮೇಲೆ ಮಲಗಿದ್ದ ರಾಜೀವನಲ್ಲ. ಆ ಮಂಚದ ಬದಿಯ ಗೋಡೆಯಲ್ಲಿ ನೇತಾಡುತ್ತಿದ್ದ ಹಲಗೆಯ ಮೇಲಿದ್ದ ಕಂದು ಬಣ್ಣದ ದೊಡ್ಡದೊಂದು ಗ್ರಂಥ.

ಶೆಲ್ಲಿಯ ಸಂಪೂರ್ಣ ಕೃತಿಗಳು.

ಕೇಶವನಿಗೆ ಅತ್ಯಂತ ಪ್ರಿಯನಾಗಿದ್ದ ಕವಿಸಾರ್ವಭೌಮ—ಶೆಲ್ಲಿ.

ರಾಜೀವ ಉಳಿಯಬೇಕೆಂದು ಇಂದಿರೆ ನಾಲ್ಕುನೂರು ರೂಪಾಯಿಗಳನ್ನು ನೀರಿನಂತೆ ವ್ಯಯಿಸಿದ್ದಳು. ಆದರೆ ಆತ ಉಳಿಯಲಿಲ್ಲ. ತನಗೆ ಮೊನ್ನೆ ಮೊನ್ನೆಯತನಕ ಪರಿಚಯವಿರದೆ ಉಳಿದಿದ್ದರೂ ಕೇಶವನ ನೆನಹಿನ ಇನ್ನೊಂದು ಸ್ಮಾರಕ ಅಳಿದಿದೆ.

ಮೊದಲು ಬಾಪುವಿನ ಮರಣ. ಈಗ ರಾಜೀವನ ಮರಣ. ಕಂಡರಿಯದ ವ್ಯಕ್ತಿಯಾಗಿದ್ದರೂ ಆತ್ಮೀಯನೆಂದು ಬಗೆದು ಉಳಿಸಲು ಮಾಡಿದ ಹೋರಾಟ—ಆ ಹೋರಾಟದ ವಿಫಲತೆ.

ಇದರಿಂದಾಗಿ ವ್ಯಗ್ರವಾದ ಮನಸ್ಸು.

‘ಮುಂಬಯಿ ಬಿಟ್ಟು ದೂರ ಹೋಗು’ ಎನ್ನುತ್ತಿತ್ತು ಅದು. ಆದರೆ ಎಲ್ಲಿಗೆ ಎಂದು ಇಂದಿರೆಗೆ ತಿಳಿದಿರಲಿಲ್ಲ.

ದಿಲ್ಲಿ ತಿರುಗಿ ಬಂದಳು. ಆ ನಿರ್ವಾಸಿತರ ದುಃಖದ ಘೋರಾರಣ್ಯಗಳನ್ನು ನೋಡಿಬಂದಳು—ಬಾಪುವಿನ ಅಂತಿಮಯಾತ್ರೆಯ ಕಾಲದಲ್ಲಾದರೂ ದಿಲ್ಲಿಯಲ್ಲಿ ಉಳಿಯುವುದು ಸಾಧ್ಯವಾಗಲಿಲ್ಲ ಆ ಭಾಗ್ಯ ಆಕೆಗಿರಲಿಲ್ಲ.

ಮತ್ತೆ ಪುನಃ ಮುಂಬಯಿಯದೇ ಕಾರ್ಯಕ್ಷೇತ್ರ. ಈಗ ಅದನ್ನು ಬಿಟ್ಟೋಡುವುದಾದರೂ ಎಲ್ಲಿಗೆ? ಬಿಟ್ಟೋಡುವ ಅಗತ್ಯವಾದರೂ ಏನಿದೆ?

ತಂದೆಯ ಸಾಮಿಪ್ಯವನ್ನು, ತನ್ನ ಏಕಾಂತತೆಯನ್ನು ಮರೆಸುವ ಒಂದ
ಒಂದು ಸಾಧನವನ್ನು, ಎಷ್ಟು ಕಾಲ ಬಿಟ್ಟಿರಲು ಸಾಧ್ಯ?

ಲಕ್ನೋ, ಕಲ್ಕತ್ತಾ, ಬೆಜವಾಡಾ ಎಂದು ಯಾವುದೊಂದು ವ್ಯವಸ್ಥಿ
ನಿಯಮಕ್ಕೊಳಗಾಗದೆ ಜೀವನೋಪಾಯಕ್ಕಾಗಿ ದೇಶದ ನಾನಾ ಭಾಗಗಳ
ಹರಡಿರುವ ಬಂಧುಗಳ ಮನೆಗಳಿವೆ. ಅಲ್ಲಿ ಯಾವಾಗಲೂ ಇಂದಿರೆಗೆ ಸ್ವಾಗ
ಕಾದಿದೆ.

ಆದರೆ ಇಂದಿರೆಗೆ ಮುಂಬಯಿ ಬಿಡುವುದು ಸಾಧ್ಯವಿಲ್ಲ ಎಂದೇ ಈ
ತೋರುತ್ತಿತ್ತು.

ಒಂದೆ ಮನಸ್ಸಿಗೆ ಬೇಸರವಾದಾಗ, ಕೇಶವನ ಸ್ಮೃತಿ ತನ್ನನ್ನು ಕಾ
ತೊಡಗಿದಾಗಲೆಲ್ಲ ಆಕೆ ಆ ರೀತಿ ಚಿಕ್ಕಮ್ಮ, ಚಿಕ್ಕಪ್ಪ, ಮಾವ, ಅತ್ತೆ
ಎಂದು ದೂರ ದೂರ ಹೋದುದಿದೆ. ತನ್ನ ಮನಸ್ಸಿನ ಕಳವಳ ಮುಗಿಯು
ತನಕ ಸುತ್ತಿ ಮರಳಿದುದಿದೆ.

ಆದರೆ ಈ ಸಲ ಮುಂಬಯಿ ಬಿಡಲು ಸಾಧ್ಯವಾಗುವುದಿಲ್ಲವೆಂದ
ಬಲವಾದ ನಂಬಿಕೆ ಮನಸ್ಸಿನಲ್ಲಿ ಬೇರೂರಿದೆ.

ಈ ನಂಬಿಕೆಗೆ ಕಾರಣವೇನೆಂದು ಇಂದಿರೆಗೆ ತಿಳಿದಿರಲಿಲ್ಲ.

'ಹರಿಜನ'ದ ಹಳೆಯ ಸಂಚಿಕೆಯೊಂದು ಕೈಯಲ್ಲಿತ್ತು. ಆದ
ನೋಟ ಮಾತ್ರ ಇದಿರಿನ ಗೋಡೆಯಲ್ಲಿ ತೂಗುಹಾಕಿದ್ದ ತಾಯಿಯ ತೈ
ಚಿತ್ರದೆಡೆ ಹರಿದಿತ್ತು. ಅಪರೂಪವಾಗಿ ಎಲ್ಲೋ ಸಿಕ್ಕಿದ ನಾಲ್ಕು ಮಂದಾರ
ಹೂ ತಂದುಕೊಟ್ಟಿದ್ದ ಲಕ್ಷ್ಮಣ. ಆ ಹೂಗಳು ತಾಯಿಯ ತೈಲಚಿತ್ರವನ್ನು
ಅಲಂಕರಿಸಿದ್ದವು.

ತಂದೆ "ಇಂದೂ" ಎಂದು ಕರೆದಾಗ, ಇಂದಿರೆಗೆ ಕರೆದುದೇಕೆಂದ
ತಿಳಿಯಿತು. 'ಹರಿಜನ'ವನ್ನು ಅಲ್ಲಿಯೇ ಮೇಜಿನ ಮೇಲಿರಿಸಿ ಸಂಜೀ
ರಾಯರಿದ್ದಲ್ಲಿಗೆ ನಡೆದಳು.

"ನಾನು 'ವೈಷ್ಣವ ಜನತೋ' ಹಾಡುವುದಿಲ್ಲ. ಯಾವುದಾದರ
ದಾಸರ ಹಾಡು ಹಾಡಲೆ?"

ತಂದೆಯ ಆಜ್ಞೆ ಬರುವುದಕ್ಕಿಂತ ಮೊದಲೇ ಇಂದಿರೆ ಕೊಟ್ಟ ಉತ್ತರ

"ನಿನ್ನನ್ನು ನಾನು ಹಾಡಲು ಕರೆದೆನೆ?"

ಈಗ ಮಾತ್ರ ಇಂದಿರೆ ಗಲಿಬಿಲಿಗೊಂಡಳು.

"ಅಲ್ಲವೆ? ನಾನು ಅದಕ್ಕೆಂದೇ ತಿಳಿದಿದ್ದೆ."

"ಆ ಹಾಡು ಹಾಡಲು ಅಷ್ಟೇಕೆ ಬೇಸರ?"

"ಬೇಸರವೆ? ಛೆ! ಹಾಗೇನೂ ಅಲ್ಲ. ಆ ಹಾಡು ಹಾಡಲು ಸಾಧ್ಯವಾಗುವುದಿಲ್ಲ. ಅದು ಸೃಷ್ಟಿಸುವ ಆವರಣ ನೋವಿನದು. ನನಗೀಗ ಅಳುವ ಮನಸ್ಸಿಲ್ಲ." ಇಂದಿರೆ ನಗುತ್ತಲೇ ತಂದೆಯನ್ನು ಸಮಾಧಾನಪಡಿಸಲೆತ್ನಿಸಿದಳು. ಸಂಜೀವರಾಯರಿಗೂ ಮಗಳ ಮಾತು ಕೇಳಿ ನಗು ಬಂತು.

"ಸರಿ. ನಿನ್ನಿಷ್ಟ."

"ಅದಿರಲಿ. ಕರೆದದ್ದು ಯಾಕೆ?"

"ಅನಂತರಾಯರು ನಿನ್ನೆ ಬಂದಂತಿಲ್ಲ. ಯಾಕೆ?"

ಈ ಪ್ರಶ್ನೆ ಕೇಳಿ ಇಂದಿರೆಗೆ ಆಶ್ಚರ್ಯವಾಯಿತು. ಹೌದು. ಹಿಂದಿನ ದಿನ ಬಂದಿರಲಿಲ್ಲ. ಯಾಕೆ? ಅನಂತರಾಯರು ಇಷ್ಟರ ತನಕ ಯಾವಾಗ ಬರುತ್ತಾರೆಂದು ನಿಯಮವೇನು ಇದ್ದಿರಲಿಲ್ಲ. ಈಗ ಅವರು ಬಾರದಿದ್ದರೆ, ಆ ಕೊರತೆ ಎದ್ದು ಕಾಣುವಂತಿದೆ. ಈ ಪರಿವರ್ತನೆ ಹೇಗೆ ಬಂತು?

ರಾಜೀವ ತೀರಿಕೊಂಡ ಮೇಲೆ ಅನಂತ ಒಂದು ದಿನವೂ ತಪ್ಪದೆ ತಲಪಾಡಿಯವರಲ್ಲಿಗೆ ಬರುತ್ತಿದ್ದ. ಈ ರೀತಿಯ ಬರುವಿಕೆ ಸಾಮಾನ್ಯವಾದುದೆಂದು ತಂದೆ ಮಗಳಿಬ್ಬರೂ ಭಾವಿಸುವಷ್ಟು ಇಬ್ಬರಲ್ಲಿಯೂ ಪರಿವರ್ತನೆಯಾಗಿತ್ತು. ಈ ಪರಿವರ್ತನೆ ಹೇಗೆ?

ಅನಂತನ ಕುರಿತು ಸಂಜೀವರಾಯರಿಗೆ ಈ ಮುಂಚೆಯೂ ಅಭಿಮಾನ ಇತ್ತು. ಆದರೆ ಶ್ರೀಪತಿರಾಯರನ್ನು ಮನೆಯಲ್ಲಿ ಕಂಡಮೇಲೆ, ಅವರೊಡನೆ ಒಂದು ತಾಸು ಮಾತನಾಡಿದ ಮೇಲೆ, ಈ ಆದರ ದ್ವಿಗುಣಿತವಾಗಿತ್ತು. ಮೊದಲು ಮಗಳು ಅಭಿಮಾನಪಡುತ್ತಿದ್ದ ಒಬ್ಬ ಆದರ್ಶ ಸಂಪಾದಕನೆಂದು ಅನಂತನ ಮೇಲಿಟ್ಟ ಅಭಿಮಾನ ಈಗ ಶ್ರೀಪತಿರಾಯರ ಆದರ್ಶ ಅಳಿಯ ಎಂದು ಅನಂತನ ಸ್ನೇಹ.

ಆದರೆ ಇಂದಿರೆಗೆ!

ಆಕೆಗೂ ಏನೊಂದೂ ತಿಳಿದಿರಲಿಲ್ಲ. ಅಂದು ಮುಂಜಾನೆ ಏಳುವಾಗಲೇ 'ಹಿಂದಿನ ದಿನ ಅನಂತರಾಯರು ಬಂದಿರಲಿಲ್ಲ, ಬರುವರೆಂದು ಕಾದಿದ್ದೆ; ಇಂದಾದರೂ ಬರಬಹುದೇನೋ' ಎಂಬ ಯೋಚನೆ ಉದಯಿಸಿತ್ತು. ಆ ಯೋಚನೆ ಯಾಕೆ ಬಂತು?

ಅನಂತರಾಯರು ನಿತ್ಯ ಬಂದು ಅರ್ಧ ತಾಸು, ಒಂದು ತಾಸು ಮಾತನಾಡಿಸಿ ಹೋಗುತ್ತಿದ್ದಾಗ ದೊರೆಯುತ್ತಿದ್ದ ಸಮಾಧಾನವೇ ಅವರ ಕುರಿತಾದ ಕಳಕಳಿಗೆ ಕಾರಣವೆ?

"ನನಗೇನು ಗೊತ್ತು?" ಎಂದು ಇಂದಿರೆ ತಂದೆಗೆ ಮರುಸವಾಲು ಹಾಕಿದಳು.

"ಪಾಪ! ಕೆಲಸವಿಲ್ಲ. ಮನಸ್ಸಿಗೆ ನೆಮ್ಮದಿಯಿಲ್ಲ. ಮೊದಲೇ ನೋಡುವಾಗ ಕಡ್ಡಿಯಂತಿದ್ದಾರೆ. ಅವರ ಆರೋಗ್ಯವನ್ನು ಹೇಗೆ ಕಾದುಕೊಳ್ಳುತ್ತಾರೊ?"

ತಂದೆಯ ಅನುಕಂಪ ಸ್ವಾಭಾವಿಕವಾದುದಾಗಿತ್ತು. ಆದರೆ ಇಂದಿರೆಗೆ ಮಾತ್ರ ಈ ಮಾತಿನಿಂದ ಬೇಸರವಾಯಿತು. ತನ್ನನ್ನು ತಾನು ನೋಡಿಕೊಳ್ಳುವ ಯೋಗ್ಯತೆಯಿರದ ವ್ಯಕ್ತಿ ಅನಂತರಾಯರೆ?

"ತಮ್ಮನ್ನು ತಾವೇ ನೋಡಿಕೊಳ್ಳಲಾಗದವರು, ಸಮಾಜದ ಒಳಿತಿನ ಹೊಣೆ ಹೊರುವುದು ಸಾಧ್ಯವೇನು, ಅಪ್ಪಾ? ಅವರಿಗಾಗಿ ಅಷ್ಟು ಕನಿಕರ ಅಗತ್ಯವೆಂದು ನನಗೆ ತೋರುವುದಿಲ್ಲ."

ಸಂಜೀವರಾಯರು ಮಗಳ ಮುಖ ನೋಡಿದರು. ಆ ಮುದಿ ವಯಸ್ಸಿನಲ್ಲೂ ಮುಖದಲ್ಲಿ ತುಂಟ ನಗುವೊಂದು ಮಿಂಚಿತು.

"ನೀನು ತಪ್ಪಿ ಹೆಣ್ಣಾಗಿ ಹುಟ್ಟಿದೆ, ಇಂದೂ."

ಇಂದಿರೆ ಗಟ್ಟಿಯಾಗಿ ನಕ್ಕುಬಿಟ್ಟಳು.

ಇಂದಿರೆ ದಾರಿ ಕಾಯುತ್ತಿದ್ದ ಅನಂತರಾಯರು ಮಧ್ಯಾಹ್ನ ಮೂರು ಘಂಟೆಯ ಹೊತ್ತಿಗೆ ಸರಿಯಾಗಿ ಬಂದರು. ಸಂಜೀವರಾಯರು ಮನೆಯಲ್ಲಿರಲಿಲ್ಲ.

ಬಾಗಿಲು ತೆಗೆದುದು ಅಡುಗೆಯ ಹುಡುಗ. ಹೆಜ್ಜೆಯ ಸಪ್ಪಳದಿಂದಲೇ ಅನಂತರಾಯರನ್ನು ಗುರುತಿಸುವುದು ಸಾಧ್ಯವಿದ್ದುದರಿಂದ ಓದುತ್ತಿದ್ದ ಇಂದಿರೆ ಕುಳಿತಲ್ಲಿಂದ ಏಳಲಿಲ್ಲ. ಅನಂತರಾಯರು ನೇರ ಆ ಕೋಣೆಗೆ ಬರುವರೆಂದು ಗೊತ್ತು. ಅದು ಈಗ ವಾಡಿಕೆ. ಆ ಕಾರಣ ನಿರೀಕ್ಷೆಯ ಮಾತೇ ಇರಲಿಲ್ಲ.

ಅನಂತ ಒಳಗೆ ಬಂದವನು, ತಾನಾಗಿಯೇ ಒಂದು ಕುರ್ಚಿ ಎಳೆದುಕೊಂಡು ಕುಳಿತು,

"ರಾಯರು ಹೋಗಿಯಾಯಿತೆ? ನಿನ್ನೆಯೂ ಅವರನ್ನು ನೋಡಲಾಗಲಿಲ್ಲ" ಎಂದ.

ಇಂದಿರೆ ಒಳಗೊಳಗೆ ನಗುತ್ತಿದ್ದರೂ ಅವನ್ನು ಪ್ರಕಟಿಸದೆ,

"ಏನು ಕೊಡಲಿ ?" ಎಂದು ಕೇಳಿದಳು.

"ಕಾಫಿ."

"ಲಕ್ಷ್ಮಣಾ, ಒಂದು ಲೋಟ ಕಾಫಿ."

"ನಿಮಗೆ ?"

"ನನಗೆ ಸಿಕ್ಕಾಬಟ್ಟೆ ಕಾಫಿ ಕುಡಿದು ಆರೋಗ್ಯ ಹಾಳುಮಾಡಿಕೊಳ್ಳುವ ಆಸೆಯಿಲ್ಲ."

ಅನಂತನಿಗೆ ತುಸು ಆಶ್ಚರ್ಯವಾಯಿತು. ಇಷ್ಟು ದಿನ ಬಂದಿರದ ಆರೋಗ್ಯದ ಪ್ರಶ್ನೆ ಇಂದು ಏಕೆ ಬಂತು ?

"ನನ್ನ ಆರೋಗ್ಯ ಹಾಳಾದರೂ ಚಿಂತಿಲ್ಲ ಎಂದು ನಿನ್ನ ಅಭಿಪ್ರಾಯ ವೇನೋ ?"

"ನಿಮ್ಮ ಅಭಿಪ್ರಾಯವೇ ಹಾಗಿರುವಾಗ ನಾನೇನು ಮಾಡಲಾದೀತು ?"

"ಎಂದರೆ ?"

"ನನ್ನ ತಂದೆಯವರನ್ನು ಕೇಳಿ ನೋಡಿ. ನಿಮ್ಮ ಆರೋಗ್ಯವನ್ನು ನೋಡಿಕೊಳ್ಳುವ ಶಕ್ತಿ ನಿಮಗಿಲ್ಲ. ಪಾಪ, ಎಂದು ಚಿಂತಿಸುತ್ತಿದ್ದಾರೆ."

"ಹಾಗೇನು ?"

"ಆದರೆ ನಾನು ಹೇಳಿದೆ : ಸಮಾಜದ ಹಿತದ ಬಗ್ಗೆ ಕಳಕಳಿಯಿರುವ ವರು ವೈಯಕ್ತಿಕ ಹಿತರಕ್ಷಣೆ ಮಾಡಿಕೊಳ್ಳದಷ್ಟು ಮೂರ್ಖರಲ್ಲ, ಎಂದು. ಸರಿಯೆ ?"

ಅನಂತ ನಕ್ಕ. ಇಂದಿರೆ ನಗುವಾಗ ಅವನಿಗೆ ನಗದಿರಲಾಗುತ್ತಿದ್ದಿಲ್ಲ. ಆದರೆ ಇಂದು ಆ ನಗುವಿನಲ್ಲಿ ದುಃಖ ಬೆರೆತಿತ್ತು. ತಂದೆಗೆ ತನ್ನ ಆರೋಗ್ಯದ ಕುರಿತು ಇದೆಯೆಂದು ಹೇಳಲಾಗಿರುವ ಕಳಕಳಿ ಮಗಳಿಗೆ ಇರದೆ ಹೋಯಿತೆ ?

"ಸರಿಯೋ, ತಪ್ಪೋ ?"

"ಸರಿ."

"ಹಾಗೆನ್ನಿ. ಈಗ ಹೇಳಿ, ನಿನ್ನೆ ಯಾಕೆ ಬಂದಿಲ್ಲ ?"

"ನಾನು ಬಾರದೆ ಉಳಿದಿರುವುದರಿಂದ ಏನಾದರೂ ನಷ್ಟವಾಯಿತೆ ?"

"ಅದನ್ನು ನೀವು ಹೇಳಬೇಕಾಗಿರುವುದು ಅಪ್ಪನಿಗೆ, ನನಗಲ್ಲ. ಕಾರಣ ಕೇಳಿಡಲು ಹೇಳಿದ್ದಾರೆ."

ಈಗಲೂ ಅದೇ ವೇದನೆ. ತನ್ನ ಬಾರದಿರುವಿಕೆಯಿಂದಾಗಿ ಕಳಕಳಿ ಸಂಜೀವರಾಯರಿಗೆ, ಇಂದಿರೆಗಲ್ಲ

"ಅವರಿಗೆ, ಅವರನ್ನು ಕಂಡಾಗ ಉತ್ತರ ಹೇಳುತ್ತೇನೆ. ನಿನಗೆ ನಾನು ಬಾರದಿದ್ದುದರಿಂದ ಯಾವ ಕೊರತೆಯೂ ಕಂಡಿಲ್ಲವಾದಕಾರಣ, ನನ್ನ ಉತ್ತರ ನಿನಗೆ ಅನ್ವಯಿಸುವುದಿಲ್ಲ, ಇಂದಿರಾ."

ತಾನು ಪ್ರೀತಿಸುವ ದೇವತೆಗೆ ನೋವು ಕೊಡಲು ಮನಸ್ಸು ಕೇಳುತ್ತಿರಲಿಲ್ಲವಾದರೂ ಇಂದಿರೆಯ ಅಂತರ್ಯವೆಂಥದೆಂಬುದನ್ನು ಪರೀಕ್ಷಿಸಬೇಕೆಂಬ ಆಸೆ ಅನಂತನಿಂದ ಇಂಥ ಮಾತು ಆಡಿಸಿತು.

ಅನಂತ ಒಂದು ದಿನ ಬಾರದಿದ್ದುದರಿಂದ ಅಂಥ ಪ್ರಮಾದವೇನಾದರೂ ಆಗಿದೆಯೋ ಎಂದು ಇಂದಿರೆ ತನ್ನನ್ನೇ ತಾನು ಕೇಳಿಕೊಂಡಳು. ಆದರೆ ಅದಕ್ಕೆ ಸಮರ್ಪಕ ಉತ್ತರ ಸಿಗಲಿಲ್ಲ. ಆದರೆ ಆತ ಬರಲಿಲ್ಲನೆಂದು ಮನಸ್ಸು ಮಾತ್ರ ಉದಾಸೀನವಾಗಿದ್ದುದು ನಿಜ.

"ನಮ್ಮ ತಂದೆಯವರಿಗೆ ವಯಸ್ಸಾಗಿದೆ. ಮನೆಗೆ ಹೊಂದಿಕೊಂಡ ಬಂಧುವೊಬ್ಬರು ಬಾರದಿದ್ದರೆ ಆ ಲೋಪ ದೊಡ್ಡದಾಗಿ ತೋರುತ್ತದೆ. ಆದರೆ ನನ್ನ ವಯಸ್ಸಿಗೆ ನಾನು ಆ ದೌರ್ಬಲ್ಯವನ್ನು ಆರೋಪಿಸಿಕೊಳ್ಳಲಾರೆ. ನೀವು ಬಾರದೆ ಉಳಿದುದು ಏಕೆ ಎಂದು ತಿಳಿಯುವ ಕುತೂಹಲವೂ ನನ್ನಲ್ಲಿಲ್ಲ ಎಂದು ನೀವು ತಿಳಿದಿರುವಿರಾದರೆ ಅದು ತಪ್ಪು ತಿಳಿವಳಿಕೆ."

ಈಗ ಅನಂತನಿಗೆ ಸಮಾಧಾನವಾದರೂ ಇಂದಿರೆಯ ಇದಿರಿನಲ್ಲಿ ತಾನೆಷ್ಟು ದುರ್ಬಲನಾಗುತ್ತಿದ್ದೇನೆ ಎಂದು ಪದೇ ಪದೇ ಎನಿಸುತ್ತಿತ್ತು.

"ರಾಜೀವನ ಅಕಾಲ ಮರಣದ ಕುರಿತು ಒಂದು ಸಂತಾಪ ಸೂಚಕ ಸಭೆಯಿತ್ತು, ನಿನ್ನೆ—ಅವನ ಶಾಲೆಯಲ್ಲಿ. ಒಂದು ಸಣ್ಣ ಸ್ಮಾರಕ ಸಮಿತಿಯ ನೇಮಕ, ಅವನ ಹೆಸರಿನ ಒಂದು ಸ್ಕಾಲರ್‌ಶಿಪ್ ಇಡಿಸುವುದಕ್ಕಾಗಿ, ಆಗ ಬೇಕಿತ್ತು. ಹಾಗಾಗಿ ನಿನ್ನೆ ಬಿಡುವಿರಲಿಲ್ಲ."

"ನೀವು ಮೊದಲೇ ತಿಳಿಸಿದ್ದರೆ ನಾನು ಕೂಡ ಬರುತ್ತಿದ್ದೆ."

"ಈಗ ನೀನು ಸಹಾಯ ಮಾಡಿದರೆ ನಾನೇನು ಬೇಡವೆನ್ನುವುದಿಲ್ಲ."

"ಸಭೆಗೆ ಬೇಡ. ಸಹಾಯಕ್ಕೆ ಬೇಕೇನೋ ?"

"ಸಭೆಗೆ ಬಂದಿದ್ದರೆ ನೀನು ಭಾಷಣ ಮಾಡುತ್ತಿದ್ದಿಯೇನು ? ಅವೂ ಅವನ ಪರಿಚಯ ಕೂಡ ಇರಲಿಲ್ಲ."

"ಪರಿಚಯವಿರಲಿಲ್ಲವೆ ?"

"ಇದ್ದಿತ್ತೇ ?"

"ಮಾತನಾಡಿರಲಿಲ್ಲ. ಆದರೆ ಅವನಿಗೆ ಪ್ರಿಯವಾಗಿದ್ದ ವಸ್ತು, ನನಗೂ ಪ್ರಿಯವಾದ ಒಂದು ವಸ್ತು. ಯಾವುದು ಗೊತ್ತೇ ?" ಹೀಗೆಂದವಳೇ ಇಂದಿರೆ ಎದ್ದು, ಕಪಾಟಿನೊಳಗಿದ್ದ ಕಂದು ಬಣ್ಣದ ದೊಡ್ಡದೊಂದು ಪುಸ್ತಕವನ್ನು ತೆಗೆದು ಅನಂತನ ಕೈಗೆ ಕೊಟ್ಟಳು.

ಶೆಲ್ಲಿಯ ಗೀತಗಳ ಸಂಗ್ರಹ.

ಅನಂತ ನಗಲಿಲ್ಲ. ಅವನು ರಾಜೀವ ತನ್ನೊಡನೆ ಸ್ಮೃತಿಯಿದ್ದು ಮಾತ ನಾಡಿದ ಕೊನೆಯ ಸನ್ನಿವೇಶವನ್ನು ನೆನೆಸಿಕೊಳ್ಳುತ್ತಿದ್ದ.

"ರಾಜೀವ-ಶೆಲ್ಲಿಯರ ಸಂಬಂಧ ನಿನಗೆ ಹೇಗೆ ತಿಳಿಯಿತು ?"

"ನಾನೇನು ಕಣ್ಣಿಲ್ಲದವಳೆ ? ಅವನ ತಲೆಯ ಮೇಲಿದ್ದ ಪುಸ್ತಕವನ್ನು ಗುರುತಿಸದಷ್ಟು ಅಜ್ಞಾನಿಯೇ ?"

ಈಗ ಅನಂತನಿಗೆ ನಗು ಬಂತು. ಇಂದಿರೆಯ ತರ್ಕದಂತೆ ಆತ ಕಣ್ಣಿಲ್ಲ ದವನೂ ಅಜ್ಞಾನಿಯೂ ಆಗಿದ್ದ.

ಇಷ್ಟರಲ್ಲಿ ಲಕ್ಷ್ಮಣ ಕಾಫಿ ತಯಾರು ಮಾಡಿಕೊಂಡು ಬಂದ. ಇಂಥ ಹಿತವಾದ ಸನ್ನಿವೇಶದಲ್ಲಿ, ಪ್ರಿಯವಾದ ಆವರಣದಲ್ಲಿ, ಸ್ನೇಹಿತನ ಮರಣದ ದುಃಖವನ್ನು ಹೆಚ್ಚಿಸುವ ಸಂದರ್ಭವನ್ನು ನೆನಸಿಕೊಳ್ಳುವುದು ಅನಂತನಿಗೆ ಬೇಕಿರಲಿಲ್ಲ. ಎಂತಲೇ ವಿಷಯ ಬದಲಿಸಿದ.

"ಅತಿಥಿಯಾಗಿ ಬಂದು, ಒಬ್ಬನೇ ಕಾಫಿ ಕುಡಿಯುವುದು ನನಗೆ ಸೇರುವುದಿಲ್ಲ."

"ನಿಮ್ಮನ್ನು ಅತಿಥಿಯೆಂದು ನಾವು ತಿಳಿದಿಲ್ಲ. ಮನೆಯವರೆಂದೇ ಈ ಸತ್ಕಾರ."

ಅನಂತನ ಹೃದಯವನ್ನು ಹಿಗ್ಗಿಸಿದ ಒಂದೇ ಒಂದು ಮಾತು. ಆದರೆ 'ನಾನು' ಎಂದು ಇಂದಿರೆ ಹೇಳಿದ್ದರೆ ?

"ಈ ರೀತಿಯ ಸತ್ಕಾರ, ಊಟ, ಉಪಚಾರ ಯಾವಾಗಲೂ ದೊರಕು ವುದೆಂದಾದರೆ ತುಂಬ ಜನ ಮನೆಯವರಾಗಿ ಬರಬಹುದು."

"ಸತ್ಕರಿಸುವ ಜೀವಕ್ಕೆ ಪಾತ್ರಾಪಾತ್ರತೆಯ ಬಗ್ಗೆ ತಿಳುವಳಿಕೆಯಿಲ್ಲದೆ ಹೋದರೆ ಮಾತ್ರ."

"ಹಾಗಾದರೆ ನಾನು ಈ ಪುರಸ್ಕಾರಕ್ಕೆ ಪಾತ್ರನೆಂದು ನಿನ್ನ ಭಾವನೆಯೆ?"

ಇಂದಿರೆ ನಗತೊಡಗಿದಳು. ಎಂಥ ಮೋಹಕತೆ ಆ ನಗುವಿನಲ್ಲಿ! ಆಕೆ ನಗುವಾಗಲೆಲ್ಲ ಅನಂತ ಅಧೀರನಾಗುತ್ತಿದ್ದ. ಆದರೆ ಜೀವ ಆ ನಗುವನ್ನು ಬಯಸುತ್ತಿತ್ತು. ಆ ನಗುಮೊಗವನ್ನು ನೋಡಿದಷ್ಟು ಹೃದಯ ಧನ್ಯತೆಯಿಂದ ಹಿಗ್ಗುತ್ತಿತ್ತು.

"ಆ ವಿಚಾರ ನನಗೆ ತಿಳಿದಿಲ್ಲ. ಆದರೆ ನಿಮಗೆ ದುಃಖವಾದರೆ ಭಾರತಿಗೆ ಉತ್ತರ ಹೇಳಬೇಕಾಗಿದೆಯೆಂದು ಮಾತ್ರ ನನಗೆ ಗೊತ್ತು."

ಪುನಃ ಭಾರತಿ!

ಅನಂತನ ಸ್ವಪ್ನದ ಸಾಮ್ರಾಜ್ಯ ಕುಸಿಯುತ್ತಿತ್ತು. ಇಂದಿರೆಯ ಹೃದಯದಲ್ಲಿ ನನಗೆ ಯಾವ ಸ್ಥಾನವೂ ಇಲ್ಲ, ಯಾವ ಸ್ಥಾನವೂ ಇಲ್ಲ ಎಂದು ಕೂಗುತ್ತಿದ್ದ ಎದೆಯಾಳದ ದನಿಗೆ ಯಾವ ಸಮಾಧಾನವಿದೆಯೆಂದು ಅನಂತನಿಗೆ ತಿಳಿಯಲಿಲ್ಲ. ತಾನು ನಿಶ್ಶಕ್ತನೆಂದು ತಿಳಿದು ಇಂದಿರೆ ಈ ರೀತಿ ಹಂಗಿಸುತ್ತಿದ್ದಾಳೆ ಎಂದು ಸಿಟ್ಟು ಉಕ್ಕಿಯುಕ್ಕಿ ಬರುತ್ತಿದ್ದುದನ್ನು ತಡೆದುಕೊಳ್ಳಲು ಅನಂತ ಪ್ರಯತ್ನಿಸಿದ. ತನ್ನ ಕೈಯ ಬೊಗಸೆಯಲ್ಲಿ ಆಕೆಯ ಎರಡೂ ಕೆನ್ನೆಗಳನ್ನು ಹಿಡಿದು 'ಇದು ಸತ್ಯವೆ? ಬರೀ ಭಾರತಿಗಾಗಿ ನನ್ನಲ್ಲಿಷ್ಟು ಅಭಿಮಾನವೆ?' ಎಂದು ಕೇಳಬೇಕೆಂದು ಮನಸ್ಸು ಬಯಸುತ್ತಿತ್ತು. ಆದರೆ ಈ ಕೋಲಾಹಲ ಒಮ್ಮಿಂದೊಮ್ಮೆಗೆ ಶಾಂತವಾಗುವಂತೆ ಇಂದಿರೆ ಒಂದು ಮಾತು ಹೇಳಿದಳು:

"ಈ ಮನೆಯ ಏಕಾಂತತೆಯನ್ನು ಹೊಡೆದೋಡಿಸಲು ನೀವು ಮಾಡಿರುವ ಸಹಾಯ ಇಷ್ಟೇ ಎಂದು ಹೇಳುವಂತಿಲ್ಲ, ಅನಂತರಾಯರೆ. ಆ ದೃಷ್ಟಿಯಿಂದ ಎಂಥ ಸತ್ಕಾರವೂ ಕಡಿಮೆಯೆ. ಇದು ನನ್ನೊಬ್ಬಳ ಅಭಿಪ್ರಾಯವಲ್ಲ. ಅಪ್ಪನಿಗೂ ಹಾಗೆಯೇ ಎನಿಸಿದೆ."

ಅನಂತ ಮೆಲ್ಲನೆ ನಕ್ಕು ಕಾಫಿಯ ತಟ್ಟೆಯನ್ನು ಕೈಗೆ ತೆಗೆದುಕೊಂಡ.

ಅನಂತ ಕಾಫಿ ಮುಗಿಸಿದಾಗ ಮಾತಿನ ವಿಷಯ ಮತ್ತೆ ಬದಲಿತು.

"ಮಾಸ್ತರರೇನು, ಅಪರೂಪವಾಗಿದ್ದಾರೆ? ಬಹಳ ದಿನಗಳಾದುವು; ಬಂದೇ ಇಲ್ಲ."

"ರಾಜೀವನ ಮರಣ ಅವರನ್ನು ಹಣ್ಣು ಮಾಡಿದೆ. ಈಗೀಗ ಮಾತನಾಡುವುದೇ ಇಲ್ಲ. ಯಾರನ್ನು ನೋಡಹೋಗುವುದೂ ಇಲ್ಲ."

"ನಿಮಗೂ ಅಷ್ಟೇ ಅಲ್ಲವೆ? ರಾಜೀವ ನಿಮ್ಮ ಬಲಗೈಯೆಂದು ಮಾಸ್ತರರು ಹೇಳುತ್ತಿದ್ದರಲ್ಲ."

"ಅದು ಹೌದು, ಇಂದಿರಾ. ಆದರೆ ಆ ದೊಡ್ಡ ನಷ್ಟವನ್ನು ಸಹಿಸುವಷ್ಟು ಶಕ್ತಿ ಕೊಡುವ ವಾತಾವರಣದ ಸಹಾಯ ದೊರಕಿದೆ. ಆ ಕಾರಣ ನಾಲ್ಕು ಭುಜ ಬಂದಷ್ಟು ಉತ್ಸಾಹವೂ ತುಂಬಿದೆ."

"ಅದೇನು ಹಾಗೆ ಹೇಳುತ್ತೀರಿ?"

"ಈ ಮನೆಯ ಸ್ನೇಹದ ವಾತಾವರಣ ನನ್ನ ಮೇಲೆ ಮಾಡಿರುವ ಪರಿಣಾಮ ಇಷ್ಟೇ ಎಂದು ಹೇಳಲಾರೆ, ಇಂದಿರಾ."

ಒಂದು ಕ್ಷಣ ಇಂದಿರೆಯ ಮನಸ್ಸು ಅಳುಕಿತು—ಅವ್ಯಕ್ತ ಭವಿಷ್ಯವನ್ನು ಭಯದಿಂದ ನೆನಸಿಕೊಂಡು ಎದೆಯಳುಕುವಂತೆ. ಆದರೆ ಅನಂತನ ಮುಖದಲ್ಲಿ ಪ್ರಾಮಾಣಿಕತೆಯಿತ್ತು."

"ಇಲ್ಲಿ ಅಷ್ಟು ಶಾಂತಿ ನಿಮಗೆ ದೊರಕಿದೆಯೆ?"

"ಇಲ್ಲ ಎಂದರೆ ನನ್ನ ಆತ್ಮಕ್ಕೆ ನಾನು ದ್ರೋಹ ಬಗೆದಂತೆ."

"ಇದಕ್ಕಿಂತಲೂ ಶಾಂತ ವಾತಾವರಣವೊಂದು ಮುಂಬಯಿಯಲ್ಲಿದೆ. ನೀವು ನೋಡಲಿಚ್ಛಿಸುವಿರೇನು?"

ಯಾವುದೋ ಒಂದು ಕುತೂಹಲ ಇಂದಿರೆಯಿಂದ ಆ ಮಾತು ಆಡಿಸಿತು. ತನ್ನ ಹೃನ್ಮಂದಿರದ ಪೂಜೆಯ ಸ್ಥಳವನ್ನು ಯಾರಿಗೂ ತೋರಿಸುವ ಇಚ್ಛೆ ಇಂದಿರೆಗಿದ್ದಿಲ್ಲ. ಆದರೆ ಅನಂತನ ಮುಖದಲ್ಲಿ ತುಂಬಿದ್ದ ದೈನ್ಯ, ಸಲಿಗೆ ಬೆಳೆಸಿದ್ದ ಆತ್ಮೀಯತೆ, ಪರಾರ್ಥಕ್ಕಾಗಿ ದುಡಿಯುವ ಈ ವ್ಯಕ್ತಿಗೆ ಶಾಂತಿಯು, ಸ್ನೇಹದ ವಾತಾವರಣ ಈ ಮನೆಯಲ್ಲೇ ದೊರಕುವುದಾದರೆ ತನಗೆ ಪ್ರಿಯವಾದ ಆ ಶಾಂತ ವಾತಾವರಣದಲ್ಲಿ ಅನಂತ ಇನ್ನಷ್ಟು ಸುಖಿಯಾಗಬಹುದು ಎಂಬೆಲ್ಲ ವಿಚಾರಗಳು ಜೊತೆ ಸೇರಿ ಇಂದಿರೆ ಆ ರೀತಿ ಮಾತನಾಡುವಂತೆ ಮಾಡಿದ್ದವು.

"ಹೌದು. ಖಂಡಿತವಾಗಿ. ಎಲ್ಲಿದೆ ಅದು?" ಅನಂತ ಉತ್ಸಾಹದ ಪ್ರತಿಮೂರ್ತಿಯಾಗಿ ಕೇಳಿದ.

"ನಮ್ಮ ಡ್ರೈವರ್ ಇವೊತ್ತು ರಜೆ ಪಡೆದು ಹೋಗಿದ್ದಾನೆ. ಅಪ್ಪ ಕೂಡ ಟ್ಯಾಕ್ಸಿಯಲ್ಲಿ ಹೋದರು. ಆ ಕಾರಣ ಕಾರು ನಾನೇ ನಡೆಸಬೇಕಾಗುತ್ತದೆ. ನೀವು ಇಳಿಸಿರುವಿರೇನು?" ಎಂದು ಇಂದಿರೆ ನಗುತ್ತಲೇ ಕೇಳಿದಳು.

ಆದರೆ ಆ ಗಳಿಗೆಯಲ್ಲಿ ಇಂದಿರೆಯ ಜೊತೆಗೆ, ಮೃತ್ಯು ಬಂದರೂ ಅದನ್ನು ಸ್ವಾಗತಿಸಲು ಅನಂತ ಸಿದ್ಧನಿದ್ದ.

ಇಂದಿರೆ ಕಾರು ನಡೆಸಿದಳು. ಅನಂತ ಬಳಿಯಲ್ಲೆ ಕುಳಿತಿದ್ದ. ಕಾರು 'ಮಲಬಾರ್ ಹಿಲ್' ಹಾದುಕೊಂಡು, ರಿಜ್ ರೋಡ್ ಅನುಸರಿಸಿ ಹೋಗಿ, ತೂಗಾಡುವ ತೋಟಗಳ ಸಮೀಪ ಇಳಿದು, 'ಕೆಂಪ್ಸ್ ಕಾರ್ನರ್' ಹಾದು, ಅರಬ್ಬೀ ಸಮುದ್ರದ ದಂಡೆಗುಂಟ ಹಾದುಹೋಗಿ ನಿಂತಿತು. ದೂರದಲ್ಲಿ ರಾಜ ಮಹಾರಾಜರೆನಿಸಿಕೊಂಡ ಸಿರಿವಂತರ ಅರಮನೆಗಳು. ನಿರ್ಜನ ಪ್ರದೇಶ. ಹೆಚ್ಚು ವಾಹನಸಂಚಾರವಿರದ 'ನೇಪಿಯನ್ ಸೀ' ರಸ್ತೆ.

ಇಂದಿರೆ ಕಾರು ನಿಲ್ಲಿಸಿ, ಬೀಗ ಹಾಕಿಕೊಂಡು 'ಬನ್ನಿ' ಎಂದವಳು, ಆ ಬಂಡೆಗಳನ್ನೆಲ್ಲ ದಾಟಿಕೊಂಡು, ಭವ್ಯವಾದ ಅರಬೀ ಸಮುದ್ರದ ಬದಿಯ ಒಂದು ಸಣ್ಣ ಬಂಡೆಯ ಬಳಿಗೆ ಅನಂತನನ್ನು ಕರೆದೊಯ್ದು ಹೇಳಿದಳು:

"ಇಲ್ಲಿ ಮಾತನಾಡದೆ ಕುಳಿತುಕೊಳ್ಳಿ" ಎಂದು.

ಅನಂತನಿಗೂ ಮಾತು ಬೇಕಿರಲಿಲ್ಲ.

ತನ್ನ ಎರಡೂ ಕೈಗಳನ್ನು ತೊಡೆಗಳ ಮೇಲಿರಿಸಿ ಗಲ್ಲವನ್ನು ಆಧರಿಸಿ ಹಿಡಿದುಕೊಂಡು ಇಂದಿರೆ ಸಮುದ್ರವನ್ನೇ ನೋಡುತ್ತಿದ್ದಳು.

ಈಗ ನೆನಹಿನದೇ ಸ್ವಚ್ಛಂದ ಕಾರ್ಯಕ್ಷೇತ್ರ. ಸಣ್ಣ ದೊಡ್ಡ ಅಲೆಗಳ ತುಂಬೆಲ್ಲ ಕೇಶವನೆ. ಅವನ ನಗುವೆ. ಅವನ ಮಾತೆ.

ಅನಂತ ಸಮುದ್ರವನ್ನು ನೋಡುವುದರ ಜೊತೆಗೆ ಹೃದಯದ ಹಸಿವೆಲ್ಲ ಹಿಂಗುವಂತೆ ಇಂದಿರೆಯನ್ನು ನೋಡುತ್ತಿದ್ದ. ಆತನಿಗೂ ಮಾತು ಬೇಕಿರಲಿಲ್ಲ.

ಅರ್ಧ ತಾಸು ಹಾಗೆಯೇ ಮೌನವಾಗಿ ಕುಳಿತಿದ್ದ ಇಂದಿರೆ ಎದ್ದು, "ಇನ್ನು ಹೋಗೋಣ" ಎಂದು ಮತ್ತೆ ಹಿಂದೆ ನೋಡದೇನೇ ಕಾರಿನತ್ತ ನಡೆದಳು. ಅನಂತ ಅವಳನ್ನನುಸರಿಸಿದ.

ತಂದೆಯನ್ನು ಮನೆಗೆ ಕರೆದುತರಲೆಂದು ಹೋಗುವಾಕೆ ಅನಂತನನ್ನು ಬೋರಿಬಂದರದ ನಿಲ್ದಾಣದ ಸಮೀಪ ಕಾರಿನಿಂದಿಳಿಸಿದಳು. ಅನಂತ ಸ್ವಪ್ನ ಸಾಮ್ರಾಜ್ಯದಿಂದ ನಿತ್ಯದ ನಿವಾಸಕ್ಕೆ ಹೊರಟ.

ಎದೆಯೋ, ಹುಲ್ಲಿಗಿಂತ ಹಗುರ.

೩೪

ಕಡಲ ತಡಿಯಲ್ಲಿ ಹುಟ್ಟಿ ಬೆಳೆದ ಅನಂತನಿಗೆ ಅರಬೀ ಸಮುದ್ರದ ಭವ್ಯತೆ ಅನುಭವಕ್ಕೆ ಬಂದುದು ಮುಂಬಯಿಯಂಥ ಶಹರದಲ್ಲಿ; ಇಂದಿರೆಯ ಸಾನ್ನಿಧ್ಯದಲ್ಲಿ. ಪ್ರಣಯಿನಿಯ ಸಾಮ್ರಾಜ್ಯಸುಖ ಪ್ರಕೃತಿಯ ಸೊಬಗನು ಉತ್ಪ್ರೇಕ್ಷಿಸುತ್ತಿತ್ತು. ಆಗ ಅನಂತ ಸುಖಿ.

'ನೇಪಿಯನ್ ಸೀ' ರಸ್ತೆಯ ಬಳಿ, ಸಮುದ್ರದ ತಡಿಯಲ್ಲೆ, ಇಂದಿರೆಯ ಪ್ರೀತಿಯ ಪುಟ್ಟ ಬಂಡೆ. ದಿಗಂತದಂಚಿನಲ್ಲಿ ಏನಡಗಿದೆಯೋ ಎಂದು ಶೋಧಿಸುವವರಂತೆ ನೆಟ್ಟನೋಟದಿಂದ ಮುಂದೆ ನೋಡುವ ಇಂದಿರೆ. ತಾಸುಗಟ್ಟಲೆಯ ಮೌನವೂ ಆಗ ಆಕೆಗೆ ಪ್ರಿಯ. ಇಂದಿರೆಗೆ ಪ್ರಿಯವಾದುದೆಂದು ಅನಂತನಿಗೆ ಆ ಮೌನದ ಕುರಿತು ಸಹನೆ.

'ತುಂಬ ಬೇಸರವಾಗಿದೆಯೆ? ಹೋಗೋಣ, ಬನ್ನಿ' ಎಂದು ಇಂದಿರೆ ಹೇಳಿವರೆ ಆಕೆ ಹೊರಡುವುದೆಲ್ಲಿಗೆಂದು ಅನಂತನಿಗೆ ಗೊತ್ತು. ಡ್ರೈವರ್ ಇಲ್ಲದಿದ್ದರೆ ತಾನೇ ಕಾರು ನಡೆಸುತ್ತಿದ್ದಳು. 'ಕಾರೂ ಇಲ್ಲ, ಡ್ರೈವರ್ ಕೂಡ ಇಲ್ಲ' ಎಂದಾದರೆ, ಕಾಲುನಡಿಗೆಯಲ್ಲೆ ಇಬ್ಬರೂ 'ಮಲಬಾರ್ ಹಿಲ್'ನತ್ತ ಹೋದುದೂ ಇದೆ.

ಇಂದಿರೆಗೆ ಅಷ್ಟು ಪ್ರಿಯವಾಗಿದ್ದ ತಾಣಕ್ಕೆ ತನ್ನನ್ನು ಕರೆದೊಯ್ಯುತ್ತಿರುವುದರ ಔಚಿತ್ಯದ ಕುರಿತು ಅನಂತ ಯೋಚಿಸಿರಲೇ ಇಲ್ಲ. ಈ ಅಭಿಮಾನಕ್ಕೆ ತಾನು ಪಾತ್ರ ಎಂಬ ಭಾವನೆ ಬಲವಾಗಿ ಮನಸ್ಸಿನಲ್ಲಿ ಬೇರೂರಿದ್ದುದರಿಂದ, ಈ ಕುರಿತು ಯೋಚಿಸುವ ಅಗತ್ಯವಿದೆಯೆಂದು ಆತನಿಗೆ ಅನಿಸಿರಲಿಲ್ಲ.

ಯಾವ ಬಂಧನವೂ ಇರದ, ತಮ್ಮಿಬ್ಬರದೇ ಆದ, ತಮ್ಮ ಕಲ್ಪನೆಯ, ತಾವು ನೆಚ್ಚಿಕೊಂಡ ವಿಶ್ವ—ಅರಬೀ ಸಮುದ್ರದ ತಡಿ. ಅದು ಕೊಡುತ್ತಿರುವ ಸುಖಕ್ಕಾಗಿ ತಾವು ಅಲ್ಲಿಗೆ ಧಾವಿಸುತ್ತಿದ್ದೇವೆ ಎಂಬುದಷ್ಟೆ ಅನಂತನ ಅಭಿಪ್ರಾಯವಾಗಿತ್ತು.

ದಿನದಿಂದ ದಿನಕ್ಕೆ ಇಂದಿರೆ ಅನಂತನಿಗೆ ಅತ್ಯಂತ ಸಮೀಪ ಬರುತ್ತಿದ್ದಳು. ಅವನ ನಡೆ, ನುಡಿ-ಅಷ್ಟೇ ಏಕೆ, ಬರವಣಿಗೆಯನ್ನು ಕೂಡ ನಿಯಂತ್ರಿಸುವಷ್ಟು ಪ್ರಭಾವಯುತ ವ್ಯಕ್ತಿತ್ವ ಇಂದಿರೆಯದೆಂದು ಅನಂತ ನಿಶ್ಚಯಿಸುವಂತಾಗಿತ್ತು.

ಆ ನಿಶ್ಚಯವೇ, ಅದು ಕೊಡುತ್ತಿದ್ದ, ತುಂಬುತ್ತಿದ್ದ ಧೈರ್ಯವೇ

ರಾಜೀವನ ಮರಣದ ನೋವನ್ನು ಮರೆಸಿತ್ತು; ಕಳವಳ ತುಂಬಿದ ಸೋಮು ಯಾಜಿಗಳ ಮುಖದ ನೋವನ್ನು ಗಮನಿಸನಂತೆ ಮಾಡಿತ್ತು. 'ಕಹಳೆ'ಯ ದುಃಸ್ಥಿತಿ ತಿಳುವಳಿಕೆಗೆ ನಿಲುಕದಷ್ಟು ದೂರ ಹೋಗುವಂತೆ ಮಾಡಲು ಕಾರಣವಾಗಿತ್ತು.

ಸಾವಿರ ಭುಜಗಳ ಶಕ್ತಿ ತನಗಿದೆಯೆಂದು ಭಾವಿಸಿ ಅನಂತ ಮತ್ತೆ ದುಡಿಯಲು ತೊಡಗಿದ್ದ.

ಆ ದುಡಿಮೆ ತನ್ನದೇ ಆದ ಆದರ್ಶದ ಕಾರ್ಯಕ್ಷೇತ್ರದಲ್ಲಿ. ಎಷ್ಟು ಪ್ರಯತ್ನಿಸಿದರೂ ಅನಂತ ನೌಕರಿ ದೊರಕಿಸಿಕೊಳ್ಳಲು ಅಸಮರ್ಥನಾದರೂ, ವಿರಾಮವಿರದಂತೆ ಕೆಲಸ ಮಾಡಲು ಅವಕಾಶ ಒದಗಿಸಿಕೊಳ್ಳಲು ಕಷ್ಟವಾಗ ಲಿಲ್ಲ. ಎರಡು ಮೂರು ಯೂನಿಯನ್ ಕಚೇರಿಗಳಲ್ಲಿ, ಸಂಬಂಧಿಸಿದ ಕಾಗದ ಪತ್ರಗಳನ್ನು ನೋಡಿಕೊಂಡು, ಅವರು ಕೊಡುವ ಸಂಭಾವನೆಯನ್ನು ಸಂತೋಷದಿಂದ ಸ್ವೀಕರಿಸುವ ಉದ್ಯೋಗ ಅನಂತನ ಪಾಲಿನದಾಯಿತು. ಒಮ್ಮೆ ಸಂಪು ಮುಗಿದಾಗ ಒಡೆದ, ತನ್ನ ಹಿಂದಿನ ಆಫೀಸಿನ 'ಟ್ರೇಡ್ ಯೂನಿಯನ್', ಪುನಃ ಕಾರ್ಯಪ್ರವೃತ್ತವಾಗುವಂತೆ ಮಾಡಲು ಅನಂತ ಹೆಣಗುತ್ತಿದ್ದ. ಇಷ್ಟೆಲ್ಲ ಕೆಲಸದ ಜೊತೆಗೆ 'ಕಹಳೆ'ಯ ಸಂಪಾದನೆಯ ಸಂಪೂರ್ಣ ಭಾರ ಈಗ ತನ್ನ ಮೇಲಿದೆ.

ಹೀಗಾಗಿ ಅನಂತನಿಗೆ, ತನ್ನ ನಿತ್ಯನಿಯಮಕ್ಕೆ ಚ್ಯುತಿ ಬರದಂತೆ ಇಂದಿರೆ ಯನ್ನು ಕಾಣಲು ಕೂಡ ಸಾಕುಬೇಕಾಗುತ್ತಿತ್ತು. ಆದರೆ ಆಕೆಯನ್ನು ಒಂದು ದಿನ ಕಾಣದೆ ಹೋದರೆ ಆತ ಮುಂದಿನ ದಿನ ಕೆಲಸ ಮಾಡುವುದೇ ಕಷ್ಟವಾಗು ತ್ತಿತ್ತು.

ಕೈಗೆ ಬರುತ್ತಿದ್ದ ಅಲ್ಪಸ್ವಲ್ಪ ಹಣದಿಂದ ಒಬ್ಬಂಟಿಗನ ಜೀವನ ನಿರ್ವಹಿ ಸಲು ಸಾಧ್ಯವಾಗುತ್ತಿದೆ. ಮನಸ್ಸಿಗೆ ಆತನ ಜೀವಮಾನದಲ್ಲೇ ಈ ತನಕ ದೊರಕಿರದ ತೃಪ್ತಿಯಿದೆ. ಈ ರೀತಿಯ ವಾತಾವರಣದಲ್ಲಿ, ದುಡಿಮೆಯ ಆಯಾಸ ತುಂಬ ಪರಿಣಾಮ ಮಾಡಿದರೆ, ಮನಸ್ಸಿನ ಬೇಸರ ಹೋಗಲು, 'ನೇಪಿಯನ್ ಸೀ' ರಸ್ತೆಯಿದೆ.

ಇಂಥ ಸಂದರ್ಭಗಳಲ್ಲಿ ಅನಂತ ಎಷ್ಟೋ ಬಾರಿ ಇಂದಿರೆಯನ್ನು ಮಾತ ನಾಡಿಸಲು ಪ್ರಯತ್ನಿಸಿದ್ದ. ನಿರಾಶನಾಗಿಯೂ ಇದ್ದ. ಇಂದಿರೆಯ ಮೈತ್ರಿ ತನ್ನ ಮೇಲೆ ಮಾಡಿರುವ ಪರಿಣಾಮವನ್ನು ಆಕೆಯಿದಿರು ವಿವರಿಸಬೇಕು,

ಆಕೆಯ ಬಾಲ್ಯ, ಯೌವನಗಳ ಮಧುರ ಸ್ಮೃತಿಗಳನ್ನು, ಆಸೆ ಆಕಾಂಕ್ಷೆಗಳನ್ನು ಆಕೆಯಿಂದಲೇ ಕೇಳಿ ತಿಳಿದುಕೊಳ್ಳಬೇಕು ಎಂಬ ಎಷ್ಟೋ ಆಸೆಗಳನ್ನು ಪ್ರಯತ್ನಪೂರ್ವಕ ಹತ್ತಿಕ್ಕಬೇಕಾಗಿ ಬರುತ್ತಿತ್ತು. ಸಮುದ್ರವನ್ನು ನೋಡುತ್ತ ಕುಳಿತಿರುವ ಇಂದಿರೆಗೆ ಮಾತು ಬೇಕಾಗುತ್ತಿರಲಿಲ್ಲ. ಅಂಥ ಸಂದರ್ಭಗಳಲ್ಲಿ, ಅನಂತ ಸಮುದ್ರವನ್ನು ನೋಡುತ್ತಿಲ್ಲ, ತನ್ನನ್ನೆ ನೋಡುತ್ತಿದ್ದಾನೆ, ಎಂಬ ತಿಳುವಳಿಕೆ ಕೂಡ ಆಕೆಗೆ ಬರುತ್ತಿರಲಿಲ್ಲ. ಅನಂತ ಏನಾದರೂ ಮಾತನಾಡಲು ಯತ್ನಿಸಿದರೆ, ನಗುತ್ತಲೇ ಬಾಯಿಗೆ ಬೆರಳಿಟ್ಟು ಆತನನ್ನು ತಡೆಯುತ್ತಿದ್ದಳು.

ಅತೃಪ್ತಿ, ಅಸಮಾಧಾನಗಳು ಕುದಿಯುತ್ತಿರುವಾಗಲೂ ಅನಂತನಿಗೆ ಆ ನಗು ಸಾಕಾಗುತ್ತಿತ್ತು. ಎಂಥ ಅತೃಪ್ತಿಯನ್ನೂ ಅದು ಮರೆಸುವಂತಿತ್ತು.

ಮತ್ತೆ, ಅಪರೂಪವಾಗಿ ಎಲ್ಲಿಯಾದರೂ ಇಂದಿರೆಯ ಬಾಯಿಂದ ಮಾತು ಹೊರಟರೆ ಅದು :

"ಭಾರತಿಯಿಂದ ಕಾಗದವಿದೆಯೆ ?" ಎಂದು.

ಸಮುದ್ರವನ್ನೆ ನೋಡುತ್ತ ಸಂತೋಷದಿಂದಿರುತ್ತಿದ್ದ ಇಂದಿರೆಗೆ ಆಗ ಒಮ್ಮಿಂದೊಮ್ಮೆಗೆ ಭಾರತಿ ಏಕೆ ನೆನಪಿಗೆ ಬರುತ್ತಾಳೆ ಎಂಬುದು ಅನಂತನಿಗೆ ಸಮಸ್ಯೆಯೆ.

ಹಾಗೆಯೇ ಯಾವಾಗಾದರೊಮ್ಮೆ,

"ಶೆಲ್ಲಿಯ ಸಮುದ್ರಪ್ರೀತಿ ನಿಮಗೆ ನೆನಪಾಗುವುದಿಲ್ಲವೆ, ಅನಂತ ರಾಯರೆ ?" ಎಂದು ಇಂದಿರೆಯ ಮೌನ ಮುಗಿದು, ಶೆಲ್ಲಿ ಆ ಆವರಣದಲ್ಲಿ ಪ್ರಕಟವಾಗುತ್ತಿದ್ದ.

ಅನಂತನಿಗೆ ಈ ಮಾತಿಗೆ ಏನು ಉತ್ತರ ಹೇಳುವುದೆಂದು ತಿಳಿಯುತ್ತಿರ ಲಿಲ್ಲವಾದರೂ ರಾಜೀವ ಹಾಡಿದ ಒಂದು ಸೊಲ್ಲು ಮಾತ್ರ ಪದೇ ಪದೇ ನೆನಪಾಗುತ್ತಿತ್ತು.

ಭಾರತಿ, ಶೆಲ್ಲಿಯರನ್ನು ಬಿಟ್ಟರೆ, ಇಂದಿರೆಯ ಮೌನ ಬೇರೆ ಯಾವ ವಿಚಾರದಿಂದಲೂ ಭಂಗವಾಗಿರಲಿಲ್ಲ. ಈಕೆಯನ್ನು ಮಾತನಾಡಿಸಬೇಕು, ಎಂದು ಎಷ್ಟೇ ಧೈರ್ಯದಿಂದ ಅನಂತ ಅವಳ ಜೊತೆಗೆ ಬಂದರೂ, ಆಕೆಯ ಮೌನದ ಮುಂದೆ ಆ ಧೈರ್ಯ ಕುಸಿಯುತ್ತಿತ್ತು. ಹೀಗಾಗುವಾಗ, ಆತ ಆ ನಗುವ ಕಣ್ಣುಗಳನ್ನು, ಹಾಲುಗೆನ್ನೆಗಳನ್ನು, ಉಬ್ಬಿದ ಹಣೆಯನ್ನು, ಕುಂಕುಮವಿರದ ಮುಖವನ್ನು, ಜೀವನದ ಮಹಾದ್ವಾರದ ಹೊಸ್ತಿಲಲ್ಲೆ ಅದರ

ಮಾಧುರ್ಯದಿಂದ ವಿವಂಚಿತಳಾಗಿದ್ದರೂ, ಆಕೆಯ ಅಂಗಾಂಗಗಳಲ್ಲಿ ಪ್ರಕಟವಾಗುತ್ತಿದ್ದ ತಾರುಣ್ಯವನ್ನು ನೋಡುವಾಗ ಉಂಟಾಗುವ ತನ್ನೆದೆಯ ಕೋಲಾಹಲವನ್ನು ನಿಲ್ಲಿಸಲು ಒಂದು ವಿಶ್ವಪ್ರಯತ್ನವನ್ನೇ ಮಾಡುತ್ತಿದ್ದೇನೆ, ಎಂಬ ಅರಿವು ಅನಂತನಿಗಾಗುತ್ತಿತ್ತು. ತಾನು ಪ್ರೀತಿಸುವ ಪುಷ್ಪವನ್ನು ಮುಟ್ಟಲು ಕೂಡ ಬಿಡದಂತೆ ತಡೆಯುವ ಶಕ್ತಿ ಯಾವುದಿನು ಎಂದು ಯೋಚಿಸುವಾಗಲೆಲ್ಲ ಆತನ ಕಣ್ಣು ಮುಂದೆ ಬರುತ್ತಿದ್ದುದು ಭಾರತಿ.

ವೇದನೆಯ ಮೇರುವನ್ನೇ ಹೊತ್ತುಕೊಂಡು ಅನಂತ ಮರಳುತ್ತಿದ್ದ. ಆದರೆ ಭಾರತಿಯ ನೆನಪು ಮರೆಯಾದಾಗ ಉಳಿಯುವುದು 'ನೇಪಿಯನ್ ಸೀ' ರಸ್ತೆಯ ಪ್ರವಾಸದ ಮಧುರಸ್ಮೃತಿ ಮಾತ್ರ. ಇಂದಿರೆಯ ಸಾಮೀಪ್ಯದಿಂದ ತನ್ನ ಮನಸ್ಸಿಗೆ ದೊರಕಿರುವ ಹಿಗ್ಗು ಮಾತ್ರ.

ಇದೇ ಹಿಗ್ಗಿನಲ್ಲಿ ಅನಂತ 'ಕಹಳೆ'ಯ ಬಳಗದ ವಾರ್ಷಿಕ ಸಭೆಯಲ್ಲಿ ಕಳೆಗುಂದಿದ ಹತ್ತು ಹದಿನೈದು ಮುಖಗಳನ್ನು ನೋಡುತ್ತ, ಒಂದು ವರ್ಷಕ್ಕೆ ನಾಲ್ಕು ಸಾವಿರಕ್ಕೂ ಮಿಕ್ಕಿ ನಷ್ಟವಾದರೂ ಎದೆಗುಂದದೆ ಪತ್ರಿಕೆಯನ್ನು ಮುಂದುವರಿಸಬೇಕು, ಅದರ ಉಜ್ಜ್ವಲ ಭವಿಷ್ಯದ ಕುರಿತು ತನಗೆ ಸಂದೇಹವೇ ಇಲ್ಲ ಎನ್ನುವಂತೆ ಮಾತನಾಡಿದ್ದ. ಸೋಮಯಾಜಿಗಳು ಆಶ್ಚರ್ಯದಿಂದ ಅನಂತನನ್ನೇ ನೋಡುತ್ತಿದ್ದರು. ಬರೇ ಒಂದು ಒಂದೂವರೆ ತಿಂಗಳ ಹಿಂದೆ, ಪತ್ರಿಕೆ ನಿಲ್ಲಿಸೋಣವೆ? ಎಂದು ಕೇಳಿದ ಅನಂತ ಇವನೇ ಎಂಬ ಸಂದೇಹ ಅವರಲ್ಲಿ ಮೂಡಿತ್ತು. ಅವರಿಗೆ 'ಕಹಳೆ'ಯನ್ನು ನಿಲ್ಲಿಸುವುದು ಬೇಕಿರಲಿಲ್ಲ. ತಮ್ಮ ಆದರ್ಶದ ಹಾದಿಯಲ್ಲಿ ಅದು ಒಂದೇ ಬೆಳಕಿನ ಸಾಧನ ಎಂಬ ಅವರ ನಂಬಿಕೆ ಬದಲಿರಲಿಲ್ಲ. ಆದರೆ ರಾಜೀವನ ಮರಣ, ಪತ್ರಿಕೆಯ ಸಾಲ ಇವು ಅವರನ್ನು ಹಣ್ಣಾಗಿಸಿದ್ದವು. 'ಇದು ನಮ್ಮಿಂದ ಸಾಧ್ಯವಾಗದ ಪ್ರಯತ್ನ ಎಂದಾದರೆ, ಬಿಟ್ಟುಬಿಡೋಣವೆ?' ಎಂದು ಅವರು ಯೋಚಿಸುವಂತೆ ಮಾಡಿತ್ತು.

ಆದರೆ ಅನಂತನ ವಾಗ್ಝರಿಯ ಮುಂದೆ ಅವರ ಈ ನಿರ್ಧಾರ ಮಾಯವಾಗಿ ಮೊದಲಿನ ನಂಬಿಕೆ ದೃಢವಾಯಿತು. ಬಳಗದ ಸದಸ್ಯರು 'ಎಂಥ ಕಷ್ಟ ಬಂದರೂ ಇನ್ನು ಆರು ತಿಂಗಳು ನೋಡೋಣ; ಅಷ್ಟರಲ್ಲಿ ನಮ್ಮ ಪರಿಸ್ಥಿತಿ ಸುಧಾರಿಸದಿದ್ದರೆ ಮತ್ತೆ ಬೇರೆ ವಿಚಾರ ಆಲೋಚಿಸೋಣ' ಎಂದು ನಿರ್ಣಯಿಸಿದಾಗ ಸೋಮಯಾಜಿಗಳು ಸಂತೋಷದಿಂದಲೇ ಈ ಕಷ್ಟದ ಹೊರೆ ಹೊರಲು

ಸಿದ್ಧರಾದರು. ಆದರೂ ಉಳಿದೆಲ್ಲ ಗೆಳೆಯರು ಚದರಿದ ಮೇಲೆ, ಅನಂತನ ಜೊತೆಗೆ ಪ್ರೆಸ್ಸಿನ ದಾರಿ ಹಿಡಿದಾಗ ಅವರು ತಮ್ಮ ಕುತೂಹಲಶಮನಕ್ಕೆಂದು ಕೇಳಿದರು :

"ರಾಜೀವ ಹೋದರೂ ನಿನಗೆ ಒಮ್ಮಿಂದೊಮ್ಮೆಗೆ ಈ ಧೈರ್ಯ ಎಲ್ಲಿಂದ ಬಂತು, ಅನಂತಾ ?"

ಅನಂತ ನಕ್ಕ. ಸೋಮಯಾಜಿಗಳ ಇದಿರಿಗೆ ಸತ್ಯಸ್ಥಿತಿಯನ್ನೊಪ್ಪಿ ಕೊಳ್ಳುವುದೆ? ಇಂದಿರೆಯ ಆತ್ಮೀಯ ಸ್ನೇಹ ದೊರಕಿದಂದಿನಿಂದ ತಾನು ಈ ರೀತಿ ಬದಲಿದ್ದೇನೆ ಎಂದು ಹೇಳುವುದೆ? ಹಾಗೆ ಒಪ್ಪಿಕೊಂಡರೆ ಅವರು ತನ್ನ ವರ್ತನೆಗೆ ಯಾವ ಅರ್ಥ ಕಲ್ಪಿಸಬಹುದು ?

"ನಮ್ಮ ಕರ್ತವ್ಯದ ಕ್ಷೇತ್ರದಲ್ಲಿ 'ಕಹಳೆ' ಒಂದು ಆಯುಧ, ಸೋಮ ಯಾಜಿಗಳೆ. ಒಂದು ವರ್ಷ ಬೆಳೆಸಿದ ಕೂಸನ್ನು ಒಮ್ಮಿಂದೊಮ್ಮೆಗೆ ಕೊಲ್ಲು ವುದು ಸಾಧ್ಯವೆ ?"

"ಹಾಗಾದರೆ ಈ ನಾಲ್ಕೂವರೆ ಸಾವಿರಕ್ಕೆ ಯಾರು ಹೊಣೆ, ಅನಂತಾ ? ಹಾಗೆಯೇ ಮುಂದೆ ಆಗಬಹುದಾದ ಸಾಲಕ್ಕೆ ?"

ಅನಂತ ಕೂಡಲೇ ಉತ್ತರ ಕೊಡಲಿಲ್ಲ. ತುಸು ನಿಧಾನಿಸಿ ಹೇಳಿದ :

"ಸಂಜೀವರಾಯರನ್ನು ಒಂದು ಮಾತು ಕೇಳದೆ ಪತ್ರಿಕೆಯನ್ನು ನಿಲ್ಲಿಸ ಬಹುದೆ ?"

ಈಗ ನಗುವ ಸರದಿ ಸೋಮಯಾಜಿಗಳದಾಯಿತು.

"ರಾಜೀವ ನಿನ್ನ ಮಾತು ಕೇಳಲು ಇರಬೇಕಿತ್ತು, ನೋಡು. ನಾವು ಪತ್ರಿಕೆಯನ್ನು ಸಂಜೀವರಾಯರಿಗೆ ಮಾರಿಲ್ಲ.

ಸೋಮಯಾಜಿಗಳ ಮಾತು ಅನಂತನಿಗೆ ತುಂಬ ನೋವು ಕೊಟ್ಟಿತು. ಇಂದಿರೆಯಿಂದಾಗಿ ಈ ರೀತಿಯ ಅಭಿಪ್ರಾಯವೆ ? ಈ ನೋವೆ ?

"ಅದು ನನಗೂ ತಿಳಿದಿದೆ, ಸೋಮಯಾಜಿಗಳೆ. ನಾವು ಪತ್ರಿಕೆಯನ್ನು ಯಾರಿಗೂ ಮಾರಿಲ್ಲ. ಆದರೆ ಉದಾರ ಕೈಯಿಂದ ಸಹಾಯ ಮಾಡಿದ ವ್ಯಕ್ತಿಗೆ ಕೃತಜ್ಞತೆಯ ಕುರುಹೆಂದು ಆ ಸಹಾಯಕ್ಕೆ ಪಾತ್ರವಾದ ಸಂಸ್ಥೆಯ ಅವಸಾ ನದ ಕುರಿತು ಒಂದು ಮಾತೂ ಹೇಳಬಾರದೆ ?"

"ನೀನು ತಪ್ಪು ತಿಳಿದುಕೊಂಡಿರುವಿ, ಅನಂತಾ. ನಾನು ಸಂಜೀವ ರಾಯರಿಗೆ ನಮ್ಮ ಸ್ಥಿತಿಗತಿಗಳನ್ನು ತಿಳಿಸಿಲ್ಲ ಎಂತಲ್ಲ, ತಿಳಿಸಿದ್ದೇನೆ. ಆದರೆ

ಅವರ ಸಹಾಯಕ್ಕೆ ನಮ್ಮ ಪಾತ್ರತೆ ಕಾರಣವೆಂದು ನಾನು ತಿಳಿದಿಲ್ಲ. ಅದು ಎಷ್ಟೇ ಯೋಗ್ಯವಾದುದಾದರೂ ಅವರ ಹಣಸಹಾಯಕ್ಕೆ ಕಾರಣ ಬೇರೆಯೆ."

"ಎಂದರೆ ?"

"ಎಂದರೆ, ಇಂದಿರೆ. ತಮ್ಮ ಮಗಳ ಮನಸ್ಸಿನ ಸಮಾಧಾನಕ್ಕಾಗಿ ಅವರು ಈ ಹಣ ಕೊಡುತ್ತಿದ್ದಾರೆ. ಆ ಮಗುವಿಗೆ ದುಃಖವಾಗದಂತೆ ಕೇಶವನ ಮರಣದ ನೋವನ್ನು ಮರೆಸುವುದಕ್ಕಾಗಿ, ಅವಳ ಅಭಿರುಚಿಗೆ ತಕ್ಕಂತೆ ಈ ಸಹಾಯ. ನಾಳೆ ಅವಳ ಅಭಿರುಚಿ ಬದಲಿದರೆ ಅಥವಾ ಇಂದಿರೆ ನಮ್ಮ ಧ್ಯೇಯಧೋರಣೆಗಳನ್ನು ವಿರೋಧಿಸುವಂತಾದರೆ, ಈ ಸಹಾಯವೂ ನಿಂತಂತೆ. ಇದನ್ನೇ ನಂಬಿಕೊಂಡು ನಾವು ಪತ್ರಿಕೆ ಮುಂದುವರಿಸುವುದು ಸಾಧ್ಯವೆ ?"

"ಛೆ ! ಇಂದಿರೆ ನಮ್ಮ ಧೋರಣೆಯನ್ನು ವಿರೋಧಿಸುವುದೆ ? ನಮ್ಮನ್ನು ತಿರಸ್ಕಾರ ದೃಷ್ಟಿಯಿಂದ ನೋಡುವುದೆ ? ಇದು ಸಾಧ್ಯವೇ ಇಲ್ಲ."

ಅನಂತನ ಮಾತಿನಲ್ಲಿದ್ದ ಖಂಡಿತ ಅಭಿಪ್ರಾಯ ಸೋಮಯಾಜಿಗಳಿಗೆ ಆಶ್ಚರ್ಯವನ್ನುಂಟುಮಾಡಿತು.

"ನಿನಗೆ ಈ ರೀತಿಯ ನಿಶ್ಚಯಜ್ಞಾನ ಹೇಗೆ ಬಂತು, ಅನಂತಾ. ಸಾಧ್ಯವಿದೆಯೆಂದು ನಾನು ಹೇಳುವುದಿಲ್ಲ. ಸಾಧ್ಯವಿಲ್ಲವೆಂದೂ ನಾನು ಹೇಳುವುದಿಲ್ಲ. ಈಗ ಇಂದಿರೆಗೆ ನಮ್ಮ ವಿಚಾರ ಒಳ್ಳೆಯ ಅಭಿಪ್ರಾಯವಿದೆಯೆಂದಾದರೆ ನಾಳೆಗೂ ಅದು ಉಳಿಯಬೇಕೆಂದೇನಿಲ್ಲ. ಒಂದು ವೇಳೆ, ನಾಳೆ ತಂದೆ ನಮ್ಮ ವಿಚಾರ ಮುನಿದರೆ, ಆ ಸಿಟ್ಟು ಮಗಳ ಧೋರಣೆಯ ಮೇಲೂ ಪರಿಣಾಮ ಮಾಡಬಹುದು. ಹಾಗಾದರೆ ನಮ್ಮ ಗತಿ ? ಅಷ್ಟೇ ಅಲ್ಲದೆ, ಒಂದು ಸಂಸ್ಥೆ ಒಂದು ವ್ಯಕ್ತಿಯ ಅಭಿರುಚಿಯನ್ನವಲಂಬಿಸಿ ಯಾವಾಗಲೂ ಮುಂದುವರಿಯುವುದು ಸಾಧ್ಯವಿಲ್ಲ, ಅನಂತಾ. ವ್ಯಕ್ತಿಗಿಂತ ಸಂಸ್ಥೆ ಯಾವಾಗಲೂ ಹಿರಿದು."

ಅನಂತ ಯೋಚಿಸಲಾರಂಭಿಸಿದ: 'ನನ್ನ ಪ್ರೀತಿಯ ಇಂದಿರೆಯ ಕುರಿತು, ನನಗೆ ಅತ್ಯಂತ ಗೌರವವಿರುವ ಸೋಮಯಾಜಿಗಳಿಗೂ ಈ ರೀತಿಯ ಅಪನಂಬಿಕೆಯೆ ?'

ರಾಜೀವನ ಅಭಿಪ್ರಾಯಗಳು ಸೋಮಯಾಜಿಗಳ ಮೂಲಕ ಹೊರ ಬರುತ್ತಿದ್ದುವೆಂದು ತಿಳಿಯಲು ಅನಂತನಿಗೆ ಹೆಚ್ಚು ಹೊತ್ತು ಬೇಕಾಗಲಿಲ್ಲ. ಸಿರಿವಂತರ ಕುರಿತು ಆತನಿಗಿದ್ದ ತಿರಸ್ಕಾರ, ಹೃದಯದ ಮಿದುತನದ ಕುರಿತು

ಇದ್ದ ಜಿಗುಪ್ಸೆ, ಈಗ ಸೋಮಯಾಜಿಗಳಲ್ಲಿ ಕಾಣುತ್ತಿದ್ದವು—ರಾಜೀವ ತೀರಿಕೊಂಡಮೇಲೆ.

ರಾಜೀವನ ಮರಣ ಸೋಮಯಾಜಿಗಳ ಮೇಲೆ ಅಷ್ಟು ಪರಿಣಾಮ ಮಾಡಿದೆಯೆ? ಅವನು ತೀರಿಕೊಂಡಮೇಲೆ, ತಾವು ತಿದ್ದುತ್ತಿದ್ದ ವಿದ್ಯಾರ್ಥಿ ಜೀವನವನ್ನು ನೋಡುತ್ತಿದ್ದ ನಿಲುವೆ ಸರಿಯಾದುದೆಂದು ಸೋಮಯಾಜಿಗಳಿಗೆ ಕಂಡಿತೆ?

"ಹಾಗಾದರೆ 'ಕಹಳೆ' ಯನ್ನು ನಿಲ್ಲಿಸಬೇಕೆಂದು ನೀವು ಹೇಳುವಿರೇನು?"

"ಇಲ್ಲ, ಖಂಡಿತವಾಗಿ ಇಲ್ಲ. ಆದರೆ ದಾನದಿಂದಲೇ ಬದುಕಬೇಕಾದುದು ನಮ್ಮ ಅವಸ್ಥೆ ಎಂದಾದರೆ, ಈ ಕೆಲಸಕ್ಕೆ ಬೇಗ ಕೈಮುಗಿಯೋಣ ಎಂದು ಕಾಣುತ್ತದೆ."

"ಹಾಗಾದರೆ ಏನು ಮಾಡಬೇಕೆಂದು ಹೇಳುತ್ತೀರಿ?"

"ಈಗ ನಿರ್ಣಯಿಸಿಯಾಗಿದೆಯಲ್ಲ, ಅನಂತ. ಇನ್ನು ಆರು ತಿಂಗಳ ಹೋರಾಟ. ಅಷ್ಟರ ತನಕ ನೋಡೋಣ. ಆಮೇಲೆ ಪುನಃ ಯೋಚಿಸಬಹುದು."

ತುಸು ತಡೆದು ಸೋಮಯಾಜಿಗಳು ಹೇಳಿದರು:

"ಆದರೆ ನನಗೊಂದು ತಿಂಗಳ ಮಟ್ಟಿಗೆ ಊರಿಗೆ ಹೋಗಬೇಕಾಗಿ ಬರುತ್ತದೆ, ಅನಂತಾ. ಶಾಲೆಗೆ ರಜೆ ಆರಂಭವಾದ ಕೂಡಲೆ ಹೋಗುತ್ತೇನೆ. ನಾನು ಬರುವ ತನಕ ಎಲ್ಲ ಹೊಣೆ ನಿನ್ನ ಮೇಲೆ ಬೀಳುತ್ತದೆ."

"ಊರಿನ ನೆನಪಾಯಿತೆ? ಏನು ವಿಶೇಷ ಕೆಲಸ?" ಎಂದು ನಗುತ್ತ ಅನಂತ ಕೇಳಿದ. ಆದರೆ ಸೋಮಯಾಜಿಗಳು ಕೊಟ್ಟ ಉತ್ತರದಿಂದ ಆತನ ನಗು ಮಾಯವಾಯಿತು.

"ಕೆಲಸ 'ಕಹಳೆ'ಯದೆ. ಆದ ಸಾಲವನ್ನು ಹೇಗಾದರೂ ಹಿಂದಿರುಗಿಸಬೇಕಲ್ಲ. ಒಂದೆರಡು ತುಂಡು ಹೊಲಗಳಿವೆ. ಮಾರಿಬಿಡುತ್ತೇನೆ. ಊರಿನಲ್ಲಿ ನನ್ನವರೆಂದು ಯಾರಿದ್ದಾರೆ? ನಾನು ಅಲ್ಲಿ ಭೂಮಿಯಿರಿಸಿಕೊಂಡು ಆಗಬೇಕಾದುದು ಏನಿದೆ? ನನ್ನ ಬಡ ವಿದ್ಯಾರ್ಥಿಗಳು, ನನ್ನ ಪ್ರೀತಿಯ ಪತ್ರಿಕೆ ಇರುವುದೆಲ್ಲ ಇಲ್ಲಿ. ಆ ಹಣದ ಉಪಯೋಗ ಇಲ್ಲಿ ಚೆನ್ನಾಗಿ ಆಗಬಹುದು."

ಅನಂತ ಈಗ ನಿರುತ್ತರನಾದ. ಅವನ ಮೌನ ಕಂಡು ಸೋಮಯಾಜಿ ಗಳಿಗೆ ನಗು ಬಂತು.

"ನನ್ನ ಮನೆ, ಮಠ, ಜಗತ್ತು ಎಲ್ಲ ಇವೇ, ಅನಂತಾ. ಇದರಲ್ಲಿ ಆಶ್ಚರ್ಯ ಪಡಬೇಕಾದುದೇನೂ ಇಲ್ಲ. ಹೆಂಡತಿ ಎಂದೋ ತೀರಿಹೋಗಿದ್ದಾಳೆ. ನನ್ನ ಮಕ್ಕಳೆಂದೇ ತಿಳಿದು ಪ್ರೀತಿಯಿಂದ ನೋಡುತ್ತಿದ್ದ ಇಬ್ಬರು ಹುಡುಗರಲ್ಲಿ ಒಬ್ಬ ಳಿರಲ್ಲಿ ತೀರಿಕೊಂಡ. ಇನ್ನೊಬ್ಬ,.ನಿನಗೆ ತಿಳಿದೇ ಇದೆ. ಮೊನ್ನೆಹೋದ. ಇನ್ನು ಳಿದ ನನ್ನ ಬದುಕಿಗೆ, ಸತ್ಯ-ದೇವರು, ಸೇವೆ-ದೀಕ್ಷೆ. ನನ್ನ ವಿದ್ಯಾರ್ಥಿಗಳು ನನ್ನ ಸಂಪತ್ತು 'ಕಹಳೆ' ನಾವೆಲ್ಲ ಜೊತೆಯಾಗಿಯೇ ಅನುಭವಿಸುವ ಆಸ್ತಿ."

ಅರ್ಧ ನಗುವಿನಲ್ಲಿ ಆಡಿದ ಮಾತುಗಳು. ಆದರೆ ಅವುಗಳ ಹಿಂದಿದ್ದ ವೇದನೆ ಅನಂತನ ಗಮನಕ್ಕೆ ಬಾರದಿರಲಿಲ್ಲ. ಸೋಮಯಾಜಿಗಳು ತನಗೆ ಕಾಣದಂತೆ ಮುಖ ತಿರುಗಿಸಿದಾಗಲೇ ಅನಂತನಿಗೆ ಅವರ ದುಃಖದ ಅರಿವು ಆಗಿತ್ತು.

ಇನ್ನು ಮಾತನಾಡಿ ಅವರ ದುಃಖವನ್ನು ಹೆಚ್ಚಿಸುವುದಕ್ಕಿಂತ ಬೇರೆಲ್ಲಿ ಗಾದರೂ ಹೋಗುವುದು ಒಳ್ಳೆಯದೆಂದು ತಿಳಿದು ಅನಂತ,

"ನಾನು 'ಕಾಂಗ್ರೆಸ್ ಹೌಸಿ'ಗೆ ಹೋಗಿ ಬರುತ್ತೇನೆ" ಎಂದ.

"ಯಾಕೆ?"

"ಪ್ರೆಸ್ ಪಾಸ್ ಇವೊತ್ತು ಕೊಡುತ್ತೇನೆಂದು ಹೇಳಿದ್ದಾರೆ—ನಾಡಿದ್ದು ಎ.ಐ.ಸಿ.ಸಿ. ಅಧಿವೇಶನಕ್ಕೆ."

"ಹೋಗು" ಎಂದರು ಸೋಮಯಾಜಿಗಳು.

ಅನಂತ 'ಪ್ರೆಸ್ ಪಾಸ್' ಪಡೆದವನು ನೇರವಾಗಿ ಬಂದುದು ಇಂದಿರೆಯ ಮನೆಗೆ. ಸೋಮಯಾಜಿಗಳ ಮಾತುಗಳು ಹೃದಯದಲ್ಲಿ ಇನ್ನೂ ಪ್ರತಿ ಧ್ವನಿಸುವಂತಿದ್ದವು. ಒಮ್ಮೆ ಇಂದಿರೆಯೊಡನೆ ಈ ವಿಚಾರ ಮಾತು ಬೆಳೆಸಲೇ, ಎಂಬ ಯೋಚನೆ ತಲೆದೋರಿತಾದರೂ, ಸೋಮಯಾಜಿಗಳನ್ನು ಕೇಳದೆ ಹಾಗೆ ಮಾಡುವುದು ಅನುಚಿತವಾದುದೆಂದು ತೋರಿತಾದ ಕಾರಣ ಆ ವಿಚಾರ ಅನಂತ ಮತ್ತೆ ಯೋಚಿಸಲಿಲ್ಲ.

ಇಂದಿರೆ ಮನೆಯಲ್ಲಿ ಇದ್ದಳು. ಅನಂತ ಒಳಗೆ ಬಂದೊಡನೆ,

"ಎಲ್ಲಿಂದ ಬರೋಣ?" ಎಂದು ಕೇಳಿದಳು.

"ಕಾಂಗ್ರೆಸ್ ಹೌಸ್."

"ಪಾಸು ಸಿಕ್ಕಿತೇನು ?"

"ಹೌದು."

"ನನಗೂ ?"

"ಕೆಮರಾ ಹಿಡಿದುಕೊಂಡು ಬಂದರೆ ನಿನಗೂ ಇದೆ. ಒಂದು ಪ್ರೆಸ್ ಪಾಸ್, ಇನ್ನೊಂದು ಫೋಟೋಗ್ರಾಫರನಿಗಾಗಿ." ತನ್ನ ಜೊತೆಗೆ ಬರುವ ಅಭಿಪ್ರಾಯವನ್ನು ಸೂಚಿಸಿರುವಳೆಂಬ ಸಂತೋಷದ ಉಬ್ಬಿನಲ್ಲಿ ಅನಂತ ಹೀಗೆ ಹೇಳಿದ.

"ಇನ್ನು ಅದನ್ನು ಎರವಲು ತರುವುದು ಎಲ್ಲಿಂದ ?"

"ನಾನೇ ತಂದುಕೊಡುತ್ತೇನೆ."

"ನೀವೇ ಫೋಟೋಗ್ರಾಫರ್ ಆಗಿ. ನನಗೆ ಪ್ರೆಸ್ ಪಾಸ್ ಕೊಡಿ."

"ಹಾಗಾದರೆ ವರದಿ ಬರೆಯುವ ಕೆಲಸ ?"

"ಅದು ನಿಮ್ಮದೇ. ಕರೆದುಕೊಂಡು ಹೋಗುವ ತಪ್ಪಿಗೆ."

"ಆ ತಪ್ಪಿಗೆ ಅಷ್ಟೇ ಶಿಕ್ಷೆಯೆ ? ಎಂಥ ಶಿಕ್ಷೆಯನ್ನು ಬೇಕಾದರೂ ನಾನು ಅನುಭವಿಸಲು ಸಿದ್ಧನಿದ್ದೇನೆ."

"ಥ್ಯಾಂಕ್ಸ್. ಆದರೆ ನಾನು ಟಿಕೇಟು ಆಗಲೇ ತೆಗೆದಾಗಿದೆ."

ಅನಂತನಿಗೆ ತುಂಬ ನಿರಾಶೆಯಾಯಿತು. ಇಂದಿರೆ ಬರುವಳೆಂದು ಆತ ಎರಡು ಪಾಸು ತಂದಿರಲಿಲ್ಲವಾದರೂ, ಆಸಕ್ತಿಯಿರುವ ಯಾರಾದರೂ ಗೆಳೆಯರನ್ನು ಕರೆದುಕೊಂಡು ಹೋಗಬಹುದೆಂದು ಭಾವಿಸಿದ್ದನಾದರೂ, ಇಂದಿರೆ ಜೊತೆಗೆ ಬರುವ ಆಸೆಯನ್ನು ಸೂಚಿಸಿದೊಡನೆ, ಅವಳು ಖಂಡಿತ ಬರುವಳೆಂದೇ ತಿಳಿದಿದ್ದ. ಹೀಗಾಗಿ ಆಕೆ ಬೇರೆ ಟಿಕೇಟು ತೆಗೆದಿರುವಳೆಂದು ತಿಳಿದು ಬೇಸರವಾಯಿತು.

"ಹಾಗಾದರೆ, ನನ್ನೊಡನೆ ಕೇಳುವ ಅವಶ್ಯಕತೆಯೇ ಇದ್ದಿಲ್ಲ."

"ಛೆ ! ಅದು ಹೇಗಾದೀತು. ಪ್ರೆಸ್ ಗ್ಯಾಲರಿಗೆ ಬರಲು ಪುಣ್ಯ ಬೇಕು. ನಾನು ಟಿಕೇಟು ಪಡೆದಿರುವೆನಾದರೂ ಹೇಗಾದರೂ ಪ್ರಯತ್ನಿಸಿ ಅಲ್ಲಿಗೆ ಬರುತ್ತೇನೆ" ಎಂದಳು.

ಅನಂತ ಇಷ್ಟರಿಂದಲೆ ಸಮಾಧಾನ ಪಡೆಯಬೇಕಾಯಿತು.

ಅಧಿವೇಶನದ ಎರಡನೆಯ ದಿನ ಸಂಜೆ ಅನಂತ ಇಂದಿರೆಯನ್ನು ಕಂಡ. ೧೯೪೭ರ ಏಪ್ರಿಲ್‌ನ ಕೊನೆಯಲ್ಲಿ ಮುಂಬಯಿಯ ಮೆರೀನ್‌ಲೈನ್ಸ್ ನಿಲ್ದಾಣೆಯ

ಬಳಿ 'ಗಾಂಧೀ ನಗರ'ದಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನ. ಬಾಪೂ ಕಣ್ಮರೆಯಾದಮೇಲೆ ಮೊದಲ ಬಾರಿಗೆ ಸೇರಿದ ಬಾಪೂ ಇರದ ಕಾಂಗ್ರೆಸ್ಸಿನ ಚರಿತ್ರಾರ್ಹ ಅಧಿವೇಶನ.

ಅಧಿವೇಶನದ ಆರಂಭದ ದಿನವೇ ಸಂಜೆ ಅನಂತನ ಕಣ್ಣುಗಳು ಇಂದಿರೆಯನ್ನು ಹುಡುಕುತ್ತಿದ್ದವು. ಆದರೆ ಆಕೆ ಕಾಣಸಿಗಲೂ ಇಲ್ಲ. ಎಲ್ಲಿಯೋ ಕುಳಿತಿರಬಹುದು ಎಂದು ಅನಂತ ಭಾವಿಸಿದ. ಎರಡನೆಯ ದಿನ ಮಧ್ಯಾಹ್ನ ಮೂರು ಘಂಟೆಯ ಹೊತ್ತಿಗೆ ಆಕೆ ವೇದಿಕೆಯ ಬಳಿಯಿಂದಲೆ ಹಾದುಕೊಂಡು ಬಂದು 'ಪ್ರೆಸ್ ಗ್ಯಾಲರಿ'ಯ ಒಳಹೊಕ್ಕು ಅನಂತನ ಬಳಿಗೆ ಬಂದಳು. ಅನಂತ ಕುಳಿತಲ್ಲಿ ಬೇಕಾದಷ್ಟು ಸ್ಥಳವಿದ್ದುದರಿಂದ ಆಕೆ ಬಂದು ಕುಳಿತುದೂ ಅನಂತನಿಗೆ ತಿಳಿಯಲಿಲ್ಲ. ಆತ ವೇದಿಕೆಯ ಮೇಲೆ ಆಗುತ್ತಿದ್ದ ಭಾಷಣ ಕೇಳುವುದರ ಜೊತೆಗೆ ಪ್ರೇಕ್ಷಕರ ತಂಡದಲ್ಲಿ ಇಂದಿರೆ ಎಲ್ಲಿರಬಹುದು ಎಂದು ಹುಡುಕಾಡುತ್ತಿದ್ದ. ಹೀಗಾಗಿ ಇಂದಿರೆ ಬಂದು ತನ್ನ ಬಳಿ ಕುಳಿತುದೂ ಆತನಿಗೆ ಮೊದಲು ತಿಳಿಯಲಿಲ್ಲ. ಯಾವುದೋ ಪತ್ರಿಕೆಗೆ ಸಂಬಂಧಿಸಿದವರಿರಬಹುದು ಎಂದು ಯೋಚಿಸಿಕೊಂಡು ತನ್ನ ಹುಡುಕಾಟವನ್ನು ಮುಂದುವರಿಸಿದ. ಆದರೆ ಬಳಿಯಲ್ಲಿ ಕುಳಿತಿದ್ದ 'ಪತ್ರಿಕೋದ್ಯಮಿ' ಕನ್ನಡ ಅಕ್ಷರಗಳಲ್ಲಿ ಬರೆಯುತ್ತಿರುವುದು ಗಮನಕ್ಕೆ ಬಂದಾಗ, ಅದು ಯಾರಿರಬಹುದೆಂದು ಮುಖ ತಿರುಗಿಸಿ ನೋಡಿದ.

ಇಂದಿರೆ !

"ಅರೆ ! ನನಗೆ ತಿಳಿಸದೆ ಹೇಗೆ ಬಂದೆ? ನಿನಗಾಗಿಯೇ ಹುಡುಕುತ್ತಿದ್ದೆ ನಾನು ?"

"ಅದೇ ಕಾರಣ ಹತ್ತಿರ ಬಂದು ಕುಳಿತರೂ ಮಂಕು ಬಡಿದವರಂತೆ 'ಡಾಯಸ್' ನೋಡುತ್ತಿರುವುದು."

"ಯಾವಾಗ ಬಂದಿ ?"

"ಕಡಿಮೆಯೆಂದರೆ ಐದು ನಿಮಿಷಗಳಾದರೂ ಆಗಿರಬಹುದು."

"ಕಾಗದ, ಪೆನ್ಸಿಲು ಎಲ್ಲಿ ದೊರಕಿಸಿಕೊಂಡೆ ?"

"ಬರುವಾಗ ತರಬಾರದೆಂದು ನಿಯಮವಿದೆಯೇನು ? ಅಥವಾ ಅವನ್ನು ತಂದವರು ಮಾತ್ರ ಪತ್ರಿಕೋದ್ಯೋಗಿಗಳೆ ?"

"ಹಾಗೇನಿಲ್ಲ. ಇಲ್ಲಿ ಬಂದಿರುವ ಅರೆವಾಸಿ ಜನ ಪತ್ರಿಕೋದ್ಯೋಗಿಗಳಲ್ಲ. ಆ ಉದ್ಯಮದ ಹೆಸರಿನಿಂದ ಪ್ರವೇಶ ದೊರಕಿಸಿಕೊಂಡವರು."

"ನನ್ನ ಹಾಗೆ."

"ನೀನು ಅಪವಾದ, ಬಿಡು."

"ನಿಮ್ಮ ಮಟ್ಟಿಗೆ."

"ಅದು ಸಾಲದೆ ?"

ಇಂದಿರೆ ನಕ್ಕಳು. ಹೊರಗೆ ಚಾ ಕುಡಿಯಲೆಂದು ಹೋಗಿದ್ದ ಪತ್ರಿಕೋದ್ಯೋಗಿಗಳಲ್ಲಿ ಹಲವರು ಮತ್ತೆ ತುಂಬಿಕೊಂಡರು. ಪಂಡಿತ್ ನೆಹರು ಮಾತನಾಡುತ್ತಿದ್ದರು. ಇಂದಿರೆ ಅನಂತನ ಬಳಿ ಸರಿಯಬೇಕಾಗಿ ಬಂತು. ಮೈಗೆ ಮೈ ತಾಗುವಂತೆ ಕುಳಿತುಕೊಳ್ಳಬೇಕಾಗಿ ಬಂತು. ಅನಂತ ತನ್ನ ಪ್ರೀತಿಯ ದೇವತೆಯ ಸಾಮೀಪ್ಯಸುಖದಿಂದಾಗಿ ಅನಿರ್ವಚನೀಯ ಸುಖವನ್ನು ಅನುಭವಿಸುತ್ತಿದ್ದ.

ಆದರೆ ಇಂದಿರೆಯ ನೆಟ್ಟನೋಟ ವೇದಿಕೆಯಲ್ಲಿದ್ದ ಪಂಡಿತ್ ನೆಹರು ಅವರ ಕಡೆ. ಮಂತ್ರಮುಗ್ಧಳಂತೆ ಅವರನ್ನೆ ನೋಡುತ್ತಿದ್ದಳು. ಹೀಗೆ ಹಿಂದೆಯೇ ನೋಡಿದುದಿದೆ ಎಂದು ಮನಸ್ಸು ಹೇಳುತ್ತಿತ್ತು. ಗೊವಾಲಿಯಾ ಕೆರೆಯ ಮೈದಾನದಲ್ಲಿ—೪೨ರ ಆಗಸ್ಟ್‌ನಲ್ಲಿ.

ಆಗ ಕೇಶವ ಜೊತೆಗಿದ್ದ.

ಒಂದರ ಹಿಂದೊಂದು ನಿರ್ಣಯಗಳು ಬರುತ್ತಿದ್ದವು. ಭಾಷಣಗಳಾಗುತ್ತಿದ್ದವು. ಅಂಗೀಕಾರವೋ, ತಿರಸ್ಕಾರವೋ, ಏನಾದರೊಂದು ಮುದ್ರೆ ಬೀಳುತ್ತಿತ್ತು.

ಸಂಜೆ ಆರು ಘಂಟೆಯ ಹೊತ್ತಿಗೆ ಇಂದಿರೆ ಅನಂತನೊಡನೆ ಕೇಳಿದಳು :

"ಹೋಗೋಣವೆ ?"

"ಇಷ್ಟು ಬೇಗ ? ಆರ್ಥಿಕ ಗೊತ್ತುಗುರಿಗಳ ಕುರಿತಾದ ನಿರ್ಣಯದ ಕುರಿತು ರಂಗಾ ಮಾತನಾಡುತ್ತಾರಂತೆ."

"ಹಾಗಾದರೆ ನಾನು ಹೋಗುತ್ತೇನೆ."

ಇಂದಿರೆ ಹೋಗುವಳೆಂದು ತಿಳಿದು ಅನಂತನಿಗೆ ಅಸಮಾಧಾನವಾಯಿತು.

"ಮನೆಗೆ ಹೋಗುವುದೆ ? ಇಷ್ಟೇಕೆ ಅವಸರ ?"

"ಮನೆಗಲ್ಲ. ಮಲಬಾರ್ ಹಿಲ್."

"ನಾನು ಬರಬೇಕೇ ?"

"ಕೆಲಸವಿಲ್ಲವಾದರೆ ಬನ್ನಿ. ನನಗೇಕೋ ತಲೆ ಸಿಡಿಯಲು ಆರಂಭ ವಾಗಿದೆ."

ಅನಂತ ತನ್ನ ಕಾಗದಪತ್ರಗಳನ್ನು ಸರಿಪಡಿಸಿಕೊಂಡು ಹೊರಟ. ಇಂದಿರೆ ಅವನನ್ನನುಸರಿಸಿದಳು.

ಇಬ್ಬರೂ ಬಸ್ ಹಿಡಿದು ತಮ್ಮ ಪ್ರೀತಿಯ ತಾಣ ಸೇರಿದರು. ಹೊತ್ತು ಕಂತುವ ಸಮಯ. ಯಾವಾಗಲೂ, ಅಲ್ಲಿಗೆ ಹೊರಡುವುದೆಂದು ನಿಶ್ಚಯ ವಾದೊಡನೆ ಮೌನವನ್ನವಲಂಬಿಸುತ್ತಿದ್ದ ಇಂದಿರೆ ಇಂದು ತುಂಬ ಮಾತನಾಡು ತ್ತಿದ್ದಳು.

"ಆ ಮಹಾಕೋಸಲದ ಸದಸ್ಯ ತುಂಬ ಚೆನ್ನಾಗಿ ಮಾತನಾಡಿದರಲ್ಲ. ಪೂರ್ವ ಬಂಗಾಲದವರು ಎಷ್ಟು ಬೊಬ್ಬಿಟ್ಟರೇನು ; ಪಾಕಿಸ್ಥಾನದ ಕಾಂಗ್ರೆಸ್ಸಿನ ಗೋಳಿಗೆ ಇನ್ನು ಭಾರತ ಹೊಣೆಗಾರಿಕೆ ವಹಿಸಲು ಬರುವುದೇ ?"

ಅನಂತ ತಲೆಯಲ್ಲಾಡಿಸುತ್ತಿದ್ದ.

ಅವನು ಸೋಮಯಾಜಿಗಳು ಇಂದಿರೆಯ ಕುರಿತು ಹೇಳಿದ್ದ ಮಾತು ಗಳನ್ನೆ ಮತ್ತೆಮತ್ತೆ ಮೆಲುಕುಹಾಕುತ್ತಿದ್ದ.

"ಕಾಂಗ್ರೆಸ್ಸಿನ ಬಗೆಗೆ ನಿನಗಿರುವ ಅಭಿಮಾನ ಕಡಿಮೆಯಾದಂತಿಲ್ಲ, ಇಂದಿರಾ."

"ಒಮ್ಮೆಗೇ ಕಡಿಮೆಯಾಗುವುದಾದರೂ ಹೇಗೆ ಸಾಧ್ಯ ?"

"ಎಂದರೆ, ಕಡಿಮೆಯಾಗಿದೆ, ಪೂರ್ತಿ ಹೋಗಿಲ್ಲ ಎಂದರ್ಥವೆ ?"

"ಹಾಗಲ್ಲ, ನಾನು ಹೇಳಿದ್ದು. ಆ ಸಂಸ್ಥೆಯ ಇಂದಿನ ಅವಸ್ಥೆಯ ಮಾತು ಬೇರೆ. ಅದನ್ನಲಂಕರಿಸಿರುವ ನಾಡಿನ ನಾಯಕರು ಹುಟ್ಟಿಸುವ ನೆನಪುಗಳ ದೃಷ್ಟಿಯಿಂದ ಆ ಮಾತು ಹೇಳಿದೆ."

ಇಂದಿರೆ ಮೊದಲ ಬಾರಿಗೆ ಅನಂತನೊಡನೆ ಗತಕಾಲದ ಸ್ಮೃತಿಗಳ ಕುರಿತು ಯಾವ ಸಂಕೋಚವೂ ಇಲ್ಲದೆ ಮಾತನಾಡತೊಡಗಿದ್ದಳು. ಅನಂತನಿಗೆ ಬೇಕಿದ್ದುದೂ ಅಷ್ಟೆ. ಇಂದಿರೆ ತನ್ನ ಮುಂದೆ ಆಕೆಯ ಹೃದಯದ ನೋವು ನಲಿವುಗಳನ್ನೆಲ್ಲ ತೋಡಿಕೊಳ್ಳಬೇಕು—ಆತ್ಮೀಯತೆಯ ನಡುವೆ ಸಂಕೋಚದ ಬೇಲಿ ಇರಬಾರದು, ಎಂಬ ಆಸೆಯನ್ನು ಈಗ ಇಂದಿರೆ ನಿಜವಾಗಿಸುತ್ತಿದ್ದಳು.

"೪೨ರ ಆಗಸ್ಟ್ ನೆನಪಾಗುತ್ತಿದೆಯೇನು ?"

ಇಬ್ಬರೂ ಬಂಡೆ ತಲಪಿ ತಮ್ಮ ನಿತ್ಯದ ಜಾಗದಲ್ಲಿ ಕುಳಿತಿದ್ದರು. ಇಂದಿರೆ ಸಮುದ್ರವನ್ನು ನೋಡುತ್ತಿರಲಿಲ್ಲ. ಅನಂತನ ಮುಖ ನೋಡಿ ಮಾತನಾಡುತ್ತಿದ್ದಳು.

"ಹೌದು. ಆಗಸ್ಟ್ ಎಂದೇನು? ಅದರ ಹಿಂದಿನ ತಿಂಗಳುಗಳೆಲ್ಲ ನೆನಪಿಗೆ ಬರುತ್ತಿವೆ. ಈ ನೆನಪು ಕೊಡುವ ದುಃಖ ಬೇಡವೆಂದೇ, ೪೫ ಸೆಪ್ಟಂಬರ್ ಅಧಿವೇಶನಕ್ಕೆ ನಾನು ಹೋಗಲಿಲ್ಲ. ಈ ಸಲ ಮಾತ್ರ ಬಂದೆ."

"ನನ್ನ ಒತ್ತಾಯಕ್ಕಾಗಿಯೆ?"

"ಇದ್ದರೂ ಇರಬಹುದು. ಆದರೆ ಆ ದುಃಖವೂ ಪ್ರಿಯವಾದುದೆಂದು ನಾನು ಬಂದಿರಲೂಬಹುದು."

"ಹಾಗಾದರೆ ನಿನ್ನನ್ನು ಬರುವಂತೆ ಒತ್ತಾಯಪಡಿಸಿ ನಾನು ದುಃಖ ಕೊಟ್ಟೆನೇ?"

"ಛೆ! ಛೆ! ನಾನು ಹಾಗೇ ಹೇಳಿದೆನೇ? ನೀವಾದರೂ ಜೊತೆಗಿರುವಿರಲ್ಲ ಎಂಬ ಧೈರ್ಯದಿಂದ ಬಂದೆ. ನಿನ್ನೆ ಅಪ್ಪ ಬಂದಿದ್ದರು. ಇವೊತ್ತು ಬರಲಿಲ್ಲ. ಹಾಗಲ್ಲದೆ ಹೋದರೂ, ನಾನು ಮೊದಲೇ ಹೇಳಿದೆನಲ್ಲ, ಸ್ಮೃತಿ ಕೊಡುವ ದುಃಖ ಪ್ರಿಯವಾದುದಾಗಿರಲೂಬಹುದು. ಇಲ್ಲವಾದರೆ ಹಿಂದಿನ ಇತಿಹಾಸಕ್ಕೆ ಜೀವನದಲ್ಲಿ ಏನಾದರೂ ಅರ್ಥವಿದೆಯೆ?"

"ಆದರೆ ನಲವತ್ತೆರಡರ ಕಾಂಗ್ರೆಸ್ ಅಧಿವೇಶನಕ್ಕೂ ಇಂದಿನದಕ್ಕೂ ತುಂಬ ಅಂತರವಿದೆಯಲ್ಲ?"

"ಅಂತರವೆ?" ಎಂದು ಹೇಳಿದ ಇಂದಿರೆ ಸಮುದ್ರದ ಕಡೆ ನೋಡಿದಳು. ಮುಸುಕು ಮುಸುಕಾದ ಕತ್ತಲೆ ಪಸರಿಸಲು ಆರಂಭಿಸಿತ್ತು. ಸಾಗರದ ಮೊರೆತ ಕೇಳುವಂತಿತ್ತು. ಇಂದಿರೆ ನಿಧಾನವಾಗಿ, ಬಾಯಿಂದ ಹೊರಡುವ ಮಾತು ಗಾಳಿಯನ್ನು ಭೇದಿಸುವಾಗ ಅದಕ್ಕೂ ನೋವಾಗಬಹುದು ಎಂಬಂತೆ ಎಚ್ಚರದಿಂದ ಹೇಳಿದಳು:

"ಹೌದು. ಅಂದು ಅವರು ಜೊತೆಗಿದ್ದರು. ಇಂದು ಇಲ್ಲ."

ಅನಂತ ನೆನೆಸಿಕೊಂಡುದು ಬಾಪುವನ್ನು. ಇಂದಿರೆ ಚಿಂತಿಸುತ್ತಿದ್ದುದು ಕೇಶವನ ಕುರಿತು. ಆಗಸ್ಟ್ ಎಂಟು, ನಲವತ್ತೆರಡರ ರಾತ್ರೆ ಬಾಪೂಜಿಯ ಚರಮಭಾಷಣವನ್ನು ತದೇಕಚಿತ್ತನಾಗಿ ಕೇಳುತ್ತಿದ್ದಂತೆ ತನ್ನ ಕೈಯನ್ನು ಮಿದುವಾಗಿ ಹಿಸುಕುತ್ತಿದ್ದ ಕೇಶವ.

'ಹೆದರಿಕೆಯಾಗುತ್ತಿದೆಯೇನು, ಇಂದೂ. ನಾಳೆ ಸಂಜೆಯೊಳಗೆ ಏನೆಲ್ಲ ಅನಾಹುತವಾಗಲಿದೆ ಗೊತ್ತೇ?'

ಭವಿಷ್ಯವನ್ನು ಗುರುತಿಸಿ ಕೇಶವ ಆಡಿದ್ದ ಮಾತು.

ಬರೇ ಅನಾಹುತ!

ಇಂದಿರೆಯ ಪ್ರೀತಿಯ ಸರ್ವಸ್ವವನ್ನು ಕೊಂಡೊಯ್ದು ಮಹಾಸಮರ. ಆಕೆ ನೆಚ್ಚಿಕೊಂಡು, ನಲಿದು ಒಲಿದು ವರಿಸಿದ್ದ ಪ್ರೀತಿಯ ಆರಾಧ್ಯದೇವತೆಯನ್ನು ಅಕಾಲಮೃತ್ಯುವಿಗೊಳಗಾಗುವಂತೆ ಮಾಡಿದ ರುದ್ರಕ್ರಾಂತಿ.

ಅಂದು ರಾತ್ರೆಯಿಡೀ ಇಂದಿರೆ ನಿದ್ರಿಸಿರಲಿಲ್ಲ. ತನ್ನ ತೋಳನ್ನೆ ದಿಂಬಾಗಿ ಮಾಡಿಕೊಂಡು ಮಲಗಿದ್ದ ಹೆಂಡತಿಯನ್ನು ಆ ಕೊನೆಯ ರಾತ್ರಿ ಸಂತಯಿಸುವುದೂ ಕೇಶವನಿಗೆ ಪ್ರಯಾಸದ ಕೆಲಸವಾಗಿತ್ತು. ಇಂದಿರೆಯ ತಲೆಯನ್ನು ನೇವರಿಸುತ್ತ ಕೇಶವ ಶೆಲ್ಲಿಯ ನೆನಪು ಮಾಡಿಕೊಂಡು ಹೇಳಿದ್ದ:

'ನೋಡು, ಇಂದೂ. ಇದು ನನ್ನ ಮಾತಲ್ಲ—ಶೆಲ್ಲಿಯದು:

'....O, wind! If winter comes,
Can spring be far behind?'

ಆದರೆ....!

ಇಂದಿರೆಗೆ ದೊರಕಿದುದು ವಸಂತವಲ್ಲ. ಚಿರಂತನ ದುಃಖದ ಆಷಾಢದ ರಾತ್ರೆ.

ಇಂದಿರೆಯ ಕಣ್ಣಲ್ಲಿ ನೀರು ತುಂಬುತ್ತಿತ್ತು. ಅನಂತ ಬಳಿಯಲ್ಲಿಯೇ ಕುಳಿತಿದ್ದನಾದರೂ ಮಸಕು ಮಸಕಾದ ಆ ಬೆಳಕಿನಲ್ಲಿ ಅದು ಕಾಣಿಸುವಷ್ಟು ಸ್ಪಷ್ಟವಾಗಿರಲಿಲ್ಲ. ಅವನು ಇನ್ನೂ ಬಾಪುವಿನ ಮರಣದ ಕುರಿತು ಇಂದಿರೆ ಚಿಂತಿಸುತ್ತಿದ್ದಾಳೆ ಎಂದೇ ತಿಳಿದಿದ್ದ.

"ಬಾಪುವಿನ ಕೊಲೆಯಿಂದ ನಿನಗಾಗಿರುವ ದುಃಖ ಎಷ್ಟೆಂದು ನನಗೆ ಗೊತ್ತಿದೆ, ಇಂದಿರಾ" ಎಂದು ಅನಂತ ಮೃದುವಾಗಿಯೇ ಹೇಳಿದ.

ಒಂದು ಕ್ಷಣ ಇಂದಿರೆ ಅನಂತ ಏನು ಮಾತನಾಡುತ್ತಿದ್ದಾನೆ, ತನ್ನ ಯೋಚನೆಯ ಗತಿಯ ಗುರುತೇ ಆತನಿಗೆ ತಿಳಿದಿಲ್ಲವೇ ಎಂದು ಯೋಚಿಸಿದಳು. ಆದರೆ ಅಷ್ಟರಲ್ಲೇ ಅನಂತ ಇನ್ನೊಂದು ಮಾತು ಹೇಳಿದ:

"ನಿನ್ನ ಹೃದಯದ ಏಕಾಂತತೆಯ ಪರಿಚಯ ನನಗಿದೆ, ಇಂದಿರಾ."

"ಹಾಗಿರುವುದೆಂದು ತಿಳಿದಿರುವುದರಿಂದಲ್ಲವೆ, ನಾನು ನಿಮ್ಮನ್ನು ಇಲ್ಲಿಯ ತನಕ ಕರೆದುಕೊಂಡು ಬರುತ್ತಿರುವುದು ?"

ಹಾಗೆ ಹೇಳುತ್ತಿರುವಾಗಲೇ ಅನಂತನಿಗೆ ಇಂದಿರೆಯ ಕಣ್ಣು ತುಂಬುತ್ತಿದ್ದುದು ಗಮನಕ್ಕೆ ಬಂದುದು. ಹೊರಗಿನ ಜಗತ್ತು ಆತನ ದೃಷ್ಟಿಪಥದಿಂದ ಮಾಯವಾಗುತ್ತಿತ್ತು. ತನ್ನ ಪ್ರೀತಿಯ ಜೀವ ಅಳುತ್ತಿದೆಯೆಂದಷ್ಟೆ ಆತನಿಗೆ ಗೊತ್ತು.

"ಇಂದಿರಾ—?"

"ಏನು ?"

"ನಿಜಕ್ಕೂ ನಿನಗೆ ನನ್ನಲ್ಲಿ ಅಷ್ಟು ಅಭಿಮಾನವಿದೆಯೇ ?"

"ಇಲ್ಲವಿದ್ದರೆ ಇಲ್ಲಿಗೆ ಕರೆದುತರುತ್ತಿದ್ದೆನೇ ? ನನ್ನ ಏಕಾಂತತೆಯನ್ನು ಆತ್ಮೀಯರಲ್ಲದವರ ಮುಂದೆ ಪ್ರದರ್ಶನಕ್ಕಿಡುತ್ತಿದ್ದೆನೇ ?"

ಅಸಹನೀಯ ದುಃಖದ ಸ್ಮೃತಿಸಂಚಯ, ಕೇಶವನ ಅಗಲಿಕೆಯ ದುಃಖದ ನೋವು, ಅನಂತನ ಸ್ನೇಹವನ್ನು ಆಶ್ರಯಿಸುವಂತೆ ಆ ಮನಸ್ಸಿನ ಗೊಂದಲದ ಅವಸ್ಥೆಯಲ್ಲಿ ಇಂದಿರೆಯಿಂದ ಆಡಿಸಿದ ಮಾತುಗಳು.

ಅನಂತನ ಜಗತ್ತಿನಲ್ಲಿ ಆಗ ಉಳಿದಿದ್ದುದು ತನ್ನ ಹೊರತು ಒಂದೇ ಒಂದು ವ್ಯಕ್ತಿ—ಇಂದಿರೆ !

ನೆನಹಿನ ಒತ್ತಡದಿಂದ ಇಂದಿರೆಗೆ ಬಿಕ್ಕಳಿಕೆ ಬಂದಾಗ, ಅನಂತನಿಗೆ ತಾನೇನು ಮಾಡುತ್ತಿದ್ದೇನೆಂದು ತಿಳಿಯದೆ ಹೋಯಿತು. ತೀರ ಸಮೀಪ ಸರಿದಿದ್ದಾತ, ಇಂದಿರೆಯ ಕೈ ಹಿಡಿದು ಆಕೆಯನ್ನು ಬರಸೆಳೆದು ಎದೆಗವುಚಿಕೊಂಡ. ಇಷ್ಟು ದಿನದ ಸಂಯಮದ ಕಟ್ಟೆ ಒಡೆದಿತ್ತು. ತಾನು ಬಯಸಿದ್ದ, ತನ್ನಲ್ಲಿ ಪ್ರೀತಿಯಿದೆಯೆಂದು ತಿಳಿದಿದ್ದ, ಜೀವ ಬೇಕಾಗಿತ್ತು.

"ಅಳಬಾರದು, ನನ್ನ ಇಂದಿರಾ...." ಎಂದು ಆತನ ತೋಳಸೆರೆಯಲ್ಲಿ ಸಿಕ್ಕುಬಿದ್ದಿದ್ದ ಇಂದಿರೆಯ ತುಟಿಯನ್ನೂ, ತುಂಬುತ್ತಿದ್ದ ಕಣ್ಣುಗಳನೂ ಅನಂತ ಚುಂಬಿಸಿದ.

ಅನಂತನ ಎದೆ ವೇಗವಾಗಿ ಹೊಡೆದುಕೊಳ್ಳುತ್ತಿತ್ತು. ಇಂದಿರೆಯ ಎದೆಯ ಬಡಿತವನ್ನು ತಿಳಿಯುವುದೂ ಸಾಧ್ಯವಿತ್ತು.

ಆದರೆ ಒಂದೇ ಕ್ಷಣ.

ಇಂದಿರೆ ತನ್ನ ಶಕ್ತಿಯೆಲ್ಲವನ್ನುಪಯೋಗಿಸಿಕೊಂಡು ಅನಂತನ ತೋಳ

ಸೆರೆಯಿಂದ ಹೊರಬಂದಳು. ತಾನು ಯಾವ ಜಗತ್ತಿನಲ್ಲಿರುವೆನೆಂಬ ಪ್ರಜ್ಞೆ ಆಕೆಯಲ್ಲಿದ್ದಂತಿರಲಿಲ್ಲ.

ಉಕ್ಕಿ ಉಕ್ಕಿ ಬರುತ್ತಿದ್ದ ಅಳು ಒಮ್ಮೆಂದೊಮ್ಮೆಗೆ ನಿಂತಿತು. ರಕ್ತದ ಒತ್ತಡದಿಂದ ಕೆಂಪೇರಿದ್ದ ಮುಖವನ್ನೂ, ತೊಯ್ದ ಕಣ್ಣುಗಳನ್ನೂ, ಅನಂತ ಮುದ್ದಿಟ್ಟಿದ್ದ ತುಟಿಗಳನ್ನೂ ಇಂದಿರೆ ತನ್ನ ಸೀರೆಯ ಸೆರಗಿನಿಂದ ಒರೆಸಿ ಕೊಂಡಳು.

ಆಕೆಯ ತಲೆಯಲ್ಲಿ ವಿಚಿತ್ರ ಕೋಲಾಹಲವೆದ್ದಿತ್ತು. ತನಗರಿಯದೇನೆ ಇಂದಿರೆ ಎದ್ದು ನಿಲ್ಲಲು ಯತ್ನಿಸಿದಳು. ಅಲ್ಲಿಯೇ ಕುಸಿದು ಬಿದ್ದಳು. ಅನಂತ ಹಿಡಿಯದಿದ್ದರೆ ತಲೆ ಬಂಡೆಗೆ ತಗಲಿ ಹೋಳಾಗುತ್ತಿತ್ತು.

ಬಿದ್ದ ಇಂದಿರೆಯನ್ನು ಒಂದು ವಿಚಿತ್ರ ಮೌನ ಆವರಿಸಿತು.

ಇಂದಿರೆ ಮೂರ್ಛೆ ಹೋದಳೇ ಎಂದು ಗಾಬರಿಯಿಂದ ಅನಂತ ಬಳಿ ಯಿಂದಲೇ ತುಸು ನೀರು ತಂದು ಆಕೆಯ ಕಣ್ಣು ಮುಖಗಳಿಗೆ ಚಿಮುಕಿಸಿದ.

ಐದು ನಿಮಿಷಗಳ ತನಕ ಅನಂತ ಹೆದರಿಕೊಂಡು ಇಂದಿರೆಯನ್ನು ಉಪಚರಿಸುತ್ತಿದ್ದ. ಆಮೇಲೆ ಇಂದಿರೆ ಮೆಲ್ಲಮೆಲ್ಲನೆ ಕಣ್ಣು ತೆರೆದಳು. ಉಪಚರಿಸುತ್ತಿದ್ದ ಅನಂತನ ಗುರುತು ಸಿಕ್ಕಿದೊಡನೆ ಎದ್ದು ಕುಳಿತುಕೊಳ್ಳಲು ಪ್ರಯತ್ನಿಸಿದಳು. ಹಾಗೆ ಕುಳಿತುಕೊಂಡವಳೇ ನೆಟ್ಟನೋಟದಿಂದ ಅನಂತ ನನ್ನು ನೋಡತೊಡಗಿದಳು.

"ಹೋಗೋಣವೆ ? ಅಷ್ಟು ಶಕ್ತಿಯಿದೆಯೇ ?" ಎಂದು ಅನಂತ ಅಧೀರ ನಾಗಿಯೇ ಕೇಳಿದ.

ತಾನು ಮಾಡಿದುದು ಅನುಚಿತ ಕೃತಿಯೆಂದು ಎದೆ ಮೊರೆಯಿಡು ತ್ತಿತ್ತು. ಅದನ್ನು ಒಪ್ಪಿಕೊಂಡು ಇಂದಿರೆಯಲ್ಲಿ ಕ್ಷಮಿಸೆಂದು ಕೇಳುವ ಧೈರ್ಯ ಮಾತ್ರ ಅನಂತನಲ್ಲಿ ಕಾಣೆ.

ಇಂದಿರೆ ಅವನ ಮಾತನ್ನು ಗಮನಿಸದೆ ಅಲ್ಲಿಂದೆದ್ದು ಸಮೀಪದ ಬಸ್ ದಾರಿ ಸಿಗುವ ತನಕವೂ ಹಿಂದೆ ಕೂಡ ತಿರುಗಿ ನೋಡದೆ ನಡೆದಳು. ಬಸ್ ನಿಲ್ಲುವ ಜಾಗ ಬಂದೊಡನೆ ಹಿಂದಿರುಗಿ ತನ್ನನ್ನನುಸರಿಸಿ ಬಂದಿದ್ದ ಅನಂತ ನೊಡನೆ,

"ನಮಸ್ತೇ. ನಾನು ಇಲ್ಲಿಂದ ಮನೆಗೆ ಹೋಗುತ್ತೇನೆ. ದಯವಿಟ್ಟು

ಈ ಜನ್ಮದಲ್ಲಿ ನನ್ನನ್ನು ಇನ್ನೊಮ್ಮೆ ನೋಡುವ ಪ್ರಯತ್ನ ಮಾಡಬೇಡಿ" ಎಂದಳು.

ಅಷ್ಟರಲ್ಲಿ ಬಸ್ ಬಂತು. ಇಂದಿರೆ ಹತ್ತಿ ಹೋದಳು.

ರಾತ್ರಿ ಹತ್ತು ಘಂಟೆಯ ತನಕವೂ ಅನಂತ ಅಲ್ಲಿಯೇ ನಿಂತಿದ್ದ—ಪಥಭ್ರಾಂತನಂತೆ.

೩೫

ರಾತ್ರಿ ಎರಡು ಘಂಟೆಗೆ ಅನಂತ ಮನೆ ತಲುಪಿದ. ಮನೆ ಸೇರಿದುದು ಹೇಗೆಂದು ಅವನಿಗೆ ತಿಳಿದಿರಲಿಲ್ಲ. ತಿಳಿಯುವಷ್ಟು ಪ್ರಜ್ಞೆ ಮನಸ್ಸಿಗೆ ಉಳಿದಿರಲೆ ಇಲ್ಲ. ನಿತ್ಯರೂಢಿಯ ನಿರ್ದೇಶನದಂತೆ ಕಾಲೆಳೆದಂತೆ ಸಾಗಿ—ಕೊನೆಗೆ ಸೇರಿದ್ದುದು ಮನೆಗೆ.

ರಾತ್ರಿಯ ಗಂಭೀರ ಮೌನ ಅನಂತನ ಮನಸ್ಸಿನ ಕೋಲಾಹಲದ ಸಂಗೀತಕ್ಕೆ ಶ್ರುತಿಹಿಡಿದಿತ್ತು. ಬಂದು ಬಾಗಿಲಿಕ್ಕಿಕೊಂಡ ಅನಂತ ಬಟ್ಟೆ ಕಳಚಿ ನೋರಿಯ ಕಡೆ ಧಾವಿಸಿ, ನಳ ತಿರುಗಿಸಿ, ಆ ನೀರಿನ ಪ್ರವಾಹಕ್ಕೆ ತಲೆಯೊಡ್ಡಿದ.

ಸಿಡಿಯುವಂತಿದ್ದ ತಲೆಯ ಉರಿಗೆ ಉಪಶಮನ ಸಿಗಲೆಂದು ನೀರಿನ ಧಾರೆ. ಆದರೆ ಅರ್ಧತಾಸಿನ ಈ ಕೆಲಸವೂ ಫಲಕಾರಿಯಾಗಲಿಲ್ಲ. ಅನಂತನಿಗೆ ದೊರಕಿದುದು ಥಂಡಿ.

ಕೈಗೆ ಸಿಕ್ಕಿದ ಯಾವುದೋ ಬಟ್ಟೆಯಿಂದ, ಮಿದುಳಿನ ಉತ್ಪಾತವನ್ನು, ಶಕ್ತಿಯನ್ನುಪಯೋಗಿಸಿಯೇ ನಿಲ್ಲಿಸುತ್ತೇನೆ ಎಂದು ಭಾವಿಸಿ ತಲೆಯೊರಸಿಕೊಳ್ಳುತ್ತಿದ್ದ ಅನಂತನಿಗೆ, ಆ ಬಟ್ಟೆಯ ಮಿದುತನ, ತುಸು ಸಮಾಧಾನ ಕೊಟ್ಟಿತು. ನೀರು ಒಣಗಿಹೋದರೂ, ಆತನ ತಲೆಯೊರಸುವ ವಿಧಿ ನಿಲ್ಲಲಿಲ್ಲ. ಅದು ನಿಂತಾಗ, ಆ ಬಟ್ಟೆ ತಲೆಯಿಂದ ಜಾರಿ ಕೆಳಗೆ ಬಿದ್ದಾಗ, ದೀಪದ ಬೆಳಕಿನಲ್ಲಿ ಅನಂತನಿಗೆ ಕಂಡುದು ಭಾರತಿಯ ಹಳೆಯ ಸೀರೆಯೊಂದು.

ಅನಂತನಿಗೆ ತಲೆಯೊರಸಲು ದೊರಕಿದ ಅಂಗವಸ್ತ್ರ—ಭಾರತಿಯ ಸೀರೆ.

ಆ ಸೀರೆಯನ್ನು ಕಾಲಿನಿಂದಲೇ ದೂರ ಒಗೆದು ಅನಂತ ಓಡಿಹೋಗಿ ಅಡುಗೆಯ ಮನೆಯ ಕದವಿಕ್ಕಿಕೊಂಡು ಬಂದು ತನ್ನ ಕೋಣೆಯಲ್ಲಿ, ತನ್ನ ಮೇಜಿನ ಬಳಿ ಕುಳಿತ.

ಮನಸ್ಸಿನ ಉದ್ವಿಗ್ನತೆ ಕ್ಷಣದಿಂದ ಕ್ಷಣಕ್ಕೆ ಹೆಚ್ಚುತ್ತಿತ್ತು.

ಮೇಜಿನಲ್ಲಿ ಕಣ್ಣಮುಂದಿದ್ದುದು ಎರಡು ಕಾಗದಗಳು—ಎರಡು ದಿನಗಳ ಹಿಂದೆ ಬಂದಿದ್ದ ಎರಡು ಕಾಗದಗಳು. ಒಂದು ಭಾರತಿಯದು; ಇನ್ನೊಂದು ಮಾವನದು. ಭಾರತಿಯ ಕಾಗದವನ್ನು ಆತ ತೆರೆದು ನೋಡಿರಲೂ ಇಲ್ಲ. ಹಾಗೇ ಉಳಿದಿತ್ತು.

ಅನಂತ ಅದನ್ನು ಬಿಡಿಸದೇನೇ ಚೂರುಚೂರು ಮಾಡಿದ. ಕಿಟಕಿಯಿಂದ ದೂರ ಬಿಸಾಡಿದ. ಸುಂಟರಗಾಳಿಗೆ ಸಿಕ್ಕ ಒಣ ಎಲೆಗಳಂತೆ, ಆ ರಾತ್ರಿಯಲ್ಲೂ ಕಾಗದದ ಚೂರುಗಳು ಹಾರುವುದನ್ನು ಕಾಣುವುದು ಸಾಧ್ಯವಿತ್ತು.

ಮಾವನ ಕಾಗದಕ್ಕೂ ಅದೇ ಸ್ವಾಗತ ತೋರಿಸಬೇಕೆಂದು ಅನಂತ ಕೈ ಮುಂದೆ ಮಾಡಿದಾಗ, ಅದು ತನ್ನ ತಾನೆ ಹಿಂದೆ ಬಂತು.

ಒಡೆದು ಓದಿದ್ದ ಕಾಗದ ಅದು.

ಹೊಸದೊಂದು ಆಸೆಯ ಪ್ರಪಂಚವನ್ನು ಕಣ್ಣಮುಂದೆ ತಂದಿದ್ದ, ತನ್ನ ಬಾಳುವೆಯನ್ನು ರೂಪಿಸಲು ಪ್ರಧಾನ ಪಾತ್ರ ವಹಿಸಿದ್ದ ವ್ಯಕ್ತಿಯಿಂದ ಬಂದ ಪ್ರೀತಿಯ ಕಾಗದ :

'ಕೆಲಸ ಸಿಗುವುದು ಸಾಧ್ಯವೇ ಇಲ್ಲ ಎಂದಾದರೆ, ಊರಿಗೆ ಬಾ. ಇನ್ನಾದರೂ ಬಿ. ಎ. ಮುಗಿಸುವ ಯೋಚನೆ ನಿನಗಿದೆಯಾದರೆ, ನನ್ನ ಇಚ್ಛೆಯಂತೆ 'ಲಾ' ಓದುವ ಆಸೆಯಿದೆಯಾದರೆ ನನ್ನ ಸಹಾಯ, ತೆರೆದೇ ಇದೆ. ಇಲ್ಲಿ ಸಂಕೋಚದ ಮಾತೇ ಇಲ್ಲ. ನಿನಗೆ ಯುಕ್ತ ಕಂಡಂತೆ ಮಾಡು. ನಿನ್ನ ಕರ್ತವ್ಯದ ಕ್ಷೇತ್ರದಲ್ಲಿ ನಾನು ಅಡ್ಡಗಾಲು ಹಾಕುತ್ತಿರುವೆನೆಂದು ಮಾತ್ರ ತಿಳಿಯಬೇಡ....'

ಯಾವ ಸಂಭ್ರಮಕ್ಕೆಂದು—ಊರಿಗೆ ಹೋಗಬೇಕಾಗಿದೆ? ಮಾವನಿಗೆ ಮುಖ ತೋರಿಸಬೇಕಾಗಿದೆ? ಭಾರತಿಯನ್ನು ಕಾಣಬೇಕಾಗಿದೆ?

ಮಾವನ ಕಾಗದವೂ ಭಾರತಿಯ ಕಾಗದದ ದಾರಿಯನ್ನನುಸರಿಸಿತು.

ಆ ರಾತ್ರಿ ಮೂರು ಘಂಟೆಯ ಹೊತ್ತಿಗೂ ಅನಂತ ಓದಲೆಂದು ಶೆಲ್ಫಿನಿಂದ ಕೈಗೆ ಸಿಕ್ಕಿದ ಏಳೆಂಟು ಪುಸ್ತಕಗಳನ್ನು ತಂದು ಮೇಜಿನ ಮೇಲಿರಿಸಿಕೊಂಡ : ಇತಿಹಾಸ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ರಾಜಕಾರಣ....

ಅವುಗಳ ನಡುವೆ ಇಂದಿರೆಯ ಮನೆಯಿಂದ ಎರವಲು ತಂದಿದ್ದ ಒಂದು ಪುಸ್ತಕ.

ಪುಸ್ತಕಗಳನ್ನೆಲ್ಲ ಬದಿಗೆ ದೂಡಿ, ಅನಂತ ಮೇಜಿನ ಮೇಲೆ ತಲೆಯಿರಿಸಿ ಮಲಗಿಕೊಂಡ.

ಉದ್ವಿಗ್ನವಾದ ಮನಸ್ಸು, ಹೊಡೆದುಕೊಳ್ಳುತ್ತಿದ್ದ ಎದೆ, ಸಿಡಿಯುವ ತಲೆ—

ಎರಡೂ ಕೆನ್ನೆಗಳಿಗೆ ಯಾವುದಾದರೂ ಘನಪದಾರ್ಥದಿಂದ ಹೊಡೆದು ಕೊಳ್ಳಬೇಕು ಎನ್ನಿಸುವಂತಿತ್ತು. ಇಡೀ ದೇಹದಾದ್ಯಂತ ನೋವು ವ್ಯಾಪಿಸಿತ್ತು. ಪ್ರಯತ್ನಪೂರ್ವಕ ಒಂದು ಮಧುರ ಸ್ಮೃತಿಯನ್ನು ಹತ್ತಿಕ್ಕಲು ಅನಂತ ಮಾಡುತ್ತಿದ್ದ ಹೋರಾಟ.

ತನ್ನ ಕುರ್ಚಿ ಬಿಟ್ಟೆದ್ದು, ಅನಂತ ಹಾಸಿಗೆಯ ಮೇಲೆ ಬೋರಲು ಬಿದ್ದುಕೊಂಡು ಎರಡೂ ಕೆನ್ನೆಗಳನ್ನು ಕೈಗಳಿಂದ ಬಲವಾಗಿ ಒತ್ತಿ ಹಿಡಿದು ಕೊಂಡ.

ಆದರೂ ಈ ವಿಚಾರವಿಪ್ಲವ ನಡೆದೇ ಇತ್ತು.

ಒಮ್ಮೆ ಕಣ್ಣು ತುಂಬ ನೀರು ತುಂಬಿಯಾದರೂ, ಈ ಅವಸ್ಥೆಗೆ ಮುಗಿತಾಯ ಬರಬಾರದೇ ಎಂದು ಅನಂತ ಯೋಚಿಸಿದನಾದರೂ, ಅಳು ಬರುತ್ತಿರಲಿಲ್ಲ.

ಅಳಲು ಕಾರಣವಾದರೂ ಏನಿದೆ?

ಪುನಃ ಎದ್ದು ಅನಂತ ಕೋಣೆಯ ಸುತ್ತ ಶತಪಥ ತಿರುಗಲಾರಂಭಿಸಿದ. ದೈಹಿಕ, ಮಾನಸಿಕ ಪರಿಶ್ರಮ ಜೊತೆ ಸೇರಿದರೂ ಅನಂತನಿಗೆ ಆಯಾಸದ ಕಲ್ಪನೆಯಿಲ್ಲ; ನಿದ್ರಿಸುವ ಮಾತೇ ಇಲ್ಲ. ರಾತ್ರೆ ಘಂಟೆ ನಾಲ್ಕಾದರೂ ಮನೆಯ ದೀಪ ಉರಿಯುತ್ತಲೇ ಇತ್ತು. ಅನಂತ ಹುಚ್ಚನಂತೆ ತಿರುಗುತ್ತಲೇ ಇದ್ದ.

ಕೊನೆಗೂ ಆತ ಸೋತ.

ಆ ನೆನಹು—ಆ ಮಧುರ ಸ್ಮೃತಿ ಓಡಿಯೋಡಿ ಬಂತು—ದಂಡೆಯನ್ನು ಅಪ್ಪಲು ಬರುವ ಸಾಗರದಂತೆ.

ತನ್ನ ತೋಳ್ಸೆರೆಯಲ್ಲಿ ಬಂಧಿತೆಯಾದ ಪ್ರಿಯತಮೆ—ಇಂದಿರೆ. ಆ ಮಧುರ ಮಿಲನದಲ್ಲಿ, ಪ್ರೀತಿಯ ಚುಂಬನದಲ್ಲಿ, ಸ್ನೇಹದ ಆಲಿಂಗನದಲ್ಲಿ ದೊರಕಿದ್ದ ಜನ್ಮಜನ್ಮಾಂತರದ ಪರಿಪೂರ್ಣತೆ.

ತಿರುಗುತ್ತಿದ್ದ ಅನಂತ, ಬಂದು ಹಾಸಿಗೆಯ ಮೇಲೆ ಕುಳಿತು, ಅಂದು ಸಂಜೆ ಇಂದಿರೆಯನ್ನು ಮುದ್ದಿಟ್ಟಿದ್ದ ತನ್ನ ತುಟಿಗಳನ್ನು ಸವರಿಕೊಂಡ.

ಆಮೇಲಿನ ಘಟನೆಗಳೆಲ್ಲ ಅನುಕ್ರಮವಾಗಿ, ವ್ಯವಸ್ಥಿತವಾಗಿ, ಮನಸ್ಸಿನ ಮುಂದೆ ಹಾಯತೊಡಗಿದವು.

'ದಯವಿಟ್ಟು ಈ ಜನ್ಮದಲ್ಲಿ ಇನ್ನು ನನ್ನನ್ನು ನೋಡುವ ಪ್ರಯತ್ನ ಮಾಡಬೇಡಿ.'

ಎಷ್ಟು ಸಹಜವಾಗಿ, ಎಷ್ಟು ಸುಲಭವಾಗಿ, ಬಂದ ಮಾತುಗಳು. ಭಯಂಕರ ವೇಗದಿಂದ ಬೀಸುತ್ತಿದ್ದ ಬಿರುಗಾಳಿ ಒಮ್ಮಿಂದೊಮ್ಮೆಗೆ ನಿಂತಂತೆ.

ಇನ್ನು ಇಂದಿರೆಯನ್ನು ಕಾಣುವುದು ಸಾಧ್ಯವಿಲ್ಲ.

ಹತ್ತು ಘಂಟೆಗಳಕಾಲ ಹೊಯ್ದಾಡಿದ ಮನಸ್ಸು ಕೊನೆಗೆ ಅರಿತುಕೊಂಡ ಸತ್ಯ—ಇನ್ನು ಇಂದಿರೆಯನ್ನು ಕಾಣುವುದು ಸಾಧ್ಯವಿಲ್ಲ.

ಈ ತಿಳಿವಳಿಕೆ ಮೂಡಿದಾಗ, ಈ ದುಃಖ ಮನವರಿಕೆಯಾದಾಗ, ಅನಂತನ ದೈಹಿಕ ಪರಿಶ್ರಮ ಫಲಕೊಡಲಾರಂಭಿಸಿತು. ಅಲ್ಲೇ ಬಾಗಿದ ದೇಹ ಒರಗಿಕೊಂಡಿತು. ಉದ್ವಿಗ್ನ ಮನಸ್ಸು ಕೂಡ ವಿಶ್ರಾಂತಿಯನ್ನು ಬಯಸಿತು. ಒಂದು ಭ್ರಾಂತಿಯ ಸಾಮ್ರಾಜ್ಯದಲ್ಲಿ, ಹುಚ್ಚುಹುಚ್ಚು, ಅರ್ಥಹೀನ ಕನಸುಗಳ ಸೆಲೆಯಲ್ಲಿ ಅನಂತನಿಗೆ ನಿದ್ದೆ ಬಂತು.

ಹಗಲಿಗೂ ಅನಂತನ ಕೊಟಡಿಯ ದೀಪ ಉರಿಯುತ್ತಲೇ ಇತ್ತು. ಕುತೂಹಲಪ್ರೇರಿತರಾದ ನೆರೆಕರೆಯ ಒಬ್ಬಿಬ್ಬರು ಬಂದು ಬಾಗಿಲು ಬಡಿದರೂ ಅನಂತನಿಗೆ ಎಚ್ಚರವಾಗಲಿಲ್ಲ. ಮತ್ತೊಬ್ಬ ಕಿಟಕಿಯಲ್ಲಿ ಒದರಿಕೊಂಡು, "ದೀಪ ಆರಿಸಬಾರದೆ?" ಎಂದು ಕೇಳಿದಾಗ ಅನಂತ ಎದ್ದು, ದೀಪ ಆರಿಸಿ ಬಂದು ಪುನಃ ಬಿದ್ದುಕೊಂಡ.

ಮತ್ತೆ ಅನಂತ ಎದ್ದುದು ರಾತ್ರಿ ಏಳು ಘಂಟೆಗೆ.

ಹಸಿದ ಹೊಟ್ಟೆ ಕೂಗಿಕೊಳ್ಳುತ್ತಿತ್ತು. ಕಷ್ಟದಿಂದಲಾದರೂ ಅನಂತ ಒಂದಿಷ್ಟು ಗಂಜಿ ಬೇಯಿಸಿಕೊಂಡು ಊಟ ಮಾಡಿದ. ಹಗಲಿಡೀ ನಿದ್ರೆಯಾಗಿತ್ತು. ಪ್ರೆಸ್ಸಿನ ಯೋಚನೆಯೇ ಇಲ್ಲ ತಾನು ಅವಶ್ಯ ಹೋಗಿ ಭಾಗ ವಹಿಸಬೇಕಾಗಿದ್ದ ಒಂದು ಯೂನಿಯನ್ ಕಾರ್ಯಕರ್ತರ ಸಭೆ ಯಾವ ರೀತಿ ಜರಗಿತೆಂದು ತಿಳಿಯುವಂತಿರಲಿಲ್ಲ. ತಾನು ಬಾರದುದಕ್ಕೆ ಸೋಮಯಾಜಿಗಳು ಯಾವ ರೀತಿಯ ಕಾರಣ ಕಲ್ಪಿಸುವರೆಂದು ಯೋಚಿಸಬೇಕಿತ್ತು.

ಆದರೆ ಈಗ ಯಾವ ಯೋಚನೆಯೂ ಅಪ್ರಸ್ತುತವೆನ್ನುವಂತೆ ಬುದ್ಧಿಗೆ ದಿಗ್ಬಂಧನ ಹಾಕಿದಂತಿತ್ತು.

ತನ್ನ ಬುದ್ಧಿಯೇ ತನ್ನ ಸ್ವಾಧೀನದಲ್ಲಿಲ್ಲವೆನ್ನುವಂತೆ ಅನಂತ ಎರಡು ದಿನಗಳನ್ನು ಮನೆಯಲ್ಲಿಯೇ ಕಳೆದ. ಹೊರಗೆ ಹೋಗಬೇಕೆಂದು ಇಚ್ಛಿಸಿದರೂ ಸಾಧ್ಯವಾಗುವಂತಿರಲಿಲ್ಲ. ಹತ್ತು ಹೆಜ್ಜೆ ನಡೆಯುವಾಗಲೇ ಆಯಾಸದಿಂದ ಕುಳಿತುಬಿಡುವ ಎನಿಸುತ್ತಿತ್ತು. ಅದೂ ದಾರಿಯಲ್ಲಿ ಯಾವುದಾದರೊಂದು ಯೋಚನೆ ತಲೆ ತಿನ್ನತೊಡಗಿದರೆ, ದಾರಿಯಲ್ಲೇ ಮಲಗಬೇಕಾದ ಪ್ರಸಂಗ ಬರಬಹುದೆಂಬ ಅಧೈರ್ಯವೂ ಮನಸ್ಸಿನಲ್ಲಿ ತಲೆದೋರಿತ್ತು.

ಸೋಮಯಾಜಿಗಳೊಬ್ಬರೇ 'ಕಹಳೆ'ಯ ಎಲ್ಲ ಕೆಲಸಗಳನ್ನು ಹೇಗೆ ನಡೆಸಿಕೊಂಡು ಹೋಗುವರೋ ಎಂಬ ಆಲೋಚನೆ ಕಾಡುತ್ತಿದ್ದಿತಾದರೂ ಅನಂತನಿಗೆ ನಿವೃತ್ತಿಯ ಮಾರ್ಗ ದೊರಕಲಿಲ್ಲ.

ಮರುದಿನ ಬೆಳಿಗ್ಗೆ, ಸೋಮಯಾಜಿಗಳೇ ಶಂಕರಸೆಟ್ಟಿಯನ್ನು ಕರೆದು ಕೊಂಡು ಅನಂತನ ಮನೆಗೆ ಬಂದರು.

ಬಾಗಿಲು ಶಬ್ದವಾದಾಗ ಅನಂತ ಹಾಸಿಗೆಯಲ್ಲಿ ಬಿದ್ದುಕೊಂಡಿದ್ದವನು, ಮಲಗಿದಲ್ಲಿಂದಲೇ "ಯಾರು ?" ಎಂದ.

"ಬಾಗಿಲು ತೆಗೆ, ಅನಂತಾ" ಎಂದ ಸೋಮಯಾಜಿಗಳ ದನಿ ಕೇಳಿಸಿ ದಾಗ ಅನಂತ ಲಗುಬಗೆಯಿಂದೆದ್ದು ಹೋಗಿ ಬಾಗಿಲು ತೆರೆದ.

ಸೋಮಯಾಜಿಗಳು ಬಾಗಿಲಲ್ಲೇ ನಿಂತರು.

ನಿರುದ್ಯೋಗಿಯಾಗಿ ಅಲೆದಾಡುತ್ತಿದ್ದ ಅನಂತನಲ್ಲಿಯೂ ಅವರು ಈ ರೀತಿಯ ಬದಲಾವಣೆಯನ್ನು ಕಂಡಿರಲಿಲ್ಲ. ಜೇಲಿನಿಂದ ಬಿಡುಗಡೆಯಾಗಿ ಬಂದಾಗಲೂ ಅನಂತ ಈ ರೀತಿಯಿದ್ದಿರಲಿಲ್ಲ. ಮೂರೇ ದಿನಗಳಲ್ಲಿ ಇಂಥ ವಿಲಕ್ಷಣ ಬದಲಾವಣೆಯಾಗುವಂತೆ ಅನಂತನಿಗೇನಾಯಿತು ಎಂದು ಸೋಮ ಯಾಜಿಗಳು ಯೋಚಿಸಬೇಕಾಗಿ ಬಂತು.

ಕೆದರಿದ ತಲೆಕೂದಲು. ಸುಕ್ಕುಗಟ್ಟಿದ್ದಂತೆ ತೋರುತ್ತಿದ್ದ ಕೆನ್ನೆಗಳು. ಹೂತುಹೋಗಿದ್ದ ಕಣ್ಣುಗಳು. ಕ್ಷೌರ ಕಾಣದ ಮುಖ. ಬನಿಯನ್ ಕೂಡ ಧರಿಸಿರಲಿಲ್ಲವಾಗಿ, ಎಲುಬುಗಳನ್ನೆ ಒತ್ತಿ ತೋರಿಸುತ್ತಿದ್ದ ಅನಂತನ ಎದೆ.

"ಏನಾಯಿತು, ಅನಂತಾ ?"

ತನ್ನ ಪ್ರೀತಿಯ ಪುತ್ರನಂತಿದ್ದ ರಾಜೀವನ ಅಕಾಲ ಮರಣದ ನೆನಪು ಬಂದು, ಸೋಮಯಾಜಿಗಳು ಕರುಣೆಯುಕ್ಕುತ್ತಿದ್ದ ದನಿಯಲ್ಲೆ ಕೇಳಿದರು.

ಅನಂತ ಏನೆಂದು ಉತ್ತರಿಸಿಯಾನು ?

'ಸಂಜೀವರಾಯರ ಮಗಳಿಂದಾಗಿ ಈ ಅವಸ್ಥೆ' ಎಂದು ಹೇಳುವುದೆ ?

ಸೋಮಯಾಜಿಗಳನ್ನು ಕಂಡೊಡನೆ ಅನಂತನ ಹೃದಯ ಮೂರು ದಿನಗಳಿಂದ ಅನುಭವಿಸುತ್ತಿದ್ದ ದುಃಖ ಒಮ್ಮೆಗೇ ಉಕ್ಕಲು ಆರಂಭವಾಯಿತು. ಅವನ ಪರಿಚಿತ ಜಗತ್ತಿನಲ್ಲಿ, ಪರಿಚಿತ ಆದರ್ಶವರ್ತುಲದಲ್ಲಿ, ಆತ್ಮೀಯವಾಗಿದ್ದ ಬಂಧು, ಬಳಿ ಬಂದಾಗ, ಎಲ್ಲ ನೋವನ್ನು, ಎಲ್ಲ ದುಃಖವನ್ನು ಇವರೆದಿರು ತೋಡಿಕೊಳ್ಳಬೇಕು ಎಂಬುದೊಂದು ಆಸೆ ಮೊಳೆತುದರಿಂದ ಅನಂತನ ದುಃಖ ಮತ್ತೆ ಉಕ್ಕಲು ಆರಂಭಿಸಿತು. ಆದರೆ ಇದಿರಿಗೆ ಕಿರಿಯನಾದ ಶಂಕರಸೆಟ್ಟಿ ಇದ್ದುದರಿಂದಲೂ ತನ್ನ ಮನಸ್ಸಿನ ಅವಸ್ಥೆಯನ್ನು, ಹೃದಯಕ್ಕಾದ ಅವಹೇಳನವನ್ನು ಯಾರಿದಿರೂ ಹೇಳಲಾರೆ ಎಂಬ ಭಾವನೆ ಬಲವಾದುದರಿಂದಲೂ ಅನಂತ ಸುಮ್ಮನಾದ. ಆದರೆ ಬಹಳ ಕಾಲ ಸೋಮಯಾಜಿಗಳ ಪ್ರಶ್ನಾರ್ಥಕ ದೃಷ್ಟಿಯನ್ನು ಇದಿರಿಸಿ ಮೌನ್ಯಗೆ ಕುಳಿತಿರುವುದು ಸಾಧ್ಯವಿರಲಿಲ್ಲ.

"ಸೌಖ್ಯವಿಲ್ಲ" ಎಂದ.

ವಿಚಿತ್ರ ಭೀತಿಯಿಂದ ಕಂಗಾಲಾದ ಸೋಮಯಾಜಿಗಳು, ರಾಜೀವನನ್ನು ನೆನೆಸಿಕೊಳ್ಳುತ್ತಿದ್ದಂತೆಯೇ ಕೇಳಿದರು :

"ಎಷ್ಟಿದೆ ಜ್ವರ....ಹೋಗು, ಮಲಗು."

"ಜ್ವರವೇನಿಲ್ಲ. ಬರೇ ಪಿತ್ತದ ಉಪದ್ರ" ಎಂದು ಅನಂತ ಹೇಳಿದಾಗ ಸೋಮಯಾಜಿಗಳಿಗೆ ತುಂಬ ಸಮಾಧಾನವಾಯಿತು.

"ಜ್ವರವಿಲ್ಲವಾದರೆ ಬಂದು ತಿಳಿಸಬಾರದಿತ್ತೆ ? ಪ್ರಿನ್ಸಿಗಾದರೂ ಟೆಲಿಫೋನ್ ಮಾಡಬಾರದಿತ್ತೆ ?"

"ನಡೆಯಲು ಕೂಡ ಶಕ್ತಿಯಿದ್ದಿಲ್ಲ. ಟೆಲಿಫೋನ್ ಹುಡುಕಿಕೊಂಡು ಹೇಗೆ ಹೋಗಬೇಕಿತ್ತು ?" ಎಂದು ಅನಂತ ಮಾತನ್ನು ನಗೆಯಲ್ಲಿ ತೇಲಿಸಲು ಪ್ರಯತ್ನಿಸಿದ. ಆದರೆ ಎಂಥ ಅರ್ಥಶೂನ್ಯ ನಗು !

ಸೋಮಯಾಜಿಗಳು ಒಳಗೆ ಬಂದು ಕೋಣೆಯ ಅವ್ಯವಸ್ಥೆಯನ್ನೆಲ್ಲ ನೋಡಿದರು. ಪುಸ್ತಕಗಳು, ಬಟ್ಟೆಗಳು ಎಲ್ಲ ಚೆಲ್ಲಾಪಿಲ್ಲಿಯಾಗಿ ಕೋಣೆಯ ತುಂಬ ಬಿದ್ದಿದ್ದವು. ಅಲ್ಲಿನ ಅಸ್ತವ್ಯಸ್ತ ಅವಸ್ಥೆ ಸೂಚಿಸುತ್ತಿದ್ದುದು ಮಾನಸಿಕ ಚಾಂಚಲ್ಯವನ್ನು ; ಪಿತ್ತದ ಪ್ರಕೋಪವನ್ನಲ್ಲ.

ಒಳಗೆ ಬಂದು ಕುಳಿತ ಸೋಮಯಾಜಿಗಳು,

"ಎ.ಐ.ಸಿ.ಸಿ. ನೋಡಲು ಹೋದ್ವಿ, ಅನಂತಾ. ಎರಡು ಪುಟಗಳು

ಅವಕ್ಕಾಗಿ ವಿಷಾದ ಬಿಡುವಂತೆ ಪ್ರೆಸ್ಸಿನಲ್ಲಿ ಹೇಳಿ ಹೋದಿ. ನಾಳೆ ಪೇಪರ್ ಹೊರಬರಬೇಕಾಗಿದೆ. ಕೆಲಸವಿಲ್ಲದೆ, ಪ್ರೆಸ್ಸಿನವರೇನು ಮಾಡಿಯಾರು?"

ಅನಂತನಿಗೆ ಎ.ಐ.ಸಿ.ಸಿ.ಯ ನೆನಪು ಬೇಡವಿತ್ತು. ಈ ಎರಡು ದಿನಗಳಲ್ಲಿ ಆತ ಲೇಖನಿ ಮುಟ್ಟದಿದ್ದುದೂ ಇದೇ ಹೆದರಿಕೆಯಿಂದಾಗಿ. ಆ ನೆನಪು ಹುಟ್ಟಿಸುವ ಕೋಲಾಹಲ; ಈ ಕೋಲಾಹಲ ಮುಗಿದು ಹೊಳೆಯುವ ನಿಚ್ಚಳ ಸತ್ಯ.

'ಇಂದಿರೆಯನ್ನು ನೀನು ಇನ್ನು ಕಾಣುವಂತಿಲ್ಲ.'

ಆದರೆ ಪತ್ರಿಕೆಯನ್ನು ನಿಲ್ಲಿಸುವುದು ಸಾಧ್ಯವೆ?

"ಈಗ ಬರುತ್ತೇನೆ ಪ್ರೆಸ್ಸಿಗೆ. ಬಂದವನೇ ಬರೆದುಕೊಡುತ್ತೇನೆ."

"ಸೌಖ್ಯವಿಲ್ಲದೆ ಹೇಗೆ ಬರುತ್ತಿ, ಅನಂತಾ?"

"ಹಾಗೇನೂ ನನಗೆ ಧಾಡಿ ಬಡಿದಿಲ್ಲ. ಒಂದರ್ಧ ಘಂಟೆ ನಿಲ್ಲಿ. ಬರುತ್ತೇನೆ" ಎಂದ.

ಅನಂತ ಹೊರಡುವ ತನಕ ಗೆಳೆಯರಿಬ್ಬರೂ ಕಾದಿದ್ದರು. ಆದರೆ ಸೋಮಯಾಜಿಗಳು ಮನೆಯಲ್ಲಿರುವ ತನಕ ಹೆಚ್ಚಿಗೇನೂ ಮಾತು ಬೆಳೆಸಲಿಲ್ಲ. ಅನಂತ ಕೊಟ್ಟ ಪಿತ್ತದ ನೆಪದಿಂದ ಅವರಿಗೆ ಸಮಾಧಾನವಾಗಿರಲಿಲ್ಲ. ಹಾಗಾದರೆ ಅನಂತ ಸುಳ್ಳಾಡಿದನೇ?

ಒಂದು ಔಷಧಿಯ ಸೀಸೆಯನ್ನಾದರೂ ಗುರುತಿಸಲು ಸೋಮಯಾಜಿಗಳ ಕಣ್ಣು ಕೋಣೆ ತುಂಬ ಹುಡುಕಾಡಿದುವು. ಆದರೆ ಅವರಿಗೆ ಕಂಡುದು ಅತ್ತಿತ್ತ ಒಗೆದಿದ್ದ ಪುಸ್ತಕಗಳೇ.

ಪ್ರಾಣಕ್ಕಿಂತ ಹೆಚ್ಚೆಂದು ಬಗೆದು ಅನಂತ ನೆಚ್ಚಿಕೊಳ್ಳುತ್ತಿದ್ದ ಪುಸ್ತಕಗಳಿಗೆ ಈ ಅವಸ್ಥೆ ಬರಲು ಕಾರಣವೇನೆಂದು ಸೋಮಯಾಜಿಗಳು ಚಿಂತಿಸುತ್ತಿದ್ದರು.

ದಾರಿಯಲ್ಲಿ ಸೋಮಯಾಜಿಗಳು ಮಾತನಾಡಿದರು:

"ನಾನು ಊರಿಗೆ ಆದಷ್ಟು ಬೇಗ ಹೋಗಿ ಬರಬೇಕಾಗಿದೆ, ಅನಂತಾ."

"ಯಾವಾಗ ಹೋಗುತ್ತೀರಿ?"

"ಮೊನ್ನೆಯೇ ಹೋಗಬೇಕೆಂದು ಮಾಡಿದ್ದೆ. ಆದರೆ ನೀನು ಬಾರದೆ ಇದ್ದುದರಿಂದ ನಿಲ್ಲಬೇಕಾಗಿ ಬಂತು. ಈಗಲೂ ನಿನಗೆ ಸೌಖ್ಯವಿಲ್ಲವಾದರೆ ಹೋಗುವುದನ್ನು ಮುಂದುವರಿಸಬೇಕಾಗುವುದೇನೋ. ನಮ್ಮ ಆಸ್ತಿಯ ಕತೆ

ಹೇಳಿದ್ದೆನಲ್ಲ—ಯಾರೋ ಒಬ್ಬ ಯೋಗ್ಯ ಗಿರಾಕಿ ಸಿಕ್ಕಿದ್ದಾರೆ, ಬೇಗ ಬನ್ನಿ, ಎಂದು ಕಾಗದ ಬರೆದಿದ್ದಾರೆ, ನನ್ನ ಸಂಬಂಧಿಕರೊಬ್ಬರು."

"ಹಾಗಾದರೆ ಹೋಗಿ."

"ನಾನು ಹೋದರೆ ಎಲ್ಲ ಜವಾಬ್ದಾರಿ ನಿನ್ನ ಮೇಲೆ ಬೀಳುತ್ತದೆ. ಶಂಕರ ಸಣ್ಣವ. ಕಾಂಚನ್ ಮತ್ತು ರಾಘು ಬರುತ್ತಿರುತ್ತಾರೆ. ಆದರೆ ಎಲ್ಲರ ಮೇಲ್ವಿಚಾರ ನೀನು ನೋಡಿಕೊಳ್ಳಬೇಕಾಗುವುದು. ಅವರು ಏನೆಂದರೂ ಹುಡುಗರೇ."

"ನೀವು ಎಷ್ಟು ದಿನ ಬರುವುದಿಲ್ಲ?"

"ಹೆಚ್ಚೆಂದರೆ ಒಂದು ತಿಂಗಳು. ನನ್ನ ಕೆಲಸ ತೀರದ ಮೇಲೆ ಊರಿನಲ್ಲಿ ನಿಂತು ನನಗೇನು ಮಾಡಬೇಕಾಗಿದೆ?"

"ಒಂದೇ ತಿಂಗಳಲ್ಲವೇ? ನಾನು ನೋಡಿಕೊಳ್ಳುತ್ತೇನೆ. ನೀವು ಹೋಗಿ" ಎಂದು ಅನಂತ ಹೇಳಿದ. ಈ ಮಾತು ಹೇಳುವ ಧೈರ್ಯ ಆತನಿಗಿದ್ದಿರಲಿಲ್ಲ. ಆದರೆ ಸೋಮಯಾಜಿಗಳನ್ನು ಸಿಲ್ಲಿಸಿಕೊಳ್ಳುವುದು ಹೇಗೆ, ನಿಲ್ಲಿಸಿಕೊಳ್ಳುವ ಅಗತ್ಯವಾದರೂ ಏನು ಎಂಬುದು ತೀರ್ಮಾನಿಸಿದಿರಲಿಲ್ಲವಾಗಿ ಆತ ಸೋಮಯಾಜಿಗಳ ಸೂಚನೆಗೆ ಒಪ್ಪಿಗೆಯಿತ್ತ.

"ಹಾಗಾದರೆ ನಾನು ಇವೊತ್ತು ಸಂಜೆಯೇ ಹೋಗಲೇ?"

"ಇವೊತ್ತೇ ಹೋಗಬೇಕೇ?"

"ಆದಷ್ಟು ಬೇಗ ಹೋಗುವುದು ಒಳ್ಳೆಯದೆಂದು ಕಾಣುತ್ತದೆ. ಬೇಗ ಮರಳಲು ಅನುಕೂಲ."

"ಹೋಗಿ."

"ಎರಡು ವಾರಗಳಿಗೆ ಸಾಕಾಗುವಷ್ಟು ಕಾಗದ ತಂದುಹಾಕಿದ್ದೇನೆ. ಏಜಂಟರಿಂದ ಹಣ ಬಂದರೆ ಪ್ರೆಸ್ಸಿಗೆ ಕೊಡು. ಮುಂದೆ ಕಾಗದಕ್ಕೆ ಶಂಕರ ಏರ್ಪಾಡು ಮಾಡುತ್ತಾನೆ. ಇನ್ನು ಪ್ರೆಸ್ಸಿನ ಗಲಾಟೆ ಹೆಚ್ಚಾದರೆ, ಆತ ಪುನಃ ನಾಸಿರನ ಸಂಧಿ ಸಾಧಿಸಿ ಬೊಬ್ಬಿಡತೊಡಗಿದರೆ, ಸಂಜೀವರಾಯರಿಂದ ಒಂದು ನೂರು ರೂಪಾಯಿ ತಂದುಕೊಂಡು."

"ಸಂಜೀವರಾಯರಿಂದಲೇ?" ಅನಂತ ಬೆವರುತ್ತಿದ್ದ ತನ್ನ ಮುಖವನ್ನು ಒರೆಸಿಕೊಳ್ಳುತ್ತಿದ್ದಂತೆ ಕೇಳಿದ.

"ಹೌದು. ಕೇಳಲು ಸಂಕೋಚವಾಗುವುದೆ?"

"ನನಗೆ ಅಲ್ಲಿಂದ ಹಣ ತರಲು ಸಾಧ್ಯವೇ ಇಲ್ಲ."

"ಯಾಕೆ? ನಾವಿಬ್ಬರೂ ಜೊತೆಯಾಗಿ ಹೋಗಿ ಕೇಳಿಲ್ಲವೇನು?"

"ಆ ಮಾತು ಬೇರೆ. ನನಗೆ ಅವರಿಂದ ಹಣ ಪಡೆಯುವುದು ಸಾಧ್ಯವಿಲ್ಲ."

"ಬೇರೆ ಯಾರು ಆ ರೀತಿಯ ಸಹಾಯ ಮಾಡುತ್ತಾರೆ, ಅನಂತಾ. ಸಂಜೀವರಾಯರೊಡನೆ ಕೇಳಲು ಸಂಕೋಚನಾದರೆ ಇಂದಿರೆಯನ್ನು ಕೇಳು. ಆದರೆ ಅವಳು ಪುಣೆಗೆ ಹೋಗಿದ್ದಾಳೆಂದು ತೋರುತ್ತದೆ. ಯಾವಾಗ ವಾಪಸು ಬರುತ್ತಾಳೋ ತಿಳಿದಿಲ್ಲ."

ಅನಂತನಿಗೆ ಹೆಚ್ಚು ಮಾತನಾಡುವುದು ಸಾಧ್ಯವಾಗಲಿಲ್ಲ. ಇಂದಿರೆ ಪುಣೆಗೆ ಏಕೆ ಹೋಗಿರಬಹುದು? ತನ್ನ ಹೇಯ ವರ್ತನೆಯ ಕಹಿ ನೆನಹನ್ನು ಮರೆಯಲೆಂದೆ?

"ನೀವು ಹೋಗಿದ್ದಿರೇನು ಅಲ್ಲಿಗೆ?"

"ಇಲ್ಲ. ಸಂಜೀವರಾಯರು ಸಿಕ್ಕಿದ್ದರು. ಅವರೇ ತಿಳಿಸಿದರು. ಏನಾದರೇನು? ಅವರೊಡನೆ ಸಂಕೋಚಪಟ್ಟುಕೊಳ್ಳಬೇಕಾದ ಅಗತ್ಯವಿದೆಯೆಂದು ನನಗನಿಸುವುದಿಲ್ಲ."

"ಹೇಗಾದರೂ ನೀವು ಬರುವತನಕ 'ಕಹಳೆ' ನಡೆಸಿಕೊಂಡು ಹೋಗುತ್ತೇನೆ, ಸೋಮಯಾಜಿಗಳೆ. ಬೇಗ ಬನ್ನಿ" ಎಂದು ಅನಂತ ಮಾತು ಮುಗಿಸಿದ.

ಪ್ರೆಸ್ಸಿನಲ್ಲಿ ಸಾಕಷ್ಟು ಕೆಲಸ ಕಾದಿತ್ತು. ಬಿಡುವಿರದಂತೆ, ಮನಸ್ಸಿಗೆ ಯೋಚನೆಗೆ ಅವಕಾಶ ದೊರಕದಂತೆ ದುಡಿಯಲು ಅನುಕೂಲ ಪರಿಸ್ಥಿತಿ. ಆದರೆ ಅನಂತನ ಲೇಖನಿ ಎಂದಿನಂತೆ ಮುಂದುವರಿಯಲಿಲ್ಲ. ಅಧಿವೇಶನದ ವರದಿ ಬರೆಯಲು ಒಂದು ತಾಸು ಪರಿಶ್ರಮಿಸಿ, ಸೋತು, ನಾಲ್ಕೇ ಪಂಕ್ತಿಗಳಲ್ಲಿ, ಆ ಸಭೆಯ ಕಾರ್ಯಕಲಾಪಗಳ ವಿವರಣೆ ಕೊಟ್ಟು ಮುಗಿಸಿದ. ಬೇರೆ ಯಾವುದೋ ಒಂದು ಹಳೆಯ ಲೇಖನಕ್ಕೆ ತುಸು ಒಪ್ಪಕೊಟ್ಟು, ಪತ್ರಿಕೆಯ ಪುಟ ತುಂಬಿಸಿದ.

ಸಂಪಾದಕೀಯ ಬರೆದು ಮುಗಿಸುವುದರೊಳಗೆ ಅನಂತನ ಕೈ ನೋಯಲು ಆರಂಭವಾಗಿತ್ತು.

ಅಂದು ಸಂಜೆ ಸೋಮಯಾಜಿಗಳು ಊರಿಗೆ ಹೊರಟುಹೋದರು.

ಪ್ಲಾಟ್‌ಫಾರ್ಮಿನಲ್ಲಿ ಸೋಮಯಾಜಿಗಳನ್ನು ಬೀಳ್ಕೊಟ್ಟಮೇಲೆ ಮಾತ್ರ ಅನಂತನಿಗೆ ತಾನು ಸೋಮಯಾಜಿಗಳಿಗೆ ಕೊಟ್ಟಿರುವ ಮಾತನ್ನು ನಡೆಸುವುದು

ಸಾಧ್ಯವೇ, ಆ ಹೊಣೆ ಹೊರುವುದು ಸಾಧ್ಯವೇ? ಎಂದು ಸಂದೇಹ ಬಂತು. ಬೆಳಿಗ್ಗೆ ಸೋಮಯಾಜಿಗಳನ್ನು ಕಂಡು ಬಂದಿದ್ದ ತುಸು ಧೈರ್ಯವೂ ಮಾಯ ವಾಗಲಾರಂಭಿಸಿತು. ಆದರೂ ಸೋಮಯಾಜಿಗಳು ಇಂದಿರೆಯ ಕುರಿತು ತಿಳಿಸಿದ್ದ ಒಂದು ಸುದ್ದಿ ಮಾತ್ರ ತುಸು ಸಮಾಧಾನವನ್ನು ಕೊಟ್ಟಿತ್ತು. ಮುಂಬಯಿ ಬಿಟ್ಟಿರುವ ಕಾರಣ ಯಾವುದೇ ಇರಲಿ, ಇಂದಿರೆ, ಒಂದು ಘಟನೆ ಯನ್ನು ಮರೆಯಲೆಂದು ಪುಣೆಗೆ ಹೋಗಿದ್ದಾಳೆ, ಎನ್ನಬಹುದಿತ್ತು. ಮರೆಯ ಲಾಗದಿದ್ದ ಅಂದಿನ ಅನುಭವವನ್ನು ತಾನು ಮರೆಯಲು ಪ್ರಯತ್ನಿಸುತ್ತಿರುವಂತೆ ಇಂದಿರೆಯೂ ಪ್ರಯತ್ನಿಸುತ್ತಿರುವಳೆಂಬುದು ಅವನನ್ನು ಕಾಡುತ್ತಿದ್ದ ವೇದನೆಯ ನಡುವೆ ಶುಷ್ಕವೆಂದು ಕಾಣಬಹುದಾದರೂ, ದೊರಕಿದ್ದ ಒಂದೇ ಒಂದು ಸಮಾಧಾನವಾಗಿತ್ತು. ಸಮಾನ ದುಃಖದ ಸಮಾಧಾನ.

ಸೋಮಯಾಜಿಗಳನ್ನು ಬೀಳ್ಕೊಟ್ಟು, ಅನಂತ ತನ್ನ ದುಡಿಮೆಯ ಯೂನಿಯನ್ ಕಚೇರಿಗಳನ್ನು ಸುತ್ತತೊಡಗಿದ. ಆದರೆ ನಿತ್ಯದ ಉತ್ಸಾಹ ಮಾತ್ರ ಇಂದು ಇರಲಿಲ್ಲ. ತನ್ನ ಪ್ರೀತಿಯ ಕೆಲಸವಿದೆಂದು ಹಿಂದಿದ್ದ ಭಾವನೆಯೂ ಇಂದು ಮಾಯವಾಗಿತ್ತು. ಅಲ್ಲಿ ಕೆಲಸ ಮಾಡುವಾಗಲೂ ಅದೇ ರೀತಿಯ ನಿರುತ್ಸಾಹ.

ಹೋದಲ್ಲೆಲ್ಲ ಅನಂತನ ಬಾರದಿರುವಿಕೆಗೆ ಕಾರಣ ವಿಚಾರಿಸುವವರೆ. 'ಸೌಖ್ಯವಿರಲಿಲ್ಲ'ವೆಂಬ ಅನಂತನ ಔಪಚಾರಿಕ ಉತ್ತರವನ್ನು ಅವನ ಮಾತು ಸಮರ್ಥಿಸುತ್ತಿರಲಿಲ್ಲ. ಅನಂತನಲ್ಲಿ ಏನೋ ಬದಲಾವಣೆಯಾಗಿದೆಯೆಂದು ಯೂನಿಯನ್ ಕಾರ್ಯಕ್ಷೇತ್ರದಲ್ಲಿ ದುಡಿಯುತ್ತಿದ್ದ ಗೆಳೆಯರೂ ಹೇಳಬಹುದಿತ್ತು.

ಅನಂತ ಪ್ರಧಾನಪಾತ್ರ ವಹಿಸಬೇಕಾಗಿದ್ದ ಸೋಮವಾರದ ಸಂಜೆಯ ಒಂದು ಸಭೆಗೆ ಬಾರದಿದ್ದುದಕ್ಕೆ 'ಜಗತ್ ಮೆಟಲ್ ವರ್ಕ್ಸ್'ನ ಯೂನಿಯನ್ ಕಾರ್ಯದರ್ಶಿ ಕಾರಣ ಕೇಳಿದಾಗ, ಅನಂತ ಹೇಳಿದುದು ಅದೇ ಉತ್ತರ: "ಸೌಖ್ಯವಿರಲಿಲ್ಲ."

"ಮೀಟಿಂಗ್ ಮುಂದೆ ಹಾಕಿದ್ದೇವೆ, ಬರುವ ಭಾನುವಾರಕ್ಕೆ" ಎಂದು ಕಾರ್ಯದರ್ಶಿ ಹೇಳಿದ.

"ನಾನು ಬರಲಿಲ್ಲವೆಂದು ಆ ರೀತಿ ಮಾಡಬೇಕಿತ್ತೇ?"

ಕಾರ್ಯದರ್ಶಿ ಅಪ್ರತಿಭನಾಗಿ ಕೇಳಿದ:

"ಅಧ್ಯಕ್ಷರೇ ಇಲ್ಲದೆ, ಅಷ್ಟು ಮಹತ್ವದ ಸಭೆಯ ಕಾರ್ಯಕಲಾಪ

ನಡೆಸಬೇಕಿತ್ತೇ? ಅದೂ ನೀವು ಲೇಬರ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳನ್ನು ಕಂಡು ಮಾತನಾಡುವ ಭರವಸೆ ಕೊಟ್ಟಿದ್ದಿರಿ."

"ಅವರನ್ನು ಕಂಡೇನಾಗಬೇಕಾಗಿದೆ? ಆ ಮಾತುಕತೆಗಳ ಪ್ರತಿಫಲ ಯಾವ ರೀತಿಯವೆಂದು ನಿಮಗೆ ತಿಳಿದಿಲ್ಲವೇನು? ನಿಮಗೆ ಯೂನಿಯನ್‌ನ ಅಸಂತೋಷದ ಕಾರಣದ ಬಗ್ಗೆ ಭರವಸೆಯಿದ್ದಲ್ಲಿ, ಮುಷ್ಕರದ ನೋಟೀಸು ಕೊಡುತ್ತಿದ್ದಿರಿ. ಅದಕ್ಕೆ ಹೆದರಿ ಸಭೆ ಮುಂದುವರಿಸಿದಿರಿ—ನನ್ನ ಮೇಲೆ ಹೊಣೆ ಹೊರಿಸಲೆಂದು."

ತನಗೇಕೆ ಈ ರೀತಿಯ ಸಿಟ್ಟು ಬರುತ್ತಿದೆಯೆಂದು ಅನಂತನಿಗೆ ತಿಳಿದಿರಲಿಲ್ಲ. ಆದರೆ ಎದೆಯಲ್ಲಿ ಹೊಗೆಯಾಡುತ್ತಿದ್ದ ಅತೃಪ್ತಿ ಅಸಹನೆಯ ಹಾದಿಯಲ್ಲಿ ತನ್ನನ್ನು ಕೊಂಡೊಯ್ಯುತ್ತಿದೆಯೆಂದಷ್ಟೆ ಆತನಿಗೆ ಗೊತ್ತು.

ಎರಡು ವಾರ ಅನಂತ ಯಂತ್ರದಂತೆ ಹಗಲು ರಾತ್ರಿ ದುಡಿದ. ತನ್ನವು ಅಲ್ಲದ ಕೆಲಸಗಳನ್ನು ತನ್ನ ಮೇಲೆ ಹೊರಿಸಿಕೊಂಡು ಮನಸ್ಸಿಗೆ ಬಿಡುವು ದೊರಕದಂತೆ ಪ್ರಯತ್ನಿಸಿದ. ಇಂದಿರೆಯನ್ನು ನೆನಸಲು ಅವಕಾಶ ದೊರಕದಂತೆ ಆತನಿಗೆ ಕೆಲಸ ಬೇಕಾಗಿತ್ತು. ಅದು ಯೂನಿಯನ್ ಕಾರ್ಯಕ್ಷೇತ್ರದಲ್ಲಿ ತಕ್ಕಮಟ್ಟಿಗೆ ದೊರಕುತ್ತಿತ್ತು. ಆದರೆ ಪತ್ರಿಕೆಯ ಕೆಲಸದಲ್ಲಿ ಮಾತ್ರ ಆತನಿಗೆ ಅಪಜಯವೇ. ಲೇಖನಿ ಹಿಡಿದಾಗಲೆಲ್ಲ, ಕಣ್ಣ ಮುಂದೆ ಕುಣಿಯುತ್ತಿದ್ದುದು ಇಂದಿರೆಯೆ.

'ಸಂಜೆಯ ತನಕ ಅವಕಾಶ ಕೊಡುತ್ತೇನೆ. ಬರೆದು ಮುಗಿಸಿ ತೋರಿಸಬೇಕು' ಎಂದು ಒತ್ತಾಯಿಸುತ್ತಿದ್ದ ಪ್ರೀತಿಯ ಜೀವದ ಸ್ನೇಹಕ್ಕೆ ಎರವಾಗುವಂಥ ಪ್ರಮಾದ ತನ್ನಿಂದೇನಾಯಿತು ಎಂದು ಅನಂತ ಚಿಂತಿಸುತ್ತಿದ್ದ. ಯಾವ ಸಮಾಧಾನವೂ ಸಿಗದೆ ನಿರಾಶನಾಗುತ್ತಿದ್ದ. ಅವನ ಹೃದಯವನ್ನೆ ಕೊರೆಯುತ್ತಿದ್ದ ಇಂದಿರೆಯ ಕೊನೆಯ ಮಾತು—ಅದರ ಹಿಂದಿನಿಂದ ಬಂದ ನೋವಿನ ಮಹಾಪೂರ.

ಒಮ್ಮಿಂದೊಮ್ಮೆಗೆ ಅನಂತ ಬರೆಯುವುದನ್ನು ನಿಲ್ಲಿಸಿ ತಟಸ್ಥನಾಗುತ್ತಿದ್ದ. ಬಳಿಯಿದ್ದ ಶಂಕರ, "ಮ್ಯಾಟರ್ ಬೇಕು" ಎಂದು ಎಚ್ಚರಿಸಿದಾಗಲೂ ಅನಂತನ ಉತ್ತರ ನಿರುತ್ಸಾಹದ್ದೇ; ಅಸಹನೆಯದೇ.

ಸೋಮರಾಜಿಗಳು ಊರು ತಲಪಿದ ಮೇಲೆ ಅವರಿಂದೊಂದು ಪತ್ರ ಬಂತು: 'ಮೊದಲನೆಯ ಗಿರಾಕಿ ತಪ್ಪಿಹೋದ. ಬೇರೆ ಹುಡುಕುತ್ತಿದ್ದೇನೆ.

ಆಸ್ತಿಯ ವಿಕ್ರಯವಾದೊಡನೆ ಬರುತ್ತೇನೆ' ಎಂದು ಬರೆದಿದ್ದರು. ಆಗಲೇ ಅನಂತನಿಗೆ ಯೋಚನೆಗಾರಂಭವಾಗಿದ್ದಿತು. ಕಾಗದ ಮುಗಿದಿತ್ತು. ಪ್ರೆಸ್ಸಿನ ಮಾಲಕ ಒತ್ತಾಯ ಆರಂಭಿಸಿದ್ದ. ಏಜಂಟರ ಹಣ ಬಾರದೆ ಉಳಿದಿತ್ತು. ಶಂಕರ ಕಾಗದಕ್ಕಾಗಿ ಮಾಡುವೆನೆಂದು ಹೇಳಿದ್ದ ವ್ಯವಸ್ಥೆ ಹೊಂದಿಬರಲಿಲ್ಲ.

ಅನಂತ ಸಂಜೀವರಾಯರನ್ನು ಕಾಣಬೇಕೇ? ಎಂದು ತನ್ನನ್ನೇ ತಾನು ಕೇಳಿಕೊಳ್ಳುವ ಸ್ಥಿತಿ ಬಂತು.

ಪರಿಸ್ಥಿತಿಯ ಒತ್ತಡ ಈ ರೀತಿ ಹೆಚ್ಚುತ್ತಿರುವುದನ್ನು ಅನಂತ ಸಹಿಸಿಕೊಂಡೇ ಇದ್ದ ; ಸುಧಾರಿಸುವ ಗೋಜಿಗೆ ಹೋಗಲಿಲ್ಲ. ಸೋಮಯಾಜಿಗಳ ನಿರ್ದೇಶನದಂತೆ ತಾನು ಸಂಜೀವರಾಯರನ್ನು ಕಾಣಹೋಗುತ್ತೇನೆ ಎನ್ನುವ ಆತ್ಮಸಮಾಧಾನ ಆತನಿಗೆ ಅಗತ್ಯವಿತ್ತು. ಅವನ ಹೃದಯ ಬಯಸುತ್ತಿದ್ದುದು ಆ ಪ್ರವಾಸ.

ಅಲ್ಲಿ ಇಂದಿರೆ ಇರುವುದಿಲ್ಲವೆಂಬುದು ಆತನಿಗೆ ಗೊತ್ತು. ಆದರೆ ತಾನು ತನ್ನ ಜೀವನದ ಅತ್ಯಂತ ಸುಖಮಯ ದಿನಗಳೆಂದು ಬಗೆದಿದ್ದ ಕೆಲವು ದಿನಗಳ ನೆನಪಿಗೆ ಪೋಷಕ ವಾತಾವರಣವನ್ನುಂಟುಮಾಡಿದ್ದ ಆ ಮನೆಯನ್ನೂ ಇಂದಿರೆಯ ಕೋಣೆಯನ್ನೂ ನೋಡಲೇಬೇಕು ಎಂದು ಕೂಗುತ್ತಿದ್ದ ಎದೆಯ ಕರೆಯನ್ನು ಮನ್ನಿಸಿಯಾದರೂ ಅಲ್ಲಿಗೆ ಹೋಗಬೇಕು ಎಂದು ಆತ ಬಯಸಿದ್ದ.

ಕುಸಿದಿದ್ದ ಧೈರ್ಯವನ್ನು ತುಂಬಲು ಸೋಮಯಾಜಿಗಳು ನೆಪವಾದರು. 'ಕಹಳೆ'ಯ ಆ ವಾರದ ಸಂಚಿಕೆ ಕಾರಣವಾಯಿತು. ಅನಂತ ಸಂಜೀವ ರಾಯರ ಮನೆಯ ದಾರಿ ಹಿಡಿದ.

ಅನಂತ ಧೃತಿಗೆಡಬೇಕಾದಂಥ ಪ್ರಸಂಗಗಳು ಹಿಂದೆಯೂ ಬಂದಿದ್ದುವಾದರೂ ಇಂದಿನಷ್ಟು ಅಧೀರ ಆತ ಯಾವಾಗಲೂ ಆಗಿರಲಿಲ್ಲ. ಆ ಮನೆಯನ್ನು ಸಮೀಪಿಸುತ್ತಿದ್ದಂತೆ, ಮನಸ್ಸಿನ ಉದ್ವೇಗವೂ ಹೆಚ್ಚುತ್ತಿತ್ತು. ಸಂಜೀವರಾಯರೊಡನೆ ತಾನು ಯಾವ ರೀತಿ ಮಾತು ಆರಂಭಿಸಬೇಕು, ಇಷ್ಟು ದಿನ ತಾನು ಬಾರದಿರುವುದಕ್ಕೆ ಯಾವ ಕಾರಣ ಕಲ್ಪಿಸಿ ಹೇಳಬೇಕು ಎಂದು ಯೋಚಿಸುತ್ತಲೇ ಅನಂತ ಹೋಗಿ ಬಾಗಿಲಿನ ಕರೆಗಂಟೆ ಬಾರಿಸಿದ.

ಬಾಗಿಲು ತೆರೆದುದು ಇಂದಿರೆ.

ಅನಂತನನ್ನು ನೋಡಿದೊಡನೆ ಹಾವು ಮೆಟ್ಟಿದವರಂತೆ ಅವಳು ಬೆಚ್ಚಿಬಿದ್ದಳು. ಅನಂತನೂ ಇಂದಿರೆಯನ್ನು ನಿರೀಕ್ಷಿಸದೇನೇ ಅಲ್ಲಿಗೆ ಬಂದಿದ್ದು,

ಈಗ ಆಕೆಯನ್ನು ಕಂಡು ಕಂಗಾಲಾದ. ಹಿಂದೆ ನಗುನಗುತ್ತ ಮಾತನಾಡಿಸಿ ತನಗೆ ಸ್ವರ್ಗಸುಖವುಣಿಸಿದ್ದ ಇಂದಿರೆ. ಈಗ ಆತನಿಗೆ ಮಾತನಾಡುವ ಶಕ್ತಿಯೇ ಇರಲಿಲ್ಲ.

"ಸಂಜೀವರಾಯರು ಇದ್ದಾರೆಯೆ?" ಎಂದು ಪ್ರಯಾಸದಿಂದ ಆತನ ಮಾತು ಹೊರಟಿತು.

ಕ್ಷಣಕಾಲದ ಚಾಂಚಲ್ಯದಿಂದ ಚೇತರಿಸಿಕೊಂಡ ಇಂದಿರೆ ಸಿಡಿದೆದ್ದು ಕೇಳಿದಳು :

"ಅಪ್ಪನ ಆಫೀಸು ಮಸ್‌ಜಿದ್‌ನಲ್ಲಿದೆಯೆಂದು ನಿಮಗೆ ತಿಳಿದಿರಬೇಕಲ್ಲ! ಇಲ್ಲಿಗೇಕೆ ಬಂದಿರಿ?"

ಅನಂತನಿಗೆ ಏನು ಹೇಳುವುದೆಂದು ಹೊಳೆಯಲಿಲ್ಲ. ಕೈಲಿದ್ದ 'ಕಹಳೆ'ಯ ಎರಡು ಪ್ರತಿಗಳನ್ನು ಮುಂದೆ ಮಾಡಿದ.

ಇಂದಿರೆ ಅವನ್ನು ತೆಗೆದುಕೊಂಡವಳು ಅನಂತನ ಇದಿರೇ ಬೀದಿಗೆ ಬಿಸಾಡಿದಳು.

"ನನ್ನ ಗಂಡ ನೆಚ್ಚಿಕೊಂಡಿದ್ದ ಆದರ್ಶದ ಕ್ಷೇತ್ರದಲ್ಲಿ ದುಡಿಯುತ್ತಿದ್ದಿರೆಂದು ನಿಮಗೆ ಇಲ್ಲಿ ಬಂಧುತ್ವದ ಸ್ಥಾನವಿತ್ತು, ಅನಂತರಾಯರೆ. ಆ ಕಾರಣ 'ಕಹಳೆ'ಗೂ ಸ್ಥಾನವಿತ್ತು. ಆದರೆ ಆ ಆದರ್ಶದ ಮುಖವಾಡದ ಹಿಂದೆ ಎಂಥ ಹೊಲಸು ವ್ಯಕ್ತಿತ್ವ ಅಡಗಿದ್ದಿತೆಂಬ ಕಲ್ಪನೆ ನನಗಿದ್ದಿಲ್ಲ. ನಿಮ್ಮ ಪತ್ರಿಕೆಯನ್ನು ದಯವಿಟ್ಟು ಇನ್ನು ಇಲ್ಲಿಗೆ ಕಳಿಸಿಕೊಡಬೇಡಿ" ಎಂದವಳೇ ಇಂದಿರೆ ಬಾಗಿಲು ಮುಚ್ಚಿಕೊಳ್ಳಲೆಂದು ಮುಂದೆ ಬಂದಳು.

ಅನಂತ ಬರೇ,

"ಕ್ಷಮಿಸು, ಇಂದಿರಾ...." ಎಂದಿಷ್ಟೆ ಹೇಳಿದ

"ಕ್ಷಮೆ ಭಾರತಿಯೊಡನೆ ಕೇಳಿ, ಅನಂತರಾಯರೆ" ಎಂದು ಹೇಳಿದವಳೆ ಇಂದಿರೆ ಕದವಿಕ್ಕಿಕೊಂಡಳು.

ಎ. ಐ. ಸಿ. ಸಿ. ಅಧಿವೇಶನದಂದು ಸಂಜೆ ಅನಂತನ ಹೃದಯದಲ್ಲಿ ಆರಂಭವಾದ ಕೋಲಾಹಲ ಈಗ ಕೊನೆಗಂಡಿತು.

'ಇಂದಿರೆಯ ಹೃದಯದಲ್ಲಿ ನನಗೆ ಯಾವ ಸ್ಥಾನವೂ ಇಲ್ಲ. ನಾನು ಬರೇ ಸ್ವಾರ್ಥಿ'

'ಇಂದಿರೆಯನ್ನು ಪ್ರೀತಿಸುವ ಅಧಿಕಾರವಿರದ ಸ್ವಾರ್ಥಿ.'

'ಎಂಥ ಹೊಲಸು ವ್ಯಕ್ತಿತ್ವ, ನನ್ನದು!'

ಅಂದಿನಂತೆಯೇ ಬಹಳ ಪ್ರಯಾಸದಿಂದ ಅನಂತ ಕಾಲೆಳೆದುಕೊಂಡು ಮನೆಗೆ ಬಂದ. ಪ್ರೆಸ್ಸು, ಯೂನಿಯನ್, ಕೆಲಸ, ಯಾವುದೂ ಬೇಡವಾದ ಒಂದು ನಿರಾಸಕ್ತ ಪರಿಸ್ಥಿತಿಗೆ ಆತ ತಲಪಿದ್ದ.

ಕಾಗದಕ್ಕಾಗಿ ಕಾದು ನಿರಾಶನಾದ ಶಂಕರ, ಹಣಕ್ಕೆಂದು ಬೊಬ್ಬಿಡುತ್ತಿದ್ದ ಪ್ರೆಸ್ ಮಾಲಕ, ಪತ್ರಿಕೆಯ ಗತಿಯೇನೆಂದು ಕಂಗಾಲಾದ 'ಕಹಳೆ'ಯ ಕೆಲಸಗಾರರು, ಇವರು ಯಾರಿಗೂ ಅನಂತನನ್ನು ಅಂಟಿಕೊಂಡ ಜಾಡ್ಯವನ್ನು ಬಗೆಹರಿಸುವುದು ಸಾಧ್ಯವಾಗಲಿಲ್ಲ.

ಸೋಮಯಾಜಿಗಳು ಊರಿಗೆ ತೆರಳಿದ ನಾಲ್ಕನೆಯ ವಾರ 'ಕಹಳೆ' ಪ್ರಕಟವಾಗಲಿಲ್ಲ. ಅನಂತ ಕುದಿಯುವ ಜ್ವರ ಹಿಡಿದುಕೊಂಡು ಮಲಗಿದ್ದ.

ಶಂಕರ ಸೋಮಯಾಜಿಗಳಿಗೆ ತಂತಿ ಬಿಟ್ಟ.

೩೭

ತಂತಿ ಕಂಡು ಸೋಮಯಾಜಿಗಳು ಧಾವಿಸಿ ಮುಂಬಯಿಗೆ ಮರಳಿ ಬಂದರು. ಆದರೆ ಅವರು ಬರುವುದರೊಳಗೆ ಸಾಕಷ್ಟು ಅನಾಹುತ ಆಗಿ ಹೋಗಿತ್ತು.

ಎರಡು ವಾರ 'ಕಹಳೆ' ಪ್ರಕಟವಾಗಲಿಲ್ಲ. ಅನಂತನ ನೆರವೂ ಇಲ್ಲದೆ ಉಳಿದ ಗೆಳೆಯರು ಸೋತರು. ಹಣಕ್ಕಾಗಿ ಒದ್ದಾಡಿದರು. ಸಂಜೀವರಾಯರನ್ನು ಕಂಡು ಸಹಾಯ ಪಡೆಯಬಹುದೆಂಬ ವಿಚಾರ ಬೇರೆ ಯಾರಿಗೂ ತೋದಿರಲಿಲ್ಲ. ಅನಂತ ಹಾಸಿಗೆ ಹಿಡಿದಿದ್ದ. ಪ್ರೆಸ್ಸಿನ ಮಾಲಕ ಸೋಮಯಾಜಿಗಳು ಮರಳುವ ತನಕ ತನ್ನ ಔದಾರ್ಯವನ್ನು ವಿಸ್ತರಿಸಲು ಸಿದ್ಧನಿರಲಿಲ್ಲ.

ಎಂತಲೇ 'ಕಹಳೆ' ಒಮ್ಮಿಂದೊಮ್ಮೆಗೆ ನಿಂತಿತು.

ಶಂಕರಶೆಟ್ಟಿ ಸೋಮಯಾಜಿಗಳಿಗಾಗಿ ನಿಲ್ದಾಣೆಯಲ್ಲಿ ಕಾದಿದ್ದ. ಅವರು ಗಾಡಿಯಿಂದಿಳಿದೊಡನೆ ಶಂಕರನ ಬಾಡಿದ ಮುಖವನ್ನು ನೋಡಿ ಹೆದರಿ, "ಅನಂತ ಹೇಗಿದ್ದಾನೆ?" ಎಂದು ಕೇಳಿದರು.

"ಅವರು ಸುಧಾರಿಸುತ್ತಿದ್ದಾರೆ. ಆದರೆ 'ಕಹಳೆ' ಎರಡು ವಾರಗಳಿಂದ ಬರಲಿಲ್ಲ" ಎಂದು ಇಳಿಮೊಗದಿಂದಲೇ ಶಂಕರ ಹೇಳಿದ.

ಸೋಮಯಾಜಿಗಳ ಹೋರಾಟದ ಇನ್ನೊಂದು ಘಟ್ಟದ ಅಂತ್ಯ. 'ಮುಂಬಯಿಯಲ್ಲಿ ನಮ್ಮ ಕಾರ್ಯಕ್ಷೇತ್ರವನ್ನು ನಿರ್ಮಿಸಿಕೊಂಡು ಅಲ್ಲಿ ಬೆಳಕಿನ ಹೊಸ ಸಮಾಜವನ್ನು ಕಟ್ಟುವ ದಾರಿ ತೋರಿಸುತ್ತೇನೆ' ಎಂಬಾಸೆಯಿಂದ ಆರಂಭಿಸಿದ್ದ ಒಂದು ಸಾಪ್ತಾಹಿಕದ ಕೊನೆ. ಎರಡು ವಾರ ನಿಂತ ಮೇಲೆ ಪತ್ರಿಕೆ ನಿಂತಂತೆಯೇ ಎಂದು ಸೋಮಯಾಜಿಗಳಿಗೆ ಮನವರಿಕೆಯಾಗಿತ್ತು.

ಒಂದು ಕ್ಷಣ ಶಂಕರ ಈ ಸುದ್ದಿ ತಿಳಿಸಿದಾಗ ಅವರು ತಗ್ಗಿಸಿದ ಮುಖವನ್ನು ಮೇಲಕ್ಕೆತ್ತದೇನೇ ನಿಂತರು. ಆಮೇಲೆ,

"ಅನಂತ ಹೇಗಿದ್ದಾನೆ ?" ಎಂದು ಪುನಃ ಕೇಳಿದರು.

"ಜ್ವರ ಬಿಟ್ಟದೆ. ನಾಲ್ಕೈದು ದಿನ ಜ್ವರವಿತ್ತು, ಅಷ್ಟೆ. ಆದರೆ ನಿಶ್ಶಕ್ತಿ ಇಷ್ಟೇ ಎಂದು ಹೇಳುವಂತಿಲ್ಲ. ಎರಡು ಹೆಜ್ಜೆ ನಡೆಯಲು ಕೂಡ ಯಾರದಾದರೂ ಸಹಾಯ ಬೇಕು. ನಾನು ಆಫೀಸಿನಿಂದ ರಜೆ ಪಡೆದಿದ್ದೇನೆ. ಅಲ್ಲಿಯೇ ಇದ್ದೇನೆ. ರಾತ್ರಿ ಕೂಡ ಅಲ್ಲಿಯೇ ಮಲಗುತ್ತೇನೆ" ಎಂದು ಹೇಳಿದ.

"ಒಳ್ಳೆಯ ಕೆಲಸ ಮಾಡಿದೆ. ನಡಿ. ಅಲ್ಲಿಗೇ ಹೋಗೋಣ" ಎಂದು ಸೋಮಯಾಜಿಗಳು ಶಂಕರನನ್ನು ಕರೆದುಕೊಂಡು ಕುರ್ಲಾದ ದಾರಿ ಹಿಡಿದರು.

ಶಂಕರ ಹೇಳಿದಂತೆ ಅನಂತ ಬರೇ ಅಸ್ಥಿಪಂಜರವಾಗಿದ್ದ. ಸೋಮಯಾಜಿಗಳು ಬಂದಾಗ ಅನಂತನಿಗೆ ಜೊಂಪು ಹಿಡಿದಿತ್ತು. ಮಲಗಿದ ಆತನನ್ನೇ ನೋಡುತ್ತ ಸೋಮಯಾಜಿಗಳು ತುಸು ಹೊತ್ತು ನಿಂತಿದ್ದರು. ಆಮೇಲೆ ಶಂಕರನನ್ನುದ್ದೇಶಿಸಿ ಹೇಳಿದರು :

"ಇನ್ನು ಅನಂತನನ್ನು ನಾನು ನೋಡಿಕೊಳ್ಳುತ್ತೇನೆ, ಶಂಕರ. ನೀನು ಹೋಗಬಹುದು. ನನ್ನ ಆದರ್ಶದ ಹೋರಾಟದಲ್ಲಿ ಆಯುಧಗಳ ಕಡೆ ನಾನು ಗಮನ ಕೊಟ್ಟೇ ಇಲ್ಲ. ಎಂತಲೇ ರಾಜೀವ ಹೋದ" ಎಂದು ಮೆಲ್ಲನೆ ಹೇಳಿದರು.

ಅವರ ಮಾತು ಕೇಳಿ ಅನಂತನಿಗೆ ಎಚ್ಚರವಾಯಿತು. ಎಚ್ಚರವಾದಾಗ ಸೋಮಯಾಜಿಗಳ ಮುಖ ಕಂಡಿತು.

ಅನಂತ ಅತ್ತುದನ್ನು ಸೋಮಯಾಜಿಗಳು ಕಂಡಿದ್ದಿಲ್ಲ. ತನ್ನಂತೆಯೇ ಅವನದೂ ಗಂಡೆದೆಯೆಂದು ಅವರಿಗೆ ಅಭಿಮಾನವಿತ್ತು. ಆದರೆ ಈ ಕ್ಷಣ, 'ಕಹಳೆ'ಯ ಸಾವು ಸತ್ಯವೆಂದು ಮನವರಿಕೆಯಾದ ಸಂದರ್ಭದಲ್ಲಿ ಅನಂತನ

ಅಳುಮುಖವನ್ನು ನೋಡಿದಾಗ ಸೋಮಯಾಜಿಗಳಿಗೂ ಕಣ್ಣಲ್ಲಿ ನೀರು ಬಂತು. ಆದರೆ ಅವರು ಅಲ್ಲಿ ಅನಂತನ ಇದಿರಿಗೆ ನಿಲ್ಲದೇನೇ ಒಳಗೆ ಹೋದರು.

ಗುರುವಿನ ಆಜ್ಞೆಯಂತೆ ಶಂಕರ ಹೊರಟುಹೋದ. ಅಲ್ಲಿ ಅನಂತನ ಆರೈಕೆಗೆ ಸೋಮಯಾಜಿಗಳೇ ನಿಂತರು. ಶಾಲೆ ಎಂತೂ ಆರಂಭವಾಗಿರಲಿಲ್ಲ. ಅವರಿಗೆ ಕೋಟೆಯತ್ತ ಹೋಗಿ, 'ಕಹಳೆ'ಯ ಅವಸಾನದ ನೆನಪನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವುದು ಬೇಕಿರಲಿಲ್ಲ. ಎಂತಲೇ ಮೂರು ನಾಲ್ಕು ದಿನ ಕುರ್ಲಾದಲ್ಲೇ ಉಳಿದರು.

ಅನಂತನಿಗೆ ಸೋಮಯಾಜಿಗಳು ಬಳಿ ಬಂದಾಗಲೆಲ್ಲ ಕಣ್ಣೀರು ಬರುತ್ತಿತ್ತು. ಅನಾರೋಗ್ಯ ಅವನನ್ನು ಆ ಸ್ಥಿತಿಗೆ ತಂದಿಟ್ಟಿತ್ತು. 'ಕಹಳೆ' ನಿಂತಿದೆ ಎಂದು ಯಾರೂ ಆತನಿಗೆ ತಿಳಿಸಿರಲಿಲ್ಲ. ಆದರೂ ಸೋಮಯಾಜಿಗಳು ಮನೆಯಲ್ಲೆ ನಿಂತುದರಿಂದಲೇ ಆತ ನಿಜಸ್ಥಿತಿಯನ್ನು ಊಹಿಸಿದ್ದ. ಈ ತಪ್ಪಿಗೆ ತಾನೇ ಹೊಣೆ ಎನ್ನುವಷ್ಟು ದುಃಖ ಆತನಲ್ಲಿತ್ತು. ಒಂದು ತಿಂಗಳ ಮಟ್ಟಿಗೆ ಸೋಮಯಾಜಿಗಳು ತನ್ನಲ್ಲಿರಿಸಿದ್ದ ವಿಶ್ವಾಸಕ್ಕೆ ತಾನು ಎಂಥ ಕೃತಘ್ನನಾದೆ ಎಂದು ಎದೆ ಮೊರೆಯಿಡುತ್ತಿತ್ತು.

ನಾಲ್ಕಾರು ದಿನಗಳಲ್ಲಿ ಅನಂತ ಚೇತರಿಸಿಕೊಂಡು ಅಡ್ಡಾಡಲು ಶಕ್ತನಾದ. ಅಷ್ಟರ ತನಕ ಹೆಚ್ಚಿಗೆ ಮಾತನಾಡದೆ ಮೌನವಾಗಿಯೇ ಇರುತ್ತಿದ್ದ ಸೋಮಯಾಜಿಗಳು, ಆಮೇಲೊಂದು ದಿನ ಅನಂತನೊಡನೆ ಕೇಳಿದರು :

"ಮನೆಗೆ ಏನಾದರೂ ಬರೆಯಬೇಕೇನು? ಕಾಗದವಿಲ್ಲವೆಂದು ನಿನ್ನ ಹೆಂಡತಿ ಹೆದರಿಕೊಳ್ಳಬಾರದಲ್ಲ."

ಪುನಃ ಭಾರತಿ !

ಅನಂತ. "ಬೇಡ. ಈಗ ಸರಿಯಾಗಿದ್ದೇನಲ್ಲ. ನಾನೇ ಬರೆಯುತ್ತೇನೆ" ಎಂದು ಹೇಳಿದ.

ತುಸು ಹೊತ್ತು ಇಬ್ಬರೂ ಮೌನವಾಗಿಯೇ ಕುಳಿತಿದ್ದರು. ಆಮೇಲೆ ಅನಂತ ಕೇಳಿದ :

" 'ಕಹಳೆ' ನಿಂತಂತೆಯೆ, ಅಲ್ಲವೆ ?

ಸೋಮಯಾಜಿಗಳು ಬರೇ ತಲೆಯಲ್ಲಾಡಿಸಿದರು.

"ನನ್ನ ತಪ್ಪಿನಿಂದಾಗಿ ಎಂಥ ಪ್ರಮಾದವಾಗಿಹೋಯಿತು ?"

"ನಿನ್ನದೇನು ತಪ್ಪು, ಅನಂತಾ ? ನಮ್ಮ ಅಸಮರ್ಥತೆ, ದೌರ್ಬಲ್ಯ

ಗಳಿಂದಾಗಿ ಪತ್ರಿಕೆಗೆ ಆ ಸ್ಥಿತಿ ಬಂದಿತ್ತು. ಆ ಕಾರಣ ಅವಸಾನ ತನ್ನತಾನೆ ಬಂತು. ನಾಲ್ಕು ವಾರ ನಿಂತರೂ ನಾಳೆ ನಡೆಸತೊಡಗಿದರೆ 'ಬೇಡ' ಎನ್ನುವವರಿದ್ದಾರೆಯೆ? ನಮ್ಮ ದೌರ್ಬಲ್ಯ ಈ ಘಟ್ಟಕ್ಕೆ ಮುಟ್ಟಿರುವಾಗ ನಿನ್ನ ಅನಾರೋಗ್ಯ ನೆಪವಾಯಿತು, ಅಷ್ಟೆ."

"ಇನ್ನು ಆ ಪತ್ರಿಕೆ ನಡೆಸುವುದು ಸಾಧ್ಯವಿಲ್ಲ, ಸೋಮಯಾಜಿಗಳೆ."

"ಯಾಕೆ, ಅನಂತಾ?"

"ನಾನು ಸಂಪಾದಕನಾಗಿ ಸಾಧ್ಯವಿಲ್ಲ. ಆ ಚೈತನ್ಯ ನನಗಿಲ್ಲ."

"ನಾಲ್ಕು ದಿನಗಳ ಜ್ವರ ಅಷ್ಟು ಧೈರ್ಯಗೆಡಿಸಿತೇನು?"

"ನಾಲ್ಕು ದಿನಗಳ ಜ್ವರವಲ್ಲ, ಸೋಮಯಾಜಿಗಳೆ. ಒಂದು ತಿಂಗಳಿಂದ ನಾನು ನರಳುತ್ತಿದ್ದೇನೆ."

"ಮತ್ತೇಕೆ ನನಗೆ ತಿಳಿಸಲಿಲ್ಲ, ಅನಂತಾ?"

ಅನಂತ ಮಾತನಾಡಲಿಲ್ಲ. ಎಲ್ಲ ಅಳಲನ್ನು ಸೋಮಯಾಜಿಗಳ ಮುಂದೆ ಒಪ್ಪಿಕೊಳ್ಳಬೇಕು ಎಂದು ಆಸೆಯಾಗುತ್ತಿತ್ತು. ಆದರೆ ಇಲ್ಲಿಯೂ ಅಧೈರ್ಯದ ಬೇಲಿಯೇ.

"ಇಂದಿರೆಗೆ ತಿಳಿದಿದೆಯೆ? ಯಾವಾಗಲಾದರೂ ಬಂದಿದ್ದಳೇ?" ಎಂದು ಸೋಮಯಾಜಿಗಳು ಅನಂತನನ್ನು ಕೇಳಿದರು. ರಾಜೀವನ ಕೊನೆಯ ದಿನಗಳಲ್ಲಿ ಆತನ ಸೇವೆಗೆ ಟೊಂಕ ಕಟ್ಟಿ ನಿಂತ ಇಂದಿರೆಯ ಚಿತ್ರ, ಈ ಮಾತು ಹೇಳುವಾಗ ಅವರ ಮುಂದಿತ್ತು.

ಅನಂತ ಬರೇ, "ಇಲ್ಲ" ಎಂದು ಹೇಳಿದ.

"ಬರೇ ಹಣಸಹಾಯ ಬೇಕು ಎಂದಿದ್ದರೆ ಸಂಜೀವರಾಯರನ್ನು ಕೇಳಿ ನೋಡಬಾರದಿತ್ತೆ, ಅನಂತಾ? ಯಾರಾದರೂ ಹುಡುಗರನ್ನಾದರೂ ಕಳಿಸ ಬಹುದಿತ್ತು."

ಅನಂತನ ಅಧೈರ್ಯ ಮೆಲ್ಲಮೆಲ್ಲನೆ ತೊಲಗಲಾರಂಭಿಸಿತು. ಮಾತು ಮಾತಿಗೆ ಸಂಜೀವರಾಯರೂ ಇಂದಿರೆಯೂ ಬರುತ್ತಿದ್ದುದರಿಂದ, ಉಂಟಾದ ನೋವಿನ ಸೃಷ್ಟಿಯಲ್ಲಿ, ಆ ನೋವಿನ ಪಾಲುಗಾರರಾಗಿ ಸೋಮಯಾಜಿಗಳು ಇರಲಿ ಎಂದು ಭಾವಿಸಿದ. ರಾಜೀವ ಬದುಕಿದ್ದಿದ್ದರೆ ಅನಂತ ತನ್ನ ಹೃದಯದ ದೌರ್ಬಲ್ಯವನ್ನು ಮೊದಲು ಆತನಿದಿರು ಒಪ್ಪಿಕೊಳ್ಳುತ್ತಿದ್ದ. ಆದರೆ ಈಗ ರಾಜೀವ ಎಲ್ಲಿಯೋ!

"ನಾನು ಹೋಗಿದ್ದೆ, ಸೋಮಯಾಜಿಗಳೆ."

"ಸಂಜೀವರಾಯರಲ್ಲಿಗೆ? ಯಾಕೆ, ಅವರು ಹಣ ಕೊಡಲು ನಿರಾಕರಿಸಿದರೆ?"

"ಅವರನ್ನು ಕಾಣಲು ನನಗೆ ಸಾಧ್ಯವಾಗಲಿಲ್ಲ. ಬಾಗಿಲಿನಿಂದಲೇ ಹೊರಬರಬೇಕಾಗಿ ಬಂತು."

ಅನಂತನ ಕಣ್ಣು ಪುನಃ ತುಂಬುತ್ತಿದ್ದುದನ್ನು ಗಮನಿಸಿದ ಸೋಮಯಾಜಿಗಳಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ.

"ಯಾಕೆ! ಏನಾಯಿತು?"

ಈಗ ಮಾತ್ರ ಅನಂತನ ಸಂಯಮದ ಗಡಿ ಮೀರಿತು. ಇಳಿದುಬರುತ್ತಿದ್ದ ಕಣ್ಣೀರಿನ ಕಡೆ ಗಮನ ಕೊಡದೆ ಅನಂತ ಸೋಮಯಾಜಿಗಳೊಡನೆ ಹೇಳಿದ:

"ಜಗತ್ತಿನ ದೃಷ್ಟಿಯಲ್ಲಿ, ಸಮಾಜದ ದೃಷ್ಟಿಯಲ್ಲಿ, ನಾನೊಂದು ಅಪರಾಧ ಮಾಡಿದ್ದೇನೆ, ಸೋಮಯಾಜಿಗಳೆ. ನಾನು ಇಂದಿರೆಯನ್ನು ಪ್ರೀತಿಸುತ್ತಿದ್ದೇನೆ."

"ಏನು?" ಎಂದು ಆಶ್ಚರ್ಯದಿಂದ ಸೋಮಯಾಜಿಗಳು ಕುಳಿತಿದ್ದವರು ಎದ್ದು ನಿಂತು ಕೇಳಿದರು.

"ಹೌದು, ಸೋಮಯಾಜಿಗಳೆ. ಆಶ್ಚರ್ಯವಾಯಿತೇನು? ಮದುವೆಯಾಗಿ ಸಂಸಾರ ನಡೆಸುತ್ತಿರುವ ನಾನು ಇಂದಿರೆಯನ್ನು ಪ್ರೀತಿಸುವುದು ಸಾಧ್ಯವೇ, ಎಂದು ಆಶ್ಚರ್ಯವಾಯಿತೇನು?"

"ಹಾಗಲ್ಲ ಅನಂತಾ....ಆದರೆ ನೀನು? ಇಂದಿರೆ....?" ಸೋಮಯಾಜಿಗಳು ತಮ್ಮ ಜೀವಮಾನವಲ್ಲೇ ಈ ರೀತಿಯ ಆಶ್ಚರ್ಯವನ್ನು ತಾವು ಅನುಭವಿಸಿಲ್ಲವೆನ್ನುವಂತೆ ಕೋಣೆಯ ಸುತ್ತ ತಿರುಗುತ್ತ ಕೇಳಿದರು.

"ಹೌದು, ಸೋಮಯಾಜಿಗಳೆ. ನಾನು ಇಂದಿರೆಯನ್ನು ಪ್ರೀತಿಸುತ್ತೇನೆ. ನನ್ನನ್ನೆ ನಂಬಿಕೊಂಡಿರುವ ಹೆಂಡತಿಗೆ ದ್ರೋಹವಿದೆಂದು ತಿಳಿದೂ ನಾನು ಇಂದಿರೆಯನ್ನು ಪ್ರೀತಿಸುತ್ತೇನೆ. ನನ್ನನ್ನು ಮನುಷ್ಯನನ್ನಾಗಿ ಮಾಡಿರುವ ಮಾವನಿಗೆ ಇದು ಕೃತಘ್ನತೆಯ ಉಡುಗೊರೆಯೆಂದು ತಿಳಿದೂ ನಾನು ಇಂದಿರೆಯನ್ನು ಪ್ರೀತಿಸುತ್ತೇನೆ. ಯಾವ ಸಾಮಾಜಿಕ ನಿರ್ಬಂಧವೂ ಇರದ ಮನಸ್ಸಿನ ಸ್ವಚ್ಛಂದ ಕಾರ್ಯಕ್ಷೇತ್ರದಲ್ಲಿ, ನನ್ನ ಜೀವಕ್ಕೆ ಪೂರಕ ಜೀವವಾಗಿ ನಿಲ್ಲುವ

ಯೋಗ್ಯತೆಯಿರುವ ಏಕಮಾತ್ರ ವ್ಯಕ್ತಿ ಇಂದಿರೆಯೆಂದು ತಿಳಿದು ಆಕೆಯನ್ನು ಪ್ರೀತಿಸುತ್ತೇನೆ. ಎಲ್ಲ ಸಾಮಾಜಿಕ ನಿಯಮಗಳ ಹಿನ್ನೆಲೆಯಲ್ಲಿ ಈ ಪ್ರೀತಿ ತಪ್ಪೆಂದು ತಿಳಿದೂ ನಾನು ಆಕೆಯನ್ನು ಪ್ರೀತಿಸುತ್ತೇನೆ. ಆಕೆಯ ಸ್ನೇಹದಲ್ಲಿ, ನಾನು ಎಂಥ ತ್ಯಾಗಕ್ಕೂ ಯಾವ ದೀಕ್ಷೆಗೂ ಸಿದ್ಧನಾಗಬಲ್ಲೆ ಎಂದು ತಿಳಿದು ಆಕೆಯನ್ನು ಪ್ರೀತಿಸುತ್ತೇನೆ."

ಸೋಮಯಾಜಿಗಳು ಕೋಣೆಯಿಡೀ ತಿರುಗುತ್ತಲೇ ಇದ್ದರು. ಅನಂತ ಮಾತು ನಿಲ್ಲಿಸಿ ಬಹಳ ಹೊತ್ತಾದಮೇಲೆ ಅವರು ಹೇಳಿದರು :

"ಆದರೆ ಇಂದಿರೆ ನಿನ್ನನ್ನು ಪ್ರೀತಿಸುವಳೆ, ಅನಂತಾ?"

"ಇಲ್ಲ"

"ಅದು ನನಗೆ ತಿಳಿದಿದೆ" ಎಂದು ಸೋಮಯಾಜಿಗಳು ಹೇಳಿದಾಗ ಅನಂತನಿಗೆ ಆಶ್ಚರ್ಯವಾಯಿತು.

"ನಿಮಗೆ?"

"ಹೌದು, ಅನಂತಾ. ಇಂದಿರೆ ನನ್ನೆದುರಿನಲ್ಲಿ ಬೆಳೆದ ಹುಡುಗಿ. ಆಕೆಯ ಮನಸ್ಸಿನ ಒಲವು ನಿಲವುಗಳನ್ನು ಸ್ವಲ್ಪಮಟ್ಟಿಗಾದರೂ ತಿಳಿದುಕೊಳ್ಳುವುದು ನನಗೆ ಸಾಧ್ಯವಿದೆ, ಎಂತಲೇ ಈ ಮಾತು ಹೇಳುತ್ತಿದ್ದೇನೆ. ನಾನು, ನನಗೆ ಎರಡು ಮಕ್ಕಳಿದ್ದರೆಂದು ಹೇಳಿದ್ದ ಮಾತು ನಿನಗೆ ನೆನಪಿರಬಹುದು. ಇಬ್ಬರೂ ನನ್ನನ್ನು ತಂದೆಯಂತೆ ಗೌರವದಿಂದ ಕಾಣುತ್ತಿದ್ದವರು. ಒಬ್ಬ ರಾಜೀವ, ಇನ್ನೊಬ್ಬ ಕೇಶವ. ಆ ಕೇಶವನನ್ನು ಮನಸಾರೆ ನೆಚ್ಚಿ, ತಂದೆಯ ಸ್ಪಷ್ಟವಾದರೂ ಸಹಜವಾದ ವಿರೋಧವನ್ನು ಕಡೆಗಣಿಸಿ, ಕೇಶವನನ್ನು ಮದುವೆಯಾದ ಹುಡುಗಿ—ಇಂದಿರೆ."

ಸೋಮಯಾಜಿಗಳು ಮಾತು ನಿಲ್ಲಿಸಿದ ಅವಕಾಶದಲ್ಲಿ ಅನಂತ ಹೇಳಿದ :

"ಈಗ ಆಕೆ ನೆಚ್ಚಿಕೊಂಡಿರುವುದು ಗಂಡನ ಸ್ಮೃತಿಯನ್ನು."

"ಹೌದು. ಅದೇ ಕಾರಣ ನಮ್ಮ ಪತ್ರಿಕೆಗೆ ಇಷ್ಟುದಿನ ದೊರಕಿದ ಸಹಾಯ, ಅನಂತಾ. ಕೇಶವ—ಇಂದಿರೆಯರ ಅನುರೂಪ ದಾಂಪತ್ಯ ಬಹಳ ಸ್ವಲ್ಪ ಸಮಯದ್ದು. ಆದರೆ ವಿಧಿಗೂ ಅದು ಸಹನೆಯಾಗಲಿಲ್ಲ. ಎಂತಲೇ ಆತನ ಇತಿಹಾಸ ೪೨ರಲ್ಲೆ ಮುಗಿಯಿತು."

ಅನಂತ ಸೋಮಯಾಜಿಗಳ ಮುಖ ನೋಡುತ್ತ ಕುಳಿತಿದ್ದ.

"ಆ ಇಬ್ಬರೂ ಹುಡುಗರು ನನಗೆಷ್ಟು ಪ್ರಿಯರಾಗಿದ್ದರೆಂದು ವಿವರಿಸು

ವುದು ಸಾಧ್ಯವಿಲ್ಲ, ಅನಂತಾ. ಆದರೆ ಇಬ್ಬರೂ ಅಭಿಮಾನದ ಪ್ರತಿಮೂರ್ತಿಗಳು ಬೇರೆ. ಈ ಅಭಿಮಾನದಿಂದಾಗಿ ಅವರೊಳಗೆ ಆಗಾಗ ಉಂಟಾಗುತ್ತಿದ್ದ ಮತಭೇದ. ಈ ಮತಭೇದ, ಜಗಳ ಹೋಗಬೇಕೆಂದು ನಾನು ಪಡುತ್ತಿದ್ದ ಪಾಡು. ಅಜಾದ್ ಮೈದಾನಿನಲ್ಲಿ ಇಬ್ಬರಿಗೂ ತಾಸುಗಟ್ಟಲೆ 'ಶೆಲ್ಲಿ'ಯ ಕುರಿತು ಹೇಳಬೇಕು. ಅವನ ಕಾವ್ಯವಾಚನವಾಗಬೇಕು. ಆಮೇಲೆ ಅವರು ಇಬ್ಬರೂ ಜೊತೆಗೂಡಿ ಮರಳುವುದನ್ನು ನೋಡಿ ನಾನು ಆನಂದಿಸಬೇಕು— ಹೀಗಿದ್ದ ದಿನಗಳೆಲ್ಲ ಕಳೆದಿದ್ದಾವೆ, ಅನಂತಾ...."

ಮಾತಿನ ಆವೇಗದಲ್ಲಿ, ಗತಕಾಲದ ಸ್ಮೃತಿಯಲ್ಲಿ ಸೋಮಯಾಜಿಗಳು ಅನಂತನ ಸಮಸ್ಯೆಯನ್ನೇ ಮರೆತಿದ್ದರು.

ಅನಂತನೂ ಕಡಲ ತಡಿಯಲ್ಲಿ ಕುಳಿತು, 'ಶೆಲ್ಲಿಯ ಸಮುದ್ರಪ್ರೀತಿ ನೆನಪಾಗುವುದೇನು, ನಿಮಗೆ?' ಎಂದು ಕೇಳಿದ್ದ ಇಂದಿರೆಯನ್ನು ನೆನೆಸಿ ಕೊಳ್ಳುತ್ತಿದ್ದ.

"ಹೀಗಿರುವುದರಿಂದ ಇಂದಿರೆ ನಿನ್ನನ್ನು ಪ್ರೀತಿಸುವುದು ಸಾಧ್ಯವಿಲ್ಲ, ಅನಂತಾ. ಎಂಥ ಅನುಚಿತ ಕೆಲಸ ಮಾಡಿದೆ?"

"ಇಂದಿರೆಯನ್ನು ಪ್ರೀತಿಸಿ, ಅತ್ಯಂತ ಯೋಗ್ಯವಾದ ಕೆಲಸವನ್ನೇ ಮಾಡಿದೆನೆಂದು ನನಗನಿಸುತ್ತಿದೆ, ಸೋಮಯಾಜಿಗಳೆ. ಆದರೆ ನನ್ನ ಪ್ರೀತಿಯನ್ನು ತಿಳಿಸಿ ಅನುಚಿತ ಕೆಲಸ ಮಾಡಿದೆ."

"ಇಂದಿರೆ ಏನೆಂದಳು?"

ಒಂದರ ಹಿಂದೊಂದು, ಅಧಿವೇಶನದ ರಾತ್ರಿಯಿಂದ ಆರಂಭವಾದ ನೆನಹುಗಳೆಲ್ಲ ಅನಂತನ ಮುಂದೆ ಬರತೊಡಗಿದವು. ಈಗ ಯಾವ ಸಂಕೋಚವೂ ಇಲ್ಲದೆ, ಸೋಮಯಾಜಿಗಳೊಡನೆ, ಜರಗಿದ ಎಲ್ಲ ಘಟನೆಗಳನ್ನು ಅನಂತ ವಿವರಿಸಿದ.

"ಎಂಥ ತಪ್ಪು ಕೆಲಸ ಮಾಡಿದೆ, ಅನಂತಾ? ಎಂಥ ತಪ್ಪು ಕೆಲಸ ಮಾಡಿದೆ, ಅನಂತಾ?" ಎಂದಿಷ್ಟೇ ಸೋಮಯಾಜಿಗಳ ಉತ್ತರ.

ಅನಂತನಿಗೆ ಇನ್ನಷ್ಟು ದುಃಖವಾಯಿತು.

"ನಾನು ಇಂದಿರೆಯನ್ನು ಪ್ರೀತಿಸಿ ತಪ್ಪು ಕೆಲಸ ಮಾಡಿದೆನೆಂದು ಯಾರು ಹೇಳಿದರೂ ಒಪ್ಪುವ ಸ್ಥಿತಿಯಲ್ಲಿಲ್ಲ, ಸೋಮಯಾಜಿಗಳೆ" ಎಂದು ಆತ ಹೇಳಿದ.

ಸೋಮಯಾಜಿಗಳಿಗೆ, ಅನಂತನಿಗೆ ಏನು ಸಮಾಧಾನ ಹೇಳುವುದೆಂದು ತಿಳಿಯಲಿಲ್ಲ.

"ಮುಂದೇನು, ಅನಂತಾ?" ಎಂದು, ಭವಿಷ್ಯವನ್ನು ಗುರುತಿಸುವ ಇಚ್ಛೆಯಿಂದ ಅವರು ಕೇಳಿದರು.

"ಇಂದಿರೆ ನನ್ನನ್ನು ಪ್ರೀತಿಸುವುದಿಲ್ಲವೆಂದು ನನಗೆ ತಿಳಿದಿದೆ, ಸೋಮಯಾಜಿಗಳೆ. ಪ್ರೀತಿಯ ಅಭಿವ್ಯಕ್ತಿ ತ್ಯಾಗದಲ್ಲಿ. ನನಗೆ ಪ್ರಿಯವಾದ ಜೀವಕ್ಕೆ ನನ್ನ ಸ್ನೇಹ ಬೇಕಿಲ್ಲವೆಂದಾದರೆ, ಆ ಜೀವದ ಸಮಾಧಾನಕ್ಕಾಗಿ ನಾನು ಯಾವ ತ್ಯಾಗವನ್ನು ಮಾಡಲೂ ಸಿದ್ಧನೇ. ಇಂದಿರೆಯ ಸ್ನೇಹ ನನಗೆ, ನನ್ನ ಹೋರಾಟದ ಹಾದಿಯಲ್ಲಿ ಜಗತ್ತನ್ನೇ ಬದಲಿಸುವ ಕೆಚ್ಚು ಕೊಡಬಹುದಿತ್ತು. ಆದರೆ ಆ ಸ್ನೇಹ ಆಕೆಗೆ ಬೇಡನೆಂದಾದಮೇಲೆ ನಾನು ಹೇಗೆ ಅಪೇಕ್ಷಿಸಿಯೇನು? ಈಗ ಆಕೆ ನನ್ನನ್ನು, ನನ್ನ ಅನುಚಿತ ವರ್ತನೆಗೆ ಕ್ಷಮಿಸಿದ್ದರೆ ಸಾಕಿತ್ತು. ಈ ನೋವಿನ ಜಂಝಾವಾತದಿಂದ ನನ್ನನ್ನು ಬಿಡುಗಡೆ ಮಾಡಿದಂತಾಗುತ್ತಿತ್ತು."

ಕಣ್ಣೀರು ಇಳಿದು ಬರುತ್ತಿತ್ತು. ಸೋಮಯಾಜಿಗಳು ಅನಂತನನ್ನೆ ನೋಡುತ್ತ ಯಾವ ಮಾತನ್ನೂ ಆಡದೇ ಕುಳಿತಿದ್ದರು.

ಅನಂತನಿಗೆ ಆಗ ಮಾತು ಬೇಕಿರಲಿಲ್ಲ.

ಮಾರನೆಯ ದಿನ, ಸೋಮಯಾಜಿಗಳು ತಮ್ಮ ಕೋಣೆಗೆ ಹಿಂದಿರುಗುವ ಆಸೆ ಸೂಚಿಸಿದರು. ಅನಂತ 'ಬೇಡ' ಎನ್ನಲಿಲ್ಲ. ಅವನ ಭವಿಷ್ಯದ ಕುರಿತು ಅವರು ಬೇರೆ ಯಾವ ಮಾತನ್ನೂ ಆಡಿರಲಿಲ್ಲ. ಅವರು ಸ್ವತಃ ತಾವು ಚಿಂತಿಸಿರಲೂ ಇಲ್ಲ. ಮನೆಯ ವ್ಯವಸ್ಥೆಯನ್ನೆಲ್ಲ ಸರಿಪಡಿಸಿ, "ನೀನು ಆರಾಮವಾಗಿ ನಾಲ್ಕು ದಿನ ಮಲಗಿಕೊ. ನಾನು ಬಂದು ಕಾಣುತ್ತೇನೆ" ಇಂದು ಹೇಳಿ ಸೋಮಯಾಜಿಗಳು ಹೊರಟುಹೋದರು.

ಅನಂತನ ಮನೆ ಬಿಟ್ಟು ಬಂದ ಸೋಮಯಾಜಿಗಳು ನೇರವಾಗಿ ನಡೆದುದು ಸಂಜೀವರಾಯರಲ್ಲಿಗೆ. ಸಂಜೀವರಾಯರು ಮನೆಯಲ್ಲೇ ಇದ್ದರು. ಅವರಿಲ್ಲದ ಸಂಧಿ ಸಾಧಿಸಿ ಹೋಗಿ ಇಂದಿರೆಯನ್ನು ಕಾಣಬೇಕೆಂದು ಸೋಮಯಾಜಿಗಳ ಇಚ್ಛೆಯಿದ್ದಿತ್ತು. ಆದರೆ ಸಾಧ್ಯವಾಗಲಿಲ್ಲ.

ಸೋಮಯಾಜಿಗಳು ಒಳಗೆ ಬಂದೊಡನೆ ಸಂಜೀವರಾಯರು,

"ಏನು, ಮಾಸ್ತರರೆ! ಇಷ್ಟು ಅಪರೂಪವಾಗಿ ಬಿಟ್ಟಿರಿ? ನನಗೆ ತಿಳಿಸ

ದೇನೇ ನಿಮ್ಮ ಪತ್ರಿಕೆ ನಿಲ್ಲಿಸಿಬಿಡಬಹುದೆ? ಅನಂತರಾಯರು ಕೂಡ ಇತ್ತ ಕಡೆ ಬಂದೇ ಇಲ್ಲ. ಅಷ್ಟೇನು ಸಿಟ್ಟು, ನಮ್ಮ ಮೇಲೆ?" ಎಂದು ಕೇಳಿದರು.

"ನಾನು ಊರಿಗೆ ಹೋಗಿದ್ದೆ. ಎಲ್ಲ ಜವಾಬ್ದಾರಿ ಅವರ ಮೇಲಿತ್ತು. ಹೀಗಾಗಿ ಅವರಿಗೆ ಬರಲಾಗಲಿಲ್ಲ" ಎಂದು ಸೋಮಯಾಜಿಗಳು ಹೇಳಿದಾಗ ಸಂಜೀವರಾಯರಿಗೆ ಸಮಾಧಾನವಾಯಿತು.

"ಪತ್ರಿಕೆ ಏಕೆ ನಿಲ್ಲಿಸಿಬಿಟ್ಟಿರಿ?"

"ಎಷ್ಟುದಿನ ನಿಮಗೆಲ್ಲ ಕಷ್ಟ ಕೊಟ್ಟು ನಡೆಸಿಕೊಂಡು ಹೋಗುವುದು. ಒಂದು ವರ್ಷ ಕಳೆದರೂ ತನ್ನ ಕಾಲ ಮೇಲೆ ತಾನು ನಿಲ್ಲಲು ಸಾಧ್ಯವಾಗದ ಪತ್ರಿಕೆ ಬದುಕಿರಬೇಕೇಕೆ?—ಎಂದು ನಿಲ್ಲಿಸುವ ತೀರ್ಮಾನ ಮಾಡಿದೆವು" ಎಂದು ಸಂಜೀವರಾಯರೊಡನೆ ಹೇಳುವಾಗ ಸೋಮಯಾಜಿಗಳಿಗೆ ಕರುಳು ಕಿವುಚಿದಂತಾಗಿತ್ತು. ಆದರೆ ಆ ರೀತಿ ಹೇಳದೆ ವಿಧಿಯಿದ್ದಿಲ್ಲ.

"ಇಂದಿರೆ ಮನೆಯಲ್ಲಿಲ್ಲವೆ?" ಎಂದು ಸೋಮಯಾಜಿಗಳು ವಿಷಯ ಬದಲಿಸಿ ಪ್ರಶ್ನಿಸಿದರು.

"ಎಲ್ಲಿಗೋ ಹೋಗಿದ್ದಾಳೆ. ಇಷ್ಟರಲ್ಲಿಯೇ ಬರಬೇಕಿತ್ತು" ಎಂದು ಸಂಜೀವರಾಯರು ಹೇಳಿದರು ಆದರೆ ಸೋಮಯಾಜಿಗಳು ಇಂದಿರೆ ಮರಳುವ ತನಕ ಅಲ್ಲಿ ನಿಲ್ಲಲಿಲ್ಲ. ಸಂಜೀವರಾಯರು ಇರದ ಸಂಧಿಯಲ್ಲಿ ಅವಳನ್ನು ಕಾಣಬೇಕೆಂದು ನಿಶ್ಚಯಿಸಿದ್ದ ಅವರು ಮತ್ತೆ ಹೆಚ್ಚು ಹೊತ್ತು ನಿಲ್ಲದೆ ಹೊರಟು ಹೋದರು.

ಮತ್ತೆರಡು ದಿನ ಕಳೆದಮೇಲೆ ಸೋಮಯಾಜಿಗಳು ಬಯಸಿದ ಸಂಧಿ ಬಂತು. ಮಧ್ಯಾಹ್ನ ಸಂಜೀವರಾಯರು ಆಫೀಸಿಗೆ ಹೋಗಿರಬಹುದಾದ ಹೊತ್ತಿನಲ್ಲಿ ಅವರು ಸಂಜೀವರಾಯರ ಮನೆಗೆ ಬಂದರು.

ಈ ಸಲ ಬಾಗಿಲು ತೆರೆದುದು ಇಂದಿರೆಯೆ.

ಉಪಚಾರದ ನಗು ಒಂದು ಕ್ಷಣ ಇಂದಿರೆಯ ಮುಖದಲ್ಲಿ ಮಿಂಚಿತು. ಮತ್ತೆ ಮುಖ ಕಪ್ಪಿಟ್ಟಿತು.

"ಅಪ್ಪ ಇಲ್ಲವೇನಮ್ಮ, ಇಂದಿರಾ?" ಎಂದು ಸೋಮಯಾಜಿಗಳು ಪ್ರೀತಿಯಿಂದ ಕೇಳಿದಾಗ ಮಾತ್ರ ಆಕೆಯ ಅಸಂತೋಷ ಮಾಯವಾಗಿ,

"ಇಲ್ಲ. ಆಫೀಸಿಗೆ ಹೋಗಿದ್ದಾರೆ. ಆದರೆ ನಾನಿದ್ದೇನಲ್ಲ. ಬಹಳ ಅಪರೂಪವಾಗಿ ಬಂದಿರಿ" ಎಂದು ಹೇಳಿದಳು.

"ನಿನ್ನನ್ನೆ ಕಾಣಬೇಕಿತ್ತು, ಇಂದಿರಾ. ಅದಕ್ಕಾಗಿ ಬಂದೆ. ಒಂದು ತಿಂಗಳು ಊರಿಗೆ ಹೋಗಿದ್ದೆ. ಈಗ ಏಳೆಂಟು ದಿನಗಳ ಹಿಂದೆ ಬಂದೆ. ಅಷ್ಟೆ" ಎಂದರು.

"ಬನ್ನಿ, ಮಾಸ್ತರರೆ" ಎಂದು ಇಂದಿರೆ ಸೋಮಯಾಜಿಗಳನ್ನು ತನ್ನ ಕೋಣೆಗೆ ಕರೆದೊಯ್ದಳು.

ಕೋಣೆಗೆ ಬಂದು ಕುಳಿತು, ಸೋಮಯಾಜಿಗಳು ಇಂದಿರೆಯನ್ನೇ ನೋಡುತ್ತ ಹೇಳಿದರು:

"ಅನಂತನಿಗೆ ಸೌಖ್ಯವಿಲ್ಲ, ಇಂದಿರಾ."

ಅನಂತನ ಆರೋಗ್ಯದ ಪ್ರಶ್ನೆ ಈಗೇಕೆ ಬಂತೆಂದು ಇಂದಿರೆಗೆ ಆಶ್ಚರ್ಯವಾಯಿತು.

"ಅದಕ್ಕೆ ನಾನೇನು ಮಾಡಬೇಕಾಗಿದೆ?"

ಸೋಮಯಾಜಿಗಳು ಕುಳಿತಲ್ಲಿಂದ ಎದ್ದು ಇಂದಿರೆ ಕುಳಿತಿದ್ದಲ್ಲಿಗೆ ಬಂದರು. ಆಕೆ ಮುಖ ತಗ್ಗಿಸಿದ್ದಳು. ಇಂದಿರೆಯ ತಲೆಯನ್ನು ನೇವರಿಸುತ್ತಿದ್ದಂತೆ ಸೋಮಯಾಜಿಗಳು,

"ನೋಡು, ಇಂದಿರಾ. ಕೇಶವ ನನಗೆ ಮಗನಂತೆಯೇ ಇದ್ದ. ಅದು ನಿನಗೂ ತಿಳಿದಿದೆ. ಆ ಕಾರಣ ನಿನಗೆ ಬೇಸರ ಕೊಡುವ ಇಚ್ಛೆಯಿಂದ ನಾನು ಏನನ್ನೂ ಹೇಳುವುದಿಲ್ಲ. ಬಾಪುವಿನ ವರ್ಚಸ್ಸಿನಡಿ ಬೆಳೆದು ಬಂದ ಹುಡುಗಿಗೆ, ಸಹನೆಯ ಕುರಿತು ನಾನು ಪಾಠ ಹೇಳಿಕೊಡಬೇಕೇ?"

"ಯಾಕೆ ಈ ಮಾತು, ಮಾಸ್ತರರೆ?"

"ನೀನು ಕೇಶವನನ್ನು ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದಿ. ಇಂದು ಅವನ ಸ್ಮೃತಿಯನ್ನು ಅಷ್ಟೇ ಪ್ರೀತಿಯಿಂದ ಪೂಜಿಸುತ್ತಿರುವಿ."

ಇಂದಿರೆ ಮಾತನಾಡಲಿಲ್ಲ. ತನ್ನ ಗಲ್ಲವನ್ನು ಕೈಗಳಿಂದ ಆಧರಿಸಿ ಸೋಮಯಾಜಿಗಳ ಮುಖ ನೋಡುತ್ತ ಕುಳಿತಳು.

"ಅನಂತ ನನಗೆ ಎಲ್ಲವನ್ನೂ ಹೇಳಿದ್ದಾನೆ, ಇಂದಿರಾ. ಪ್ರೀತಿಯ ಆವೇಗ, ಮಾಧುರ್ಯಗಳ ಕುರಿತು ತಿಳಿವಳಿಕೆಯಿರುವ ನೀನು ಅನಂತನನ್ನು ಕ್ಷಮಿಸಬೇಕಿತ್ತು."

ಇಂದಿರೆಯ ಕಣ್ಣು ತುಂಬಿನುದನ್ನು ಸೋಮಯಾಜಿಗಳು ಕಂಡರು.

"ಅದು ಹೌದು, ಮಾಸ್ತರರೆ! ಆದರೆ ತಾರುಣ್ಯದಲ್ಲೆ ಪ್ರೀತಿಯ ನಲ್ಲನನ್ನು

ಕಳೆದುಕೊಂಡ ಹುಡುಗಿಯನ್ನು, ಸೇವೆಯ ದೀಕ್ಷೆಹೊತ್ತು ಕುಳಿತಿರುವ ಹುಡುಗಿಯನ್ನು ಸಲಿಗೆಯಿಂದ ಪ್ರಲೋಭನೆಯ ಸೀಮೆಗೊಯ್ಯಬಾರದಿತ್ತು,ಮಾಸ್ತರರೆ. ಇದು ತಪ್ಪಲ್ಲವೇನು ?"

"ಹೌದು ಇಂದಿರಾ, ತಪ್ಪು. ಅನಂತ, ನೀನು ಕೂಡ ಆತನನ್ನು ಪ್ರೀತಿಸುತ್ತಿರುವೆಯೆಂದು ತಿಳಿದುಕೊಂಡುದರಿಂದುಂಟಾದ ತಪ್ಪು. ಪ್ರೀತಿ ಅಂಥ ತಪ್ಪು ಮಾಡಿಸುತ್ತದೆ, ಇಂದಿರಾ. ಆದರೆ ಅದನ್ನು ಕ್ಷಮಿಸುವ ಉದಾರ ಹೃದಯ ತೋರಿದರೇನು ಹಾನಿಯಮ್ಮಾ ?"

"ಆ ತಪ್ಪನ್ನು ಕ್ಷಮಿಸಬೇಕಾದುದು ಭಾರತಿಯಲ್ಲವೆ, ಮಾಸ್ತರರೆ! ಅವಳಿಗೆ ತಾವು ಬಗೆಯುತ್ತಿರುವ ದ್ರೋಹದ ಕಲ್ಪನೆಯೇ ಅವರಿಗಿದ್ದಂತಿಲ್ಲ."

"ಅದು ನಿಜ, ಇಂದಿರಾ. ಇದೂ ಪ್ರೀತಿ ಮಾಡಿಸುವ ಅಪರಾಧವೆ! ಒಂದು ವೇಳೆ ನೀನು ನಾಗೇಶರಾಯರ ಮಗನನ್ನು ಮದುವೆಯಾಗುವ ಪ್ರಸಂಗ ಬಂದಿದ್ದರೆ, ಆಗ ಕೇಶವನನ್ನು ಪ್ರೀತಿಸುವುದು ತಪ್ಪಾಗುತ್ತಿರಲಿಲ್ಲವೇನು ? ನೀನು ಕೇಶವನನ್ನೆ ಮದುವೆಯಾದೆ. ಅನಂತ ತಾನು ಮದುವೆಯಾದ ಹುಡುಗಿಯನ್ನು ಪ್ರೀತಿಸಲಿಲ್ಲ. ನಿನ್ನನ್ನು ಪ್ರೀತಿಸಿದ. ಈ ಸಂದರ್ಭದಲ್ಲಿ ಅವನಿಂದೊಂದು ಅನುಚಿತ ಕೆಲಸ, ಅದೂ ತಿಳಿಯದೆ, ಆದರೆ, ಅದನ್ನು ಸಹಿಸುವಷ್ಟು ಔದಾರ್ಯ ಇಂದಿರೆಗಿಲ್ಲವೆ ?"

ತದೇಕಚಿತ್ತಳಾಗಿ ಸೋಮಯಾಜಿಗಳ ಮಾತುಗಳನ್ನು ಕೇಳುತ್ತಿದ್ದ ಇಂದಿರೆ, ಮಾತು ಮುಗಿದೊಡನೆ,

"ನನ್ನ ಮತ್ತು ಅನಂತರಾಯರ ಸ್ನೇಹಸಂಬಂಧ ಉಳಿಯುವುದು ಶಕ್ಯವಿಲ್ಲ, ಮಾಸ್ತರರೆ. ಅವರು ನನ್ನ ಯೋಚನೆಯನ್ನು ಬಿಟ್ಟು, ನನ್ನನ್ನು ನೋಡದೇನೇ ದೂರ ಇರುವುದು ಒಳ್ಳೆಯದು. ಅವರ ಪ್ರತಿಭೆಯಲ್ಲಿ ನಾನು ನನ್ನ ಗಂಡನ ಪ್ರತಿಭೆಯನ್ನು ಕಂಡುಕೊಂಡು ಮೆಚ್ಚಿದೆ. ಆ ತಪ್ಪಿಗೆ ತಕ್ಕ ಪ್ರಾಯಶ್ಚಿತ್ತ ಆಗಿದೆ. ಇಷ್ಟಲ್ಲದೆ ಆ ಸ್ನೇಹ ಭಾರತಿಗೆ ಮಾಡುವ ಅನ್ಯಾಯವನ್ನು ತಿಳಿದೂ ನಾನು ಹೇಗೆ ಸಹಿಸಿಕೊಂಡಿರುವುದು ಸಾಧ್ಯ ಮಾಸ್ತರರೆ ?"

"ಅದು ನಿಜ, ಇಂದಿರಾ. ನೀನು ಒಮ್ಮೆ ಅನಂತನನ್ನು ನೋಡಿ, ಕ್ಷಮಿಸಿದೆನೆಂದು ಹೇಳು, ಸಾಕು. ಅವನಿಗೆ ಅಷ್ಟರಲ್ಲೆ ತೃಪ್ತಿಯಾಗುವುದೆಂದು ನನಗೆ ನಂಬಿಕೆಯಿದೆ. ಇಲ್ಲವಾದರೆ ಆಜೀವಪರ್ಯಂತ ಆತ ಕೊರಗಿಯೇ ಸಾಯುತ್ತಾನೆ."

"ಆಗಲಿ, ಮಾಸ್ತರರೆ. ನಾಳೆ ಅವರನ್ನು ಕರೆದುಕೊಂಡುಬನ್ನಿ. ಇದೂ ಒಂದು ತ್ಯಾಗವೇ ಎಂದು ತಿಳಿದು, ನನಗಿಂತ ಹಿರಿಯರಾದವರನ್ನು 'ಕ್ಷಮಿಸಿದೆ' ಎನ್ನುತ್ತೇನೆ" ಎಂದು ಇಂದಿರೆ ನಡಗುವ ದನಿಯಲ್ಲಿ ಹೇಳಿದಳು.

"ಅಷ್ಟು ಮಾಡಮ್ಮ. ಆಮೇಲೆ ನಾನೇ ಅನಂತನನ್ನು ಊರಿನ ತನಕ ಕರೆದುಕೊಂಡು ಹೋಗುತ್ತೇನೆ. ಆ ಒಡೆದ ಮನೆಯನ್ನು ಸರಿಪಡಿಸಲುಸಾಧ್ಯವೇ ಎಂದು ನೋಡುತ್ತೇನೆ. ನಮ್ಮ ಹೋರಾಟದಲ್ಲಿ ಇಂಥ ದೌರ್ಬಲ್ಯಗಳು ಬರುವುದಿಲ್ಲ ಎಂದು ತಿಳಿದಿದ್ದೆ. ಆದರೆ ಈ ತಿಳುವಳಿಕೆ ತಪ್ಪಾಗಿದೆ. ನೀನು ಹೇಳಿದಂತೆ, ಭಾರತಿಗೂ ಅನ್ಯಾಯವಾಗಿದೆ" ಎಂದು ಸೋಮಯಾಜಿಗಳು ಮಿದುವಾಗಿಯೇ ಹೇಳಿದರು.

ಇಂದಿರೆ ಅನಂತನನ್ನು ಕಾಣಲು ಒಪ್ಪಿದುದು ಸೋಮಯಾಜಿಗಳಿಗೆ ಅತ್ಯಂತ ಸಮಾಧಾನವನ್ನು ಕೊಟ್ಟಿತ್ತು. ಇದೇ ಹಿಗ್ಗಿನಲ್ಲೇ ಅವರು ಮಾರನೆಯ ದಿನ ಕುರ್ಲಾಕ್ಕೆ ಹೋದರು.

ಅನಂತ ಸೋಮಯಾಜಿಗಳ ದಾರಿಯನ್ನೆ ಕಾಯುತ್ತಿದ್ದ. ಹೊರಗೆ ಹೊರಡುವ ಚೈತನ್ಯ ಬಂದಿದ್ದಿತಾದರೂ ಹೊರಡುವ ಮನಸ್ಸಿರಲಿಲ್ಲ. ಹೊಯ್ದಾಡುವ ಮನಸ್ಸು ಮನೆಯಲ್ಲೆ ತುಸುಮಟ್ಟಿಗಾದರೂ ಸ್ತಿಮಿತದಲ್ಲಿರುವುದೆಂಬ ಸಮಾಧಾನದಿಂದ ಆತ ಮನೆ ಬಿಟ್ಟಿರಲಿಲ್ಲ.

ಆದರೂ ಮನೆ ಭಾರತಿಯ ನೆನಪು ತಂದುಕೊಡುತ್ತಿತ್ತು. ಮನೆಯ ಗೋಡೆ ಬಾಗಿಲುಗಳೂ ಆತನಿಗೆ ಭಾರತಿಯ ನೆನಪು ತಂದುಕೊಡತೊಡಗಿದಾಗ ಆತ ಅಧೀರನಾಗುತ್ತಿದ್ದ. ಮನೆಯಿಂದ ಹೊರಬಿದ್ದಾಗ, ಹೋಗುವುದೆಲ್ಲಿಗೆ? ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತಿತ್ತು. ಬರವಣಿಗೆಯ ಇತಿಹಾಸಕ್ಕೆ ಸದ್ಯಕ್ಕಾದರೂ ಮುಗಿತಾಯ ಬಂದಂತೆಯೆ. 'ಕಹಳೆ'ಯಿರದ ಬದುಕನ್ನು ಆತ ಕಳೆದ ಒಂದೂವರೆ ವರ್ಷದಲ್ಲಿ ಊಹಿಸಿರಲೂ ಇಲ್ಲ. ಈಗ ಅದು ಸತ್ಯ ಸ್ಥಿತಿಯಾಗಿ ಬಂದಾಗ ಅಸಹನೀಯ ವೇದನೆ ಅನುಭವವೇದ್ಯವಾಗುತ್ತಿತ್ತು.

ಸೋಮಯಾಜಿಗಳು ಬಂದವರಿಗೆ ತುಂಬ ಸುಧಾರಿಸಿದ್ದ ಅನಂತನನ್ನು ಕಂಡು ಆನಂದವಾಯಿತು. ಮಧ್ಯಾಹ್ನದ ಅಡುಗೆಯನ್ನು ತಾವೇ ಮಾಡಿ ಅನಂತನ ಜೊತೆಗೇ ಕುಳಿತು ಊಟ ಮಾಡಿದರು. ಅವರ ಮುಖಭಾವದಿಂದಲೇ ಅನಂತನಿಗೆ ಸೋಮಯಾಜಿಗಳಿಗೆ ಏನೋ ಹೇಳಲಿದೆಯೆಂದು ತಿಳಿದಿತ್ತು.

ಆದರೆ ತಾಸಾಗಿ ಕೇಳುವ ಉತ್ಸುಕತೆ ತೋರಿಸಲಿಲ್ಲ. ಆ ಕುತೂಹಲ ಇದ್ದಿ ತಾದರೂ ಆತ ಅದನ್ನು ವ್ಯಕ್ತಪಡಿಸಲಿಲ್ಲ.

ಊಟವಾಗಿ ಒಂದರ್ಧ ತಾಸು ಕಳೆದಮೇಲೆ ಸೋಮಯಾಜಿಗಳು ಅನಂತನೊಡನೆ ಹೇಳಿದರು :

"ನಾನು ಇಂದಿರೆಯನ್ನು ನೋಡಿದ್ದೇನೆ, ಅನಂತಾ."

ಅನಂತ ಮಾತನಾಡಲಿಲ್ಲ.

"ಅವಳು ನಿನ್ನ ಅನುಚಿತ ವರ್ತನೆಯನ್ನು ಕ್ಷಮಿಸಿದ್ದಾಳೆ. ಅವಳನ್ನು ಒಮ್ಮೆ ನೋಡುವ ಆಸೆ ನಿನಗಿದೆಯೆ ?"

ಬರೇ ಆಸೆಯೆ! ಇಂದಿರೆ, ತನ್ನ ವರ್ತನೆಯಿಂದಾಗಿರಬಹುದಾದ ನೋವನ್ನು ಮರೆತು ಕ್ಷಮಿಸಿರುವೆನೆಂದು ಹೇಳಿದರೆ, ಒಮ್ಮೆಗೆ ಅನಂತನ ತೊಳಲುತ್ತಿದ್ದ ಜೀವ ನೆಮ್ಮದಿಯೆಂದರೇನೆಂದು ಅರಿಯುತ್ತಿತ್ತು.

"ಬರೇ ಆಸೆಯೇ, ಮಾಸ್ತರರೆ ?"

"ಅವಳ ಸ್ನೇಹವನ್ನು ನೀನು ಯಾಚಿಸುವುದು ತಪ್ಪು, ಅನಂತಾ. ನಾನು, ನೀನು ಇರುವ ಸಮಾಜದ ದೃಷ್ಟಿಯಲ್ಲಿ ಮಾತ್ರ ಈ ತಪ್ಪಲ್ಲ. ಅವಳು ಆ ಸ್ನೇಹವನ್ನು ಬಯಸುವುದಿಲ್ಲವೆಂದು ತಪ್ಪು. ಆದರೆ ಅವಳು ನಿನ್ನನ್ನು ಕ್ಷಮಿಸಿದ್ದಾಳೆ. ಅವಳ ಸಿಟ್ಟು ನಿನಗೆ ಕೊಟ್ಟಿರಬಹುದಾದ ನೋವನ್ನು ಮರೆತು ಬಿಡುವಂತೆ ನಿನ್ನನ್ನು ಕೇಳಿಕೊಳ್ಳಲು ಸಿದ್ಧಳಿದ್ದಾಳೆ."

ಅನಂತ ಮೂಕನಂತೆ ಕುಳಿತಿದ್ದ.

"ಆದರೆ ನನ್ನದೊಂದು ಶರ್ತವಿದೆ, ಅನಂತಾ. ನೀನು ಇಂದಿರೆಯನ್ನು ನೋಡಿಯಾದಮೇಲೆ, ನಾನು ಹೇಳಿದಂತೆ ಮಾಡಬೇಕು. ನನ್ನ ಜೊತೆಗೆ ಊರಿಗೆ ಮರಳಬೇಕು. ನೀನು ಕೆಲವು ತಿಂಗಳಕಾಲವನ್ನಾದರೂ ನಿನ್ನ ಊರಿನ ಆವರಣದಲ್ಲಿ ಕಳೆಯಬೇಕು. ಇದು ನನ್ನ ಅಪೇಕ್ಷೆ. ಇದನ್ನು ಮನ್ನಿಸುವಿ ಯೆಂದಾದರೆ, ನಾನು ಈಗಲೇ ನಿನ್ನನ್ನು ಇಂದಿರೆಯಿದ್ದಲ್ಲಿಗೆ ಕರೆದೊಯ್ಯು ತ್ತೇನೆ."

ಅನಂತ "ಹೂಂ" ಎಂದ. ಇಂದಿರೆಯನ್ನು ಶಾಂತ ವಾತಾವರಣದಲ್ಲಿ, ಸಂದೇಹ ಕೋಪಗಳಿರದ ಸ್ನೇಹದ ವಾತಾವರಣದಲ್ಲಿ ಒಂದೊಮ್ಮೆ ನೋಡಿದರೆ ಸಾಕೆಂದು ಮನಸ್ಸು ಬಯಸುತ್ತಿತ್ತು. ಮಮ್ಮಲ ಮರುಗುತ್ತಿತ್ತು. ಈ ಬಯಕೆಯ ಸಾಧನೆಗಾಗಿ ಆತ ಏನನ್ನೂ ಮಾಡಲು ಸಿದ್ಧನಾಗಿದ್ದ. ಹೀಗಾಗಿ ಸೋಮಯಾಜಿಗಳ ಮಾತಿಗೆ 'ಹೂಂ' ಎಂದ.

ಅನಂತ, ಸೋಮಯಾಜಿಗಳು ಮನೆ ಬಿಡುವ ಹೊತ್ತಿಗೆ, ತಂತಿಯ ಜವಾನ "ಅನಂತರಾವ್" ಎಂದು ಕೂಗಿಕೊಂಡು ಬಂದ. ಅವನು ಸಮೀಪಿಸಿದಾಗ, ಅವನ ದನಿ ಕೇಳಿದಾಗ, ಸೋಮಯಾಜಿಗಳು ಹೆದರಿಕೊಂಡರು. ಆದರೆ ಅನಂತನಿಗೆ ಬರುವ ವರ್ತಮಾನ ಇಂಥದೇ ಎಂದು ತಿಳಿದಿತ್ತು :

'ಭಾರತಿ ಗಂಡುಮಗು ಹೆತ್ತಿದ್ದಾಳೆ. ತಾಯಿ ಮಗು ಸೌಖ್ಯದಲ್ಲಿದ್ದಾರೆ. ದಯಮಾಡಿ ಬಾ' ಎಂದು ಶ್ರೀಪತಿರಾಯರು ತಂತಿ ವರ್ತಮಾನ ಕಳಿಸಿದ್ದರು.

ಅನಂತ ಕೈಯಲ್ಲಿ ಹಿಡಿದ ತಂತಿಯನ್ನು ಮಂಕುಹಿಡಿದವರಂತೆ ನೋಡುತ್ತಿದ್ದ. ಸೋಮಯಾಜಿಗಳು ಕಸಿದುಕೊಂಡು ಓದಿದರು. ಆದರೂ ಅವರಿಗೆ ನಗುವ, ಹಾಗೂ ಅನಂತನ ಬೆನ್ನು ಚಪ್ಪರಿಸುವ ಸಾಹಸ ಉಂಟಾಗಲಿಲ್ಲ.

ದಾರಿಯುದ್ದಕ್ಕೂ ಅನಂತ ಮಾತನಾಡದೆ ಮುಂದುವರಿದಿದ್ದ. 'ಇಷ್ಟೆಯೇ?' ಎಂದು ಭಾರತಿಯನ್ನು ಅಣಕಿಸಿದ ಹಿಂದಿನ ಒಂದು ದಿನ ನೆನಪಿಗೆ ಬರುತ್ತಿತ್ತು. ಬಾರಿಬಾರಿಗೂ ತಂಗಿ ಪಾರ್ವತಿಯ ನೆನಪಾಗುತ್ತಿತ್ತು. ತಂದೆಯ ನೆನಪು ಬಂದು ಮನಸ್ಸು ಚಂಚಲವಾಗುತ್ತಿತ್ತು. ಇವರಿಗೆಲ್ಲ ತಾನು ಕೊಡುತ್ತಿರುವ ಕೃತಜ್ಞತೆಯ ಉಡುಗೊರೆ—ಇಂದಿರೆಯ ಸ್ನೇಹವೇ? ಎಂದು ಮನಸ್ಸು ಕೇಳುತ್ತಿತ್ತು.

ತಂಗಿ ಪಾರ್ವತಿಯನ್ನಂತೂ ಅನಂತನಿಗೆ ನೆನೆಸಿದಷ್ಟೂ ತೃಪ್ತಿಯಿಲ್ಲ. ಸೋಮಯಾಜಿಗಳು ಊರಿಗೆ ಹೋಗಲು ತನ್ನಿಂದ ಸಮ್ಮತಿಯನ್ನು ಪಡೆದುದರಿಂದ, ಪಾರ್ವತಿಯನ್ನಾದರೂ ನೋಡಲಾಗುತ್ತದೆ, ಆಕೆಗಾದರೂ ತನ್ನ ಹೃದಯದ ಕಳವಳ ತಿಳಿಯಬಹುದು ಎಂಬ ಯೋಚನೆಯಾಗುತ್ತಿತ್ತು. ಆದರೆ ಉಡುಪರ ಸಿಟ್ಟಿನ ಮುಖ, ಶ್ರೀಪತಿರಾಯರ ಮುಖದಲ್ಲಿ ಅಳಿಯನ ಕುರಿತು ಪ್ರಕಟವಾಗುತ್ತಿದ್ದ ಅಭಿಮಾನ, ಇವು ಕಣ್ಣ ಮುಂದೆ ಬಂದು ಅನಂತನಿಗೆ 'ಅಯ್ಯೋ' ಎನ್ನುವಂತಾಗಿತ್ತು.

ಅನಂತ ಮನೆ ಬಿಟ್ಟಾಗಲೇ ಈ ಮಾನಸಿಕ ಹೋರಾಟ ಒಂದು ವಿಚಿತ್ರ ರೂಪದಲ್ಲಿ ತನ್ನ ಕೋಲಾಹಲವೆಬ್ಬಿಸಿತ್ತು. ಬಾರಿಬಾರಿಗೂ ತೀರಿಕೊಂಡ ತಮ್ಮ ಪದ್ಮನಾಭನ ನೆನಪಾಗುತ್ತಿತ್ತು. ತಾಯಿಯ ದೀನ ಮುಖ ಕಣ್ಣೆದುರು ಬರುತ್ತಿತ್ತು.

ಇವೆಲ್ಲ ಯೋಚನೆಗಳಿಂದ ಬಿಡುಗಡೆ ಹೊಂದಲು ಇಂದಿರೆಯನ್ನು ನೋಡುವುದೊಂದೇ ದಾರಿ—ಎಂದು ಅಂತರಾಳದಲ್ಲಿ ಕೂಗೇಳುತ್ತಿತ್ತು.

ಸೋಮಯಾಜಿಗಳು ತಾವೇ ಟಿಕೇಟು ಪಡೆದರು. ಅನಂತ ಮಾತಿಲ್ಲದೆ ಮುಂದುವರಿದು, ತನ್ನ ನಿತ್ಯದ ಪ್ಲಾಟ್‌ಫಾರ್ಮಿಗೆ ಬಂದಿದ್ದ. ಯಾವಾಗ ಇಂದಿರೆಯನ್ನು ನೋಡಿಯೇನು, ಎಂದು ತವಕಿಸುತ್ತಿದ್ದ ಹೃದಯದ ಅಳಲಿಗೆ ಆದಷ್ಟು ಬೇಗ ಆಕೆಯನ್ನು ಕಾಣುವುದೊಂದೇ ಸಮಾಧಾನವಾಗಿತ್ತು.

ಪ್ಲಾಟ್‌ಫಾರ್ಮಿಗೆ ಬಂದು ಹತ್ತು ನಿಮಿಷಗಳಾದರೂ ಗಾಡಿಯ ಸುಳಿವಿಲ್ಲ. ಅನಂತನ ಚಡಪಡಿಕೆ ಹೆಚ್ಚಾಯಿತು. 'ಸಾಧ್ಯವಾದಷ್ಟು ಬೇಗ ಹೋಗೋಣ. ಆಮೇಲೆ ಸಂಜೆಗೆ ಅವಳು ಎಲ್ಲಿಯಾದರೂ ಪರಿಚಿತರ ಅಥವಾ ಗೆಳತಿಯರ ಮನೆಗೆ ಹೋದರೆ, ಕಷ್ಟ' ಎಂದು ಸೋಮಯಾಜಿಗಳು ಮೊದಲೇ ಎಚ್ಚರಿಕೆ ಕೊಟ್ಟಿದ್ದರು. ಅದಕ್ಕೆ ಸರಿಯಾಗಿ, ಜಿ.ಐ.ಪಿ. ಗಾಡಿಯೂ ಅನಂತನ ಹೃದಯದ ಕೋಲಾಹಲವನ್ನು ಗಮನಿಸದೇನೇ ನಿಧಾನವಾಗಿತ್ತು.

ಹದಿನೈದು ನಿಮಿಷ ಕಳೆದರೂ ಗಾಡಿ ಬಾರದಿದ್ದುದರಿಂದ ಅನಂತ ಚಡಪಡಿಸಿ,

"ಹಾರ್ಬರ್‌ನಲ್ಲಾದರೂ ಹೋಗೋಣವೇ? ಎಂದು ಕೇಳಿದ.

"ಅದೂ ಬಂದಿಲ್ಲವಲ್ಲ" ಎಂದು ಸೋಮಯಾಜಿಗಳು ದನಿಯೆಳೆದರು.

ಅಷ್ಟರಲ್ಲಿ ಮೈನ್‌ಲೈನ್ ಪ್ಲಾಟ್‌ಫಾರ್ಮಿಗೊಂದು ಗಾಡಿ ಬಂತು. ಯೋಚಿಸುತ್ತ ನಿಂತಿದ್ದ ಅನಂತ ಗಾಡಿ ಕಂಡೊಡನೆಯೇ ಬಳಿಯಿದ್ದ ಸೋಮಯಾಜಿಗಳೊಡನೆ, "ಬನ್ನಿ, ಫಾಸ್ಟ್‌ಬಂಡಿ ಬಂದಿದೆ, ಆರು ನಂಬರದ ಪ್ಲಾಟ್‌ಫಾರ್ಮಿಗೆ, ಹೋಗೋಣ" ಎಂದು ಅಲ್ಲಿಂದಲೇ ಜಿಗಿದ. ಆದರೆ ಇನ್ನೊಂದು ಬದಿಯಿಂದ ಪ್ಲಾಟ್‌ಫಾರ್ಮ್ ಸಮೀಪಿಸುತ್ತಿದ್ದ ಥಾನಾ ಬಂಡಿಯೊಂದನ್ನು ಕಂಡ ಸೋಮಯಾಜಿಗಳು ಕೂಗಿಕೊಂಡರು. ಎಲ್ಲ ಜನ "ಏs ! ಏss !! ಏsss !!!" ಎಂದು ಬೊಬ್ಬಿಡುತ್ತಿದ್ದಂತೆಯೇ ಅನಂತ 'ಫಾಸ್ಟ್' ಬಂಡಿ ಹಿಡಿಯಲು ಧಾವಿಸಿದ್ದ.

ಅವನ ಸಮೀಪ ಬಂದಿದ್ದ ಥಾನಾ ಗಾಡಿ ನಿಲ್ಲಲಿಲ್ಲ. ನಿಲ್ಲುವ ಪ್ರಯತ್ನ ಮಾಡುವುದರೊಳಗೆ ಅನಂತನ ಇತಿಹಾಸ ಮುಗಿದಿತ್ತು.

ರಕ್ತಮಯವಾದ ಬಂಡಿಯ ಗಾಲಿಗಳು ಅನಂತ ಇಂದಿರೆಯ ಸಂಧಿಸುವ ಹಾದಿಯ ನಡುವೆ ಬಂದಿದ್ದವು.

ಎರಡೇ ನಿಮಿಷಗಳೊಳಗೆ ಹೋಳುಹೋಳಾಗಿದ್ದ ಅನಂತ ತೀರಿಕೊಂಡ.

ಸೋಮಯಾಜಿಗಳು ಈ ರುದ್ರನೋಟವನ್ನು ನೋಡಲಾರದೆ ಪ್ಲಾಟ್‌ಫಾರ್ಮಿನಲ್ಲೇ ಕುಸಿದು ಬಿದ್ದರು.

೩೭

ಅನಂತನ ಮರಣದ ಸುದ್ದಿ ಮಿಂಚಿನಂತೆ ಹಬ್ಬಿತು.

ರೈಲ್ವೆ ಅಪಘಾತದ ಉತ್ತರಕ್ರಿಯೆಗಳೆಲ್ಲ ಮುಗಿದು ಸೋಮಯಾಜಿಗಳಿಗೆ ಶವ ದೊರಕಿದ್ದು ಮೂರನೆ ದಿನ ಬೆಳಿಗ್ಗೆ.

ಸುದ್ದಿ ಕೇಳಿ ಮೊದಲು ಓಡಿ ಬಂದದ್ದು ಇಂದಿರೆ. 'ಈ ಜನ್ಮದಲ್ಲಿ ಇನ್ನು ನನ್ನನ್ನು ನೋಡಬೇಡಿ' ಎಂದು ಹೇಳಿದ್ದ ಮಾತನ್ನು ಅನಂತ ಮರಣದಲ್ಲಿ ಪಾಲಿಸಿದ್ದ. ಈಗ ಆತನಿಗೆ ಇಂದಿರೆಯ ಕ್ಷಮೆಯೂ ಅಗತ್ಯವಿರಲಿಲ್ಲ.

ಎಲ್ಲ ಕೆಲಸಗಳನ್ನು ಮರೆತು ಸಂಜೀವರಾಯರೂ ನಾಗೇಶರಾಯರೂ ಓಡಿಬಂದರು. ಅನಂತನ ಅಂತ್ಯಸಂಸ್ಕಾರದ ಕಾಲದಲ್ಲಿ ಅವರಿಬ್ಬರೊಳಗಿದ್ದ ಪರಸ್ಪರ ವೈಷಮ್ಯವೂ ಮರೆಯಾಗಿತ್ತು.

ಹಳೆಯ ಕುರ್ಲಾದ ಸ್ಮಶಾನದಲ್ಲಿ ಮರುದಿನ ಮಧ್ಯಾಹ್ನ ಅನಂತನ ದೇಹ ಅಂತ್ಯಸಂಸ್ಕಾರ ಪಡೆಯಿತು.

ಶಹರದ ನೂರಾರು ಟ್ರೇಡ್ ಯೂನಿಯನ್ ಕಾರ್ಯಕರ್ತರು ಅಂತಿಮ ದರ್ಶನಕ್ಕಾಗಿ ಬಂದಿದ್ದರು. ಅನಂತ ತೀರಿಕೊಳ್ಳುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ತೀರಿಕೊಂಡಿದ್ದ 'ಕಹಳೆ'ಯ ಬಳಗವಿಡೀ ಅಲ್ಲಿ ನೆರೆದಿತ್ತು. ಪತ್ರಿಕೆಯನ್ನು ಪ್ರೀತಿಸುತ್ತಿದ್ದ ಸಾವಿರಾರು ವಿದ್ಯಾರ್ಥಿಗಳು ಮೊದಲ ಬಾರಿಗೆ ಕುರ್ಲಾ ಸ್ಮಶಾನಕ್ಕೆ ಬಂದಿದ್ದರು, ಅನಂತನ ಅಂತಿಮ ದರ್ಶನಕ್ಕಾಗಿ. ಇಷ್ಟೆಲ್ಲ ಜನರ ಪರಿಚಯ, ಸ್ನೇಹ, ಆದರಗಳನ್ನು ಗಳಿಸಿದ್ದ ಅನಂತ ಕೊನೆಯ ಗಳಿಗೆಯಲ್ಲಿ ಏಕಾಕಿ !

ಆ ಜನಸಮೂಹದಲ್ಲಿದ್ದ ಹೆಂಗಸು ಒಬ್ಬಳೇ—ಇಂದಿರೆ !

ಸೋಮಯಾಜಿಗಳು ಚಿತೆ ಹಚ್ಚಿದಾಗ ಬಿಕ್ಕಿಬಿಕ್ಕಿ ಅಳುತ್ತಿದ್ದುದು ಆಕೆ ಒಬ್ಬಳೇ. ಆ ಚಿತೆಯಲ್ಲಿ ಆಕೆಗೆ ಕಾಣಿಸುತ್ತಿದ್ದುದು ಹೋಳು ಹೋಳಾದ ಅನಂತನ ದೇಹವಷ್ಟೇ ಅಲ್ಲ—ಒಂದು ಆದರ್ಶದ ಹೋರಾಟದ ಹಿನ್ನೆಲೆಯಲ್ಲಿ ಪ್ರಕಟವಾದ ಸಾವಿನ ಪರಂಪರೆ.

ಕೇಶವ....ರಾಜೀವ....ಈಗ ಅನಂತ !

ಹಿಂದಿನ ದಿನ ಅನಂತನ ಶವವನ್ನು ನೋಡಲು ಸಾಧ್ಯವಾಗದೆ ಮುಖ ಮುಚ್ಚಿಕೊಂಡಿದ್ದಳು. ಆ ವಿಕಾರ ರೂಪದಲ್ಲಿ, ಅಪಘಾತ ಮಾಡಿದ ಅನಾಹುತ

ದಲ್ಲಿ ಸಮಗ್ರ ವಿಶ್ವದ ದುಃಖದ ಇತಿಹಾಸವಿತ್ತು. ವೇದನೆಯ ಬೀಭತ್
ದೃಶ್ಯವಿತ್ತು.

ಇಂದು ಆ ದ್ವೇಷದ ಕೊನೆಯ ಗುರುತು ಅಳಿಯುವಂತೆ, ಬೆಂಕಿ ತನ
ಕೆಲಸ ಮಾಡುತ್ತಿದೆ. ಒಂದೊಂದೇ ಕೊಳ್ಳಿ ಹೊತ್ತಿಕೊಂಡು ಉರಿಯು
ಜ್ವಾಲೆಯಲ್ಲಿ ಮುಗಿಲು ಮುಟ್ಟಲು ಹವಣಿಸಿರುವಂತಿರುವ ಬೆಂಕಿಯ ಚಾಚಿ
ನಾಲಿಗೆಯಲ್ಲಿ, ಹೊಸ ಬಾಳಿಗಾಗಿ ಹೋರಾಡಿದ ಇನ್ನೊಂದು ಜೀವ ಮಾಯ
ವಾಗುತ್ತಿದೆ.

ತನ್ನ ಜೀವನದ, ಉತ್ಪಾತದ ಇನ್ನೊಂದು ಅಧ್ಯಾಯ ಮುಗಿದಿದೆ.

ಇಂದಿರೆ ಯಾವ ನಾಚಿಕೆಯೂ, ಯಾವ ಸಂಕೋಚವೂ ಇಲ್ಲ
ಅಳುತ್ತಿದ್ದಳು. ಚಿತೆ ಸರಿಯಾಗಿ ಹೊತ್ತಿಕೊಳ್ಳಲೆಂದು, ಸೋಮಯಾಜಿಗಳ
ಕೊಳ್ಳಿ ಒಂದನ್ನು ಕೆದಕಿದಾಗ, ಭುಗ್ಗನೆ ಎದ್ದ ಜ್ವಾಲೆಯಲ್ಲಿ ಇಂದಿರೆಗೆ ಈ
ಕಾಣತೊಡಗಿದುದು—

ಭಾರತಿ !